"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

# ಕರ್ನಾಟಕ ವಿಧಾನ ಪರಿಷತ್ತು

12ನೇ ಡಿಸೆಂಬರ್ 2018

ಬುಧವಾರ

## ವಿಷಯಾನುಕ್ರಮಣಿಕೆ

1. **ಸಭಾಪತಿಯವರ ಚುನಾವಣೆ**

2. **ಅಭಿನಂದನೆ**

**ವಿಧಾನಪರಿಷತ್ತಿನ ನೂತನ ಸಭಾಪತಿಗಳಾಗಿ ಶ್ರೀ ಕೆ.ಪ್ರತಾಪಚಂದ್ರ ಶೆಟ್ಟಿಯವರು ಆಯ್ಕೆಗೊಂಡಿರುವ ಬಗ್ಗೆ.**

ಡಾಃ ಜಿ.ಪರಮೇಶ್ವರ್(ಉಪ ಮುಖ್ಯಮಂತ್ರಿಗಳು)
ಡಾಃ ಜೈಮಾಲ ರಾಮಚಂದ್ರ(ಸಭಾ ನಾಯಕರು)
ಶ್ರೀ ಕೋಟ ಶ್ರೀನಿವಾಸ ಪೂಜಾರಿ(ವಿರೋಧ ಪಕ್ಷದ ನಾಯಕರು)
ಶ್ರೀ ಕೃಷ್ಣ ಭೈರೇಗೌಡ(ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಹಾಗೂ ಕಾನೂನು ಸಂಸದೀಯ ವ್ಯವಹಾರಗಳ ಸಚಿವರು)
ಶ್ರೀ ಎಸ್.ಆರ್.ಪಾಟೀಲ್
ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ
ಶ್ರೀ ಸಿ.ಎಂ.ಇಬ್ರಾಹಿಂ
ಡಾಃ ತೇಜಸ್ವಿನಿಗೌಡ
ಶ್ರೀ ಐವನ್ ಡಿ'ಸೋಜಾ
ಡಾ|| ವೈ.ಎ.ನಾರಾಯಣಸ್ವಾಮಿ
ಶ್ರೀ ಹೆಚ್.ಎಂ.ರಮೇಶ್‌ಗೌಡ
ಶ್ರೀ ಎಸ್.ರವಿ
ಶ್ರೀ ಪ್ರಕಾಶ್ ಕೆ.ರಾಥೋಡ್
ಶ್ರೀ ಪುಟ್ಟಣ್ಣ
ಶ್ರೀ ಕವಟಗಿಮಠ ಮಹಾಂತೇಶ ಮಲ್ಲಿಕಾರ್ಜುನ(ವಿರೋಧ ಪಕ್ಷದ ಮುಖ್ಯ ಸಚೇತಕರು)
ಶ್ರೀ ಟಿ.ಎ.ಶರವಣ
ಶ್ರೀ ರಿಜ್ವಾನ್ ಅರ್ಷದ್
ಶ್ರೀ ಕೆ.ಟಿ. ಶ್ರೀಕಂಠೇಗೌಡ
ಶ್ರೀ ಎನ್.ರವಿಕುಮಾರ್
ಶ್ರೀ ಎಂ.ಸಿ.ವೇಣುಗೋಪಾಲ್
ಶ್ರೀ ಲಹರ್‌ಸಿಂಗ್ ಸಿರೋಯಾ
ಶ್ರೀ ಎಂ.ಕೆ.ಪ್ರಾಣೇಶ್
ಶ್ರೀ ಎನ್.ಅಪ್ಪಾಜಿಗೌಡ
ಶ್ರೀ ಎಂ.ನಾರಾಯಣಸ್ವಾಮಿ
ಶ್ರೀ ನಸೀರ್ ಅಹ್ಮದ್

"ತಿದ್ದುಪಡಿಯಾಗದ ಪ್ರತಿ,ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಶ್ರೀ ಎಸ್.ಎಲ್.ಭೋಜೇಗೌಡ
ಶ್ರೀ ಆರ್.ಪ್ರಸನ್ನಕುಮಾರ್
ಶ್ರೀ ಅಲ್ಲಂ ವೀರಭದ್ರಪ್ಪ
ಶ್ರೀ ಅ.ದೇವೇಗೌಡ

## ೩. ಪ್ರಶ್ನೋತ್ತರಗಳು

**ಅ) ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಮೌಖಿಕವಾಗಿ ನೀಡಲಾದ ಉತ್ತರಗಳು.**

೪೪೭– ದಕ್ಷಿಣ ಕನ್ನಡ ಜಿಲ್ಲೆಯ ಎಂ.ಆರ್.ಪಿ.ಎಲ್.ನ 4ನೇ ಹಂತದ ವಿಸ್ತರಣೆ ಬಗ್ಗೆ –ಶ್ರೀ ಐವನ್ ಡಿ'ಸೋಜಾ

೦೨೮– ಫಾರಂ ೫೦ ಮತ್ತು ಫಾರಂ ೫೩ರ ಕುರಿತು –ಶ್ರೀ ಪ್ರಾಣೇಶ್ ಎಂ.ಕೆ.

೩೭೦– ಕಿವುಡ ಮತ್ತು ಮೂಗ ಮಕ್ಕಳ ಕೈಗಾರಿಕಾ ತರಬೇತಿಯ ಸಂಸ್ಥೆಯ ನೌಕರರಿಗೆ ವೇತನ ನೀಡುವುದರ ಬಗ್ಗೆ – ಶ್ರೀ ಪುಟ್ಟಣ್ಣ

೪೮೭– ತಿರುಪತಿ ತಿರುಮಲದಲ್ಲಿ ಭವನ ನಿರ್ಮಾಣ ಮಾಡುವ ಬಗ್ಗೆ – ಶ್ರೀ ಆರ್.ಚೌಡರೆಡ್ಡಿ ತೂಪಲ್ಲಿ

೩೬೦– ಕಾರ್ಮಿಕ ಕಲ್ಯಾಣ ನಿಧಿಯ ನಿರುಪಯೋಗದ ಬಗ್ಗೆ – ಶ್ರೀ ಕೆ.ಗೋವಿಂದರಾಜು

೪೮೨– "ಯುವ–ಯುಗ" ಕೌಶಲ್ಯ ಅಭಿವೃದ್ಧಿ ಯೋಜನೆಯ ಅನುಷ್ಠಾನದ ಬಗ್ಗೆ – ಶ್ರೀ ಟಿ.ಎ.ಶರವಣ

೪೦೬– ಮರಳು ಅಭಾವದಿಂದ ಸಾರ್ವಜನಿಕರಿಗೆ ಆಗುತ್ತಿರುವ ಸಮಸ್ಯೆ ಬಗ್ಗೆ – ಶ್ರೀ ಎಂ.ಎ.ಗೋಪಾಲಸ್ವಾಮಿ

೩೬೪– ಮಡಿಕೇರಿಯಲ್ಲಿ ಮಿನಿ ವಿಧಾನಸೌಧ ನಿರ್ಮಾಣ ವಿಳಂಬವಾಗಿರುವ ಬಗ್ಗೆ – ಶ್ರೀ ಎಂ.ಪಿ.ಸುನೀಲ್ ಸುಬ್ರಮಣಿ

೩೫೮– ಜಮೀನುಗಳಿಗೆ ಮಾರ್ಗದರ್ಶಿ ಬೆಲೆ ನಿಗದಿ ಕುರಿತು –ಡಾಃವೈ.ಎ.ನಾರಾಯಣಸ್ವಾಮಿ

೩೩೮– ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ದೇವಸ್ಥಾನದ ಅಭಿವೃದ್ಧಿಗೆ ಅನುದಾನ –ಮಂಜೂರಾತಿ ಕುರಿತು – ಶ್ರೀ ಕೆ.ಹರೀಶ್ ಕುಮಾರ್

೪೮೪– ಪ್ರಾಚಾರ್ಯರ ಹುದ್ದೆಗಳನ್ನು ಭರ್ತಿ ಮಾಡುವ ಬಗ್ಗೆ –ಶ್ರೀ ರಘುನಾಥ್ ರಾವ್ ಮಲ್ಕಾಪೂರೆ

೪೧೪– ಭೂಮಿ ಗುತ್ತಿಗೆ ಕಾಯ್ದೆ ಜಾರಿಗೆ ಕುರಿತು – ಶ್ರೀ ಆಯನೂರು ಮಂಜುನಾಥ್

೩೬೮– ಕಲಬುರಗಿ ಮತ್ತು ಯಾದಗಿರಿ ಜಿಲ್ಲೆಗಳ "ದಾಲ್‌ಮಿಲ್"ಗಳ ಬಗ್ಗೆ – ಶ್ರೀ ಬಿ.ಜಿ.ಪಾಟೀಲ್

೩೩೩– ಕೈಗಾರಿಕಾ ತರಬೇತಿ ಸಂಸ್ಥೆಗಳ ವೇತನಾನುದಾನದ ಕುರಿತು – ಶ್ರೀ ನಿರಾಣಿ ಹಣಮಂತ್ ರುದ್ರಪ್ಪ

೪೧೦– ಬಗರ್ ಹುಕುಂ ಭೂ ಮಂಜೂರಾತಿ ಸಮಿತಿಯ ಕಾನೂನು ಬಾಹಿರ ಭೂ ಮಂಜೂರಾತಿ ಬಗ್ಗೆ – ಶ್ರೀ ಕೆ.ವಿ.ನಾರಾಯಣಸ್ವಾಮಿ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಆ) ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು.**

4. <u>ದಿನಾಂಕ 11-12-2018ರಂದು ಶೂನ್ಯವೇಳೆಯಲ್ಲಿ ಪ್ರಸ್ತಾಪಗೊಂಡ ವಿಷಯಕ್ಕೆ ಸಚಿವರಿಂದ ಹೇಳಿಕೆ.</u>

ಡಾ॥ ಜಯಮಾಲಾ ರಾಮಚಂದ್ರ(ಸಭಾನಾಯಕರು)

5. <u>ಸಭಾಪತಿಯವರ ಅನುಮತಿ ಮೇರೆಗೆ ಪ್ರಸ್ತಾಪಿಸಲ್ಪಟ್ಟ ವಿಷಯಗಳು</u>

**ಅ) ಮಲಪ್ರಭ ನದಿ ಸಂರಕ್ಷಣೆ ಕುರಿತು.**

ಶ್ರೀ ಕವಟಗಿಮಠ ಮಹಾಂತೇಶ ಮಲ್ಲಿಕಾರ್ಜುನ(ವಿರೋಧ ಪಕ್ಷದ ಮುಖ್ಯ ಸಚೇತಕರು)
ಡಾಃ ಜೈಮಾಲ ರಾಮಚಂದ್ರ(ಸಭಾ ನಾಯಕರು)

**ಆ) ಸರ್ಕಾರಕ್ಕೆ ನೋಂದಣಿ ಇಲಾಖೆ ಅಧಿಕಾರಿಯಿಂದ 103 ಕೋಟಿ ರೂಪಾಯಿ ನಷ್ಟವಾಗಿರುವ ಬಗ್ಗೆ.**

ಶ್ರೀ ಎನ್. ರವಿಕುಮಾರ್
ಡಾಃ ಜೈಮಾಲ ರಾಮಚಂದ್ರ(ಸಭಾ ನಾಯಕರು)

**ಇ) ರಾಜ್ಯದ ಸರ್ಕಾರಿ ನೌಕರರಿಗೆ ನಿಶ್ಚಿತ ಪಿಂಚಣಿ ಯೋಜನೆ ಮರು ಜಾರಿಗೆ ತರುವ ಕುರಿತು**

ಶ್ರೀ ಘೋಟ್ನೇಕರ ಶ್ರೀಕಾಂತ ಲಕ್ಷ್ಮಣ
ಶ್ರೀ ಪುಟ್ಟಣ್ಣ
ಶ್ರೀ ಅರುಣ ಶಹಾಪೂರ
ಶ್ರೀ ಕೋಟ ಶ್ರೀನಿವಾಸ ಪೂಜಾರಿ(ವಿರೋಧ ಪಕ್ಷದ ನಾಯಕರು)
ಡಾಃ ಜೈಮಾಲ ರಾಮಚಂದ್ರ(ಸಭಾ ನಾಯಕರು)

**ಈ) ಇ-ಆಡಳಿತ ತಂತ್ರಾಂಶದ ಲೋಪದಿಂದ 31 ಲಕ್ಷ ಹಿಂದುಳಿದ ಬಡ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿ ವೇತನ ನೀಡದಿರುವ ಕುರಿತು.**

ಶ್ರೀ ಅರುಣ ಶಹಾಪುರ
ಡಾಃ ಜೈಮಾಲ ರಾಮಚಂದ್ರ(ಸಭಾ ನಾಯಕರು)

**ಉ) ಕೆ.ಪಿ.ಎಸ್.ಸಿ. ಪರೀಕ್ಷೆ ಮತ್ತು ರಾಷ್ಟ್ರೀಯ ಅರ್ಹತಾ ಪರೀಕ್ಷೆ (ಸೆಟ್) ಏಕಕಾಲಕ್ಕೆ ನಿಗದಿಯಾಗಿರುವುದರಿಂದ ವಿದ್ಯಾರ್ಥಿಗಳು ಆತಂಕಗೊಂಡಿರುವ ಬಗ್ಗೆ.**

ಶ್ರೀ ಎಸ್.ವ್ಹಿ.ಸಂಕನೂರ
ಡಾಃ ಜೈಮಾಲ ರಾಮಚಂದ್ರ(ಸಭಾ ನಾಯಕರು)

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

6. **ವರದಿಗಳನ್ನೊಪ್ಪಿಸುವುದು**

7. **ನಿಯಮ 330ರ ಮೇರೆಗೆ ಸಾರ್ವಜನಿಕ ಮಹತ್ವವುಳ್ಳ ಜರೂರು ವಿಷಯದ ಮೇಲಿನ ಚರ್ಚೆ**

**ಅ) ಸರ್ಕಾರವು ಅನುದಾನಿತ ಶಿಕ್ಷಣ ಸಂಸ್ಥೆಗಳ ಕಾಲ್ಪನಿಕ ವೇತನ ಬಡ್ತಿ ಸಮಸ್ಯೆಯನ್ನು ಪರಿಹರಿಸುವ ಬಗ್ಗೆ.**

ಶ್ರೀ ಪುಟ್ಟಣ್ಣ
ಶ್ರೀ ಜಿ.ಟಿ.ದೇವೇಗೌಡ(ಉನ್ನತ ಶಿಕ್ಷಣ ಸಚಿವರು)
ಶ್ರೀ ಶರಣಪ್ಪ ಮಟ್ಟೂರ
ಶ್ರೀ ಮರಿತಿಬ್ಬೇಗೌಡ
ಶ್ರೀ ಅರುಣ ಶಹಾಪೂರ
ಡಾಃ ತೇಜಸ್ವಿನಿಗೌಡ
ಶ್ರೀ ಕೆ.ಟಿ.ಶ್ರೀಕಂಠೇಗೌಡ
ಡಾಃ ವೈ.ಎ.ನಾರಾಯಣಸ್ವಾಮಿ
ಶ್ರೀ ಎಸ್.ಎಲ್.ಭೋಜೇಗೌಡ
ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ
ಶ್ರೀ ನಿರಾಣಿ ಹಣಮಂತ್ ರುದ್ರಪ್ಪ
ಶ್ರೀ ಆಯನೂರು ಮಂಜುನಾಥ್
ಶ್ರೀ ಎಸ್.ವ್ಹಿ.ಸಂಕನೂರ
ಶ್ರೀ ಐವನ್ ಡಿ'ಸೋಜಾ
ಶ್ರೀ ಅ.ದೇವೇಗೌಡ

**ಆ) ವಿಧಾನಸೌಧದ ಸ್ವಚ್ಛತೆ ಹಾಗೂ ಕಾರ್ಯನಿರ್ವಹಣೆ ಬಗ್ಗೆ.**

ಡಾ|| ತೇಜಸ್ವಿನಿ ಗೌಡ
ಶ್ರೀ ಜಿ.ಟಿ.ದೇವೇಗೌಡ(ಉನ್ನತ ಶಿಕ್ಷಣ ಸಚಿವರು)
ಶ್ರೀ ಐವನ್ ಡಿ'ಸೋಜಾ
ಶ್ರೀ ಅ.ದೇವೇಗೌಡ
ಶ್ರೀ ಕವಟಗಿಮಠ ಮಹಾಂತೇಶ ಮಲ್ಲಿಕಾರ್ಜುನ(ವಿರೋಧ ಪಕ್ಷದ ಮುಖ್ಯ ಸಚೇತಕರು)
ಶ್ರೀ ಎಸ್.ರುದ್ರೇಗೌಡ
ಶ್ರೀ ಯು.ಬಿ.ವೆಂಕಟೇಶ್
ಶ್ರೀ ಪುಟ್ಟಣ್ಣ

<><><>

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಕರ್ನಾಟಕ ವಿಧಾನ ಪರಿಷತ್ತು**

**ಬುಧವಾರ, 12ನೇ ಡಿಸೆಂಬರ್ 2018**

**ಸದನವು ಬೆಳಗಾವಿಯ ಸುವರ್ಣಸೌಧದಲ್ಲಿರುವ**

**ವಿಧಾನ ಪರಿಷತ್ತಿನ ಸಭಾಂಗಣದಲ್ಲಿ**

**ಬೆಳಿಗ್ಗೆ 10 ಗಂಟೆ 50 ನಿಮಿಷಕ್ಕೆ ಸಮಾವೇಶಗೊಂಡಿತು.**

**ಹಂಗಾಮಿ ಸಭಾಪತಿ (ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ) ಅವರು**

**ಸಭಾಪೀಠದಲ್ಲಿ ಉಪಸ್ಥಿತರಿದ್ದರು.**

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

367)12-12-2018(10.50)ಪಿಕೆ-ಎಂಡಿ

## 1. ಸಭಾಪತಿಯವರ ಚುನಾವಣೆ

**ಶ್ರೀ ಎಸ್.ಆರ್.ಪಾಟೀಲ್:-** ಮಾನ್ಯ ಸಭಾಪತಿಗಳೆ, ಶ್ರೀ ಕೆ.ಪ್ರತಾಪ್‌ಚಂದ್ರ ಶೆಟ್ಟಿ ಅವರನ್ನು 136ನೆಯ ವಿಧಾನ ಪರಿಷತ್ತಿನ ಸಭಾಪತಿಯವರನ್ನಾಗಿ ಚುನಾಯಿಸಬೇಕೆಂದು ಸೂಚಿಸುತ್ತೇನೆ.

**ಶ್ರೀ ಐವನ್ ಡಿ'ಸೋಜಾ:-** ಮಾನ್ಯ ಸಭಾಪತಿಗಳೆ, ಮಾನ್ಯ ಎಸ್.ಆರ್.ಪಾಟೀಲ್‌ರವರು ಸೂಚಿಸಿರುವ ಪ್ರಸ್ತಾವವನ್ನು ನಾನು ಅನುಮೋದಿಸುತ್ತೇನೆ.

ಪ್ರಸ್ತಾವವನ್ನು ಮಂಡಿಸಲಾಯಿತು

**ಸಭಾಪತಿಯವರು:-** ಶ್ರೀ ಎಸ್.ಆರ್.ಪಾಟೀಲ್‌ರವರು ಸೂಚಿಸಿರುವ ಹಾಗೂ ಶ್ರೀ ಐವನ್ ಡಿ'ಸೋಜಾರವರು ಅನುಮೋದಿಸಿರುವ ಪ್ರಸ್ತಾವ ಈ ರೀತಿ ಇದೆ.

"ಶ್ರೀ ಕೆ.ಪ್ರತಾಪ್‌ಚಂದ್ರ ಶೆಟ್ಟಿಯವರನ್ನು ವಿಧಾನ ಪರಿಷತ್ತಿನ ಸಭಾಪತಿಯವರನ್ನಾಗಿ ಚುನಾಯಿಸುವುದು"

ಪ್ರಸ್ತಾವ ಸರ್ವಾನುಮತದಿಂದ ಅಂಗೀಕರಿಸಲ್ಪಟ್ಟಿತು.

**ಸಭಾಪತಿಯವರು:-** ಮೊದಲನೆಯ ಪ್ರಸ್ತಾವನೆ ಅಂಗೀಕೃತ ಗೊಂಡಿರುವುದರಿಂದ ಉಳಿದ ಪ್ರಸ್ತಾವಗಳನ್ನು ಮತಕ್ಕೆ ಹಾಕುವ ಅಗತ್ಯವಿಲ್ಲದಿರುವುದರಿಂದ ಮಾನ್ಯ ಕೆ.ಪ್ರತಾಪ್‌ಚಂದ್ರ ಶೆಟ್ಟಿಯವರು ವಿಧಾನಪರಿಷತ್ತಿನ ಸಭಾಪತಿಯಾಗಿ ಸರ್ವಾನುಮತದಿಂದ ಆಯ್ಕೆಯಾಗಿದ್ದಾರೆಂದು ಘೋಷಿಸುತ್ತೇನೆ.

**(ಶ್ರೀ ಕೆ.ಪ್ರತಾಪಚಂದ್ರ ಶೆಟ್ಟಿ ಅವರನ್ನು ಸಭಾಪತಿಯವರನ್ನಾಗಿ ಚುನಾಯಿಸಲಾಯಿತು)**

(ಈ ಹಂತದಲ್ಲಿ, ನೂತನವಾಗಿ ಆಯ್ಕೆಯಾದ ಶ್ರೀ ಕೆ.ಪ್ರತಾಪಚಂದ್ರ ಶೆಟ್ಟಿಯವರನ್ನು ಮಾನ್ಯ ಉಪಮುಖ್ಯಮಂತ್ರಿಗಳು, ಸಭಾನಾಯಕರು, ವಿರೋಧ ಪಕ್ಷದ ನಾಯಕರು ಹಾಗೂ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಹಾಗೂ ಕಾನೂನು, ನ್ಯಾಯ ಮತ್ತು ಮಾನವ ಹಕ್ಕುಗಳು ಮತ್ತು ಸಂಸದೀಯ ವ್ಯವಹಾರಗಳ ಸಚಿವರು, ಸೂಚಕರಾದ ಮಾನ್ಯ ಎಸ್.ಆರ್.ಪಾಟೀಲ್‌ರವರು ಮತ್ತು ಮಾನ್ಯ ಐವನ್ ಡಿ'ಸೋಜಾ ಅವರುಗಳು ಸಭಾಪತಿಯ ಪೀಠದ ಹತ್ತಿರ ಕರೆತಂದರು)

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಸಭಾಪತಿ (ಶ್ರೀ ಕೆ.ಪ್ರತಾಪಚಂದ್ರ ಶೆಟ್ಟಿಯವರು) ಪೀಠವನ್ನು ಅಲಂಕರಿಸಿದರು.**

## 2. ಅಭಿನಂದನೆ

**ವಿಧಾನಪರಿಷತ್ತಿನ ನೂತನ ಸಭಾಪತಿಗಳಾಗಿ ಶ್ರೀ ಕೆ.ಪ್ರತಾಪಚಂದ್ರಶೆಟ್ಟಿಯವರು ಆಯ್ಕೆಗೊಂಡಿರುವ ಬಗ್ಗೆ.**

**ಶ್ರೀ ಜಿ.ಪರಮೇಶ್ವರ್(ಉಪಮುಖ್ಯಮಂತ್ರಿಗಳು ಹಾಗೂ ಒಳಾಡಳಿತ, ಬೆಂಗಳೂರು ಅಭಿವೃದ್ಧಿ, ನಗರ ಯುವಜನ ಸೇವೆ ಮತ್ತು ಕ್ರೀಡಾ ಸಚಿವರು):-** ಮಾನ್ಯ ಸಭಾಪತಿಗಳೆ, ತಮಗೆ ಅಭಿನಂದನೆ ಸಲ್ಲಿಸುವುದಕ್ಕೆ ಮೊದಲು, ಇಲ್ಲಿಯವರೆಗೆ ಈ ಸದನವನ್ನು ಬಹಳ ಅಚ್ಚುಕಟ್ಟಾಗಿ, ನಿಯಮದ ಚೌಕಟ್ಟಿನಲ್ಲಿ ನಡೆಸಿಕೊಟ್ಟು, ಅನೇಕ ಗೊಂದಲಗಳು ಸೃಷ್ಟಿಯಾದ ಸಂದರ್ಭದಲ್ಲೂ ಬಹಳ ಸಂಯಮದಿಂದ ನಮ್ಮೆಲ್ಲರನ್ನೂ ನಿಯಮದ ಚೌಕಟ್ಟಿನಲ್ಲಿ ಇಟ್ಟು ಈ ಸದನವನ್ನು ನಡೆಸಿಕೊಟ್ಟಂಥ ಸನ್ಮಾನ್ಯ ಬಸವರಾಜ ಹೊರಟ್ಟಿಯವರಿಗೆ ಮೊದಲನೆಯದಾಗಿ ಅಭಿನಂದನೆಯನ್ನು ಹೇಳಲೇಬೇಕಾದುದು ನನ್ನ ಕರ್ತವ್ಯ ಎಂದು ಭಾವಿಸಿದ್ದೇನೆ.

ಮಾನ್ಯ ಸಭಾಪತಿಗಳೆ, ಕರ್ನಾಟಕ ವಿಧಾನ ಪರಿಷತ್ತಿಗೆ ತನ್ನದ ಆದ ಇತಿಹಾಸ ಇದೆ. ಒಳ್ಳೆಯ ಸಂಸದೀಯ ಪಟುಗಳು ಪ್ರತಿನಿಧಿಸುವ ಮನೆ ಇದಾಗಿದೆ. ನಮ್ಮ ತಂದೆಯವರೂ ಕೂಡ 1952ರಲ್ಲಿ, ಚಿಕ್ಕಮಂಗಳೂರು ಮತ್ತು ತೀರ್ಥಹಳ್ಳಿ Double Member Constituency ಯಿಂದ ಆಯ್ಕೆಯಾಗಿದ್ದರು. ಇತಿಹಾಸ ಇರುವಂತಹ ಈ ಸದನದಲ್ಲಿ ನಡವಳಿಗಳು ಬಹಳ ಚೆನ್ನಾಗಿ ನಡೆಯಬೇಕಾಗುತ್ತದೆ. ತಮ್ಮನ್ನು ಅವಿರೋಧವಾಗಿ ಈ ಮನೆಯ ಎಲ್ಲಾ ಗೌರವಾನ್ವಿತ ಸದಸ್ಯರು ಆಯ್ಕೆ ಮಾಡಿದ್ದಾರೆ. ತಾವು ಒಳ್ಳೆಯ ಕುಟುಂಬದಿಂದ ಬಂದಿದ್ದೀರಿ, ಒಳ್ಳೆಯ ಚರಿತ್ರೆ ಹೊಂದಿರುವವರು ಮತ್ತು ಸಾರ್ವಜನಿಕ ಜೀವನದಲ್ಲಿ ತಮ್ಮದೇ ಆದ ರೀತಿಯಲ್ಲಿ ಕೆಲಸ ಮಾಡಿಕೊಂಡು ಬಂದಿದ್ದೀರಿ. ಕಾಂಗ್ರೆಸ್ ಪಕ್ಷದ ವರಿಷ್ಠರು ತಮ್ಮನ್ನು ಆಯ್ಕೆ ಮಾಡುವಂತಹ ಸಂದರ್ಭದಲ್ಲಿ, ತಮ್ಮ ಅನುಭವ, ತಮ್ಮ ಹಿರಿತನ ಈ ಎಲ್ಲವನ್ನೂ ಪರಿಗಣಿಸಿ ಈ ಹುದ್ದೆಗೆ ಆಯ್ಕೆ ಮಾಡಿದ್ದಾರೆ. ಈ ಸದನದ ಎಲ್ಲಾ ಗೌರವಾನ್ವಿತ ಸದಸ್ಯರು ಅವಿರೋಧವಾಗಿ ಆಯ್ಕೆ ಮಾಡಿದ್ದಾರೆ. ತಾವು ವಿಧಾನಸಭೆಯಲ್ಲಿ ಸುಮಾರು 1983 ರಿಂದ 1999ರವರೆಗೆ ಕೆಲಸ ಮಾಡಿದ್ದೀರಿ. ದಕ್ಷಿಣ ಕನ್ನಡ ಜಿಲ್ಲೆ, ಉಡುಪಿ ಮತ್ತು ಮಂಗಳೂರು ಈ ಭಾಗಗಳಲ್ಲಿ ತಮ್ಮದೇ ಆದ ರೀತಿಯಲ್ಲಿ ಕೆಲಸ ಮಾಡಿದ್ದೀರಿ. ನಾನು ಕಾಂಗ್ರೆಸ್ ಪಕ್ಷದ ಅಧ್ಯಕ್ಷನಾಗಿ 8 ವರ್ಷಗಳ ಕಾಲ ಕೆಲಸ ಮಾಡಿದ ಸಂದರ್ಭದಲ್ಲಿ, ಆ ಭಾಗಕ್ಕೆ ಸಂಬಂಧಪಟ್ಟಂತೆ ತೀರ್ಮಾನ ತೆಗೆದುಕೊಳ್ಳಬೇಕಾದಾಗ ತಾವು ಯಾವರೀತಿ ನಡೆದುಕೊಳ್ಳುತ್ತಿದ್ದೀರಿ ಎಂಬುದನ್ನು ನಾನು ಬಲ್ಲವನಾಗಿದ್ದೇನೆ. 1983 ರಿಂದ 1999ರವರೆಗೆ ಕೆಳಮನೆಯಲ್ಲಿ ಕೆಲಸ ಮಾಡಿದ್ದೀರಿ. ಈ ಮನೆಯಲ್ಲಿ 3ನೇ ಬಾರಿಗೆ ಆಯ್ಕೆಯಾಗಿ ಬಂದಿರಿ. ಕಳೆದ ಸಲ

ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

2016ಕ್ಕೆ ನಾವು ಚುನಾವಣೆಗೆ ಅಭ್ಯರ್ಥಿಗಳನ್ನು ನಿಲ್ಲಿಸಲು ಆಯ್ಕೆ ಮಾಡುವ ಸಂದರ್ಭ ಬಂತು. ಆಗ ನಮ್ಮ ಸ್ನೇಹಿರೊಬ್ಬರು ಒಂದು ಪತ್ರ ತಂದುಕೊಟ್ಟರು. ಆ ಪತ್ರದಲ್ಲಿ, "ನಾನು ಇನ್ನೂ ಚುನಾವಣೆಗೆ ನಿಲ್ಲುವುದಿಲ್ಲ" ಎಂದು ತಾವು ಪ್ರಿಂಟ್ ಮಾಡಿಸಿ ತಮ್ಮ ಮತದಾರರೆಲ್ಲರಿಗೂ ಕಳುಹಿಸಿ ಕೊಟ್ಟಿದ್ದಿರಿ. ಇಂತಹ ವ್ಯಕ್ತಿಗಳೂ ಕೂಡ ಇರುತ್ತಾರೆಯೇ ಎಂದು ನನಗೆ ಆಶ್ಚರ್ಯವಾಗಿತ್ತು. ಆದರೆ, ನಮ್ಮ ಪಕ್ಷದ ವರಿಷ್ಠರು, ಅವರನ್ನೇ ಚುನಾವಣೆಗೆ ನಿಲ್ಲಿಸಬೇಕು ಎಂದು ತೀರ್ಮಾನಿಸಿದರು. ಏಕೆಂದರೆ, ಅವರು ಗೆದ್ದು ಬರುತ್ತಾರೆ, ಅವರಿಗೆ ವ್ಯಕ್ತಿತ್ವ ಇದೆ, ಜನಮನ್ನಣೆ ಇದೆ ಎಂದು ತೀರ್ಮಾನಿಸಿ ಆಯ್ಕೆ ಮಾಡಿದ್ದರು. ಜನ ಕೂಡ ತಮ್ಮನ್ನು ಆರಿಸಿ ಕೊಟ್ಟರು. ಹಣೆ ಬರಹದಲ್ಲಿ ಬರೆದಿರುತ್ತದೆ ಎನ್ನುವುದರ ಬಗ್ಗೆ ನನಗೆ ನಂಬಿಕೆ ಇಲ್ಲ. ಆದರೆ, ನಿಮ್ಮ ಹಣೆಯಲ್ಲಿ ಆ ರೀತಿ ಬರೆಯಲಾಗಿದೆಯೋ ಏನೋ ಗೊತ್ತಿಲ್ಲ; ಏಕೆಂದರೆ ಅದನ್ನು ನೋಡುವುದಕ್ಕೆ ಸಾಧ್ಯವಿಲ್ಲ. ಈ ಕುರಿತು ಮಾನ್ಯ ಕೋಟ ಶ್ರೀನಿವಾಸ ಪೂಜಾರಿಯವರು ಬೇಕಾದರೆ ಬೆಳಕು ಚೆಲ್ಲಬಹುದೇನೋ ಗೊತ್ತಿಲ್ಲ. ನೀವಿಬ್ಬರೂ Double Member Constituency ಯಿಂದ ಆಯ್ಕೆಯಾಗಿ ಬಂದಿದ್ದೀರಿ; ಒಬ್ಬರು ವಿರೋಧ ಪಕ್ಷದ ನಾಯಕರಾಗೋಣ, ಇನ್ನೊಬ್ಬರು ಸಭಾಪತಿಯಾಗೋಣ ಎಂದು ಮಾತನಾಡಿಕೊಂಡೇ ಬಂದಿದ್ದೀರಿ ಎಂದೆನಿಸುತ್ತದೆ. ಸಭಾಪತಿಗಳು, ಮಾನ್ಯ ಸಭಾನಾಯಕರು ಮತ್ತು ಮಾನ್ಯ ವಿರೋಧ ಪಕ್ಷದ ನಾಯಕರು ಒಂದೇ ಭಾಗದವರಾಗಿರುವುದು ವೈಶಿಷ್ಟ್ಯ.

(ಮುಂದು . . .)

(368)12-12-2018(11.00)ಡಿಎಸ್-ಎಂಡಿ

**ಶ್ರೀ ಟಿ.ಎ.ಶರವಣ:-** ಮಾನ್ಯ ಉಪ ಮುಖ್ಯಮಂತ್ರಿಯವರೆ, ಮೂವರು ಒಂದೇ ಭಾಗದಿಂದ ಬಂದಂಥವರು.

**ಡಾ:ಜಿ.ಪರಮೇಶ್ವರ್:-** ಮಾನ್ಯ ಶರವಣರವರೆ, ಇದರಲ್ಲಿ ಏನೋ ನಡೆದಿದೆ.

ಮಾನ್ಯ ಸಭಾಪತಿಯವರೆ, ಜನರ ಪ್ರೀತಿ ವಿಶ್ವಾಸ ಎಷ್ಟರ ಮಟ್ಟಿಗೆ ಇದೆ ಎಂದರೆ, ತಾವು ಬೇಡ ಬೇಡ ಎಂದರೂ ಕೂಡ ತಮ್ಮನ್ನು ಆಯ್ಕೆ ಮಾಡಿ ಕಳುಹಿಸಿಕೊಟ್ಟಿದ್ದಾರೆ. ನೀವೇನು ಕಾಂಗ್ರೆಸ್ ಪಕ್ಷದಲ್ಲಿ ನನಗೆ ಸಭಾಪತಿ ಸ್ಥಾನ ಕೊಡಿ ಎಂದು ಯಾರಿಗೂ ಕೇಳಲಿಲ್ಲ, ಹೇಳಲಿಲ್ಲ. ಆದರೆ ಯಾವ ರೀತಿ ತಿರ್ಮಾನಗಳು ಆಗುತ್ತವೆ ಎನ್ನುವುದರಲ್ಲಿ ಇದೊಂದು ನಿದರ್ಶ+ನ ಎಂದು ನಾನು ಅಂದುಕೊಳ್ಳುತ್ತೇನೆ. ಹಿರಿತನ, ಒಳ್ಳೆಯತನ, ಸಾರ್ವಜನಿಕ ಬದುಕಿನಲ್ಲಿ ನಾವು ಸರಿಯಾಗಿದ್ದರೆ ಸ್ಥಾನಮಾನಗಳು ಹುಡುಕಿಕೊಂಡು ಬಂದೇ ಬರುತ್ತವೆ ಎನ್ನುವುದಕ್ಕೆ ಇದೊಂದು ನಿದರ್ಶನ ಎಂದು ನಾನು

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಅಂದುಕೊಂಡಿದ್ದೇನೆ. ಹಾಗಾಗಿ ಇವತ್ತು ನಿಮ್ಮಿಂದ ನಿರೀಕ್ಷೆ ಏನೆಂದರೆ, ಈ ಸದನದ ಗೌರವ ಎತ್ತಿಹಿಡಿಯಬೇಕು, ಸದನದಲ್ಲಿರತಕ್ಕಂಥ ಸದಸ್ಯರು ಎಲ್ಲಾದರೂ ಒಂದಿಷ್ಟು ಹೆಚ್ಚು ಕಾನೂನಿನ ಅಥವಾ ನಿಯಮದ ಚೌಕಟ್ಟನ್ನು ಬಿಟ್ಟು ಮುಂದಕ್ಕೆ ಹೋಗುವುದಾದರೆ ಅಂಥವರನ್ನು ಹೇಗೆ ನಿಯಂತ್ರಣ ಮಾಡಬೇಕಾಗುತ್ತದೆ ಎಂಬುದನ್ನು ನಾವು ನಿಮ್ಮಿಂದ ನಿರೀಕ್ಷೆ ಮಾಡುತ್ತೇವೆ. ಸರ್ಕಾರ ತಮಗೆ ಎಲ್ಲಾ ಸಂದರ್ಭದಲ್ಲೂ ಸಹಕಾರವನ್ನು ಕೊಡುತ್ತದೆ. ಯಾವುದೇ ಸಮಸ್ಯೆಗಳಿದ್ದರೆ, ರಾಜ್ಯದ ಜ್ವಲಂತ ಸಮಸ್ಯೆಗಳ ಬಗ್ಗೆ ಚರ್ಚೆ ಮಾಡುವಂತಹ ಸಂದರ್ಭದಲ್ಲಿ ಏನೇ ಟೀಕೆ ಟಿಪ್ಪಣಿಗಳು ಬಂದರೂ ಕೂಡ ನಿಯಂತ್ರಣ ಮಾಡಬೇಕಾಗುತ್ತದೆ. ಈಗ ನಿನ್ನೆ ಸಣ್ಣ ವಿಚಾರದಲ್ಲಿ ಬಹಳ ಉದ್ವೇಗಕ್ಕೆ ಒಳಗಾಗಿರುವಂಥದ್ದನ್ನು ನಾವು ನೋಡಿದೆವು. ಅಂಥದ್ದೆಲ್ಲ ನಿಯಂತ್ರಣ ಮಾಡತಕ್ಕಂಥದ್ದು ತಮ್ಮ ಕೈಯಲ್ಲಿ ಇರುತ್ತದೆ. ಏಕೆಂದರೆ, ಎಲ್ಲೋ ಒಂದು ಕಡೆ ರಾಜ್ಯದ ಸಮಸ್ಯೆಗಳನ್ನು ಚರ್ಚೆ ಮಾಡುವಾಗ ಒಂದಿಷ್ಟು ಅಲ್ಲಿ ಇಲ್ಲಿ cross reference ಮಾಡತಕ್ಕಂಥ ಸಂದರ್ಭ ಬರಬಹುದು. ಆದರೆ ಅದೆಲ್ಲವನ್ನು ನಿಯಂತ್ರಣ ಮಾಡಿ ಆ ಸಮಸ್ಯೆಗೆ ಉತ್ತರ ಸಿಗತಕ್ಕಂಥದ್ದು ಬಹಳ ಮುಖ್ಯ. ತಾವು ತಮ್ಮ ಅನುಭವದಲ್ಲಿ ನಿಯಂತ್ರಣ ಮಾಡುತ್ತೀರಿ ಎಂದು ನಾನು ಈ ಸಂದರ್ಭದಲ್ಲಿ ಹೇಳಬಯಸುತ್ತಿದ್ದೇನೆ. ಮಾನ್ಯ ಮುಖ್ಯಮಂತ್ರಿಗಳು ಕೂಡ ತಮಗೆ ಅಭಿನಂದನೆಯನ್ನು ತಿಳಿಸಿದ್ದಾರೆ. ತಾವು ಸಭಾಪತಿಗಳಾಗಿರುವುದಕ್ಕೆ ಅವರಿಗೂ ಕೂಡ ಸಂತೋಷವಾಗಿದೆ. ಅವರು ತಮ್ಮಿಂದ ನಿರೀಕ್ಷೆ ಮಾಡತಕ್ಕಂಥದ್ದನ್ನು ನಾನು ಅವರ ಪರವಾಗಿ ಹೇಳುತ್ತಿದ್ದೇನೆ. ಸರ್ಕಾರ ತಮಗೆ ಎಲ್ಲಾ ಸಹಕಾರವನ್ನು ಕೊಡುತ್ತದೆ ಎಂದು ನಾನು ಮಾನ್ಯ ಮುಖ್ಯಮಂತ್ರಿಗಳ ಪರವಾಗಿ, ಸರ್ಕಾರದ ಪರವಾಗಿ ತಮಗೆ ತಿಳಿಸುವುದಕ್ಕೆ ಬಯಸುತ್ತೇನೆ. ಮತ್ತೊಂದು ಬಾರಿ ತಮಗೆ ಶುಭವನ್ನು ಕೋರಿ, ತಮ್ಮ ಈ ಸ್ಥಾನದ ಕೆಲಸ ಕಾರ್ಯಗಳು ಸುಲಭವಾಗಿ ಆಗಲಿ ಎಂದು ಹಾರೈಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ, ನಮಸ್ಕಾರ.

**ಡಾ:ಜಯಮಾಲ (ಸಭಾನಾಯಕರು):-** ಮಾನ್ಯ ಸಭಾಪತಿಯವರೆ, ತಾವು ಅವಿರೋಧವಾಗಿ ವಿಧಾನ ಪರಿಷತ್ತಿನ ಸಭಾಪತಿಯಾಗಿ ಆಯ್ಕೆಯಾಗಿರುವುದಕ್ಕೆ ನಾನು ವೈಯಕ್ತಿಕವಾಗಿ ಹಾಗೂ ಈ ಸದನದ ಎಲ್ಲಾ ಸದಸ್ಯರ ಪರವಾಗಿ ತಮಗೆ ಅಭಿನಂದನೆಯನ್ನು ಸಲ್ಲಿಸುತ್ತೇನೆ. ನಾನು ಸಭಾನಾಯಕಿಯಾಗಿ ಇಲ್ಲಿಗೆ ಆಯ್ಕೆಯಾಗಿ ಬಂದಾಗ ಮಾನ್ಯ ಬಸವರಾಜ ಹೊರಟ್ಟಿಯವರನ್ನು ಕೂಡ ಈ ಸಂದರ್ಭದಲ್ಲಿ ನೆನಪಿಸಿಕೊಳ್ಳಬೇಕಾಗುತ್ತದೆ. ಅವರು ಅತ್ಯಂತ ಅಚ್ಚುಕಟ್ಟಾಗಿ ಈ ಸದನವನ್ನು ನಡೆಸಿಕೊಂಡು ಹೋಗಿರುವಂಥದ್ದು, ಎಲ್ಲರ ಪ್ರೀತಿಯನ್ನು ಗಳಿಸಿಕೊಂಡಿರುವಂಥದ್ದು, ಎಲ್ಲಕ್ಕಿಂತ ಹೆಚ್ಚಾಗಿ ಒಬ್ಬ ಮಹಿಳೆಯನ್ನು ಅವರು ಸಹಕರಿಸಿಕೊಂಡು ಎಲ್ಲಾ ರೀತಿಯಲ್ಲೂ ಕೂಡ ಅವರು ಮಾರ್ಗದರ್ಶನ ನೀಡಿರತಕ್ಕಂಥದ್ದು, ಈ ಸದನವನ್ನು ಅತ್ಯಂತ ಗೌರವಯುತವಾಗಿ ನಡೆಸಿ ಘನತೆಯನ್ನು ಕಾಪಾಡಿಕೊಂಡು

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಬಂದಿದ್ದಾರೆ. ಅವರಿಗೆ ಈ ಸಂದರ್ಭದಲ್ಲಿ ನಾನು ಗೌರವಪೂರ್ವಕ ನಮನವನ್ನು ಸಲ್ಲಿಸುವುದಕ್ಕೆ ಇಷ್ಟಪಡುತ್ತೇನೆ. ಹಾಗೆಯೇ ತಮ್ಮ ಬಗ್ಗೆಯೂ ನನಗೆ ಅಪಾರ ಗೌರವವಿದೆ. ಉಡುಪಿಯಲ್ಲಿ ತಾವು ಅತ್ಯಂತ ದೊಡ್ಡ ನಾಯಕರು. ತಾವು ರಾಜಕೀಯ ಕ್ಷೇತ್ರದಲ್ಲಿ ಬೆಳೆದು ಬಂದಂತಹ ರೀತಿಯನ್ನು ನಾವು ಯಾರೂ ಕೂಡ ಮರೆಯುವುದಕ್ಕಾಗುವುದಿಲ್ಲ. ತಮ್ಮ 40 ವರ್ಷಗಳ ಬದುಕಿನ ಈ ಯಾತ್ರೆಯಲ್ಲಿನ ವೃತ್ತಿ ಜೀವನದ ಆರಂಭದಲ್ಲಿ ತಾವು ಬ್ಯಾಂಕ್ ಉದ್ಯೋಗಿಯಾಗಿದ್ದಿರಿ, ಅದನ್ನು ಬಿಟ್ಟು ಮತ್ತೆ ಕೃಷಿಕರಾಗಿ ಕುಟುಂಬದೊಡಗೂಡಿ ಕೃಷಿಯಲ್ಲಿನ ಸಮಸ್ಯೆಗಳನ್ನು ಸ್ವತಃ ಕಂಡಿದ್ದೀರಿ. ತಮಗೆ ರಾಜಕಾರಣದಲ್ಲಿ ಈ ಕಾಂಗ್ರೆಸ್ ಪಕ್ಷದಲ್ಲಿ ಇಷ್ಟೊಂದು ಹುದ್ದೆಗಳನ್ನು ಅಲಂಕರಿಸುವ ಜೊತೆಗೆ ಮುಖಂಡರಾಗಿ, ನಾಯಕರಾಗಿ, ಕೆಪಿಸಿಸಿ ಹುದ್ದೆಯಲ್ಲಿ ಇದ್ದುಕೊಂಡು ನೀವು ಎಐಸಿಸಿ ಸದಸ್ಯರಾಗಿದ್ದೀರಿ. 4 ಬಾರಿ ವಿಧಾನಸಭೆಗೆ ಆಯ್ಕೆಯಾಗಿ, 3 ಬಾರಿ ವಿಧಾನ ಪರಿಷತ್ತಿಗೆ ಆಯ್ಕೆಯಾಗಿ ಬಂದಂತಹ ತಾವು ಅತ್ಯಂತ ಸೂಕ್ತವಾದ ಅತೀ ಹೆಚ್ಚು ಪ್ರಶ್ನೆಗಳನ್ನು ಹಾಕಿದಂಥವರು. ಯಾವುದೇ ಪಕ್ಷ ಅಧಿಕಾರದಲ್ಲಿದ್ದರೂ ಸಹ ಅತೀ ಹೆಚ್ಚು ಪ್ರಶ್ನೆಗಳನ್ನು ಹಾಕುವ ಮೂಲಕ ಈ ಸಮಾಜಕ್ಕೆ ಬೇಕಾಗಿರುವಂತಹ ಅತ್ಯುತ್ತಮವಾದ ಅತ್ಯಗತ್ಯ ಅವಶ್ಯಕತೆಗಳಿಗೆ ಅನುಗುಣವಾಗಿ ಜನರಿಗೆ ಇದು ಬೇಕಾಗಿದೆ ಎಂದು ಹೋರಾಟ ಮಾಡಿರತಕ್ಕಂಥವರು. ತಮ್ಮ ಹೋರಾಟದ ನೆಲೆ, ತಮ್ಮ ಜನರ ಮೇಲೆ ಇರತಕ್ಕಂಥ ನಿಷ್ಕಲ್ಮಶವಾದಂತಹ ಪ್ರೀತಿ ಮತ್ತು ಅಭಿಮಾನ; ಈ ಸಾಮಾಜಿಕ ಬದುಕು ಹಾಗೂ ರಾಜಕೀಯ ಬದುಕುಗಳೆರಡನ್ನೂ ಕೂಡ ಸರಿದೂಗಿಸಿಕೊಂಡು ಹೋಗಿರುವಂತಹ ರೀತಿ ಇವೆಲ್ಲವೂ ಕೂಡ ನಮಗೆಲ್ಲರಿಗೂ ಒಂದು ಮಾರ್ಗದರ್ಶನವಾಗಿದೆ. ತಾವು ಈ ಎತ್ತರದ ಸ್ಥಾನದಲ್ಲಿ ಕುಳಿತುಕೊಂಡಿರುವುದಕ್ಕೆ ನಾನು ಈ ಎಲ್ಲಾ ಸದನದ ಸದಸ್ಯರ ಪರವಾಗಿ ಮತ್ತೊಮ್ಮೆ ಅಭಿನಂದನೆಯನ್ನು ಸಲ್ಲಿಸಿ ನನ್ನ ಮಾತನ್ನು ಮುಗಿಸುತ್ತೇನೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ(ವಿರೋಧ ಪಕ್ಷದ ನಾಯಕರು):-** ಮಾನ್ಯ ಸಭಾಪತಿಯವರೆ, ತಾವು ಸಭಾಪತಿಗಳಾಗಿರುವುದಕ್ಕೆ ಅತ್ಯಂತ ಹೆಚ್ಚು ಸಂತಸಪಟ್ಟಿರುವವರಲ್ಲಿ ನಾನು ಒಬ್ಬ. ಏಕೆಂದರೆ, ನಾನು ನಿಮ್ಮನ್ನು ಹತ್ತಿರದಿಂದ ನೋಡಿದವನು. ಈ ಕರ್ನಾಟಕ ರಾಜ್ಯದ ರಾಜಕಾರಣದಲ್ಲಿ ವೈಚಾರಿಕ ವಿಚಾರಕ್ಕೆ ಸಂಬಂಧಪಟ್ಟಂತೆ ನಿಮ್ಮ ವಿಚಾರಧಾರೆಗಳ ಮಧ್ಯೆ ರಾಜಕಾರಣದಲ್ಲಿ ಸಂಘರ್ಷ ಮಾಡಿಕೊಂಡೇ ಬೆಳೆದಂಥವನು ನಾನು. ಆದರೆ ನಾನು ಕಂಡಂತಹ ಬೆರಳೆಣಿಕೆಯಷ್ಟು ರಾಜಕಾರಣಿಗಳಲ್ಲಿ ಹೆಚ್ಚು ಕಡಿಮೆ ಸುಮಾರು 35 ರಿಂದ 40 ವರ್ಷಗಳ ಕಾಲ ಶಾಸಕರಾಗಿ ಕೆಳಮನೆಯಲ್ಲಿ 4 ಬಾರಿ, ಮೇಲ್ಮನೆಯಲ್ಲಿ 3 ಬಾರಿ ಆಯ್ಕೆಯಾಗಿದ್ದೀರಿ. ಯಾರಾದರೂ ಹೊಸ ರಾಜಕಾರಣಿ ಬಂದರೆ ಅವನಿಗೆ ಎಷ್ಟು ವಯಸ್ಸಾಗಿರುತ್ತದೆಯೋ ಅಷ್ಟು ಅನುಭವ ತಮಗಾಗಿದೆ. ಅಷ್ಟು ದೊಡ್ಡ ಅನುಭವದ ವ್ಯವಸ್ಥೆಯ ನಡುವೆ ತಮ್ಮ ಈ ಸುದೀರ್ಘ ರಾಜಕಾರಣದ ಬದುಕಿನಲ್ಲಿ ಒಂದೇ ಒಂದು ಕಪ್ಪು ಚುಕ್ಕೆಯನ್ನು

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಕಂಡುಹಿಡಿಯುವುದಕ್ಕೆ ಈ ಕ್ಷಣದವರೆಗೆ ನಮಗೆ ಆಗಿಲ್ಲ, ಅದನ್ನು ಹುಡುಕಬೇಕೆನ್ನುವಂತಹ ಆಸೆ ಕೂಡ ನಮಗಿಲ್ಲ. ನೀವು ಇವತ್ತು ಈ ಎತ್ತರದ ಸ್ಥಾನದಲ್ಲಿದ್ದೀರಿ ಎಂದರೆ, ಅದರಿಂದ ನಮಗೆಲ್ಲಾ ಬಹಳ ಸಂತೋಷವಾಗಿದೆ. ಶತಮಾನದ ಇತಿಹಾಸ ಇರುವಂತಹ ಈ ಸದನಕ್ಕೆ ನಾನು ಹತ್ತು ವರ್ಷಗಳ ಹಿಂದೆ ಬರುವಾಗ ಮಾನ್ಯ ನಾಣಯ್ಯನವರು, ಮಾನ್ಯ ನಾಡಗೌಡರು, ಇಂಥವರನ್ನೆಲ್ಲಾ ನೋಡುವುದೇ ಒಂದು ರೋಚಕವಾದಂತಹ ಅನುಭವವಾಗಿತ್ತು.

ಈ ಸದನ ಶತಮಾನದ ಇತಿಹಾಸವುಳ್ಳಂಥದ್ದಾಗಿದೆ. ಮಾನ್ಯ ಕೆಂಗಲ್ ಹನುಮಂತಯ್ಯನವರು ವಿಧಾನಸೌಧವನ್ನು ನಿರ್ಮಿಸುತ್ತಿದ್ದಂತಹ ಸಂದರ್ಭದಲ್ಲಿ ಮಾನ್ಯ ಚಂದ್ರೇಗೌಡರನ್ನು ಕರೆದು ಒಂದು ಮಾತನ್ನು ಹೇಳಿದರಂತೆ, 'ಏ ಚಂದ್ರೇಗೌಡ ನೋಡು, ಬ್ರಿಟನ್ ಅರಮನೆ ಸುಟ್ಟು ಹೋಯಿತು ಎಂದು ಬ್ರಿಟಿಷರು ಕರ್ನಾಟಕದ ಎಲ್ಲಾ ಕಾಡುಗಳನ್ನು ಕಡಿದು ಅವರ ಅರಮನೆಯನ್ನು ಕಟ್ಟುತ್ತಿದ್ದಾರೆ. ಈ ಕೊಡಗಿನ ಎಲ್ಲಾ ತೇಗದ ಮರಗಳನ್ನು ಸೂರೆ ಮಾಡಿದ್ದಾರೆ, ಆದರೆ ಚಂದ್ರೇಗೌಡ ನಾನು ಬಿಡುವುದಿಲ್ಲ, ಇಡೀ ಕರ್ನಾಟಕ ಸುತ್ತಾಡಿ ಒಳ್ಳೆಯ ಮರಗಳನ್ನು ತಂದು ಬ್ರಿಟಿಷ್ ಅರಮನೆ ಕೂಡ ನಾಚುವಂತಹ ವಿಧಾನಸೌಧವನ್ನು ಕಟ್ಟುತ್ತೇನೆ' ಎಂದು ಮಾನ್ಯ ಕೆಂಗಲ್ ಹನುಮಂತಯ್ಯನವರು ಹೇಳಿದರು ಎನ್ನುವುದನ್ನು ಮಾನ್ಯ ಚಂದ್ರೇಗೌಡರು ಬರೆದಿರುವ ಪುಸ್ತಕದಲ್ಲಿ ನಾನು ಓದಿದ್ದೇನೆ. ಅವರು ಕಟ್ಟಿದ ಸದನದಲ್ಲಿ ಅತ್ಯಂತ ಎತ್ತರದ ಗೌರವ ಸ್ಥಾನದ ಪೀಠ ಯಾವುದು ಎಂದು ಹೇಳಿದರೆ ಇವತ್ತು ಮೇಲ್ಮನೆಯ ಸಭಾಪತಿಯವರ ಸ್ಥಾನ ಎಂದು ನನಗನಿಸುತ್ತಿದೆ. ಆ ಸ್ಥಾನದಲ್ಲಿ ನಿಮ್ಮನ್ನು ಕಂಡಾಗ ನನಗೆ ಅತ್ಯಂತ ಸಂತೋಷ ಮತ್ತು ಸಮಾಧಾನ ಆಗಿದೆ. ಇದು ನಿಮ್ಮ ಹಿರಿತನಕ್ಕೆ ಸಿಕ್ಕಿರುವಂತಹ ಗೌರವ ಎಂದು ನಾನು ಅಂದುಕೊಂಡಿದ್ದೇನೆ. ಮಾನ್ಯ ಆಯನೂರು ಮಂಜುನಾಥ್‌ರವರು 'ತಮ್ಮ ಗಡ್ಡದಲ್ಲೂ ಕೂಡ ಕಪ್ಪು ಇಲ್ಲ' ಎಂದು ಹೇಳಿದರು. ನಾನು ಒಂದು ಸಲ ತಮ್ಮ ಹತ್ತಿರ ಮಾತನಾಡುವಾಗ ಕರಾವಳಿ ಜಿಲ್ಲೆಯ ರಾಜಕಾರಣದ ಭೀಷ್ಮ ಪ್ರತಾಪಚಂದ್ರ ಶೆಟ್ಟರು ಎಂದು ಹೇಳಿದ್ದೆ. ಈ ಭೀಷ್ಮನಿಗೆ ಒಂದೊಂದು ಸಲ ವಿಪರೀತವಾದ ಸಿಟ್ಟು ಬಂದಿರುವುದನ್ನು ನಾನು ನೋಡಿದ್ದೇನೆ. ಎಲ್ಲಾದರೂ ಅನ್ಯಾಯ, ಅಕ್ರಮಗಳು ನಡೆದರೆ, ನೀವು ಒಪ್ಪದೆ ಇರುವಂತಹ ವಿಚಾರಗಳು ನಡೆದರೆ ಬಹಳ ಆಕ್ರೋಶ ಮತ್ತು ಸಿಟ್ಟು ಬಂದಿರುವುದನ್ನು ನಾನು ನೋಡಿದ್ದೇನೆ. ಆ ಸಿಟ್ಟುಗಳೆಲ್ಲಾ ಬಂದರೆ ಆ ಕಡೆ (ಆಡಳಿತ ಪಕ್ಷದ ಸ್ಥಾನಗಳನ್ನು ತೋರಿಸುತ್ತಾ) ಬರಲಿ, ಈ ಕಡೆ (ವಿರೋಧ ಪಕ್ಷದ ಸ್ಥಾನಗಳನ್ನು ತೋರಿಸುತ್ತಾ) ಬರುವುದು ಬೇಡ ಎನ್ನುವುದು ನನ್ನ ವಿನಂತಿ ಅಷ್ಟೆ. ಅದಕ್ಕಿಂತ ಇನ್ನು ಬೇರೆ ಅಪೇಕ್ಷೆಗಳಿಲ್ಲ. ಸದನದ ಎಲ್ಲಾ ಯೋಚನೆಗಳನ್ನು ಮತ್ತು ಯೋಜನೆಗಳನ್ನು ಅರ್ಥ ಮಾಡಿಕೊಳ್ಳುವ ಸಾಮರ್ಥ್ಯ ಇರುವಂಥ ತಾವು ಅತ್ಯಂತ ಅರ್ಥಪೂರ್ಣವಾಗಿ ಸದನವನ್ನು ನಡೆಸುತ್ತೀರಿ ಎನ್ನುವಂತಹ ವಿಶ್ವಾಸ ನಮಗಿದೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

(ಮುಂದು)

(369)12-12-2018(11-10)ಬಿಕೆಪಿ-ಎಕೆ

**ಶ್ರೀ ಕೋಟಾ ಶ್ರೀನಿವಾಸ ಪೂಜಾರಿ(ಮುಂದು. . .)**

ಅನೇಕ ಬಾರಿ ನಾವುಗಳು ರಾಜಕಾರಣಿಗಳಾಗಿದ್ದವರು, ಶಾಸಕರುಗಳಾಗಿದ್ದವರು, ಎಂ.ಪಿ.ಗಳಾಗಿದ್ದವರು, ನಾವುಗಳು ಇನ್ನು ಕಲಿಯಬೇಕಾದಂತಹ ಅವಶ್ಯಕತೆಗಳಿವೆ ಎನ್ನುವುದು ನಮಗೆ ಒಂದೊಂದು ಬಾರಿ ಅರ್ಥವಾಗುತ್ತದೆ, ಒಂದೊಂದು ಬಾರಿ ಮರೆತುಬಿಡುತ್ತೇವೆ. ಶ್ರೀಯುತ ಕೃಷ್ಣ ಬೈರೇಗೌಡರವರಿಗೆ ಶ್ರೀ ಜಗನ್ನಾಥ್‌ರಾವ್ ಜೋಶಿಯವರ ವಿಚಾರ ಗೊತ್ತಿರಬಹುದು. ಶ್ರೀಯುತ ಜಗನ್ನಾಥ್‌ರಾವ್ ಜೋಶಿಯವರಿಗೆ ಒಂದು ಬಾರಿ ಶಾಸಕರುಗಳನ್ನೆಲ್ಲಾ ಉದ್ದೇಶಿಸಿ ಮಾತನಾಡುವಂತಹ ಅವಕಾಶ ಸಿಕ್ಕಿತಂತೆ. ಅಂದರೆ, ಶಾಸಕರ ತರಬೇತಿ ಸಮಯದಲ್ಲಿ ಅವರಿಗೆ ಅವಕಾಶ ಸಿಕ್ಕಿತಂತೆ. ನಾವೆಲ್ಲರೂ ಶಾಸಕರು, ಎಂಪಿ.ಗಳು ಸಿಕ್ಕಿದರೆ ಏನು ಹೇಳುತ್ತೇವೆಂದರೆ ಗೌರವಾನ್ವಿತ ಶಾಸಕರುಗಳೇ ಎಂದು ನಾವು ಅವರುಗಳನ್ನು ಕರೆಯುತ್ತೇವೆ. ಇದು ಜನರ ಸಾಮಾನ್ಯ ರೂಢಿ. ಶ್ರೀಯುತ ಜಗನಾಥ್‌ರಾವ್ ಜೋಶಿಯವರು ಎಷ್ಟೊಂದು ಹಿರಿಯರೆಂದರೆ ಶಾಸಕರ ಅಭ್ಯಾಸ ವರ್ಗದಲ್ಲಿ ಅವರು ಶಾಸಕರನ್ನು ಕರೆದ ರೀತಿ ಯಾವ ರೀತಿ ಇತ್ತು ಎಂದರೆ “ಎಲಾ ಮಕ್ಕಳಿರಾ” ಎಂದು ಕರೆಯುತ್ತಿದ್ದರು. ಏಕೆಂದರೆ, ಅವರು ಅಷ್ಟೊಂದು ಹಿರಿಯರಿದ್ದರು. ಆ ಜಗನ್ನಾಥ್‌ರಾವ್ ಜೋಶಿಯವರು ಶಾಸಕರನ್ನು ಉದ್ದೇಶಿಸಿ ಮಾತನಾಡುವಾಗ ಏನು ಹೇಳಿದರೆಂದರೆ “ಎಲಾ ಮಕ್ಕಳಿರಾ, ನಿಮಗಿಂತ ಯೋಗ್ಯರು, ನಿಮಗಿಂತ ಪ್ರಾಮಾಣಿಕರು, ನಿಮಗಿಂತ ನಿಷ್ಕಳಂಕರು, ನಿಮಗಿಂತ ಸಂಭಾವಿತರು, ನಿಮಗಿಂತ ರಾಷ್ಟ್ರಭಕ್ತರು ಕೋಟ್ಯಾಂತರ ಜನರು ವಿಧಾನಸೌಧದ ಹೊರಗಡೆ ಇದ್ದಾರೆಂದು ಹೇಳಿದರಂತೆ. ನಿಮಗಿಂತ ಯೋಗ್ಯರು, ನಿಮಗಿಂತ ಪ್ರಾಮಾಣಿಕರು, ನಿಮಗಿಂತ ರಾಷ್ಟ್ರಭಕ್ತರು, ನಿಮಗಿಂತ ಸಚ್ಚಾರಿತ್ರರು, ಕೋಟ್ಯಾಂತರ ಜನರು ವಿಧಾನಸೌಧದ ಹೊರಗಡೆ ಇದ್ದಾರೆ. ನಿಮ್ಮ ಅದೃಷ್ಟ ರೇಖೆ ಸರಿ ಇರುವುದರಿಂದ ನೀವುಗಳು ಒಳಗಡೆ ಇದ್ದೀರಿ. ಹೀಗಾಗಿ, ನಿಮಗಿಂತ ಯೋಗ್ಯರು ಕೋಟ್ಯಾಂತರ ಜನರು ಹೊರಗಡೆ ಇದ್ದಾರೆಂದು ತಿಳಿದುಕೊಂಡು ನೀವುಗಳು ಕೆಲಸಗಳನ್ನು ಮಾಡಿದರೆ ನಿಮ್ಮ ಗೌರವ ಹೆಚ್ಚುತ್ತದೆ ಎನ್ನುವಂತಹ ಮಾತುಗಳನ್ನು ಶ್ರೀಯುತ ಜಗನ್ನಾಥ್‌ರಾವ್ ಜೋಶಿಯವರು ಎಲ್ಲಾ ಪಕ್ಷದ ಶಾಸಕರುಗಳಿಗೆ ಆ ಒಂದು ಸಭೆಯಲ್ಲಿ ಹೇಳಿದ್ದಾರೆ ಎನ್ನುವುದನ್ನು ನಾನು ಕೇಳಿದ್ದೆ. ಹೀಗಾಗಿ, ಅಲ್ಲಿಯೋ ಇಲ್ಲಿಯೋ ಎಲ್ಲಿಯೋ ಒಂದು ಕಡೆ ನಮ್ಮಿಂದ ತಪ್ಪುಗಳು ನಡೆದರೆ ಅದನ್ನು ತಿದ್ದುವಂತಹ ಒಂದು ಪರಮಾಧಿಕಾರ ತಮಗೆ ಇದೆ ಎಂದು ನೆನಪು ಮಾಡಿಕೊಂಡು, ನೀವು ನಡೆದು ಬಂದ ದಾರಿ ... 1983 ರಲ್ಲಿನ ತಮ್ಮ ಚುನಾವಣೆಯಲ್ಲಿ ನಾವೆಲ್ಲರೂ ಸಣ್ಣವರಿದ್ದೆವು. ಅದು 1983 ಇರಬಹುದು ಅಥವಾ ಅದಕ್ಕೂ ಮೊದಲು

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಇರಬಹುದು, ನನಗೆ ಸರಿಯಾಗಿ ನೆನಪು ಇಲ್ಲ. ನಾವೆಲ್ಲರೂ ಸಣ್ಣವರು. ಆಗ ನಿಮ್ಮ ಹೆಸರು ನಮಗೆಲ್ಲಾ ಸರಿಯಾಗಿ ಗೊತ್ತಿರಲಿಲ್ಲ. ನಮ್ಮ ಹಿರಿಯರೆಲ್ಲರೂ, ನಮ್ಮ ಗ್ರಾಮದವರು ಏನು ಹೇಳುತ್ತಿದ್ದರು ಎಂದರೆ ಹುಯ್ಯಾರ್ ಪಟೇಲ್‌ರ ಮಗ ಚುನಾವಣೆಗೆ ನಿಂತಿದ್ದರು ಎಂದು ಹೇಳುತ್ತಿದ್ದರು. ನಾನು ಬಳಸಿದ ಶಬ್ದ ಸರಿಯೋ ಏನೋ ಗೊತ್ತಿಲ್ಲ. ಹುಯ್ಯಾರ್ ಪಟೇಲ್‌ರ ಮಗ ಎಂದರೆ ಬಹು ದೊಡ್ಡ ಮನೆತನ, ದೊಡ್ಡ ಇತಿಹಾಸ ಇರುವಂತಹ ಒಂದು ಪರಂಪರೆಯುಳ್ಳ ಕುಟುಂಬದಿಂದ ಬಂದವರು ತಾವು ಆಗಿದ್ದೀರಿ. ಅಲ್ಲಿಂದ ಇಲ್ಲಿಗೆ ನಿಮ್ಮ ರಾಜಕೀಯ ಜೀವನದಲ್ಲಿ ಏಳು–ಬೀಳುಗಳು ಇರಬಹುದು, ಆದರೆ ನೀವು ನಡೆದಂತಹ ಹಾದಿ ಹೂವಿನ ಹಾಸಿಗೆಯಲ್ಲ. ಅನೇಕ ಮುಳ್ಳುಗಳು, ಅನೇಕ ಸವಾಲುಗಳು, ಅನೇಕ ಸಮಸ್ಯೆಗಳನ್ನು ಎದುರಿಸಿ, ಇವತ್ತು ಈ ಮಟ್ಟಕ್ಕೆ ನೀವು ಬಂದಿರುವಂತಹದ್ದು ನಿಮ್ಮ ಜಿಲ್ಲೆಯವನಾದ ನನಗೆ ಅತ್ಯಂತ ಸಂತೋಷ ತಂದಿದೆ. ನಿಮ್ಮನ್ನು ಈ ಸ್ಥಾನಕ್ಕೆ ಆಯ್ಕೆ ಮಾಡಿದ್ದಕ್ಕೋಸ್ಕರ ಕಾಂಗ್ರೆಸ್ ಪಕ್ಷದ ಎಲ್ಲಾ ಪ್ರಮುಖರಿಗೆ ಅಭಿನಂದನೆಗಳನ್ನು ಹೇಳಲಿಕ್ಕೆ ಬಯಸುತ್ತೇನೆ. ಏಕೆಂದರೆ, ನಿಮ್ಮ ಹಿರಿತನವನ್ನು, ನಿಮ್ಮ ಪ್ರಮಾಣಿಕತೆಯನ್ನು ನಿಮ್ಮ ನಿಷ್ಕಳಂಕತೆಯನ್ನು, ನಿಮ್ಮ ನೇರ ನಡೆನುಡಿಯನ್ನು ಎಲ್ಲರೂ ಒಪ್ಪುವಂತಹ ಒಂದು ಗೌರವಸ್ಥ ವ್ಯಕ್ತಿತ್ವ ನಿಮ್ಮದು. ಆ ಕಾರಣಕ್ಕೋಸ್ಕರ ಸಭಾಪತಿಯಂತಹ ಒಂದು ಉನ್ನತ ಸ್ಥಾನಕ್ಕೆ ಅವರು ಅವಕಾಶವನ್ನು ಕೊಟ್ಟಿದ್ದಕ್ಕೋಸ್ಕರ ನಾನು ನಿಮ್ಮ ಪಕ್ಷದವರಿಗೂ ಸಹ ಧನ್ಯವಾದಗಳನ್ನು ಹೇಳಿ, ಅತ್ಯಂತ ಯಶಸ್ವಿಯಾಗಿ ನಿಮ್ಮ ಮಾರ್ಗದರ್ಶನದಲ್ಲಿ ಈ ಸದನ ನಡೆಯಲಿ ಎಂದು ಹಾರೈಕೆಗಳೊಂದಿಗೆ ನಿಮಗೆ ಅಭಿನಂದನೆಗಳನ್ನು ಸಲ್ಲಿಸುತ್ತೇನೆ.

ಇನ್ನು ನಮಗೆಲ್ಲರಿಗೂ ಹಿರಿಯರಾದ ಶ್ರೀಯುತ ಬಸವರಾಜ ಹೊರಟ್ಟಿಯವರು ತಮ್ಮ ಬಹಳ ವರ್ಷಗಳ ಸುದೀರ್ಘವಾದ ರಾಜಕಾರಣದ ಅನುಭವದಲ್ಲಿ ಒಂದಷ್ಟು ದಿವಸಗಳ ಕಾಲ ಆ ಒಂದು ಪೀಠದಲ್ಲಿ ಕುಳಿತು ನಮಗೆಲ್ಲರಿಗೂ ಮಾರ್ಗದರ್ಶನ ಮಾಡಿದ್ದಾರೆ. ಅವರಿಗೂ ಕೂಡ ಈ ಸಂದರ್ಭದಲ್ಲಿ ಅಭಿನಂದನೆಯನ್ನು ಹೇಳಲಿಕ್ಕೆ ಬಯಸುತ್ತೇನೆ.

ಮಾನ್ಯ ಸಭಾಪತಿಯವರೇ, ತಮ್ಮ ಆಯ್ಕೆ ಅತ್ಯಂತ ವ್ಯವಸ್ಥಿತವಾಗಿ ನಡೆದಿದೆ. ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ನಾವುಗಳು ಏನಾದರೂ ಒಂದು ಸಣ್ಣ ಅಭ್ಯರ್ಥಿಯನ್ನು ಈ ನಿಟ್ಟಿನಲ್ಲಿ ಹಾಕಬೇಕೆನ್ನುವ ಆಲೋಚನೆಯಲ್ಲಿದ್ದೆವು. ಆದರೆ, ಈ ನಿಟ್ಟಿನಲ್ಲಿ ನಮಗೆ ಬಹುಮತ ಇಲ್ಲವೆಂದು ನಮಗೆ ಗೊತ್ತಿದೆ. ಸಣ್ಣದೊಂದು ಅಭ್ಯರ್ಥಿಯನ್ನು ಹಾಕಿ ನೋಡೋಣ ಏನಾಗುತ್ತದೆ ಎಂದು ನೋಡಬೇಕೆನಿಸಿತ್ತು. ಎಲ್ಲಿಯಾದರೂ ಗುಡುಗು–ಸಿಡಿಲು ಬಂದು ಏನಾದರೂ ನಡೆಯುತ್ತದೆಯೇ ನೋಡೋಣವೆಂದು ಇದ್ದೆವು. ಆದರೆ, ಸಭಾಪತಿಯಂತಹ ಪರಮೋಚ್ಛ ಹುದ್ದೆ ಎನ್ನುವುದು ಅತ್ಯಂತ ಸರ್ವ ಶ್ರೇಷ್ಠ ಎನ್ನುವ ಕಾರಣಕ್ಕೋಸ್ಕರ ಯಾವುದೇ ಗೊಂದಲಗಳಿಲ್ಲದೆ ಆಯ್ಕೆಯಾಗಲಿ ಎಂದು ನಮ್ಮ ಹಿರಿಯರು ಹೇಳಿದ

**"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"**

ಹಿನ್ನೆಲೆಯಲ್ಲಿ ನಿಮ್ಮ ಆಯ್ಕೆ ಅತ್ಯಂತ ಸುಸೂತ್ರವಾಗಿದೆ ಎನ್ನುವ ಕಾರಣಕ್ಕೆ ನಿಮಗೆ ಅಭಿನಂದನೆಯನ್ನು ಹೇಳಲಿಕ್ಕೆ ಬಯಸುತ್ತೇನೆ. ನಮಸ್ಕಾರ, ಧನ್ಯವಾದಗಳು.

**ಶ್ರೀ ಕೃಷ್ಣ ಬೈರೇಗೌಡ(ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಹಾಗೂ ಕಾನೂನು, ನ್ಯಾಯ ಮತ್ತು ಮಾನವ ಹಕ್ಕುಗಳು ಮತ್ತು ಸಂಸದೀಯ ವ್ಯವಹಾರಗಳು ಹಾಗೂ ಶಾಸನ ರಚನೆ ಸಚಿವರು):–** ಮಾನ್ಯ ಸಭಾಪತಿಯವರೇ, ತಾವು ಇಂದು ಅವಿರೋಧವಾಗಿ ಎಲ್ಲಾ ಸದಸ್ಯರ, ಎಲ್ಲಾ ಪಕ್ಷಗಳ ಸಹಕಾರದಿಂದ ಬಹಳ ದೀರ್ಘ ಇತಿಹಾಸ ಇರತಕ್ಕಂತಹ, ದೇಶದಲ್ಲಿಯೇ ಅತ್ಯಂತ ಹಳೆಯ ವಿಧಾನ ಮಂಡಲದ ಸಂಸ್ಥೆಯಾದ ಕರ್ನಾಟಕದ ವಿಧಾನ ಪರಿಷತ್ತಿಗೆ ಸಭಾಪತಿಗಳಾಗಿ ಆಯ್ಕೆಯಾಗಿರುತ್ತೀರಿ ಎಂದು ನಾನು ಅಂದುಕೊಳ್ಳುತ್ತೇನೆ. ಎಲ್ಲರ ಸಹಕಾರದಿಂದ ಇಂದು ಸಭಾಪತಿಗಳಾಗಿರುವ ತಮಗೆ ನಾನು ಅಭಿನಂದನೆಗಳನ್ನು ಸಲ್ಲಿಸುತ್ತೇನೆ. ಸರ್ವಸಮ್ಮತವಾಗಿ ಇವತ್ತು ಎಲ್ಲರೂ ಸಹಕಾರವನ್ನು ಕೊಟ್ಟು ಒಂದು ಒಳ್ಳೆಯ ವಾತಾವರಣದಲ್ಲಿ ತಮ್ಮನ್ನು ಸಭಾಪತಿಯಾಗಿ ಈ ಪೀಠದಲ್ಲಿ ಕೂರಿಸುವುದಕ್ಕೆ ಸಹಕಾರ ಕೊಟ್ಟಂತಹ ಎಲ್ಲಾ ಪಕ್ಷಗಳಿಗೂ, ಎಲ್ಲಾ ಸದಸ್ಯರಿಗೂ ನಾನು ಧನ್ಯವಾದಗಳನ್ನು ಹೇಳುತ್ತೇನೆ. ಅದರ ಜೊತೆಯಲ್ಲಿಯೇ ಕಳೆದ ಅಧಿವೇಶನ ಮತ್ತು ಈ ಅಧಿವೇಶನ ಹಾಗೂ ಈ ಅವಧಿಯಲ್ಲಿ ಶ್ರೀಯುತ ಬಸವರಾಜ ಹೊರಟ್ಟಿಯವರು ಒಬ್ಬ ಮಾದರಿ ಸಭಾಪತಿಯವರಾಗಿ ನಡೆದುಕೊಂಡು ಈ ಸದನದ ಗೌರವವನ್ನು ಎತ್ತಿ ಹಿಡಿದಿದ್ದಾರೆ. ಅವರು ಕಡಿಮೆ ಅವಧಿಗೆ ರಾಜ್ಯಪಾಲರಿಂದ ಸಭಾಪತಿಗಳಾಗಿ ನೇಮಿತರಾದರೂ ಸಹ ಆ ಕಡಿಮೆ ಅವಧಿಯಲ್ಲಿಯೇ ಒಬ್ಬ ಅತ್ಯುತ್ತಮ ಸಭಾಪತಿಯಾಗಿ ಯಾವ ರೀತಿಯಲ್ಲಿ ಕೆಲಸ ಮಾಡಬಹುದು ಎನ್ನುವುದನ್ನು ನಮ್ಮೆಲ್ಲರಿಗೂ ತೋರಿಸಿಕೊಟ್ಟಿದ್ದಾರೆ. ಪಕ್ಷಾತೀತವಾಗಿ ವಿರೋಧ ಪಕ್ಷಕ್ಕೂ ನ್ಯಾಯ ಕೊಡುವಂತಹದ್ದಾಗಲಿ. ಆಡಳಿತ ಪಕ್ಷದ ಪ್ರತಿನಿಧಿಗಳನ್ನು ಸಹ, ಸರ್ಕಾರದ ಪ್ರತಿನಿಧಿಗಳಾದ ನಮಗೂ ಸಹ ಎಚ್ಚರಿಸಿ, ವಿಧಾನ ಮಂಡಲ ಹಾಗೂ ಕರ್ನಾಟಕದ ಜನತೆಗೆ ಉತ್ತರದಾಯಿತ್ವವನ್ನು ನಮಗೂ ಎಚ್ಚರಿಸಿ ಕೆಲಸ ಮಾಡುವಂತೆ ನಡೆದುಕೊಂಡಿದ್ದಾರೆ. ಅವರ ಮಾರ್ಗದರ್ಶನಕ್ಕಾಗಿ ಮತ್ತು ಇಲ್ಲಿಯವರೆಗೆ ಸದನವನ್ನು ನಡೆಸಿಕೊಟ್ಟಂತಹ ಮಾನ್ಯ ಶ್ರೀ ಬಸವರಾಜ ಹೊರಟ್ಟಿಯವರಿಗೂ ಸಹ ನಾನು ಧನ್ಯವಾದಗಳನ್ನು ಹೇಳಲಿಕ್ಕೆ ಬಯಸುತ್ತೇನೆ.

ಮಾನ್ಯ ಸಭಾಪತಿಯವರೇ, ತಾವು ಸಹ ಬಹಳ ಸುದೀರ್ಘ ರಾಜಕೀಯ ಅನುಭವವುಳ್ಳವಂತಹವರಾಗಿದ್ದೀರಿ. ವಿಧಾನಸಭೆ ಮತ್ತು ವಿಧಾನ ಪರಿಷತ್ತು ಈ ಎರಡು ಕಡೆ ಕೆಲಸ ಮಾಡಿ ಸ್ಥಳೀಯ ಸಂಸ್ಥೆಯ ಜನರು ಹಾಗೂ ಜನಪ್ರತಿನಿಧಿಗಳೊಂದಿಗೆ ಕೆಲಸ ಮಾಡಿ ಒಂದು ಸ್ವಚ್ಛವಾದಂತಹ ಒಂದು ಸಚ್ಚಾರಿತ್ರ್ಯವನ್ನು ಇಟ್ಟುಕೊಂಡು ಇಲ್ಲಿಯವರೆವಿಗೂ ಸಹ ಯಾವುದೇ ಒಂದು

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಕಪ್ಪು ಚುಕ್ಕೆ ಇಲ್ಲದ ಹಾಗೆ ಸಾರ್ವಜನಿಕ ಜೀವನದಲ್ಲಿ ತಾವು ನಡೆದುಕೊಂಡು ಬಂದಿದ್ದೀರಿ. ಈ ಸದನದ ಗೌರವವನ್ನು ತಾವು ಖಂಡಿತವಾಗಿ ಎತ್ತಿ ಹಿಡಿಯುತ್ತೀರಿ ಎನ್ನುವಂತಹ ಸ್ಪಷ್ಟ ನಿರೀಕ್ಷೆ ಮತ್ತು ಭರವಸೆ ನಿಮ್ಮ ಮೇಲೆ ನಾವೆಲ್ಲರೂ ಸಹ ಇಟ್ಟುಕೊಂಡಿದ್ದೇವೆ. ಈಗಾಗಲೇ ಮಾನ್ಯ ಉಪ ಮುಖ್ಯಮಂತ್ರಿಗಳು ತಮ್ಮ ಬಗ್ಗೆ ಹೇಳಿದ ಹಾಗೆ ಭವ್ಯ ಇತಿಹಾಸ ಹೊಂದಿದಂತಹ ಸದನ ಇದಾಗಿದೆ. ಈ ಸದನದಲ್ಲಿ ಬಹಳ ಜನ ಗಣ್ಯರೆಲ್ಲರೂ ಸಹ ಇಲ್ಲಿ ಸದಸ್ಯರಾಗಿ, ಪೀಠದಲ್ಲಿ ಆಸೀನರಾಗಿ ಈ ಸದನದಲ್ಲಿ ನಾನಾ ರೂಪದಲ್ಲಿ ಕೆಲಸ ಮಾಡಿ ಹೋಗಿದ್ದಾರೆ. ಅವರೆಲ್ಲರ ಸಂಪ್ರದಾಯದ ನಿರೀಕ್ಷೆಗಳು ಮತ್ತು ಆ ನಿರೀಕ್ಷೆಗಳನ್ನು ಪೂರೈಸತಕ್ಕಂತಹ ಹೊರೆ ನಮ್ಮೆಲ್ಲರ ಮತ್ತು ತಮ್ಮ ಹೆಗಲ ಮೇಲಿದೆ. ಆದರೆ, ತಾವು ಅದನ್ನು ಸಮರ್ಥವಾಗಿ ನಿಭಾಯಿಸುತ್ತೀರಿ ಎನ್ನುವಂತಹ ಭರವಸೆಯನ್ನು ನಾವು ಇಟ್ಟುಕೊಂಡಿದ್ದೇವೆ. ಈ ವಿಚಾರವಾಗಿ ನಮ್ಮ ಸಭಾನಾಯಕರು ಈಗಾಗಲೇ ಹೇಳಿದ್ದಾರೆ. ಇಲ್ಲಿ ಪ್ರಮುಖ ಹುದ್ದೆಗಳಲ್ಲಿ ಮೂರು ಮಂದಿಯೂ ಸಹ ಉಡುಪಿ ಜಿಲ್ಲೆಯವರೇ ಆಗಿದ್ದೀರಿ. ಎದುರು-ಬದರು ಮತ್ತು ನಿಮ್ಮ ಮಧ್ಯೆಯೂ ಉಡುಪಿಯವರೇ ಆಗಿದ್ದೀರಿ. ನಾವೆಲ್ಲರೂ ಈ ಬರಡು ಜಿಲ್ಲೆಗಳಿಂದ ಬಂದಂತಹವರಾಗಿದ್ದೇವೆ. ತಾವುಗಳೆಲ್ಲರೂ ಬುದ್ಧಿ ಜೀವಿಗಳು. ನಿಮ್ಮ ಕೈಗೆ ಈ ಸದನವನ್ನು ಕೊಟ್ಟಿದ್ದೇವೆ. ರಾಜ್ಯದಲ್ಲಿ ಯಾವುದೇ ಒಂದು ಚುನಾವಣೆ ಬಂದಾಗ ನೋಡಿದರೆ ನಾವೆಲ್ಲರೂ ಎಷ್ಟೊಂದು ರೀತಿಯಲ್ಲಿ ಹೊಡೆದಾಟ-ಬಡಿದಾಟ ಮಾಡಿಕೊಳ್ಳುತ್ತೇವೆ. ಅದರಲ್ಲೂ ಕಾಂಗ್ರೆಸ್-ಬಿಜೆಪಿ ಎಂದರೆ ಜಿದ್ದಾಜಿದ್ದಿ. ಆ ಸಮಯದಲ್ಲಿ ಏನು ಬೈಗುಳಗಳು, ಏನು ಹೋರಾಟ, ಏನು ಗಲ್ಲಾಟೆಯಾಗುತ್ತವೆ ಎನ್ನುವುದನ್ನು ನೋಡಬಹುದಾಗಿದೆ. ಆ ಸಮಯದಲ್ಲಿ ಮನೆ-ಮನೆಗಳೇ ವಿಭಾಗವಾಗಿ ಬಿಡುತ್ತವೆ. ಮಾನ್ಯ ಸದಸ್ಯರಾದ ಡಾ॥ ವೈ.ಎ. ನಾರಾಯಣಸ್ವಾಮಿಯವರು ಶ್ರೀನಿವಾಸಪುರ ತಾಲ್ಲೂಕಿನವರು. ಅಲ್ಲಿ ಈ ಪಕ್ಷ ಆ ಪಕ್ಷ ಎಂದರೆ ಮದುವೆಗಳಿಗೂ ಸಹ ನಾವು ಹೋಗುವುದಿಲ್ಲ. ಆ ಮಟ್ಟದಲ್ಲಿ ನಾವು ಇರುತ್ತೇವೆ. ಏಕೆಂದರೆ ನಮಗೆ ಬುದ್ಧಿ ಕಡಿಮೆ ಇರುತ್ತದೆ. ಆದರೆ, ನಾವುಗಳು ಇಷ್ಟೆಲ್ಲಾ ಬಡಿದಾಡುತ್ತೇವೆ. ಇರಲಿ. ಈಗ ಶ್ರೀನಿವಾಸಪುರದ ವಿಷಯ ಹಾಗಿರಲಿ. ನಾವುಗಳು ಈ ರೀತಿಯಲ್ಲಿ ರಾಜಕೀಯ ಮಾಡುತ್ತೇವೆ. ಕರಾವಳಿ ಭಾಗದಲ್ಲಿ ಎಲ್ಲರಿಗೂ ಗೊತ್ತಿರುವಂತೆ ರಾಜಕೀಯವಾಗಿ ಕಾಂಗ್ರೆಸ್-ಬಿಜೆಪಿ ಯವರು ಬಹಳ ಬದ್ಧ ವೈರಿಗಳು. ಇತ್ತೀಚಿನ ವರ್ಷಗಳಲ್ಲಿ ದುರದೃಷ್ಟವಶಾತ್ ವೈಯಕ್ತಿಕ ಜೀವನಗಳಿಗೂ ಸಹ ಪ್ರವೇಶ ಮಾಡಿ ವಾತಾವರಣ ಬಹಳ ಕಲುಷಿತವಾಗಿದೆ. ಇದೆಲ್ಲವೂ ಎಲ್ಲರಿಗೂ ಗೊತ್ತಿರುವ ವಿಚಾರವೇ ಆಗಿರುತ್ತದೆ. ಆದರೆ, ಇಷ್ಟೆಲ್ಲಾ ಇದ್ದರೂ ಸಹ ಇವರಿಬ್ಬರು ಮಾತ್ರ ಜಂಟಿಯಾಗಿ ಚುನಾವಣೆಯನ್ನು ಮಾಡುತ್ತಾರೆ. ಇಬ್ಬರು ಟೀಮ್ ವರ್ಕ್ ಮಾಡುತ್ತಾರೆ.

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಸಂದೇಶ್ ನಾಗರಾಜು(ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-** ಅವರುಗಳು ದುಡ್ಡು ಖರ್ಚು ಮಾಡದೇ ಚುನಾವಣೆಯಲ್ಲಿ ಗೆದ್ದು ಬರುತ್ತಾರೆ.

**ಶ್ರೀ ಕೃಷ್ಣ ಬೈರೇಗೌಡ:-** ಅಣ್ಣನವರಾದ ಸಂದೇಶ ನಾಗರಾಜು ರವರು ಇಲ್ಲಿ ಗಮನಿಸಬೇಕು. ದುಡ್ಡು ಇಲ್ಲವೆಂದರೆ ಬೇರೆಯವರು ದುಡ್ಡು ಖರ್ಚು ಮಾಡುತ್ತಿದ್ದಾರೆಂದರೆ ಅದರ ಅರ್ಥ ಬೇರೆಯಾಗಿ ಬಿಡುತ್ತದೆ. ಆದರೆ, ಅಣ್ಣನವರಾದ ಶ್ರೀ ಸಂದೇಶ್ ನಾಗರಾಜು ರವರು ಹೇಳಿದ್ದು ನಿಜ. ಯಾವುದೇ ತಂಟೆ-ತಕರಾರು ಇಲ್ಲದೆ, ಖರ್ಚು-ವೆಚ್ಚಗಳಿಲ್ಲದೆ ಇಬ್ಬರು ಭದ್ರವಾಗಿ ಗೆದ್ದುಕೊಂಡು ಬರುತ್ತಿದ್ದಾರೆ.

ಮುಂದು. . . .

**(370)**

**(ಸಭಾಪತಿಯವರ ಉಪಸ್ಥಿತಿ)**

**ಶ್ರೀ ಕೃಷ್ಣ ಬೈರೇಗೌಡ (ಮುಂದು):-**

ಈ ಸದನವನ್ನು ಮುಂದೆ ಕೊಂಡೊಯ್ಯುತಕ್ಕಂತಹ ಜವಾಬ್ದಾರಿ ನಿಮ್ಮ ಮೂರು ಜನರ ಮೇಲಿದೆ ಎಂದರೆ ಎಲ್ಲಾ ಸದಸ್ಯರು ಒಪ್ಪುತ್ತಾರೆ. ಎಲ್ಲೆಲ್ಲೋ ಹುಡುಕಿ ಕೊನೆಗೆ ಈ ಮೂವರ ಕೈಯಲ್ಲಿ ಜವಾಬ್ದಾರಿ ಕೊಡಬೇಕಾಗಿ ಬಂದಿತು. ಇದು ವಿಧಿಯೂ ಅಲ್ಲ, ವಿಪರ್ಯಾಸವೂ ಅಲ್ಲ. ಅದು ಕರಾವಳಿ ಜಿಲ್ಲೆಯ ವೈಶಿಷ್ಟ್ಯ.

ಮಾನ್ಯ ವಿರೋಧಪಕ್ಷದ ನಾಯಕರು ಹೇಳಿದಂತೆ ರಾಜ್ಯದ ಜನ ಹೊರಗೆ ಇದ್ದಾರೆ. ಅವರ ಪ್ರತಿನಿಧಿಗಳಾಗಿ ನಾವಿಲ್ಲಿದ್ದೇವೆ. ನಾವಿಲ್ಲಿರುವುದು ಆ ಜನಗಳಿಗಾಗಿ. ಆ ಜನಗಳ ನಿರೀಕ್ಷೆಗಳನ್ನು ಈಡೇರಿಸತಕ್ಕಂತಹ ಜವಾಬ್ದಾರಿ ವಿರೋಧಪಕ್ಷದ ಸದಸ್ಯರು, ಆಡಳಿತ ಪಕ್ಷದ ಸದಸ್ಯರೆಂಬ ಭೇದವಿಲ್ಲದೆ ನಮ್ಮೆಲ್ಲರ ಮೇಲೂ ಇದೆ. ಅದಕ್ಕಾಗಿ ನಾವು ಇಲ್ಲಿ ಕುಳಿತಿದ್ದೇವೆ. ನಾವೆಲ್ಲ ಆ ಜನರ ಆಶೋತ್ತರಗಳನ್ನು ಈಡೇರಿಸುವ ರೀತಿಯಲ್ಲಿ ಕೆಲಸ ಮಾಡಿದಾಗ ಈ ಸದನಕ್ಕೂ ನ್ಯಾಯ ದೊರಕುತ್ತದೆ. ಗೌರವ ಲಭಿಸುತ್ತದೆ. ಮೈಸೂರು ಮಹಾರಾಜರು ಆ ಕಾಲದಲ್ಲಿಯೇ ಆರಂಭ ಮಾಡಿದಂತಹ ಸದನವು ನಿಜವಾಗಿಯೂ ಅರ್ಥಪೂರ್ಣವಾಗಬೇಕೆಂದರೆ ಹೊರಗೆ ಇರುವಂತಹ ಜನರ ನಿರೀಕ್ಷೆಗಳು ಈಡೇರಬೇಕು. ಆ ನಿರೀಕ್ಷೆಗಳನ್ನು ಈಡೇರಿಸುವುದರಲ್ಲಿ ಆಡಳಿತ ಪಕ್ಷದ ಹಾಗೂ ವಿರೋಧ ಪಕ್ಷದ ಜವಾಬ್ದಾರಿ ಇದೆ. ಆದರೆ ನಮ್ಮಿಬ್ಬರನ್ನು ಸರಿದಾರಿಯಲ್ಲಿ ಕೊಂಡೊಯ್ಯುತಕ್ಕಂತಹ ಜವಾಬ್ದಾರಿ ತಮ್ಮ ಮೇಲಿದೆ. ಆ ಕೆಲಸ ತಮ್ಮಿಂದ ಆಗುತ್ತದೆ ಎಂಬ ಸಂಪೂರ್ಣ ನಂಬಿಕೆಯನ್ನು ನಾವು ಇಟ್ಟುಕೊಂಡಿದ್ದೇವೆ. ಈ ಕೆಲಸದಲ್ಲಿ ತಮಗೆ ಸಂಪೂರ್ಣ ಯಶಸ್ಸು ಲಭಿಸಲಿ ಎಂದು ನಾನು

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಹಾರೈಸುತ್ತೇನೆ. ತಾವು ಸರ್ಕಾರಕ್ಕೆ ಏನು ಸೂಚನೆಗಳನ್ನು ನೀಡುತ್ತೀರೋ, ಯಾವ ಆಶೋತ್ತರಗಳನ್ನು ಇಟ್ಟುಕೊಂಡು ತಾವು ಇಂದು ಪೀಠವನ್ನು ಅಲಂಕರಿಸಿದ್ದೀರೋ, ಆ ನಿರೀಕ್ಷೆಗೆ ತಕ್ಕ ಹಾಗೆ ಪ್ರಾಮಾಣಿಕವಾಗಿ ಕೆಲಸ ಮಾಡುವ ಪ್ರಯತ್ನವನ್ನು ಸರ್ಕಾರವೂ ಸಹ ಮಾಡುತ್ತದೆ ಎಂಬ ಭರವಸೆಯನ್ನು ನಾನು ಕೊಡುತ್ತೇನೆ. ಮತ್ತೊಮ್ಮೆ ತಮ್ಮನ್ನು ಅಭಿನಂದಿಸಿ, ತಮ್ಮನ್ನು ಪಕ್ಷಾತೀತವಾಗಿ ಆಯ್ಕೆ ಮಾಡಿದಂತಹ ಎಲ್ಲರಿಗೂ ಧನ್ಯವಾದಗಳನ್ನು ಹೇಳುತ್ತೇನೆ. ಮಾನ್ಯ ಬಸವರಾಜ ಹೊರಟ್ಟಿಯವರಿಗೆ ಮತ್ತೊಮ್ಮೆ ನನ್ನ ವೈಯಕ್ತಿಕ ಧನ್ಯವಾದಗಳನ್ನು ಹೇಳುತ್ತಾ, ತಮಗೆ ಶುಭವನ್ನು ಕೋರುತ್ತೇನೆ. ಧನ್ಯವಾದಗಳು.

**ಶ್ರೀ ಎಸ್.ಆರ್.ಪಾಟೀಲ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಕೆಳಮನೆಗೆ ನಾಲ್ಕು ಬಾರಿ, ಮೇಲ್ಮನೆಗೆ ಮೂರು ಬಾರಿ ಅಂದರೆ ಅಂದಾಜು ಎರಡು ದಶಕಗಳ ಕಾಲ ಕೆಳಮನೆ, ಒಂದೂವರೆ ದಶಕ ಮೇಲ್ಮನೆ – ಇಷ್ಟು ಸುದೀರ್ಘವಾದಂತಹ ಅವಧಿಯಲ್ಲಿ ತಾವು ವಿಧಾನ ಮಂಡಲದಲ್ಲಿ ಕೆಲಸ ಮಾಡಿದಂತಹ ಅಪಾರವಾದ ಅನುಭವವನ್ನು ಹೊಂದಿರುತ್ತೀರಿ. ಶತಮಾನಗಳ ಇತಿಹಾಸವನ್ನು ಹೊಂದಿರತಕ್ಕಂತಹ ಈ ಪವಿತ್ರವಾದ ವಿಧಾನ ಪರಿಷತ್ತಿಗೆ ತಾವು ಸಭಾಪತಿಯಾಗಿ ಅವಿರೋಧವಾಗಿ ಆಯ್ಕೆಯಾಗಿದ್ದು ತಮಗಿಂತಲೂ ನನಗೆ ಹೆಚ್ಚು ಸಂತೋಷವಾಗಿದೆ ಎಂಬುದನ್ನು ಈ ಸಂದರ್ಭದಲ್ಲಿ ವ್ಯಕ್ತಪಡಿಸಲು ನನಗೆ ಬಹಳ ಅಭಿಮಾನವೆನಿಸುತ್ತಿದೆ. ಮೂರು ಅವಧಿಗಳ ಕಾಲ ಅಂದರೆ ಅಂದಾಜು 15 ವರ್ಷಗಳನ್ನು ಪೂರ್ಣಗೊಳಿಸಿದ್ದೀರಿ. ಆ ದೃಷ್ಟಿಯಿಂದ ಮೇಲ್ಮನೆಯ ಒಳ-ಹೊರ ಅನುಭವಗಳನ್ನು ತಾವು ಪಡೆದಿದ್ದೀರಿ. ಬಹುತೇಕವಾಗಿ ಎಲ್ಲಾ ಚರ್ಚೆಗಳಲ್ಲಿಯೂ ಸಹ ತಾವು ಕ್ರಿಯಾಶೀಲವಾಗಿ ಭಾಗವಹಿಸಿ ಪ್ರತಿಯೊಂದು ವಿಚಾರದಲ್ಲಿಯೂ ತಾವು ಆಸಕ್ತಿಯಿಂದ, ಮುತುವರ್ಜಿಯಿಂದ ಇಲ್ಲಿ ನಡೆಯತಕ್ಕಂತಹ ಕಾರ್ಯಕಲಾಪಗಳಲ್ಲಿ ಭಾಗವಹಿಸಿ ಮೇಲ್ಮನೆಯ ಎಲ್ಲಾ ಒಳ ಹೊರ ವಿಚಾರಗಳನ್ನು ತಾವು ತಿಳಿದಿರುವುದರಿಂದ ತಾವು ಕುಳಿತಿರುವ ಸ್ಥಾನಕ್ಕೆ ನಿಜವಾಗಿಯೂ ನ್ಯಾಯವನ್ನು ಒದಗಿಸುತ್ತೀರಿ ಎನ್ನುವ ವಿಶ್ವಾಸವಿದೆ. ನನಗೆನಿಸಿರುವ ಮಟ್ಟಿಗೆ ಆ ಕುರ್ಚಿಯಿಂದ ತಮಗೆ ಗೌರವ ಬರುತ್ತದೆ ಎಂದು ಹೇಳದೆ ತಮ್ಮಿಂದ ಆ ಸ್ಥಾನಕ್ಕೆ ಗೌರವ ಬರುವ ರೀತಿಯಲ್ಲಿ ತಾವು ಕೆಲಸ ಮಾಡುತ್ತೀರೆಂಬ ವಿಶ್ವಾಸ ನನಗಿದೆ. ಏಕೆಂದರೆ ವ್ಯಕ್ತಿ ಯಾವುದಾದರೊಂದು ಸ್ಥಾನದಲ್ಲಿ ಕುಬ್ಜನಾಗಿ ಕೂಡಬಾರದು. ಆ ವ್ಯಕ್ತಿ ತಾನು ಕುಳಿತ ಕುರ್ಚಿಗಿಂತಲೂ ಎತ್ತರದಲ್ಲಿರಬೇಕೆಂಬುದು ನನ್ನ ವಿಚಾರ. ಬಹಳಷ್ಟು ಜನರಿಗೆ ಕುರ್ಚಿಯಿಂದ ಗೌರವ ಬರುತ್ತದೆ. ಒಬ್ಬ ವ್ಯಕ್ತಿ ಮಂತ್ರಿಯಾಗಿದ್ದಾರೆಂದರೆ ಅವರಿಗೆ ಗೌರವ ಬಂದಿರುತ್ತದೆ. ಆ ವ್ಯಕ್ತಿಯ ವ್ಯಕ್ತಿತ್ವದಿಂದ ಮಂತ್ರಿ ಸ್ಥಾನಕ್ಕೆ ಗೌರವ ಬರಬೇಕು. ಕೆಳಮನೆ ಮತ್ತು ಮೇಲ್ಮನೆಯಲ್ಲಿ ಸುದೀರ್ಘವಾಗಿ ಕೆಲಸವನ್ನು ಮಾಡಿದಂತಹ ಅಪಾರವಾದ ಅನುಭವವನ್ನು

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**“ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”**

ಹೊಂದಿದವರಾಗಿರುತ್ತೀರಿ. ತಾವು ನಿಶ್ಚಿತವಾಗಿಯೂ ಆ ಸ್ಥಾನಕ್ಕಿಂತಲೂ ಎತ್ತರವಾದ ವ್ಯಕ್ತಿತ್ವದಿಂದ ಶತಮಾನಗಳ ಇತಿಹಾಸವನ್ನು ಹೊಂದಿರುವಂತಹ ಹಾಗೂ ಇಡೀ ದೇಶದಲ್ಲಿರುವ ಏಳು ವಿಧಾನ ಪರಿಷತ್ತುಗಳ ಪೈಕಿ ಅತ್ಯಂತ ಹಿರಿದಾದ ಈ ವಿಧಾನ ಪರಿಷತ್ತಿನಲ್ಲಿ ಸಮರ್ಥವಾಗಿ, ಪ್ರಾಮಾಣಿಕತೆಯಿಂದ, ಬದ್ಧತೆಯಿಂದ, ನಿಷ್ಠೆಯಿಂದ, ಯಾವುದೇ ರಾಗದ್ವೇಷಗಳಿಲ್ಲದೆ ಪಕ್ಷಾತೀತವಾಗಿ ಎಲ್ಲಾ ಸದಸ್ಯರನ್ನೂ ವಿಶ್ವಾಸಕ್ಕೆ ತೆಗೆದುಕೊಂಡು, ಯಾವುದೇ ಮರ್ಜಿ, ಭಿಡೆ ಹಾಗೂ ಮುಲಾಜಿಗೆ ಒಳಗಾಗದೆ ಕಾರ್ಯ ನಿರ್ವಹಿಸುತ್ತೀರೆಂಬ ವಿಶ್ವಾಸ ನನಗಿದೆ. ಎಲ್ಲಿಯಾದರೂ ತಪ್ಪಿದಾಗ ಸರ್ಕಾರದ ಕಿವಿ ಹಿಂಡುವಂತಹ ಕೆಲಸವನ್ನೂ ಸಹ ತಾವು ಮಾಡುತ್ತೀರೆಂದು ನನಗೆ ನಂಬಿಕೆ ಇದೆ.

ಈಗಾಗಲೇ ಮಾನ್ಯ ವಿರೋಧ ಪಕ್ಷದ ನಾಯಕರು ಸಂತೋಷವನ್ನು ವ್ಯಕ್ತ ಪಡಿಸಿರುತ್ತಾರೆ. ಮಾನ್ಯ ಸಭಾಪತಿಯವರು ಕುಳಿತಿರುವ ಎಡಭಾಗದಲ್ಲಿ ವಿರೋಧ ಪಕ್ಷದವರು ಇರುವುದರಿಂದ, ಅವರ ಹೃದಯವೇ ವಿರೋಧಪಕ್ಷದವರೊಂದಿಗೆ ಇದ್ದು, ಅವರಿಗೆ ಹೆಚ್ಚು ಕಾಳಜಿ ಮಾಡುತ್ತಾರೆ ಎನ್ನುವುದಕ್ಕೆ ಇದೊಂದು ಉದಾಹರಣೆ ಎಂದು ಹೇಳಬಯಸುತ್ತೇನೆ.

ಇದೇ ಸಂದರ್ಭದಲ್ಲಿ ಮಾನ್ಯ ಬಸವರಾಜ ಹೊರಟ್ಟಿಯವರನ್ನು ಎಷ್ಟು ಅಭಿನಂದಿಸಿದರೂ, ಎಷ್ಟು ಕೃತಜ್ಞತೆಯನ್ನು ಸಲ್ಲಿಸಿದರೂ ಕೂಡ ಕಡಿಮೆ ಎನ್ನುವಂತಹ ಮಾತನ್ನು ನಾನು ಇಲ್ಲಿ ವ್ಯಕ್ತಪಡಿಸುತ್ತೇನೆ. ಕಡಿಮೆ ಅವಧಿಗಾಗಿ ಹಂಗಾಮಿ ಸಭಾಪತಿಯವರಾಗಿ ಅದ್ಭುತ ರೀತಿಯಲ್ಲಿ ಆ ಸ್ಥಾನದಲ್ಲಿ ಕುಳಿತುಕೊಂಡು ತಮಗೂ ಸಹ ಮಾರ್ಗದರ್ಶನವನ್ನು ಮಾಡತಕ್ಕಂತಹ ಕೆಲಸವನ್ನು ಅವರು ಮಾಡಿರುತ್ತಾರೆ. ಹಿಂದೆ ಆ ಸ್ಥಾನದಲ್ಲಿದ್ದಂತಹ ಅನೇಕ ಪ್ರತಿಭಾವಂತ ಸಭಾಪತಿಗಳಿಗೆ ಕಡಿಮೆ ಇರಲಾರದಂತೆ ಇಡೀ ಕನ್ನಡ ನಾಡಿನ ಜನ ಮೆಚ್ಚುವ ರೀತಿಯಲ್ಲಿ ಎಲ್ಲರನ್ನೂ ವಿಶ್ವಾಸಕ್ಕೆ ತೆಗೆದುಕೊಂಡು ಸಂದರ್ಭ ಬಂದಾಗ ಸರ್ಕಾರಕ್ಕೂ ಕೂಡ ಎಚ್ಚರಿಕೆಯ ಮಾತುಗಳನ್ನು ಹೇಳುವ ಮೂಲಕ ಅತ್ಯುತ್ತಮ ರೀತಿಯಲ್ಲಿ ನಿಭಾಯಿಸಿದ್ದಾರೆ. ಅವರು ಬಹಳ ಸುದೀರ್ಘ ಅವಧಿಗೆ ವಿಧಾನ ಪರಿಷತ್ ಸದಸ್ಯರಾಗಿದ್ದಾರೆ. ಇಡೀ ಭಾರತ ದೇಶದ ವಿಧಾನ ಪರಿಷತ್ತುಗಳಲ್ಲಿ ಅವರಷ್ಟು ಹಿರಿಯ ಸದಸ್ಯರು ಯಾರೂ ಇರಲಿಕ್ಕಿಲ್ಲವೆಂದು ನಾನು ಭಾವಿಸುತ್ತೇನೆ. ಭಾರತ ದೇಶದಲ್ಲಿಯೇ ಅತ್ಯಂತ ಹಿರಿಯ ವಿಧಾನ ಪರಿಷತ್ ಸದಸ್ಯರು ಇಂದು ನಮ್ಮ ಸದನದಲ್ಲಿ ಆ ಸ್ಥಾನದಲ್ಲಿ ಕುಳಿತು ಅತ್ಯಂತ ಸಮರ್ಥ ರೀತಿಯಿಂದ ಜನ ಮೆಚ್ಚುವ ರೀತಿಯಲ್ಲಿ, ಶತಮಾನಗಳ ಇತಿಹಾಸವಿರುವ ಈ ಸದನಕ್ಕೆ ಗೌರವ ಬರುವ ರೀತಿಯಲ್ಲಿ, ಎಲ್ಲರ ವಿಶ್ವಾಸಕ್ಕೆ ಪಾತ್ರರಾಗುವ ರೀತಿಯಲ್ಲಿ ಅವರು ಕೆಲಸ ಮಾಡಿರುತ್ತಾರೆ. ಅದಕ್ಕಾಗಿ ವಿಶೇಷವಾಗಿ ಅವರಿಗೆ ಕೃತಜ್ಞತೆಯನ್ನು ಸಲ್ಲಿಸುವುದಕ್ಕೆ ಬಯಸುತ್ತಿದ್ದೇನೆ.

“ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಅವಿಭಾಜ್ಯ ದಕ್ಷಿಣ ಕನ್ನಡ ಜಿಲ್ಲೆಯವರು ಬಹಳ ಜಾಣರು ಎಂದು ನನಗನ್ನಿಸುತ್ತದೆ. ಈಗಾಗಲೇ ಮಾನ್ಯ ಕೃಷ್ಣ ಬೈರೇಗೌಡರು ಬಹಳ humorous ಆಗಿ ಮಾತನಾಡಿದ್ದಾರೆ. ಏಕೆಂದರೆ ಇಡೀ ದೇಶದಲ್ಲಿ ಬ್ಯಾಂಕಿಂಗ್ ಕ್ಷೇತ್ರವಾಗಿರಬಹುದು, ಶಿಕ್ಷಣ ಕ್ಷೇತ್ರವಾಗಿರಬಹುದು, ಹೋಟೆಲ್ ಉದ್ಯಮವಾಗಿರಬಹುದು ಅಥವಾ ರಾಜಕಾರಣವೇ ಆಗಿರಬಹುದು...

**Sri AYANUR MANJUNATH:** Miss World ಅವರಲ್ಲಿಯೇ ಇದ್ದಾರೆ. Mr. Underworld ಅಲ್ಲಿಯೇ ಇದ್ದಾರೆ.

**ಶ್ರೀ ಎಸ್.ಆರ್.ಪಾಟೀಲ್:-** ಮಾನ್ಯ ಸಭಾಪತಿಯವರೇ, ಅದು ನನ್ನ ಮನಸ್ಸಿನಲ್ಲಿಯೂ ಇದೆ. ಆದರೆ ಇಲ್ಲಿ ಹೇಳುವುದು ಅಷ್ಟು ಸೂಕ್ತವಲ್ಲವೆನಿಸಿತು. ಅದನ್ನು ಮಾನ್ಯ ಆಯನೂರು ಮಂಜುನಾಥ್ ಅವರು ಹೇಳಿದ್ದಾರೆ. ನಮ್ಮ ಪಕ್ಷದಲ್ಲಿಯೂ ಅವರದ್ದೇ ಮೇಲುಗೈ. ಅಂತೆಯೇ ಅವರ ಪಕ್ಷದಲ್ಲಿಯೂ ಇದ್ದಾರೆ. ಅವಿಭಾಜ್ಯ ದಕ್ಷಿಣ ಕನ್ನಡ ಜಿಲ್ಲೆಯವರು ಬಹಳ ಜಾಣರು ಹಾಗೂ ಪ್ರಜ್ಞಾವಂತರು. ವಿರೋಧಪಕ್ಷದ ನಾಯಕರು, ಸಭಾನಾಯಕರು ಹಾಗೂ ತಮ್ಮನ್ನು ನೋಡಿದರೆ ಇದು ದಕ್ಷಿಣ ಕನ್ನಡ ಜಿಲ್ಲೆಯ ವಿಧಾನ ಪರಿಷತ್ತು ಎಂಬಂತೆ ನನಗೆ ಭಾಸವಾಗುತ್ತಿದೆ.

**(...ಮುಂದು)**

(371) 12.12.2018 (11.30) ಕೆಜಿ.ಆರ್‌ಎನ್

(ಸಭಾಪತಿಯವರ ಉಪಸ್ಥಿತಿ)

**ಶ್ರೀ ಎಸ್.ಆರ್.ಪಾಟೀಲ್ (ಮುಂದು,,,,)-**

ಮಾನ್ಯ ಸಭಾಪತಿಯವರು ನನ್ನ ಪಕ್ಕ ಸೀಟಿನಲ್ಲಿಯೇ ಕುಳಿತುಕೊಳ್ಳುತ್ತಿದ್ದರು. ತಾವು ಇವತ್ತು ನನಗೆ ಸಭಾಪತಿಯಾಗಿರುವುದು ಸಂತೋಷವಾತ್ತಿದೆ.

**ಶ್ರೀ ಕವಟಗಿಮಠ ಮಹಾಂತೇಶ ಮಲ್ಲಿಕಾರ್ಜುನ (ವಿರೋಧ ಪಕ್ಷದ ಮುಖ್ಯ ಸಚೇತಕರರು):-** ಮಾನ್ಯ ಸಭಾಪತಿಯವರೇ, ಒಂದು ಕಾಲದಲ್ಲಿ ಶಿವಮೊಗ್ಗ ಜಿಲ್ಲೆಯವರು ಹೆಚ್ಚು ಸ್ಥಾಭಗಳನ್ನು ಪಡೆಯುತ್ತಿದ್ದರು. ಈಗ ದಕ್ಷಿಣ ಕನ್ನಡ ಜಿಲ್ಲೆ ಆ ರೀತಿಯಾಗಿದೆ.

**ಶ್ರೀ ಎಸ್.ಆರ್.ಪಾಟೀಲ್(ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಈಗ ಅವಿಭಾಜ್ಯ ದಕ್ಷಿಣ ಕನ್ನಡ ಜಿಲ್ಲೆ ಆಗಿದೆ. ಅವಿಭಾಜ್ಯ ದಕ್ಷಿಣ ಕನ್ನಡ ಜಿಲ್ಲೆಯ ಬಗ್ಗೆ ಮತ್ತು ಆ ಜಿಲ್ಲೆಯ ಜನರ ಬಗ್ಗೆ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ನನಗೆ ಅಪಾರವಾದಂತಹ ಗೌರವ ಇದೆ. Tiller of the soil is the owner. Land Reforms Act enforcement ಆದಾಗ ಬಹಳಷ್ಟು ಜನರು ಭೂಮಿಯನ್ನು ಕಳೆದುಕೊಂಡರು. ನಮ್ಮ ಕಡೆ ಭೂಮಿಯ ಒಡೆತನ ಬಹಳ ಇದೆ. ಅವರು ಭೂಮಿಯನ್ನು ಕಳೆದುಕೊಂಡ ಮೇಲೆ ಅವರು ಬಹಳ ಜಾಣರಾದರು. ನಾವು ಭೂಮಿಯನ್ನು ಇಟ್ಟುಕೊಂಡು ಅವರಷ್ಟು ಜಾಣರಾಗಲು ಆಗಲಿಲ್ಲ. ನಾವು ಅವರಷ್ಟು ಮುಂದುವರೆಯುವುದಕ್ಕೂ ಆಗಲಿಲ್ಲ.

**ಶ್ರೀ ಎನ್.ರವಿಕುಮಾರ್ (ವಿಧಾನ ಸಭಾ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಮೀನು ತಿಂದರೆ ಬುದ್ಧಿ sharp ಆಗುತ್ತದೆ.

**ಶ್ರೀ ಎಸ್.ಆರ್.ಪಾಟೀಲ್:–** ಮಾನ್ಯ ಸಭಾಪತಿಯವರೇ, ಮೀನು ತಿಂದರೆ ಬುದ್ಧಿ sharp ಆಗುತ್ತದೆ ಎಂದು ಹೇಳುತ್ತಿದ್ದಾರೆ.

**ಶ್ರೀ ಆಯನೂರು ಮಂಜುನಾಥ್ (ಪದವೀಧರರ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರಾದ ಎನ್.ರವಿಕುಮಾರ್‌ರವರು ಮೀನು ತಿಂದರೆ ಬುದ್ಧಿ sharp ಆಗುತ್ತದೆ ಎಂದು ಹೇಳಿದರು. ಮೀನು ತಿಂದರೆ ಬುದ್ಧಿ sharp ಆಗುತ್ತದೆಯೋ ಇಲ್ಲವೋ ಗೊತ್ತಿಲ್ಲ. ಹಲ್ಲುಗಳು ಮಾತ್ರ sharp ಆಗುತ್ತವೆ.

**ಶ್ರೀ ಎಸ್.ಆರ್.ಪಾಟೀಲ್:–** ಮಾನ್ಯ ಸಭಾಪತಿಯವರೇ, ಎರಡು sharp ಆಗುತ್ತವೆ.

**ಶ್ರೀ ಸಿ.ಎಂ.ಇಬ್ರಾಹಿಂ (ವಿಧಾನಸಭಾ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, personal ವಿಷಯ ಆರಂಭ ಆಗಿದೆ ಎಂದು ಕಾಣಿಸುತ್ತಿದೆ.

**ಶ್ರೀ ಎಸ್.ಆರ್.ಪಾಟೀಲ್:–** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರಾದ ಇಬ್ರಾಹಿಂರವರ ಸಹವಾಸ ಮಾಡಿದರೆ ಯಾವ ಅನುಭವ ಆಗುವುದಿಲ್ಲ ಹೇಳಿ? ಆದರೆ, ಅಷ್ಟೊಂದು ಪ್ರಜ್ಞಾವಂತ, ವಿಚಾರವಂತ ಅತ್ಯಂತ ಮುಂದುವರಿದಂತಹ ಅಭಿವೃದ್ಧಿ ಪರವಾದಂತಹ ಜಿಲ್ಲೆಯವರು ಎಲ್ಲಾ ಕ್ಷೇತ್ರಗಳಲ್ಲಿಯೂ ಮುಂಚೂಣಿಯಲ್ಲಿರುವವರು ಮತ್ತು ಅದರಲ್ಲೂ ವಿಶೇಷವಾಗಿ ರಾಜಕಾರಣದಲ್ಲೂ ಮುಂಚೂಣಿಯಲ್ಲಿರುವವರು ಎಂದು ನಾನು ಆ ಕಾರಣಕ್ಕಾಗಿಯೇ ಆ ಪೀಠ ಅವರಿಗೆ ಸುಲಭವಾಗಿ ದೊರೆತಿದೆ. ಅವರು ಅದಕ್ಕಾಗಿ ಲಾಬಿ ಮಾಡಿರುವುದಿಲ್ಲ. ನಾನು ಸಹ ನನ್ನ ರಾಜಕೀಯ ಜೀವನದಲ್ಲಿ ಎಂದೂ ಕುರ್ಚಿಯ ಬೆನ್ನತ್ತಿ ಹೋದವನಲ್ಲ. ಮಾಧ್ಯಮದವರು ಹೇಳಿದ್ದೆ ಬೇರೆ, ಇಲ್ಲಿ ಆಗಿದ್ದೆ ಬೇರೆ.

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಇದಕ್ಕೆ ಮಾಧ್ಯಮದವರು ತಬ್ಬಿಬ್ಬು ಆಗುವಂತಹ ರೀತಿಯಲ್ಲಿ ನಿರ್ಣಯ ಆಗಿದೆ. ಮಾಧ್ಯಮದವರು ಮಾನ್ಯ ಬಸವರಾಜ ಹೊರಟ್ಟಿಯವರ ಬಗ್ಗೆಯೂ ಹೇಳುತ್ತಿದ್ದರು. ನನ್ನ ಬಗ್ಗೆಯೂ ಸಹ ಹೇಳುತ್ತಿದ್ದರು. ಆದರೆ, ಈಗ ನಿಜವಾಗಲೂ ಬಹಳ ಸರಿಯಾದಂತಹ ನಿರ್ಣಯ ಆಗಿದೆ ಮತ್ತು ಅವರು ಜಾಣರು ಎನ್ನುವುದನ್ನು ನಾವು ಒಪ್ಪಿಕೊಳ್ಳಬೇಕು.

ಮಾನ್ಯ ಸಭಾಪತಿಯವರೇ, ಬೆಳಗಾವಿ ಉತ್ತರ ಕರ್ನಾಟಕ ಭಾಗದ ಗಂಡು ಮೆಟ್ಟಿದ ನೆಲ ಇದು. ಇದಕ್ಕೆ ತನ್ನದೇ ಆದಂತಹ ಐತಿಹಾಸಿಕ ಚಾರಿತ್ರಿಕ ಹಿನ್ನೆಲೆ ಇದೆ. ಇಂತಹ ನೆಲದಲ್ಲಿ ತಾವು ಇವತ್ತು ಅದರಲ್ಲೂ ಬೆಳಗಾವಿಯಲ್ಲಿ ಅಧಿವೇಶನ ನಡೆಯುವಂತಹ ಸಂದರ್ಭದಲ್ಲಿ ಸಭಾಪತಿಯಾಗಿ ಆಯ್ಕೆ ಆಗುವಂಥದ್ದು ಸಾಮನ್ಯ ಕೆಲಸವಲ್ಲ. ಬೆಂಗಳೂರಿನಲ್ಲಿ ಆಗುವುದು ಬೇರೆ. ಇಲ್ಲಿ ಆಗುವುದು ಬಹಳ ಮಹತ್ವದ್ದು. ಏಕೆಂದರೆ, ಸೂರ್ಯ ಮುಳುಗದ ಸಾಮ್ರಾಜ್ಯ ಎನ್ನುವಂತಹ ಬ್ರಿಟಿಷರ ವಿರುದ್ಧ ಸ್ವಾತಂತ್ರ ಕಿಡಿ ಹೊತ್ತಿಸಿದಂತಹ "ವೀರ ರಾಣಿ ಕಿತ್ತೂರು ಚೆನ್ನಮ್ಮನಿಗೆ" ಜನ್ಮ ಕೊಟ್ಟಂತಹ ನೆಲ ಇದು. ಅಲ್ಲದೇ, ಅವರ ಬಲಗೈ ಬಂಟನಾದ "ಸಂಗೊಳ್ಳಿ ರಾಯಣ್ಣನಿಗೆ" ಜನ್ಮ ಕೊಟ್ಟಂತಹ ನೆಲ ಇದು. ಇದೆಲ್ಲಕ್ಕಿಂತ ಮೀಗಿಲಾಗಿ ಸೂರ್ಯ ಮುಳುಗದ ಸಾಮ್ರಾಜ್ಯ ಎನ್ನುವಂತಹ ಬ್ರಿಟಿಷರನ್ನು ಈ ದೇಶದಿಂದ ಹೊರದೊಡಿ ಭಾಷಾ ಸಂಕೋಲೆಗಳಿಂದ ಭಾರತಾಂಬೆಯನ್ನು ಬಂದಮುಕ್ತ ಮಾಡುವುದಕ್ಕೆ ನಾಯಕತ್ವವನ್ನು ವಹಿಸಿಕೊಂಡಂತಹ "ರಾಷ್ಟ್ರಪಿತ ಮಹಾತ್ಮ ಗಾಂಧಿಯವರ" ಹಿರಿತನದಲ್ಲಿ ಸ್ವಾತಂತ್ರ್ಯ ಸಂಗ್ರಾಮ ನಡೆದಿದೆ. ರಾಷ್ಟ್ರಪಿತ ಮಹಾತ್ಮ ಗಾಂಧಿಯವರು ಎ.ಐ.ಸಿ.ಸಿ., ಅಧಿವೇಶನ ಒಂದೇ ಒಂದು ಅಧಿವೇಶನದ ಅಧ್ಯಕ್ಷರಾಗಿದ್ದರು. ಆ ಅಧಿವೇಶನ ನಡೆದಿದ್ದೇ ಈ ಬೆಳಗಾವಿಯಲ್ಲಿ ಎನ್ನುವಂತಹ ಮಾತನ್ನು ಇವತ್ತು ನಾನು ನೆನಪಿಸಿಕೊಳ್ಳುವುದಕ್ಕೆ ಬಯಸುತ್ತಿದ್ದೇನೆ. ಈ ಬಗ್ಗೆ ಪುಸ್ತಕವನ್ನು ಬರೆಸಿದ್ದೇನೆ. ಆ ಪುಸ್ತಕವನ್ನು ತಮಗೆ ಕಳುಹಿಸಿಕೊಡುತ್ತೇನೆ. For academic interest, you can go through that book. ಶ್ರೀ ಮನೋಜ್‌ಪಾಟೀಲ್‌ರವರ ಮುಖಾಂತರ ನಾನೇ ಅವರಿಗೆ ಆರ್ಥಿಕ ಸಹಾಯ ಮಾಡಿ ಬರೆಸಿದ್ದೇನೆ. ರಾಷ್ಟ್ರಪಿತ ಮಹಾತ್ಮ ಗಾಂಧಿಯವರ ಅಧ್ಯಕ್ಷೀಯ ಭಾಣದ ಮುಖಾಂತರ ಇಡೀ ದೇಶದ ಜನರನ್ನು ಒಂದುಗೂಡಿಸಿ ರಾಷ್ಟ್ರದ ಮುಖ್ಯವಾಹಿನಿಗೆ ತಂದು ಸ್ವಾತಂತ್ರ್ಯ ಸಂಗ್ರಾಮದಲ್ಲಿ ಭಾಗಿಯಾಗಿ ಬ್ರಿಟಿಷರು ಈ ದೇಶದಿಂದ ಕಾಲು ತೆಗೆಯುವಂತಹ ಭಾಷಣವನ್ನು ಮಾಡಿದ್ದರು. ಅದರ ಮುಖಾಂತರ ನಮ್ಮ ದೇಶಕ್ಕೆ ಸ್ವಾತಂತ್ರ್ಯ ದೊರೆಯುವುದಕ್ಕೆ ಅನುಕೂಲವಾಗಿದ್ದು ಈ ಬೆಳಗಾವಿಯಿಂದ ಎಂದು ಹೇಳುವುದಕ್ಕೆ ಬಯಸುತ್ತೇನೆ.

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಮಾನ್ಯ ಸಭಾಪತಿಯವರೇ, ಬೆಳಗಾವಿ ಉತ್ತರ ಕರ್ನಾಟಕದ ಕೇಂದ್ರ ಸ್ಥಾನ. ಹಾಗಾಗಿ, ಬೆಳಗಾವಿಗೆ ಅಷ್ಟು ಮಹತ್ವ ಇದೆ. ಈ ಭಾಗದ ಅವಿಭಾಜ್ಯ ಭಾಗವಾದ ಬಿಜಾಪುರ ಜಿಲ್ಲೆಗೂ ಸಹ ಅಷ್ಟೇ ಮಹತ್ವ ಇದೆ. ಒಂದೇ ಮಾತಿನಲ್ಲಿ ಹೇಳುವುದಾದರೆ, ನಮ್ಮ ದೇಶದ ಮೇಲೆ China ದೇಶದವರು ದಂಡೆತ್ತಿ ಬಂದಂತಹ ಸಂದಂರ್ಭದಲ್ಲಿ ರಾಷ್ಟ್ರೀಯ ರಕ್ಷಣಾನಿಧಿಗೆ ಹಣ ಸಂಗ್ರಹ ಮಾಡುವಂತಹ ಕೆಲಸ ನಡೆದಿತ್ತು. ಆಗ ಈ ದೇಶದ ಯಾವ ಜಿಲ್ಲೆಯವರು ಅದಕ್ಕೆ ಸರಿಯಾಗಿ ಹಣ ಕೊಡದೇ ಇರುವಂತ್ತಹ ಸಂದರ್ಭದಲ್ಲಿ ನಮ್ಮ ದೇಶದ ಮಾಜಿ ಪ್ರಧಾನ ಮಂತ್ರಿಗಳಾದ ದಿವಂಗತ "ಶ್ರೀಮತಿ ಇಂದಿರಾಗಾಂಧಿಯವರ ತೂಕದಷ್ಟು ಮತ್ತು ನಮ್ಮ ನಾಡಿನ ಮಾಜಿ ಮುಖ್ಯಮಂತ್ರಿಗಳಾದ ದಿವಗಂತ ನಿಜಲಿಂಗಪ್ಪನವರ ತೂಕದಷ್ಟು ಬಂಗಾರವನ್ನು ಕೊಟ್ಟ ಏಕೈಕ ಜಿಲ್ಲೆ. ಆದರೂ ಸಹ, ಉತ್ತರ ಕರ್ನಾಟಕದ ಬಹಳ ಪ್ರಮುಖವಾದಂತಹ ಜಿಲ್ಲೆಯೆಂದು ನಾನು ಹೇಳುವುದಕ್ಕೆ ಬಯಸುತ್ತೇನೆ. ಇಷ್ಟೊಂದು ಚಾರಿತ್ರಿಕ ಹಿನ್ನೆಲೆ ಇರುವಂತಹ ಉತ್ತರ ಕರ್ನಾಟಕದ ಪ್ರಮುಖ ಭಾಗದಲ್ಲಿ ಅಧಿವೇಶನ ನಡೆಯುವಂತಹ ಸಂದರ್ಭದಲ್ಲಿ ಉತ್ತರ ಕರ್ನಾಟಕದಲ್ಲಿ ಇವತ್ತು ಸಭಾಪತಿಯನ್ನಾಗಿ ಆಯ್ಕೆ ಮಾಡುವಂತಹ ಕಾರ್ಯ ನಡೆದಿರುವುದು ನನಗೆ ಬಹಳ ಸಂತೋಷವಾಗಿದೆ.

ಮಾನ್ಯ ಸಭಾಪತಿಯವರೇ, ಈ ಸಂದರ್ಭದಲ್ಲಿ ಉತ್ತರ ಕರ್ನಾಟಕದ ಭಾಗ ಸೌಕರ್ಯಗಳಿಂದ ಮತ್ತು ಸ್ಥಾನ-ಮಾನಗಳಿಂದ ವಂಚಿತವಾಗಿದೆ ಎಂದು ಹೇಳದೆ ಹೋದರೂ ಸಹಾ ತಪ್ಪಾಗುತ್ತದೆ. ಅದಕ್ಕೆ ಒಂದು ಮಾತನ್ನು ಲಿಂಕ್ ಮಾಡುತ್ತೇನೆ. ಈಗ ಉದಾಹರಣೆಗೆ ಮುಖ್ಯ ಮಂತ್ರಿಗಳು ಇರಬಹುದು, ಉಪ ಮುಖ್ಯ ಮಂತ್ರಿಗಳು ಇರಬಹುದು, ಮೇಲ್ಮನೆಯಲ್ಲಿ ಸಭಾನಾಯಕರು ಇರಬಹುದು, ಕೆಳಮನೆಯಲ್ಲಿ ಸ್ಪೀಕರ್ ಇರಬಹುದು, ಮೇಲ್ಮನೆಯಲ್ಲಿ ವಿರೋಧ ಪಕ್ಷದ ನಾಯಕರು, ಕೆಳಮನೆಯಲ್ಲಿ ವಿರೋಧ ಪಕ್ಷದ ನಾಯಕರು ಇರಬಹುದು ಈ ಎಲ್ಲವೂ ಉತ್ತರ ಕರ್ನಾಟಕದ ಹೊರಗಿನವರೆ ಆಗಿದ್ದಾರೆ. ಆದರೂ ಸಹ, ನಮಗೆ ಸಂತೋಷ ಇದೆ. ವಿಧಾನಸಭೆಯಲ್ಲಿ ಮುಖ್ಯ ಸಚೇತಕರ ಹುದ್ದೆಯನ್ನು ಮಾತ್ರ ಈ ಭಾಗಕ್ಕೆ ಕೊಟ್ಟಿದ್ದಾರೆ. ಸದಸ್ಯರನ್ನು ಕರೆದುಕೊಂಡು ಬಂದು ಸದನದಲ್ಲಿ ಕೂರಿಸುವುದು ಮಾತ್ರ. ಬಹಳ ಚಿಕ್ಕೆಯ ಕೆಲಸವನ್ನು ಕೊಟ್ಟಿದ್ದಾರೆ.

**ಶ್ರೀ ರಘುನಾಥ್ ರಾವ್ ಮಲ್ಕಾಪೂರೆ (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಅದಕ್ಕೆ ಅವರು Cheap Whip ಎಂದು ಹೇಳುತ್ತಿದ್ದಾರೆ. ಅವರು Chief Whip ಎಂದು ಹೇಳುತ್ತಿಲ್ಲ.

**ಶ್ರೀ ಎಸ್.ಆರ್.ಪಾಟೀಲ್:-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರಾದ ಡಾ॥ ವೈ.ಎ.ನಾರಾಯಣಸ್ವಾಮಿಯವರು ಟೀ ಕುಡಿದುಕೊಂಡು ಕುಳಿತುಕೊಂಡಿದ್ದರೆ ಅವರನ್ನು ಬೇಗ ಬನ್ನಿಸದನ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ನಡೆಸಲು quorum ಆಗಿಲ್ಲವೆಂದು ಕರೆದುಕೊಂಡು ಬರಬೇಕು. ಇದು ಬಹಳ ಒಳ್ಳೆಯ ಕೆಲಸ ಕೊಟ್ಟಿದ್ದಾರೆ. ಧನ್ಯವಾದಗಳು. ಇಂತಹ ಸಂದರ್ಭದಲ್ಲಿ ಬಹಳ ಭಾವನೆಗಳು ಇರುತ್ತವೆ. Blood is thicker than water. It is universal truth. ಈ ಭಾಗದವರು ಇರಲಿ ಇನ್ನುವಂತಹ ಭಾವನೆ ಇರುತ್ತದೆ. ಆದರೆ, ತಮಗೆ ಅತ್ಯಂತ ಕಳಕಳಿಯಿಂದ ಒಂದು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ತಮ್ಮ ಅಧಿಕಾರದ ಅವಧಿಯ ಉದ್ದಕ್ಕೂ ಉತ್ತರ ಕರ್ನಾಟಕದ ಭಾಗದ ಒಬ್ಬರು ಪ್ರಮುಖ ಹುದ್ದೆಗೆ ಬರಲಿ ಎನ್ನುವಂತಹ ನಮ್ಮ ಜನರ ಉದ್ದೇಶವೇನೆಂದರೆ, ಈ ಭಾಗದ ಅಭಿವೃದ್ಧಿಗೆ ಸಹಾಯವಾಗಲಿ ಮತ್ತು ಸಹಕಾರ ಸಿಗಲಿ ಎಂದು ಅಷ್ಟೇ ಅತ್ಯಂತ ಹಿಂದುಳಿದಂತಹ ಉತ್ತರ ಕರ್ನಾಟಕ ಮುಂದುವರಿದ ಭಾಗದ ಜೊತೆ ಸ್ಪರ್ದೆ ಮಾಡಬೇಕು, ಅಭಿವೃದ್ಧಿಯಾಗಬೇಕು. ಇಲ್ಲಿನ ಜನ ಪ್ರತಿನಿಧಿಗೆ ಉನ್ನತ ಸ್ಥಾನ ಸಿಕ್ಕರೆ ಉತ್ತರ ಕರ್ನಾಟಕವು ಅಭಿವೃದ್ಧಿಯಾಗುವುದಕ್ಕೆ ಸಹಕಾರ ಆಗುತ್ತದೆ ಎನ್ನುವಂತಹ ಭಾವನೆ ಜಗತ್ತು ಜಾಹಿರವಾಗಿ ಉತ್ತರ ಕರ್ನಾಟಕದ ಉದ್ದಗಲಕ್ಕೂ ಇರುವಂತಹ ಸಂದರ್ಭದಲ್ಲಿ ಈ ಭಾವನೆಗೆ ತಾವು ಪೂರಕವಾಗಿ ನಡೆದುಕೊಳ್ಳಬೇಕು. ನಮ್ಮ ಜನರ ಮನಸ್ಸಿನಲ್ಲಿ ಏನಿದೆ ಉತ್ತರ ಕರ್ನಾಟಕ ಅಭಿವೃಧಿಯಾಗಬೇಕು. ತಾವು ಯಾವ ರೀತಿ ಕೆಲಸ ಮಾಡಬೇಕೆಂದರೆ, ಉತ್ತರ ಕರ್ನಾಟಕ ಭಾಗದವರು ಸಭಾಪತಿಯವರಾಗಿ ಎಷ್ಟು ಕೆಲಸ ಮಾಡುತ್ತಾರೆ ಅದರ ದುಪ್ಪಟ್ಟು ಕಾಳಜಿ ಪೂರಕವಾಗಿ ಉತ್ತರ ಕರ್ನಾಟಕದ ಅಭಿವೃದ್ಧಿ ವಿಚಾರ ಬಂದಾಗ ಅಥವಾ ಉತ್ತರ ಕರ್ನಾಟಕದ ಅವಕಾಶಗಳನ್ನು ಪಡೆಯುವಂತಹ ವಿಚಾರ ಈ ಸದನದಲ್ಲಿ ಚರ್ಚೆಗೆ ಬಂದಾಗ ಅವರಿಗೆ ಸಾಕಷ್ಟು ಅವಕಾಶ ಮಾಡಿಕೊಡಿ. ಅದಕ್ಕೆ ಸರ್ಕಾರ ಹಿಂದೇಟು ಹಾಕಿದರೆ ಸರ್ಕಾರಕ್ಕೆ ತಾವು ಕಿವಿ ಹಿಂಡಿರಿ. ತಾವು ಸರ್ಕಾರಕ್ಕೆ ಚಾಟಿ ಏಟು ಕೊಡಿ. ಉತ್ತರ ಕರ್ನಾಟಕದ ವಿಚಾರದಲ್ಲಿ ಎಂದು ಸಹ ಹಿಂದೇಟು ಹಾಕಬಾರದು. ಮಾನ್ಯ ಸಭಾಪತಿಯವರು ಶಹಬ್ಬಾಸ್ ಎನ್ನುವಂತಹ ರೀತಿಯಲ್ಲಿ ತಾವು ಕೆಲಸ ಮಾಡಬೇಕು. ತಾವು ಉತ್ತರ ಕರ್ನಾಟಕದ ಜನರ ಭಾವನೆಗಳಿಗೆ ಪೂರ್ವಕವಾಗಿ ನಡೆದುಕೊಳ್ಳುತ್ತೀರಿ ಎನ್ನುವಂತಹ ಆತ್ಮ ವಿಶ್ವಾಸ ಇದೆ. ತಾವು ನನ್ನ ಗೆಳೆಯರು ಮತ್ತು ಆತ್ಮೀಯರು. ತಾವು ಮತ್ತು ನಾನು ಒಂದೇ ಕಮಿಟಿಯಲ್ಲಿ ಕೆಲಸ ಮಾಡಿದ್ದೇವೆ. ತಾವು ಮತ್ತು ನಾನು ಅನೇಕ ವಿಚಾರಗಳನ್ನು ಹಂಚಿಕೊಂಡಿದ್ದೇವೆ. ತಾವು ಅಪಾರವಾದಂತಹ ಅನುಭವವನ್ನು ಹೊಂದಿರುವಂತಹವರು. ಇದನ್ನೆಲ್ಲಾ ಆಗಲೇ ಹೇಳಿಬಿಟ್ಟಿದ್ದೇನೆ. ತಾವು ಬಹಳ ಪ್ರಜ್ಞಾವಂತ ಜನರು. ತಾವು ಬುದ್ಧಿವಂತರು. ವಿಚಾರವಂತರು. ದಕ್ಷಿಣ ಕನ್ನಡ ಜಿಲ್ಲೆಯಿಂದ ಬಂದತಹವರು. ತಮಗೆ ಒಂದು ಸಾರಿ ಹೇಳಿಬಿಟ್ಟರೆ ತಿಳಿದುಕೊಳ್ಳುತ್ತೀರಿ. ತಾವು ಬೇರೆಯವರ ತರಹ ಹೆಚ್ಚಿಗೆ ಹೇಳಿಸಿಕೊಳ್ಳುವುದಿಲ್ಲ. ಇವತ್ತು ಉತ್ತರ ಕರ್ನಾಟಕ ಭಾಗದ ಜನರ ಭಾವನೆಗಳು ಏನಿವೆ ಎಂದರೆ, ಈ ಭಾಗದ ಜನ ಪ್ರತಿನಿಧಿಗಳು ಅವಕಾಶ ವಂಚಿತರಾಗಿದ್ದಾರೆ. ಇದರಿಂದ ಸ್ವಲ್ಪ ನೋವು ಇದೆ. ಆ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ನೋವವನ್ನು ಕಡಿಮೆ ಮಾಡುವುದಕ್ಕೆ ಮತ್ತು ಅವರ ಮನಸ್ಸಿನಲ್ಲಿರುವಂತಹ ವಿಚಾರಗಳಿಗೆ ಹಿಬ್ಬು ಕೊಡುವಂತಹ ಅಂದರೆ, ಅವರು ಮನಸ್ಸಿನಲ್ಲಿ ಏನಿತ್ತು ಈ ಭಾಗದ ಅಭಿವೃದ್ಧಿಗೆ ಸಹಕಾರ ಆಗುತ್ತದೆ ಎಂದು ಅದನ್ನು ಮೀರಿ ತಾವು ಈ ಭಾಗದ ಯಾರೇ ಒಬ್ಬ ನಾಯಕರು ಸಭಾಪತಿ ಸ್ಥಾನದಲ್ಲಿ ಇದ್ದರೆ ಅವರು ಮಾಡುತ್ತಿದ್ದ ಕೆಲಸಕ್ಕಿಂತ ದುಪ್ಪಟ್ಟು ಕೆಲಸ ಮಾಡಿ.

(372)12-12-2018(11-40)ಎಂವಿ-ಆರ್‌ಎನ್

**(ಸಭಾಪತಿಯವರ ಉಪಸ್ಥಿತಿ)**

**ಶ್ರೀ ಎಸ್.ಆರ್.ಪಾಟೀಲ್ (ಮುಂದು):-**

ಉತ್ತರ ಕರ್ನಾಟಕದ ಅಭಿವೃದ್ಧಿಗೆ ನೀವು ಎಲ್ಲಾ ರೀತಿಯ ಸಹಕಾರ ಮಾಡಬೇಕು. ಯಾವುದೇ ವಿಚಾರ ಚರ್ಚೆಗೆ ಬಂದಾಗ ಕೂಡ ತಾವು ಅದಕ್ಕೆ ಅವಕಾಶ ಮಾಡಬೇಕು. ಉತ್ತರ ಕರ್ನಾಟಕದ ಜೀವನಾಡಿಯಾದಂತಹ ಕೃಷ್ಣೆಯ ವಿಚಾರ ಬಹಳ ಮಹತ್ವವಾದದ್ದು. ಇದು ಒಂದೇ ವಿಚಾರವಲ್ಲ ಇನ್ನು ಅನೇಕ ವಿಚಾರಗಳು ಬರುತ್ತವೆ, ಈ ಎಲ್ಲಾ ದೃಷ್ಠಿಯಿಂದ ಬಹಳಷ್ಟು ನೋವಿನಲ್ಲಿರುವಂತಹ, ಕಷ್ಟದಲ್ಲಿರುವಂತಹ, ಶೋಚನೀಯ ಸ್ಥಿತಿಯಲ್ಲಿರುವಂತಹ ಉತ್ತರ ಕರ್ನಾಟಕ ಭಾಗದ ಯಾವುದೇ ಸಮಸ್ಯೆಗಳು ಬಂದಾಗ ನೀವು ವಿಶಾಲ ಹೃದಯ ಮತ್ತು ಮನಸ್ಸಿನಿಂದ, ಇವತ್ತಿನ ದಿವಸ ಅವಿಭಜಿತ ದಕ್ಷಿಣ ಕನ್ನಡ ಜಿಲ್ಲೆ ಹೇಗೆ ಅಭಿವೃದ್ಧಿಯಾಗಿದೆ, ಅದಕ್ಕೆ ಸರಿಸಮಾನವಾಗಿ ಉತ್ತರ ಕರ್ನಾಟಕದ ಹದಿಮೂರು ಜಿಲ್ಲೆಗಳು ಅಂದರೆ, ಹೈದ್ರಾಬಾದ್-ಕರ್ನಾಟಕ ಭಾಗದ ಆರು ಜಿಲ್ಲೆಗಳು ಮತ್ತು ಬಾಂಬೆ ಕರ್ನಾಟಕದ ಏಳು ಜಿಲ್ಲೆಗಳು, ಈ ಹದಿಮೂರು ಜಿಲ್ಲೆಗಳನ್ನು ನಿಮ್ಮ ಜಿಲ್ಲೆಗೆ ಸರಿಸಮಾನವಾಗಿ ತೆಗೆದುಕೊಂಡು ಹೋಗುವುದಕ್ಕೆ ಪ್ರಾಮಾಣಿಕವಾದಂತಹ ಪ್ರಯತ್ನ ಮಾಡಿದರೆ, ನಿಮ್ಮ ಬದುಕಿನ ಮತ್ತು ಜೀವನದುದ್ದಕ್ಕೂ ನಿಮಗೆ ನಾವು ಋಣಿಯಾಗಿರುತ್ತೇವೆ ಎನ್ನುವಂತಹ ಮಾತನ್ನು ಹೇಳಿ, ಈ ಸಂದರ್ಭದಲ್ಲಿ ಮಾತನಾಡುವುದಕ್ಕೆ ಅವಕಾಶ ದೊರಕಿಸಿಕೊಟ್ಟಂತಹ ತಮಗೆ ಅಭಿನಂದಿಸುತ್ತೇನೆ. ತಾವು ಸಭಾಪತಿಗಳಾಗಿ ಬಹಳಷ್ಟು ಯಶಸ್ವಿಯಾಗಿ ಮಾರ್ಗದರ್ಶನ ಮಾಡಿ, ಶತಮಾನಗಳ ಇತಿಹಾಸ ಉಳ್ಳಂತಹ ಈ ಸದನವನ್ನು ಅತ್ಯಂತ ವ್ಯವಸ್ಥಿತವಾಗಿ, ಸಮರ್ಥವಾಗಿ ಮತ್ತು ಬದ್ಧತೆಯಿಂದ ನಡೆಸಿಕೊಂಡು ಹೋಗುತ್ತೀರಿ. ಅಷ್ಟೆ ಅಲ್ಲ ನೀವು ಒಬ್ಬ ಚಾರಿತ್ರಿಕವಾದಂತಹ ಸಭಾಪತಿಗಳಾಗಿ ಕೆಲಸ ಕಾರ್ಯಗಳನ್ನು ಮಾಡುತ್ತೀರಿ ಎನ್ನುವಂತಹ ವಿಶ್ವಾಸವನ್ನು ವ್ಯಕ್ತಪಡಿಸಿ, ಮತ್ತೊಮ್ಮೆ ನಿಮಗೆ ಹೃದಯಪೂರ್ವಕವಾದಂತಹ ಅಭಿನಂದನೆಗಳನ್ನು ಸಲ್ಲಿಸಿ, ನನ್ನ ಮಾತನ್ನು ಮುಗಿಸುತ್ತೇನೆ.

**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ (ಶಿಕ್ಷಕರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಇವತ್ತು ತಾವು ಸಭಾಪತಿಗಳಾಗಿ ಸರ್ವಾನುಮತದಿಂದ ಆಯ್ಕೆಯಾಗಿದ್ದೀರಿ. ಮೊದಲಿಗೆ ನಾನು ತಮಗೆ ಶುಭವನ್ನು

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಕೋರುತ್ತೇನೆ. ಈ ಸದನದಲ್ಲಿ ಮಾತನಾಡುವಾಗ ಮತ್ತು ಈ ಸದನದಲ್ಲಿ ಸಭಾಪತಿಯಾಗಿ ಕುಳಿತುಕೊಂಡಾಗ ನನಗೆ ಆಗಿರುವಂತಹ ಅನುಭವ ಬಹುಶಃ ಬೇರೆ ಯಾರಿಗೂ ಆಗಿರುವುದಿಲ್ಲ. ನಾನು ಎಂಎಲ್‌ಸಿ ಆದಂತಹ ವರ್ಷದ ನಂತರ ಹುಟ್ಟಿದವರು ಇಲ್ಲಿ ಎಂಎಲ್‌ಸಿ ಆಗಿದ್ದಾರೆ. ನಾನು ಎಂಎಲ್‌ಸಿ ಆದ ವರ್ಷ 1980, ಮಾನ್ಯ ಸದಸ್ಯರಾದ ರಮೇಶ್‌ಗೌಡ ಮತ್ತು ಬೇರೆಯವರು ಆಮೇಲೆ ಹುಟ್ಟಿದ್ದಾರೆ. ಆದುದರಿಂದ ನನಗೆ ಸಾಕಷ್ಟು ಅನುಭವ ಇದೆ ಮತ್ತು ಇದರ ಬಗ್ಗೆ ಅಪಾರವಾದ sentimental feelings ಎನ್ನುತ್ತಾರಲ್ಲ ಆ ರೀತಿ. ಕರ್ನಾಟಕದ ವಿಧಾನ ಪರಿಷತ್ತು ಎಂದರೆ, ನನಗೆ ಬಹಳಷ್ಟು ವೈಯಕ್ತಿಕವಾಗಿ ಹೆಮ್ಮೆಪಡುವಂತಹ ಭಾವನೆ ನಿರ್ಮಾಣವಾಗಿದೆ. ಆ ಹಿನ್ನೆಲೆಯಲ್ಲಿ ತಾವು ಸಭಾಪತಿಗಳಾಗಿ ಆಯ್ಕೆಯಾಗಿದ್ದೀರಿ. ಒಂದೊಂದು ಬಾರಿ ಮಾಧ್ಯಮದ ಸ್ನೇಹಿತರು ಬರೆಯುತ್ತಿದ್ದರು, ಸದಸ್ಯರಾದ ಮಾನ್ಯ ಎಸ್.ಆರ್. ಪಾಟೀಲ್‌ರವರಿಗೆ ಮತ್ತು ಬಸವರಾಜ ಹೊರಟ್ಟಿಯವರಿಗೆ ರೇಸ್ ಇದೆ. ಒಮ್ಮೆ ಶ್ರೀ ಎಸ್.ಆರ್.ಪಾಟೀಲ್‌ರವರು ಎಂದರು, ಒಮ್ಮೆ ಶ್ರೀ ಬಸವರಾಜ ಹೊರಟ್ಟಿಯವರು ಎಂದರು. ಹೀಗೆ ಎಲ್ಲಾ ನಡೆದು ನಡೆದು ಕೊನೆಗೆ ನಮ್ಮಿಬ್ಬರನ್ನು ಬಿಟ್ಟು ಅದು ನಿಮ್ಮ ಪಾಲಿಗೆ ಬಂದಿದೆ. ಅದು ಹೇಗೆ ಬಂತು ಎಂದು ಗೊತ್ತಿಲ್ಲ, ಆದರೆ ಬಂದಿದೆ. ನಿಮಗೆ ಬಂದಿರುವುದಕ್ಕೆ ನಾನು ಪ್ರಾಮಾಣಿಕವಾಗಿ ಹೇಳುತ್ತೇನೆ. ನಾನು ಕುಳಿತಾಗ ಎಷ್ಟು ಖುಷಿ ಇತ್ತೋ ಅಷ್ಟೇ ಖುಷಿ ನೀವು ಕುಳಿತಾಗ ಸಹ ಇದೆ. ರೇಸ್‌ನಲ್ಲಿ ಇದ್ದಾರೆಂದು ಪತ್ರಿಕೆಯವರು ಬಿಂಬಿಸಿರುವುದು, ಸಹಜವಾಗಿ ಜನರಿಗೆ ಈ ರೀತಿಯ ಭಾವನೆ ಬರುತ್ತದೆ. ಅದು ಇದ್ದರು ಏನು ತಪ್ಪಿಲ್ಲ. ರಾಜಕಾರಣದಲ್ಲಿ ನಾವುಗಳೇನು ಸಂನ್ಯಾಸಿಗಳಲ್ಲ. ಅವರು ಹಾಗೆಂದರು ಸಹ ಬೇಸರವೇನು ಪಟ್ಟುಕೊಳ್ಳುವಂತಹವುದಲ್ಲ.

ನಾನು ಹೇಳುವುದು ಇಷ್ಟೆ, ನಾನು ನಿಮ್ಮನ್ನು ಮೊದಲಿನಿಂದ ನೋಡುತ್ತಾ ಬಂದಿದ್ದೇನೆ. ಶಾಸಕರ ದಿನಾಚರಣೆಗೆ ನಾವು-ನೀವು ಕಬಡ್ಡಿ ಆಟವಾಡಿ ಕೈಕಾಲು ಮುರಿದುಕೊಂಡಿರುವುದು ನಮ್ಮಿಬ್ಬರಿಗೂ ಗೊತ್ತಿದೆ. ಇಷ್ಟು ವರ್ಷಗಳಾದವು ಪಾಪ, ನಮ್ಮ ಪ್ರತಾಪಚಂದ್ರ ಶೆಟ್ಟರು ಮಂತ್ರಿನೂ ಆಗಲಿಲ್ಲ, ಏನು ಆಗಲಿಲ್ಲವೆಂದು ಅಂದುಕೊಳ್ಳುತ್ತಿದ್ದೆವು. ನೀವು ಅಲ್ಲಿ panel ನಲ್ಲಿ ಕುಳಿತುಕೊಂಡಿರುತ್ತಿದ್ದೀರಿ. ನನ್ನ ಅನಿಸಿಕೆ ಏನೆಂದರೆ, ಸಹಜವಾಗಿ ಇದೊಂದು ಬಾರಿ ನನಗೆ ಅವಕಾಶ ಸಿಕ್ಕಿದೆ, ಬೆಳಗಾವಿ ಅಧಿವೇಶನದಲ್ಲಿ ನಾನು ಸಭಾಪತಿಯಾಗಿ ಆಯ್ಕೆಯಾಗಿ, ಉತ್ತರ ಕರ್ನಾಟಕದಲ್ಲಿ ಅದರಲ್ಲೂ ಬೆಳಗಾವಿಯಲ್ಲಿ ಮಾನ್ಯ ಸದಸ್ಯರಾದ ಶ್ರೀ ಎಸ್.ಆರ್.ಪಾಟೀಲ್‌ರವರು ಹೇಳಿದಂತೆ, ಮಾಡಬೇಕು ಎಂಬುವಂತಹ ಆಸೆ ಇತ್ತು. ಆದರೆ, ಕಡೆಗೆ ಎರಡು ದಿವಸವಾದರೂ ಈ ಸದನವನ್ನು ನಡೆಸಿದ್ದೇನೆ ಎನ್ನುವಂತಹ ತೃಪ್ತಿ ನನಗಿದೆ ಎನ್ನುವುದನ್ನು ಬಹಳ ಪ್ರಾಮಾಣಿಕವಾಗಿ ಹೇಳುವುದಕ್ಕೆ ಇಷ್ಟಪಡುತ್ತೇನೆ.

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಇವತ್ತಿನ ದಿವಸ ಅನೇಕ ಸದಸ್ಯರು ಹೇಳಿದ್ದಾರೆ, ವಿಧಾನ ಸಭೆಯಾಗಲಿ ಅಥವಾ ವಿಧಾನ ಪರಿಷತ್ತ್ ಆಗಲಿ ಪೀಠಾಧ್ಯಕ್ಷರ ಕೆಲಸ ಬಹಳ ಕಷ್ಟದ ಕೆಲಸ. ಏಕೆಂದರೆ ಆ ಪೀಠದಲ್ಲಿ ಕುಳಿತವರು ನ್ಯಾಯಾಧೀಶರಂತೆ ಕೆಲಸ ಮಾಡಬೇಕು. ಒಂದೊಂದು ಬಾರಿ ನಮ್ಮ ಮನಸ್ಸಿಗೆ ವಿರುದ್ಧವಾದಂತಹ ನಿರ್ಣಯವನ್ನು, ಸರ್ಕಾರದ ಮುಖವನ್ನು ನೋಡಿಕೊಂಡು ಆ ಕಡೆಯೂ ಸಹ ಮಾಡಬೇಕಾಗುತ್ತದೆ. ಆದರೆ, ಯಾವುದಕ್ಕೂ ಆಸ್ಪದ ಕೊಡದೆ ತಾವು ಮಾಡುತ್ತೀರಿ ಎಂಬುವಂತಹ ನಂಬಿಕೆ ಮತ್ತು ಭರವಸೆ ಇದೆ. ನಾನು ಈ ಮಾತನ್ನು ಏಕೆ ಹೇಳುತ್ತೇನೆಂದರೆ, ನಿನ್ನೆಯ ದಿವಸ ಮಾನ್ಯ ವಿರೋಧ ಪಕ್ಷದ ನಾಯಕರಾದ ಶ್ರೀ ಕೋಟ ಶ್ರೀನಿವಾಸ ಪೂಜಾರಿಯವರು ನಿಲುವಳಿ ಸೂಚನೆಯನ್ನು ಮಂಡಿಸಿದರು. ಅವರಿಗೆ ನನ್ನ ಮೇಲೆ ಸಿಟ್ಟು ಬಂದಿತ್ತು. ಯಾರಿಗೆ ಯಾವಾಗ ಸಿಟ್ಟು ಬರುತ್ತದೆ ಎಂದು ಗೊತ್ತಿಲ್ಲ. ಆದರೆ, ಪೀಠದಲ್ಲಿ ಕುಳಿತು ನಿಯಮವನ್ನು ಪಾಲನೆ ಮಾಡುವುದು ಬಹಳ ಕಷ್ಟ. ಏಕೆಂದರೆ ಇದು ಇವತ್ತಿನ ಕಾಲವನ್ನು ಗಮನದಲ್ಲಿಟ್ಟುಕೊಂಡು ಹೇಳುತ್ತಿದ್ದೇನೆ. ಆದರೆ, ನಾವೆಲ್ಲರೂ ಈ ಸದನಕ್ಕೆ ಬಂದಾಗ ಇದು ಯಾವುದು ಇರುತ್ತಿರಲಿಲ್ಲ. ಹಿಂದೆ ಒಂದೊಂದು ಬಾರಿ ವಿರೋಧ ಪಕ್ಷದಲ್ಲಿ ಶ್ರೀ ಎಸ್.ವೆಂಕಟರಾಮನ್, ಶ್ರೀ ರಾಜಗೋಪಾಲ್ ಮತ್ತು ಶ್ರೀ ಎ.ಕೆ.ಸುಬ್ಬಯ್ಯ ಇವರುಗಳು ಸದನದಲ್ಲಿ ಸುಮಾರು ಮೂರರಿಂದ ಮೂರುವರೆ ಗಂಟೆಗಳ ಕಾಲ ಭಾಷಣವನ್ನು ಮಾಡುತ್ತಿದ್ದರು. ಈಗ ಇರುವ ತರಹ ಮೀಡಿಯಾ ಮತ್ತು ಟಿ.ವಿ. ಮಾಧ್ಯಮ ಇರಲಿಲ್ಲ. ಅವರ ಭಾಷಣವನ್ನು ತಪ್ಪಿಸಿಕೊಳ್ಳುತ್ತೇವೆಂದು nature call ಗೆ ಓಡಿಹೋಗಿ ಮತ್ತೆ ಓಡಿ ಬರುತ್ತಿದ್ದೆವು. ಅವರು ಭಾಷಣ ಮಾಡುವಾಗ ಒಂದು pin ಬಿದ್ದರೆ ಸಹ ಶಬ್ಧ ಆಗುತಿತ್ತು. ಆದರೆ, ದುರ್ದೈವದಿಂದ ಇವತ್ತಿನ ದಿವಸ ಘೋಷಣೆ ಮತ್ತು ಪ್ರತಿಭಟನೆಗಳು ಆಗುತ್ತಿವೆ. ಇದು ಮೇಲ್ಮನೆಯಲ್ಲಿ ಆಗಬಾರದು ಎಂದು ನಾನು ಬಹಳ ವಾದವನ್ನು ಮಾಡಿದ್ದೇನೆ.

ಮಾನ್ಯ ಸಭಾಪತಿಯವರೇ, ಆ ಸ್ಥಾನ ಏನಿದೆ; ಈ ಹಿಂದೆ ಶ್ರೀ ಜಗದೀಶ್ ಶೆಟ್ಟರ್‌ರವರು ಸಭಾಧ್ಯಕ್ಷರಾಗಿದ್ದರು. ನಾನು ಒಮ್ಮೆ ಹುಬ್ಬಳ್ಳಿಯಲ್ಲಿ ಇದ್ದಾಗ ಯಾರೋ ಹೇಳಿದರು; ಶ್ರೀ ಜಗದೀಶ್ ಶೆಟ್ಟರ್‌ರವರು ಮಂತ್ರಿಗಳಾದರು ಎಂದು, ಅದಕ್ಕೆ ನಾನು ವಿರೋಧವನ್ನು ವ್ಯಕ್ತಪಡಿಸಿದೆ. ಶ್ರೀ ಕಾಗೋಡು ತಿಮ್ಮಪ್ಪನವರು ಮಂತ್ರಿಗಳಾಗಬೇಕೆಂದು ಸಭಾಧ್ಯಕ್ಷರ ಸ್ಥಾನವನ್ನು ಬಿಟ್ಟು ಬಂದಾಗ ಕೂಡ ಅದನ್ನು ನಾನು ವಿರೋಧ ಮಾಡಿದೆ. ಏಕೆಂದರೆ, ಅದು ಅವುಗಳಿಗಿಂತ ಬಹಳ ದೊಡ್ಡದಾದ ಮತ್ತು ಗೌರವಯುತವಾದಂತಹ ಸ್ಥಾನ. ಇದು ಎಲ್ಲರಿಗೂ ಸಿಗುವುದಕ್ಕೆ ಸಾಧ್ಯವೇ ಇಲ್ಲ. ದುರ್ದೈವದಿಂದ ಇವತ್ತಿನ ರಾಜಕಾರಣದಲ್ಲಿ ಸಭಾಪತಿ ಮತ್ತು ಸಭಾಧ್ಯಕ್ಷರಾದರೆ ಅವರ ಕಡೆ ಏನೂ ಇಲ್ಲ ಎನ್ನುವಂತಹ ಭಾವನೆ ಎಲ್ಲಾ ಕಡೆ ಮೂಡಿಬಿಟ್ಟಿದೆ. ಆದರೆ, ಅದು ತಪ್ಪು ಭಾವನೆ. ಆ ಸ್ಥಾನಕ್ಕೆ ಇರುವಂತಹ ಗೌರವ ಇನ್ನುಳಿದ ಯಾವುದೇ ಸ್ಥಾನಕ್ಕೂ ಸಹ ಇರುವುದಿಲ್ಲ ಎನ್ನುವುದು ನನ್ನ ವೈಯಕ್ತಿಕವಾದ ಅಭಿಪ್ರಾಯ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

“ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

ಅಂತಹವುದರಲ್ಲಿ 'right person in right place' ಹಾಗೆ ತಾವು ಇವತ್ತು ಕುಳಿತಿದ್ದೀರಿ, ಅದಕ್ಕೆ ನನಗೆ ಬಹಳ ಸಂತೋಷವಾಗಿದೆ. ಸದನದಲ್ಲಿ ಸಭಾಪತಿಯವರನ್ನು ಮತ್ತು ಉಪ ಸಭಾಪತಿಯವರನ್ನು ಕೆಳಗಿಳಿಸುವ ಸಂದರ್ಭದಲ್ಲಿ ನಾನು ಬಹಳ ವಿರೋಧ ಮಾಡಿದ್ದೇನೆ. ಯಾವುದೇ ರೀತಿಯಿಂದ ಅವಿಶ್ವಾಸ ನಿರ್ಣಯವನ್ನು ಮಂಡನೆ ಮಾಡುವುದಕ್ಕೆ ಯಾರೂ ಹೋಗಬಾರದು. ಏಕೆಂದರೆ ಅದು ಬಹಳ ಗೌರವಯುತವಾದಂತಹ ಸ್ಥಾನ. ಆದುದರಿಂದ ಎಷ್ಟು ಸಾಧ್ಯವಿದೆ ಅಷ್ಟನ್ನು ಸರಿದೂಗಿಸುವಂತಹ ಪರಿಸ್ಥಿತಿ ನಿರ್ಮಾಣವಾದಾಗ ನಾವು ಅದನ್ನು ಮಾಡಬೇಕಾಗುತ್ತದೆ. ಆ ಹಿನ್ನೆಲೆಯಲ್ಲಿ ಅನೇಕ ಜನರು ಹೇಳಿದರು; ಸಭಾಪತಿಯವರು, ವಿರೋಧ ಪಕ್ಷದ ನಾಯಕರಾದ ಶ್ರೀ ಕೋಟ ಶ್ರೀನಿವಾಸ ಪೂಜಾರಿಯವರು ಮತ್ತು ಸಭಾನಾಯಕರಾದ ಶ್ರೀಮತಿ ಜಯಮಾಲ ರವರು ಈ ಮೂರು ಜನರು ಸಹ ಉಡುಪಿ ಮತ್ತು ಮಂಗಳೂರು ಜಿಲ್ಲೆಯವರು, ತಾವುಗಳು ಅತಿ ಬುದ್ಧಿವಂತರು. ಆದರೆ, ನಾನು ನಿಮಗೆ ಒಂದು ಸಲಹೆ ಕೊಡುತ್ತೇನೆ. ನೀವು ಮೂರು ಜನ ಕುಳಿತುಕೊಂಡು ಮಾತನಾಡಿ. ಆದರೆ, ಪದೇಪದೇ ವಿರೋಧ ಪಕ್ಷದ ನಾಯಕರಾದ ಶ್ರೀ ಕೋಟ ಶ್ರೀನಿವಾಸ ಪೂಜಾರಿಯವರ ಮಾತನ್ನು ಕೇಳುವುದು ಬೇಡ. ಏಕೆಂದರೆ, ಒಂದೊಂದು ಬಾರಿ ಅವರು ಅಡ್ಡದಾರಿಯನ್ನು ತೋರಿಸಿ ದಾರಿ ತಪ್ಪಿಸುತ್ತಾರೆ. ನಾನು ಕಳೆದ ಆರು ತಿಂಗಳಿನಿಂದ ಸಾಧ್ಯವಾದಷ್ಟು ರೀತಿಯ ಪ್ರಯತ್ನವನ್ನು ಮಾಡಿದ್ದೇನೆ.

ಒಂದೊಂದು ಬಾರಿ ಎಲ್ಲಾ ಸದಸ್ಯರಿಗೆ, ನಿರ್ದಿಷ್ಟವಾಗಿ ಹೊಸದಾಗಿ ಬರುವಂತಹ ಸದಸ್ಯರಿಗೆ ಹೆಚ್ಚಿನ ಆಸ್ಪದವನ್ನು ಮಾಡಿ ಕೊಡಬೇಕು. ಏಕೆಂದರೆ ಅವರು ಇನ್ನು ಕಲಿಯಬೇಕಾಗಿರುತ್ತದೆ. ಅವರು ಹೊಸದಾಗಿ ಬಂದಾಗ ಅವರಿಗೆ ಧೈರ್ಯ ಬರಬೇಕಾಗುತ್ತದೆ. ಆ ವಿಚಾರದಲ್ಲಿ ನಾನು ನನ್ನ ಪ್ರಯತ್ನವನ್ನು ಮಾಡಿದ್ದೇನೆ. ಈಗ ಎಲ್ಲರಿಗೂ ಸಹ ಸಮಾಧಾನ ಮಾಡುವುದಕ್ಕೆ ಆಗುವುದಿಲ್ಲ. ತಮ್ಮಲ್ಲಿ ನನ್ನ ಒಂದು ವಿನಂತಿ ಇದೆ. ಇವತ್ತು ಏನು ಅಜೆಂಡಾ ಇರುತ್ತದೆ, ಆ ಅಜೆಂಡಾವನ್ನು ಸಂಪೂರ್ಣವಾಗಿ ಮುಗಿಸುವಂತಹ ಕೆಲಸವನ್ನು ಮಾಡಬೇಕು ಎಂಬುದು ನನ್ನ ಮನವಿ. ಏಕೆಂದರೆ, ಇದಕ್ಕೆ ಎಷ್ಟೋ ಲಕ್ಷ ಹಣ ಖರ್ಚಾಗುತ್ತದೆ. ಏಕೆಂದರೆ ಅದು ಸರ್ಕಾರದ ಹಣ, ಅದು ಸಾರ್ವಜನಿಕರಿಂದ ಬಂದಂತಹ ಹಣ ಎಂಬುವುದಕ್ಕೆ ಅಜೆಂಡ ಮುಗಿಸುವಂತಹ ಕೆಲಸವನ್ನು ಮಾಡಬೇಕು. ನಾವು ನಿಮಗೆ ಎಲ್ಲಾ ರೀತಿಯ ಸಹಕಾರವನ್ನು ಕೊಡುತ್ತೇವೆ. ಆ ಹಿನ್ನೆಲೆಯಲ್ಲಿ ನಾನು ನಿಮಗೆ ಅಭಿನಂದನೆಯನ್ನು ಸಲ್ಲಿಸುತ್ತೇನೆ. ತಾವು ಒಳ್ಳೆಯ ರೀತಿಯಿಂದ ಕೆಲಸ ಮಾಡುತ್ತೀರಿ. ತಮಗೂ ಸಾಕಷ್ಟು ಅನುಭವ ಇದೆ. ಹೆಚ್ಚು-ಕಡಿಮೆ ತಾವು ನನ್ನ ಕಾಲದಿಂದಲೂ ವಿಧಾನಮಂಡಲದಲ್ಲಿ ಇದ್ದು ಇಲ್ಲಿನ ಕಾರ್ಯವೈಖರಿಯನ್ನು ಗಮನಿಸುತ್ತಲೇ ಬಂದಿದ್ದೀರಿ.

“ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

ನಾನು ಈಗ ಇಲ್ಲಿಗೆ ಬರುವ ಮುಂಚೆ ಮಾಧ್ಯಮದವರು ಹೇಳಿದರು. ಏನು ಸರ್, ಕಾಂಗ್ರೆಸ್ ಪಕ್ಷದವರು ಲಾಟರಿ ಆರಿಸಿಬಿಟ್ಟರು ಎಂದರು. ಇಲ್ಲ ಅವರು ಲಾಟರಿ ಆರಿಸಿಲ್ಲ, ಯೋಗ್ಯ ಮನುಷ್ಯರನ್ನು ಕಳುಹಿಸಿದ್ದಾರೆಂದು ಹೇಳಿದೆ. ಹಾಗೆಯೆ ಒಂದು ಕಥೆ ಹೇಳಿ ನಾನು ನನ್ನ ಮಾತನ್ನು ಮುಗಿಸುತ್ತೇನೆ. ಒಂದು ಬಾರಿ ಮಂಗಗಳ ವಸ್ತುಪ್ರದರ್ಶನ ನಡೆಯುತಿತ್ತಂತೆ, ಪ್ರದರ್ಶನ ನೋಡುವವರು ಎಲ್ಲಾ ಕಡೆ ನೋಡಿಕೊಂಡು ಹೋದರಂತೆ, ಅಲ್ಲೆಲ್ಲಾ ಫೆನ್ಸ್ ಹಾಕಿದ್ದರು. ಕೊನೆಗೆ ಭಾರತದ ಸ್ಟಾಲ್ ಇತ್ತು. ಪ್ರದರ್ಶನಕಾರರು ಅಲ್ಲಿಗೆ ಹೋದಾಗ ಆ ಸ್ಟಾಲ್‌ಗೆ ಚಾವಣಿ ಹಾಕಿರಲಿಲ್ಲವಂತೆ, ಅವರೆಲ್ಲರೂ 'why you have not put the fence?' ಎಂದು ಕೇಳಿದರಂತೆ. ಆಗ ಅಲ್ಲಿದ್ದವನು ಹೇಳಿದನಂತೆ; ಇಲ್ಲಿಗೆ fence ಹಾಕುವಂತಹ ಅವಶ್ಯಕತೆ ಇಲ್ಲ, ಏಕೆಂದರೆ ನಮ್ಮ ಮಂಗಗಳು ಆ ತರಹ ಅಲ್ಲ. ಯಾವುದಾದರೂ ಮಂಗ ಮೇಲೆ ಹತ್ತಿದರೆ ಮತ್ತೊಂದು ಮಂಗ ಬಂದು ಕಾಲು ಹಿಡಿದು ಎಳೆಯುತ್ತದೆ, ಹಾಗಾಗಿ ಮೇಲೆ ಚಾವಣಿ ಹಾಕುವಂತಹ ಅವಶ್ಯಕತೆ ಇಲ್ಲವೆಂದು ಹೇಳಿದನಂತೆ. ಇವತ್ತಿನ ದಿವಸ ಇಂತಹ ರಾಜಕಾರಣ ಇದೆ ಎನ್ನುವ ಮಾತನ್ನು ಹೇಳಬಯಸುತ್ತೇನೆ. ಆ ರೀತಿ ಉತ್ತರವನ್ನು ಕೊಟ್ಟ ವ್ಯಕ್ತಿಗೆ ಬಹುಮಾನವನ್ನು ಕೊಡುವುದಕ್ಕೆ ಹೋದಾಗ ಆತ ಈ ಮಾತನ್ನು ಹೇಳಿದನಂತೆ. ಇಂತಹ ಕಲುಷಿತವಾದ ರಾಜಕಾರಣದ ವಾತಾವರಣದಲ್ಲಿಯೂ ಸಹಿತ, ಒಂದೊಂದು ಬಾರಿ ಯೋಗ್ಯರಿಗೆ ಸ್ಥಾನಮಾನ ಸಿಗುತ್ತದೆ ಎನ್ನುವುದಕ್ಕೆ ತಾವು ಉದಾಹರಣೆ ಎನ್ನುವಂತಹ ಮಾತನ್ನು ಹೇಳುವುದಕ್ಕೆ ನಾನು ಇಷ್ಟಪಡುತ್ತೇನೆ.

ರಾಜಕಾರಣದಲ್ಲಿ ಈ ಮನೆಗೆ ಬರಬೇಕಾದರೆ ಸಾಹಿತಿಗಳು, ಚಿತ್ರರಂಗದವರು ಬರುತ್ತಿದ್ದರು. ನಮ್ಮ ಶ್ರೀಮತಿ ಗಂಗೂಬಾಯಿ ಹಾನಗಲ್‌ರವರು, ಶ್ರೀ ಮಲ್ಲಿಕಾರ್ಜುನ ಮನ್‌ಸೂರ್‌ರವರು ಮತ್ತು ಖಾದ್ರಿ ಶಾಮಣ್ಣನವರು, ಇಂತಹ ಅತಿರಥ ಮಹಾರಥರು ಬರುತ್ತಿದ್ದರು. ಇತ್ತೀಚೆಗೆ ಅದು ರಾಜಕಾಣಕ್ಕೆ ಇಳಿದಿದೆ. ಅಂತಹವುದರಲ್ಲಿ ಈ ಸದನ ಇಡೀ ಭಾರತ ದೇಶದಲ್ಲಿ ಮಾದರಿಯಾದಂತಹ ಸದನವಾಗಿದೆ. ಅದರ ಘನತೆ ಮತ್ತು ಗೌರವವನ್ನು ಎತ್ತಿ ಹಿಡಿಯುವುದಕ್ಕೆ ನಾವೆಲ್ಲರೂ ಸಹಕಾರವನ್ನು ಮಾಡುತ್ತೇವೆ. ಈ ಹಿನ್ನೆಲೆಯಲ್ಲಿ ನಿಮಗೆ ಶುಭವನ್ನು ಕೋರುತ್ತಿದ್ದೇನೆ. ಕಳೆದ ಆರು ತಿಂಗಳಿನಿಂದ ಸಾಧ್ಯವಾದ ರೀತಿಯಲ್ಲಿ ಪ್ರಾಮಾಣಿಕವಾದಂತಹ ಪ್ರಯತ್ನವನ್ನು ಮಾಡಿದ್ದೇನೆ. ಎಲ್ಲಾ ಸದಸ್ಯರು ಸಹ ನನಗೆ ಅಪಾರವಾದ ಗೌರವ ಮತ್ತು ಸಹಕಾರವನ್ನು ಕೊಟ್ಟಿದ್ದಾರೆ. ಇಡೀ ಸದನದ ಎಲ್ಲಾ ಸದಸ್ಯರಿಗೆ ನನ್ನ ಹೃದಯ ತುಂಬಿದ ಅಭಿನಂದನೆಯನ್ನು ಸಲ್ಲಿಸುತ್ತೇನೆ ಮತ್ತು ತಮಗೂ ಸಹ ಅಭಿನಂದನೆಯನ್ನು ಸಲ್ಲಿಸಿ, ನನ್ನ ಮಾತನ್ನು ಮುಗಿಸುತ್ತೇನೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"**

**(ಮುಂದು...)**

**(ಸಭಾಪತಿಯವರ ಉಪಸ್ಥಿತಿ)**

(373)12-12-2018(11-50)ಎಲ್‌ಎಲ್-ವಿಕೆ

**ಶ್ರೀ ಸಿ.ಎಂ. ಇಬ್ರಾಹಿಂ(ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ತಾವು ಈ ಸದನದಲ್ಲಿ ಸಭಾಪತಿಯವರಾಗಿ ಆಯ್ಕೆಯಾಗಿದ್ದೀರಿ. ಅದಕ್ಕಾಗಿ ತಮಗೆ ಅಭಿನಂದನೆಗಳು. ಭಾರೀ ದಿವಸದ ಹಿಂದೆ ತಮಗೆ ಈ ಸ್ಥಾನ ಸಿಗಬೇಕಾಗಿತ್ತು. ತಾವು ಸರಳ ಸ್ವಭಾವದವರು. ಪಬ್ಲಿಕ್ ಅಕೌಂಟ್ಸ್ ಕಮಿಟಿಯಲ್ಲಿ ನಾವು ತಮ್ಮನ್ನು ಕಳೆದುಕೊಳ್ಳುತ್ತಿದ್ದೇವೆ. ಎರಡನೆಯದಾಗಿ, ತಾವು ನಮ್ಮ ಪಾರ್ಟಿಯಿಂದಲೇ ಈಗ ದೂರ ಹೋಗಿಬಿಟ್ಟಿದ್ದೀರಿ. Nonpolitical Man ಆಗಿದ್ದೀರಿ. ಆದರೆ, ಒಂದು ಸಂತೋಷವೇನೆಂದರೆ, ವಿರೋಧ ಪಕ್ಷದ ನಾಯಕರ ಕಾಲ್ಗುಣವೆಂದು ಕಾಣುತ್ತಿದೆ. ಏಕೆಂದರೆ, ಅವರು ಬಂದ ನಂತರ ಡಾ: ಜೈಮಾಲ ರಾಮಚಂದ್ರರವರು ಸಭಾ ನಾಯಕರಾದರು, ನನ್ನ ಪಕ್ಕದ ಸ್ಥಾನದಲ್ಲಿಯೂ ಸಹ ಕರಾವಳಿ ಭಾಗದವರು ಇದ್ದಾರೆ. ಒಂದು ಒಳ್ಳೆಯ ವಾತಾವರಣ ಈ ಕೌನ್ಸಿಲ್‌ನಲ್ಲಿ ಇದೆ. ವಿರೋಧ ಪಕ್ಷದ ನಾಯಕರ ಮೇಲೆ ನನಗೆ ಬಹಳ ಪ್ರೀತಿ ಇದೆ. ಅವರು ಬಹಳ ಪ್ರಾಮಾಣಿಕಸ್ಥರು. ಆದರೆ, ಅವರು ನಮ್ಮ ಜೊತೆ ಇಲ್ಲವಲ್ಲವೆನ್ನುವುದು ಒಂದೇ ದುಃಖ. "ಕಾಲಾಯ ತಸ್ಮೈ ನಮಃ." ಮಾನ್ಯ ಹೊರಟ್ಟಿಯವರು ಆರು ತಿಂಗಳು ಚೆನ್ನಾಗಿ ಆಡಳಿತ ನಡೆಸಿ, ಒಂದು ಒಳ್ಳೆಯ ಅನುಭವವನ್ನು ನಮಗೆ ಕೊಟ್ಟಿದ್ದಾರೆ. ಅವರನ್ನೂ ಸಹ ನಾನು ಅಭಿನಂದಿಸುತ್ತೇನೆ. ಶ್ರೀ ಎಸ್.ಆರ್. ಪಾಟೀಲ್‌ರವರು ಉತ್ತರಕರ್ನಾಟಕ, ಹೈದರಾಬಾದ್-ಕರ್ನಾಟಕ ಎಂದು ಹೇಳಿದರು. ಈ ಬಗ್ಗೆ ಅವರಿಗೆ ಕಾಳಜಿ ಇದೆ. ಇದನ್ನು ಗಮನಿಸಿ, ಶ್ರೀ ಎಸ್.ಆರ್. ಪಾಟೀಲ್‌ರವರು, ನಾನು ಶ್ರೀ ಕೆ. ಅಬ್ದುಲ್ ಜಬ್ಬಾರ್‌ರವರು ಮತ್ತು ಶ್ರೀ ಆರ್.ಬಿ. ತಿಮ್ಮಾಪುರವರು ಶ್ರೀ ಸಿದ್ದರಾಮಯ್ಯನವರು ಬಾದಾಮಿಯಲ್ಲಿ ಗೆಲ್ಲಬೇಕೆಂದು ಚುನಾವಣೆಗೆ ನಿಲ್ಲಿಸಿದ್ದೆವು. ಒರಿಜಿನಲ್ ಆಗಿ ಹೇಳುವುದಾದರೆ, ನಾನು ಹುಟ್ಟಿದ್ದು ರಾಣೆಬೆನ್ನೂರಿನ ಐರಿಣಿಯಲ್ಲಿ. ನಾನು ಅಲ್ಲಿ ಗೆಲ್ಲಲಿಲ್ಲ. ಆದರೆ, ಬೆಂಗಳೂರಿನಿಂದ ಬಂದು ಶ್ರೀ ಆರ್. ಶಂಕರ್‌ರವರು ಗೆದ್ದರು. ಉತ್ತರಕರ್ನಾಟಕದ ಜನ ಸ್ವಾಭಾವಿಕವಾಗಿ ಉತ್ತಮವಾದಂತಹ ಗುಣ ಹೊಂದಿರತಕ್ಕಂತಹವರು. ದೇಶದ ಸ್ವಾತಂತ್ರ್ಯಕ್ಕಾಗಿ ಕರ್ನಾಟಕ ರಾಜ್ಯದ ಏಕೀಕರಣಕ್ಕಾಗಿ ಬಹಳ ದೊಡ್ಡ ಕೆಲಸ ಮಾಡಿರತಕ್ಕಂತಹ ಭಾಗ ಇದು. ನನಗಾದರೂ ವಿಶ್ವಾಸವಿದೆ. ಸಮಗ್ರ ಕರ್ನಾಟಕ 'ಕ' ಕರುಣೆ, 'ನ' ನನ್ನೆ, 'ಡ' ಢಮರುಗ, ಕರುಣೆಯ ನನ್ನೆಯ ಢಮರುಗವನ್ನು ಮುಕ್ಕಣ್ಣೇಶ್ವರ ಎಂದು ಬಾರಿಸಿದನೋ ಅಂದೇ ಈ ಭಾಷೆ "ಕನ್ನಡ" ಎಂದು ನಾಮಾಂಕಿತವಾಯಿತು ಎಂದು ಪೂರ್ವಿಕರು ಬರೆದು ಇಟ್ಟಿದ್ದಾರೆ. ಅಂತಹ ಇತಿಹಾಸ ಇರತಕ್ಕಂತಹ ನಮ್ಮ ನಾಡಿನಲ್ಲಿ ತಾವು ಸಭಾಪತಿಗಳಾಗಿ ಆ ಸ್ಥಾನದಲ್ಲಿ ಕುಳಿತಿರುವುದು ನಿಜಕ್ಕೂ ಸಂತೋಷದ ವಿಷಯ.

ಆ ಸ್ಥಾನಕ್ಕೆ ಒಂದು ದೊಡ್ಡ ಗೌರವವನ್ನು ನಮ್ಮ ಪಕ್ಷದ ಹಿರಿಯರು ಕೊಟ್ಟಿದ್ದಾರೆ. ಮಾನ್ಯ ಹೊರಟ್ಟಿಯವರು, *"ಇಬ್ಬರ ಹೆಸರು ರೇಸ್‌ನಲ್ಲಿದೆ ಎಂದು ಪತ್ರಿಕೆಯಲ್ಲಿ ಬರುತ್ತಿತ್ತು. ಸಡನ್ ಆಗಿ ಫಲಿತಾಂಶ ಬಂದುಬಿಡುತ್ತಲ್ಲಾ"* ಎಂದು ಹೇಳುತ್ತಿದ್ದರು. ಅದೇ ಕಾಂಗ್ರೆಸ್. ಯಾರ ಕಲ್ಪನೆಯಲ್ಲಿ ಇಲ್ಲವೋ ಅದನ್ನು ಹುಡುಕುವಂತಹ ಶಕ್ತಿ ಈ ಪಕ್ಷಕ್ಕೆ ಇದೆ. **(ಗೊಂದಲ)** ಕಾಲಾಯ ತಸ್ಮೈ ನಮಃ. ಇವೊತ್ತಿನ ದಿವಸ ತಮಗೆ ಆ ಸ್ಥಾನ ಸಿಕ್ಕಿದೆ. ಏಕೆಂದರೆ, ಅಧಿಕಾರ ಯಾರಿಗೂ ಶಾಶ್ವತವಾದಂಥದ್ದಲ್ಲ. ಉತ್ತರಕನ್ನಡ ಜಿಲ್ಲೆಯಿಂದ ಶ್ರೀ ಎಸ್.ಜಿ. ಗಾಂವ್ಕರ್‌ರವರು ಕುಳಿತಂತಹ ಜಾಗ ಅದು. ಇವೊತ್ತಿನ ದಿವಸ ದಕ್ಷಿಣಕನ್ನಡ ಜಿಲ್ಲೆಯವರಾದ ತಾವು ಆ ಸ್ಥಾನದಲ್ಲಿ ಕುಳಿತಿದ್ದೀರಿ. ನಾವು ಆ ಕನ್ನಡ, ಈ ಕನ್ನಡ ಎಂದು ನೋಡುವುದಿಲ್ಲ. ಸಮಗ್ರ ಕರ್ನಾಟಕ ಒಂದು ಎನ್ನುವಂತಹ ಭಾವನೆಯಿಂದ ನೋಡುತ್ತೇವೆ. ತಾವು ತಮ್ಮ ಪೂರ್ಣವಾದ ಅವಧಿಯನ್ನು ಒಳ್ಳೆಯ ರೀತಿಯಲ್ಲಿ ನಿರ್ವಹಿಸಿಕೊಂಡು ಹೋಗುತ್ತೀರೆಂಬ ವಿಶ್ವಾಸ ಇಟ್ಟುಕೊಂಡಿದ್ದೇವೆ. ಏಕೆಂದರೆ, ಮಾನ್ಯ ಹೊರಟ್ಟಿಯವರು ಹೇಳಿದ ರೀತಿ ದೊಡ್ಡ ಐತಿಹಾಸಿಕವಾದಂತಹ ಒಂದು ಮಹತ್ವದ ಇತಿಹಾಸ ಇರತಕ್ಕಂತಹ ಈ ವಿಧಾನ ಪರಿಷತ್ ಸಭೆಯ ಗಾಂಭೀರ್ಯವನ್ನು ತಾವು ಉಳಿಸಿಕೊಂಡು ಹೋಗಬೇಕು, ಹೋಗುತ್ತೀರಿ ಎನ್ನುವಂತಹ ವಿಶ್ವಾಸವಿದೆ. ಅದಕ್ಕಾಗಿ, ದೇವರು ತಮಗೆ ಒಳ್ಳೆಯ ಶಕ್ತಿ ಮತ್ತು ಆರೋಗ್ಯವನ್ನು ನೀಡಲಿ ಎಂದು ಹಾರೈಸುತ್ತೇನೆ. ಹೌದು, ಮೀನು ತಿನ್ನುವವರಿಗೆ ಕೊಲೆಸ್ಟ್ರಾಲ್ ಜಾಸ್ತಿ ಇರುವುದಿಲ್ಲ. ಅದರಲ್ಲಿಯೂ ಮೀನು ತಿನ್ನುವಂತಹ ಬ್ರಾಹ್ಮಣರು ಸಿಗುವುದು ಸೌತ್ ಕೆನರಾದಲ್ಲಿಯೇ. ಇವೊತ್ತಿನ ದಿವಸ ಅಂತಹ ಒಂದು ಭಾಗದಿಂದ, ಒಂದು ಪವಿತ್ರ ಜಾಗವಾದ ಕಡಲ ತೀರದಿಂದ ತಾವು ಬಂದಿದ್ದೀರಿ. ಅಲೆಗಳು ರಭಸ ಇದ್ದಾಗ ಜೋರಾಗಿ ಹೊಡೆಯಲಿ, ಸುನಾಮಿ ಬರದೇ ಇರಲಿ, ಅದನ್ನು ಕಾಪಾಡಿಕೊಂಡು ಹೋಗಿ ಎಂದು ಹೇಳಿ, ದೇವರು ತಮಗೆ ಅನಂತ ಆರೋಗ್ಯ ನೀಡಲಿ ಎಂದು ಭಗವಂತನಲ್ಲಿ ಹಾರೈಸಿ, ಅವಕಾಶ ಕೊಟ್ಟಿದ್ದಕ್ಕಾಗಿ ತಮಗೆ ಧನ್ಯವಾದಗಳನ್ನು ಸಲ್ಲಿಸುತ್ತೇನೆ.

**ಡಾ: ತೇಜಸ್ವಿನಿ ಗೌಡ(ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಅವಕಾಶ ಕೊಟ್ಟಿದ್ದಕ್ಕಾಗಿ ತಮಗೆ ಧನ್ಯವಾದಗಳು. ಮಿಶ್ರ ಭಾವನೆ; ನಿನ್ನೆ ಬೆಳಿಗ್ಗೆ 10-00 ಗಂಟೆಯಿಂದ ಸಂಜೆ 07-00 ಗಂಟೆಯವರೆಗೆ ಸದನವನ್ನು ನಡೆಸಿದಂತಹ ನಮ್ಮ ವಿದ್ಯಾರ್ಥಿ ಜೀವನದಿಂದ, ಪತ್ರಕರ್ತ ಜೀವನದಿಂದ, ರಾಜಕಾರಣದ ಜೀವನದವರೆಗೆ ವಿವಿಧ ಹಂತಗಳಲ್ಲಿ ಅವರನ್ನು ನೋಡಿದಂತಹ, ಅವರಿಂದ ಕಲಿತಂತಹ, ಮಾನ್ಯ ಹೊರಟ್ಟಿಯವರು ನಿನ್ನೆಯ ದಿವಸ ಸಭಾಪತಿ ಸ್ಥಾನದಲ್ಲಿದ್ದರು. ಇವೊತ್ತಿನ ದಿವಸ ನಮ್ಮ ಎದುರುಗಡೆ ಕುಳಿತಿದ್ದಾರೆ. ಆ ಪೀಠದಲ್ಲಿ ಇವತ್ತು ಕುಳಿತಿರುವ ತಮ್ಮನ್ನು ನಿನ್ನೆ ತಾನೇ ಪ್ರತಾಪಣ್ಣ ಎಂದು ನಾವು ಕರೆಯುತ್ತಿದ್ದೆವು. ಅಷ್ಟು ಸಲುಗೆ ಇತ್ತು. ಶ್ರೀ ನಾಲ್ವಡಿ ಕೃಷ್ಣರಾಜ ಒಡೆಯರ್‌ರವರ ಕನಸಿನ ಸೌಧ ಇದು, ಮಾತಿನ ಮನೆ. ಮಾತಿಗೆ ಈಟಿಯಷ್ಟು ಶಕ್ತಿ ಕೊಡುವಂತಹ ಮನೆ. ಸರ್ಕಾರ ಆನೆಯ ರೀತಿ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ನಾನು ಹೋದದ್ದೇ ದಾರಿ, ನನಗೆ ಜನ ಅಧಿಕಾರ ಕೊಟ್ಟಿದ್ದಾರೆ, ಏನು ಬೇಕಾದರೂ ನಡೆಯುತ್ತೆ ಎನ್ನುವ ಭಾವನೆ ಇದ್ದಾಗ, ಸಂವಾದದ ಮೂಲಕ, ಚರ್ಚೆಯ ಮೂಲಕ, ವಿಷಯಗಳ ಮಂಡನೆಯ ಮೂಲಕ, ಮಾತಿಗೆ ತೀಕ್ಷ್ಣತೆಯನ್ನು ಕೊಟ್ಟು ಈಟಿಯ ರೀತಿಯಲ್ಲಿ ಅಂಕುಶವನ್ನು ಹಾಕುವ ಶಕ್ತಿ ಈ ಮೇಲ್ಮನೆಗೆ ಇರತಕ್ಕಂಥದ್ದೇ ಈ ಪ್ರಜಾಪ್ರಭುತ್ವದ ಒಂದು ಸೌಂದರ್ಯ. ಒಬ್ಬ ಯೋಧ ಎಷ್ಟೇ ಚೆನ್ನಾಗಿ ಯುದ್ಧ ಮಾಡಬೇಕಾದರೂ, ಅವನು ಯಾವ ಜಾಗದಲ್ಲಿ ನಿಂತು ಯುದ್ಧ ಮಾಡುತ್ತಾನೆ ಎನ್ನುವುದು ಮುಖ್ಯವಾಗುತ್ತದೆ. ಅದಕ್ಕೆ strategic point ಎಂದು ನಾವು ಕರೆಯುತ್ತೇವೆ. ಆಯಕಟ್ಟಿನ ಜಾಗದಲ್ಲಿ ನಿಂತು ಹೊಡೆಯಬೇಕು, ಹೊಡೆಯುವಾಗ ಗುರಿಯನ್ನು ತಲುಪಬೇಕಾದರೆ ಸೂಕ್ತವಾದ ಶಸ್ತ್ರಾಸ್ತ್ರವನ್ನು ಬಳಸಬೇಕು, ಅದನ್ನು ಬಳಸಬೇಕಾದರೆ ಆ ಯೋಧನಿಗೆ ತರಬೇತಿಯು ಬೇಕಾಗುತ್ತದೆ. ಈ ಮನೆಯ ಹಿರಿಯರಾದಂತಹ ನಮ್ಮ ಶ್ರೀ ಎಸ್.ಆರ್. ಪಾಟೀಲ್‌ರವರು... ಒಂದು ಹೆಬ್ಬೆಟ್ಟು ಒತ್ತುವ ತಂದೆ ತಾಯಿಗಳ ಒಂದು ಸಣ್ಣ ರೈತಾಪಿ ಕುಟುಂಬದಿಂದ ಬಂದವರು, ಈ ಬಗ್ಗೆ ಕೃಷ್ಣಭೈರೇಗೌಡರವರು ಹೇಳುತ್ತಿದ್ದರು. ನಾವೆಲ್ಲಾ ಬಯಲು ಸೀಮೆ, ಬೆಂಗಳೂರು ಗ್ರಾಮಾಂತರ ಭಾಗದ ಗಡಿ ಜಿಲ್ಲೆಯ ಒಂದು ಸಣ್ಣ ಹಳ್ಳಿಯಿಂದ ನಾವು ಶ್ರೀ ನಾರಾಯಣಸ್ವಾಮಿ ಎಲ್ಲರೂ ಬಂದಿರುವಂತಹದ್ದು. ಕನಸು ಕೂಡ ಇಲ್ಲ. ವಿದ್ಯಾಭ್ಯಾಸ ಸಿಗುವುದಕ್ಕಾಗಿ ಹೋರಾಟ. ವಿದ್ಯಾಭ್ಯಾಸದ ನಂತರ ನಮ್ಮ ಜೀವನ, ನನ್ನ ತವರು ಮನೆ ಮಾಧ್ಯಮ. ನಮಗೆ ಸಾರ್ವಜನಿಕ ಜೀವನದಲ್ಲಿ ಒಂದು ವ್ಯಕ್ತಿತ್ವವನ್ನು ಕಟ್ಟಿಕೊಟ್ಟಿದ್ದು, ಪತ್ರಕರ್ತ ಜೀವನ. ತದನಂತರದಲ್ಲಿ ದೃಶ್ಯ ಮಾಧ್ಯಮದಲ್ಲಿ ಹೆಸರು ಮಾಡಿದ್ದು, ಈ ಒಂದು ಗಣ್ಯರು ಏನಿದ್ದಾರೆ, ಮುತ್ಸದ್ದಿಗಳಿದ್ದಾರೆ, ಪ್ರತಿಯೊಬ್ಬರ ಜೊತೆ ಈ ಸದನ ನೋಡುವಾಗ ನನಗೆ ವಿಶೇಷವಾಗಿ ನನ್ನ ಸಂಗಾತಿ ಶ್ರೀ ಮೋಹನ್ ಕೊಂಡಜ್ಜಿಯವರು ಈ ನಾಡಿನ ಶತಮಾನದ ಒಂದು ಕೊಂಡಿಯಾಗಿದ್ದ ದಿವಂಗತ ಶ್ರೀ ಎಸ್. ನಿಜಲಿಂಗಪ್ಪನವರನ್ನು 1997–98ರ ಹರೆಯದಲ್ಲಿ ಮುಖಾಮುಖಿ ಸಂದರ್ಶನ ಮಾಡಿದಾಗ ಇಡೀ ದಿನ ಚಿತ್ರದುರ್ಗದಲ್ಲಿ ಒಂದು ಪತ್ರಕರ್ತರಿಗೆ ಯಾವ ರೀತಿ ಅವಕಾಶವನ್ನು ಮಾಡಿಕೊಟ್ಟರು ಎನ್ನುವುದು ಒಂದು ಮೈಲಿಗಲ್ಲು. ಅನೇಕರು ಕೆಳಮನೆಯಲ್ಲಿದ್ದಾರೆ, ಕೆಲವರು ಮೇಲ್ಮನೆಯಲ್ಲಿದ್ದಾರೆ. ಶ್ರೀ ಆಯನೂರು ಮಂಜುನಾಥ್‌ರವರು ಇರಬಹುದು, ಶ್ರೀ ಅಪ್ಪಾಜಿಗೌಡರು, ಶ್ರೀ ಪುಟ್ಟಣ್ಣರವರು ಈ ಸದನದಲ್ಲಿರುವುದು ಆನಂದವಾಗುತ್ತಿದೆ. ಶ್ರೀ ಹೆಚ್.ಡಿ. ದೇವೇಗೌಡರವರು ಪ್ರಧಾನಿಯಾಗಿದ್ದಾಗ ಶ್ರೀ ಸಿ.ಎಂ. ಇಬ್ರಾಹಿಂಯವರು ವಾರ್ತಾ ಸಚಿವರಾಗಿದ್ದರು. ಕಲ್ಪನೆ ಕೂಡ ಇಲ್ಲ. ನಮ್ಮ ವೇಣು. ಪುಟ್ಟ ಸಮಾಜದಿಂದ ಬಂದಂತಹ ಶ್ರೀ ನಸೀರ್ ಅಹ್ಮದ್, ದೇವರಾಜ್, ರಮೇಶ್ ಮತ್ತು ಕೆ.ಜೆ. ಜಾರ್ಜ್ ಇವರೆಲ್ಲರೂ ನಾವು ಪತ್ರಕರ್ತರಾಗಿ ಕಲಿಯುತ್ತಿದ್ದ ಕಾಲದಲ್ಲಿ ದೊಡ್ಡ stalwart ಗಳು. ಡಾ: ಜಯಮಾಲಾ ರಾಮಚಂದ್ರರವರು ಒಬ್ಬ ಕಲಾವಿದರಾಗಿ ಡಾ: ರಾಜ್‌ರವರ ಜೊತೆ ಸಿನಿಮಾಗಳಲ್ಲಿ ನಟಿಸಿದ್ದಾರೆ.

ಇವೊತ್ತಿನ ದಿವಸ ಡಾ: ಜಯಮಾಲಾ ರಾಮಚಂದ್ರರವರು ಒಬ್ಬ ಸದಸ್ಯರಾಗುವುದಕ್ಕೂ, ಒಬ್ಬ ಸಚಿವರಾಗುವುದಕ್ಕೂ ಆ ಸ್ಥಾನ, ಅಂದರೆ, ಅಧಿಕಾರ ಎನ್ನುವಂಥದ್ದು, ಸಾಧನೆ ಹೇಗೆ ಆಗುತ್ತದೆ, ವಿರೋಧ ಪಕ್ಷದಲ್ಲಿ ಸ್ಥಾನ ಸಿಗುವಂಥದ್ದು, ಒಂದು ಸಾಧನೆ ಹೇಗೆ ಆಗುತ್ತದೆ ಎನ್ನುವ ಮಹತ್ವ ತಿಳಿದುಕೊಳ್ಳುವುದಕ್ಕೆ ನಾವು ಈ ಮನೆಗೆ ಬಂದಿದ್ದೇವೆ. ಅದನ್ನು ಮಾನ್ಯ ಹೊರಟ್ಟಿಯವರಿಂದಲೂ ನಾವು ಕಲಿತಿದ್ದೇವೆ. ಅನೇಕ ಸಾರಿ ಹೊರಗಡೆ ಇರುವುದಕ್ಕೂ, ಒಳಗಡೆ ಬಂದ ಮೇಲೆ ಶ್ರೀ ಡಿ.ಕೆ. ಶಿವಕುಮಾರ್ ಮತ್ತು ನಾನು ಸಂಘರ್ಷಗಳನ್ನು ಮಾಡಿದ್ದೇವೆ. ನಮ್ಮ ಶ್ರೀ ಲಿಂಗಪ್ಪನವರು ಈ ಸದನದಲ್ಲಿದ್ದಾರೆ, ನಮ್ಮ ರೇವಣ್ಣನವರು ಇದ್ದಾರೆ, ಶ್ರೀ ರವಿಯವರು ಇದ್ದಾರೆ. ನಮಗೂ ಅವರಿಗೂ ರಾಜಕಾರಣದಲ್ಲಿ ಒಂದು ರೀತಿಯ ವೈರತ್ವ ಬಂದಾಗ ತೀಕ್ಷ್ಣವಾಗಿ ಜಗಳವಾಡಿದ್ದೇವೆ. ಆದರೆ, ಶ್ರೀ ರವಿಯಣ್ಣ ಮತ್ತು ನಮ್ಮ ನಡುವಿನ ಬಾಂಧವ್ಯವೇ ಬೇರೆ. ನಮ್ಮ ಆರ್.ವಿ. ದೇಶಪಾಂಡೆ ಸಾಹೇಬರು, ಎಸ್.ಆರ್. ಪಾಟೀಲರು, ಶ್ರೀ ಸಿದ್ದರಾಮಯ್ಯನವರು ಇದ್ದಾರೆ. ಪ್ರತಿಯೊಬ್ಬರ ಜೊತೆ ಉತ್ತಮ ಬಾಂಧವ್ಯ ಇದೆ. ಅಂದರೆ, ಈ ಮನೆಗೆ ಬರಬೇಕಾದರೆ ಒಂದು ಪುಣ್ಯ ಮಾಡಿರಬೇಕು. ಆ ಭಾಗ್ಯ ನನಗೂ ಸಹ ಸಿಕ್ಕಿದೆ. ನನ್ನ ತವರು ಮನೆಯವರು ಕನ್ಯಾದಾನ ಮಾಡಿದ್ದೀರಿ, ನನ್ನನ್ನು ಒಳ್ಳೆಯ ಮನೆಗೆ ಕೊಟ್ಟಿದ್ದೀರಿ. ಬಿಜೆಪಿಯವರು ನನ್ನನ್ನು ಮುಂದಿನ ಸಾಲಿನಲ್ಲಿ ಕೂರಿಸಿದ್ದಾರೆ. ನಮ್ಮ ಯಡಿಯೂರಪ್ಪನವರು ನನಗೆ ಒಂದು ಅವಕಾಶ ಮಾಡಿಕೊಟ್ಟಿದ್ದಾರೆ. ಎಲ್ಲರನ್ನೂ ನಾವು ಸ್ಮರಿಸುತ್ತೇವೆ. ನಮ್ಮ ಜೀವನದ ಒಂದು ಸಾಧನೆಯಲ್ಲಿ ಯಾರ್‍ಯಾರು ನಮಗೆ ಆರ್ಶೀವಾದ ಮಾಡುತ್ತಾರೆ, ಅವರನ್ನು ನೆನಪಿಸಿಕೊಳ್ಳಬೇಕು. ಅವಕಾಶ ಸಿಗುವಂಥದ್ದು ಬಹಳ ಮುಖ್ಯ. ತಮ್ಮ ವಿಚಾರದಲ್ಲಿ ಹೇಳುವುದಾದರೆ, ನಾಲ್ಕು ಬಾರಿ ಶಾಸಕರಾಗುವುದು ಸುಲಭವಲ್ಲ. ಸೀಟ್ ಸಿಗಬೇಕು, ಗೆಲ್ಲಬೇಕು. ಮತ್ತೆ ವಿಶ್ವಾಸ ಗಳಿಸಿ ನಾಲ್ಕು ಸಾರಿ ಗೆಲ್ಲಬೇಕು. ಏನೋ ಒಂದು ಹಿನ್ನೆಡೆಯಾದಾಗ ಪಕ್ಷ ಅವರನ್ನು ವಿಧಾನ ಪರಿಷತ್ತಿಗೆ ತರುತ್ತದೆ. ಗ್ರಹಚಾರದ ಎಡವಟ್ಟಿನಿಂದಾಗಿ rightist ಗಳು ಅಲ್ಲಿ ಇರಬೇಕಾಗಿತ್ತು. Centrist ಗಳು leftist ಗಳಾಗಿರಬೇಕಾಗಿತ್ತು. ಇವೊತ್ತಿನ ದಿವಸ ಈ ಭಾಗದಲ್ಲಿದ್ದೇವೆ. ನಾವು ಪೀಠದಿಂದ ಏನನ್ನು ನಿರೀಕ್ಷೆ ಮಾಡುತ್ತೇವೆಂದು ಹೇಳಿದರೆ, ಸರ್ಕಾರಕ್ಕೆ ಮುಕ್ತ ಅವಕಾಶವಿದೆ. ರಾಜ್ಯದ ಅಭಿವೃದ್ಧಿ ಮಾಡತಕ್ಕಂಥದ್ದು, ಅಧಿಕಾರ ಇದ್ದಾಗ ಎಲ್ಲಾ ಜನರ ಅಭಿವೃದ್ಧಿಗಾಗಿ ಕೆಲಸ ಮಾಡತಕ್ಕಂಥದ್ದೇ ಸರ್ಕಾರದ ಕೆಲಸ. ಅವರಿಗಿಂತ ಹೆಚ್ಚು ನಮಗೆ ಹೆಚ್ಚು ಅವಕಾಶ ಸಿಗಬೇಕು. ಅದರಲ್ಲೂ ವಿಶೇಷವಾಗಿ ಮಹಿಳೆಯರಿಗೆ. ನಾವು ಇರತಕ್ಕಂಥದ್ದೇ ನಾಲ್ಕು ಜನ. ಶ್ರೀಮತಿ ವೀಣಾ ಅಚ್ಚಯ್ಯನವರು ಇರಬಹುದು, ಶ್ರೀಮತಿ ಜಯಮ್ಮ ಇರಬಹುದು, ಡಾ: ಜಯಮಾಲಾ ರಾಮಚಂದ್ರ ಮೇಡಮ್ ಇರಬಹುದು, ನಮ್ಮ ಭಾಗದಲ್ಲಿ ನನಗೆ ಒಂದು ಅವಕಾಶ ಸಿಕ್ಕಿದೆ. ಮಹಿಳೆಯರಿಗೆ ಪೀಠ ಯಾವತ್ತೂ ಒಳ್ಳೆಯ ರೀತಿಯಲ್ಲಿ ನಡೆದುಕೊಂಡಿದೆ. ವಿಶೇಷವಾಗಿ ಮಾನ್ಯ ಹೊರಟ್ಟಿ ಸರ್‌ರವರಿಗೆ ಬಹಳ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಸಂದಿಗ್ಧತೆ ಇತ್ತು. ನಾವು ಜೆಡಿಎಸ್ ನ ಹಿರಿಯರಾದಂತಹ ಶ್ರೀ ಹೆಚ್.ಡಿ. ದೇವೇಗೌಡರವರ ಜೊತೆ, ಶ್ರೀ ಹೆಚ್.ಡಿ. ಕುಮಾರಸ್ವಾಮಿಯವರ ಜೊತೆ ರಾಜಕಾರಣದಲ್ಲಿ ಸಂಘರ್ಷ ಮಾಡಿ ಬಂದಂತಹವರು. ಈ ಮನೆಯಿಂದ ಆಚೆ ಬಂದ ನಂತರ ಸಂಘರ್ಷವೇ. ಯುದ್ಧವೇ, ಅದು ಕುಸ್ತಿ. ನಾವೂ ನೀವೂ ಎಲ್ಲರೂ ಯುದ್ಧವೇ ಮಾಡಬೇಕು. ಅದೇ ನ್ಯಾಯ.

(ಮುಂದುವರೆದಿದೆ...)

(374) 12.00 12.12.2018 ವೈಎಲ್-ವಿಕೆ (ಸಭಾಪತಿಯವರ ಉಪಸ್ಥಿತಿ)

**ಡಾ॥ ತೇಜಸ್ವಿನಿ ಗೌಡ(ಮುಂದು):-**

ಭಗವದ್ಗೀತೆಯಲ್ಲಿ ಅರ್ಜುನ ಹೇಳುವ ಹಾಗೆ, ಎದುರುಗಡೆ ನಿಂತಿದ್ದಾಗ ಪಕ್ಷ ನಿಷ್ಠೆ ಮತ್ತು ನಮ್ಮ ಜನ ಆ ಪಕ್ಷದ ಮೇಲೆ ಇಟ್ಟಿರುವ ನಂಬಿಕೆಯನ್ನು ಉಳಿಸಿಕೊಳ್ಳಬೇಕು. ಉಡುಪಿ ಜಿಲ್ಲೆಗೆ ಸಂಬಂಧಿಸಿದ್ದಾಗಿರಬಹುದು, ಬೇರೆ ಯಾವುದೇ ಜಿಲ್ಲೆಗೆ ಸಂಬಂಧಿಸಿದ್ದಾಗಿರಬಹುದು ಆ ಜಿಲ್ಲೆಗಳ ಬಗ್ಗೆ ಬಡಿದಾಡುವುದೇ ನಮ್ಮ ನ್ಯಾಯವಾಗಿದೆ. ಆದುದರಿಂದ ಆ ಕೆಲಸವನ್ನು ಅಲ್ಲಿ ಮಾಡುತ್ತೇವೆ. ಆದರೆ, ನಾವು ಸದನದ ಒಳಗೆ ಬಂದಾಗ ಮಾತನಾಡುವ ಪ್ರತಿಯೊಂದು ಮಾತು, ವಿಷಯವನ್ನು ಮಂಡಿಸುವ ವೈಖರಿ, ಪ್ರತಿಯೊಂದರ ಮೇಲೆ ಹಿಡಿತ ಇಟ್ಟುಕೊಳ್ಳಬೇಕು. ಆ ಒಂದು ನಿಯಮವನ್ನು ಇಟ್ಟುಕೊಂಡು ಸದನದ ಹಿರಿಮೆ, ಗರಿಮೆಯೊಳಗೆ ಮಾತನಾಡಬೇಕಾಗುತ್ತದೆ. ಹಾಗೆಯೇ ಇವತ್ತು ಮಾನ್ಯ ಎಸ್.ಆರ್.ಪಾಟೀಲ್‌ರವರು ಮಾತನಾಡುವ ಸಂದರ್ಭದಲ್ಲಿ ಆಡಿದಂತಹ ಮಾತನ್ನು ನಾನು ಒಪ್ಪುತ್ತೇನೆ. ಪುಣ್ಯ ಮಾಡಿರಬೇಕು. ಅದರಲ್ಲಿಯೂ ನಿಮ್ಮ ಜೀವನದ ಅವಿಸ್ಮರಣೀಯ ಘಳಿಗೆ ಎಂದು ಭಾವಿಸುತ್ತೇನೆ. ನಮ್ಮ ವೀರ ಮಾತೆ ಚೆನ್ನಮ್ಮಾಜೀಯವರು ಬ್ರಿಟೀಷರ ವಿರುದ್ಧ ಹೋರಾಟ ನಡೆಸಿ, ತಮ್ಮ ಜೀವನವನ್ನು ಸೆರೆವಾಸದಲ್ಲಿ ಕಳೆದರು, ಒಬ್ಬ ವೀರ ಸುಪುತ್ರ ಸಂಗೋಳ್ಳಿ ರಾಯಣ್ಣ ನೇಣಿಗೇರದಿದ್ದರೆ ಬಹುಶಃ ಇವತ್ತು ನಮಗೆ ಸ್ವಾತಂತ್ರ್ಯ ಸಿಗುತ್ತಿರಲಿಲ್ಲ, ಈ ಸದನದಲ್ಲಿ ಕುಳಿತುಕೊಳ್ಳುವ ಸೌಭಾಗ್ಯವೂ ನಮಗೆ ದೊರೆಯುತ್ತಿರಲಿಲ್ಲ. ಆದರೆ, ಇವತ್ತಿಗೂ ಸಹ ಅಸಮಾನತೆ ಇದೆ. ಇದು ಯಾವ ಕಾರಣಕ್ಕೆ ಆಯಿತು, ಯಾರಿಗೋಸ್ಕರ ಆಯಿತು ಗೊತ್ತಿಲ್ಲ. ಉತ್ತರ ಕರ್ನಾಟಕ-ದಕ್ಷಿಣ ಕರ್ನಾಟಕ ಎನ್ನುವಂಥ ಅಸಮಾನತೆ ಇನ್ನೂ ಇದೆ. ತಾವು ಪೀಠದಲ್ಲಿ ತಕ್ಕಡಿ ಚಿಹ್ನೆಯನ್ನು ಹಾಕಿಕೊಂಡಿದ್ದೀರಿ. ಎರಡೂ ಭಾಗಗಳು ಸಮಾನ ಬೆಳವಣಿಗೆಯನ್ನು ಕಂಡಿಲ್ಲ. ಅಸಮಾನತೆ ಇದೆ. ಡಾ॥ ನಂಜುಂಡಪ್ಪನವರ ವರದಿಗೆ ನ್ಯಾಯ ಸಿಗಬೇಕು. ನಮ್ಮೆಲ್ಲರ ಚರ್ಚೆಯೂ ಆ ನಿಟ್ಟಿನಲ್ಲಿ ಸಾಗಬೇಕಾದ ಸಂದರ್ಭ ಇವತ್ತು ಆಗಿರುವುದರಿಂದ ಈ ಸದನದಲ್ಲಿ ತಾವು ನಮಗೆ ಮಾತನಾಡಲು ಅವಕಾಶ ನೀಡಿದಾಗ ವಿರೋಧ ಪಕ್ಷದ ವಿಷಯದ ಮಂಡನೆ ಆಧಾರದ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಮೇಲೆ ಮತ್ತು ಸಂದರ್ಭದ ಆಧಾರದ ಮೇಲೆ ಹೆಚ್ಚು ಮಾತನಾಡಲು ಅವಕಾಶ ಕಲ್ಪಿಸುತ್ತೀರಿ, ಹಾಗೆಯೇ ಹೆಚ್ಚು ಮಾತನಾಡಲು ಅವಕಾಶ ಕಲ್ಪಿಸಬೇಕೆಂದು ಆಗ್ರಹವನ್ನು ಮಾಡುತ್ತಾ, ತಮ್ಮನ್ನು ಆಯ್ಕೆ ಮಾಡಿದಂಥ ಕಾಂಗ್ರೆಸ್ ಪಕ್ಷಕ್ಕೆ ಮತ್ತು ನಮ್ಮ ಪಕ್ಷವು ಸಹ ಅವಿರೋಧವಾಗಿ, ಅತ್ಯಂತ ಸಂತೋಷವಾಗಿ ಈ ಒಂದು ಸಂದರ್ಭವನ್ನು ಕಾಣುವ ಅವಕಾಶ ದೊರೆತಿದೆ. ಹಾಗಾಗಿ ನಿಮಗೆ ಭಗವಂತ ಒಳ್ಳೆಯದು ಮಾಡಲಿ. ಆ ಪೀಠದಿಂದ ನಾಡು-ನುಡಿಗಾಗಿ ನಮ್ಮೆಲ್ಲರಿಗೂ ಕೆಲಸ ಮಾಡಲು ಒಳ್ಳೆಯ ಅವಕಾಶವನ್ನು ಕಲ್ಪಿಸುವಂತಾಗಲಿ ಎಂದು ಹೇಳುತ್ತಾ ಧನ್ಯವಾದಗಳನ್ನರ್ಪಿಸುತ್ತೇನೆ.

**ಶ್ರೀ ಐವನ್ ಡಿ'ಸೋಜಾ(ನಾಮನಿರ್ದೇಶಿತ ಹೊಂದಿದವರು):-** ಮಾನ್ಯ ಸಭಾಪತಿಯವರೇ, ತಾವು ನಮ್ಮ ಅವಿಭಾಜ್ಯ ಜಿಲ್ಲೆಯ ಶಾಸಕರು. ಇವತ್ತು 3 ಪ್ರಮುಖ ಹುದ್ದೆಗಳು ನಮ್ಮ ಜಿಲ್ಲೆಗೆ ಬಂದಿರುವುದರಿಂದ ನಮಗೆ ಬಹಳ ಸಂತೋಷವಾಗಿದೆ. ಅದರಲ್ಲಿಯೂ ಕೂಡಾ ಮಾನ್ಯ ಸಭಾಪತಿಗಳು ಮತ್ತು ಮಾನ್ಯ ವಿರೋಧ ಪಕ್ಷದ ನಾಯಕರು ಒಂದೇ ಕ್ಷೇತ್ರದಿಂದ ಅಂದರೆ, ಅವಿಭಾಜ್ಯ ಜಿಲ್ಲೆಯಿಂದ ಇಬ್ಬರೂ ವಿಧಾನ ಪರಿಷತ್ತಿನ ಸದಸ್ಯರಾಗಿದ್ದೀರಿ. ಹಾಗಾಗಿ ಖಂಡಿತವಾಗಿ ಈ ಸದನದಲ್ಲಿ ಇನ್ನು ಮುಂದೆ ಏನು ಗೊಂದಲಗಳು ಆಗುವುದಿಲ್ಲ ಎಂಬುದು ನಮ್ಮ ಮನಸ್ಸಿನಲ್ಲಿದೆ. ಏಕೆಂದರೆ, ಒಬ್ಬರಿಗೊಬ್ಬರಲ್ಲಿ ಹೊಂದಾಣಿಕೆ ಇರುತ್ತದೆ ಎಂದು ಭಾವಿಸಿದ್ದೇನೆ. ನಿನ್ನೆ ದಿವಸ ಮಾನ್ಯ ಪ್ರತಾಪಚಂದ್ರ ಶೆಟ್ಟಿಯವರು ಪ್ರಶ್ನೋತ್ತರ ಅವಧಿಯಲ್ಲಿ ಪ್ರಶ್ನೆ ಕೇಳಲು ಕುಳಿತುಕೊಂಡಿದ್ದರು. ಹಾಗೆಯೇ ನಿನ್ನೆ ದಿವಸ 10.30 ಗಂಟೆಗೆ ಮಾನ್ಯ ದಿನೇಶ್ ಗುಂಡೂರಾವ್‌ರವರು ನನಗೆ ಕರೆ ಮಾಡಿ, ಹೊರಗೆ ಕರೆದು ಹೇಳಿದರು. ಅದಕ್ಕೂ ಮೊದಲು ನಾಮಿನೇಶನ್ ಕಡತವನ್ನು ready ಮಾಡಲು 9.30 ಕ್ಕೆ ಮಾನ್ಯ ಎಸ್.ಆರ್.ಪಾಟೀಲ್‌ರವರಿಗೆ ತಿಳಿಸಿದರು. ನಂತರ 10.30 ಕ್ಕೆ ನನ್ನನ್ನು ಕರೆದು ಸದನದಲ್ಲಿ ಮಾನ್ಯ ಪ್ರತಾಪಚಂದ್ರ ಶೆಟ್ಟಿಯವರು ಇದ್ದಾರೆಯೇ ನೋಡು ಎಂದು ಹೇಳಿದರು. ಅದಕ್ಕೆ ನಾನೂ ಸಹ ಸದನದಲ್ಲಿಯೇ ಇರಬೇಕು, ನೋಡಿದ ಹಾಗೆ ಆಯಿತು ಎಂದು ಹೇಳಿದೆ. ಆಗ ಮಾನ್ಯ ಪ್ರತಾಪಚಂದ್ರ ಶೆಟ್ಟಿಯವರನ್ನು ಕರೆದುಕೊಂಡು ಬನ್ನಿ ಎಂದು ಹೇಳಿದರು. ನಾನು ಏತಕ್ಕಾಗಿ ಎಂದು ಕೇಳಿದಾಗ ಅವರೇ ನಾಮಿನೇಶನ್ ಹಾಕಬೇಕೆಂದು ಹೇಳಿದರು. ಅದಕ್ಕೆ ನಾನು ಹೌದಾ ಎಂದು ಕೇಳಿದೆ. ಆಗ ಮಾನ್ಯ ದಿನೇಶ್ ಗುಂಡೂರಾವ್‌ರವರು ಹೌದು ಅವರೇ ನಾಮಿನೇಶನ್ ಹಾಕಬೇಕೆಂದು ಹೇಳಿದರು. ನಂತರ ನಾನು ಸದನದ ಒಳಗೆ ಬಂದು ನೋಡಿದಾಗ ಮಾನ್ಯ ಪ್ರತಾಪಚಂದ್ರ ಶೆಟ್ಟಿಯವರು ಪ್ರಶ್ನೋತ್ತರ ಅವಧಿಯಲ್ಲಿ ಪ್ರಶ್ನೆ ಕೇಳಲು ತಯಾರು ಮಾಡಿಕೊಳ್ಳುತ್ತಿದ್ದರು. ಆಗ ನಾನು ಸ್ವಲ್ಪ ಹೊರಗೆ ಬರಬೇಕಂತೆ, ಮಾನ್ಯ ದಿನೇಶ್ ಗುಂಡೂರಾವ್‌ರವರು ಕರೆಯುತ್ತಿದ್ದಾರೆ ನಾಮಿನೇಶನ್ ಹಾಕಬೇಕಂತೆ ಎಂದು ಹೇಳಿದೆ. ಆಗ ಅವರೂ ಸಹ ಆಶ್ಚರ್ಯದಿಂದ ನನಗಾ ಎಂದು ಕೇಳಿದರು. ಅದಕ್ಕೆ ನಾನೂ ಸಹ ಹೌದು ಎಂದು ಹೇಳಿದೆ. ನಂತರ ಮಾನ್ಯ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"**

ಪ್ರತಾಪಚಂದ್ರ ಶೆಟ್ಟಿಯವರನ್ನು ಕರೆದುಕೊಂಡು ಹೋಗಿ ಕೆಪಿಸಿಸಿ ಅಧ್ಯಕ್ಷರಾದ ಮಾನ್ಯ ದಿನೇಶ್ ಗುಂಡೂರಾವ್‌ರವರನ್ನು ಭೇಟಿ ಮಾಡಿಸಿದೆ. ಅನಂತರ ಮಾನ್ಯ ಪ್ರತಾಪಚಂದ್ರ ಶೆಟ್ಟಿಯವರು ಸಭಾಪತಿಯಾಗಿ ಆಯ್ಕೆ ಆಗುತ್ತಾರೆ ಎಂದು confirm ಆಯಿತು. ಅದೇ ಸಂದರ್ಭದಲ್ಲಿ ಕೆಪಿಸಿಸಿ ಅಧ್ಯಕ್ಷರಾದ ಮಾನ್ಯ ದಿನೇಶ್ ಗುಂಡೂರಾವ್‌ರವರು ಮಾನ್ಯ ಪ್ರತಾಪಚಂದ್ರ ಶೆಟ್ಟಿಯವರಿಗೆ ಸಭಾಪತಿ ಸ್ಥಾನ ನಿಮಗೆ ಬಯಸದೆ ಬಂದ ಭಾಗ್ಯ ಎನ್ನುವ ಮಾತನ್ನು ಹೇಳಿದರು. ಅಂದರೆ, ಮಾನ್ಯ ಸಭಾಪತಿಗಳು ತಮ್ಮ ಆಯ್ಕೆಗಾಗಿ ಖಂಡಿತವಾಗಿ ಯಾವುದೇ lobby ಯನ್ನು ಮಾಡಿರುವುದಿಲ್ಲ. ಆದರೆ, ಅವರ ಹಿರಿತನ, ಅವರ ಒಂದು ಜಾಣ್ಮೆ, ಪಕ್ಷಕ್ಕೆ ಕೊಟ್ಟಂಥ ಸೇವೆ, ಸಾಮಾಜಿಕವಾಗಿ ಮತ್ತು ಅಭಿವೃದ್ಧಿಗಾಗಿ, ಸಮಾಜದ ಜನತೆಗಾಗಿ ಕೊಟ್ಟಂತಹ ಸೇವೆಗಾಗಿ ಅವರಿಗೆ ಸಭಾಪತಿ ಸ್ಥಾನ ದೊರೆಯಿತು. ಸಮ್ಮಿಶ್ರ ಸರ್ಕಾರ ಅಧಿಕಾರಕ್ಕೆ ಬರುವಾಗ ಮಾನ್ಯ ಸಭಾಪತಿಯವರು ಉಡುಪಿ ಜಿಲ್ಲೆಗೆ ಸಚಿವರಾಗಿ ಆಯ್ಕೆ ಆಗುತ್ತಾರೆ ಎಂಬ ನಿರೀಕ್ಷೆ ಇತ್ತು. ಹಾಗೆಯೇ ಸಚಿವರಾಗಿ ಆಯ್ಕೆ ಆಗದೇ ಇದ್ದಾಗ ಸಹ ಅವರು ಬೇಸರ ಮಾಡಿಕೊಳ್ಳಲಿಲ್ಲ. ಶಾಸಕರಾಗಿ ಅವರ ಕೆಲಸ ಏನಿದೆ ಅದನ್ನು ಮಾಡುತ್ತಿದ್ದರು. ಹಾಗಾಗಿ ಈ ಒಂದು ಅವಕಾಶ ಅವರಿಗೆ ಒದಗಿ ಬಂದಿದೆ ಮತ್ತು ನಮ್ಮ ಪಕ್ಷ ಅವರನ್ನು ಗುರುತಿಸಿಕೊಟ್ಟಿದೆ. ಸಕ್ರಿಯವಾಗಿ ಕೆಲಸ ಮಾಡಿದರೆ, ಜನಪರವಾಗಿ ಕೆಲಸ ಮಾಡಿದರೆ, ಕಾಂಗ್ರೆಸ್ ಪಕ್ಷದಲ್ಲಿ ಹಿರಿಯರನ್ನು ಗುರುತಿಸಿ, ಹಿರಿಯ ಸ್ಥಾನವನ್ನು ನೀಡುತ್ತಾರೆ ಎಂಬ ಮಾತನ್ನು ಮತ್ತೊಮ್ಮೆ ಸಾಬೀತುಪಡಿಸುತ್ತಾ, ಇದಕ್ಕೆ ಮಾನ್ಯ ಪ್ರತಾಪಚಂದ್ರ ಶೆಟ್ಟಿಯವರನ್ನು ಸಭಾಪತಿಗಳಾಗಿ ಆಯ್ಕೆ ಮಾಡಿರುವ ವಿಧಾನವೇ ಸಾಕ್ಷಿಯಾಗಿದೆ. ಹಾಗಾಗಿ ದಕ್ಷಿಣ ಕನ್ನಡ ಜಿಲ್ಲೆಯವರಾದ ಮಾನ್ಯ ಕೋಟ ಶ್ರೀನಿವಾಸ ಪೂಜಾರಿಯವರು ವಿರೋಧ ಪಕ್ಷದ ನಾಯಕರಾಗಿ ಮತ್ತು ಉಡುಪಿ ಜಿಲ್ಲೆಯವರಾದ ಮಾನ್ಯ ಶ್ರೀ ಪ್ರತಾಪಚಂದ್ರ ಶೆಟ್ಟಿಯವರು ವಿಧಾನ ಪರಿಷತ್ತಿನ ಸಭಾಪತಿಗಳಾಗಿ ಇಡೀ ರಾಜ್ಯವನ್ನು ಮ್ಯಾನೇಜ್ ಮಾಡುತ್ತಾರೆ ಎಂದು ಭಾವಿಸಿದ್ದೇನೆ. ಅದು ಎಷ್ಟರಮಟ್ಟಿಗೆ ಸರಿ ಎಂಬುದು ಗೊತ್ತಿಲ್ಲ. ಯಾವಾಗ ಆ ಹುದ್ದೆಗಳನ್ನು ಆ ಜಿಲ್ಲೆಯವರು ಪಡೆದಿದ್ದಾರೆ ಅವರು ಈ ರಾಜ್ಯಕ್ಕೆ ನ್ಯಾಯವನ್ನು ಕೊಟ್ಟಿದ್ದಾರೆ ಎಂದು ಹೇಳುವುದಕ್ಕೆ ಬಯಸುತ್ತೇನೆ. ಅವರ ಹುದ್ದೆಗೆ ಸರಿಯಾದಂತಹ ಘನತೆ-ಗೌರವವನ್ನು ಕಾಪಾಡುವಂಥ ಎಲ್ಲಾ ಶಕ್ತಿ ಮಾನ್ಯ ಸಭಾಪತಿಗಳಾದ ಪ್ರತಾಪಚಂದ್ರ ಶೆಟ್ಟಿಯವರಿಗೆ ಇದೆ. ನಾಲ್ಕು ಬಾರಿ ಶಾಸಕರಾಗಿ ಆಯ್ಕೆಯಾದವರು ಈ ಹಿಂದೆಯೇ ಸಚಿವರಾಗಬಹುದಾಗಿತ್ತು. ಆಗ ಸಹ ಕಾಂಗ್ರೆಸ್ ಪಕ್ಷವೇ ಅಧಿಕಾರದಲ್ಲಿತ್ತು. ತದನಂತರ 2ನೇ ಬಾರಿ ಮತ್ತು 3ನೇ ಬಾರಿ ಸಹ ವಿಧಾನ ಪರಿಷತ್ತಿಗೆ ಸದಸ್ಯರಾಗಿ ಆಯ್ಕೆಯಾದಾಗ ನಾನು ವಿಧಾನ ಪರಿಷತ್ತಿಗೆ ಬರುವುದಿಲ್ಲ ಎನ್ನುವ ಮಾತನ್ನು ಸಹ ಹೇಳಿದ್ದರು. ಆದರೂ ನಮ್ಮ ಕಾಂಗ್ರೆಸ್ ಪಕ್ಷದವರು ತಾವು ಚುನಾವಣೆಗೆ ನಿಂತಿದ್ದರೆ ಗೆಲ್ಲುವ ಸಾಧ್ಯತೆ ಇದೆ, ತಾವೇ ಚುನಾವಣೆಗೆ ನಿಲ್ಲಬೇಕೆಂದು ನಾವೆಲ್ಲರೂ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಒತ್ತಾಯ ಮಾಡಿ, ಮತ್ತೊಮ್ಮೆ ಅವರಿಗೆ ವಿಧಾನ ಪರಿಷತ್ತಿಗೆ ಶಾಸಕರಾಗಿ ಬರುವಂತಹ ಅವಕಾಶವಾಗಿತ್ತು. ತದನಂತರ ಸಭಾಪತಿ ಸ್ಥಾನದ ಗೌರವಕ್ಕೆ ಪಾತ್ರರಾದರು. ನಿನ್ನೆ ದಿವಸ ಸಹ ಮಾನ್ಯ ವಿರೋಧ ಪಕ್ಷದ ನಾಯಕರಾದ ಕೋಟ ಶ್ರೀನಿವಾಸ ಪೂಜಾರಿಯವರು ಕರೆ ಮಾಡಿ, ಸಭಾಪತಿ ಸ್ಥಾನಕ್ಕೆ ಮಾನ್ಯ ಪ್ರತಾಪಚಂದ್ರ ಶೆಟ್ಟಿಯವರು ಆಯ್ಕೆಯಾಗಿರುವುದು ನನಗೆ ಬಹಳ ಸಂತೋಷ ತಂದಿದೆ ಎಂದು ಹೇಳಿದರು. ಬೇರೆ ಬೇರೆ ವಿಚಾರಧಾರೆಯನ್ನು ಪಕ್ಷದಲ್ಲಿ ಹೊಂದಿಕೊಂಡಿದ್ದರೂ ಸಹ ಸಭಾಪತಿ ಸ್ಥಾನಕ್ಕೆ ನಮ್ಮ ಜಿಲ್ಲೆಯವರು ಬರುತ್ತಾರೆ, ಒಬ್ಬರಿಗೊಬ್ಬರು ರಾಜಕೀಯದ ಎಲ್ಲಾ ಬುಡಗಳನ್ನು ಹೊಂದಿಕೊಂಡಿರುವಂಥ ಸಮಾಜದ ಎಲ್ಲಾ ಜನರನ್ನು ಒಟ್ಟಿಗೆ ಕೊಂಡೊಯ್ಯುವಂತಹ ವ್ಯಕ್ತಿತ್ವವನ್ನು ಹೊಂದಿದ್ದಾರೆ. ಇವತ್ತು ಇಡೀ ಸದನ ಸರ್ವಾನುಮತದಿಂದ ಸಭಾಪತಿಗಳಾಗಿ ಆಯ್ಕೆ ಮಾಡಿರುವುದು ನಮ್ಮ ಜಿಲ್ಲೆಗೆ ಸಂದಿರುವಂಥ ಗೌರವ ಎಂದು ಹೇಳುವುದಕ್ಕೆ ಇಷ್ಟಪಡುತ್ತೇನೆ. ಎಲ್ಲಾ ಮತದಾರರಿಂದ ಮಾನ್ಯ ಸಭಾಪತಿಗಳಾದ ಪ್ರತಾಪಚಂದ್ರ ಶೆಟ್ಟಿಯವರಿಗೆ ಅಭಿನಂದನೆಯನ್ನು ಸಲ್ಲಿಸುತ್ತೇನೆ. ಒಳ್ಳೆಯ ರೀತಿಯಲ್ಲಿ ಸದನ ನಡೆದುಕೊಂಡು ಹೋಗಲಿ, ಮಾನ್ಯ ಬಸವರಾಜ ಶಿವಲಿಂಗಪ್ಪ ಹೊರಟ್ಟಿಯವರು 6 ತಿಂಗಳ ಕಾಲ ಸಭಾಪತಿಗಳಾಗಿ ಈ ಸದನವನ್ನು ನಡೆಸಿದ್ದಾರೆ. ನಾನೂ ಸಹ ವಿಧಾನ ಪರಿಷತ್ತಿನ ಸರ್ಕಾರದ ಮುಖ್ಯ ಸಚೇತಕನಾಗಿ ಒಂದೂವರೆ ವರ್ಷಗಳ ಕಾಲ ಕರ್ತವ್ಯ ನಿರ್ವಹಿಸುತ್ತಿದ್ದ ಸಂದರ್ಭದಲ್ಲಿ ಶಾಸಕರುಗಳನ್ನು, ಸಚಿವರುಗಳನ್ನು ಸದನಕ್ಕೆ ಕರೆದುಕೊಂಡು ಬರುವಂಥದ್ದು ಹಾಗೂ ಸದನವನ್ನು ನಡೆಸುವಂಥದ್ದು ಎಷ್ಟು ಕಷ್ಟದ ಕೆಲಸ ಎಂಬುದು ನನಗೂ ಗೊತ್ತಿದೆ. ಏಕೆಂದರೆ, ನಾವೆಲ್ಲರೂ ಇಲ್ಲಿ ಸರಿಸಮಾನರು. ಹಾಗಾಗಿ ಯಾರನ್ನೂ ಸಹ ಕುಳಿತುಕೊಳ್ಳಲೇಬೇಕು ಎಂದು ಹೇಳುವುದಕ್ಕೆ ಯಾರಿಗೂ ಸಾಧ್ಯವಿಲ್ಲ. ಅದರ ಮಧ್ಯೆಯೂ ಸಹ ನಮ್ಮ ಚಾಕಚಾಕ್ಯತೆಯನ್ನು ಮತ್ತು ಸದನದ ಗೌರವವನ್ನು ಕಾಪಾಡುವುದಕ್ಕೆ ಸದನವನ್ನು ನಡೆಸುವುದಕ್ಕೆ ನಾವೆಲ್ಲರೂ ಶ್ರಮಪಡಬೇಕಾಗುತ್ತದೆ. ಬಹುಶಃ ಮಾನ್ಯ ಬಸವರಾಜ ಶಿವಲಿಂಗಪ್ಪ ಹೊರಟ್ಟಿಯವರು ಸಭಾಪತಿಗಳಾಗಿ 6 ತಿಂಗಳ ಕಾಲ ಈ ಸದನವನ್ನು ಒಳ್ಳೆಯ ರೀತಿಯಲ್ಲಿ ನಡೆಸಿದ್ದಾರೆ. ಅವರಿಗೂ ಕೂಡಾ ಅಭಿನಂದನೆಯನ್ನು ಸಲ್ಲಿಸುತ್ತಾ, ತಮ್ಮ ಕಾಲದಲ್ಲಿ ಆದರೂ ಇ-ವಿಧಾನ್ ಯೋಜನೆ ಜಾರಿಗೆ ಬರಲಿ ಎಂದು ಈ ಸದನದಲ್ಲಿ ಹೇಳುವುದಕ್ಕೆ ಇಚ್ಛಿಸುತ್ತೇನೆ. ಈಗಾಗಲೇ ನಮ್ಮ ದೇಶದಲ್ಲಿರುವ 3-4 ವಿಧಾನ ಪರಿಷತ್ತುಗಳಲ್ಲಿ ಇ-ವಿಧಾನ್ ಯೋಜನೆ ಜಾರಿಗೆ ಬಂದಿದೆ. ಅಂದರೆ paper less ಎಂದು ಕಂಪ್ಯೂಟರ್ ಮುಖಾಂತರವೇ ಸದನದ ಎಲ್ಲಾ ಕಾರ್ಯಕಲಾಪಗಳು ನಡೆಯುವುದಾಗಿದೆ. ಯಾವುದೇ ಒಂದು ಕಾರ್ಯಕಲಾಪಗಳು ಪೇಪರ್ ಮೂಲಕ ನಡೆಯುವುದಿಲ್ಲ. ಇ-ವಿಧಾನ್ ಯೋಜನೆ ಜಾರಿಗೆ ಬರಬೇಕೆಂಬ ಕನಸು ನಮ್ಮ ರಾಜ್ಯದಲ್ಲಿಯೂ ಇದೆ. ಕೇಂದ್ರ ಸಚಿವರಾದ ದಿವಂಗತ ಅನಂತ ಕುಮಾರ್‌ರವರು ಸಂಸದೀಯ ವ್ಯವಹಾರ ಸಚಿವರಾಗಿದಂತಹ ಸಂದರ್ಭದಲ್ಲಿ ನಮ್ಮ

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಕರ್ನಾಟಕ ರಾಜ್ಯಕ್ಕೂ ಸಹ ಇ-ವಿಧಾನ್ ಯೋಜನೆಯನ್ನು ಕಲ್ಪಿಸಿದ್ದಾರೆ. ಹಾಗಾಗಿ ಅದನ್ನು ಆದಷ್ಟು ಬೇಗ ಜಾರಿಗೆ ತಂದು ತಮ್ಮ ಅವಧಿಯಲ್ಲಿ ಇ-ವಿಧಾನ್ ಯೋಜನೆ ಮೂಲಕ ಸಭೆಯ ಕಾರ್ಯಕಲಾಪಗಳು ನಡೆಯುವಂತಾಗಲಿ ಎಂದು ಆಶಿಸುತ್ತಾ, ತಮಗೆ ಶುಭ ಕೋರಿ ಒಳ್ಳೆಯ ಭವಿಷ್ಯ ಸಿಗಲಿ, ಒಳ್ಳೆಯ ಆರೋಗ್ಯ ಸಿಗಲಿ ಮತ್ತು ಸರ್ವರಿಗೂ ನ್ಯಾಯ ದೊರಕಲಿ ಎಂದು ಹೇಳಿ ಅಭಿನಂದನೆಯನ್ನು ಸಲ್ಲಿಸುತ್ತೇನೆ.

**ಡಾ॥ ವೈ.ಎ.ನಾರಾಯಣಸ್ವಾಮಿ(ಶಿಕ್ಷಕರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಈ ದೇಶದ ಅತ್ಯಂತ ಗೌರವಾನ್ವಿತ, ಅತ್ಯಂತ ಹಳೆಯ ಉನ್ನತ ಸ್ಥಾನವಾದ ಸದನದ ಪೀಠವನ್ನು ಹಿರಿಯ ಸದಸ್ಯರಾದ ತಾವು ಇಂದು ಅಲಂಕರಿಸಿದ್ದೀರಿ. ಹಿರಿಯರಾದ ಮಾನ್ಯ ಬಸವರಾಜ ಶಿವಲಿಂಗಪ್ಪ ಹೊರಟ್ಟಿಯವರು ಸಹ ಇಷ್ಟು ದಿವಸ ಸಭಾಪೀಠವನ್ನು ಅಲಂಕರಿಸಿದ್ದರು. ಬಹುಶಃ ತಾವಿಬ್ಬರು ರಾಷ್ಟ್ರದಲ್ಲಿ ವಿಧಾನ ಪರಿಷತ್ತಿನ ಹಿರಿಯ ಸದಸ್ಯರುಗಳಾಗಿದ್ದೀರಿ. ತಾವು 4 ಬಾರಿ ವಿಧಾನ ಸಭೆ ಹಾಗೂ 3 ಬಾರಿ ವಿಧಾನ ಪರಿಷತ್ತಿಗೆ ಆಯ್ಕೆಯಾಗಿ ಅತ್ಯಂತ ಪ್ರಾಮಾಣಿಕವಾಗಿ ಕೆಲಸ ಮಾಡಿಕೊಂಡು ಬಂದಿರುವುದರಿಂದ ನಿಮ್ಮ ಬಗ್ಗೆ ನಮ್ಮೆಲ್ಲರಿಗೂ ಹೆಮ್ಮೆ ಇದೆ. ನಿನ್ನೆ ದಿವಸ ಮಾನ್ಯ ಬಸವರಾಜ ಶಿವಲಿಂಗಪ್ಪ ಹೊರಟ್ಟಿಯವರು ಸಭಾಪತಿಯ ಪೀಠದಲ್ಲಿದ್ದರು. ಇವತ್ತು ತಾವು ಆ ಪೀಠವನ್ನು ಅಲಂಕರಿಸಿದ್ದೀರಿ. ಬಹುಶಃ ಎಲ್ಲೋ ಒಂದು ಕಡೆ ನಿಮ್ಮಿಬ್ಬರ ಹಿರಿತನಕ್ಕೆ, ಪ್ರಾಮಾಣಿಕತೆಗೆ, ಗೌರವಕ್ಕೆ ಈ ಸದನ ಸಾಕ್ಷಿಯಾಗಿದೆ ಎಂದರೆ ತಪ್ಪಾಗುವುದಿಲ್ಲ. ಮೊದಲನೆಯದಾಗಿ ಕಾಂಗ್ರೆಸ್ ಪಕ್ಷದವರು ತಮ್ಮನ್ನು ಸಭಾಪತಿಗಳಾಗಿ ಗುರುತಿಸಿ, ಸಭಾಪತಿ ಸ್ಥಾನಕ್ಕೆ ಆಯ್ಕೆ ಮಾಡಿರುತ್ತಾರೆ. ಈ ಸದನದಲ್ಲಿರತಕ್ಕಂಥ ಎಲ್ಲರಿಗೂ ಮಾರ್ಗದರ್ಶಕರಾಗಿ ಸಭಾಪತಿ ಪೀಠವನ್ನು ಅಲಂಕರಿಸಿದ್ದೀರಿ. ತಮಗೆ ವೈಯಕ್ತಿಕವಾಗಿ ಎಲ್ಲರ ಪರವಾಗಿ ವಿಶೇಷವಾಗಿ ಅಭಿನಂದನೆಯನ್ನು ಸಲ್ಲಿಸುತ್ತಿದ್ದೇನೆ. ಜೊತೆಗೆ ಶುಭವನ್ನು ಕೋರುತ್ತೇನೆ. ಯಾವುದರಲ್ಲಿಯೂ ರಾಜೀ ಮಾಡಿಕೊಳ್ಳುವ ವ್ಯಕ್ತಿತ್ವವನ್ನು ತಾವು ಹೊಂದಿಲ್ಲದಿರುವುದನ್ನು ನಾನೂ ಸಹ ನೋಡಿದ್ದೇನೆ. ಸುಮಾರು 12 ವರ್ಷಗಳ ಕಾಲ ನಾನೂ ಸಹ ಶಾಸಕನಾಗಿ ಕರ್ತವ್ಯವನ್ನು ನಿರ್ವಹಿಸಿದ್ದೇನೆ. ತಾವು ಮತ್ತು ನಾನು ಅರ್ಜಿ ಸಮಿತಿಯಲ್ಲಿ ಸುಮಾರು ವರ್ಷ ಕರ್ತವ್ಯ ನಿರ್ವಹಿಸಿದ್ದೇವೆ. ಯಾವುದೇ ಒಂದು ವಿಚಾರವನ್ನು ತಾವೂ ಹಿಡಿದುಕೊಂಡರೆ,... ನಮ್ಮ ಹಳ್ಳಿ ಭಾಷೆಯಲ್ಲಿ ಹೇಳುವುದಾದರೆ, ಉಡ ಹಿಡಿದ ಹಾಗೆ ಎಂದು ಹೇಳುತ್ತೇವೆ. ಉಡ ಎಂದರೆ, ಹಳೆಯ ಕಾಲದಲ್ಲಿ ಸೈನಿಕರನ್ನು ಗೋಡೆ ದಾಟಿಸುವುದಕ್ಕೆ ಉಡಗಳನ್ನು ಬಳಸುತ್ತಿದ್ದರು ಎಂದು ಹಿಂದಿನ ಕಾಲದವರು ಹೇಳುತ್ತಿದ್ದರು.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

(ಮುಂದು) . . .

**(375) 12-12-2018 SK-BNS/12.10**

(ಸಭಾಪತಿಯವರ ಉಪಸ್ಥಿತಿ )

**ಡಾ. ವೈ.ಎ. ನಾರಾಯಣಸ್ವಾಮಿ (ಮುಂದು):-**ಮಾನ್ಯ ಸಭಾಪತಿಯವರೇ, ತಮ್ಮ ಒಂದು ಪ್ರಶ್ನೆ ಇದ್ದಾಗ, ಅದನ್ನು ತಾರ್ಕಿಕ ಅಂತ್ಯಕ್ಕೆ ಕೊಂಡೊಯ್ಯುವ ಶಕ್ತಿ ಸಾಮರ್ಥ್ಯ ತಮ್ಮಲ್ಲಿ ಇದ್ದುದ್ದನ್ನು ನಾವು ನೋಡಿದ್ದೇವೆ. ಆದ್ದರಿಂದ, ಇವತ್ತು ನನಗೆ ಬಹಳ ಹೆಮ್ಮೆಯಾಗಿದೆ. ತಾವು ಆ ಸ್ಥಾನದಲ್ಲಿ ಕುಳಿತುಕೊಂಡಿರುವುದರಿಂದ ಆ ಸ್ಥಾನದ ಗೌರವ ಹೆಚ್ಚಾಗುತ್ತದೆಂಬ ಭಾವನೆ ಇದೆ. ಕುರ್ಚಿಯಿಂದ ವ್ಯಕ್ತಿಗೆ ಗೌರವ ಬರುವುದಕ್ಕಿಂತ ಹೆಚ್ಚಾಗಿ, ಯಾವ ವ್ಯಕ್ತಿ ಆ ಸ್ಥಾನದಲ್ಲಿ ಕುಳಿತುಕೊಳ್ಳುತ್ತಾರೋ, ಅವರಿಂದ ಆ ಕುರ್ಚಿಗೆ ಗೌರವ ಜಾಸ್ತಿಯಾಗುತ್ತದೆ ಎನ್ನುವ ಮಾತನ್ನು ಮಾನ್ಯ ಎಸ್.ಆರ್. ಪಾಟೀಲ್‌ರವರು ಬಹಳ ಚೆನ್ನಾಗಿ ಉಲ್ಲೇಖ ಮಾಡಿ ಹೇಳಿದರು. ಈ ಸದನದಲ್ಲಿ ಬಹಳಷ್ಟು ಹಿರಿಯರು ಮತ್ತು ಅನುಭವಸ್ಥರು, ಮೇದಾವಿಗಳು ಆ ಸ್ಥಾನವನ್ನು ಅಲಂಕರಿಸಿದ್ದಾರೆ. ಈ ಒಂದು ಸದನಕ್ಕೆ ಬಹಳ ಒಳ್ಳೆಯ ಪರಂಪರೆ ಇದ್ದು, ಈ ಸದನದ ಘನತೆ ಮತ್ತು ಗಾಂಭೀರ್ಯದಿಂದ ನಡೆಸಿಕೊಂಡು ಹೋಗಿರುವ ಉದಾಹರಣೆಗಳನ್ನು ತಾವು ನೋಡಿದ್ದೀರಿ. ಸದನಕ್ಕೆ ಇನ್ನೂ ಹೆಚ್ಚಿನ ಗೌರವ, ಶಕ್ತಿ ಸಾಮರ್ಥ್ಯ ಮತ್ತು ಸೊಬಗು ಸಿಗುತ್ತದೆಂಬ ಭಾವನೆಯನ್ನು ವ್ಯಕ್ತಪಡಿಸುತ್ತೇನೆ. ಇದರಲ್ಲಿ ನಮ್ಮ ಸ್ವಾರ್ಥ ಏನಿಲ್ಲ. ಕಾಂಗ್ರೆಸ್ ಸರ್ಕಾರವೇ ಇದ್ದರೂ ತಾವು ಅಲ್ಲಿ ಕುಳಿತುಕೊಂಡು ಹಾಕಿದ ಪ್ರಶ್ನೆಗಳನ್ನು ನಾವು ಈ ಕಡೆಯಿಂದ ನೋಡುತ್ತಿದ್ದೇವು. ಮಂತ್ರಿಗಳಿಗೆ ಕಿವಿ ಹಿಂಡಿ, ಚಾಟಿ ಬೀಸಿ, ಯಾವ ರೀತಿ ಉತ್ತರ ತೆಗೆದುಕೊಳ್ಳುತ್ತಿದ್ದರೋ, ಅದೇ ರೀತಿಯಾದಂತಹ ಒಂದು ವ್ಯವಸ್ಥೆಯನ್ನು ಮುಂದುವರೆಸಿಕೊಂಡು ಹೋಗುತ್ತೀರೆಂಬ ಭಾವನೆ ಇದೆ. ಇವತ್ತು ವಿಧಾನ ಪರಿಷತ್ತಿನಲ್ಲಿ ವಿರೋಧಪಕ್ಷದವರು minority status ಗೆ ಬಂದು ಬಿಟ್ಟಿದ್ದೇವೆ. ಸರ್ಕಾರದವರು ಬಹಳ ದೊಡ್ಡ ಸಂಖ್ಯೆ ಸದಸ್ಯರುಗಳಿದ್ದಾರೆ. ಆದರೆ ಪ್ರಜಾತಂತ್ರ ವ್ಯವಸ್ಥೆಯಲ್ಲಿ ಇದೆಲ್ಲಾ ಸಹಜ. ಆದರೆ ತಮ್ಮ ಮೇಲೆ ವಿಶೇಷವಾದ ಪ್ರೀತಿ ಕೊಡಿ ಎಂದು ನಾನು ಹೇಳುವುದಕ್ಕೆ ಹೋಗುವುದಿಲ್ಲ. ಸಂಸದೀಯ ವ್ಯವಸ್ಥೆಯನ್ನು ಬಲಗೊಳಿಸುವುದಕ್ಕೆ ವಿರೋಧ ಪಕ್ಷದವರಿಗೆ ವಿಶೇಷವಾಗಿ ಚರ್ಚೆಯಲ್ಲಿ ಹೆಚ್ಚಿನ ಒಂದು ಅವಕಾಶ ಕೊಡುವುದರ ಮುಖಾಂತರ, ಕರ್ನಾಟಕ ರಾಜ್ಯದ ಜನಸಾಮಾನ್ಯರ ಅಭಿವೃದ್ಧಿಗೆ ಸರ್ಕಾರದ ಮುಖಾಂತರ ವಿಶೇಷವಾದ ಒಂದು ಅಡಿಪಾಯವನ್ನು ಹಾಕಬೇಕೆಂದು ತಮ್ಮ ಮೂಲಕ ವಿನಂತಿ ಮಾಡಿಕೊಳ್ಳುತ್ತಾ, ತಮಗೆ ದೇವರು ಶಕ್ತಿ-ಸಾಮರ್ಥ್ಯ ಕೊಡಲಿ ಎಂದು ಕೇಳಿಕೊಳ್ಳುತ್ತಾ, ನಾನು ತಮಗೆ ಶುಭವನ್ನು ಕೋರುತ್ತೇನೆ.

ಮುಂದುವರೆದು, ವಿಶೇಷವಾಗಿ ಮಾನ್ಯ ಬಸವರಾಜ ಹೊರಟ್ಟಿಯವರ ಬಗ್ಗೆ ಹೇಳುವುದಾದರೆ, ನಾವೆಲ್ಲರೂ ಶಿಕ್ಷಕರ ಕ್ಷೇತ್ರದಿಂದ ಬಂದಿದ್ದೇವೆ. ಆದರೆ ನಮಗೆ ಮಾನ್ಯ ಬಸವರಾಜ ಹೊರಟ್ಟಿಯವರು ಮುಖ್ಯೋಪಾಧ್ಯಾಯರು ಇದ್ದಹಾಗೆ. ಸುಮಾರು ಆರು ತಿಂಗಳುಗಳ ಕಾಲ ಹಂಗಾಮಿ ಸಭಾಪತಿಯಾಗಿ

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಬಹಳ ಚೆನ್ನಾಗಿ ಕೆಲಸ ಮಾಡಿದ್ದಾರೆ. ಆದರೆ ನಮಗೆಲ್ಲರಿಗೂ ಮಾನ್ಯ ಬಸವರಾಜ ಹೊರಟ್ಟಿಯವರು ಸಭಾಪತಿಯಾಗಿ ಮುಂದುವರೆಯುತ್ತಾರೆಂಬ ಆಸೆ ಇತ್ತು. ಆದರೆ ಮಾನ್ಯ ಬಸವರಾಜ ಹೊರಟ್ಟಿಯವರ ಜಾಗದಲ್ಲಿ ತಾವು ಬಂದು ಕುಳಿತುಕೊಂಡಿದ್ದು, ಅಷ್ಟೇ ಸಂತೋಷವಾಗಿದೆ. ತಾವಿಬ್ಬರೂ ಸಮಕಾಲೀನರು ಮತ್ತು ಸಮರ್ಥರು ಹಾಗೂ ಹಿರಿಯರು. ಮಾನ್ಯ ಬಸವರಾಜ ಹೊರಟ್ಟಿಯವರು ಈ ಸದನದಲ್ಲಿ ಹಲವಾರು ಮುಖ್ಯಮಂತ್ರಿಗಳು ಮತ್ತು ಹಲವಾರು ಜನ ವಿರೋಧ ಪಕ್ಷದ ನಾಯಕರುಗಳ ವಿಶೇಷವಾದ ಚರ್ಚೆಗಳನ್ನು ತಾವು ನೋಡಿಕೊಂಡು ಬಂದಿದ್ದಾರೆ. ಆದ್ದರಿಂದ, ಈ ಸದನವನ್ನು ಆರು ತಿಂಗಳುಗಳ ಕಾಲ ಉತ್ತಮವಾಗಿ ನಡೆಸಿಕೊಂಡು ಬಂದಿದ್ದರು. ಮಾನ್ಯ ಬಸವರಾಜ ಹೊರಟ್ಟಿಯವರಿಗೆ ನಮ್ಮ ಮೇಲೆ ಬಹಳ ಪ್ರೀತಿ. ನಾವು ಜಾಸ್ತಿ ಮಾತನಾಡಿದಾಗ, ನಮ್ಮನ್ನೆಲ್ಲಾ ಏಕವಚನದಲ್ಲಿ ಕರೆದು, ಬೈದು ಕೂರಿಸುವ ಶಕ್ತಿ-ಸಾಮರ್ಥ್ಯ ಅವರಿಗೆ ಇತ್ತು.  ನಾನು ಅದನ್ನು ಇಲ್ಲವೆಂದು ಹೇಳಲಿಲ್ಲ. ಆ ಪ್ರೀತಿಯನ್ನು ವ್ಯಕ್ತಪಡಿಸಿದಂತಹ ಮಾನ್ಯ ಬಸವರಾಜ ಹೊರಟ್ಟಿಯವರಿಗೆ ವಿಶೇಷವಾದ ಧನ್ಯವಾದಗಳನ್ನು ಅರ್ಪಿಸುತ್ತೇನೆ. ಮಾನ್ಯ ಸಭಾಪತಿಯವರೇ, ತಮಗೆ ನಮ್ಮೆಲ್ಲರ ಸಂಪೂರ್ಣ ಸಹಕಾರ ಇರುತ್ತದೆ. ಈ ಸದನದಲ್ಲಿ ನಾವೇ ಮಾಡಿದಂತಹ ನಿಯಮಾವಳಿಗಳನ್ನು ಉಲ್ಲಂಘನೆ ಮಾಡದೇ, ಅದರ ಇತಿ-ಮಿತಿಯಲ್ಲಿ ಈ ಸದನವನ್ನು ನಡೆಸುವ ಶಕ್ತಿ-ಸಾಮರ್ಥ್ಯವನ್ನು ಆ ದೇವರು ಕೊಡಲಿ ಎಂದು ಕೇಳುತ್ತೇನೆ. ತಮಗೆ ನಮ್ಮೆಲ್ಲರ ಸಂಪೂರ್ಣ ಸಹಕಾರ ಕೊಡುತ್ತೇವೆಂಬ ಮಾತನ್ನು ಹೇಳುತ್ತಾ ಹಾಗೂ ತಮಗೆ ಶುಭ ಕೋರುತ್ತಾ, ನನ್ನ ಎರಡು ಮಾತುಗಳನ್ನು ಮುಗಿಸುತ್ತೇನೆ. ನಮಸ್ಕಾರ.

**ಶ್ರೀ ಹೆಚ್.ಎಂ. ರಮೇಶ್ ಗೌಡ (ವಿಧಾನ ಸಭಾ ಕ್ಷೇತ್ರ):**-ಮಾನ್ಯ ಸಭಾಪತಿಯವರೇ, ಇವತ್ತು ತಾವು ಸರ್ವಾನುಮತದಿಂದ ಅವಿರೋಧವಾಗಿ ಆಯ್ಕೆಯಾಗಿದ್ದೀರಿ. ಮೊದಲನೆಯದಾಗಿ, ತಮಗೆ ಹೃತ್ಪೂರ್ವಕವಾದ ವಂದನೆಗಳನ್ನು ಸಲ್ಲಿಸುವುದಕ್ಕೆ ಇಷ್ಟಪಡುತ್ತೇನೆ. ಅದೇ ರೀತಿಯಾಗಿ ಮಾನ್ಯ ಬಸವರಾಜ ಹೊರಟ್ಟಿಯವರು ನಿನ್ನೆಯ ತನಕ ಈ ಸದನದಲ್ಲಿ ಹಂಗಾಮಿ ಸಭಾಪತಿಯಾಗಿ ಕೆಲಸ ಮಾಡಿದ್ದರು. ಇವತ್ತು ಅವರು ಆಯ್ಕೆಯಾಗದೇ ಇರುವುದು ಸಹ ನಮಗೆ ಬಹಳ ನೋವಿನ ಸಂಗತಿಯಾಗಿದೆ. ತಾವು ಕೆಳಮನೆ ಮತ್ತು ಮೇಲ್ಮನೆಯಲ್ಲಿಯೂ ಸಹ ಕೆಲಸ ಮಾಡಿದ್ದೀರಿ. ತಮಗೆ ಎರಡು ಮನೆಗಳ ಅನುಭವ ಇದೆ, ಅದೇ ರೀತಿ ಈ ರಾಜ್ಯದ ಪ್ರಜ್ಞಾವಂತ, ಪ್ರತಿಭಾವಂತ ಮತದಾರರು ಎಂದು ನಾವು ಯಾರನ್ನು ಕರೆಯುತ್ತೇವೆ, ಅಂತಹ ಪ್ರಜ್ಞಾವಂತ ಮತದಾರರಿಂದ ಮಾನ್ಯ ಬಸವರಾಜ ಹೊರಟ್ಟಿಯವರು ಏಳು ಬಾರಿ ಆಯ್ಕೆಯಾಗಿದ್ದಾರೆ. ಯಾವ್ಯಾವ ರಾಜ್ಯದಲ್ಲಿ ಮೇಲ್ಮನೆಗಳಿದ್ದು, ಆ ಎಲ್ಲಾ ರಾಜ್ಯಗಳಲ್ಲಿಯೂ ಮೇಲ್ಮನೆಗೆ ಪ್ರವೇಶವನ್ನು ಪಡೆದವರಲ್ಲಿ ಮಾನ್ಯ ಬಸವರಾಜ ಹೊರಟ್ಟಿಯವರು ಮೊದಲನೆಯವರಾಗಿ ಕಾಣುತ್ತಿದ್ದಾರೆ. ಈ ಹಿಂದೆಯೂ ಸಹ ಅವರು ಏಳನೇ ಬಾರಿ ಗೆದ್ದಂತಹ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಸಂದರ್ಭದಲ್ಲಿ, ಅವರ ಅಭಿನಂದನೆ ಕಾರ್ಯಕ್ರಮಕ್ಕೆ ನಾವು ಹೋಗಿದ್ದೆವು. ಮಾನ್ಯ ಬಸವರಾಜ ಹೊರಟ್ಟಿ ಬಗ್ಗೆ ಸ್ಪೀಕರ್‌ರಾದ ಮಾನ್ಯ ರಮೇಶಕುಮಾರ್‌ರವರು ತಾವೆಲ್ಲ ಸೋತು-ಗೆದ್ದು, ಗೆದ್ದು-ಸೋತು ಬಂದಿದ್ದೇವೆಂಬ ಮಾತನ್ನು ಆ ದಿನ ಅಭಿನಂದನಾ ಸಮಾರಂಭದಲ್ಲಿ ಹೇಳಿದ್ದರು. ಆದರೆ ಮಾನ್ಯ ಬಸವರಾಜ ಹೊರಟ್ಟಿಯವರ ಅಭಿನಂದನಾ ಕಾರ್ಯಕ್ರಮದಲ್ಲಿ ಇಡೀ ಕುಟಂಬವೇ ಅಲ್ಲಿತ್ತು. ಮಾನ್ಯ ಬಸವರಾಜ ಹೊರಟ್ಟಿಯವರ ಮತ್ತು ನಾವೆಲ್ಲರೂ ಆ ಭಾಗದಲ್ಲಿ ರಾಜಕಾರಣ ಮಾಡುತ್ತಿದ್ದೇವೆ. ರಾಜಕಾರಣ ಮಾಡಬೇಕಾದರೆ, ನಾವೆಲ್ಲರೂ ಬಹಳ ಒಳ್ಳೆಯವರಿದ್ದೇವೆ. ಆದರೆ ನಮಗಿಂತ ಒಳ್ಳೆಯವರು ಎಂದು ತಿಳಿದುಕೊಂಡು, ಅದರಲ್ಲೂ ಪ್ರಜ್ಞಾವಂತ ಮತದಾರರು ಮಾನ್ಯ ಬಸವರಾಜ ಹೊರಟ್ಟಿಯವರನ್ನು 'ಏಳು ಬಾರಿ' ಆಯ್ಕೆ ಮಾಡಿ ಕಳುಹಿಸಿದ್ದಾರೆ. ಇಪ್ಪತ್ತೊಂದನೇ ಶತಮಾನದಲ್ಲಿ ನಿಜಕ್ಕೂ ಅವರು 'ಪುಣ್ಯವಂತರು' ಎಂಬ ಮಾತನ್ನು ಮಾನ್ಯ ರಮೇಶಕುಮಾರ್‌ರವರು ಹೇಳಿದರು. ಇಡೀ ಸದನದಲ್ಲಿ ಅವರಿಗೆ ಪ್ರತಿಯೊಬ್ಬರು ಚಪ್ಪಾಳೆ ತಟ್ಟಿ, ನೋಡಿ ಆನಂದ ಪಡುತ್ತಿದ್ದರು.

ಮಾನ್ಯ ಸಭಾಪತಿಯವರೇ, ಈ ಸದನದ ಎಲ್ಲಾ ಹಿರಿಯ ಸದಸ್ಯರು ಮಾತನಾಡುತ್ತಿರಬೇಕಾದರೆ, ತಮ್ಮನ್ನು ಮೀನಿಗೆ ಹೋಲಿಕೆ ಮಾಡುತ್ತಿದ್ದರು. ತಾವು ರಾಜಕಾರಣದಲ್ಲಿ ಬಹಳ ಸ್ವಚ್ಛತೆಯಿಂದ ಬಂದಿದ್ದೀರಿ. ಒಂದೇ ಒಂದು ಕಪ್ಪು ಚುಕ್ಕೆ ಇಲ್ಲ ಎನ್ನುವ ಮಾತನ್ನು ಮಾನ್ಯ ಸದಸ್ಯರೆಲ್ಲರೂ ಕೂಡ ಅವರವರ ಅಭಿಪ್ರಾಯವನ್ನು ವ್ಯಕ್ತಪಡಿಸುತ್ತಿದ್ದರು. ಇವತ್ತು ನಾವು ಇಪ್ಪತ್ತೊಂದನೇ ಶತಮಾನದಲ್ಲಿ ಮೇಲ್ಮನೆಯಲ್ಲಿರುವ ಮಾನ್ಯ ಹಿರಿಯ ಸದಸ್ಯರ ಜೊತೆಗೆ ನಾನೊಬ್ಬ ಕಿರಿಯ ಸದಸ್ಯನಾಗಿದ್ದೇನೆ. ಮಾನ್ಯ ಮಾಜಿ ಪ್ರಧಾನ ಮಂತ್ರಿಗಳು, ಮಾನ್ಯ ಮುಖ್ಯಮಂತ್ರಿಗಳಾದ ಕುಮಾರಸ್ವಾಮಿ ಮತ್ತು ಮಾನ್ಯ ರೇವಣ್ಣನವರ ಆಶೀರ್ವಾದದಿಂದ ಇವತ್ತು ಮೇಲ್ಮನೆ ಪ್ರವೇಶ ಮಾಡಿದ್ದೇನೆ. ನನ್ನ ಮೇಲೆಯೂ ಸಹ ಬಹಳ ಜವಾಬ್ದಾರಿ ಇದೆ. ಅವರಿಗೆ ಒಳ್ಳೆಯ ಹೆಸರನ್ನು ತರಬೇಕೆಂಬ ಭಾವನೆ ಮತ್ತು ನಿರೀಕ್ಷೆಯನ್ನು ಇಟ್ಟು ಈ ಮೇಲ್ಮನೆಗೆ ಪ್ರವೇಶ ಮಾಡಿದ್ದೇನೆ. ಆದರೆ ಇವತ್ತಿನ ದಿವಸ ಈ ಮೇಲ್ಮನೆಗೆ ತಾವು ಏನು ಪ್ರವೇಶ ಮಾಡಿದ್ದೀರಿ. ಅಂದಿನ ದಿನಗಳಲ್ಲಿ ಮಾಧ್ಯಮಗಳು ಇಷ್ಟೊಂದು ಪ್ರಭಾವಶಾಲಿಯಾಗಿರಲಿಲ್ಲ. ಅಂದಿನ ಮಾಧ್ಯಮ ಬೇರೆ, ಇಂದಿನ ಮಾಧ್ಯಮಗಳೇ ಬೇರೆಯಾಗಿದೆ. ಇಂದಿನ ಮಾಧ್ಯಮ ಹೇಗಿದೆ ಎಂದು ಹೇಳಿದರೆ, T.R.P. (Television Rating Point) ಗೋಸ್ಕರ ಯಾರ ಮೇಲೆ ಬೇಕಾದರೂ ಕಪ್ಪು ಚುಕ್ಕೆಯನ್ನು ಇಡುವುದಕ್ಕೆ ಮೊದಲನೆಯದಾಗಿ ಪ್ರಯತ್ನ ಪಡುತ್ತಾರೆ. ಇದನ್ನು ಏಕೆಂದು ಹೇಳಿದರೆ, ಯಾರ ಮೇಲೆ ಆದರೂ ಆಪಾದನೆಯನ್ನು ಮಾಡುತ್ತಾರೆ. ಅವರ ಬಗ್ಗೆ ಕೂಲಂಕಷವಾಗಿ ಪರಿಶೀಲನೆ ಮಾಡುವುದಿಲ್ಲ. ವ್ಯಕ್ತಿಗತವಾಗಿ ಏನೂ ಬೇಕಾದರೂ ಇಂದಿನ ಮಾಧ್ಯಮ, ಪ್ರಿಂಟ್ ಮೀಡಿಯಾ ಇರಬಹುದು, ಎಲೆಕ್ಟ್ರಾನಿಕ್ ಮೀಡಿಯಾ ಇರಬಹುದು. ಇವತ್ತು ತಮ್ಮ ಮೇಲೆ ಏನೊಂದು ಕಪ್ಪು ಚುಕ್ಕೆ ಇಲ್ಲದೇ, ಇಡೀ ಸದನ

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ತಮ್ಮನ್ನು ಅಭಿನಂದಿಸುತ್ತಿರುವುದು ನಿಜಕ್ಕೂ ಸಹ ಅಭಿನಂದನಾರ್ಹವಾದದ್ದು. ಆದರೆ, ತಾವು ಈ ಸದನದಲ್ಲಿ ಸಭಾಪತಿಯಾಗಿರುವುದು ನಮಗೆ ಎಷ್ಟು ಸಂತೋಷವಿದೆಯೋ, ಮಾನ್ಯ ಬಸವರಾಜ ಹೊರಟ್ಟಿಯವರು ಆಯ್ಕೆಯಾಗಿಲ್ಲವೆಂಬುದು ನಮಗೆ ವ್ಯಕ್ತಿಗತವಾಗಿ ಬಹಳ ನೋವಿದೆ. ಆದರೆ ಮುಂದಿನ ದಿನಗಳಲ್ಲಿ ಮಾನ್ಯ ಬಸವರಾಜ ಹೊರಟ್ಟಿಯವರನ್ನು ಮಂತ್ರಿಗಳಾಗಿ ನೋಡಬೇಕು ಎನ್ನುವುದು ನಮ್ಮ ಆಸೆ ಆಗಿದೆ. ಈ ಸದನದ ಮಾನ್ಯ ಸದಸ್ಯರೆಲ್ಲ ಆಸೆ ಕೂಡ ಆಗಿದೆ ಅವರಿಗೆ ಬೇಗ ಮಂತ್ರಿ ಸ್ಥಾನವನ್ನು ಭಗವಂತನು ಕರುಣಿಸಲಿ ಎಂದು ಹೇಳುತ್ತೇನೆ. ಈ ಸಂದರ್ಭದಲ್ಲಿ ನನಗೆ ಎರಡು ಮಾತನಾಡಲು ಅವಕಾಶ ಮಾಡಿಕೊಟ್ಟಿದ್ದಕ್ಕಾಗಿ ತಮ್ಮಗೆಲ್ಲರಿಗೂ ಕೈಮುಗಿದು ವಂದಿಸುತ್ತಾ, ನನ್ನ ಮಾತನ್ನು ಮುಗಿಸುತ್ತೇನೆ.

**ಶ್ರೀ ಎಸ್. ರವಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಇವತ್ತು ಸಭಾಪತಿಯವರ ಸ್ಥಾನದಲ್ಲಿ ತಮ್ಮನ್ನು ನೋಡುವುದಕ್ಕೆ ಬಹಳ ಸಂತೋಷಕರವಾದ ವಿಚಾರ. ತಾವು ನಾಲ್ಕು ಬಾರಿ ಕೆಳಮನೆಯ ಸದಸ್ಯರಾಗಿ ಹಾಗೂ ಮೂರು ಬಾರಿ ಮೇಲ್ಮನೆಯ ಸದಸ್ಯರಾಗಿ ಸೇವೆಯನ್ನು ಮಾಡಿ ಅಪಾರ ಅನುಭವವುಳ್ಳಂತಹವರು. ನಾನು ಕಾಲೇಜು ದಿನಗಳಲ್ಲಿ ವ್ಯಾಸಂಗ ಮಾಡುತ್ತಿರುವಾಗ ಪತ್ರಿಕೆಗಳನ್ನು ಓದುತ್ತಿದ್ದೆ. ಆಗ ಎಲೆಕ್ಟ್ರಾನಿಕ್ ಮೀಡಿಯಾ ಇರಲಿಲ್ಲ. ಅದರಲ್ಲಿಯೂ ವಿಶೇಷವಾಗಿ "ಪ್ರಜಾವಾಣಿ' ಪತ್ರಿಕೆಯಲ್ಲಿ ಸದನದ ನುಡಿಯ ಬಗ್ಗೆ ಚುಟುಕು ಬರುತ್ತಿತ್ತು. ಅಂದಿನ ದಿನ ಸುಮಾರು 7-8 ಜನ ಸದಸ್ಯರ ಬಗ್ಗೆ ಹೈಲೈಟ್ಸ್ ಬಂದಿತ್ತು. ವಿಧಾನ ಪರಿಷತ್ತು ಮತ್ತು ವಿಧಾನ ಸಭೆಯ ಚುಟುಕು ಮಾತುಗಳು ಎಂದು ನಾಲ್ಕೈದು ಪದಗಳು ಅಥವಾ ವಾಕ್ಯಗಳಲ್ಲಿ ಬರುತ್ತಿತ್ತು. ಸದನದ ಬಗ್ಗೆ ಚುಟುಕು ಪದಗಳನ್ನು ಓದುವುದಕ್ಕೆ ಬಹಳ ಆಕರ್ಷಣೆಯಾಗುತ್ತಿತ್ತು. ಅದರಲ್ಲಿ ವಾರಕ್ಕೆ ಎರಡರಿಂದ ಮೂರು ಸಲ ಮಾನ್ಯ ಪ್ರತಾಪಚಂದ್ರ ಶೆಟ್ಟಿಯವರದೇ ಇರುತ್ತಿತ್ತು. ತಮ್ಮ ಮೊನಚಾದ ಮಾತಿನಿಂದ ಸರ್ಕಾರದ ಗಮನ ಸೆಳೆಯುತ್ತಿದ್ದರು. ಆಗ ತಾವು ಕೆಳಮನೆಯಲ್ಲಿದ್ದಂತಹ ಸಂದರ್ಭದಲ್ಲಿ ಆಗಿನಿಂದಲೂ ನಾನು ಒಂದು ತರಹ ತಮ್ಮ ಅಭಿಮಾನಿ. ಆಗ ನಾನು ತಮ್ಮನ್ನು ನೋಡಿರಲಿಲ್ಲ. ಯುವ ಕಾಂಗ್ರೆಸ್ ಮತ್ತು ವಿದ್ಯಾರ್ಥಿ ಕಾಂಗ್ರೆಸ್‌ನಲ್ಲಿದ್ದರೂ ಕೂಡ ತಮ್ಮ ಮಾತು ವಿರೋಧಪಕ್ಷದಲ್ಲಿರುವಂತಹ ಸಂದರ್ಭದಲ್ಲಿಯೂ ಆ ಸರ್ಕಾರದ ಗಮನವನ್ನು ಸೆಳೆಯಲು ತಾವು ಬಳಸುವಂತಹ ಪದಗಳು ಅಂದಿನ ದಿನವೇ ನಮಗೆ ಒಂದು ರೀತಿಯಾದಂತಹ ಪ್ರಭಾವವನ್ನು ಬೀರಿತ್ತು. ನಾನು ಬಂದಂತಹ ಸಂದರ್ಭದಲ್ಲಿ ತಮ್ಮನ್ನು ನೋಡಬೇಕೆಂಬ ಕುತೂಹಲ ನಮ್ಮಲ್ಲಿ ಸಹಜವಾಗಿತ್ತು. ನಾನು ಪ್ರಥಮವಾಗಿ ಈ ಗೌರವಾನ್ವಿತ ಪರಿಷತ್ತಿನ ಸದಸ್ಯನಾಗಿ ಬಂದಂತಹ ಸಂದರ್ಭದಲ್ಲಿ, ತಮ್ಮ ಜೊತೆ ಅರ್ಜಿಗಳ ಸಮಿತಿಯಲ್ಲಿಯೂ ಕೂಡ ಸುಮಾರು ಎರಡು ವರ್ಷಗಳ ಕಾಲ ಒಟ್ಟಾರೆಯಾಗಿ ಕೆಲಸ ಮಾಡಿದ್ದೇನೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

(ಮುಂದು..)

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

(376)12.12.2018,12.20,ಟಿಸಿಹೆಚ್/ಬಿಎನ್‌ಎಸ್ (ಸಭಾಪತಿಯವರ ಉಪಸ್ಥಿತಿ)

**ಶ್ರೀ ಎಸ್.ರವಿ (ಮುಂದು)**

ಆಗ ನಾನು ತಮ್ಮನ್ನು ಹತ್ತಿರದಿಂದ ನೋಡಿದಂತಹ ಸಂದರ್ಭದಲ್ಲಿ ತಮ್ಮ ವ್ಯಕ್ತಿತ್ವವನ್ನು ಅಭ್ಯಾಸ ಮಾಡುವುದಕ್ಕೆ ಹಾಗೂ ಅರ್ಥ ಮಾಡಿಕೊಳ್ಳುವುದಕ್ಕೆ ಸ್ವಲ್ಪಮಟ್ಟಿಗೆ ಸಾಧ್ಯವಾಯಿತು. ತಾವು ಮಾತನಾಡುವಂತಹ ಸಂದರ್ಭದಲ್ಲಿ, ಕಳೆದ ಬಾರಿ ತಾವು ಚುನಾವಣೆಗೂ ಸಹ ಸ್ಪರ್ಧಿಸುವುದಿಲ್ಲವೆಂದು ಹೇಳಿದ್ದಿರಿ. 'ನಾನು ಈ ಬಾರಿ ಸ್ಥಳೀಯ ಸಂಸ್ಥೆಗಳ ಚುನಾವಣೆಯಲ್ಲಿ ಸ್ಪರ್ಧಿಸುವುದಿಲ್ಲ, ಇಲ್ಲಿಯವರೆಗೆ ನೀವು ನನಗೆ ಸಹಕಾರ ಕೊಟ್ಟಿದ್ದಕ್ಕೆ ತಮಗೆಲ್ಲರಿಗೂ ಅಭಿನಂದನೆಗಳನ್ನು ಸಲ್ಲಿಸುತ್ತಿದ್ದೇನೆ' ಎಂದು ಮಾನ್ಯ ಎಲ್ಲಾ ಸದಸ್ಯರಿಗೂ ಹಾಗೂ ದಕ್ಷಿಣ ಕನ್ನಡ ಜಿಲ್ಲೆಯ ಮತಕ್ಷೇತ್ರದ ಎಲ್ಲಾ ಮತದಾರರಿಗೂ ಕೂಡ ತಾವು ಪತ್ರವನ್ನು ಬರೆದಿದ್ದೀರಿ. ಈ ವಿಷಯವನ್ನು ಪಕ್ಷದ ಹಿರಿಯ ವರಿಷ್ಠರ ಗಮನಕ್ಕೆ ತಂದು ಯಾರಾದರೂ ಹೊಸಬರಿಗೆ ಅವಕಾಶ ಕೊಡಿ ಎಂದು ಸ್ಪಷ್ಟವಾಗಿ ಸ್ವಯಂ ಪ್ರೇರಿತರಾಗಿ ತೀರ್ಮಾನ ತೆಗೆದುಕೊಂಡಿದ್ದನ್ನು ಸ್ವತಃ ನಾವೆಲ್ಲಾ ಗಮನಿಸಿದ್ದೇವೆ. ಆದರೆ ಪಕ್ಷದ ಸ್ಥಳೀಯ ಮುಖಂಡರು ಹಾಗೂ ನಮ್ಮ ಕಾರ್ಯಕರ್ತರು ನೀವೇ ಈ ಕ್ಷೇತ್ರದಲ್ಲಿ ಚುನಾವಣೆಗೆ ಸ್ಪರ್ಧಿಸಬೇಕೆಂದು ತಮ್ಮ ಮೇಲೆ ಒತ್ತಡ ತಂದಿದ್ದರಿಂದ, ನೀವು ಮತ್ತೆ ವಿಧಾನ ಪರಿಷತ್‌ನ ಸದಸ್ಯರಾಗಿ ಪುನರ್ ಆಯ್ಕೆ ಆಗಿದ್ದೀರಿ.

ಇದಾದ ನಂತರ, ನಾವು ತಮ್ಮನ್ನು ರೇಗಿಸುವುದಕ್ಕಾದರೂ ' ಸರ್, ಯಾರೆಲ್ಲಾ ಸದಸ್ಯರು ಸಚಿವರು ಆಗಿದ್ದಾರೆ. ಯಾರೆಲ್ಲಾ ಸದಸ್ಯರು ಮಂಡಳಿಯ ಅಧ್ಯಕ್ಷರು ಕೂಡ ಆಗಿದ್ದಾರೆ. ತಾವು ಯಾವ ಸ್ಥಾನವನ್ನು ಪಡೆದುಕೊಳ್ಳುತ್ತಿಲ್ಲ. ತಾವು ಯಾವುದಾದರೂ ಸ್ಥಾನವನ್ನು ಕೊಡಬೇಕೆಂದು ಕೇಳಬೇಕು' ಎಂದು ನಾವೆಲ್ಲರೂ ಚರ್ಚೆಯ ಸಂದರ್ಭದಲ್ಲಿ ಮಾಡಿದ್ದೇವೆ. ಅದಕ್ಕೆ ತಾವು ಹೇಳುತ್ತಿದ್ದುದು ಇಷ್ಟೆ. ನನಗೆ ಈಗಲೂ ಅದು ಕಣ್ಣಿಗೆ ಕಟ್ಟಿದಂತಿದೆ. 'ಇಲ್ಲಾ, ನಾನು ಕೇಳುವುದೇನೋ ಸರಿ. ನಾನು ಕೇಳಿದ್ದಕ್ಕೆ ಅವರು ಆ ಸ್ಥಾನವನ್ನು ಕೊಟ್ಟರೆ ಪರವಾಗಿಲ್ಲ. ಆದರೆ, ನಾನು ಕೇಳಿದರೂ ಆ ಸ್ಥಾನ ದೊರಕಲಿಲ್ಲವೆಂದರೆ, ನನ್ನ ಮನಸ್ಸು ಕೂಡ ಕೊರಗುತ್ತದೆ. ಮತ್ತೆ ನಾನು ಯಾರ ಬಳಿ ಕೇಳುತ್ತೇನೆಯೋ ಅವರು, ಮಾನ್ಯ ಶ್ರೀ ಕೆ.ಪ್ರತಾಪಚಂದ್ರ ಶೆಟ್ಟಿಯವರಿಗೆ ಒಂದು ಸ್ಥಾನ ಕೊಡುವುದಕ್ಕೆ ಆಗಲಿಲ್ಲ' ಎಂದು ಅವರ ಮನಸ್ಸಿಗೂ ನೋವಾಗುತ್ತದೆ. ಅದಕ್ಕೆ ನಾನು ಕೇಳುವುದೂ ಬೇಡ; ಆ ಸ್ಥಾನದಲ್ಲಿ ನಾನು ಇರುವುದೂ ಬೇಡ. ಅದಕ್ಕಾಗಿ ಸುಮ್ಮನೆ ಇದ್ದುಬಿಡುವುದೇ ಸರಿ' ಎಂದು ತಾವು ಹೇಳುತ್ತಿದ್ದಿರಿ. ಅಂತಹ ಒಂದು ವ್ಯಕ್ತಿತ್ವವನ್ನು ತಾವು ಹೊಂದಿದ್ದೀರಿ. ನನಗೆ ತಿಳಿದಮಟ್ಟಿಗೆ ತಾವು ಯಾವುದೇ ಸ್ಥಾನಮಾನಗಳನ್ನು ಯಾವತ್ತೂ ಬಯಸಿದವರಲ್ಲ. ಉದಾಹರಣೆಗೆ ನಾನು ಮತ್ತು ಶ್ರೀ ಹೆಚ್.ಎಂ.ರೇವಣ್ಣನವರು ಜೊತೆಯಲ್ಲಿ ಕುಳಿತುಕೊಂಡು ವಿಧಾನ ಪರಿಷತ್‌ಗೆ ಸಭಾಪತಿಯವರ ಆಯ್ಕೆ ಮಾಡಬೇಕೆಂದು ನಮ್ಮ ನಾಯಕರು

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಇನ್ನೂ ಸೂಚನೆಯನ್ನು ಕೊಡಲಿಲ್ಲ. ಆದ್ದರಿಂದ ಯಾರಾದರೊಬ್ಬರನ್ನು ಆಯ್ಕೆ ಮಾಡಬೇಕಾಗಿತ್ತು. ನಾಮಪತ್ರ ಕೂಡ ಜೊತೆಯಲ್ಲಿ ಇತ್ತು. ಅದಕ್ಕಾಗಿ ಮಾನ್ಯ ಶ್ರೀ ಕೆ.ಪ್ರತಾಪಚಂದ್ರ ಶೆಟ್ಟಿಯವರನ್ನು ಪಕ್ಕದಲ್ಲಿ ಕೂರಿಸಿಕೊಂಡು ತಾವು ದಯಮಾಡಿ ನಾಮಪತ್ರ ಸಲ್ಲಿಸಿ, ನಾವು ಸೂಚಕರಾಗಿ ಸಹಿ ಹಾಕುತ್ತೇವೆ ಎಂದು ತಿಳಿಸಿ ತಾವು ತಯಾರಾಗಿ ತಮ್ಮ ಕೈಯಲ್ಲಿ ನಾಮಿನೇಷನ್ ಫೈಲ್ ಮಾಡಿಸೋಣ ಎಂದು ತಿಳಿಸಲಾಗಿತ್ತು. ಇದಾದನಂತರ, ಪಕ್ಷ ಏನು ತೀರ್ಮಾನ ತೆಗೆದುಕೊಳ್ಳುತ್ತದೆ ಅದರಂತೆ ವಾಪಸ್ಸು ವಿತ್‌ಡ್ರಾ ಮಾಡಿಕೊಳ್ಳೋಣ ಎಂದಾಗ, ಅದಕ್ಕೆ ಅವರು 'ಎಲ್ಲಾದರೂ ಉಂಟೆ, ಎಲ್ಲಾದರೂ ಉಂಟೆ; ನಾನು ಬಿದ್ದು ಹೋಗುತ್ತೇನೆ ಅಷ್ಟೆ, ಎಂದರು. ಅವರು ಅದಕ್ಕೆ ತಯಾರಿಯೇ ಇರಲಿಲ್ಲ. ವಿಶೇಷವಾಗಿ ನನಗೆ ತಿಳಿದಿರುವಂತೆ, ಇವತ್ತು ಅವರು ಅವರ ಆಪ್ತರ ಮದುವೆ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳಲು ರೈಲಿನಲ್ಲಿ ಟಿಕೆಟ್ ಬುಕಿಂಗ್ ಮಾಡಿಸಿ ಬೆಂಗಳೂರಿಗೆ ತೆರಳಬೇಕಾಗಿತ್ತು. ಅವರು ಅಲ್ಲಿಗೆ ಹೋಗುವುದಕ್ಕೆ ತಯಾರಾಗಿದ್ದರು. ಅಂದರೆ, ಅವರಿಗೆ ನಿರೀಕ್ಷೆ ಮಾಡದಿರುವಂತಹ ಸ್ಥಾನ ದೊರಕಿದೆ. ನನಗೆ ತಿಳಿದಿರುವಂತೆ ಅವರು 7 ಬಾರಿ ಶಾಸಕರಾಗಿ ಆಯ್ಕೆ ಆಗಿದ್ದಾರೆ. ಅವರು ಸಮಿತಿಯ ಅಧ್ಯಕ್ಷ ಸ್ಥಾನವನ್ನು ಕೂಡ ಬಯಸಿರಲಿಲ್ಲ. ಈ ಬಾರಿ ಅರ್ಜಿಗಳ ಸಮಿತಿಗೆ ಅಧ್ಯಕ್ಷರಾಗಿದ್ದರು. ಸಾಮಾನ್ಯವಾಗಿ ಅರ್ಜಿಗಳ ಸಮಿತಿಗೆ ಉಪ ಸಭಾಪತಿಗಳು ಅಧ್ಯಕ್ಷರಾಗಿರುತ್ತಾರೆ. ಶ್ರೀ ಕೆ.ಪ್ರತಾಪ ಚಂದ್ರಶೆಟ್ಟಿಯವರು ಹಿರಿಯ ಸದಸ್ಯರು ಆಗಿರತಕ್ಕಂತಹ ದಿಸೆಯಲ್ಲಿ ಮಾನ್ಯ ಸಭಾಪತಿಯಾಗಿ ಆಯ್ಕೆ ಆಗಿದ್ದಾರೆ. ಇದೆಲ್ಲವೂ ಏನನ್ನು ಸೂಚಿಸುತ್ತದೆ ಎಂದರೆ, ಇವತ್ತಿನ ರಾಜಕಾರಣದಲ್ಲಿ ಸ್ವಜನ ಪಕ್ಷಪಾತ ಅಥವಾ ಪ್ರಾಂತ್ಯವಾರು ಅಥವಾ ಪ್ರಾದೇಶಿಕವಾರು ಅಥವಾ influence ಇದ್ಯಾವುದಾದರೂ ಇದ್ದರೆ ಮಾತ್ರ ಯಾವುದಾದರೂ ಸ್ಥಾನಮಾನಗಳು ಸಿಗುತ್ತದೆ ಎನ್ನತಕ್ಕಂಥ ಒಂದು ನಂಬಿಕೆ ಪ್ರಚಲಿತವಾಗಿ ಇರುತ್ತದೆ. ಅದೇ ವಾಸ್ತವಾಂಶ ಸಹ ಆಗಿದೆ. ಆದರೆ, ಇದೆಲ್ಲವನ್ನೂ ಮೀರಿ ತಾವು ವಿಧಾನ ಪರಿಷತ್‌ಗೆ ಸದಸ್ಯರು ಆಗುತ್ತೀರಿ. ಅದೆಲ್ಲವನ್ನೂ ಮೀರಿ ಮಾನ್ಯ ಸಭಾಪತಿಯವರು ಎನ್ನುವಂತಹ ಉನ್ನತ ಸ್ಥಾನ ತಮಗೆ ಸಿಕ್ಕಿದೆ. ಇವತ್ತಿಗೂ ಕೂಡ ಅರ್ಹರಿಗೆ, ಪ್ರಾಮಾಣಿಕತೆಗೆ ಎಲ್ಲೋ ಒಂದು ಕಡೆ ಈ ವ್ಯವಸ್ಥೆ ಕಾಪಾಡಿಕೊಂಡು ಸ್ಥಾನಮಾನಗಳನ್ನು ಕೊಡುತ್ತಿದೆ. ಅದಕ್ಕಾಗಿ ಯಾರೂ ನಿರಾಸೆ ಆಗಬೇಕಾಗಿಲ್ಲ.

ಇವತ್ತಿನ ದಿವಸ ಪ್ರಜಾಪ್ರಭುತ್ವ ವ್ಯವಸ್ಥೆ ಅತ್ಯಂತ ಗಟ್ಟಿಯಾಗಿ ತಾವು ಸಭಾಪತಿಯವರ ಸ್ಥಾನದಲ್ಲಿ ಕುಳಿತಿದ್ದೀರಿ ಎನ್ನುವುದು ನನ್ನ ನಂಬಿಕೆ. ಆದ್ದರಿಂದ ಈ ಸಾರ್ವಜನಿಕ ಕ್ಷೇತ್ರದಲ್ಲಿ ಯಾರೆಲ್ಲಾ ಪ್ರಾಮಾಣಿಕವಾಗಿ ಕೆಲಸ ಮಾಡುತ್ತಾರೆ, ಅವರಿಗೆ ಸ್ಥಾನಮಾನ ದೊರಕುತ್ತದೆ ಎಂಬುದಕ್ಕೆ ತಾವೇ ಸಾಕ್ಷಿ. ಈ ರೀತಿ ಆದಲ್ಲಿ ಮಾತ್ರ ಪ್ರಾಮಾಣಿಕವಾಗಿ ಕೆಲಸ ಮಾಡುವುದಕ್ಕೆ ಪ್ರೇರಣೆ ಆಗುತ್ತದೆ ಎನ್ನತಕ್ಕಂಥ ಒಂದು ಮುಕ್ತ ಪ್ರಾಮಾಣಿಕವಾದಂತಹ ಅನಿಸಿಕೆಯನ್ನು ನಾನು ತಮ್ಮ ಮುಂದೆ ವ್ಯಕ್ತಪಡಿಸುತ್ತಿದ್ದೇನೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ನನಗೆ ತಿಳಿದಿರುವಂತೆ ತಮ್ಮ ವ್ಯಕ್ತಿತ್ವವನ್ನು ನಾನು ಅಧ್ಯಯನ ಮಾಡಿರುವ ರೀತಿಯಲ್ಲಿ ಬಹಳ ಪ್ರಾಮಾಣಿಕವಾಗಿ ಯಾವುದೇ ಒತ್ತಡಕ್ಕೂ ಒಳಗಾಗದೇ, ಬಹಳ ನಿಷ್ಪಕ್ಷಪಾತವಾಗಿ ತಾವು ಸಭಾಪತಿಯವರ ಸ್ಥಾನದಲ್ಲಿ ಕಾರ್ಯವನ್ನು ನಿರ್ವಹಿಸಿ. ಈ ನಮ್ಮ ಸದನವು ಭವ್ಯವಾದಂತಹ ಇತಿಹಾಸವನ್ನು ಹೊಂದಿರತಕ್ಕಂಥ, ಪರಂಪರೆಯನ್ನು ಹೊಂದಿರತಕ್ಕಂಥ ಈ ಸದನದ ಗೌರವವನ್ನು ಮತ್ತಷ್ಟು ಉನ್ನತ ಮಟ್ಟಕ್ಕೆ ತೆಗೆದುಕೊಂಡು ಹೋಗುತ್ತೀರಿ ಎನ್ನತಕ್ಕಂಥ ಖಚಿತವಾದಂತಹ ಭರವಸೆ ಇದೆ. ಮಾನ್ಯ ಎಸ್.ಆರ್.ಪಾಟೀಲ್‌ರವರು ಒಂದು ಮಾತನ್ನು ಹೇಳಿದರು. 'ಆ ಕುರ್ಚಿಗೆ ಗೌರವವನ್ನು ಕೊಡತಕ್ಕಂಥದ್ದಲ್ಲ; ಕುರ್ಚಿಯಲ್ಲಿ ಕುಳಿತುಕೊಳ್ಳತಕ್ಕಂಥ ವ್ಯಕ್ತಿಯಿಂದ ಆ ಕುರ್ಚಿಗೆ ಮತ್ತಷ್ಟು ಮೆರುಗು ಬರಬೇಕು' ಎನ್ನತಕ್ಕಂಥ ಆಶಯವನ್ನು ವ್ಯಕ್ತಪಡಿಸಿದರು. ಅದೇ ಆಶಯದಿಂದ ಆ ಸ್ಥಾನದಲ್ಲಿ ಕುಳಿತಿರತಕ್ಕಂಥ ತಮ್ಮಿಂದ ಆ ಸ್ಥಾನವು ಮತ್ತಷ್ಟು ಗೌರವಯುತವಾಗುವುದರ ಜೊತೆಗೆ ಈ ರಾಜ್ಯದ ಸಮಗ್ರ ಅಭಿವೃದ್ಧಿಗೆ ಈ ಸದನದ ಮುಖೇನ ತಾವು ಮತ್ತಷ್ಟು ಕಾರ್ಯೋನ್ಮುಖರಾಗಿ, ಪ್ರಾಮಾಣಿಕವಾಗಿ ಕೆಲಸವನ್ನು ಮಾಡುತ್ತೀರಿ ಎಂದು ನನ್ನ ಅನಿಸಿಕೆಯನ್ನು ವ್ಯಕ್ತಪಡಿಸುತ್ತಾ, ತಮಗೆ ಅಭಿನಂದನೆಗಳನ್ನು ಸಲ್ಲಿಸುತ್ತೇನೆ.

ಶ್ರೀ ಕೆ.ಪ್ರತಾಪಚಂದ್ರ ಶೆಟ್ಟಿಯವರ ಆಯ್ಕೆಗೆ ಯಾರೆಲ್ಲಾ ಸದಸ್ಯರುಗಳು ಸಹಕಾರ ಕೊಟ್ಟಿದ್ದಾರೆ, ಅದು ಆಡಳಿತ ಪಕ್ಷ ಇರಬಹುದು, ಮಾನ್ಯ ಮುಖ್ಯಮಂತ್ರಿಗಳು ಇರಬಹುದು, ವಿಶೇಷವಾಗಿ ನಮ್ಮ ಪಕ್ಷದ ಅಧಿನಾಯಕಿ ಆಗಿರತಕ್ಕಂಥ ಶ್ರೀಮತಿ ಸೋನಿಯಾಗಾಂಧಿಯವರು ಹಾಗೂ ನಮ್ಮ ಪಕ್ಷದ ಅಧ್ಯಕ್ಷರಾಗಿರತಕ್ಕಂಥ ಶ್ರೀ ರಾಹುಲ್ ಗಾಂಧಿಯವರಿಗೂ ಕೂಡ ಅಭಿನಂದನೆಯನ್ನು ಸಲ್ಲಿಸುತ್ತೇನೆ. ಶ್ರೀ ರಾಹುಲ್ ಗಾಂಧಿಯವರು ತಾವು ಈ ಸ್ಥಾನವನ್ನು ಕೇಳದಿದ್ದರೂ ಕೂಡ ನಿಮ್ಮಂತಹ ಒಬ್ಬ ಸರಳ, ಸಜ್ಜನ ವ್ಯಕ್ತಿತ್ವನ್ನು ಗುರ್ತಿಸಿರುತ್ತಾರೆ. ತಾವು ಕೇಳದಿದ್ದರೂ ಕೂಡ ತಮ್ಮನ್ನು ಈ ಸ್ಥಾನದಲ್ಲಿ ಕೂರಿಸಿರುವ ವಿಚಾರದಲ್ಲಿ ನನ್ನ ಪಕ್ಷದ ಎಲ್ಲಾ ವರಿಷ್ಠರಿಗೂ ಮತ್ತು ಸಹಕಾರ ನೀಡಿದಂತಹ ಜೆ.ಡಿ.(ಎಸ್) ಪಕ್ಷದ ಮಾಜಿ ಪ್ರಧಾನ ಮಂತ್ರಿಗಳಾದ ಸನ್ಮಾನ್ಯ ಶ್ರೀ ಹೆಚ್.ಡಿ.ದೇವೇಗೌಡರವರು, ಸನ್ಮಾನ್ಯ ಶ್ರೀ ಹೆಚ್.ಡಿ.ಕುಮಾರಸ್ವಾಮಿಯವರು ಹಾಗೂ ಅವಿರೋಧವಾಗಿ ಆಯ್ಕೆ ಮಾಡಲು ಸಹಕಾರ ನೀಡಿದಂತಹ ಬಿ.ಜೆ.ಪಿ.ಯ ನನ್ನ ಎಲ್ಲಾ ಸನ್ಮಿತ್ರರಿಗೂ ಕೂಡ ಅಭಿನಂದಿಸುತ್ತಾ ಹಾಗೂ ತಮಗೂ ಕೂಡ ಮತ್ತೊಮ್ಮೆ ಅಭಿನಂದಿಸುತ್ತಾ ನನ್ನ ಮಾತನ್ನು ಮುಗಿಸುತ್ತಿದ್ದೇನೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಪ್ರಕಾಶ್ ಕೆ. ರಾಥೋಡ್ (ನಾಮನಿರ್ದೇಶಿತರು):-** ತಾವು ಸಭಾಪತಿ ಆದ ನಂತರ ತಮಗೆ ಅತ್ಯಂತ ಸಂತೋಷದಿಂದ ಅಭಿನಂದನೆಯನ್ನು ಸಲ್ಲಿಸುತ್ತಿದ್ದೇನೆ. ಬಹುಶಃ ಈ ಸದನದಲ್ಲಿ ಅತ್ಯಂತ ಹೊಸ ಸದಸ್ಯ ಆಗಿದ್ದೇನೆ. ಇದು ನನ್ನ ಎರಡನೇ ಇನ್ನಿಂಗ್ಸ್ ಇದ್ದರೂ ಕೂಡ ಇತ್ತೀಚೆಗೆ ಪ್ರವೇಶ ಮಾಡಿದಂತಹ

ಸದಸ್ಯನಾಗಿ ಬಹಳ ಸಂತೋಷದಿಂದ ತಮಗೆ ಅಭಿನಂದನೆಗಳನ್ನು ಸಲ್ಲಿಸುತ್ತಿದ್ದೇನೆ. ನಿಮ್ಮ ಮತ್ತು ನನ್ನ ಪರಿಚಯ ಬಹುಶಃ ಈ ಸಂಸದೀಯ ವ್ಯವಸ್ಥೆಯಲ್ಲಿ ಕೆಳಮನೆ ಮತ್ತು ಮೇಲ್ಮನೆ ಸದಸ್ಯರಾಗಿದ್ದೀರಿ. ಅದನ್ನು ಹೊರತುಪಡಿಸಿ, ನಾವು ಪಕ್ಷದಲ್ಲಿ ಕೆಲಸ ಮಾಡುವುದನ್ನು ಇವತ್ತಿನ ದಿವಸ ಸ್ಮರಿಸುತ್ತೇನೆ. ನೀವು ಮತ್ತು ನಾವು ಪಕ್ಷಕ್ಕಾಗಿ ದುಡಿದಂತಹ ಸಮಯದಲ್ಲಿ ಬಹುಶಃ ಶ್ರೀ ಜನಾರ್ಧನ ಪೂಜಾರಿ ಸಾಹೇಬರು, ಅಧ್ಯಕ್ಷರಾಗಿದ್ದಾಗ, ಶ್ರೀ ಅಲ್ಲಂ ವೀರಭದ್ರಪ್ಪ ಸಾಹೇಬರು ಅಧ್ಯಕ್ಷರಿದ್ದಾಗ ಹಗಲು-ರಾತ್ರಿ ದುಡಿದುದನ್ನು ನಾವು ಸ್ಮರಿಸಿದ್ದೇವೆ. ಬಹುಶಃ ಪಕ್ಷ ಕಟ್ಟುವುದಕ್ಕೆ ತಾವು ಪಟ್ಟಂತಹ ಶ್ರಮದ ಜೊತೆಗೆ ಕಳಮನೆಯಲ್ಲಿ ಹಾಗೂ ಮೇಲ್ಮನೆಯಲ್ಲಿ ಕೂಡ ಕಾರ್ಯನಿರ್ವಹಿಸಿ ತಮಗೆ ಅನುಭವವಿದೆ. ಈ ಅನುಭವದ ಮೇರೆಗೆ ಇವತ್ತಿನ ದಿವಸ ತಾವು Umpire ಆಗಿ ಕುಳಿತುಕೊಂಡಿದ್ದೀರಿ. ಬಹುಶಃ ತಾವು ಆಡಳಿತ ಪಕ್ಷ ಮತ್ತು ವಿರೋಧ ಪಕ್ಷ ಈ ಎರಡೂ ಕಡೆಗೂ ನ್ಯಾಯವನ್ನು ಕೊಡಬೇಕು. ನಮ್ಮ ಮೇಲ್ಮನೆಯಲ್ಲಿ ಏನು ಸಂಸದೀಯ ವ್ಯವಸ್ಥೆಯ ನಡವಳಿಗಳಿವೆ, ಅದನ್ನು ತಾವು ನಡೆಸಿಕೊಡುತ್ತೀರಿ ಎಂದು ನನಗೆ ಸಂಪೂರ್ಣ ವಿಶ್ವಾಸವಿದೆ. ನಾನು ತಮಗೆ ಇಷ್ಟನ್ನೇ ಹೇಳುತ್ತಿದ್ದೇನೆ, ನಾನು ಹೊಸದಾಗಿ ಸದಸ್ಯನಾಗಿ ಆಯ್ಕೆಯಾಗಿ ಬಂದಿದ್ದೇನೆ. ಈಗ ನಮಗೂ ಕೂಡ ಸದನದಲ್ಲಿ ಮಾತನಾಡಲು ಅವಕಾಶ ಕೊಡಬೇಕೆಂದು ಕೇಳಿದಾಗ, ತಾವು ಸಂತೋಷದಿಂದ ಅನುಮತಿ ಕೊಟ್ಟಿದ್ದೀರಿ. ಆದ್ದರಿಂದ ಇನ್ನು ಮುಂದೆಯೂ ಕೂಡ ನಮಗೆ ಇದೇ ರೀತಿ ಅವಕಾಶಗಳನ್ನು ಕೊಡಬೇಕೆಂದು ಹೇಳಿ, ತಮಗೆಲ್ಲರಿಗೂ ಒಳ್ಳೆಯದಾಗಲಿ ಎಂದು ಅಭಿನಂದಿಸುತ್ತಿದ್ದೇನೆ.

ನಾವು ಪ್ರಮಾಣ ವಚನ ಸ್ವೀಕಾರ ಮಾಡಿದಂತಹ ಸಂದರ್ಭದಲ್ಲಿ ಸನ್ಮಾನ್ಯ ಬಸವರಾಜ ಶಿವಲಿಂಗಪ್ಪ ಹೊರಟ್ಟಿ ಸಾಹೇಬರು ಸಭಾಪತಿಗಳಾಗಿದ್ದರು. ನಾವು ಪ್ರಮಾಣ ವಚನ ಮಾಡಿದಂತಹ ಸಂದರ್ಭದಲ್ಲಿ ಅವರು ನನಗೆ ಏನು ಹೇಳಿದರೆಂದರೆ, ನೀವು ಪರಿಷತ್‌ಗೆ ಸದಸ್ಯನಾಗಿ ಆಯ್ಕೆ ಆಗಿ ಬಂದಿದ್ದು ಒಳ್ಳೆಯದಾಯಿತು. ನೀವೆಲ್ಲಾ ಹಿಂದಿನ ಅವಧಿಯಲ್ಲಿ ಹೋರಾಟ ಮಾಡಿದ್ದನ್ನು ನಾವು ನೋಡಿದ್ದೇವೆ ಎಂದು ಹೇಳಿದ್ದರು. ಬಹುಶಃ ಅವರು ಇಷ್ಟು ಬೇಗನೆ ಅವರ ಸ್ಥಾನವನ್ನು ತಮಗೆ ಬಿಟ್ಟುಕೊಡುತ್ತಾರೆ ಎಂದು ನಾವು ಕೂಡ ಭಾವಿಸಿರಲಿಲ್ಲ. ಸನ್ಮಾನ್ಯ ಬಸವರಾಜ ಶಿವಲಿಂಗಪ್ಪ ಹೊರಟ್ಟಿ ಸಾಹೇಬರವರಿಗೂ ಕೂಡ ಸಾಕಷ್ಟು ಅನುಭವ ಇದೆ. ಅವರ ಒಳ್ಳೆಯತನ ನಮಗೆಲ್ಲಾ ಮಾರ್ಗದರ್ಶನ ಆಗಲಿ. ನಾವೆಲ್ಲರೂ ಸೇರಿ ಈ ಸದನದ ಗೌರವವನ್ನು ಕಾಪಾಡೋಣ. ನಮ್ಮ ಸಂಸದೀಯ ವ್ಯವಸ್ಥೆಯಲ್ಲಿ ಏನು ಕಾರ್ಯಕಲಾಪಗಳು ಇದೆ, ಅದನ್ನು ನಾವು ಒಂದಾಗಿ ನಡೆಸಿಕೊಂಡು ಹೋಗೋಣ. ವಿಶೇಷವಾಗಿ ನಮ್ಮ ಪಕ್ಷದ ನಾಯಕರುಗಳಾದ ಸನ್ಮಾನ್ಯ ಶ್ರೀ ರಾಹುಲ್ ಗಾಂಧಿಯವರು, ಶ್ರೀಮತಿ ಸೋನಿಯ ಗಾಂಧಿಯವರು, ಶ್ರೀ ಕೆ.ಸಿ.ವೇಣುಗೋಪಾಲ್‌ರವರು, ನಮ್ಮ ರಾಜ್ಯದ ನಾಯಕರುಗಳಾದ ಸನ್ಮಾನ್ಯ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಸಿದ್ಧರಾಮಯ್ಯ ಸಾಹೇಬರು, ಉಪ ಮುಖ್ಯಮಂತ್ರಿಗಳಾದ ಸನ್ಮಾನ್ಯ ಡಾ॥ ಜಿ.ಪರಮೇಶ್ವರ್‌ರವರು ಮತ್ತು ಶ್ರೀ ಆಸ್ಕರ್ ಫರ್ನಾಂಡಿಸ್‌ರವರು ಇವರೆಲ್ಲರೂ ತಮಗೆ ಆಶೀರ್ವಾದ ಮಾಡಿ ತಮ್ಮನ್ನು ಸಭಾಪತಿಯವರ ಸ್ಥಾನದಲ್ಲಿ ಕೂರಿಸಿದ್ದಾರೆ. ತಾವು ಕೆಲಸವನ್ನು ಬಹಳ ಪ್ರಾಮಾಣಿಕವಾಗಿ ಮಾಡುತ್ತೀರಿ, ನಮಗೆಲ್ಲಾ ಮಾರ್ಗದರ್ಶನ ನೀಡುತ್ತೀರಿ ಎಂದು ಭಾವಿಸಿದ್ದೇನೆ. ತಮಗೆ ಒಳ್ಳೆಯದಾಗಲಿ. ಮಾನ್ಯ ವಿರೋಧ ಪಕ್ಷದ ನಾಯಕರು ಮತ್ತು ಬಿ.ಜೆ.ಪಿ. ಪಕ್ಷದವರಿಗೂ ಕೂಡ ನಾನು ಸಂಪೂರ್ಣವಾದ ಧನ್ಯವಾದಗಳನ್ನು ತಿಳಿಸುತ್ತೇನೆ. ಒಬ್ಬ ಒಳ್ಳೆಯ ಪ್ರಾಮಾಣಿಕವಾದ ವ್ಯಕ್ತಿಗೆ ತಾವು ಬೆಂಬಲವನ್ನು ಕೊಟ್ಟಿದ್ದೀರಿ. ವಿಶೇಷವಾಗಿ ಜೆ.ಡಿ.(ಎಸ್) ಪಕ್ಷದ ಹಿರಿಯ ನಾಯಕರುಗಳಾದ ಸನ್ಮಾನ್ಯ ಹೆಚ್.ಡಿ.ದೇವೇಗೌಡರವರು, ಮಾನ್ಯ ಮುಖ್ಯಮಂತ್ರಿಗಳಾದ ಶ್ರೀ ಹೆಚ್.ಡಿ.ಕುಮಾರಸ್ವಾಮಿಯವರಿಗೆ ಎಲ್ಲಾ ಜೆ.ಡಿ.(ಎಸ್) ಪಕ್ಷದ ಎಲ್ಲಾ ಶಾಸಕರಿಗೆ ನಾನು ಅಭಿನಂದನೆಯನ್ನು ಸಲ್ಲಿಸುತ್ತೇನೆ. ನಮಗೆ ಬಹಳ ಸಂತೋಷ ಆಗಿದೆ. ನಾವು ಒಳ್ಳೆಯ ಕೆಲಸ ಮಾಡುತ್ತೇವೆ, ತಾವು ಕೂಡ ಅದಕ್ಕೆ ಸ್ಪಂದಿಸಿ ನಮಗೆಲ್ಲಾ ಅವಕಾಶ ಕೊಡುತ್ತೀರಿ ಎಂದು ನನ್ನ ಎರಡು ಮಾತನ್ನು ಮುಗಿಸುತ್ತಿದ್ದೇನೆ, ನಮಸ್ಕಾರ.

(ಮುಂದು.. .)

**(377)12-12-2018(12-30)ಎಂಎಂ-ಕೆ.ಎಸ್**

(ಸಭಾಪತಿಯವರ ಉಪಸ್ಥಿತಿ)

**ಶ್ರೀ ಪುಟ್ಟಣ್ಣ (ಶಿಕ್ಷಕರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ತಾವು ಸರ್ವಾನುಮತದಿಂದ ಸಭಾಪತಿಯಾಗಿ ಆಯ್ಕೆಯಾಗಿದ್ದೀರಿ. ಇದರಿಂದ ನಮಗೆಲ್ಲರಿಗೂ ತುಂಬಾ ಸಂತೋಷವಾಗಿದೆ ಅದಕ್ಕಾಗಿ ಹೃತ್ಪೂರ್ವಕವಾಗಿ ತಮ್ಮನ್ನು ಅಭಿನಂದಿಸುತ್ತೇನೆ. ಅದೇ ರೀತಿ ಮಾನ್ಯ ಬಸವರಾಜ ಹೊರಟ್ಟಿಯವರು ಕೂಡ ಕಳೆದ ಆರು ತಿಂಗಳಿನಿಂದ ಸಭಾಪತಿಯಾಗಿ ನಮಗೆಲ್ಲಾ ಮಾರ್ಗದರ್ಶನ ಮಾಡಿದ್ದಾರೆ. ಸದನವನ್ನು ಬಹಳ ಚೆನ್ನಾಗಿ ನಡೆಸಿದ್ದಾರೆ. ಅವರಿಗೂ ಕೂಡ ಹೃತ್ಪೂರ್ವಕವಾಗಿ ಅಭಿನಂದನೆಗಳನ್ನು ಸಲ್ಲಿಸುತ್ತೇನೆ. ತಮ್ಮ ಬಗ್ಗೆ ನನಗೆ ಅಪಾರವಾದ ಗೌರವವಿದೆ. ನಿಮ್ಮದೊಂದು ಮಾದರಿಯಾದ ವ್ಯಕ್ತಿತ್ವವಾಗಿದೆ. ಕಲುಷಿತ ನೀರಿನಲ್ಲಿ ಅರಳುವ ಕಮಲದ ರೀತಿ ತಾವು ಒಬ್ಬ ಅಪರೂಪದ ರಾಜಕಾರಣಿಯಾಗಿದ್ದೀರಿ. ಇತ್ತೀಚಿನ ಕಲುಷಿತ ವಾತಾವರಣದಲ್ಲಿ ರಾಜಕೀಯ ವ್ಯವಸ್ಥೆ, ಜಾತಿ ಮತ್ತು ಹಣದ ವ್ಯವಸ್ಥೆ ರಾಜಕಾರಣದಲ್ಲಿ ನಡೆಯುತ್ತಿದೆ ಅದನ್ನು ಮೀರಿ ರಾಜಕಾರಣದಲ್ಲಿ ಕಳೆದ ಏಳು ಬಾರಿ ವಿಧಾನ ಮಂಡಲದ ಸದಸ್ಯರಾಗಿ ಇವತ್ತು ಸಭಾಪತಿಯವರಾಗಿದ್ದೀರಿ. ನಮಗೆಲ್ಲರಿಗೂ ಮಾದರಿ ರಾಜಕಾರಣಿಯಾಗಿ ನಡೆದುಕೊಂಡಿದ್ದೀರಿ. ಸದನದಲ್ಲಿ ನಮಗೆಲ್ಲಾ ಪರಿಚಯವಾದಾಗಿನಿಂದಲೂ ತಾವು ಪ್ರಾಮಾಣಿಕತೆ ಮತ್ತು ದಕ್ಷತೆಯಲ್ಲಿ ರಾಜಿಯಾದವರಲ್ಲ. ಸಣ್ಣ ಸಣ್ಣ ವಿಷಯಗಳ ಬಗ್ಗೆ ಕೂಡ ನಿಗಾ

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ವಹಿಸುತ್ತಿದ್ದರು. ಬೇರೆಯವರಿಗಾದರೆ ಅದು ಸಣ್ಣ ವಿಷಯ ಅನಿಸುತ್ತದೆ, ಆದರೆ ನೀವು ಉದಾಹರಣೆಗೆ ಒಂದು ಹಳ್ಳಿಗೆ ಕುಡಿಯುವ ನೀರು ಇಲ್ಲ, ಬಸ್ಸು ಹೋಗುತ್ತಿಲ್ಲ, ಅಲ್ಲಿನ ಮಕ್ಕಳು ನಾಲ್ಕು ಜನ ವಿದ್ಯಾರ್ಥಿಗಳಿರಬಹುದು ಅವರು ಶಾಲೆಗೆ ಹೋಗುವುದು ಹೇಗೆ ಎಂದು ಹೋರಾಟ ಮಾಡುತ್ತಿದ್ದವರು. ಬೇರೆಯವರು ಇವರು ಕೇವಲ ಬಸ್ಸಿಗೆ, ನೀರಿಗೆ ಹೋರಾಟ ಮಾಡುವರಲ್ಲಾ ಎಂದು ಹೇಳುತ್ತಿದ್ದರು. ಒಂದು ಊರಿಗೆ ವಿದ್ಯುತ್ ಇಲ್ಲದಿದ್ದರೆ ಆ ವಿಷಯವನ್ನೂ ಗಂಭೀರವಾಗಿ ಪರಿಗಣಿಸುತ್ತಿದ್ದವರು. ಅಂದರೆ ಬೇರೆಯವರಿಗೆ ಸಣ್ಣ ಸಣ್ಣ ವಿಷಯಗಳೆನಿಸಿದರೂ; ಚೆನ್ನಾಗಿರುವ ಒಂದು ಬೂಟಿನೊಳಗೆ ಕಲ್ಲು ಸಿಕ್ಕಿ ಹಾಕಿಕೊಂಡರೆ ಹೇಗೆ ನಡೆಯುವುದಕ್ಕಾಗುವುದಿಲ್ಲವೋ ಹಾಗೆ ಜ್ವಲಂತವಾಗಿ ಅವೆಲ್ಲಾ ಜನಸಾಮಾನ್ಯರಿಗೆ ಬೇಕಾಗಿರುತ್ತವೆ. ಅಂತಹ ವಿಚಾರಗಳಿಗೆಲ್ಲಾ ತಾವು ಹೋರಾಟ ಮಾಡುತ್ತಿದ್ದಿರಿ. ಅದೇ ರೀತಿ ತಾವು ನಡೆದುಕೊಂಡಿದ್ದೀರಿ. ಈ ಸದನವನ್ನು ಚೆನ್ನಾಗಿ ನಡೆಸುತ್ತೀರಿ ಎನ್ನುವ ಭಾವನೆ ನಮ್ಮಲ್ಲಿದೆ. ನನ್ನ ಒಂದು ವಿನಂತಿಯೇನೆಂದರೆ, ದಯಮಾಡಿ ಹಿಂದಿನ ಸಾಲಿನಲ್ಲಿರುವ ಮಾನ್ಯ ಸದಸ್ಯರಿಗೂ ಕೂಡ ಮಾತನಾಡಲು ಅವಕಾಶ ನೀಡಬೇಕು, ಅವರು ಹೊಸಬರಾಗಿದ್ದು ಅವರಿಗೂ ಅನುಭವವಾಗಬೇಕು. ಜೊತೆಗೆ ವಿಷಯಾಧಾರಿತವಾಗಿ flexibility ಇರಬೇಕು. ನಿಯಮಾವಳಿ ಪ್ರಕಾರವೇ ಐದು ನಿಮಿಷದಲ್ಲಿ ಮಾತನಾಡಿ ಮುಗಿಸಬೇಕೆಂದರೆ, ಕೆಲವೊಂದು ಸಂದರ್ಭಗಳಲ್ಲಿ, ವಿಷಯಗಳಲ್ಲಿ ಹಾಗೆ ಆಗುವುದಿಲ್ಲ. ಅದಕ್ಕೂ ಕೂಡ ಅವಕಾಶ ಕೊಡಬೇಕು. ಮತ್ತೊಂದು ವಿನಯಪೂರ್ವಕವಾಗಿ ತಮ್ಮಲ್ಲಿ ವಿನಂತಿಸಿಕೊಳ್ಳುವುದೇನೆಂದರೆ, ಅಜೆಂಡಾ ಪ್ರಕಾರ ಅವತ್ತಿನ ವಿಷಯವನ್ನು ಅವತ್ತೇ ಮುಗಿಸುವುದಕ್ಕೆ ತಾವು ಆದ್ಯತೆ ಕೊಡಬೇಕೆಂಬುದು ನನ್ನ ಭಾವನೆಯಾಗಿದೆ. ಏಕೆಂದರೆ, ಎಲ್ಲ ಸದಸ್ಯರೂ ಕೂಡ ತಮ್ಮ ವಿಷಯ ಬರುತ್ತದೆ ಅದರ ಬಗ್ಗೆ ಮಾತನಾಡಬೇಕೆಂದು ಬಂದಿರುತ್ತಾರೆ. ಆದರೆ ಇತ್ತೀಚಿನ ದಿನಗಳಲ್ಲಿ ಮೊದಲನೆ ದಿವಸ ಚರ್ಚೆಗೆ ಬಂದ ವಿಷಯ ಕೊನೆಯ ದಿನದವರೆಗೂ ಚರ್ಚೆಯಾಗಿರುವುದನ್ನು ನೋಡಿದ್ದೇವೆ. ಅದನ್ನು ತಾವೂ ನೋಡಿದ್ದೀರಿ. ದಯವಿಟ್ಟು ತಾವು ಅನ್ಯಥಾ ಭಾವಿಸದೇ ಅಜೆಂಡಾದಲ್ಲಿ ಬಂದಿರುವ ವಿಷಯಗಳನ್ನು ಸಂಪೂರ್ಣವಾಗಿ ಅವತ್ತೇ complete ಮಾಡುವ ರೀತಿಯಲ್ಲಿ ಸದನವನ್ನು ನಡೆಸಿಕೊಡಬೇಕೆಂದು ತಮ್ಮಲ್ಲಿ ಮನವಿ ಮಾಡುತ್ತಾ ಈ ಸಂದರ್ಭದಲ್ಲಿ ನಮ್ಮೆಲ್ಲರ ಸಂಪೂರ್ಣ ಸಹಕಾರ ತಮಗಿದೆ. ತಾವು ಸದನವನ್ನು ಚೆನ್ನಾಗಿ ನಡೆಸುತ್ತೀರಿ. ಮತ್ತೊಂದು ವಿನಂತಿಯೇನೆಂದರೆ, ಇಲ್ಲಿ ಹೇಗೆ ಸಮಾಧಾನವಾಗಿ ಕುಳಿತುಕೊಳ್ಳುತ್ತಿದ್ದಿರೋ ಅಲ್ಲಿಯೂ ಕೂಡ ತಾವು ಸಮಾಧಾನವಾಗಿ ಕುಳಿತುಕೊಳ್ಳಬೇಕೆಂಬುದು ನನ್ನ ಭಾವನೆಯಾಗಿದೆ. ಏಕೆಂದರೆ, ಒಬ್ಬೊಬ್ಬರು ಒಂದೊಂದು ಧಾಟಿಯಲ್ಲಿ, ರೀತಿಯಲ್ಲಿ ಮಾತನಾಡುತ್ತಾರೆ. ಆದರೆ ನೀವು ಸೌಮ್ಯ ಸ್ವಭಾವದವರು ಸುಮ್ಮನೆ ಕುಳಿತುಕೊಳ್ಳುತ್ತಿದ್ದಿರಿ. ಆದರೆ ಅಲ್ಲಿ ಕುಳಿತುಕೊಂಡಾಗ ಸೌಮ್ಯ ಸ್ವಭಾವವೂ ಇರಬೇಕು ಕೆಲವು ಸಲ aggressive ಆಗಿಯೂ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಕೂಡ ತಾವು ಸದನವನ್ನು ಹತೋಟಿಗೆ ತೆಗೆದುಕೊಳ್ಳಬೇಕಾಗುತ್ತದೆ, ಅವೆರಡೂ ಕೆಲಸಗಳನ್ನು ತಾವು ಮಾಡುತ್ತೀರಿ. ನಮ್ಮೆಲ್ಲರ ಸಂಪೂರ್ಣ ಸಹಕಾರ ತಮಗಿರುತ್ತದೆ. ತಮಗೆ ಒಳ್ಳೆಯದಾಗಲಿ ಎಂದು ಹೇಳುತ್ತಾ ನನ್ನ ಮಾತುಗಳನ್ನು ಮುಗಿಸುತ್ತೇನೆ, ಧನ್ಯವಾದಗಳು.

**ಶ್ರೀ ಕವಟಗಿಮಠ ಮಹಾಂತೇಶ ಮಲ್ಲಿಕಾರ್ಜುನ (ವಿರೋಧಪಕ್ಷದ ಮುಖ್ಯಸಚೇತಕರು):-** ಮಾನ್ಯ ಸಭಾಪತಿಯವರೇ, ಸಭಾಪತಿಯಾಗಿ ಆಯ್ಕೆಯಾಗಿರುವ ಶ್ರೀ ಪ್ರತಾಪಚಂದ್ರ ಶೆಟ್ಟಿಯವರಿಗೆ ಅಭಿನಂದನೆಗಳನ್ನು ಸಲ್ಲಿಸುತ್ತಾ, ಸಮಯ ಬಹಳ ಆಗಿರುವುದರಿಂದ ಬಹಳ ವಿಷಯಗಳನ್ನು ಪ್ರಸ್ತಾಪ ಮಾಡದೇ, ಸ್ಥಳೀಯ ಸಂಸ್ಥೆಗಳ ಪ್ರತಿನಿಧಿಯಾಗಿ ಕಳೆದ ಮೂರು ಬಾರಿ ಈ ಸದನವನ್ನು ಪ್ರತಿನಿಧಿಸಿರುವ ತಾವು ನಮಗೆ ಆದರ್ಶರು ಎನ್ನುವ ಮಾತನ್ನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ. ವಿಶೇಷವಾಗಿ ಜನಪರ ಹೋರಾಟದ ಮೂಲಕ ರಾಜಕಾರಣಕ್ಕೆ ಬಂದಂತಹ ತಾವು ಸದನದಲ್ಲಿ ಪ್ರಸ್ತಾಪಿಸಿರುವಂತಹ ವಿಷಯಗಳನ್ನು ಗಮನಿಸಿದಾಗ ಸಾರ್ವಜನಿಕರಿಗೆ ತೊಂದರೆಯಾಗುವಂತಹ, public cause ಇರುವಂತಹ ವಿಷಯಗಳನ್ನು ಸದನದಲ್ಲಿ ಪ್ರಸ್ತಾಪ ಮಾಡಿದ್ದು ನಮ್ಮೆಲ್ಲರಿಗೂ ಒಂದು ಆದರ್ಶ ಎಂಬ ಮಾತನ್ನು ಈ ಸಂದರ್ಭದಲ್ಲಿ ಹೇಳುತ್ತಾ ತಮ್ಮ ನಿರಂತರ ಹೋರಾಟ ಮತ್ತು ಪರಿಶ್ರಮದ ಮೂಲಕ ಈ ಸದನದ ಸಭಾಪತಿಗಳಾಗಿ ಆಯ್ಕೆಯಾಗಿದ್ದೀರಿ. ಆ ಸ್ಥಾನಕ್ಕೆ ಇನ್ನೂ ಹೆಚ್ಚಿನ ಮೆರುಗನ್ನು ತರುವಂತಹ ರೀತಿಯಲ್ಲಿ ತಮ್ಮ ಕಾರ್ಯವನ್ನು ನಿರ್ವಹಿಸುತ್ತೀರಿ ಎಂಬ ಮಾತನ್ನು ಈ ಸಂದರ್ಭದಲ್ಲಿ ಹೇಳುತ್ತಾ ತಮಗೆ ವಿರೋಧಪಕ್ಷವಾಗಿ ಸಂಪೂರ್ಣ ಸಹಕಾರವನ್ನು ನಾವು ನೀಡುತ್ತೇವೆ ಎನ್ನುವ ಮಾತನ್ನು ಈ ಸಂದರ್ಭದಲ್ಲಿ ಹೇಳುತ್ತೇನೆ. ಕಳೆದ ಆರು ತಿಂಗಳಿನಿಂದ ಸಭಾಪತಿಯಾಗಿ ಕಾರ್ಯನಿರ್ವಹಿಸಿದ ಈ ಸದನದ ಹಿರಿಯ ಸದಸ್ಯರಾದ ಸನ್ಮಾನ್ಯ ಬಸವರಾಜ ಹೊರಟ್ಟಿಯವರಿಗೂ ಕೂಡ ಈ ಸಂದರ್ಭದಲ್ಲಿ ಅಭಿನಂದನೆಗಳನ್ನು ಸಲ್ಲಿಸುತ್ತೇನೆ. ನಾನು ಒಂದೇ ಒಂದು ಮಾತನ್ನು ತಮ್ಮ ಮುಖಾಂತರ ಇಡೀ ಸದನಕ್ಕೆ ಮತ್ತು ಮಾಧ್ಯಮದ ಮಿತ್ರರೊಂದಿಗೆ ಹಂಚಿಕೊಳ್ಳಬಯಸುತ್ತೇನೆ. ಸುವರ್ಣ ಸೌಧ ಉತ್ತರ ಕರ್ನಾಟಕದ ಬಹುಮುಖ್ಯ ಭಾಗವಾಗಿರುವಂತಹ ಬೆಳಗಾವಿಯಲ್ಲಿ ಮಾಡಿದಂತಹ ಹಿನ್ನೆಲೆ ಈ ಭಾಗದ ಜ್ವಲಂತ ಸಮಸ್ಯೆಗಳಿಗೆ ಧ್ವನಿಯಾಗಬೇಕೆಂಬ ನಿರೀಕ್ಷೆಯನ್ನಿಟ್ಟುಕೊಂಡು ಹಿಂದಿನ ಸರ್ಕಾರ ಮಾನ್ಯ ಹೆಚ್.ಡಿ. ಕುಮಾರಸ್ವಾಮಿಯವರು ಮತ್ತು ಶ್ರೀ ಯಡಿಯೂರಪ್ಪನವರು ಮುಖ್ಯಮಂತ್ರಿ ಮತ್ತು ಉಪಮುಖ್ಯಮಂತ್ರಿಗಳಾದಂತಹ ಸಂದರ್ಭದಲ್ಲಿ ನಿರ್ಣಯ ತೆಗೆದುಕೊಂಡು 2006ರಲ್ಲಿ ಪ್ರಥಮ ಬಾರಿಗೆ Karnataka Lingayat Education (KLE) Society ಯ ಅಂಗಳದಲ್ಲಿ ನಡೆದಂತಹ ಈ ಸದನ ಮುಂದೆ ಸುವರ್ಣ ಸೌಧ ಬೆಳಗಾವಿಯಲ್ಲಿ ನಿರ್ಮಾಣವಾಗಿದ್ದು ಸದನ ಬಹಳಷ್ಟು ದಿನಗಳು ನಡೆಯಬೇಕೆಂಬುದು ಈ ಭಾಗದ ಜನರ ಆಶಯವಾಗಿದೆ. ಆದರೆ ಕಳೆದ ಐದು ವರ್ಷಗಳಲ್ಲಿ ಸದನ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಪ್ರತಿವರ್ಷ ಕೇವಲ 50 ದಿನಗಳು ಮಾತ್ರ ನಡೆದಿದೆ. 50 ದಿನಗಳಲ್ಲಿ ಎಷ್ಟು ಸಮಸ್ಯೆಗಳು ಇಲ್ಲಿ ಚರ್ಚೆಯಾಯಿತು, ಎಷ್ಟು ಸಮಸ್ಯೆಗಳಿಗೆ ಸರ್ಕಾರ ಸ್ಪಂದಿಸಿತು ಎಂದು ಜನರು ನಿರೀಕ್ಷೆ ಮಾಡುತ್ತಿದ್ದಾರೆ. ಬೆಳಗಾವಿಯ ಸುವರ್ಣ ಸೌಧದಲ್ಲಿ ನಡೆಯುವ ಸದನ ಇಡೀ ಉತ್ತರ ಕರ್ನಾಟಕದ 13 ಜಿಲ್ಲೆಗಳ ಜ್ವಲಂತ ಸಮಸ್ಯೆಗಳಿಗೆ ಪರಿಹಾರ ಹುಡುಕುವ ರೀತಿಯಲ್ಲಿ ಇಲ್ಲಿ ಚರ್ಚೆಯಾಗಬೇಕೆಂದು ಈ ಭಾಗದ ಜನರ ನಿರೀಕ್ಷೆಯಾಗಿದೆ. ಅದು ಕಬ್ಬು ಬೆಳೆಗಾರರ ಸಮಸ್ಯೆ, ರೈತರ ಸಮಸ್ಯೆ, ಕೃಷ್ಣಾ ಕೊಳ್ಳದ, ಮಹದಾಯಿ ವಿಚಾರ, ನಂಜುಂಡಪ್ಪ ವರದಿಯ ಅನುಷ್ಠಾನದ ವಿಚಾರ ಇರಬಹುದು, ತಾವು ದಯವಿಟ್ಟು ಆ ವಿಚಾರಗಳಿಗೆ ಹೆಚ್ಚಿನ ಸಮಯವನ್ನು ಕೊಡಬೇಕು ಮತ್ತು ಸರ್ಕಾರವು ಕೂಡ ಚರ್ಚೆಯಾದಂತಹ ವಿಷಯಗಳಿಗೆ ಒಂದು ತಾರ್ಕಿಕ ಅಂತ್ಯವನ್ನು ಹಾಡುವ ರೀತಿಯಲ್ಲಿ ಸಂಪುಟ ಸಭೆಯಲ್ಲಿಯೂ ಕೂಡ ಉತ್ತರ ಕರ್ನಾಟಕದ ಸಮಸ್ಯೆಗಳಿಗೆ ಅಲ್ಲಿಯೇ ನಿರ್ಣಯವನ್ನು ಮಾಡಿ ಮುಂದಿನ ಅಧಿವೇಶನ ಬರುವುದಕ್ಕಿಂತ ಮುಂಚೆ ಇಲ್ಲಿ ನಡೆಯುವ ಚರ್ಚೆಗಳಿಗೆ ಒಂದು ತಾರ್ಕಿಕ ಅಂತ್ಯವನ್ನು ಹಾಡುವಂತಹ ರೀತಿಯಲ್ಲಿ ಸರ್ಕಾರಗಳು ಸ್ಪಂದಿಸಬೇಕು. ಮೈಸೂರು ಕರ್ನಾಟಕ, ಉತ್ತರ ಕರ್ನಾಟಕ ಮತ್ತು ಮುಂಬೈ ಪ್ರಾಂತ್ಯವು ಸಮಗ್ರ ಕರ್ನಾಟಕವಾಗಿದೆ. ಇಡೀ ಸಮಗ್ರ ಕರ್ನಾಟಕವನ್ನು ನಾವೆಲ್ಲರೂ ಒಂದೇ ತಾಯಿಯ ಮಕ್ಕಳಂತೆ ನೋಡುವಂತಹ ರೀತಿಯಲ್ಲಿ ಈ ಭಾಗದ ಜನರ ಸಮಸ್ಯೆಗಳಿಗೆ ಸ್ಪಂದಿಸುವ ರೀತಿಯಲ್ಲಿ ಸದನ ನಡೆಯಬೇಕೆನ್ನುವುದು ನಮ್ಮೆಲ್ಲರ ಆಶಯವಾಗಿದೆ ಎಂಬ ಮಾತನ್ನು ಈ ಸಂದರ್ಭದಲ್ಲಿ ಹೇಳಿ ಅದಕ್ಕೆ ವಿರೋಧಪಕ್ಷವಾದ ನಾವು ಸಂಪೂರ್ಣ ಸಹಕಾರವನ್ನು ನೀಡುತ್ತೇವೆ. ತಾವು ಆ ಪೀಠದಲ್ಲಿದ್ದುಕೊಂಡು ಈ ಭಾಗದ ಜನರ ಭಾವನೆಗಳಿಗೆ ಸ್ಪಂದಿಸುವಿರೆಂಬ ನಿರೀಕ್ಷೆಯಿಂದ ತಮಗೆ ಮತ್ತೊಮ್ಮೆ ಅಭಿನಂದನೆಗಳನ್ನು ಸಲ್ಲಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

**ಶ್ರೀ ಟಿ.ಎ. ಶರವಣ (ವಿಧಾನಸಭಾ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ನನಗೆ ಮಾತನಾಡಲು ಅವಕಾಶ ನೀಡಿದ್ದಕ್ಕಾಗಿ ವಂದಿಸುತ್ತಾ, 'ಚಿಂತಕರ ಚಾವಡಿ', ಶತಮಾನಗಳ ಇತಿಹಾಸವಿರುವಂತಹ ಈ ವಿಧಾನ ಪರಿಷತ್ತಿಗೆ ಸಭಾಪತಿಯಾಗಿ ತಾವು ಅವಿರೋಧವಾಗಿ ಆಯ್ಕೆಯಾಗಿರುವ ಈ ಶುಭ ಸಂದರ್ಭದಲ್ಲಿ ತಮಗೆ ಹೃತ್ಪೂರ್ವಕವಾದ ಅಭಿನಂದನೆಗಳನ್ನು ಸಲ್ಲಿಸುತ್ತಿದ್ದೇನೆ. ಜೊತೆಗೆ ನಾಲ್ಕು ಬಾರಿ ಶಾಸಕರಾಗಿ, 3 ಬಾರಿ ವಿಧಾನ ಪರಿಷತ್ತಿನ ಸದಸ್ಯರಾಗಿ ಈ ಸದನದ ಹಿರಿಯ ಸದಸ್ಯರಾಗಿ ಹಲವಾರು ಕೆಲಸಗಳನ್ನು ತಾವು ಮಾಡಿರುವುದನ್ನು ನಾವು ತಿಳಿದುಕೊಂಡಿದ್ದೇವೆ. ನಿನ್ನೆ 11.30 ಗಂಟೆಯಲ್ಲಿ ಸನ್ಮಾನ್ಯ ದಿನೇಶ್ ಗುಂಡೂರಾವ್‌ರವರು ನನ್ನನ್ನು ಅಲ್ಲಿಗೆ ಕರೆದರು. ಅಲ್ಲಿಗೆ ಹೋದ ಸಂದರ್ಭದಲ್ಲಿ ಮಾನ್ಯ ಉಪಮುಖ್ಯಮಂತ್ರಿಗಳಾದಂತಹ ಶ್ರೀ ಪರಮೇಶ್ವರ್‌ರವರು ಸೇರಿದಂತೆ ಅನೇಕ ಮಾನ್ಯ ಸದಸ್ಯರುಗಳು ಅಲ್ಲಿದ್ದರು. ಶ್ರೀ ಪ್ರತಾಪಚಂದ್ರ ಶೆಟ್ಟಿಯವರನ್ನು ಸಭಾಪತಿಯಾಗಿ ಆಯ್ಕೆ ಮಾಡುತ್ತಿದ್ದೇವೆಂದು ತಿಳಿಸಿ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಅವರಿಗೆ ಶುಭಾಷಯಗಳನ್ನು ಹೇಳುವುದಕ್ಕೆ ಹೇಳಿದರು. ನನಗೆ ಬಹಳ ಸಂತೋಷವಾಯಿತು. ಆದರೆ ಒಂದು ಕಡೆ ಈ ವಿಧಾನ ಪರಿಷತ್ತಿಗೆ ಏಳು ಬಾರಿ ಸತತವಾಗಿ ಆಯ್ಕೆಯಾಗಿದ್ದ, ಸೋಲಿಲ್ಲದ ಸರದಾರರೆನಿಸಿಕೊಂಡಿದ್ದ, ಶಾಸಕರಾಗಿ ಇತಿಹಾಸದಲ್ಲಿ ದಾಖಲೆ ಮಾಡಿರುವಂತಹ ಸನ್ಮಾನ್ಯ ಬಸವರಾಜ ಹೊರಟ್ಟಿಯವರು ಸಭಾಪತಿಯಾಗುತ್ತಾರೆ ಎಂದು ನಮ್ಮ ಬಯಕೆಯಾಗಿತ್ತು.

(ಮುಂದು . . .

(378) 12–12–2018/12–40/ಕೆಹೆಚ್–ಕೆಎಸ್

(ಸಭಾಪತಿಯವರ ಉಪಸ್ಥಿತಿ)

**ಶ್ರೀ ಟಿ.ಎ.ಶರವಣ (ಮುಂದು):–** ಆದರೂ ಕೂಡ ನನಗೆ ಒಂದು ಕಥೆ ನೆನಪಿಗೆ ಬರುತ್ತದೆ. ದೂರದಿಂದ ಒಬ್ಬ ವ್ಯಕ್ತಿ ಆನಂದಪಡುವುದನ್ನು ನೋಡಿ ಯಾರು ಖುಷಿ ಪಡುತ್ತಾರೋ, ಅವರು ನಿಜವಾದ ಹೃದಯವಂತ ಎಂದು ಹೇಳುತ್ತಾರೆ. ಅಂತಹ ಹೃದಯವಂತರ ಜಾಗದಲ್ಲಿ ಮಾನ್ಯ ಬಸವರಾಜ ಹೊರಟ್ಟಿಯವರು ಕುಳಿತುಕೊಂಡಿದ್ದರು. ಅಂತಹ ಪೀಠದಲ್ಲಿ ತಮ್ಮನ್ನು ಅಲಂಕರಿಸಿ, ಇವತ್ತಿನ ದಿವಸ ಆ ಒಂದು ಖುಷಿಯನ್ನು ನೋಡುವಂತಹ ಹೃದಯವಂತರಾಗಿ ಅವರು ಇದ್ದಾರೆ ಎಂದರೆ ತಪ್ಪಾಗಲಾರದು. ಬಹುಶಃ ಇದರಲ್ಲಿ ನಮಗೂ ಕೂಡ ಖುಷಿ ಇದೆ. ಇವತ್ತಿನ ದಿವಸ ಮಾನ್ಯ ಪ್ರತಾಪಚಂದ್ರ ಶೆಟ್ಟಿಯವರು, ಸಭಾನಾಯಕರು, ವಿಧಾನ ಪರಿಷತ್ತಿನ ವಿರೋಧ ಪಕ್ಷದ ನಾಯಕರಾದ ಮಾನ್ಯ ಕೋಟ ಶ್ರೀನಿವಾಸ ಪೂಜಾರಿಯವರು, ಈ ಮೂರು ಜನ ತ್ರಿಮೂರ್ತಿಗಳು ಒಂದೇ ಕರಾವಳಿ ಭಾಗದಿಂದ ಬಂದಿರುವಂತಹವರು ಈ ಸದನದಲ್ಲಿದ್ದೀರಿ. ಈ ಒಂದು ಸದನದಲ್ಲಿ ಎಲ್ಲರಿಗೂ ಕೂಡ ನ್ಯಾಯ ದೊರಕಿಸುವಂತಹ ಕೆಲಸವನ್ನು ಮತ್ತು ಈ ರಾಜ್ಯದ ಜ್ವಲಂತ ಸಮಸ್ಯೆಗಳ ಬಗ್ಗೆ ಚರ್ಚೆ ಮಾಡಿ ಪರಿಹಾರ ಕಂಡುಕೊಳ್ಳುವ ಹಾದಿಯಲ್ಲಿ ತಾವು ನಮ್ಮೆಲ್ಲರಿಗೂ ಕೂಡ ಈ ರಾಜ್ಯದ ಜನರಿಗೆ ನ್ಯಾಯ ಒದಗಿಸಿಕೊಡುತ್ತೀರೆಂದು ಭಾವಿಸಿದ್ದೇನೆ. ತಾವು ಈ ಒಂದು ಜವಾಬ್ದಾರಿಯನ್ನು ವಹಿಸಿಕೊಂಡು ಈ ಪೀಠದ ಸ್ಥಾನವನ್ನು ಅಲಂಕರಿಸಿದ್ದೀರಿ. ತಮಗೆ ಆ ಭಗವಂತನು ಆಯುರಾರೋಗ್ಯವನ್ನು ಕೊಟ್ಟು, ಈ ಸದನವನ್ನು ಎಲ್ಲಾ ರೀತಿಯಿಂದಲೂ ನಡೆಸಿಕೊಂಡು ಹೋಗಲಿ ಎಂದು ಮತ್ತೊಮ್ಮೆ ತಮಗೆ ಅಭಿನಂದನೆಗಳನ್ನು ಸಲ್ಲಿಸುತ್ತಿದ್ದೇನೆ. ನಮಸ್ಕಾರಗಳು.

**ಶ್ರೀ ರಿಜ್ವಾನ್ ಅರ್ಷದ್ (ವಿಧಾನಸಭಾ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಮೊದಲನೆಯದಾಗಿ ಇವತ್ತಿನ ದಿವಸ ತಾವು ನೂತನವಾಗಿ ಸಭಾಧ್ಯಕ್ಷರಾಗಿ ಆಯ್ಕೆಯಾಗಿರುವುದಕ್ಕೆ ತಮಗೆ ಅಭಿನಂದನೆಗಳನ್ನು ಸಲ್ಲಿಸುತ್ತಿದ್ದೇನೆ. ಬಹುಶಃ ತಮ್ಮ ವ್ಯಕ್ತಿತ್ವ ಹೇಗಿದೆ ಎಂದರೆ ಕಳೆದ ಎರಡು ಗಂಟೆಯಿಂದ ನಿರಂತರವಾಗಿ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಎಲ್ಲಾ ಸದಸ್ಯರು ಎದ್ದು ನಿಂತುಕೊಂಡು ತಮ್ಮ ಬಗ್ಗೆ ಮಾತನಾಡುತ್ತಿದ್ದಾರೆ ಎಂದರೆ ತಾವು ಈ ಸದನದಲ್ಲಿ ಗಳಿಸಿರುವಂತಹ ಪ್ರೀತಿ, ವಿಶ್ವಾಸ ಮತ್ತು ಗೌರವ ಎಂದು ಹೇಳಬಹುದು. ತಾವು ಒಂದು ಮಾದರಿ ಸದಸ್ಯರಾಗಿ ನಮ್ಮ ಜೊತೆಯಲ್ಲಿ ಈ ಸದನದಲ್ಲಿದ್ದೀರಿ ಎಂದು ಹೇಳುವುದಕ್ಕೆ ಇಷ್ಟಪಡುತ್ತೇನೆ. ನಾನು ವಿಧಾನ ಪರಿಷತ್ತಿನ ಸದಸ್ಯನಾಗಿ ಎರಡು ವರ್ಷಗಳಾಯಿತು. ಆಗ ನಾನು ಬಂದಾಗ ಬಿ.ಜೆ.ಪಿ.,ಯ ನಮ್ಮ ಸ್ನೇಹಿತರು ವಿರೋಧ ಪಕ್ಷದಲ್ಲಿದ್ದರೂ ಕೂಡ ಅವರ ಸಂಖ್ಯೆ ಜಾಸ್ತಿ ಇತ್ತು. ಬಿ.ಜೆ.ಪಿ., ಯವರು ಚುನಾವಣೆ ಹತ್ತಿರ ಬರುತ್ತಿದಂತೆ ಬಹಳ aggressive ಆಗಿದ್ದರು. ನಮ್ಮ ಮತ್ತು ಅವರ ಮಧ್ಯೆ ಬಹಳ ಘರ್ಷಣೆ ಮತ್ತು ಮಾತಿನ ವಿವಾದ ಆಗುತ್ತಿತ್ತು. ಆದರೂ ಸಹ ಸದನದಲ್ಲಿ ಎದ್ದು ನಿಂತು ಕಿರುಚಾಡುತ್ತಿದ್ದೇವೆ. ಅವರು ಕೂಡ ನಮ್ಮ ಮೇಲೆ ಕಿರುಚಾಡುತ್ತಿದ್ದರು. ಆದರೂ ತಾವು ಎಂದೂ ಕೂಡ ತಮ್ಮ behaviour ನಲ್ಲಿ ಎಲ್ಲೂ ಕೂಡ ನಿಂತುಕೊಂಡು ಜಾಸ್ತಿ ಮಾತನಾಡುವುದಾಗಲಿ, ನಮ್ಮ ತರಹ ಬಹಳ ಜೋರಾಗಿ, aggressive ಆಗಿ behave ಮಾಡುವುದಾಗಲಿ ಎಂದು ಮಾಡಿರಲಿಲ್ಲ. ಒಂದು ರೀತಿಯ ಬಹಳ ತೂಕದಿಂದ ಮತ್ತು ಗೌರವದಿಂದ ನಮ್ಮ ಜೊತೆಯಲ್ಲಿ ಸದನದಲ್ಲಿ ಇರುತ್ತಿದ್ದೀರಿ. ಇವತ್ತಿನ ದಿವಸ ನಮ್ಮ ಪಕ್ಷದಿಂದ ತಮ್ಮನ್ನು ಆಯ್ಕೆ ಮಾಡಿರುವ ವಿಚಾರ ನಮಗೆ ಬಹಳ ಸಂತೋಷವನ್ನು ತಂದಿದೆ. ಇವತ್ತಿನ ದಿವಸ ತಾವು ಬಹಳ ಪಕ್ಷಾತೀತವಾಗಿ ಆಯ್ಕೆಯಾಗಿದ್ದೀರಿ. ಹಿಂದೆ ಮಾನ್ಯ ಬಸವರಾಜ ಹೊರಟ್ಟಿಯವರು ಆ ಸ್ಥಾನದಲ್ಲಿ ಇದ್ದರು. ಅವರು ಕೂಡ 6 ತಿಂಗಳ ಕಾಲದಲ್ಲಿ ನಮ್ಮೆಗೆಲ್ಲರಿಗೂ ಬಹಳ ಸಮಾನವಾಗಿ ನೋಡಿಕೊಂಡು ಬಂದರು. ಮೊದಲು ನಾನು ವಿಧಾನ ಪರಿಷತ್ತಿನ ಸದಸ್ಯನಾಗಿ ಬಂದಾಗ ಮಾನ್ಯ ಬಸವರಾಜ ಹೊರಟ್ಟಿಯವರು ನನ್ನ ಪಕ್ಕದಲ್ಲಿ ಕುಳಿತುಕೊಂಡು ನಾನು 30 ವರ್ಷಗಳ ಹಿಂದೆ, 30 ವರ್ಷದ ಹುಡುಗನಾಗಿ ಈ ಸದನದ ಸದಸ್ಯನಾಗಿ ಬಂದಾಗ ನನಗೆ ಯಾವ ರೀತಿ ಭಾವನೆ ಉಂಟಾಯಿತು, ಮೊದಲನೇ ದಿನ ನಿನ್ನನ್ನು ನೋಡಿ, ನಾನೇ ಬಂದಿದ್ದೇನೆ ಎಂಬ ಭಾವನೆ ನನಗೆ ಬರುತ್ತಿದೆ ಎಂದು ಹೊರಟ್ಟಿಯವರು ಹೇಳಿದ್ದರು. ಈ ಸದನದ ಸದಸ್ಯರಾಗುವಾಗ ಬಹಳ emotional bonding ಆಗುತ್ತದೆ. ಅದೇ ರೀತಿ ಮಾನ್ಯ ಶಂಕರಮೂರ್ತಿಯವರು ಕೂಡ ಸಭಾಧ್ಯಕ್ಷರಾಗಿದ್ದರು. ಅವರೂ ಕೂಡ ಬಹಳ ಗೌರವದಿಂದ ಈ ಸದನವನ್ನು ನಡೆಸಿಕೊಂಡು ಹೋಗಿದ್ದಾರೆ. ಅವರನ್ನು ನೋಡಿದರೆ prince suit ಹಾಕಿಕೊಂಡು, ಅವರದ್ದು ಬೇರೆ ರೀತಿಯ ವೇಷ, ಭೂಷಣ ಮತ್ತು ಸ್ಟೈಲ್ ಆಗಿರುತ್ತಿತ್ತು. ನಮಗೆಲ್ಲಾ ಸಭಾಧ್ಯಕ್ಷರೆಂದರೆ suit ಹಾಕಿಕೊಂಡು ಕುಳಿತುಕೊಳ್ಳುವವರನ್ನು ನೋಡಿ ಕಣ್ಣಿಗೆ ಸೆಟ್ ಆಗಿಬಿಟ್ಟಿದೆ. ಬಹುಶಃ ತಮಗೆ ನೆನ್ನೆಯ ದಿವಸ ಗೊತ್ತಿರಲಿಲ್ಲವೆಂದು ಅನಿಸುತ್ತದೆ. ಅದಕ್ಕೆ ತಾವು suit ಹಾಕಿರುವುದಿಲ್ಲ. ಇದರ ಬಗ್ಗೆ ಇನ್ನು prepare ಆಗಿರಲ್ಲಿಲವೋ ಅಥವಾ suit ಅನ್ನು

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಹಾಕಿಕೊಳ್ಳುತ್ತೀರೋ, ಇಲ್ಲವೋ ಎಂಬುದು ನಮಗೆ ಗೊತ್ತಿಲ್ಲ. ಅದೇ ರೀತಿ ತಾವು dress ಆಗಿ ಬನ್ನಿ ಎಂದು ಆಗ್ರಹಿಸುತ್ತಿದ್ದೇವೆ. ನಾನು ಬಹಳ ಹೊತ್ತಿನಿಂದ ಮಾತನಾಡಬೇಕೆಂದು ಕೈ ಎತ್ತುತ್ತಿದ್ದೆ. ತಾವು ಕೇವಲ ಎಡಗಡೆ ಮತ್ತು ಬಲಗಡೆ ಮಾತ್ರ ನೋಡುತ್ತಿದ್ದಿರಿ. ತಮಗೆ ಎದುರುಗಡೆ ನಾವು ಕೂಡ ಕುಳಿತುಕೊಂಡಿದ್ದೇವೆ. ಬಹುಶಃ ಮುಂದಿನ ದಿನಗಳಲ್ಲಿ ಮಾತನಾಡುವುದಕ್ಕೆ ಜಾಸ್ತಿ ಅವಕಾಶ ಕೊಡಬೇಕು ಮತ್ತು ಈ ಬಾರಿ ಮಾತನಾಡುವುದಕ್ಕೆ ನನಗೆ ನಿಧಾನವಾಗಿ ಅವಕಾಶಕೊಟ್ಟಿದ್ದೀರಿ ಎಂದು ಭಾವಿಸಿಕೊಂಡಿದ್ದೇನೆ. ತಮ್ಮ ಅವಧಿಯಲ್ಲಿ ಯುವಕರಿಗೆ ಮಾತನಾಡುವುದಕ್ಕೆ ಆದ್ಯತೆ ಸಿಗಬೇಕು. ವಿಧಾನ ಪರಿಷತ್ತಿನ ಸದಸ್ಯರು ಸಾಮಾನ್ಯವಾಗಿ ಹಿರಿಯರಾಗಿದ್ದು, ಅದರಲ್ಲಿ ಎಲ್ಲಾ ಪಕ್ಷದಿಂದ ಅಂದರೆ ಬಿ.ಜೆ.ಪಿ., ಜನತಾದಳ, ಕಾಂಗ್ರೆಸ್ ಪಕ್ಷದಿಂದ ಕೆಲವು ಯುವಕರು ವಿಧಾನ ಪರಿಷತ್ತಿನ ಸದಸ್ಯರಾಗಿ ಆಯ್ಕೆಯಾಗಿ ಬಂದಿದ್ದೇವೆ. ನಮ್ಮ ಬಗ್ಗೆ ವಿಶೇಷವಾದ ಕಾಳಜಿಯನ್ನು ಇಟ್ಟುಕೊಳ್ಳಬೇಕೆಂದು ಕೇಳಿಕೊಳ್ಳುತ್ತೇನೆ. ಇತ್ತೀಚೆಗೆ ಶಿಕ್ಷಕರ ಕ್ಷೇತ್ರದಿಂದ ಆಯ್ಕೆಯಾಗಿ ಬಂದಿರುವಂತಹ ಸದಸ್ಯರು, ಇನ್ನೊಂದು ಕಡೆ ಸ್ಥಳೀಯ ಸಂಸ್ಥೆಗಳ ಕ್ಷೇತ್ರದಿಂದ ಆಯ್ಕೆಯಾಗಿ ಬಂದಿರುವಂತಹ ಸದಸ್ಯರು, ಹಾಗೆಯೇ ಬೇರೆ ನಾಮನಿರ್ದೇಶಿತರು ಮತ್ತು ವಿಧಾನಸಭಾ ಕ್ಷೇತ್ರದಿಂದ ಆಯ್ಕೆಯಾಗಿ ಬಂದಿರುವಂತಹ ಸದಸ್ಯರ ಧ್ವನಿ ಜಾಸ್ತಿ ಬರುವುದೇ ಇಲ್ಲ. ಏಕೆಂದರೆ, ಒಂದು ರೀತಿಯಲ್ಲಿ ಪಕ್ಷಾತೀತವಾಗಿ ಎಲ್ಲರೂ ಸೇರಿಕೊಂಡು lobby ಮಾಡಿಕೊಳ್ಳುತ್ತಾರೆ. ವಿಧಾನಸಭಾ ಕ್ಷೇತ್ರದಿಂದ ಆಯ್ಕೆಯಾಗಿ ಬಂದವರು ಯಾರಿದ್ದಾರೆ, ಅವರನ್ನು ಕರೆಯಿಸಿ, ಅವರ ಜೊತೆ ನಾವೆಲ್ಲಾ ಸೇರಿ ಒಂದು ಸಭೆಯನ್ನು ಮಾಡಬೇಕಾಗುತ್ತದೆ. ತಾವು ನಮ್ಮ ಬಗ್ಗೆ ಒಂದು ಕಡೆ ಗಮನದಲ್ಲಿಟ್ಟುಕೊಳ್ಳಬೇಕು.

**ಶ್ರೀ ಟಿ.ಎ. ಶರವಣ:-** ಮಾನ್ಯ ಸಭಾಪತಿಯವರೇ, ಅವರು ಜನಪ್ರತಿನಿಧಿಗಳು, ನಾವು ಪ್ರತಿನಿಧಿಗಳಿಂದ ಆಯ್ಕೆಯಾಗಿರುವುದರಿಂದ ಪ್ರತಿನಿಧಿಗಳ ಪ್ರತಿನಿಧಿಗಳಾಗಿದ್ದೇವೆ.

**ಶ್ರೀ ರಿಜ್ವಾನ್ ಅರ್ಷದ್:-** ಮಾನ್ಯ ಸಭಾಪತಿಯವರೇ, ಇವತ್ತಿನ ದಿವಸ ನಮ್ಮ ದೇಶದಲ್ಲಿ ಬೇರೆ ಬೇರೆ ರೀತಿಯ ಕಲುಷಿತ ವಾತಾವರಣವನ್ನು ನೋಡುತ್ತಿದ್ದೇವೆ. ಅದರಲ್ಲಿ ನಮ್ಮ ಐತಿಹಾಸಿಕವಾದ ವಿಧಾನ ಪರಿಷತ್ತಿನ ಮನೆಯಲ್ಲಿ ಚರ್ಚೆಗಳು, ತೀರ್ಮಾನಗಳು ನಡೆದಿರುವಂತಹದ್ದು. ಈ ಸಂದರ್ಭದಲ್ಲಿ ಎಲ್ಲಾ ಪಕ್ಷದ ವಿಶ್ವಾಸವನ್ನು ಪಡೆದುಕೊಂಡು ತಾವು ಸಭಾಧ್ಯಕ್ಷರಾಗಿ ಆಯ್ಕೆಯಾಗಿ ಈ ಸದನಕ್ಕೆ ಬಂದಿದ್ದೀರಿ. ತಮ್ಮ ಅಪಾರವಾದಂತಹ ಅನುಭವ ಏನಿದೆ, ಅದು ನಮಗೆ ಒಂದು ಬಂಡವಾಳವೆಂದು ಹೇಳುವುದಕ್ಕೆ ಇಷ್ಟಪಡುತ್ತೇನೆ. ತಮ್ಮ ವ್ಯಕ್ತಿತ್ವ ಬಹಳ ಒಳ್ಳೆಯ ವ್ಯಕ್ತಿತ್ವವಾಗಿದ್ದು, ತಾವು ಎಲ್ಲರನ್ನೂ ಒಂದೇ ರೀತಿ ತೆಗೆದುಕೊಂಡು, ಎಲ್ಲರಿಗೂ ಮಾತನಾಡುವುದಕ್ಕೆ ಸಮಾನವಾದ ಅವಕಾಶವನ್ನು ಕೊಟ್ಟು, ಈ ದೇಶ ಮತ್ತು

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ರಾಜ್ಯಕ್ಕೆ ಏನು ಒಳ್ಳೆಯದಾಗಬೇಕು. ಬಹುಶಃ ಕೆಲವು ರಾಜಕೀಯ ಪಕ್ಷಗಳು, ಅದರಲ್ಲಿ ನಮ್ಮ ಪಕ್ಷವಾಗಲಿ, ಬಿ.ಜೆ.ಪಿ., ಮತ್ತು ಜನತಾದಳ ಪಕ್ಷವಾಗಲಿ, ನಮ್ಮ ರಾಜಕೀಯ ಪಕ್ಷದ ಬಗ್ಗೆ ಆಸಕ್ತಿ ಇಟ್ಟುಕೊಂಡು ಕೆಲವು ವಿಷಯಗಳನ್ನು ಪ್ರಸ್ತಾಪ ಮಾಡುತ್ತೇವೆ. ನಮ್ಮ ಪಕ್ಷಕ್ಕೆ ಲಾಭ ಆಗಬೇಕೆಂಬ ಒಂದೇ ಒಂದು ಉದ್ದೇಶಕ್ಕೆ ಆ ರೀತಿ ಮಾಡುತ್ತೇವೆ. ನಮ್ಮ ರಾಜ್ಯಕ್ಕೆ ಲಾಭವಾಗುತ್ತದೋ, ಇಲ್ಲವೋ, ನಮ್ಮ ರಾಜ್ಯದ ಜನರಿಗೆ ಒಳ್ಳೆಯದಾಗುತ್ತದೋ, ಇಲ್ಲವೋ, ನಮ್ಮ ideologyಗೆ ಮತ್ತು ನಮ್ಮ ಪಕ್ಷಕ್ಕೆ ಒಳ್ಳೆಯದಾಗಬೇಕು. ಇಲ್ಲಿಂದ ನಮ್ಮ ಮತದಾರರಿಗೆ ಏನೋ ಒಂದು ಸಂದೇಶ ಹೋಗಬೇಕೆಂಬ ದುರುದ್ದೇಶ ಇಟ್ಟುಕೊಂಡು ಕೆಲವು ವಿಷಯಗಳು ಬರುತ್ತವೆ. ಅದನ್ನು ಕೂಡ ತಾವು ಅರ್ಥಮಾಡಿಕೊಳ್ಳಿ. ಯಾವ ವಿಷಯದಿಂದ ದೇಶ, ರಾಜ್ಯ ಮತ್ತು ಜನರಿಗೆ ಒಳ್ಳೆಯದಾಗುತ್ತದೋ, ಅಂತಹ ವಿಷಯಗಳಿಗೆ ಹೆಚ್ಚಿನ ಆದ್ಯತೆಯನ್ನು ಕೊಟ್ಟು, ಕೆಲವು ರಾಜಕೀಯ ಲಾಭ ಪಡೆದುಕೊಳ್ಳುವ ಉದ್ದೇಶದಿಂದ ನಮ್ಮಂತಹವರು ಕೆಲವು ವಿಷಯಗಳನ್ನು ಪ್ರಸ್ತಾಪ ಮಾಡಿದಾಗ, ಅದರ ಬಗ್ಗೆ ಮಾತನಾಡುವುದಕ್ಕೆ ಸಮಯವನ್ನು ಕಡಿಮೆ ಮಾಡಿ, ಈ ರಾಜ್ಯಕ್ಕೆ ಒಳ್ಳೆಯದಾಗಬೇಕು, ಸಮಾಜ ಒಂದಾಗಬೇಕು, ಇಂತಹ ಒಂದು ಉದ್ದೇಶವನ್ನಿಟ್ಟುಕೊಂಡು ತಾವು ಈ ಸದನವನ್ನು ನಡೆಸುತ್ತೀರೆಂಬ ಸಂಪೂರ್ಣ ವಿಶ್ವಾಸವಿದೆ. ಮತ್ತೊಮ್ಮೆ ತಮ್ಮ ಅವಧಿಯಲ್ಲಿ ವಿಧಾನ ಪರಿಷತ್ತಿನ ಈ ಪೀಠದಲ್ಲಿ ಇನ್ನೂ ಐತಿಹಾಸಿಕ ಕಾರ್ಯಗಳನ್ನು ಮಾಡುವಂತಾಗಲಿ ಎಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

**ಶ್ರೀ ಕೆ.ಟಿ. ಶ್ರೀಕಂಠೇಗೌಡ (ಪದವೀಧರರ ಕ್ಷೇತ್ರ):–** ಮಾನ್ಯ ಸಭಾಪತಿಯವರೇ ಮೊದಲನೆಯದಾಗಿ ಅತ್ಯಂತ ಪ್ರೀತಿಯಿಂದ ತಮಗೆ ಅಭಿನಂದಿಸುತ್ತೇನೆ. 2018 ನೇ ಸಾಲಿನ ಜೂನ್ ಕಡೆಯ ಅವಧಿಯಲ್ಲಿ ವಿಶೇಷವಾದ ಸಂದರ್ಭ ಈ ಸದನದಲ್ಲಿ ಸೃಷ್ಠಿಯಾಯಿತು. ಅಂದರೆ ಒಮ್ಮೆಲೇ ಸಭಾಪತಿ ಮತ್ತು ಉಪ ಸಭಾಪತಿಗಳಿಬ್ಬರು ನಿರ್ಗಮಿಸುವಂತಹ ಸಂದರ್ಭ ಸೃಷ್ಠಿಯಾಯಿತು. ಇದು ಅಪರೂಪಕ್ಕೆ ಬರುವಂತಹ ಸಂದರ್ಭವಾಗಿದ್ದು, ಆಗ ಮಾನ್ಯ ಶಂಕರಮೂರ್ತಿಯವರು ಪೀಠದಲ್ಲಿದ್ದರು, ಅವರ ಅವಧಿಯು ಮುಗಿಯಿತು. ಚುನಾವಣೆ ಬೇಡ ಎಂದು ಹೇಳಿದರು. ಮಾನ್ಯ ಮರಿತಿಬ್ಬೇಗೌಡರವರು ಉಪಸಭಾಪತಿಗಳಾಗಿದ್ದರು, ಅವರ ಅವಧಿಯೂ ಸಹ ಮುಗಿಯಿತು. ಅವರು ತಮ್ಮ ಶಿಕ್ಷಕರ ಕ್ಷೇತ್ರದ ಚುನಾವಣೆಯನ್ನು ಎದುರಿಸಬೇಕಾಯಿತು. ಹಾಗಾಗಿ ಒಮ್ಮೆಲೆ ಎರಡೂ ಸ್ಥಾನಗಳು ಖಾಲಿಯಾಯಿತು. ಸಂವಿಧಾನಬದ್ಧವಾಗಿ ಘನತೆವೆತ್ತ ರಾಜ್ಯಪಾಲರು ಈ ಸದನದ ಅತ್ಯಂತ ಹಿರಿಯ ಸದಸ್ಯರೆಂದು ಮಾನ್ಯ ಬಸವರಾಜ ಹೊರಟ್ಟಿಯವರನ್ನು ಸಭಾಪತಿ ಪೀಠಕ್ಕೆ ನಿಯೋಜನೆ ಮಾಡಿದರು.

(ಮುಂದು)

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**(379) 12-12-2018 (12-50) ಎಸ್‌ಪಿಆರ್-ಜಿಆರ್**

**(ಸಭಾಪತಿಯವರ ಉಪಸ್ಥಿತಿ)**

**ಶ್ರೀ ಕೆ.ಟಿ.ಶ್ರೀಕಂಠೇಗೌಡ(ಮುಂದು):-**

ಅವರು ಅಷ್ಟೇ ನ್ಯಾಯವನ್ನು ಈ ಪೀಠಕ್ಕೆ ತಂದುಕೊಟ್ಟರು. ನಂತರದಲ್ಲಿ ಶ್ರೀಯುತ ಬಸವರಾಜ ಹೊರಟ್ಟಿರವರೇ ಸಭಾಪತಿಯವರಾಗಿ ಮುಂದುವರೆಯುತ್ತಾರೆಂದು ನಾವೆಲ್ಲಾ ಅಂದುಕೊಂಡಿದ್ದೇವು. ನಂತರದಲ್ಲಿ ಶ್ರೀ ಎಸ್.ಆರ್.ಪಾಟೀಲ್‌ರವರು ಸಭಾಪತಿಯವರಾಗಿ ಆಯ್ಕೆಯಾಗುತ್ತಾರೆಂದು ಸಹ ಅಂದುಕೊಂಡಿದ್ದೇವು. ರಾಜಕಾರಣದಲ್ಲಿ ಏನೆಲ್ಲಾ ಸಂಗತಿಗಳು ಘಟಿಸಬಹುದು, ಸಂಭವಿಸಬಹುದು ಎನ್ನುವುದಕ್ಕೆ ಇವತ್ತಿನ ಈ ಘಟನಾವಳಿಯ ಬೆಳವಣಿಗೆಯೇ ಜ್ವಲಂತ ಸ್ವಾಕಿಯಾಗಿ ನಿಂತಿದೆ. ಈ ಸದನದ ಕಾಂಗ್ರೆಸ್ ಪಕ್ಷದಲ್ಲಿ ಹಿರಿತನಕ್ಕೆ ಎಲ್ಲಿಯೋ ಒಂದು ಕಡೆ ಗೌರವ ದೊರೆತಿದೆ. ಇದಕ್ಕೆ ಕಾರಣವೇನೆಂದರೆ, ಇದು ಹಿರಿಯರ, ಬುದ್ಧಿಜೀವಿಗಳ ಸದನವಾಗಿದೆ. ನಾನು ಈ ಸದನದ ಸದಸ್ಯನಾಗಿ ಈಗ ಒಂಭತ್ತನೇ ವರ್ಷ ಪ್ರಾರಂಭವಾಗಿದೆ. ನಾನು ಈ ಸದನದಲ್ಲಿ ಶ್ರೀಯುತ ಯಂ.ಸಿ.ನಾಣಯ್ಯ, ಡಾ॥ ವಿ.ಎಸ್.ಆಚಾರ್ಯ, ಶ್ರೀಯುತ ಬಸವರಾಜ ಹೊರಟ್ಟಿರವರುಗಳ ಮಾತುಗಳನ್ನು ಮತ್ತು ಡಾ॥ ತಂಗಾರವರ ವಿಚಾರಗಳನ್ನು ಕೇಳಿಸಿಕೊಂಡಿದ್ದೇನೆ. ಇವೆಲ್ಲಕ್ಕೂ ವಿಶೇಷವಾಗಿ ಶ್ರೀ ಹೆಚ್.ಕೆ.ಪಾಟೀಲ್ ರವರು ವಿರೋಧ ಪಕ್ಷದ ಸ್ಥಾನದ ಜವಾಬ್ದಾರಿಯನ್ನು ನಿರ್ವಹಿಸಿದ್ದನ್ನು ಕಣ್ಣಾರೇ ಕಂಡಿದ್ದೇನೆ. ಒಂದು ಕಾಲದಲ್ಲಿ ನಮ್ಮ ಈ ಮೇಲ್ಮನೆಯ ಬಗ್ಗೆ ದೊಡ್ಡ ಮಟ್ಟದ ಗೌರವ ಈ ರಾಜ್ಯದಲ್ಲಿತ್ತು. ಗುಣಮಟ್ಟದ ಚರ್ಚೆ ಹಾಗೂ ನಡವಳಿಕೆಯ ವಿಚಾರಗಳಲ್ಲಿ ಬಹಳ ಮೇಲುಸ್ತರವಾದ ಭಾವನೆಗಳು ಹಾಗೂ ಅಭಿಪ್ರಾಯಗಳಿದ್ದವು. ಯಾರಾದರೂ ಯಾರನ್ನಾದರೂ ಟೀಕೆ ಮಾಡಬೇಕಾದರೆ ನೇರವಾಗಿ ಹೇಳಿದ್ದ ಸಂದರ್ಭಗಳು ಈ ಸದನದಲ್ಲಿ ಇರಲಿಲ್ಲ. ಬಹಳ ಪರೋಕ್ಷವಾಗಿ ಮೊನಚು ಮಾತುಗಳಿಂದ ಅತ್ಯಂತ ಸೂಕ್ಷ್ಮವಾಗಿ ಹಾಸ್ಯದ ಮೂಲಕ ಚುಚ್ಚುವ ಸಂದರ್ಭಗಳನ್ನು ಮಾತ್ರವೇ ನಾನು ಕಂಡಿದ್ದೇನು. ಹೀಗಾಗಿ ಹಿರಿಯರ ಸದನದ ಘನತೆ ಹಾಗೂ ಗೌರವಗಳನ್ನು ಎತ್ತಿಹಿಡಿಯುವಂತಹ ಇದ್ದ ಪರಂಪರೆಯ ಪುನಃ ಪ್ರತಿಷ್ಠಾಪನೆ ಆಗಬೇಕಾಗಿದೆ. ಈ ದಿಸೆಯಲ್ಲಿ ಇವತ್ತಿನ ದಿವಸ ಹಿರಿತನಕ್ಕೆ ಈ ಪೀಠದ ಗೌರವ ಸಿಕ್ಕಿದೆ. ಮಾನ್ಯ ಸಭಾಪತಿಯವರು ಮೃದು ಮತ್ತು ಮಿತ ಭಾಷಿಯವರಾಗಿದ್ದು, ಸಮಾಜಮುಖಿಯಾಗಿದ್ದಾರೆ. ಇವೆಲ್ಲದರ ಜೊತೆಗೆ ಬದ್ಧತೆಯ ರಾಜಕಾರಣದ ವ್ಯಕ್ತಿತ್ವದವರಾಗಿದ್ದಾರೆ. ಪ್ರಾಯಶಃ ಮಾನ್ಯ ಸಭಾಪತಿಯವರನ್ನು ಈ ಸದನದ ಅಜಾತಶತೃ ಎಂದು ಕರೆದರೆ ಅದಕ್ಕೆ ಎಲ್ಲರೂ ಸಹ ತಮ್ಮ ಸಹಮತವನ್ನು ವ್ಯಕ್ತಪಡಿಸುತ್ತಾರೆ ಎಂದು ನಾನು ಬಯಸುತ್ತೇನೆ. ಏಕೆಂದರೆ ಸಭಾಪತಿಯಂತಹ ಸ್ಥಾನವು ಚುನಾವಣೆ ಇಲ್ಲದೆಯೇ ಎಲ್ಲರ ಸರ್ವ ಸಮ್ಮತ ಅಭಿಪ್ರಾಯದಿಂದ ಆಯ್ಕೆಯಾಗಿರುವುದೇ ಇದಕ್ಕೆ ಸಾಕ್ಷಿ

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಎಂದು ನಾನು ಭಾವಿಸುತ್ತೇನೆ. ಇವತ್ತಿನ ದಿವಸ ತಮಗೆ ಸಭಾಪತಿಯ ಸ್ಥಾನವು ಬಯಸದೇ ಬಂದ ಭಾಗ್ಯವಾಗಿದೆ. ಹೀಗಾಗಿ ನನಗಿರುವ ಭರವಸೆ ಏನೆಂದರೆ, ಮಾನ್ಯ ಸಭಾಪತಿಯವರ ಪೀಠವು ರಾಜಕಾರಣಿ, ಪಕ್ಷಗಳನ್ನೂ ಮೀರಿದ ಪೀಠವಾಗಿದೆ. ಎಲ್ಲಿಯೋ ಒಂದು ಕಡೆ ನಾವು ಈ ಪೀಠವನ್ನು ನ್ಯಾಯಾಧೀಶರ ಪೀಠ ಎಂಬುದಾಗಿ ನೋಡುವಂತಹ ಭಾವನೆಯನ್ನು ನಾವಿಟ್ಟುಕೊಂಡಿದ್ದೇವೆ. ಹೀಗಾಗಿ ಸಮಾನ ಭಾವನೆಯನ್ನು ತಂದು ಕೊಂಡು, ಸರ್ವರಿಗೂ ನ್ಯಾಯವನ್ನು ಒದಗಿಸುವ ದಿಸೆಯಲ್ಲಿ ಪುನಃ ಈ ಸದನದ ಘನತೆ-ಗೌರವಗಳನ್ನು ಎತ್ತಿ ಹಿಡಿಯುವ ಹಾದಿಯಲ್ಲಿ ಮಾನ್ಯ ಸಭಾಪತಿಯವರ ಮುಂದಿನ ದಿನಗಳು ಸಾಗಲಿ ಎಂದು ನಾನು ಬಯಸುತ್ತೇನೆ. ನಿರ್ಗಮಿತ ಸಭಾಪತಿಗಳಾದ ಶ್ರೀಯುತ ಬಸವರಾಜ ಹೊರಟ್ಟಿ ಯವರೂ ಸಹ ಈ ಸದನಕ್ಕೆ ಅಷ್ಟೇ ಗೌರವವನ್ನು ತಂದುಕೊಡುವಂತಹ ಕೆಲಸವನ್ನು ನಿರಂತರವಾಗಿ ಕಳೆದ ಆರು ತಿಂಗಳುಗಳಿಂದ ನಿರ್ವಹಿಸಿದ್ದಾರೆ. ಅವರಿಗೂ ಸಹ ನಾನು ಕೃತಜ್ಞತೆಗಳನ್ನು ಸಲ್ಲಿಸುತ್ತೇನೆ. ಪ್ರಸ್ತುತ ಸಭಾಪತಿಯವರಿಗೆ ಮುಂದಿನ ದಿನಗಳಲ್ಲಿ ಯಶಸ್ಸು ದೊರೆಯಲಿ ಹಾಗೂ ಅವರ ಮೂಲಕ ಈ ಸದನದ ಹಾಗೂ ಪೀಠದ ಘನತೆ, ಗೌರವಗಳು ಮತ್ತೂ ವೃದ್ಧಿಸಲಿ ಎಂಬುದಾಗಿ ಮನಃಪೂರ್ವಕವಾಗಿ ಮತ್ತೊಂದು ಬಾರಿ ಅಭಿನಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

**ಶ್ರೀ ಎನ್.ರವಿಕುಮಾರ್(ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಈಗ ಹೆಚ್ಚು ವೇಳೆಯಾಗಿರುವುದರಿಂದ ನಾನು ಶೀಘ್ರದಲ್ಲಿ ನನ್ನ ಮಾತುಗಳನ್ನು ಮುಗಿಸುತ್ತೇನೆ. 'Experience makes the man perfect' ಎಂಬುದಾಗಿ ಆಂಗ್ಲ ಭಾಷೆಯಲ್ಲಿ ಒಂದು ನಾಣ್ನುಡಿ ಇದೆ. ಇದೇ ರೀತಿಯಲ್ಲಿ ಕಾಂಗ್ರೆಸ್ ಪಕ್ಷದವರು ಬಹಳ ತಜ್ಞರಾದ ಹಾಗೂ ಅನುಭವಿಗಳನ್ನು ಸಭಾಪತಿಯವರ ಹುದ್ದೆಗೆ ಆಯ್ಕೆ ಮಾಡಿದ್ದಾರೆ. ಹೀಗಾಗಿ ಈ ಸಂದರ್ಭದಲ್ಲಿ ನಾನು ಕಾಂಗ್ರೆಸ್ ಪಕ್ಷವನ್ನು ಅಭಿನಂದಿಸುತ್ತೇನೆ. ಅದೇ ರೀತಿಯಾಗಿ ನಾವು ನಿನ್ನೆಯ ದಿವಸ ನಮ್ಮ ಪಕ್ಷದ ರಾಜ್ಯಾಧ್ಯಕ್ಷರವರನ್ನು ಈ ವಿಚಾರದ ಬಗ್ಗೆ ಕೇಳಿದ ಸಂದರ್ಭದಲ್ಲಿ, ಮಾನ್ಯ ಸಭಾಪತಿಯವರನ್ನು ಅವಿರೋಧವಾಗಿ ಆಯ್ಕೆ ಮಾಡುವುದು ಒಳ್ಳೆಯದು ಎಂಬುದಾಗಿ ತಿಳಿಸಿದರು. ಆ ರೀತಿಯಾಗಿ ಒಂದು ಉನ್ನತ ಹುದ್ದೆಗೆ ಅವಿರೋಧವಾಗಿ ಆಯ್ಕೆ ಮಾಡುವುದಕ್ಕೆ ನಮ್ಮ ಪಕ್ಷವು ನಿರ್ಣಯವನ್ನು ತೆಗೆದುಕೊಂಡಿದೆ. ಈ ಸದನದಲ್ಲಿ ನಡೆಯುವ ಚರ್ಚೆಗಳು ಪಾಲಿಸಿಯಾಗಬೇಕೆಂದು ನಾನು ವಿನಂತಿಸುತ್ತೇನೆ ಹಾಗೂ ಈ ವಿಚಾರದಲ್ಲಿ ಹೆಚ್ಚು ಒತ್ತನ್ನು ನೀಡುವುದು ಒಳ್ಳೆಯದು. ಇದರಿಂದಲೇ ಮಾತ್ರವೇ ಸಮಾಜದಲ್ಲಿ ಸ್ವಲ್ಪ ಮಟ್ಟಿಗಾದರೂ ಸಹ ಬದಲಾವಣೆಗೆ ಅವಕಾಶವಾಗುತ್ತದೆ. ಚರ್ಚೆ, ಮಂಥನಗಳು ಸಮಯ ವ್ಯರ್ಥ ಮಾಡುವುದಕ್ಕಾಗಿ ಆದರೆ ಇದರಿಂದ ಸಮಾಜಕ್ಕೆ ಒಳ್ಳೆಯದನ್ನು ಮಾಡುವುದಕ್ಕಾಗುವುದಿಲ್ಲ. ಹೀಗಾಗಿ ಮಾಡುವ ಚರ್ಚೆಗಳಿಂದ ಪಾಲಿಸಿ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಆಗುವ ನಿಟ್ಟಿನಲ್ಲಿ ಹೆಚ್ಚು ಸಮಯಾವಕಾಶವನ್ನು ನೀಡಿದರೆ ತುಂಬಾ ಒಳ್ಳೆಯದಾಗುತ್ತದೆ ಎಂಬ ಆಶಯವನ್ನು ನಾನು ವ್ಯಕ್ತಪಡಿಸುತ್ತೇನೆ. ಹೀಗಾಗಿ ಈ ಸಂದರ್ಭದಲ್ಲಿ ಮಾನ್ಯ ಸಭಾಪತಿಯವರಿಗೆ ಅಭಿನಂದನೆಗಳನ್ನು ಸಲ್ಲಿಸುತ್ತೇನೆ. ನಿರ್ಗಮಿತ ಹಂಗಾಮಿ ಸಭಾಪತಿಯವರಾಗಿದ್ದ ಶ್ರೀಯುತ ಬಸವರಾಜ ಹೊರಟ್ಟಿ ರವರ ಬಗ್ಗೆ ಹೇಳುವುದಾದರೆ, ನಾನು ವಿದ್ಯಾರ್ಥಿ ಪರಿಷತ್‌ನಲ್ಲಿ ಸಾಕಷ್ಟು ವರ್ಷಗಳ ಕಾಲ ಕೆಲಸವನ್ನು ನಿರ್ವಹಿಸಿದ ಸಂದರ್ಭದಲ್ಲಿ ಹುಬ್ಬಳ್ಳಿ ಪ್ರದೇಶದಲ್ಲಿ ಮಾನ್ಯ ಹೊರಟ್ಟಿರವರು ಬಹಳ ಹಿರಿಯರಾಗಿದ್ದು, ಅವರ ಜೊತೆಯಲ್ಲಿ ಸಾಕಷ್ಟು ಹೋರಾಟಗಳನ್ನು ನಾವು ಮಾಡಿದ್ದೇವೆ. ಮಾನ್ಯ ಡಿ.ಹೆಚ್.ಶಂಕರಮೂರ್ತಿಯವರು ಈ ಹಿಂದೆ ಉನ್ನತ ಶಿಕ್ಷಣ ಸಚಿವರಾಗಿದ್ದ ಸಂದರ್ಭದಲ್ಲಿ ಬೆಳಿಗ್ಗೆ 6:00 ಗಂಟೆಗೆ ಅವರ ಮನೆಯ ಮುಂದೆ ನಾನು ಒಂದು ಸಾವಿರ ವಿದ್ಯಾರ್ಥಿಗಳೊಂದಿಗೆ ಧರಣಿ ಸತ್ಯಾಗ್ರಹ ಮಾಡಿದೆನು. ಆಗ ನಾವು ಘೋಷಣೆಗಳನ್ನು ಕೂಗಿದಂತಹ ಸಂದರ್ಭದಲ್ಲಿ ಮಾನ್ಯ ಶಂಕರಮೂರ್ತಿರವರು ಮನೆಯಿಂದ ಹೊರಗಡೆ ಬರಲಿಲ್ಲ. ಆದರೆ ಅವರ ಪಕ್ಕದ ಮನೆಯಲ್ಲಿದ್ದ ಶ್ರೀಯುತ ಬಸವರಾಜ ಹೊರಟ್ಟಿರವರು ಹೊರಗಡೆ ಬಂದರು. ಆಗ ಶ್ರೀಯುತ ಹೊರಟ್ಟಿರವರು ಶ್ರೀ ಶಂಕರಮೂರ್ತಿರವರು ನಿಮ್ಮ ಪಕ್ಷದವರೇ ಆಗಿದ್ದು, ಮಂತ್ರಿಗಳೂ ಸಹ ಆಗಿದ್ದಾರೆ. ನೀವು ಅವರ ವಿರುದ್ಧ ಹೋರಾಟ ಮಾಡುತ್ತೀರಲ್ಲ ಎಂಬುದಾಗಿ ಪ್ರಶ್ನೆಯನ್ನು ಕೇಳಿದರು. ಇಂತಹ ಹಲವಾರು ವಿಷಯಗಳಲ್ಲಿ ನಮಗೆ ಹಾಗೂ ಶ್ರೀಯುತ ಹೊರಟ್ಟಿರವರಿಗೆ ಬಹಳ ಆತ್ಮೀಯತೆ ಇತ್ತು. ನಾವು ಅವರೊಂದಿಗೆ ಸಾಕಷ್ಟು ಧರಣಿ, ಚಳುವಳಿಗಳನ್ನು ಮಾಡಿದ್ದೇವೆ. ನಿರ್ಗಮಿತ ಸಭಾಪತಿಯವರಾದ ಶ್ರೀ ಬಸವರಾಜ ಹೊರಟ್ಟಿರವರು ಈ ಸದನಕ್ಕೆ ಸಾಕಷ್ಟು ಒಳ್ಳೆಯದನ್ನು ಮಾಡಿದ್ದಾರೆ. ಹೀಗಾಗಿ ಈ ಸಂದರ್ಭದಲ್ಲಿ ಅವರಿಗೂ ಸಹ ಶುಭಾಶಯಗಳನ್ನು ಕೋರುತ್ತೇನೆ. ಪ್ರಸ್ತುತ ಸಭಾಪತಿಯವರನ್ನು ಆಯ್ಕೆ ಮಾಡಿದ್ದಕ್ಕಾಗಿ ಕಾಂಗ್ರೆಸ್ ಪಕ್ಷವನ್ನು ಮತ್ತೊಂದು ಬಾರಿ ಅಭಿನಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

**ಶ್ರೀ ಎಂ.ವಿ.ವೇಣುಗೋಪಾಲ್(ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಇವತ್ತಿನ ದಿವಸ ಆಯ್ಕೆಯಾದ ನೂತನ ಸಭಾಪತಿಗಳಿಗೆ ನಾನು ಮೊಟ್ಟಮೊದಲನೇಯದಾಗಿ ಅಭಿನಂದನೆಯನ್ನು ಸಲ್ಲಿಸುತ್ತೇನೆ. ನಿರ್ಗಮಿತ ಹಂಗಾಮಿ ಸಭಾಪತಿಗಳಾದ ಶ್ರೀಯುತ ಬಸವರಾಜ ಹೊರಟ್ಟಿರವರಿಗೆ ಧನ್ಯವಾದಗಳನ್ನು ಸಲ್ಲಿಸುತ್ತೇನೆ. ನಾನು ಈ ಸದನಕ್ಕೆ ಮೊಟ್ಟ ಮೊದಲ ಬಾರಿಗೆ ಸದಸ್ಯನಾಗಿ ಆಯ್ಕೆಯಾಗಿ ಬಂದಿದ್ದು, ಸದನದಲ್ಲಿ ಇಂದು ನನ್ನ ಮೂರನೇಯ ದಿವಸವಾಗಿದೆ. ನಾನು ವಿದ್ಯಾರ್ಥಿಯಾಗಿದ್ದಾಗ ಮಾನ್ಯ ಸಭಾಪತಿಯವರು ಶಾಸಕರಾಗಿದ್ದರು. ನಾವು ವಿದ್ಯಾರ್ಥಿ ಘಟಕದಲ್ಲಿದ್ದಾಗ ಅದು ಕೇಂದ್ರಸ್ಥಾನವಾಗಿತ್ತು. ನಾನು ಹಾಗೂ ಶ್ರೀ ವಿನಯ್ ಕುಮಾರ್‌ರವರು N.S.U.I.,

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

(National Students Union of India) ವಿದ್ಯಾರ್ಥಿ ಘಟಕದಲ್ಲಿ ಕಾರ್ಯವನ್ನು ನಿರ್ವಹಿಸುತ್ತಿದ್ದ ಸಂದರ್ಭದಲ್ಲಿ ಮಾನ್ಯ ಸಭಾಪತಿಯವರು ಹೆಚ್ಚಿನ ರೀತಿಯಲ್ಲಿ ಪ್ರೋತ್ಸಾಹ, ಸಹಕಾರವನ್ನು ನೀಡಿದ್ದರ ಫಲವಾಗಿ ನಾವು ಅಂದಿನ ದಿನವೇ ಶಾಸಕರ ಭವನಕ್ಕೆ ಹೋಗಲು ರೂಢಿ ಮಾಡಿಕೊಂಡಿದ್ದೇವು. ಆ ಸಂದರ್ಭದಲ್ಲಿ ಮಾನ್ಯ ಸಚಿವರಾದ ಶ್ರೀ ಕೆ.ಜೆ.ಜಾರ್ಜ್‌ರವರು ಯುಥ್ ಕಾಂಗ್ರೆಸ್‌ನ ಅಧ್ಯಕ್ಷರಾಗಿದ್ದರು. ಮಾನ್ಯ ಸಭಾಪತಿಯವರು ಮೂರು ಬಾರಿ ವಿಧಾನ ಪರಿಷತ್ತಿನ ಸದಸ್ಯರಾಗಿ ಹಾಗೂ ನಾಲ್ಕು ಬಾರಿ ವಿಧಾನ ಸಭೆಯ ಸದಸ್ಯರಾಗಿ ಆಯ್ಕೆಗೊಂಡಿದ್ದರೂ ಸಹ ಅವರಿಗೆ ರಾಜಕೀಯದಲ್ಲಿ ಸ್ಥಾನಮಾನ ದೊರೆತಿಲ್ಲ ಎಂದು ಯಾವುದೇ ರೀತಿಯಲ್ಲಿ ಧೃತಿಗೆಡದೇ, ಪಕ್ಷದ ಶಿಸ್ತಿನ ಸಿಪಾಯಿಯಾಗಿ ಯುವಕರು ಹಾಗೂ ಹಿರಿಯರಂತಹ ಎಲ್ಲಾ ವರ್ಗದ ಜನರೊಂದಿಗೆ ಪ್ರೀತಿ ಪಾತ್ರರಾಗಿದ್ದರು ಎಂಬುದನ್ನು ಹೇಳಲಿಚ್ಛಿಸುತ್ತೇನೆ. 'Voice of today is the choice of tomorrow' ಎನ್ನುವ ಮಾತಿನಂತೆ ಇವತ್ತಿನ ದಿನದ ಧ್ವನಿ ಮುಂದಿನ ಆಯ್ಕೆಯಾಗಿರುತ್ತದೆ. ಇವತ್ತಿನ ದಿವಸ ಆಯ್ಕೆಯಾದ ಸಭಾಪತಿಯವರು ಎಲ್ಲರ ಪ್ರೀತಿಪಾತ್ರರಾಗಿದ್ದಾರೆ. ಈ ಸದನವನ್ನು ಬಹಳ ಘನತೆ, ಗೌರವಗಳಿಂದ ನಡೆಸುತ್ತಾರೆಂಬ ನಂಬಿಕೆ ನಮ್ಮಲ್ಲಿದೆ. ಇದರ ಜೊತೆಗೆ ಮಾನ್ಯ ಸಭಾಪತಿಯವರು ಟೀಕೆ-ಟಿಪ್ಪಣಿಗಳನ್ನು ಮಾಡುವುದಕ್ಕೆ, ಪರ-ವಿರೋಧ ಮಾತುಗಳನ್ನು ಆಡುವುದಕ್ಕೆ ಸಮಯ ವ್ಯರ್ಥ ಮಾಡದೇ ಈ ಸದನದ ಮೂಲಕ ಸಮಾಜದ ಎಲ್ಲಾ ವರ್ಗದ ಜನರಿಗೆ ನ್ಯಾಯವನ್ನು ಒದಗಿಸುವಂತಹ ಕೆಲಸವನ್ನು ಮಾಡಲು ಅವಕಾಶ ಮಾಡಿಕೊಡಬೇಕೆಂದು ಹೇಳುತ್ತಾ, ಮತ್ತೊಂದು ಬಾರಿ ನೂತನ ಸಭಾಪತಿಯವರಿಗೆ ಅಭಿನಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

**ಶ್ರೀ ಲಹರ್ ಸಿಂಗ್ ಸಿರೋಯಾ(ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ನೂತನ ಸಭಾಪತಿಯವರಿಗೆ ತುಂಬು ಹೃದಯದಿಂದ ಅಭಿನಂದನೆ ಹಾಗೂ ಶುಭಾಶಯಗಳನ್ನು ಸಲ್ಲಿಸುತ್ತೇನೆ. ನಿನ್ನೆ ಮೊನ್ನೆಯವರಿಗೆ ಎಲ್ಲರೂ ಹೇಳುವ ಹಾಗೆ ಸಭಾಪತಿಯವರ ಸ್ಥಾನಕ್ಕೆ ಬೇರೆಯವರ ಹೆಸರನ್ನು ಹೇಳಲಾಗುತ್ತಿತ್ತು. ಹಠಾತ್ತಾಗಿ ಮಾನ್ಯ ಸಭಾಪತಿಯವರ ಸ್ಥಾನಕ್ಕೆ ಶ್ರೀ ಕೆ.ಪ್ರತಾಪಚಂದ್ರ ಶೆಟ್ಟಿಯವರನ್ನು ಆಯ್ಕೆ ಮಾಡಲಾಗುತ್ತದೆ ಎಂದು ಯಾರೋ ನಮಗೆ ತಿಳಿಸಿದರು. ಇದನ್ನು ಕೇಳಿ ನಮಗೆ ಬಹಳ ಸಂತೋಷವಾಯಿತು ಹಾಗೂ ಈ ನಿರ್ಣಯವನ್ನು ತೆಗೆದುಕೊಂಡಿರುವವರಿಗೂ ಸಹ ನಾನು ಅಭಿನಂದನೆಗಳನ್ನು ಸಲ್ಲಿಸುತ್ತೇನೆ. ಮಾನ್ಯ ಸಭಾಪತಿಯವರನ್ನು ನಾನು ನೋಡಿದ್ದೇನೆ. ಅವರು ಯಾವಾಗಲೂ ಬಹಳ ಶಾಂತತೆಯಿಂದ ಇರುತ್ತಾರೆ. ನಾನು ಈ ಸದನದ ಸದಸ್ಯನಾಗಿ ಕಳೆದ ಒಂಬತ್ತು ವರ್ಷಗಳಿಂದ ಕೆಲಸ ನಿರ್ವಹಿಸುತ್ತಿದ್ದೇನೆ. ಶ್ರೀಯುತರು ನಾಲ್ಕು ಬಾರಿ ಈ ಸದನದ ಸದಸ್ಯರಾಗಿ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಆಯ್ಕೆಗೊಂಡಿದ್ದ ವಿಚಾರವು ಇಲ್ಲಿಯವರೆಗೆ ನನಗೆ ತಿಳಿದಿರಲಿಲ್ಲ. ನಾನು ಮೂರನೆ ಬಾರಿಗೆ ಈ ಸದನದ ಸದಸ್ಯನಾಗಿ ಆಯ್ಕೆಗೊಂಡಾಗ ಈ ವಿಷಯವು ನನಗೆ ತಿಳಿಯಿತು. ಶ್ರೀಯುತರು ಯಾವುದೇ ಸ್ಥಾನವನ್ನು ಅಪೇಕ್ಷಿಸಿರಲಿಲ್ಲ. ಮಧ್ಯ ಪ್ರದೇಶ ರಾಜ್ಯದ ಮಾಜಿ ಮುಖ್ಯಮಂತ್ರಿಗಳಾದ ಮಾನ್ಯ ಸುಂದರ್ ಲಾಲ್ ಪಟ್ವಾರವರು ಯಾವುದೋ ಒಂದು ಸಂದರ್ಭದಲ್ಲಿ ನಮಗೆ ಹೇಳಿದ **"ಸಹಜ್ ಮಿಲೇ ಸೋ ದೂಧ್ ಬರಾಬರ್; ಮಾಂಗ್ ಮಿಲೇ ಸೋ ಪಾನಿ ; ಖೇಂಚ್ ಮಿಲೇ ಸೋ ರಕ್ತ್ ಬರಾಬರ್ – ಯಹಿ ಗುರು ಕಿ ವಾಣಿ"** ಎಂಬ ದೋಹೆಯಂತೆ ಸಹಜವಾಗಿ ದೊರೆತರೆ ಅದು ಹಾಲಿಗೆ ಸಮನಾಗಿದ್ದು, ಕೇಳಿ ಪಡೆದಿದ್ದು ನೀರಿಗೆ ಸಮವಾಗಿದ್ದು, ಜಿದ್ದಾ ಜಿದ್ದಿ ಮಾಡಿ ಪಡೆದುಕೊಂಡರೆ ಅದು ನೆತ್ತರಿಗೆ ಸಮನಾಗಿರುತ್ತದೆ. ಮಾನ್ಯ ತಮ್ಮನ್ನು ಸಭಾಪತಿಯನ್ನಾಗಿ ಆಯ್ಕೆ ಮಾಡಿದ ಕಾಂಗ್ರೆಸ್ ಪಕ್ಷಕ್ಕೆ ನಾನು ಅಭಿನಂದನೆಯನ್ನು ಸಲ್ಲಿಸುತ್ತೇನೆ. ಸಜ್ಜನ ರಾಜಕಾರಣಿಯನ್ನು ಸಭಾಪತಿಯವರ ಸ್ಥಾನದಲ್ಲಿ ಕೂರಿಸುವಂತಹ ನಿರ್ಣಯವನ್ನು ತೆಗೆದುಕೊಂಡಿರುವುದರಿಂದ ನಮಗೆ ಒಂದು ರೀತಿಯ ಧೈರ್ಯ ಬಂದಿದೆ. ನಾನು ಮೊದಲನೇ ಸಾಲಿನಲ್ಲಿ ಕುಳಿತರೂ ಸಹ ಹಿಂದಿನ ಬೆಂಚ್‌ಗಳಲ್ಲಿ ಕುಳಿತುಕೊಳ್ಳುವವರಂತಹ ಸ್ವಭಾವ ನನ್ನದಾಗಿದೆ. ನಾನು ಹೆಚ್ಚಾಗಿ ಯಾವುದೇ ರೀತಿಯ ಹಸ್ತಕ್ಷೇಪ ಮಾಡುವುದಿಲ್ಲ. ಭಾಷಣ ಮಾಡುವ ರೀತಿಯಲ್ಲಿ ಮಾತನಾಡುವುದಿಲ್ಲ. ತಾವು ಸಭಾಪತಿಯಾಗಿ ಬಂದಿದ್ದೀರಿ ಇನ್ನು ಮುಂದೆ ನಾನು ಮಾತನಾಡಲು ಪ್ರಾರಂಭಿಸುತ್ತೇನೆ. ನಮಗೂ ಸಹ ಮಾತನಾಡಲು ಅವಕಾಶ ದೊರೆಯುತ್ತದೆಂದು ಭಾವಿಸುತ್ತೇನೆ.

(ಮುಂದು)

(380) 12–12–2018 (1–00) ಎಲ್‌ಎಂ/ಜಿಆರ್

**ಶ್ರೀ ಲಹರ್ ಸಿಂಗ್ ಸಿರೋಯಾ(ಮುಂದು):-**

ತಮ್ಮ ಬಗ್ಗೆ ಆಡಳಿತ ಹಾಗೂ ವಿರೋಧ ಪಕ್ಷಗಳ ಮಾನ್ಯ ಸದಸ್ಯರು ಮಾತನಾಡಿದ್ದಾರೆ. ಇದೇ ರೀತಿಯ ಸಹಕಾರವನ್ನು ತಮಗೆ ಕೊಡುತ್ತೇವೆ. ನಾವು ಬಾವಿಗೆ ಹೋಗದಂತೆ ತಾವು ನೋಡಿಕೊಳ್ಳಬೇಕು ಮತ್ತು ಆಡಳಿತ ಪಕ್ಷದವರು ನಮ್ಮನ್ನು ಬಾವಿಗೆ ಹೋಗುವಂತೆ ಮಾಡಬಾರದು ಎಂದು ವಿನಂತಿ ಮಾಡಿಕೊಳ್ಳುತ್ತೇನೆ. ನಾವು ಬಾವಿಗೆ ಬರಲು ಅನೇಕ ಬಾರಿ ಮಾನ್ಯ ಐವನ್ ಡಿ'ಸೋಜಾರವರು ಕಾರಣರಾಗುತ್ತಾರೆ. ಆದ್ದರಿಂದ ಅವರು ನಮ್ಮನ್ನು ಅನವಶ್ಯಕವಾಗಿ provoke ಮಾಡಬಾರದೆಂದು ನಾನು ವಿನಂತಿ ಮಾಡಿಕೊಳ್ಳುತ್ತೇನೆ. ನಾವು ಕೂಡ provoke ಮಾಡುವುದಿಲ್ಲ. ಮಾನ್ಯ ಆಯನೂರು ಮಂಜುನಾಥ್‌ರವರು ಮೊನ್ನೆ ಶಾಸಕರ ಪಿಂಚಣಿ ಬಗ್ಗೆ ಹೇಳುವುದನ್ನು ಕೇಳಿ ನನಗೆ ಬಹಳ feeling

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಆಯಿತು. ಆರು ಕೋಟಿ ಜನ ನಮ್ಮನ್ನು ಇಷ್ಟು ಚೆನ್ನಾಗಿ ನೋಡಿಕೊಳ್ಳುತ್ತಿದಾರೆ; ನಾವು ಜನಪರವಾದ ಚರ್ಚೆಗಳನ್ನು ಮಾಡಬೇಕು, ಸುಮ್ಮನೆ ಸಮಯ ವ್ಯರ್ಥ ಮಾಡುವುದು ಬೇಡ. ರೈತರ ಸಮಸ್ಯೆ ಬಗ್ಗೆ, ಬಡವರ ಸಮಸ್ಯೆ ಬಗ್ಗೆ ಕಾಳಜಿಪೂರ್ವಕ ಚರ್ಚೆಯಾಗಬೇಕು. ನಾವು ತಮಗೆ ಸಹಕಾರವನ್ನು ಕೊಡುತ್ತೇವೆ, ಎಲ್ಲರೂ ಸಹಕಾರ ಕೊಡಬೇಕೆಂದು ಕೇಳಿಕೊಂಡು ತಮಗೆ ಅಭಿನಂದನೆಗಳನ್ನು ಸಲ್ಲಿಸಿ ನನ್ನ ಮಾತುಗಳನ್ನು ಮುಕ್ತಾಯಗೊಳಿಸುತ್ತೇನೆ ಧನ್ಯವಾದಗಳು.

**ಶ್ರೀ ಪ್ರಾಣೇಶ್ ಎಂ.ಕೆ.(ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-** ಮಾನ್ಯ ಸಭಾಪತಿಗಳೆ, ಹೊಸದಾಗಿ ಆಯ್ಕೆಯಾಗಿರುವ ಮಾನ್ಯ ಸಭಾಪತಿಗಳಿಗೆ ಅಭಿನಂದನೆಗಳನ್ನು ಸಲ್ಲಿಸುತ್ತೇನೆ. ನಾನು ಹೊಸದಾಗಿ ಬಂದಾಗ ಸದನದ ಒಳಗೆ ಹೇಗೆ ನಡೆದುಕೊಳ್ಳಬೇಕು ಎನ್ನುವುದನ್ನು ನಮ್ಮ ಸದನದ ಆದರ್ಶ ಸದಸ್ಯರುಗಳಿಂದ ಕಲಿತಿದ್ದೇನೆ. ಅಂತಹ ಆದರ್ಶ ಸದಸ್ಯರು ಈಗ ಕೆಲವರು ಇಲ್ಲಿ ಇಲ್ಲ. ಇದ್ದವರಲ್ಲಿ ಆದರ್ಶ ಸದಸ್ಯರಾಗಿ ಕಾಣಿಸುತ್ತಿರುವವರು ಪ್ರಥಮವಾಗಿ ಮಾನ್ಯ ಬಸವರಾಜ ಹೊರಟ್ಟಿಯವರು. ಅವರು ಸದನದಲ್ಲಿ ಹೇಗೆ ನಡೆದುಕೊಳ್ಳುತ್ತಾರೆ ಹೇಗೆ ಮಾತನಾಡುತ್ತಾರೆ ಎನ್ನುವುದನ್ನು ನಾನು ನೋಡುತ್ತಿದೆ. ನಾವು ಹೊಸದಾಗಿ ಬಂದಿರುವಂತಹ ಸದಸ್ಯರಾದ್ದರಿಂದ ಅನೇಕ ಹಿರಿಯ ಸದಸ್ಯರನ್ನು ಗಮನಿಸಿ ನಾವು ಎಲ್ಲವನ್ನು ತಿಳಿದುಕೊಳ್ಳುತ್ತಿದ್ದೇವೆ. ಮೇಲ್ಮನೆ ಎಂದರೆ ವಿಶೇಷತೆಯನ್ನು ಕಂಡುಕೊಂಡಿರುವಂಥದ್ದು. ಈಗ ನಾನು ಏಕೆ ಮಾನ್ಯ ಬಸವರಾಜ ಹೊರಟ್ಟಿಯವರನ್ನು ನೆನಪು ಮಾಡಿಕೊಳ್ಳುತ್ತೇನೆ ಎಂದರೆ, ನಾನು ಹೊಸದಾಗಿ ಆಯ್ಕೆಯಾಗಿ ಬಂದ ಸಂದರ್ಭದಲ್ಲಿ ನನಗೆ ಮಾತನಾಡಲು ಅವಕಾಶ ಕೊಡಲಾಗಿತ್ತು. ನಾನು ಮಾತನಾಡಿ ಹೊರಗೆ ಬಂದ ಮೇಲೆ ಅವರು ನನ್ನ ಬೆನ್ನುತಟ್ಟಿ 'ಚೆನ್ನಾಗಿ ಮಾತನಾಡಿದಿಯಪ್ಪ' ಎಂದು ಹೇಳಿದರು. ಮತ್ತು ಇದು ಮೇಲ್ಮನೆ ಇಲ್ಲಿ ಹಿರಿಯ ಸದಸ್ಯರು ಏನು ಮಾತನಾಡುತ್ತಾರೆ ಎನ್ನುವುದನ್ನು ಗಮನಿಸಬೇಕು, ನಂತರ ನೀವು ಮಾತನಾಡಬೇಕು ಎಂದು ಹೇಳಿದರು. ಆಗ ನನಗೆ ಅನ್ನಿಸಿದ್ದು; ಈ ಅನುಭವಗಳು ಎಷ್ಟು ಕೆಲಸಗಳನ್ನು ಮಾಡಿಸುತ್ತವೆ, ಬೇರೆಯವರನ್ನು ತಿದ್ದುವಂತಹ ಕೆಲಸವನ್ನು ಮಾಡುತ್ತದೆ. ಹೀಗಾಗಿ ಮಾನ್ಯ ಬಸವರಾಜ ಹೊರಟ್ಟಿಯವರು ನನಗೆ ಆದರ್ಶವಾಗಿ ಕಂಡರು. ಅವರು ಕೂಡಾ ಒಳ್ಳೆಯ ಸ್ಥಾನದಲ್ಲಿ ಕುಳಿತು ಕೆಲಸ ಮಾಡಿ ನಿರ್ಗಮಿಸಿದರು. ಇನ್ನೊಬ್ಬರು ಆದರ್ಶ ವ್ಯಕ್ತಿ ಎಂದರೆ ಮಾನ್ಯ ಸಭಾಪತಿಗಳು. ಇಲ್ಲಿ ಹಲವಾರು ವಿಚಾರಗಳು ಚರ್ಚೆಯಾಗುತ್ತಿರುವಂತಹ ಸಂದರ್ಭದಲ್ಲಿ ಕೆಲವರು ಉದ್ವೇಗಕ್ಕೆ ಒಳಗಾಗುತ್ತಿದ್ದರು. ಆದರೆ ತಾವು ಮಾತ್ರ ಯಾವುದೇ ರೀತಿಯ ಉದ್ವೇಗಕ್ಕೆ ಒಳಗಾಗದೆ, ಇರುವಂತಹ ವಿಚಾರವನ್ನು ಯಾವ ರೀತಿ ಮುಟ್ಟಿಸಬೇಕು ಎನ್ನುವಂತಹ ವ್ಯಕ್ತಿತ್ವವನ್ನು ತಾವು ಹೊಂದಿದ್ದೀರಿ. ಹೀಗೆ ಹಲವಾರು ಸದಸ್ಯರು ಇಲ್ಲಿ ಆದರ್ಶ ವ್ಯಕ್ತಿಗಳಾಗಿದ್ದರು.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಮಾಜಿ ಸಭಾಪತಿಗಳಾದ ಮಾನ್ಯ ಡಿ.ಎಚ್.ಶಂಕರಮೂರ್ತಿಯವರು ನಮ್ಮ ಗುರುಗಳು, ನಮ್ಮನ್ನು ತಿದ್ದಿ ತೀಡಿ ನಾವು ಈ ಹಂತಕ್ಕೆ ಬರುವ ನಿಟ್ಟಿನಲ್ಲಿ ಅವರು ಪ್ರಮುಖ ಪಾತ್ರವನ್ನು ವಹಿಸಿದರು. ತಾವು ಸ್ಥಳೀಯ ಸಂಸ್ಥೆಗಳಿಂದ ಆಯ್ಕೆಯಾಗಿ ಬಂದಿರುವವರು. ಅಲ್ಲಿಯ ಸಮಸ್ಯೆಗಳ ಸಂಪೂರ್ಣ ಅರಿವು ತಮಗೆ ಇದೆ. ಸ್ಥಳೀಯ ಸಂಸ್ಥೆಗಳ ಸಮಸ್ಯೆಗಳನ್ನು ಬಗೆಹರಿಸಲು ಏನು ಮಾಡಬೇಕು ಎನ್ನುವ ನಿಟ್ಟಿನಲಿ ನಮಗೆ ಸಹಕಾರ ಸಿಗುತ್ತಿಲ್ಲ. ಈಗ ಅದಕ್ಕೆ ನ್ಯಾಯ ಸಿಗುತ್ತದೆ ಎಂದು ನಮಗನ್ನಿಸುತ್ತದೆ. ತಾವು ನಿಷ್ಪಕ್ಷಪಾತವಾಗಿ ಕೆಲಸ ಮಾಡುವಂತವರು. ಆದರೂ ತಾವೂ ಕೂಡಾ ಸ್ಥಳೀಯ ಸಂಸ್ಥೆಗಳಿಂದ ಬಂದಿರುವುದರಿಂದ ಆ ಕ್ಷೇತ್ರಕ್ಕೂ ನ್ಯಾಯವನ್ನು ದೊರಕಿಸಿ ಕೊಡುವಲ್ಲಿ ಪ್ರಮುಖ ಪಾತ್ರವನ್ನು ವಹಿಸಬಹುದು ಎನ್ನುವ ವಿಶ್ವಾಸ ನಮಗಿದೆ. ಇದು ತಮಗೆ ಬಯಸದೆ ಬಂದಿರುವ ಭಾಗ್ಯ, ಆ ಕ್ಷೇತ್ರದ ಮಹಿಮೆ ಶ್ರೀ ಕೃಷ್ಣನ ಆಶೀರ್ವಾದ ಎಂದು ನಾನು ಅಂದುಕೊಂಡಿದ್ದೇನೆ. ಇದಕ್ಕೆ ಇನ್ನೊಂದು ಉದಾಹರಣೆ ಎಂದರೆ, ಮಾನ್ಯ ಕೋಟ ಶ್ರೀನಿವಾಸ ಪೂಜಾರಿಯವರು ಸುಮ್ಮನೆ ಶಾಸಕರ ಭವನದ ತಮ್ಮ ಕೊಠಡಿಯಲ್ಲಿ ಕುಳಿತಿದ್ದಾಗ ನಮ್ಮ ಪಕ್ಷದವರು ಬಂದು ನಿನ್ನನ್ನು ಮಂತ್ರಿ ಮಾಡಲಾಗುತ್ತಿದೆ ಎಂದು ಕರೆದುಕೊಂಡು ಹೋಗಿ ಮಂತ್ರಿ ಸ್ಥಾನವನ್ನು ಕೊಟ್ಟಿದ್ದರು. ಅದೇ ರೀತಿ ಇಲ್ಲಿ ಪ್ರಶ್ನೆಯನ್ನು ಕೇಳಲು ಯೋಚನೆ ಮಾಡುತ್ತಿದ್ದಂತಹ ತಮ್ಮನ್ನು ಇವತ್ತು ನೀವು ಸಭಾಪತಿ, ಬಂದು ಇಲ್ಲಿ ಕುಳಿತುಕೊಳ್ಳಿ ಎಂದು ತಮ್ಮನ್ನು ಸಭಾಪತಿಗಳನ್ನಾಗಿ ಮಾಡಿದ್ದಾರೆ. ಈ ರೀತಿ ಆ ಕ್ಷೇತ್ರದ ಮಹಿಮೆಯನ್ನು ತಿಳಿದುಕೊಂಡು ಮುಂದಿನ ದಿನಗಳಲ್ಲಿ ಬೇರೆಯವರು ತಮ್ಮ ಕ್ಷೇತ್ರವನ್ನು ಹುಡುಕಿಕೊಂಡು ಬಂದು ಅಲ್ಲಿ ಚುನಾವಣೆಗೆ ನಿಲ್ಲಬಹುದೇನೊ ಎನ್ನುವ ಅನುಮಾನ ನನಗೆ ಬರುತ್ತಿದೆ. ಏಕೆಂದರೆ ಆ ಕ್ಷೇತ್ರದವರು ಬಯಸದೆಯೇ ಉನ್ನತ ಹುದ್ದೆಗಳನ್ನು ಏರುವಂತಾಗುತ್ತಿದೆ. ತಾವು ತುಂಬಾ ಪ್ರಾಮಾಣಿಕ ವ್ಯಕ್ತಿ. ಅದಕ್ಕೆ ಯಾವುದೆ ಚ್ಯುತಿ ಬರದ ರೀತಿಯಲ್ಲಿ ನಡೆದುಕೊಳ್ಳುತ್ತೀರಿ ಎನ್ನುವ ವಿಶ್ವಾಸ ನಮಗಿದೆ. ತಮಗೆ ಒಳ್ಳೆಯದಾಗಲಿ. ಮಾನ್ಯ ಬಸವರಾಜ ಹೊರಟ್ಟಿಯವರ ಸೇವೆ ಈ ರಾಜ್ಯಕ್ಕೆ ಖಂಡಿತವಾಗಿ ಇದೆ, ಅವರಿಗೂ ಉನ್ನತವಾದ ಹುದ್ದೆ ಸಿಗಲಿ, ಅವರು ಮಂತ್ರಿ ಸ್ಥಾನವನ್ನು ಅಲಂಕರಿಸುವಂತಾಗಲಿ ಎಂದು ಹಾರೈಸುತ್ತಾ, ಮತ್ತೊಮ್ಮೆ ತಮಗೆ ಶುಭ ಕೋರುತ್ತಾ, ಅವಕಾಶ ಕೊಟ್ಟಿದ್ದಕ್ಕಾಗಿ ವಂದಿಸಿ, ನನ್ನ ಮಾತುಗಳನ್ನು ಮುಕ್ತಾಯಗೊಳಿಸುತ್ತೇನೆ.

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಎನ್.ಅಪ್ಪಾಜಿಗೌಡ(ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-** ಮಾನ್ಯ ಸಭಾಪತಿಗಳೇ, ನೂತನವಾಗಿ ಆಯ್ಕೆಯಾಗಿರುವ ಹಿರಿಯ ಸದಸ್ಯರಾದ ಮಾನ್ಯ ಪ್ರತಾಪಚಂದ್ರ ಶೆಟ್ಟಿಯವರಿಗೆ ಅಭಿನಂದನೆಗಳನ್ನು ಸಲ್ಲಿಸುತ್ತೇನೆ. ಈ ಸದನದಲ್ಲಿ ಹಿರಿಯ ಸದಸ್ಯರಿಗೆ ಸಿಗಬೇಕಾದ ನ್ಯಾಯ ಸಿಕ್ಕಿದೆ ಎನ್ನುವುದು ನನ್ನ ಭಾವನೆ. ಹಲವಾರು ಸದಸ್ಯರು ತಮ್ಮ ಬಗ್ಗೆ, ತಮ್ಮ ಕುಟುಂಬದ ಬಗ್ಗೆ, ತಮ್ಮ ವ್ಯಾಪಾರ-ಉದ್ಯಮದ

**"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"**

ಬಗ್ಗೆ ಮಾತನಾಡಿದ್ದಾರೆ. ತಾವು ವಿಧಾನಸಭೆಗೆ ನಾಲ್ಕು ಬಾರಿ ಮತ್ತು ವಿಧಾನ ಪರಿಷತ್‌ಗೆ ಸ್ಥಳೀಯ ಸಂಸ್ಥೆಗಳಿಂದ ಮೂರು ಬಾರಿ ಆಯ್ಕೆಯಾಗಿದ್ದೀರಿ ಎನ್ನುವುದು ನಮಗೆ ತಿಳಿಯಿತು. ನಾನು ಕೂಡ ಸ್ಥಳೀಯ ಸಂಸ್ಥೆಗಳಿಂದ ಆಯ್ಕೆಯಾಗಿ ಬಂದಿರುವವನು. ಮೇರು ವ್ಯಕ್ತಿತ್ವದವರಾದ ತಾವು ಸಭಾಪತಿಗಳಾಗಿರುವುದು ಬಹಳ ಸಂತೋಷದ ವಿಚಾರ.

ಹಂಗಾಮಿ ಸಭಾಪತಿಗಳಾಗಿ ಕಾರ್ಯನಿರ್ವಹಿಸಿದಂತಹ ಮಾನ್ಯ ಬಸವರಾಜ ಹೊರಟ್ಟಿಯವರು ನಮಗೆ 'ಹಿರಿಯರು ಮಾತನಾಡುವುದನ್ನು ಮೊದಲು ಕೇಳಿ, ನೀವು ಮಾತನಾಡುವಾಗ ಪರೀಕ್ಷೆ ರೀತಿಯಲ್ಲಿ ತಯಾರಾಗಿ ಬಂದು ಮಾತನಾಡಿ' ಎಂದು ಹೇಳುತ್ತಿದ್ದರು. ಸದನದಲ್ಲಿ ಅತ್ಯಂತ ಹಿರಿಯ ಸದಸ್ಯರಾಗಿ, ಸತತವಾಗಿ 7 ಬಾರಿ ಸೋಲಿಲ್ಲದ ಸರದಾರರಂತೆ ಆಯ್ಕೆಯಾಗಿರುವಂತಹ ಮಾನ್ಯ ಬಸವರಾಜ ಹೊರಟ್ಟಿಯವರೇ ಸಭಾಪತಿಗಳಾಗಬೇಕು ಎನ್ನುವ ಆಸೆ ನಮ್ಮೆಲ್ಲರಿಗೂ ಇತ್ತು. ಆದರೂ ಅಷ್ಟೆ ಹಿರಿತನ, ಪ್ರಾಮಾಣಿಕತೆ, ದಕ್ಷತೆ ಇರುವಂತಹ ತಮ್ಮನ್ನು ಆಯ್ಕೆ ಮಾಡಿರುವುದಕ್ಕೆ ಕಾಂಗ್ರೆಸ್ ಪಕ್ಷದ ಎಲ್ಲ ನಾಯಕರಿಗೆ ಮತ್ತು ನಮ್ಮ ಪಕ್ಷದ ನಾಯಕರಾದ ಮಾನ್ಯ ಮುಖ್ಯಮಂತ್ರಿಗಳಾದ ಕುಮಾರಣ್ಣನವರಿಗೆ ಅಭಿನಂದನೆಗಳನ್ನು ಸಲ್ಲಿಸುತ್ತೇನೆ. ತಾವು ಮತ್ತು ಮಾನ್ಯ ಕೋಟ ಶ್ರೀನಿವಾಸ ಪೂಜಾರಿಯವರು ಕೃಷ್ಣನ ಆಶೀರ್ವಾದದಿಂದ ಈ ಸ್ಥಾನಕ್ಕೆ ಬಂದಿದ್ದೀರಿ ಎಂದು ಮಾನ್ಯ ಪ್ರಾಣೇಶ್‌ರವರು ಹೇಳಿದ್ದಾರೆ. ಇಲ್ಲಿ ಇನ್ನೊಂದು ವಿಚಾರವನ್ನು ಹೇಳಬಯಸುತ್ತೇನೆ, ಅಕ್ಕನ ಸಮಾನರಾದ ಡಾ: ಜಯಮಾಲರವರು ಕೂಡಾ ಕೃಷ್ಣನ ಆಶೀರ್ವಾದದಿಂದ ಬಹಳ ಆಶ್ಚರ್ಯಕರ ರೀತಿಯಲ್ಲಿ ಮಂತ್ರಿಗಳ ಸ್ಥಾನವನ್ನು ಅಲಂಕಾರ ಮಾಡಿ, ಸಭಾನಾಯಕರಾಗಿ ಇಂದು ಬಹಳ ದಕ್ಷತೆಯಿಂದ ಕೆಲಸ ಮಾಡುತ್ತಿದ್ದಾರೆ. ಅವರಿಗೂ ನನ್ನ ಅಭಿನಂದನೆಗಳನ್ನು ಸಲ್ಲಿಸುತ್ತೇನೆ.

ವಿಧಾನ ಪರಿಷತ್ತು ಹಿರಿಯರ ಸದನ, ಚಿಂತಕರ ಚಾವಡಿ ಎಂದು ಹಲವಾರು ಸದಸ್ಯರು ಮಾತನಾಡಿದ್ದಾರೆ. ನಾವು ಗಮನಿಸುತ್ತಿದ್ದೇವೆ, ನಾನು ಡಾ:ತೇಜಸ್ವಿನಿ ಗೌಡರವರು, ಮಾನ್ಯ ನಾರಾಯಣ ಸ್ವಾಮಿಯವರು ನಾವೆಲ್ಲರೂ ವಿದ್ಯಾರ್ಥಿ movement ನಿಂದ ಬಂದವರು. ಈ ಸಮಾಜವನ್ನು ಕಟ್ಟುವಂತಹ ಚರ್ಚೆಗಳು ಇಲ್ಲಿ ಆಗಬೇಕು. ಆದರೆ ನಾವೆಲ್ಲರೂ ಪಕ್ಷದ ಚೌಕಟ್ಟಿನಲ್ಲಿ ಮಾತನಾಡುತ್ತಿದ್ದೇವೆ, ಇನ್ನು ಮುಂದಾದರೂ ಪಕ್ಷದ ಚೌಕಟ್ಟನ್ನು ಬಿಟ್ಟು ಸಮಾಜದ ಬಗ್ಗೆ, ಶಿಕ್ಷಣದ ಬಗ್ಗೆ ಮಾತನಾಡಬೇಕಾಗಿದೆ. ಶಿಕ್ಷಣ ಎಂದರೆ ಶಿಕ್ಷಕರ ಸಂಬಳ, ಅನುದಾನಿತ ಶಿಕ್ಷಣ ಸಂಸ್ಥೆಗಳು, transfers – ಇವುಗಳ ಬಗ್ಗೆ ಚರ್ಚೆಯಾಗುತ್ತಿದೆ. ಅದು ಆಗಬಾರದು ಎಂದು ನಾನು ಹೇಳುತ್ತಿಲ್ಲ. ಇದನ್ನು ಮೀರಿ ನಮ್ಮ ವಿದ್ಯಾರ್ಥಿಗಳ ಹಿತದೃಷ್ಟಿಯಿಂದ ಶಿಕ್ಷಣದ ಬಗ್ಗೆ, ಸಮಾಜದ ದೃಷ್ಟಿಯಿಂದ ವಿಜ್ಞಾನ,

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ತಂತ್ರಜ್ಞಾನ ಇವುಗಳ ಬಗ್ಗೆ ಮತ್ತು ರೈತರ ಸಮಸ್ಯೆಗಳ ಬಗ್ಗೆ ಚರ್ಚೆಯಾಗಬೇಕು ಎಂದು ತಮ್ಮಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ. ತಾವು ಈ ಸದನದ ಭೀಷ್ಮರು, ಅಂತಹ ಹಿರಿತನ ತಮ್ಮಲ್ಲಿದೆ. ಆದ್ದರಿಂದ ನಮ್ಮಂತಹ ಕಿರಿಯ ಸದಸ್ಯರಿಗೆ ತರಬೇತಿ ನೀಡುವಂತಹ ಕಾರ್ಯ ಸಹ ತಮ್ಮಿಂದ ಆಗಬೇಕೆಂದು ವಿನಂತಿಸುತ್ತೇನೆ.

(ಮುಂದು)

(381)12-12-2018(01-10)ಬಿಎಸ್‌ಡಿ-ಎಂಡಿ

ಶ್ರೀ ಅಪ್ಪಾಜಿಗೌಡ (ಮುಂದು)

ತಾವು ಈ ಸದನದಲ್ಲಿ ಪಕ್ಷಪಾತವಿಲ್ಲದೆ ಎಲ್ಲಾ ಸದಸ್ಯರಿಗೂ ಅದರಲ್ಲೂ ನಮ್ಮಂತಹ ಕಿರಿಯ ಸದಸ್ಯರಿಗೆ ಹೆಚ್ಚಿನ ಅವಕಾಶ ಕೊಡಬೇಕು ಎಂದು ಕೇಳಿ, ತಮಗೆ ಅಭಿನಂದಿಸಿ, ನನ್ನ ಮಾತುಗಳನ್ನು ಮುಗಿಸುತ್ತೇನೆ.

**ಶ್ರೀ ಎಂ. ನಾರಾಯಣಸ್ವಾಮಿ (ವಿಧಾನಸಭಾ ಕ್ಷೇತ್ರ)**:- ಮಾನ್ಯ ಸಭಾಪತಿಯವರೇ, ಶತಮಾನಗಳ ಇತಿಹಾಸ ಹೊಂದಿರುವ ಸದನದ ನೂತನ ಪೀಠಾಧ್ಯಕ್ಷರಾಗಿ ಅವಿರೋಧವಾಗಿ ಆಯ್ಕೆಯಾಗಿರುವ ತಮಗೆ ಭಗವಂತ ಒಳ್ಳೆಯದನ್ನು ಮಾಡಲಿ ಎಂದು ಶುಭ ಕೋರುತ್ತೇನೆ.

ಇಲ್ಲಿ ಕೆಲವರು ಮಾತನಾಡುತ್ತಾ, ಹಾಗೂ ಕೆಲವು ಮಾಧ್ಯಮದವರು ಈ ಸ್ಥಾನವು ತಮಗೆ ಬಯಸದೇ ಬಂದ ಭಾಗ್ಯ ಎಂದು ಪ್ರಸ್ತಾಪಿಸಿದರು. ನಾನು ಇದನ್ನು ಒಪ್ಪುವುದಿಲ್ಲ. ಏಕೆಂದರೆ ಈ ಭಾಗ್ಯ ತಮ್ಮನ್ನು ಯಾವತ್ತೋ ಹುಡುಕಿಕೊಂಡು ಬರಬೇಕಾಗಿತ್ತು. ರಾಜಕೀಯ ನಡೆಯಲ್ಲಿ ತಾವು ತಮ್ಮದೇ ಆದ ಛಾಪನ್ನು ಮೂಡಿಸಿ, ಅಜಾತಶತ್ರುವಾಗಿ ರಾಜಕಾರಣದಲ್ಲಿ ಪ್ರಾಮಾಣಿಕತೆಯನ್ನು ಮೆರೆದವರು. ನಾವು ವಿದ್ಯಾರ್ಥಿಗಳಾಗಿದ್ದ ಸಂದರ್ಭದಲ್ಲಿ ಕಾಂಗ್ರೆಸ್ ಪಕ್ಷದ ವಿದ್ಯಾರ್ಥಿ ಘಟಕ, *NSUI (National Students' Union of India)* ಬೆಂಗಳೂರು ಜಿಲ್ಲೆಯ ಅಧ್ಯಕ್ಷನಾಗಿದ್ದೆನು. ಮಾನ್ಯ ವಿನಯಕುಮಾರ್‌ರವರು ರಾಜ್ಯಕ್ಕೆ ಅಧ್ಯಕ್ಷರಾಗಿದ್ದರು. ಆ ಸಂದರ್ಭದಲ್ಲಿ ತಾವು ಎಂ.ಎಲ್.ಎ ಆಗಿದ್ದಿರಿ. ನಮಗೆ ಕಾಂಗ್ರೆಸ್ ಕಛೇರಿ ಬಿಟ್ಟರೆ ಮತ್ತೊಂದು ಕಡೆ ಕುಳಿತುಕೊಳ್ಳಲು ಜಾಗ ಇರಲಿಲ್ಲ. ಆ ಸಂದರ್ಭದಲ್ಲಿ ತಮಗೆ ನೀಡಿದ್ದ ಶಾಸಕರ ಭವನದ ಕೊಠಡಿಗೆ ಬರುತ್ತಿದ್ದೆವು. ಆಗ ನಾವು ವಿದ್ಯಾರ್ಥಿಗಳಾಗಿದ್ದ ಸಂದರ್ಭದಲ್ಲಿ ತಾವು ಶಾಸಕರಾಗಿ ಇದ್ದ ನಡವಳಿಕೆಗಳನ್ನು ನೋಡಿ ನಾವು ಕಲಿಯುವುದು ಬೇಕಾದಷ್ಟು ಇತ್ತು. ಅದನ್ನು ನಾವು ಕಲಿತುಕೊಂಡು ಬಂದೆವು. ನಾವು ವಿದ್ಯಾರ್ಥಿ ಸಂಘಟನೆಗಳಲ್ಲಿ ಹೋರಾಟ ಮಾಡುವ ಸಂದರ್ಭದಲ್ಲಿ ಯುವ ಕಾಂಗ್ರೆಸ್ ಅನ್ನು ಮಾನ್ಯ ಕೆ.ಜೆ. ಜಾರ್ಜ್‌ರವರು ಮುನ್ನಡೆಸುತ್ತಿದ್ದರು.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**“ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”**

ತಮ್ಮ ರಾಜಕೀಯ ಜೀವನವು ಹೂವಿನ ಹಾಸಿಗೆಯಾಗಿ ನಡೆದುಕೊಂಡು ಬಂದಿಲ್ಲ. ಮುಳ್ಳಿನ ಹಾಸಿಗೆಯಾಗಿ ನಡೆದುಕೊಂಡು ಬಂದಿದೆ. ತಾವು ಸಂಘಟನೆಯಲ್ಲಿ ಯುವ ಕಾಂಗ್ರೆಸ್‌ನ ಪದಾಧಿಕಾರಿಯಾಗಿ, ಪ್ರದೇಶ ಕಾಂಗ್ರೆಸ್‌ನ ಪದಾಧಿಕಾರಿಯಾಗಿ ತಮ್ಮ ಜೀವನವನ್ನು ಪ್ರಾರಂಭ ಮಾಡಿ, ಪಕ್ಷಕ್ಕೆ ತಮ್ಮದೇ ಆದ ಅಪಾರ ಕೊಡುಗೆಯನ್ನು ಕೊಟ್ಟಿದ್ದೀರಿ. ಅದೇರೀತಿ ತಮ್ಮ ಜಿಲ್ಲೆಯಲ್ಲಿ ಶಾಸಕರಾದ ನಂತರ ನಿಷ್ಕಳಂಕವಾಗಿ ಮಾಡಿರುವ ಸೇವೆಯನ್ನು ಯಾರೂ ಮಾಡಲು ಸಾಧ್ಯವಾಗುವುದಿಲ್ಲ. ನಾಲ್ಕು ಬಾರಿ ಕೆಳಮನೆ ಸದಸ್ಯರು ಹಾಗೂ ಮೂರು ಬಾರಿ ಮೇಲ್ಮನೆ ಸದಸ್ಯರಾಗಿ ಇಂದಿನ ರಾಜಕಾರಣದಲ್ಲಿ ಆಯ್ಕೆಯಾಗಲು ಬಹಳಷ್ಟು ಕಷ್ಟ ಇದೆ. ಒಮ್ಮೆ ಗೆದ್ದರೆ ಮತ್ತೆ ಗೆಲ್ಲಲು ಬಹಳಷ್ಟು ಪರಿಶ್ರಮ ಪಡಬೇಕಾಗುತ್ತದೆ. ತಾವು ‘ ನನಗೆ ರಾಜಕಾರಣ ಸಾಕು, ಮುಂದೆ ಈ ಸ್ಥಾನವನ್ನು ಬೇರೆ ಯಾರಾದರೂ ಅಲಂಕರಿಸಲಿ, ನಾನು ರಾಜಕೀಯ ನಿವೃತ್ತಿ ಪಡೆಯುತ್ತೇನೆ’ ಎಂದು ಕರಪತ್ರ (ಪಾಂಪ್‌ಲೆಟ್) ಪ್ರಿಂಟ್ ಮಾಡಿ ಇಡೀ ಕ್ಷೇತ್ರದಲ್ಲಿ ಹಂಚಿದ್ದೀರಿ. ಆದರೆ ಆ ಭಾಗದ ಜನರು ನಿಮ್ಮನ್ನು ಬಿಡಲಿಲ್ಲ. ನಿಮ್ಮಂತಹ ಪ್ರಾಮಾಣಿಕ ವ್ಯಕ್ತಿ ಇಂದಿನ ರಾಜಕಾರಣ ಪರಿಸ್ಥಿತಿಗೆ ಬೇಕಾಗಿದೆ ಎಂದು ಜನರು ನಿಮ್ಮನ್ನು ಕರೆದುಕೊಂಡು ಬಂದರು. ಅದೇರೀತಿ ಕಾಂಗ್ರೆಸ್ ಪಕ್ಷವು ನಿಮ್ಮಂತಹ ಪ್ರಾಮಾಣಿಕ ಹಾಗೂ ದಕ್ಷ ವ್ಯಕ್ತಿ ರಾಜಕಾರಣದಲ್ಲಿ ಅಪರೂಪವಾಗಿದ್ದಾರೆ, ನಿಮ್ಮಂತಹವರ ಸೇವೆ ಬೇಕಾಗಿದೆ ಎಂದು ಮತ್ತೊಮ್ಮೆ ಅವಕಾಶ ಕೊಟ್ಟರು. ತಾವು ಯಾವತ್ತೋ ಸಭಾಪತಿಯವರ ಸ್ಥಾನವನ್ನು ಅಲಂಕರಿಸಬೇಕಾಗಿತ್ತು. ತಾವು ಮಂತ್ರಿ ಹಾಗೂ ಇನ್ನೂ ದೊಡ್ಡ ದೊಡ್ಡ ಹುದ್ದೆಗಳನ್ನು ಅಲಂಕರಿಸಬೇಕಾಗಿತ್ತು. ಆದರೆ ತಾವು ಯಾವ ಹುದ್ದೆಯನ್ನು ಹುಡುಕಿಕೊಂಡು ಹೋಗಲಿಲ್ಲ. ಇವತ್ತು ಈ ಸ್ಥಾನ ನಿಮ್ಮನ್ನು ಹುಡುಕಿಕೊಂಡು ಬಂದಿದೆ. ಏತಕ್ಕಾಗಿ ಈ ಸ್ಥಾನ ತಮ್ಮನ್ನು ಹುಡುಕಿಕೊಂಡು ಬಂತು. ಮಾನ್ಯ ಸಿ.ಎಂ. ಇಬ್ರಾಹಿಂರವರು ಮಾತನಾಡುತ್ತಾ, ‘ ಇದೇ ಕಾಂಗ್ರೆಸ್ ’ ಎಂದು ಹೇಳಿದರು. ಅಂದರೆ ಯಾವುದನ್ನು ಕೇಳುವುದಿಲ್ಲವೋ, ಅದನ್ನು ಕೊಡುವುದೇ ಕಾಂಗ್ರೆಸ್ ಎಂದು ಹೇಳಿದರು. ನಿನ್ನೆ ಹತ್ತು ಗಂಟೆಯವರೆಗೂ ಯಾರಿಗೂ ಗೊತ್ತಿಲ್ಲ. ಮೊನ್ನೆ ರಾತ್ರಿ ನಮ್ಮ ಪಕ್ಷದ ಮಾನ್ಯ ದಿನೇಶ್ ಗುಂಡೂರಾಯರೊಡನೆ ಒಟ್ಟಿಗೆ ಕುಳಿತು ಸುಮಾರು ಗಂಟೆ ಪಕ್ಷ ಸಂಘಟನೆ ಬಗ್ಗೆ ಚರ್ಚೆ ಮಾಡಿದಾಗ ಅಲ್ಲಿಯೂ ಚಕಾರ ಎತ್ತಲಿಲ್ಲ. ಆದರೆ ವಿಶೇಷ ವಿಮಾನದಲ್ಲಿ ಬೆಳಗಾವಿಗೆ ಬಂದು, ಪ್ರಶ್ನೆ ಯಾವ ರೀತಿ ಹಾಕಬೇಕು ಎಂದು ತಯಾರು ಮಾಡಿಕೊಳ್ಳುತ್ತಿರುವ ತಮಗೆ ಶ್ರೀ ಐವನ್ ಡಿ‘ಸೋಜಾ ರವರ ಮುಖಾಂತರ ಹೇಳಿ ಕಳುಹಿಸಿದರು. ತಮ್ಮನ್ನು ಹೊರಗಡೆ ಕರೆಸಿ ನಾಮಪತ್ರ ಹಾಕುವಂತೆ ಹೇಳಿದಾಗ ತಾವು ಆಶ್ಚರ್ಯ ಪಟ್ಟಿರಿ. ಆದರೆ ಒಬ್ಬ ಪ್ರಾಮಾಣಿಕ ವ್ಯಕ್ತಿಗೆ ದೊಡ್ಡ ಜವಾಬ್ದಾರಿಯನ್ನು ಕೊಡಬೇಕೆಂದು ನಮ್ಮ ಅಧಿನಾಯಕಿಯಾದ ಸೋನಿಯಾ ಗಾಂಧಿಯವರು ಹಾಗೂ ಪಕ್ಷದ ಅಧ್ಯಕ್ಷರಾದ ಶ್ರೀ ರಾಹುಲ್ ಗಾಂಧಿಯವರು ತೀರ್ಮಾನ ಮಾಡಿದರು. ಅದಾದ ಮೇಲೆ ಮಾಜಿ ಮುಖ್ಯಮಂತ್ರಿಗಳಾದ ಶ್ರೀ ಸಿದ್ಧರಾಮಯ್ಯನವರು, ಪಕ್ಷದ ಅಧ್ಯಕ್ಷರಾದ ಶ್ರೀ ದಿನೇಶ್ ಗುಂಡೂರಾವ್ ರವರು ಹಾಗೂ ಉಪ ಮುಖ್ಯಮಂತ್ರಿಗಳಾದ ಡಾ॥

“ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

ಪರಮೇಶ್ವರ್ ರವರು ಸೇರಿದಂತೆ ಹಲವಾರು ಜನರು ಕುಳಿತುಕೊಂಡು ಸಭಾಪತಿ ಸ್ಥಾನಕ್ಕೆ ಯಾರನ್ನು ನೇಮಕ ಮಾಡಿದರೆ ಸೂಕ್ತವಾಗಿರುತ್ತದೆ ಎಂದು ತೀರ್ಮಾನ ತೆಗೆದುಕೊಂಡು ಆ ಸ್ಥಾನವನ್ನು ತಮಗೆ ಕೊಟ್ಟಿದ್ದಾರೆ. ಅವರೆಲ್ಲರಿಗೂ ಹೃದಯಪೂರ್ವಕ ವಂದನೆಗಳನ್ನು ಸಲ್ಲಿಸಲು ಇಚ್ಛಿಸುತ್ತೇನೆ.

ಇನ್ನು ಮಾನ್ಯ ವಿರೋಧ ಪಕ್ಷದವರು ಯಾವುದೇ ಉಮೇದುವಾರನ ನಾಮಿನೇಷನ್ ಹಾಕದೇ ಸಹಕಾರವನ್ನು ಕೊಟ್ಟಿದ್ದಕ್ಕಾಗಿ ಅವರಿಗೂ ಆಬಾರಿಯಾಗಿದ್ದೇನೆ. ಇನ್ನು ಸಮ್ಮಿಶ್ರ ಸರ್ಕಾರ ಇರುವ ಈ ಸಂದರ್ಭದಲ್ಲಿ ಮಾಜಿ ಪ್ರಧಾನಿಯಾದ ಮಾನ್ಯ ದೇವೇಗೌಡರು ಮತ್ತು ರಾಜ್ಯದ ಮುಖ್ಯಮಂತ್ರಿಯಾದ ಮಾನ್ಯ ಕುಮಾರಸ್ವಾಮಿಯವರೆಲ್ಲರೂ ಸಹಕಾರ ಕೊಟ್ಟಿದ್ದಕ್ಕಾಗಿ ಧನ್ಯವಾದಗಳನ್ನು ಅರ್ಪಿಸಲಿಚ್ಛಿಸುತ್ತೇನೆ. ನಾವೆಲ್ಲರೂ ತಮ್ಮನ್ನು ಪ್ರತಾಪಣ್ಣ ಎಂದು ಕರೆದು ಬೆಳೆದವರಾಗಿದ್ದೇವೆ. ಇಡೀ ತಮ್ಮ ಕ್ಷೇತ್ರದಲ್ಲಿ ಪ್ರತಾಪಣ್ಣ ಎಂದು ಕರೆಯುತ್ತಾರೆ. ತಾವು ಪ್ರಾಮಾಣಿಕವಾಗಿ ಮಾಡಿರುವ ಸೇವೆಯು ನಮಗೆಲ್ಲರಿಗೂ ಮಾದರಿಯಾಗಿದೆ. ನಾವು ಪ್ರಪ್ರಥಮವಾಗಿ ಸದನಕ್ಕೆ ಬಂದಿದ್ದು, ಮಾನ್ಯ ಅಪ್ಪಾಜಿಗೌಡರು ಹೇಳಿದಂತೆ ನಾವೆಲ್ಲರೂ ವಿದ್ಯಾರ್ಥಿ ಸಂಘಟನೆಯಲ್ಲಿ ಬೆಳೆದು ಬಂದವರಾಗಿದ್ದೇವೆ. ನಾವು ಯಾವತ್ತೋ ಸದನಕ್ಕೆ ಬರಬೇಕಾದ ಅರ್ಹತೆ ಇದೆ. ಆದರೆ ಅವಕಾಶಗಳು ಬಂದಿರಲಿಲ್ಲ. ಇವತ್ತು ನಮಗೆ ಆ ಅವಕಾಶ ಬಂದಿದ್ದು, ನಿಮ್ಮಂತಹ ಹಿರಿಯರು ನಮ್ಮಂತಹ ಕಿರಿಯರನ್ನು ತಿದ್ದುವ ಕೆಲಸ ಮಾಡಬೇಕು. ಹಿಂದಿನ ಬೆಂಚಿನಲ್ಲಿ ಕುಳಿತಿರುವ ನಮ್ಮಂತಹವರಿಗೆ ಹೆಚ್ಚು ಅವಕಾಶಗಳನ್ನು ಕೊಡಬೇಕು ಎಂದು ಕಳಕಳಿಯ ಮನವಿ ಮಾಡಿಕೊಳ್ಳುತ್ತೇನೆ.

ಇನ್ನು ಮಾನ್ಯ ಹೊರಟ್ಟಿಯವರ ಬಗ್ಗೆ ಹೇಳದಿದ್ದರೆ ತಪ್ಪಾಗುತ್ತದೆ. ಒಂದು ಕ್ಷೇತ್ರದಲ್ಲಿ ಸತತವಾಗಿ ಏಳು ಬಾರಿ ಆಯ್ಕೆಯಾಗಿ ಬರಲು ಬಹಳಷ್ಟು ಕಷ್ಟ ಇದೆ. ಅವರು ಒಬ್ಬ ಪ್ರಾಮಾಣಿಕ ವ್ಯಕ್ತಿಯಾಗಿ, ಯಾವುದೇ ಆಸೆ-ಆಕಾಂಕ್ಷೆಗಳಿಗೆ ಗುರಿಯಾಗದೇ ತನ್ನದೇ ಆದ ರೀತಿಯಲ್ಲಿ ರಾಜಕಾರಣವನ್ನು ನಡೆಸಿಕೊಂಡು ಹೋಗಿದ್ದಾರೆ. ಈ ಆರು ತಿಂಗಳಲ್ಲಿ ಸದನವನ್ನು ಬಹಳ ಚೆನ್ನಾಗಿ ನಡೆಸಿದ್ದು, ಎಂತಹ ಪ್ರಶ್ನೆಗಳು ಬಂದರೂ ನ್ಯಾಯಾಧೀಶರ ಸ್ಥಾನ ಎಂದು ತಿಳಿದುಕೊಂಡಿರುವ ಆ ಸ್ಥಾನದಲ್ಲಿ ಕುಳಿತಾಗ ಸರ್ಕಾರಕ್ಕೂ ಬಿಸಿ ಮುಟ್ಟುವ ರೀತಿಯಲ್ಲಿ ಉತ್ತಮವಾಗಿ ಆಡಳಿತ ಕೊಟ್ಟರು. ನಾನು ಅವರನ್ನು ಮೆಚ್ಚುವ ಬಗ್ಗೆ ಒಂದು ಉದಾಹರಣೆಯನ್ನು ಹೇಳುತ್ತೇನೆ. ನಾನು ಪ್ರಥಮ ಬಾರಿಗೆ ಶಾಸಕನಾಗಿ ಈ ಸದನಕ್ಕೆ ಬಂದಾಗ ಮೊದಲನೆಯ ದಿವಸವೇ ನನಗೆ ಮಾತನಾಡಲು ಅವಕಾಶ ಸಿಕ್ಕಿತು. ಹೊರಗೆ ರಾಜಕೀಯ ಭಾಷಣ ಮಾಡುವಾಗ ಯಾವುದೇ ರೀತಿಯ ತಪ್ಪುಗಳಾದರೂ ಜನರು ಕೇಳುವುದಿಲ್ಲ. ಆದರೆ ಸದನದಲ್ಲಿ ಮಾತನಾಡುವಾಗ parliamentary words ಗಳಿದ್ದು, ಒಂದೊಂದು ಪದಕ್ಕೂ ತನ್ನದೇ ಆದ ತೂಕ ಇದ್ದು, ಚರ್ಚೆಗಳೆಲ್ಲವೂ ರೆಕಾರ್ಡ್ ಆಗುತ್ತಿರುತ್ತದೆ. ನಾನು ಮಾತನಾಡುವಾಗ ಎಲ್ಲೋ ಒಂದು ರೀತಿ ಅಳುಕು ಸಹ ಇತ್ತು. ಯಾವುದೋ ಒಂದು ವಿಷಯದ ಬಗ್ಗೆ ನಾನು ಮಾತನಾಡಿ ಕುಳಿತಾಗ ಮಾನ್ಯ

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಹೊರಟ್ಟಿಯವರು ನನಗೆ ಒಂದು ಚೀಟಿಯನ್ನು ಬರೆದು ಕಳುಹಿಸಿದರು. ಅದರಲ್ಲಿ ' ನಾರಾಯಣಸ್ವಾಮಿ, ಉತ್ತಮವಾಗಿ ಮಾತನಾಡಿದಿರಿ' ಎಂದು ಬರೆದು ಕಳುಹಿಸಿದರು. ಹೊರಗಡೆಯಲ್ಲಿ ಅವರು 'ಸದನಕ್ಕೆ ಗೈರುಹಾಜರಾಗಬಾರದು, ಪ್ರತಿದಿನ ಬೆಳಗ್ಗೆ ಸದನಕ್ಕೆ ಬಂದು ಸಂಜೆವರೆಗೂ ಸದನದಲ್ಲಿ ಕುಳಿತು ಬೇರೆಯವರು ಏನೇನು ಮಾತನಾಡುತ್ತಾರೆ, ಅದನ್ನು ಆಲಿಸಿ, ನಿಮಗೆ ಅನುಭವ ಬರುತ್ತದೆ' ಎನ್ನುವ ಮಾತುಗಳನ್ನು ಹೇಳಿದ್ದಾರೆ. ಅದೇರೀತಿ ಸದನ ನಡೆದಷ್ಟು ದಿನಗಳು ನಾನು ಬೆಳಗ್ಗೆಯಿಂದ ಸಂಜೆಯವರೆಗೂ ಕುಳಿತುಕೊಳ್ಳುತ್ತಿದ್ದೇನೆ ಎಂಬ ಮಾತನ್ನು ಪ್ರಾಮಾಣಿಕತೆಯಿಂದ ಹೇಳುತ್ತಿದ್ದೇನೆ. ನಾನು ಕಲಿಯುವುದು ಬಹಳಷ್ಟು ಇದೆ. ಇವತ್ತು ಸಭಾಪತಿಯವರ ಸ್ಥಾನವನ್ನು ಸುಮ್ಮನೆ ಕೊಟ್ಟಿಲ್ಲ, ಇವತ್ತು ತಾವು ದುಡಿದಿದ್ದು, ತಮಗೆ ಅನೇಕ ಸ್ಥಾನಮಾನಗಳ ಮುನ್ನೆಡೆ ಸಿಗಬೇಕಾಗಿತ್ತು, ಕೊನೆಗಾದರೂ ತಮಗೆ ಆ ಸ್ಥಾನಮಾನವು late ಆಗಿ ಬಂದರೂ latest ಆಗಿ ಬಂದಿದೆ ಎನ್ನುವಂತಹ ರೀತಿಯಲ್ಲಿ ತಮಗೆ ದೊರೆತಿದೆ. ಸದನವನ್ನು ಉತ್ತಮವಾಗಿ ನಡೆಸಿಕೊಂಡು ಹೋಗುತ್ತೀರಿ ಎನ್ನುವುದು ಎಲ್ಲರ ಆಶಾಭಾವನೆಯಾಗಿದೆ. ಇನ್ನು ಮುಂದೆ ಇನ್ನೂ ಹೆಚ್ಚು ಸುಸೂತ್ರವಾಗಿ ಸದನ ನಡೆಸಿಕೊಂಡು ಹೋಗುವ ಶಕ್ತಿಯನ್ನು ಭಗವಂತ ತಮಗೆ ಕೊಡಲಿ ಎನ್ನುವ ಮಾತನ್ನು ಹೇಳಿ, ತಮಗೆ ಅಭಿನಂದನೆ ಸಲ್ಲಿಸಿ, ನನ್ನ ಮಾತುಗಳನ್ನು ಮುಗಿಸುತ್ತೇನೆ.

**ಶ್ರೀ ನಸೀರ್ ಅಹ್ಮದ್ (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ನನಗೆ ಅವಕಾಶ ನೀಡಿದ್ದಕ್ಕಾಗಿ ತಮಗೆ ಅಭಿನಂದನೆಗಳು. ಇವತ್ತಿನ ದಿವಸ ಸಾಕಷ್ಟು ಸದಸ್ಯರು ಅನೇಕ ರೀತಿ ಪ್ರಸ್ತಾಪ ಮಾಡಿದ್ದಾರೆ. 1983ರಲ್ಲಿ ಅನೇಕರಿಗೆ ಶಾಸಕರಾಗಿ ಆಯ್ಕೆಯಾಗಲು ಅವಕಾಶ ಸಿಕ್ಕ ಸಂದರ್ಭದಲ್ಲಿ ಇಲ್ಲಿರುವ ಮಾನ್ಯ ಜಾರ್ಜ್‌ರವರಿಗೂ ಅವಕಾಶ ಸಿಕ್ಕಿತು. ತಾವು ಸಹ 1983ರಲ್ಲಿ ಶಾಸಕರಾಗಿದ್ದಿರಿ. ನಾನು ಸಹ 1983ರಲ್ಲಿ ಚುನಾವಣೆಯಲ್ಲಿ contest ಮಾಡಿದರೂ ಆಯ್ಕೆಯಾಗಲು ಅವಕಾಶ ಆಗಲಿಲ್ಲ. ನಾನು ನಂತರ ಯಾರ್ಯಾರಿಗೆ ಅವಕಾಶಗಳು ಸಿಕ್ಕಿವೆ ಎಂದು ಯೋಚನೆ ಮಾಡಿ ನೋಡಿದೆ. ಇದುವರೆಗೂ ಸಾಕಷ್ಟು ಜನರಿಗೆ ಮಂತ್ರಿಗಳಾಗಿ ಕೆಲಸ ಮಾಡಲು, ಕೆಲವರಿಗೆ MP (Member of Parliament) ಆಗಲು ಅವಕಾಶ ಆಗಿದೆ. ಕೊನೆಯದಾಗಿ ತಮಗೆ ಇವತ್ತಿನ ದಿವಸ ಸಭಾಪತಿಯವರಾಗಲು ಅವಕಾಶ ಸಿಕ್ಕಿದೆ.

(ಮುಂದು)

**(382)12-12-2018(1-20)ಹೆಚ್‌ವಿ-ಎಂಡಿ**

(ಸಭಾಪತಿಯವರ ಉಪಸ್ಥಿತಿ)

"ತಿದ್ದುಪಡಿಯಾಗದ ಪ್ರತಿ-ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ನಸೀರ್ ಅಹ್ಮದ್(ಮುಂದುವರೆದದ್ದು):-**

ಸನ್ಮಾನ್ಯ ಸಭಾಪತಿಯವರೇ, ತಮಗೆ ಇವತ್ತು ಸಭಾಪತಿಗಳಾಗುವಂತಹ ಅವಕಾಶ ಸಿಕ್ಕಿದೆ. ದೇವನಿರುವೆಡೆ ಸದಾ ಬೆಳಕಿರುತ್ತದೆಯೇ ವಿನಃ ಅಂಧಕಾರ ಇರುವುದಿಲ್ಲ (ಭಗವಾನ್ ಕೀ ಘರ್ ಮೇ ದೇರ್ ಐ ಅಂದೇರ್ ನಹೀ) ಎನ್ನುವ ಮಾತು ಇವತ್ತಿನ ದಿನ ಸಾಬೀತಾಗಿಯೆಂದು ನಾನು ಭಾವಿಸುತ್ತಿದ್ದೇನೆ. ಸುಮಾರು 36 ವರ್ಷಗಳ ಕಾಲ ಕೆಳಮನೆ ಮತ್ತು ಮೇಲ್ಮನೆಗಳಲ್ಲಿ ಸೇವೆ ಸಲ್ಲಿಸಿ ಅಪಾರವಾದ ಸಹನೆ, ಜ್ಞಾನ ಮತ್ತು ಅನುಭವವನ್ನು ತಾವು ಹೊಂದಿದ್ದೀರಿ. ನಿನ್ನೆ ದಿನ ತಾವು ಸದನಕ್ಕೆ ಬರುವಂತಹ ಸಂದರ್ಭದಲ್ಲಿ ತಮ್ಮ ಕನಸು ಮನಸ್ಸಿನಲ್ಲಿಯೂ 'ನಾನು ಸಭಾಪತಿಯಾಗುತ್ತೇನೆ' ಎನ್ನುವ ಕಲ್ಪನೆಯೂ ತಮಗೆ ಇರಲಿಲ್ಲ. ತಮ್ಮನ್ನು ಕರೆದು ಸಭಾಪತಿಯವರ ಸ್ಥಾನಕ್ಕೆ ನಾಮಪತ್ರವನ್ನು ಸಲ್ಲಿಸುವುದಕ್ಕೆ ಅವಕಾಶ ಮಾಡಿಕೊಡಲಾಗುತ್ತದೆಂದು ತಾವು ಬಯಸಿಯೇ ಇರಲಿಲ್ಲ. ನಮ್ಮ ಪಕ್ಷದ ಅಧ್ಯಕ್ಷರು ತಮ್ಮನ್ನು ಕರೆದು, 'ತಾವು ನಾಮಪತ್ರ ಸಲ್ಲಿಸಬೇಕು' ಎಂದು ತೀರ್ಮಾನ ಮಾಡಿದರು. ತಾವು ಮಾಡಿರುವ ಸೇವೆ ಮತ್ತು ತ್ಯಾಗಗಳಿಗೆ ಎಂದಾದರೂ ಗೌರವ ಸಿಗುತ್ತದೆನ್ನುವ ಸಂದೇಶ ತಮ್ಮ ಮೂಲಕ ಈ ಸದನದಲ್ಲಿರುವ ಪ್ರತಿಯೊಬ್ಬ ಹಿರಿಯ ಸದಸ್ಯರಿಗೂ ದೊರಕಿದೆ ಎಂದು ಹೇಳಿದರೆ ತಪ್ಪಾಗುವುದಿಲ್ಲ.

ಸನ್ಮಾನ್ಯ ಸಭಾಪತಿಯವರೇ, ತಾವು ಹಲವಾರು ಜನಪರ ಹೋರಾಟಗಳಲ್ಲಿ ಮುಂಚೂಣಿಯಲ್ಲಿರುವುದನ್ನು ನಾವೆಲ್ಲರೂ ನೋಡಿದ್ದೇವೆ. ಈ ಸದನ ತನ್ನದೇ ಆಗಿರುವಂತಹ ವಿಶೇಷಾಧಿಕಾರವನ್ನು ಹೊಂದಿದೆ. ಈ ಸದನದಲ್ಲಿ ಸಮಿತಿಗಳ ರಚನೆ, ಆ ಸಮಿತಿಗಳಿಗೆ ಅಧ್ಯಕ್ಷರ ನೇಮಕಾತಿ ಮತ್ತು ಸಮಿತಿಗಳ ವರದಿ ಮಂಡನೆ ಮಾಡುವಂತಹ ಕೆಲಸವಾಗುತ್ತದೆ. ಸರ್ಕಾರ ಕೋಟ್ಯಾಂತರ ರೂಪಾಯಿಗಳನ್ನು ವೆಚ್ಚ ಮಾಡಿ ಒಂದು ಸಮಿತಿಯ ವರದಿಯನ್ನು ತಯಾರು ಮಾಡುತ್ತದೆ. ಸಮಿತಿಯ ಸದಸ್ಯರು ಮತ್ತು ಅಧ್ಯಕ್ಷರು ಸತತವಾಗಿ ಕುಳಿತುಕೊಂಡು ಚರ್ಚೆ ಮಾಡಿ, ಸಾಕಷ್ಟು ಸಮಯವನ್ನು ವ್ಯರ್ಥ ಮಾಡಿ, ಸದನಕ್ಕೆ ವರದಿಯನ್ನು ಸಲ್ಲಿಸುತ್ತಾರೆ. ಈ ರೀತಿ ಯಾವುದೇ ಸಮಿತಿಯು ತನ್ನ ವರದಿಯನ್ನು ಸದನದಲ್ಲಿ ಮಂಡನೆ ಮಾಡಿದ ನಂತರ ಆ ವರದಿಯಲ್ಲಿನ ಶಿಫಾರಸ್ಸುಗಳ ಅನುಷ್ಠಾನವಾಗಿದೆಯೇ ಎನ್ನುವುದನ್ನು ನೋಡಬೇಕಾಗುತ್ತದೆ. ಏಕೆಂದರೆ, ನಮಗೆ ಆ ಶಿಫಾರಸ್ಸುಗಳು ಅನುಷ್ಠಾನಗೊಂಡಿರುವ ಬಗ್ಗೆ ಮಾಹಿತಿ ದೊರೆಯುವುದಿಲ್ಲ. ಈ ನಿಟ್ಟಿನಲ್ಲಿ ತಾವು ತಮಗೆ ಪ್ರದತ್ತವಾಗಿರುವ ವಿಶೇಷ ಅಧಿಕಾರವನ್ನು ಬಳಸಿಕೊಂಡು, ಮುಂದಿನ ದಿನಗಳಲ್ಲಿ ಈ ಬಗ್ಗೆ ಹೊಸ ನಿರ್ದೇಶನಗಳನ್ನು ನೀಡಬೇಕೆನ್ನುವುದು ನನ್ನ ಮನವಿಯಾಗಿದೆ. ಮತ್ತೊಮ್ಮೆ ತಮಗೆ ಅಭಿನಂದನೆಗಳನ್ನು ಸಲ್ಲಿಸಿ ನನ್ನ ಎರಡು ಮಾತುಗಳನ್ನು ಮುಕ್ತಾಯಗೊಳಿಸುತ್ತೇನೆ.

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಎಸ್.ಎಲ್.ಭೋಜೇಗೌಡ(ಶಿಕ್ಷಕರ ಕ್ಷೇತ್ರ):-** ಸನ್ಮಾನ್ಯ ಸಭಾಪತಿಯವರೇ, ಮೊದಲಿಗೆ ನನಗೆ ಮಾತನಾಡಲು ಅವಕಾಶವನ್ನು ನೀಡಿದ ತಮಗೆ ಧನ್ಯವಾದಗಳನ್ನು ಅರ್ಪಿಸುತ್ತಿದ್ದೇನೆ. ಹಿರಿಯರು ಮತ್ತು ಅನುಭವಿಗಳಾದ ತಾವು ಸಭಾಪತಿಗಳಾಗಿ ಆಯ್ಕೆಗೊಂಡಿರುವುದು ನಮ್ಮೆಲ್ಲರ ಸೌಭಾಗ್ಯವೆಂದು ನಾನು ಭಾವಿಸಿದ್ದೇನೆ. ಆದ್ದರಿಂದ ನಾನು ವೈಯಕ್ತಿಕವಾಗಿ ತಮಗೆ ಮತ್ತು ತಮ್ಮ ಕುಟುಂಬ ವರ್ಗಕ್ಕೆ ತುಂಬು ಹೃದಯದ ಅಭಿನಂದನೆಗಳನ್ನು ಸಲ್ಲಿಸುತ್ತಿದ್ದೇನೆ. ನಾಲ್ಕು ಬಾರಿ ವಿಧಾನಸಭೆಗೆ ಮತ್ತು ಮೂರು ಬಾರಿ ವಿಧಾನ ಪರಿಷತ್ತಿಗೆ ಆಯ್ಕೆಗೊಂಡಿರುವ ತಮ್ಮಂಥ ಹಿರಿಯರಿಗೆ ಅಭಿನಂದನೆ ಸಲ್ಲಿಸುವಷ್ಟು ದೊಡ್ಡ ವ್ಯಕ್ತಿ ನಾನಲ್ಲ. ತಮ್ಮ ಮೇಲೆ ವಿಶ್ವಾಸವಿಟ್ಟು ಮಹತ್ತರವಾದ ಜವಾಬ್ದಾರಿಯನ್ನು ತಮಗೆ ನೀಡಿ, ಮೊದಲಿಗೆ ತಮ್ಮನ್ನು ಕಾಂಗ್ರೆಸ್ ಪಕ್ಷದವರು ಅವಿರೋಧವಾಗಿ ಆಯ್ಕೆ ಮಾಡಿ, ನಂತರ ಈ ಸದನದಲ್ಲಿ ಇರುವಂತಹ ಎಲ್ಲ ಸದಸ್ಯರು ಪಕ್ಷಾತೀತವಾಗಿ ತಮ್ಮ ಆಯ್ಕೆಯನ್ನು ಒಪ್ಪಿಕೊಂಡಿರುವುದು, ತಮ್ಮ ಪ್ರಾಮಾಣಿಕತೆ ಮತ್ತು ಪಕ್ಷನಿಷ್ಠೆಗೆ ಸಿಕ್ಕಿರುವ ಗೌರವವೆಂದು ನಾನು ಭಾವಿಸಿದ್ದೇನೆ. ನನ್ನ ತಂದೆಯವರ ಜೊತೆಗೆ ತಾವು ಶಾಸಕರಾಗಿದ್ದನ್ನು ನಾನು ಈ ಸಂದರ್ಭದಲ್ಲಿ ನೆನಪು ಮಾಡಿಕೊಳ್ಳುತ್ತಿದ್ದೇನೆ. ತಾವು ಇಷ್ಟು ದಿನ ಶಾಸಕ ಸ್ಥಾನದಲ್ಲಿ ಕುಳಿತುಕೊಂಡು ಈ ಸದನದ ಕಾರ್ಯಕಲಾಪಗಳಲ್ಲಿ ಭಾಗವಹಿಸಿದ್ದೀರಿ. ಅನೇಕ ಜನ ಮುಖ್ಯಮಂತ್ರಿಗಳು, ಮಂತ್ರಿಗಳು ಹಾಗೂ ಹಿರಿಯ ಸದಸ್ಯರುಗಳ ಮಾತುಗಳನ್ನು ಆಲಿಸಿದ್ದೀರಿ ಮತ್ತು ಸಮಚಿತ್ತರಾಗಿ ನೋಡಿದ್ದೀರಿ. ಹಿರಿಯ ಮತ್ತು ಕಿರಿಯ ಸದಸ್ಯರನ್ನು ತಾವು ಅತ್ಯಂತ ಹತ್ತಿರದಿಂದ ನೋಡಿದ್ದೀರಿ.

ಸನ್ಮಾನ್ಯ ಸಭಾಪತಿಯವರೇ, ತಾವು ಇವತ್ತು ಸಭಾಪೀಠವನ್ನು ಅಲಂಕರಿಸಿರುವ ಈ ಸಂದರ್ಭದಲ್ಲಿ ಪ್ರಪ್ರಥಮ ಬಾರಿಗೆ ತಾವು ವಿಧಾನ ಪರಿಷತ್ತಿಗೆ ಬಂದಂತಹ ದಿನಗಳಲ್ಲಿ ಕಿರಿಯ ಸದಸ್ಯರಿಗೆ ಯಾವ ರೀತಿ ಅಂದಿನ ಸಭಾಪತಿಗಳು ನೆರವಾಗಿದ್ದರು, ಯಾವ ರೀತಿಯಲ್ಲಿ ಕಿರಿಯ ಸದಸ್ಯರಿಗೆ ಕಾರ್ಯಕಲಾಪಗಳಲ್ಲಿ ಭಾಗವಹಿಸುವುದಕ್ಕೆ ಅವಕಾಶಗಳನ್ನು ಮಾಡಿಕೊಟ್ಟಿದ್ದರು ಎನ್ನುವ ವಿಚಾರ ಖಂಡಿತವಾಗಿಯೂ ತಮಗೆ ನೆನಪಿರುತ್ತದೆಂದು ನಾನು ಭಾವಿಸಿದ್ದೇನೆ. ಆದ್ದರಿಂದ ನಮ್ಮಂತಹ ಕಿರಿಯ ಸದಸ್ಯರು ಸದನದಲ್ಲಿ ಮಾತನಾಡಲು ಅವಕಾಶಗಳನ್ನು ಕೇಳಿದಾಗ ಅಥವಾ ಅವಕಾಶಗಳನ್ನು ಕೇಳದೇ ಇದ್ದರೂ ಸಹ ಅವಕಾಶಗಳನ್ನು ಕಲ್ಪಿಸಿಕೊಡುವಂತಹ ಕೆಲಸವನ್ನು ತಾವು ಮಾಡೇ ಮಾಡುತ್ತೀರೆನ್ನುವ ದೃಢ ನಂಬಿಕೆ ನನಗಿದೆ. ಏಕೆಂದರೆ, ಕಿರಿಯ ಸದಸ್ಯರಿಗೆ ಆಗುವಂತಹ ಕಷ್ಟವನ್ನು ಹಿರಿಯ ಸದಸ್ಯರು ಪೀಠದಲ್ಲಿ ಕುಳಿತಾಗ ಮರೆಯಬಾರದೆಂದು ಅತ್ಯಂತ ಕಳಕಳಿಯಿಂದ ತಮ್ಮಲ್ಲಿ ಪ್ರಾರ್ಥನೆ ಮಾಡುತ್ತೇನೆ.

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಸನ್ಮಾನ್ಯ ಸಭಾಪತಿಯವರೇ, ಮತ್ತೊಂದು ಬಹಳ ಮಹತ್ತರವಾದ ವಿಚಾರವೇನೆಂದರೆ, ಹಿರಿಯ ಸದಸ್ಯರಾದ ಮಾನ್ಯ ಬಸವರಾಜ ಹೊರಟ್ಟಿಯವರ ಬಗ್ಗೆ ಎಲ್ಲ ಸದಸ್ಯರು ಗೌರವದಿಂದ ಮತ್ತು ಹೃದಯ ತುಂಬಿ ಮಾತನಾಡಿದ್ದಾರೆ. ಹಿಂದೆ ಮಾನ್ಯ ಡಿ.ಹೆಚ್.ಶಂಕರಮೂರ್ತಿಯವರು ಸಭಾಪತಿಗಳಾದ ಸಂದರ್ಭವನ್ನು ಈ ಸದನಕ್ಕೆ ತಿಳಿಸಿದರೆ ತಪ್ಪಾಗುವುದಿಲ್ಲವೆಂದು ಭಾವಿಸಿ, ಆ ಸನ್ನಿವೇಶವನ್ನು ನಾನು ಹೊರಗಿನಿಂದ ನೋಡಿರುವುದನ್ನು ಈ ಸದನದ ಗಮನಕ್ಕೆ ತರಲು ಬಯಸುತ್ತಿದ್ದೇನೆ. ತಪ್ಪಾಗಿದ್ದರೆ ದಯಮಾಡಿ ಕ್ಷಮಿಸಬೇಕು. ಮಾನ್ಯ ಬಸವರಾಜ ಹೊರಟ್ಟಿಯವರು 7ನೇ ಬಾರಿಗೆ ಶಾಸಕರಾಗಿ ಆಯ್ಕೆಗೊಂಡು, ಪ್ರಮಾಣ ವಚನ ಸ್ವೀಕರಿಸಿದ ಸಂದರ್ಭದಲ್ಲಿ ಅಖಂಡ ಕರ್ನಾಟಕ ಅವರನ್ನು ಅಭಿನಂದಿಸಿತ್ತು. ಎಲ್ಲ ರಾಜಕೀಯ ಪಕ್ಷದವರು ಅವರನ್ನು ಅಭಿನಂದಿಸಿದ್ದರು. ಸದನದಲ್ಲಿಯೂ ಪಕ್ಷಾತೀತವಾಗಿ ಅವರನ್ನು ಅಭಿನಂದಿಸಿದ ದೃಶ್ಯವನ್ನು ನಾನು ಹೊರಗಿನಿಂದ ನೋಡಿದ್ದೇನೆ. ಆಗ ರಾಜಕೀಯ ಏರುಪೇರುಗಳುಂಟಾದ ಸಂದರ್ಭದಲ್ಲಿ ಮಾನ್ಯ ಬಸವರಾಜ ಹೊರಟ್ಟಿಯವರನ್ನು ಅವಿರೋಧವಾಗಿ ಸಭಾಪೀಠದಲ್ಲಿ ಕೂರಿಸಬೇಕೆಂದು ಕಾಂಗ್ರೆಸ್ ಪಕ್ಷದ ಎಲ್ಲ ಸದಸ್ಯರು ಮತ್ತು ಹಿರಿಯ ನಾಯಕರು ಒಕ್ಕೊರಲಿನಿಂದ ಒಂದು ಮನವಿಯನ್ನು ಮಾನ್ಯ ಬಸವರಾಜ ಹೊರಟ್ಟಿಯವರಿಗೆ ಸಲ್ಲಿಸಿದ್ದರು. ಈ ಬಗ್ಗೆ ನಮ್ಮ ಪಕ್ಷದಲ್ಲಿಯೂ ಸಹ ಚರ್ಚೆಯಾಗಿತ್ತು. ಆಗ ಈ ಸದನದಲ್ಲಿ ಕಾಂಗ್ರೆಸ್ ಪಕ್ಷಕ್ಕೆ ಬಹುಮತ ಇರಲಿಲ್ಲ. ಭಾರತೀಯ ಜನತಾ ಪಕ್ಷದವರು ಸಹ ನಮ್ಮ ಜೊತೆಗೆ ಸೇರಿ ಮಾನ್ಯ ಬಸವರಾಜ ಹೊರಟ್ಟಿಯವರನ್ನು ಆ ಸ್ಥಾನದಲ್ಲಿ ಕೂರಿಸಬೇಕೆಂದು ಬಹಳಷ್ಟು ಪ್ರಯತ್ನ ಮಾಡಿದ್ದರು. ಅವರ ಸುದೀರ್ಘವಾಗಿರುವ ರಾಜಕೀಯ ಅನುಭವ ಮತ್ತು ಸಮಚಿತ್ತತೆಯ ಆಧಾರದ ಮೇಲೆ ಅವರು ಮನಸ್ಸು ಮಾಡಿದ್ದರೆ, ಸಭಾಪತಿಗಳ ಪೀಠದಲ್ಲಿ ಕುಳಿತುಕೊಳ್ಳಬಹುದಾಗಿತ್ತು. ಆದರೆ, ಅವರು 'ಹಿರಿಯ ಸದಸ್ಯರಾಗಿರುವ ಮಾನ್ಯ ಶಂಕರಮೂರ್ತಿಯವರು, ತಮ್ಮ 36 ವರ್ಷಗಳ ರಾಜಕೀಯ ಜೀವನದ ಕಡೆಯ ಅವಧಿ. ಅವರು ಮುಂದೆ ಚುನಾವಣೆಯಲ್ಲಿ ಸ್ಪರ್ಧಿಸುವುದಿಲ್ಲವೆಂದು ಹೇಳುತ್ತಿದ್ದಾರೆ. ರಾಜಕೀಯ ನಿವೃತ್ತಿಯನ್ನು ಸಹ ಘೋಷಣೆ ಮಾಡಿದ್ದಾರೆ. ಇಂತಹ ಸಂದರ್ಭದಲ್ಲಿ ನಾವು ಬಹುಮತವನ್ನು ಸಾಬೀತುಪಡಿಸಿ, ಅವರನ್ನು ಸಭಾಪತಿಗಳ ಸ್ಥಾನದಿಂದ ಇಳಿಸಬೇಕೆನ್ನುವ ಮನಸ್ಸು ಮಾಡುವುದು ನಮ್ಮ ಧರ್ಮವಲ್ಲ' ಎಂದು ಹೇಳಿದ್ದರು. ಅವರು ಸಭಾಪತಿಗಳಾಗಬೇಕೆನ್ನುವ ನಿಟ್ಟಿನಲ್ಲಿ ಕಾಂಗ್ರೆಸ್ ಪಕ್ಷದ ಒತ್ತಡವಿದ್ದರೂ ಸಹ ತದೇಕ ಮನಚಿತ್ತದಿಂದ ತಿರಸ್ಕರಿಸಿರುವುದನ್ನು ಈ ಸದನದಕ್ಕೆ ನೆನಪು ಮಾಡಿಕೊಡುವುದಕ್ಕೆ ನಾನು ಪ್ರಯತ್ನಿಸುತ್ತಿದ್ದೇನೆ. ಅವರು ಬಹಳ ದೊಡ್ಡ ಗುಣ. 'ಹಿರಿಯ ಸದಸ್ಯರೊಬ್ಬರನ್ನು ಕೆಳಗಿಳಿಸಿ ನಾನು ಸಭಾಪೀಠದಲ್ಲಿ ಕೂರುವುದು ಸರಿಯಲ್ಲ' ಎನ್ನುವ ಭಾವನೆಗೆ ನಾವು ಬೆಲೆ ಕಟ್ಟುವುದಕ್ಕೆ ಆಗುವುದಿಲ್ಲ. ಇವರಿಗೆ ಸಾಷ್ಟಾಂಗ ನಮಸ್ಕಾರವನ್ನು ಸಲ್ಲಿಸುವುದಕ್ಕೆ ಇಷ್ಟಪಡುತ್ತೇನೆ.

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಮಾನ್ಯ ಬಸವರಾಜ ಹೊರಟ್ಟಿಯವರು ಈ ಸದನಕ್ಕೆ ಬಂದ ಮೇಲೆ ಸುಮಾರು 15 ಜನ ಮುಖ್ಯಮಂತ್ರಿಗಳನ್ನು, 12 ಜನ ಸಭಾಪತಿಗಳನ್ನು ನೋಡಿದ್ದಾರೆ. ತಮ್ಮಂಥ ಹಿರಿಯರ ಮಾರ್ಗದರ್ಶನದಲ್ಲಿ ಮುಂದೆ ಸಾಗುವ ಸದಾವಕಾಶ ನಮಗೆ ದೊರೆತಿದೆ, ನಿಜಕ್ಕೂ ನಾವುಗಳು ಬಹಳ ಪುಣ್ಯವಂತರಾಗಿದ್ದೇವೆ.

(ಮುಂದುವರಿದಿದೆ)

(383)12-12-2018(1.30)ಪಿಕೆ-ಎಕೆ

(ಸಭಾಪತಿಗಳ ಉಪಸ್ಥಿತಿಶ್ರೀ ಎಸ್.ಎಲ್. ಭೋಜೇಗೌಡ(ಮುಂದುವರೆದಿದೆ)

ನಿನ್ನೆಯ ದಿವಸದ ತನಕ, ಶ್ರೀ ಬಸವರಾಜ ಹೊರಟ್ಟಿಯವರು ಪೀಠಕ್ಕೆ ನಾಮಪತ್ರ ಸಲ್ಲಿಸುತ್ತಾರೆ ಎಂಬುದು ಎಲ್ಲರಿಗೂ ಗೊತ್ತಿತ್ತು. ಆದರೆ ಕಡೆ ಘಳಿಗೆಯಲ್ಲಿ ಆದಂತಹ ರಾಜಕೀಯ ಏರು-ಪೇರು, ಬದಲಾವಣೆಯ ಸನ್ನಿವೇಶದಲ್ಲಿ, ಅವರು ಸಭಾಪತಿ ಆಗುವುದಿಲ್ಲ ಎಂದು ಗೊತ್ತಾದರೂ ಸಹ ಸಮಚಿತ್ತದಿಂದ ಈ ಪೀಠವನ್ನು ಅಲಂಕರಿಸಿ, ಬೆಳಿಗ್ಗೆ 10 ಗಂಟೆಯಿಂದ ಸಂಜೆ 7 ಗಂಟೆಯವರೆಗೆ ಸದನವನ್ನು ನಡೆಸಿಕೊಟ್ಟರು. ಇದನ್ನು ಸುವರ್ಣಾಕ್ಷರದಲ್ಲಿ ಬರೆದಿಡಬೇಕಾಗುತ್ತದೆ. ಇದು, ಒಬ್ಬ ಮಾದರಿ ವ್ಯಕ್ತಿ ಅಖಂಡ ಭಾರತಕ್ಕೆ ಕೊಟ್ಟಂಥ ನಿದರ್ಶನ ಎಂದು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ. ಮಾನ್ಯ ಸಭಾಪತಿಗಳೆ, ನಿಮ್ಮಿಂದ ಮತ್ತು ಹಿರಿಯ ಸದಸ್ಯರುಗಳಿಂದ ನಾಡಿಗೆ ಒಳಿತನ್ನು ಬಯಸುವ ಕೆಲಸ ಆಗುತ್ತದೆ ಎಂದು ಹೇಳಬಯಸುತ್ತೇನೆ. ನಮ್ಮ ಕಿರಿಯ ಸ್ನೇಹಿತರು ಮಾತನಾಡುತ್ತಾ, ತಮ್ಮನ್ನು ಕುರಿತು, ನೀವೂ ಕೂಡ ಮಾನ್ಯ ಶಂಕರಮೂರ್ತಿಯವರಂತೆ ಸೂಟ್‌ನಲ್ಲಿ ಬರುತ್ತೀರಿ ಎಂಬ ಮಾತನ್ನು ಹೇಳಿದರು. ಆದರೆ ತಾವು ಬಹಳ ಸರಳ ವ್ಯಕ್ತಿಗಳು. ಸದಸ್ಯರುಗಳ ಸ್ಥಾನದಲ್ಲಿ ಕುಳಿತುಕೊಂಡಾಗ ಹೇಗಿರುತ್ತಿದ್ದರೋ ಹಾಗೆಯೇ ಮೇಲೆ ಕುಳಿತುಕೊಂಡಾಗಲೂ ಇರುತ್ತೀರಿ ಎಂದು ಭಾವಿಸುತ್ತೇನೆ.

**ಶ್ರೀ ಟಿ.ಎ.ಶರವಣ:-** ಮಾನ್ಯ ಸಭಾಪತಿಯವರೇ, ಹಿಂದೆ ಮಾನ್ಯ ಶಂಕರಮೂರ್ತಿಯವರನ್ನು ಸಭಾಪತಿ ಸ್ಥಾನದಿಂದ ಇಳಿಸಬೇಕು ಎಂಬ ಒಂದು ವಿಚಾರ ಬಂದಾಗ ನಾವೆಲ್ಲರೂ ಸೇರಿ ಅವರನ್ನು ಉಳಿಸಿದೆವು. ಅದೇರೀತಿ, ನಾವು-ನೀವು ಸೇರಿ ಮಾನ್ಯ ಬಸವರಾಜ ಹೊರಟ್ಟಿಯವರನ್ನು ಮಂತ್ರಿ ಸ್ಥಾನ ಸಿಗುವ ಹಾಗೆ ಪ್ರಯತ್ನ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಐವನ್ ಡಿ'ಸೋಜಾ:-** ಅದಕ್ಕೆ ನಮ್ಮ ಸಂಪೂರ್ಣ ಸಹಕಾರ ಇದೆ. ಆದರೆ ಮಾನ್ಯ ಭೋಜೇಗೌಡರಿಗೆ ಬೇಜಾರಾಗುವಂತಹ ಕೆಲಸ ಆಗಬಾರದು.

**ಶ್ರೀ ಎಸ್.ಎಲ್.ಭೋಜೇಗೌಡ:-** ಮಾನ್ಯ ಸಭಾಪತಿಗಳೆ, ತಾವು ಹಿರಿಯರಿದ್ದೀರಿ; ಅಗಾಧವಾದ ಅನುಭವ ಇದೆ. ಶಿಸ್ತಿಗೆ ಹೆಸರು ವಾಸಿಯಾದ ಕರಾವಳಿ ಪ್ರದೇಶದಿಂದ ತಾವು ಬಂದಿದ್ದೀರಿ. ಮಾನ್ಯ ವಿರೋಧ ಪಕ್ಷದವರೂ ಕೂಡ ಕರಾವಳಿ ಪ್ರದೇಶದವರಾಗಿದ್ದಾರೆ. ಒಟ್ಟಿನಲ್ಲಿ ಕರಾವಳಿ ಭಾಗದವರಿಗೆ ಸಾಕಷ್ಟು ಸ್ಥಾನಗಳು ಸಿಕ್ಕಿವೆ ಎಂದು ಹೇಳಿದರೆ ತಪ್ಪಾಗಲಾರದು. ನಾನೂ ಕೂಡ ಕರಾವಳಿ ಪ್ರದೇಶದ ಶಾಸಕನಾಗಿ ನಿಮಗೆ ಅಭಿನಂದನೆ ಸಲ್ಲಿಸುತ್ತೇನೆ. ನಿಮಗಿರುವ ಅನುಭವದಲ್ಲಿ ಅನೇಕ ಉತ್ತಮ ಕೆಲಸಗಳನ್ನು ಮಾಡುತ್ತೀರಿ ಎಂದು ಹೇಳಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

**ಶ್ರೀ ಆರ್.ಪ್ರಸನ್ನ ಕುಮಾರ್(ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-** ಮಾನ್ಯ ಸಭಾಪತಿಗಳೆ, ತಾವು ಈ ಪೀಠದ ಸಭಾಪತಿಯಾಗಿ ಅವಿರೋಧವಾಗಿ ಆಯ್ಕೆಯಾಗಿದ್ದೀರಿ; ಅದಕ್ಕೆ ನಿಮಗೆ ಅಭಿನಂದನೆ ಸಲ್ಲಿಸುತ್ತೇನೆ. ಒಬ್ಬ ನಿಷ್ಠಾವಂತ ಮತ್ತು ಸದನದ ಒಬ್ಬ ಅನುಭವಿ ಸದಸ್ಯರು ಸಭಾಪತಿಯಾಗಿದ್ದಾರೆ. ಮುಂದಿನ ಜನವರಿ ಬಂದರೆ ನಾನು ಆಯ್ಕೆಯಾಗಿ 3 ವರ್ಷವಾಗುತ್ತದೆ. ಆ 3 ವರ್ಷದಲ್ಲಿ ಒಂದೂವರೆ ವರ್ಷಗಳ ಕಾಲ ಅರ್ಜಿ ಸಮಿತಿಯಲ್ಲಿ ತಮ್ಮ ಜೊತೆ ಕೆಲಸ ಮಾಡಿದ್ದೇನೆ. ಅರ್ಜಿಗಳ ಸಮಿತಿಯಲ್ಲಿ ಏನು ವಿಷಯಗಳು ಬರುತ್ತಿತ್ತೋ ಅವುಗಳಲ್ಲಿ ಅರ್ಧ ಭಾಗ ತಮ್ಮ ಮುಖಾಂತರ ಬಂದ ಅರ್ಜಿಗಳಾಗಿದ್ದು ಹೆಚ್ಚು ಚರ್ಚೆ ಆಗುತ್ತಿತ್ತು. ನಾವೆಲ್ಲಾ ತಾಳ್ಮೆ ಕಳೆದುಕೊಂಡು ಅಧಿಕಾರಿಗಳ ಮೇಲೆ ಮಾತನಾಡುವ ಸಂದರ್ಭ ಬಂದಾಗಲೂ ತಾವು ಸಮಾಧಾನವಾಗಿ ಅದನ್ನು ಆಲಿಸುತ್ತಿದ್ದಿರಿ. ಆದರೆ ಅರ್ಜಿಗೆ ಪರಿಹಾರ ಕಂಡುಕೊಳ್ಳುವ ತನಕ ಸುಮ್ಮನೆ ಕುಳಿತುಕೊಳ್ಳುತ್ತಿರಲಿಲ್ಲ. ಒಂದು ಅರ್ಜಿಯ ಕೊನೆಯ ಪ್ರಕ್ರಿಯೆಯ ಹಂತ ಬಂದು, ಅದಕ್ಕೆ ಪರಿಹಾರ ಸಿಗದೇ ಇದ್ದಾಗ ಆ ಅರ್ಜಿಯನ್ನು ಬಾಕಿ ಇಟ್ಟು ಮುಂದಿನ ಸಲ ಆ ಅರ್ಜಿಗೆ ಪರಿಹಾರ ಸಿಕ್ಕಿದರೆ ಮಾತ್ರ ಅದನ್ನು ಮುಕ್ತಾಯಗೊಳಿಸುತ್ತಿದ್ದೀರಿ. ಆ ರೀತಿ ತಾವು ಕೆಲಸ ಮಾಡಿದ್ದೀರಿ. ವಿಧಾನಪರಿಷತ್ತಿಗೆ 3 ಸಲ ಮತ್ತು ವಿಧಾನಸಭೆಗೆ 4 ಸಲ ಆಯ್ಕೆಯಾಗಿದ್ದೀರಿ. ನಾನು ನನ್ನ ವಿದ್ಯಾರ್ಥಿ ಜೀವನದಿಂದ ತಮ್ಮ ಬಗ್ಗೆ ಕೇಳಿದ್ದೆ. ಆದರೆ ಈ ಸದನಕ್ಕೆ ಬಂದಮೇಲೆ ತಮ್ಮ ಪರಿಚಯವಾಗಿ, ತಮ್ಮೊಡನೆ ಹೆಚ್ಚು ಬೆರೆಯುವುದಕ್ಕೆ ಇಚ್ಛೆ ಪಡುತ್ತಿದ್ದೆ. ಸ್ಥಳೀಯ ಸಂಸ್ಥೆಗಳ ಕ್ಷೇತ್ರದಿಂದ ಆಯ್ಕೆಯಾಗಿರುವ ತಾವು ಯಾವರೀತಿ ಕೆಲಸ ಮಾಡುತ್ತಿದ್ದೀರಿ ಎಂಬುದೇ ಅದಕ್ಕೆ ಕಾರಣವಾಗಿದೆ. 3ನೇ ಸಲವೂ ಗೆಲ್ಲಬೇಕು ಎಂದರೆ, ತಾವು ಜನರನ್ನು ಯಾವರೀತಿ ಪ್ರೀತಿಯಿಂದ ಕಾಣುತ್ತೀರಿ ಎಂಬ ಬಗ್ಗೆ ತಿಳಿದುಕೊಳ್ಳಬೇಕೆಂದು ನಿಮ್ಮ ಹತ್ತಿರ ಮಾತನಾಡಿದಾಗ, ನನಗೆ ಸಾಕಷ್ಟು ಬುದ್ಧಿವಾದ ಹೇಳಿದ್ದೀರಿ. ಯಾವರೀತಿ ಕೆಲಸ ಮಾಡಬೇಕು, ಯಾವರೀತಿ ಪಂಚಾಯಿತಿಗಳಿಗೆ ಭೇಟಿ ಕೊಡಬೇಕು ಎಂಬುದನ್ನು

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ತಿಳಿಸಿದ್ದೀರಿ. ನಮಗೆ ರೂ. 2 ಕೋಟಿಗಳ ಅನುದಾನ ಸಿಕ್ಕಿದರೆ, ಇದು ಬಹಳ ಕಡಿಮೆ ಎಂದು ತಮ್ಮ ಹತ್ತಿರ ನಮ್ಮ ಅಭಿಪ್ರಾಯವನ್ನು ತೋಡಿಕೊಂಡಾಗ ತಾವು, ಸಿಕ್ಕಿದಂತ ಅನುದಾನವನ್ನು ಸರಿಯಾದ ರೀತಿಯಲ್ಲಿ ಬಳಸಿಕೊಂಡು, ಎಲ್ಲಿ-ಯಾವರೀತಿ ಬಳಸಿಕೊಳ್ಳಬೇಕು, ಯಾವರೀತಿ ಕೊಡಬೇಕು ಎಂದು ತಿಳಿಸಿದಿರಿ. ರೂ. 2 ಕೋಟಿ ಅನುದಾನ ಸಿಕ್ಕಿದರೂ 400 ಪಂಚಾಯಿತಿಗಳಿಗೆ ಅದನ್ನು ಹಂಚಿಕೆ ಮಾಡಿದರೆ, ವರ್ಷಕ್ಕೆ ರೂ. 50 ಸಾವಿರ ಸಹ ಕೊಡುವುದಕ್ಕೆ ಆಗುವುದಿಲ್ಲ ಎಂದು ಹೇಳಿದಾಗ, ತಾವು ಅದರ ಬಗ್ಗೆ ಮಾತನಾಡುತ್ತಾ, ಅನುದಾನವನ್ನು ಯಾವ ರೀತಿ ಖರ್ಚು ಮಾಡಬೇಕು ಎಂಬುದನ್ನು ತಿಳಿಸಿದ್ದಿರಿ. ತಾವು ಬೆಂಗಳೂರಿಗೆ ಬರುವ ಸಂದರ್ಭದಲ್ಲಿ ಶಿವಮೊಗ್ಗದ ಮೇಲೆ ಬರುತ್ತಿದ್ದೀರಿ. ಪ್ರತಿ ಸಲ ಬೆಂಗಳೂರಿನಿಂದ ಸಭೆಯನ್ನು ಮುಗಿಸಿಕೊಂಡು ಹೋಗಬೇಕಾದರೆ ರೇಲ್ವೆ ಸ್ಟೇಷನ್‌ನಲ್ಲಿ ಸಿಕ್ಕಿ, ತಮ್ಮ ಹತ್ತಿರ ಮಾತನಾಡಿ ಸಾಕಷ್ಟು ಅನುಭವ ಪಡೆದುಕೊಂಡ ಉದಾಹರಣೆಗಳು ಸಾಕಷ್ಟಿವೆ. ತಾವು ಒಬ್ಬ ಹಿರಿಯ ಸದಸ್ಯರಾಗಿ ಈ ಸದನದಲ್ಲಿ ಅನೇಕ ಪ್ರಶ್ನೆಗಳನ್ನು ಹಾಕುತ್ತಿದ್ದಿರಿ. ನಾವು ಇನ್ನೂ ಆನ್‌ಲೈನ್ ಎನ್ನುವುದನ್ನು ನೋಡಿಲ್ಲ. ಆದರೆ ತಾವು ಆನ್‌ಲೈನ್‌ನಲ್ಲಿ ಪ್ರಶ್ನೆಗಳನ್ನು ಹಾಕಿ, ಯಾವ ಯಾವ ವಿಷಯಗಳ ಬಗ್ಗೆ ಮಾತನಾಡಬೇಕು; ಯಾವರೀತಿ ಮಾತನಾಡಬೇಕು ಎಂಬುದನ್ನು ನೋಡಿ ನಾವೂ ಕೂಡ ಆನ್‌ಲೈನ್‌ನಲ್ಲಿ ಪ್ರಶ್ನೆಗಳನ್ನು ಕಳುಹಿಸಿದೆವು. ನೀವು ಇವತ್ತು ಆ ಸ್ಥಾನಕ್ಕೆ ಗೌರವ ತುಂಬುವ ಕೆಲಸವನ್ನು ಖಂಡಿತ ಮಾಡುತ್ತೀರಿ. ತಮಗಿರುವ ಅನುಭವದ ಹಿನ್ನೆಲೆಯಲ್ಲಿ ಆ ಪೀಠಕ್ಕೆ ಹೆಚ್ಚು ಗೌರವ ತರುವಂತಹ ಕೆಲಸ ಮಾಡುತ್ತೀರಿ. ಈಗಾಗಲೇ ಬಹಳಷ್ಟು ಸದಸ್ಯರು, ಹಿಂದಿನ ಸಾಲಿನಲ್ಲಿ ಕುಳಿತಿರುವವರಿಗೆ ಮಾತನಾಡಲು ಸಾಕಷ್ಟು ಅವಕಾಶ ಕೊಡಬೇಕು ಎಂಬ ಮಾತನ್ನು ಹೇಳಿದರು. ನಮಗೆ ಮಾತನಾಡಲು ಅವಕಾಶಗಳನ್ನು ಕೊಟ್ಟು, 100 ವರ್ಷದ ಇತಿಹಾಸ ಇರುವಂತಹ ಈ ಸದನದ ಗೌರವವನ್ನು ಹೆಚ್ಚು ಮಾಡುವ ನಿಟ್ಟಿನಲ್ಲಿ ಸಹಕರಿಸಬೇಕು. ಹಾಗಾಗ ಬೇಕಾದರೆ ಯಾವರೀತಿ ನಡೆದುಕೊಳ್ಳಬೇಕು ಎನ್ನುವುದನ್ನು ಹೇಳಿಕೊಡಬೇಕು ಎಂದು ಹೇಳಬಯಸುತ್ತೇನೆ. ಹಂಗಾಮಿ ಸಭಾಪತಿಗಳಾಗಿದ್ದ ಸನ್ಮಾನ್ಯ ಬಸವರಾಜ ಹೊರಟ್ಟಿಯವರೂ ಸಹ ಸಾಕಷ್ಟು ಕೆಲಸಗಳನ್ನು ಮಾಡಿದ್ದಾರೆ. ಅವರ ಕುರಿತಂತೆ ನಾನು ಒಂದು ಪ್ರಸಂಗ ಜ್ಞಾಪಕ ಮಾಡಿಕೊಳ್ಳಬಯಸುತ್ತೇನೆ. ನಾವು ಮಹದಾಯಿ ವಿಚಾರದ ಬಗ್ಗೆ ಮಾತನಾಡಿದ ಮೇಲೆ, ಅವರು ನನ್ನ ಹತ್ತಿರ ಬಂದು, ಮಹದಾಯಿಯ ವಿಚಾರ ಸಂಪೂರ್ಣವಾಗಿ ಗೊತ್ತೇ ಎಂದು ಕೇಳಿದಾಗ, ನಾನು, ನನಗೆ ಗೊತ್ತಿರುವ ವಿಚಾರಗಳನ್ನು ಹೇಳಿದ್ದೇನೆ ಎಂದು ತಿಳಿಸಿದೆ. ಆಗ ಅವರು, ನೀವು ಚೆನ್ನಾಗಿ ಮಾತನಾಡಿದ್ದೀರಿ, ಆದರೆ ಇದರ ಬಗ್ಗೆ ಇನ್ನೂ ಹೆಚ್ಚಿನ ವಿಚಾರಗಳನ್ನು ತಿಳಿದುಕೊಳ್ಳಬೇಕು ಎಂದು ಹೇಳಿದ್ದರು. ಸದನಕ್ಕೆ ಗೈರು ಹಾಜರಾಗಬಾರದು. ಸದನಕ್ಕೆ ಬಂದು ವಿಚಾರಗಳನ್ನು ಕೇಳಿಸಿಕೊಳ್ಳುವ ಪದ್ಧತಿ ಇಟ್ಟುಕೊಳ್ಳಿ. ಯಾರು ಮಾತನಾಡುತ್ತಾರೆ, ಏನು ಮಾತನಾಡುತ್ತಾರೆ ಎಂದು ತಿಳಿದುಕೊಳ್ಳುವ

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಕೆಲಸ ಮಾಡಬೇಕು ಎಂದು ಹೇಳುತ್ತಿದ್ದರು. ಯಾರೇ ಅವರ ಹತ್ತಿರ ಹೋದರೂ, ಸದನದಲ್ಲಿ ಯಾವರೀತಿ ಇರಬೇಕು ಎಂದು ಕಲಿಸಿ ಕೊಡುವ ಕೆಲಸವನ್ನು ಮಾಡಿದ್ದಾರೆ. ಅವರು ಹಂಗಾಮಿ ಸಭಾಪತಿಗಳಾಗಿದ್ದ ಸಂದರ್ಭದಲ್ಲಿ ಮಾಡಿದ್ದ ಕೆಲಸಗಳನ್ನು ಶ್ಲಾಘನೆ ಮಾಡುತ್ತಾ, ತಮ್ಮ ಕಾಲದಲ್ಲಿ ಈ ಪೀಠಕ್ಕೆ ಇನ್ನೂ ಹೆಚ್ಚಿನ ಗೌರವ ಬರಲಿ ಎಂದು ಆಶಿಸಿ, ತಮಗೆ ದೇವರು ಎಲ್ಲಾ ರೀತಿಯ ಆಶೀರ್ವಾದ ಮಾಡಲಿ ಎಂದು ಹೇಳಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

**ಶ್ರೀ ಅಲ್ಲಂ ವೀರಭದ್ರಪ್ಪ (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಗಳೆ, ನನಗೆ ಮಾತನಾಡಲು ಅವಕಾಶ ಕೊಟ್ಟಿದ್ದಕ್ಕಾಗಿ ತಮಗೆ ಅಭಿನಂದನೆ ಸಲ್ಲಿಸುತ್ತೇನೆ. ತಮ್ಮ ಅವಿರೋಧ ಆಯ್ಕೆ ಈ ಸದನದ ಎಲ್ಲಾ ಶಾಸಕರ ಪ್ರೀತಿ, ವಿಶ್ವಾಸ ಮತ್ತು ಗೌರವವನ್ನು ತೋರಿಸುತ್ತದೆ. ತಮ್ಮ ಆಯ್ಕೆ ಇವತ್ತು ಕರ್ನಾಟಕ ರಾಜ್ಯದ ವಿಧಾನ ಪರಿಷತ್ತಿನ ಗೌರವವನ್ನು ಹೆಚ್ಚು ಮಾಡಿದೆ. ಕೆಳಮನೆಯಲ್ಲಿ ತಮಗಿರುವ ಅನುಭವ ಮತ್ತು ಈ ಮನೆಯಲ್ಲಾಗಿರುವ ಅನುಭವದ ಹಿನ್ನೆಲೆಯಲ್ಲಿ ಸದನವನ್ನು ಚೆನ್ನಾಗಿ ನಡೆಸುವಲ್ಲಿ ಯಾವ ಸಂಶಯ ಇಲ್ಲ. ಕೆಳಮನೆಯಲ್ಲಿ ತಮ್ಮ ಜೊತೆ ಇರುವ ಅವಕಾಶ ಮತ್ತು ಈ ಮನೆಯಲ್ಲಿ ತಮ್ಮ ಜೊತೆ ಕೆಲಸ ಮಾಡುವಂತಹ ಅವಕಾಶ ನನಗೆ ಸಿಕ್ಕಿದೆ.

(ಮುಂದು . . .)

(384)12-12-2018(1.40)ಡಿಎಸ್-ಎಕೆ

**ಶ್ರೀ ಅಲ್ಲಂ ವೀರಭದ್ರಪ್ಪ(ಮುಂದು):-**

ಬಹಳಷ್ಟು ಜನರಿಗೆ ಇಂತಹ ಅವಕಾಶಗಳು ಸಿಗುವುದಿಲ್ಲ. ಆದರೆ ನನಗೆ ಇಂತಹ ಅವಕಾಶ ಸಿಕ್ಕಿದೆ. ತಾವು ಒಳ್ಳೆಯ ಅನುಭವಿಗಳು, ಹಿರಿಯರು, ನಾನು ಅಧ್ಯಕ್ಷನಾಗಿ ಮಂಗಳೂರಿಗೆ ಬಂದಾಗ ನಮ್ಮ ಜೊತೆಗಿದ್ದು, ತಮ್ಮ ಒಡನಾಟ ನೋಡಿ ನಮಗೆಲ್ಲರಿಗೂ ಬಹಳ ಸಂತೋಷವಾಯಿತು. ನಾನು ತಮಗೆ ಹೇಳುವುದು ಏನು ಇಲ್ಲ, ತಾವು ಈ ಸದನದ ಗೌರವ ಕಾಪಾಡಬೇಕು. ಹೆಚ್ಚಿನ ರೀತಿಯಲ್ಲಿ ಸದನದ ಆಡಳಿತ ಪಕ್ಷ ಮತ್ತು ವಿರೋಧ ಪಕ್ಷ ಈ ಎರಡೂ ಭಾಗದವರಿಗೆ ಅವಕಾಶ ಕೊಟ್ಟು, ಎಲ್ಲಾ ರೀತಿಯ ವಿಷಯಗಳಿಗೆ ತಾವು ಪ್ರಾಧಾನ್ಯತೆ ಕೊಟ್ಟು ತಮ್ಮ ನೇತೃತ್ವದಲ್ಲಿ ಸರ್ಕಾರದಿಂದ ಜನರ ಕೆಲಸಗಳಿಗೆ ಅನುಕೂಲವಾಗಬೇಕೆನ್ನುವುದು ನಮ್ಮೆಲ್ಲರ ಉದ್ದೇಶವಾಗಿದೆ. ಇದರ ಜೊತೆಗೆ ನಮ್ಮ ಹಿಂದಿನ ಸಭಾಪತಿಗಳಾದ ಮಾನ್ಯ ಬಸವರಾಜ ಹೊರಟ್ಟಿಯವರು ಈ ಸದನವನ್ನು ಬಹಳ ಗೌರವಯುತವಾಗಿ ನಡೆಸಿಕೊಂಡು ಹೋಗಿದ್ದಕ್ಕೆ ಅವರಿಗೆ ನಮ್ಮೆಲ್ಲರ ಪರವಾಗಿ ಅಭಿನಂದನೆಯನ್ನು ಸಲ್ಲಿಸುತ್ತಿದ್ದೇನೆ. ನನಗೆ ಏನು ಸಂತೋಷವಾಗಿದೆ ಎಂದರೆ ಈಗ ಅವರು ಇಲ್ಲಿ ನಮ್ಮ ಜೊತೆಯಲ್ಲಿ ಕುಳಿತಿದ್ದಾರೆ. ಅವರು ನಮ್ಮ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಜೊತೆಯಲ್ಲಿರುವುದು ನಮಗೆ ಸಂತೋಷವಾಗಿದೆ. ಆದರೆ ಮಾನ್ಯ ಶರವಣರವರು, ಇತರ ಸ್ನೇಹಿತರು ನಾವೆಲ್ಲಾ ಹೋರಾಟ ಮಾಡಿ ಮಾನ್ಯ ಬಸವರಾಜ ಎಸ್.ಹೊರಟ್ಟಿಯವರನ್ನು ಸಚಿವರನ್ನಾಗಿ ಮಾಡಬೇಕೆಂದು ಹೇಳಿದೆವು. ಕೇವಲ ಅವರ ಪಕ್ಷದವರಷ್ಟೇ ಅಲ್ಲ, ಕಾಂಗ್ರೆಸ್ ಪಕ್ಷದವರು ಕೂಡ ಅವರ ಜೊತೆಯಲ್ಲಿರುತ್ತೇವೆ. ಎಲ್ಲರೂ ಸೇರಿ ಅವರನ್ನು ಮಂತ್ರಿ ಮಾಡೋಣ.

**ಶ್ರೀ ಟಿ.ಎ.ಶರವಣ:-** ನಿಮ್ಮ ಕೋಟಾ ಪ್ರಕಾರ ಈಗ 6 ಎಂದು ಏನಿದೆ, ಅದಕ್ಕೆ ಒಂದನ್ನು ಸೇರಿಸಿ 7 ಎಂದು ಮಾಡಿಬಿಡಿ. ನಿಮ್ಮ ಪಕ್ಷದಲ್ಲಿರುವುದನ್ನು ಮೊದಲು ಭರ್ತಿ ಮಾಡಿ.

**ಶ್ರೀ ಅಲ್ಲಂ ವೀರಭದ್ರಪ್ಪ:-** ಮಾನ್ಯ ಶರವಣರವರೆ, ಇದರಲ್ಲಿ ರಾಜಕೀಯ ಬೇಡ. ಮಾನ್ಯ ಬಸವರಾಜ ಹೊರಟ್ಟಿಯವರನ್ನು ಮಂತ್ರಿ ಮಾಡಿ. ಈಗ ಕೋಟಾ ವಿಚಾರ ಬೇಡ, ಮಾನ್ಯ ಬಸವರಾಜ ಹೊರಟ್ಟಿಯವರ ವಿಚಾರದಲ್ಲಿ ಈ ರೀತಿಯ ಮಾತುಗಳು ಬೇಡ. ಕನ್ನಡ ನಾಡಿನ ಹಿರಿಯ ಶಾಸಕರಾದ ಅವರು ಎಲ್ಲರಿಗೂ ಬೇಕಾದವರು. ಎಲ್ಲರೂ ಸೇರಿ ಅವರನ್ನು ಮಂತ್ರಿ ಮಾಡೋಣ ಎಂದು ಹೇಳಿದೆ.

**ಶ್ರೀ ಟಿ.ಎ.ಶರವಣ:-** ಅವರ ಮೇಲೆ ಎಲ್ಲರಿಗೂ ಸ್ಥಿರವಾದ ಭಾವನೆ ಇದೆ. ಈಗ ಅದೇ ಸಮಸ್ಯೆಯಾಗಿರುವುದು.

**ಶ್ರೀ ಅಲ್ಲಂ ವೀರಭದ್ರಪ್ಪ:-** ಅದರಲ್ಲಿ ಸಮಸ್ಯೆ ಏನು ಇಲ್ಲ, ಮನಸ್ಸು ಮಾಡಿದರೆ ಏನು ಬೇಕಾದರೂ ಮಾಡಬಹುದು. ನಾವು ರಾಜಕೀಯ ಮಾತನಾಡುವುದು ಬೇಡ, ಇದರಲ್ಲಿ ರಾಜಕೀಯ ತರುವುದು ಬೇಡ. ನಮ್ಮೆಲ್ಲ ಶಾಸಕರ ಅಭಿಮಾನ ಮತ್ತು ಉದ್ದೇಶ ಏನಿದೆ, ಅದರಂತೆ ಎಲ್ಲರೂ ಸೇರಿ ಅವರನ್ನು ಸಚಿವರನ್ನಾಗಿ ಮಾಡೋಣ, ನೀವೊಬ್ಬರೆ ಮಾಡುವುದು ಬೇಡ. ಅದರ ಜೊತೆಗೆ ಬೇಕಾದರೆ ನಮ್ಮ ಸಹಕಾರವನ್ನು ಕೊಡುತ್ತೇವೆಂದು ಹೇಳುತ್ತಾ, ನನಗೆ ಅವಕಾಶ ಕೊಟ್ಟಿದ್ದಕ್ಕಾಗಿ ಧನ್ಯವಾದವನ್ನು ಸಲ್ಲಿಸುತ್ತೇನೆ.

**ಶ್ರೀ ಅ.ದೇವೇಗೌಡ(ಪದವೀಧರರ ಕ್ಷೇತ್ರ):-** ಮಾನ್ಯ ಸಭಾಪತಿಯವರೆ, ತಮ್ಮನ್ನು ಸಭಾಪತಿಗಳಾಗಿ ಅವಿರೋಧವಾಗಿ ಆಯ್ಕೆ ಮಾಡಿದ್ದಕ್ಕೆ ಎಲ್ಲಾ ಸದಸ್ಯರಿಗೆ, ಸರ್ಕಾರಕ್ಕೆ ಅಭಿನಂದನೆಯನ್ನು ಸಲ್ಲಿಸುತ್ತೇನೆ. ತಾವು ನನಗೆ ಪರಿಚಯ ಆಗಿದ್ದು ನಾನು ಸಚಿವಾಲಯದಲ್ಲಿ ನೌಕರನಾಗಿದ್ದಾಗ ಕಾರ್ಯದರ್ಶಿಯವರ ಕೊಠಡಿಯಲ್ಲಿ ತಮ್ಮ ಆ ಸರಳ ಸಜ್ಜನಿಕೆಯನ್ನು ನೋಡಿ, 'ಇವರು ಯಾರು' ಎಂದು ಶ್ರೀ ಓಂಪ್ರಕಾಶ್‌ರವರನ್ನು ಕೇಳಿದೆ. ಅದಕ್ಕವರು 'ಇವರು ಶಾಸಕರು, ಈಗಾಗಲೇ 3 ಬಾರಿ ಶಾಸಕರಾಗಿ ಆಯ್ಕೆಯಾಗಿದ್ದಾರೆ' ಎಂದು ಹೇಳಿದರು. ಸತ್ಯ ಮತ್ತು ಪ್ರಾಮಾಣಿಕತೆಗೆ ಭಗವಂತ ಎಲ್ಲೋ ಒಂದು ಅವಕಾಶ ಕೊಡುತ್ತಾನೆ ಎನ್ನುವುದಕ್ಕೆ ತಾವೇ ಒಂದು ನಿದರ್ಶನ. ಅದೇ ರೀತಿ ನಮ್ಮ ಹಂಗಾಮಿ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಸಭಾಪತಿಗಳಾಗಿದ್ದಂತಹ ಮಾನ್ಯ ಬಸವರಾಜ ಹೊರಟ್ಟಿಯವರು ಆಗಿಂದಾಗ್ಗೆ ನನಗೆ ಆಶೀರ್ವಾದ ಮಾಡಿದ್ದರು. ನಾನು ಚುನಾವಣೆಯಲ್ಲಿ ಸೋಲುತ್ತಲೇ ಇದ್ದೆ, ಆದರೂ ಸತ್ಯಕ್ಕೆ ಮತ್ತು ಪ್ರಾಮಾಣಿಕತೆಗೆ, ಒಳ್ಳೆಯದಕ್ಕೆ ಭಗವಂತ ಆಶೀರ್ವಾದ ಮಾಡುತ್ತಾನೆ ಎನ್ನುವುದಕ್ಕೆ ಮಾನ್ಯ ಬಸವರಾಜ ಹೊರಟ್ಟಿಯವರು ಮತ್ತು ತಾವು ಆದರ್ಶ ಎಂದು ನಾನು ಭಾವಿಸುತ್ತೇನೆ.

ನಾನು ಮೊನ್ನೆ ಈ ಮೇಲ್ಮನೆ ಸದಸ್ಯನಾಗಿ ಆಯ್ಕೆಯಾದಾಗ ಮಾನ್ಯ ಬಸವರಾಜ ಹೊರಟ್ಟಿಯವರು ಬಹಳ ಖುಷಿಯಾಗಿ ನನ್ನನ್ನು ಮಾತನಾಡಿಸಿದರು. ನಾನು ಒಳ್ಳೆಯ ದಿವಸ ಪ್ರಮಾಣ ವಚನ ಸ್ವೀಕರಿಸಬೇಕು, ಆ ದಿನ ತಾವೂ ಬರಬೇಕೆಂದು ಅವರನ್ನು ದೂರವಾಣಿಯಲ್ಲಿ ಕೇಳಿಕೊಂಡಾಗ, ಅವರು ಧಾರವಾಡ ವಿಶ್ವವಿದ್ಯಾಲಯದ ತಮ್ಮ ಪೂರ್ವನಿಯೋಜಿತವಾಗಿದ್ದ ಕಾರ್ಯಕ್ರಮವನ್ನು ರದ್ದುಪಡಿಸಿಕೊಂಡು ಬಂದು 'ನೀನು ಅಪರೂಪಕ್ಕೆ ಆಯ್ಕೆಯಾಗಿಬಿಟ್ಟಿದ್ದೀಯಾ, ಈ ಸಲ ಚುನಾವಣೆಯಲ್ಲಿ ಗೆದ್ದಿದ್ದೀಯಾ, ಒಳ್ಳೆಯ ದಿನವೇ ಪ್ರಮಾಣ ವಚನ ಸ್ವೀಕರಿಸು' ಎಂದು ನನಗೆ ಆಶೀರ್ವಾದ ಮಾಡಿದರು. ಇವತ್ತು ಬೆಳಿಗ್ಗೆ ನನಗೆ ಆಶ್ಚರ್ಯವಾಯಿತು, ಹೂಗುಚ್ಛದೊಡನೆ ನಮ್ಮ ವಿರೋಧ ಪಕ್ಷದವರೆಲ್ಲಾ ಒಗ್ಗೂಡಿ ಮಾನ್ಯ ಸಭಾಪತಿಗಳಿಗೆ ಶುಭ ಕೋರಲು ಅವರ ಕೊಠಡಿಗೆ ಹೊರಟಂತಹ ಸಂದರ್ಭದಲ್ಲಿ ಸನ್ಮಾನ್ಯ ಪ್ರತಾಪಚಂದ್ರ ಶೆಟ್ಟರು ಸಭಾಪತಿಗಳಾಗಿ ಆಯ್ಕೆಯಾಗಿದ್ದಾರೆ ಎನ್ನುವ ವಿಚಾರ ನಿಜಕ್ಕೂ ನಮಗೆ ಗೊತ್ತಿರಲಿಲ್ಲ. ಶುಭ ಹಾರೈಸಲು ಅವರ ಕೊಠಡಿಗೆ ಹೋದಾಗ ಈ ತರಹ ಬದಲಾವಣೆಯಾಗಿದೆ ಎಂದು ಗೊತ್ತಾಗಿ ಆಶ್ಚರ್ಯಚಕಿತನಾದ ನನಗೆ ಮಾತೇ ನಿಂತು ಹೋಯಿತು. ಆಮೇಲೆ ಶುಭ ಹಾರೈಸಲು ಅವರ ಕೊಠಡಿಗೆ ಹೋದಾಗ ಈ ತರಹ ಬದಲಾವಣೆಯಾಗಿದೆ ಎಂದು ಗೊತ್ತಾಗಿ ಆಶ್ಚರ್ಯಚಕಿತನಾದ ನನಗೆ ಮಾತೇ ನಿಂತು ಹೋಯಿತು. ನಂತರ ಹೂಗುಚ್ಛವನ್ನು ಸನ್ಮಾನ್ಯ ಪ್ರತಾಪಚಂದ್ರ ಶೆಟ್ಟಿಯವರಿಗೆ ಕೊಟ್ಟು ಶುಭ ಕೋರಿದೆವು. ನಿಜವಾಗಿಯೂ ನಾನು ಈ ಸದನಕ್ಕೆ ಹೊಸದಾಗಿ ಆಯ್ಕೆಯಾಗಿ ಬಂದಾಗ ಮಾನ್ಯ ಬಸವರಾಜ ಹೊರಟ್ಟಿಯವರು ನನಗೆ ಆಶೀರ್ವಾದ ಮಾಡಿ, ಸದನದಲ್ಲಿ ಯಾವ ರೀತಿ ನಡೆದುಕೊಳ್ಳಬೇಕೆಂದು ತಿಳಿಸಿಕೊಟ್ಟರು. ಇಂತಹ ಕಮಿಟಿಗೆ ಹಾಕಬೇಕೆಂದು ನಾನು ಕೇಳದಿದ್ದರೂ ಅವರಾಗಿಯೇ ನನ್ನನ್ನು ಸಮಿತಿಯ ಸದಸ್ಯನನ್ನಾಗಿ ಆಯ್ಕೆ ಮಾಡಿದರು. ಶಾಸಕರ ತರಬೇತಿ ಕಾರ್ಯಕ್ರಮವನ್ನು ಆಯೋಜಿಸಿದಂತಹ ಸಂದರ್ಭದಲ್ಲಿ ಅದರಲ್ಲಿ ತಪ್ಪದೆ ಭಾಗವಹಿಸಬೇಕೆಂದು ನನಗೆ ತಿಳಿಸಿ ಹೇಳಿದರು. ನಿಜವಾಗಿಯೂ ಅವರಿಗೆ ನಾನು ಬಹಳ ಅಭಿನಂದನೆಗಳನ್ನು ಸಲ್ಲಿಸಬೇಕಾಗುತ್ತದೆ. ಏಕೆಂದರೆ, ಪ್ರತಿ ದಿನ ಶಿಕ್ಷಕರ ಒಂದಿಲ್ಲೊಂದು ಸಮಸ್ಯೆಗಳಿರುತ್ತವೆ. ಈಗಾಗಲೇ ಅವರನ್ನು ಭೇಟಿಯಾಗಲು ಶಿಕ್ಷಕರ ತಂಡವೊಂದು ಬಂದು ಹೊರಗೆ ಕುಳಿತಿದೆ. ಅವರು ಅಲ್ಲಿಗೆ ಹೊರಟಿದ್ದಾರೆ. ಶಿಕ್ಷಣ ಇಲಾಖೆ, ಕಾನೂನು ಇಲಾಖೆ ಹಾಗೂ ಆರ್ಥಿಕ ಇಲಾಖೆಯ ಕಾರ್ಯದರ್ಶಿಯವರನ್ನು ಕರೆದು

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ತಕ್ಷಣವೇ ಅವರು ಸಮಸ್ಯೆಗಳಿಗೆ ಪರಿಹಾರವನ್ನು ಕಂಡುಕೊಳ್ಳುತ್ತಿದ್ದರು. ಎಲ್ಲಾ ಪಕ್ಷದವರು ಸೇರಿ ಮಾನ್ಯ ಬಸವರಾಜ ಹೊರಟ್ಟಿಯವರನ್ನು ಶಿಕ್ಷಣ ಸಚಿವರನ್ನಾಗಿ ಆಯ್ಕೆ ಮಾಡಿದರೆ ನಾವು 14 ಜನ ಶಿಕ್ಷಕರ ಹಾಗೂ ಪದವೀಧರರ ಕ್ಷೇತ್ರದ ಶಾಸಕರುಗಳ ಕೆಲಸವೇನಿದೆ, ಅದು ಬಹಳ ಸರಳವಾಗುತ್ತದೆ. ಆದ್ದರಿಂದ ಮಾನ್ಯ ಬಸವರಾಜ ಹೊರಟ್ಟಿಯವರಿಗೆ ಶಿಕ್ಷಣ ಸಚಿವರ ಸ್ಥಾನ ಸಿಗುವಂತಾಗಲೆಂದು ಭಗವಂತನಲ್ಲಿ ಪ್ರಾರ್ಥನೆ ಮಾಡಿ, ನನಗೆ ಮಾತನಾಡಲು ಅವಕಾಶ ಮಾಡಿಕೊಟ್ಟ ತಮಗೆ ವಂದಿಸಿ, ನನ್ನ ಮಾತುಗಳನ್ನು ಮುಕ್ತಾಯ ಮಾಡುತ್ತೇನೆ.

**ಸಭಾಪತಿಯವರು:–** ಕರ್ನಾಟಕ ವಿಧಾನ ಪರಿಷತ್ತಿನ ಈ ಗೌರವಾನ್ವಿತ ಸ್ಥಾನಕ್ಕೆ ಅವಿರೋಧವಾಗಿ ಆಯ್ಕೆ ಮಾಡಿರತಕ್ಕಂಥ ಎಲ್ಲಾ ಗೌರವಾನ್ವಿತ ಸದಸ್ಯರಿಗೆ ಕೃತಜ್ಞತೆಗಳನ್ನು ಸಲ್ಲಿಸುತ್ತಿದ್ದೇನೆ. ಈ ಸದನವು 110 ವರ್ಷಗಳಿಗಿಂತಲೂ ಹೆಚ್ಚಿನ ಇತಿಹಾಸವನ್ನು ಹೊಂದಿರತಕ್ಕಂಥ ಸದನವಾಗಿದ್ದು, ಈ ಸದನದ ಗೌರವವನ್ನು ಕಾಯತಕ್ಕಂಥ ಕೆಲಸ ನಮ್ಮೆಲ್ಲರದ್ದಾಗಿದೆ. ಈ ಒಂದು ಹಿನ್ನೆಲೆಯಲ್ಲಿ ತಮ್ಮೆಲ್ಲರ ಸಹಕಾರ ಅತೀ ಮುಖ್ಯವಾಗಿದೆ. ಇವತ್ತು ತಾವುಗಳೆಲ್ಲರೂ ಸಾಕಷ್ಟು ವಿಚಾರಗಳ ಬಗ್ಗೆ ಮಾತನಾಡಿದ್ದೀರಿ. ಹಾಗಾಗಿ ನನಗೆ ಮಾತನಾಡಲು ಬಾಕಿ ಇರತಕ್ಕಂಥ ಯಾವುದೇ ವಿಚಾರಗಳಿಲ್ಲ. ನನ್ನ ವಿಚಾರವನ್ನು ನನಗಿಂತ ಹೆಚ್ಚಿನದಾಗಿ ತಾವುಗಳು ಹೇಳಿರುವುದನ್ನು ನಾನು ಕಂಡಿದ್ದೇನೆ. ಈ ಒಂದು ಸದನಕ್ಕೆ ನಾನು ಹೇಗೆ ಬಂದೆ ಎಂದರೆ, ಶ್ರೀಮತಿ ಇಂದಿರಾ ಗಾಂಧಿಯವರು ಪ್ರಧಾನ ಮಂತ್ರಿಯಾಗಿದ್ದಂಥ ಸಂದರ್ಭದಲ್ಲಿ, ಅವರು ನಮ್ಮ ಪಕ್ಷದ ಅಧ್ಯಕ್ಷಿಣಿಯಾಗಿದ್ದರು, ದಿವಂಗತ ಗುಂಡೂರಾಯರು ಈ ರಾಜ್ಯದ ಮುಖ್ಯಮಂತ್ರಿಗಳಾಗಿದ್ದರು ಹಾಗೂ ಆಸ್ಕರ್ ಫರ್ನಾಂಡಿಸ್‌ರವರು ಉಡುಪಿ ಕ್ಷೇತ್ರದ ಲೋಕಸಭಾ ಸದಸ್ಯರಾಗಿದ್ದರು. ಯುವಕನಾಗಿದ್ದ ನನಗೆ 1983ರ ಚುನಾವಣೆಯಲ್ಲಿ ಸ್ಪರ್ಧೆ ಮಾಡಲಿಕ್ಕೆ ಅವಕಾಶವನ್ನು ಕಲ್ಪಿಸಿಕೊಟ್ಟರು. ಬಹುಶಃ ಆನಂತರ ನಿರಂತರವಾಗಿ ನಾಲ್ಕು ಚುನಾವಣೆಗಳಲ್ಲಿ ಗೆದ್ದು, ಐದನೇ ಚುನಾವಣೆಯಲ್ಲಿ ಅಲ್ಪ ಮತಗಳಿಂದ ಸೋತೆನು. ಸೋತಿರತಕ್ಕಂಥ ಸಂದರ್ಭದಲ್ಲಿ ನನಗೆ ಇನ್ನು ಮುಂದೆ ಚುನಾವಣೆಯಲ್ಲಿ ಸ್ಪರ್ಧೆ ಮಾಡಲಿಕ್ಕೆ ಸಾಧ್ಯವಿಲ್ಲವೆನ್ನುವ ಭಾವನೆ ನನಗೆ ಅಂದು ಮೂಡಿತ್ತು. ಏಕೆಂದರೆ ಆರ್ಥಿಕವಾಗಿ ವಿಧಾನ ಸಭೆ ಚುನಾವಣೆಯಲ್ಲಿ ಹೊಂದಾಣಿಕೆ ಮಾಡಿಕೊಳ್ಳಲಿಕ್ಕೆ ಸಾಧ್ಯವಾಗುವುದಿಲ್ಲ ಎನ್ನತಕ್ಕಂಥ ವಿಚಾರದ ಹಿನ್ನೆಲೆಯಲ್ಲಿ ನಾನು ವಿಧಾನ ಸಭಾ ಚುನಾವಣೆಯಲ್ಲಿ ಸ್ಪರ್ಧೆ ಮಾಡುವುದಿಲ್ಲ ಎನ್ನತಕ್ಕಂಥ ತೀರ್ಮಾನಕ್ಕೆ ಬಂದಾಗ, ನಮ್ಮ ಪಕ್ಷ ನನಗೆ ವಿಧಾನ ಪರಿಷತ್ತಿಗೆ ಸ್ಪರ್ಧೆ ಮಾಡಲಿಕ್ಕೆ ಮತ್ತೊಂದು ಅವಕಾಶವನ್ನು ಮಾಡಿಕೊಟ್ಟಿತು. ಬಹುಶಃ ಆನಂತರ ಎರಡು ಚುನಾವಣೆಗಳನ್ನು ಗೆದ್ದೆನು. ಒಂದು ಚುನಾವಣೆಯಲ್ಲಿ ನಾನು ಮತ್ತು ಮಾನ್ಯ ಕೋಟ ಶ್ರೀನಿವಾಸ ಪೂಜಾರಿಯವರು ಅವಿರೋಧವಾಗಿ ಆಯ್ಕೆಯಾಗಿರುವುದು ರಾಜ್ಯದ ರಾಜಕೀಯ ಇತಿಹಾಸದ ದಾಖಲೆಗೆ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಹೋಗಿರಬಹುದು. ಆನಂತರ ನಾನು ಅವಿರೋಧವಾಗಿ ಆಯ್ಕೆಯಾಗಿದ್ದೆ, ಇನ್ನು ಮುಂದೆ ಚುನಾವಣೆಗೆ ನಿಲ್ಲುವುದು ಬೇಡ, ಬೇರೆಯವರಿಗೆ ಅವಕಾಶ ಸಿಗಲಿ ಎನ್ನತಕ್ಕಂಥ ನನ್ನ ಭಾವನೆಗಳನ್ನು ನನ್ನ ಪಕ್ಷದ ಮುಖಂಡರಿಗೆ ಮತ್ತು ನನ್ನನ್ನು ಆರಿಸಿ ಕಳುಹಿಸಿದಂಥ ಮತದಾರರಿಗೆ ತಿಳಿಸತಕ್ಕಂಥ ಪ್ರಯತ್ನವನ್ನು ನಾನು ಮಾಡಿದ್ದೇನೆ. ಆದರೆ ಕೊನೆಯ ಹಂತದಲ್ಲಿ ನಮ್ಮ ಕಾರ್ಯಕರ್ತರು ಒತ್ತಡವನ್ನು ತಂದು, 25-30 ವರ್ಷಗಳ ಕಾಲ ನೀವು ಹೇಳಿದ ಹಾಗೆ ನಾವು ಕೇಳಿಕೊಂಡಿದ್ದೆವು. ಇದೊಂದು ಬಾರಿ ನಾವು ಹೇಳಿದ ಹಾಗೆ ನೀವೇಕೆ ಕೇಳುವುದಿಲ್ಲ ಎನ್ನತಕ್ಕಂಥ ಅವರ ಮಾತಿಗೆ ಉತ್ತರ ಕೊಡಲಿಕ್ಕೆ ಸಾಧ್ಯವಾಗದೇ ಇರತಕ್ಕಂಥ ಸಂದಿಗ್ಧ ಪರಿಸ್ಥಿತಿ ನನಗೆ ಎದುರಾಯಿತು. ಬಹುಶಃ ಪಕ್ಷ ನಾನೇ ಚುನಾವಣೆಯಲ್ಲಿ ಸ್ಪರ್ಧೆ ಮಾಡಬೇಕೆನ್ನುವ ವಿಚಾರವನ್ನು ಹೇಳಿದಾಗ ನಾನು ಚುನಾವಣೆಗೆ ಸ್ಪರ್ಧಿಸಲೇಬೇಕಾಯಿತು. ಈ ರೀತಿ ನಾನು ಚುನಾವಣೆಗೆ ನಿಂತಾಗ ನನಗೆ ಯಾವುದೇ ಆಕಾಂಕ್ಷೆಗಳಿರಲಿಲ್ಲ.

ಸಾಮಾನ್ಯವಾಗಿ ರಾಜಕೀಯ ಕ್ಷೇತ್ರದಲ್ಲಿರುವಾಗ ವಿಧಾನ ಸಭೆಗೆ ಸ್ಪರ್ಧೆ ಮಾಡತಕ್ಕಂಥ ಸಂದರ್ಭದಲ್ಲಿ ಮಂತ್ರಿಯಾಗಬೇಕೆನ್ನುವ ಕನಸಿರುವುದು ಸ್ವಾಭಾವಿಕ. ಆದರೆ ವಿಧಾನ ಪರಿಷತ್ತಿಗೆ ಆಯ್ಕೆಯಾಗಿ ಬಂದಾಗ ಅದನ್ನೆಲ್ಲಾ ನಿರೀಕ್ಷೆ ಮಾಡುವುದು ಬಹಳ ಕಷ್ಟವಿದೆ. ಏಕೆಂದರೆ ನೇರವಾಗಿ ವಿಧಾನ ಸಭೆಗೆ ಆಯ್ಕೆಯಾದವರು ಅವರ claim ಅನ್ನು ಕೇಳತಕ್ಕಂಥ ಸಂದರ್ಭದಲ್ಲಿ ಅದನ್ನು ನಮಗೆ ಕೊಡಿ ಎಂದು ಕೇಳತಕ್ಕಂಥಾದ್ದು ಅಷ್ಟು ಸಮಂಜಸವಲ್ಲ ಎನ್ನುವುದು ನನ್ನ ಒಂದು ಅನಿಸಿಕೆಯಾಗಿತ್ತು. ಅದಕ್ಕೆ ಪೂರಕವಾಗಿ ನಾನು ವಿಧಾನ ಪರಿಷತ್ತಿಗೆ ಹೋದಾಗ ಯಾವ್ಯಾವ ವಿಧಾನ ಸಭಾ ಸದಸ್ಯರು ತಮ್ಮ ತಮ್ಮ ಕ್ಷೇತ್ರದಲ್ಲಿ ನಮ್ಮನ್ನು ಗೆಲ್ಲಿಸುತ್ತಾರೆ, ಅದೇ ಕ್ಷೇತ್ರದ ಶಾಸಕರ ವಿರುದ್ಧವಾಗಿ ನನಗೊಂದು ಅವಕಾಶವನ್ನು ಕೊಡಿ ಎಂದು ಕೇಳತಕ್ಕಂಥಾದ್ದು ಸೌಜನ್ಯ ಅಲ್ಲ ಎನ್ನತಕ್ಕಂಥ ಹಿನ್ನೆಲೆಯಲ್ಲಿ ಬಹುಶಃ ವಿಧಾನ ಪರಿಷತ್ತಿಗೆ ಆಯ್ಕೆಯಾದ ಸಂದರ್ಭದಲ್ಲಿ ನಾನು ಎಲ್ಲಿಯೂ ಸಹ ನನ್ನ claim ಅನ್ನು ಮಾಡಲಿಕ್ಕೆ ಹೋಗಲಿಲ್ಲ. ಮೊನ್ನೆ ಸಹ ಚುನಾವಣೆಯಲ್ಲಿ ಗೆದ್ದಾಗ ನನ್ನ ನಾಯಕರಾಗಿರುವಂಥ ಆಸ್ಕರ್ ಫರ್ನಾಂಡಿಸ್‌ರವರ ಬಳಿ ಈ ವಿಚಾರ ಚರ್ಚೆಗೆ ಬಂದಾಗ ನಾನು ಅವರಿಗೆ 'ಈ ಬಗ್ಗೆ ನಾನು ಕೇಳುವುದಿಲ್ಲ, ನೀವೂ ನನ್ನ ಬಗ್ಗೆ ಕೇಳಬಾರದು' ಎಂದು ಹೇಳಿದ್ದೆ. ಏಕೆಂದರೆ ನಮ್ಮ ಜಿಲ್ಲೆಯಲ್ಲಿ ಎಲ್ಲರೂ ಸೋತಿದ್ದಾರೆ, ಸೋತು ನಮಗೆ ಅವಕಾಶ ಕೊಡಿ ಎನ್ನತಕ್ಕಂಥಾದ್ದು ಸಮಂಜಸವಲ್ಲವೆನ್ನುವ ವಿಚಾರವನ್ನು ಹೇಳಿದಾಗ ಬಹುಶಃ ಅವರು ನಕ್ಕುಬಿಟ್ಟರು. ಖಂಡಿತ ಈ ಬಗ್ಗೆ ಅವರು ಪ್ರಯತ್ನ ಮಾಡುತ್ತಾರೆ ಎನ್ನುವ ಭಾವನೆಯೂ ನನಗಿರಲಿಲ್ಲ, ನಾನು ಯಾರ ಹತ್ತಿರವೂ ಕೇಳುವುದಕ್ಕೆ ಹೋಗಿಲ್ಲ.

(ಮುಂದು
"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

(385)12-12-2018(1-50)ಬಿಕೆಪಿ-ಆರ್‌ಎನ್

**ಸಭಾಪತಿಯವರು(ಮುಂದು. . )**

ಆದರೆ, ನಿನ್ನೆ ಮಾನ್ಯ ಸಚಿವರಾದ ಶ್ರೀಮಾನ್ ಡಿ.ಕೆ.ಶಿವಕುಮಾರ್‌ರವರ ಇಲಾಖೆಗೆ ಸಂಬಂಧಪಟ್ಟ ಹಾಗೆ ನನ್ನ ಒಂದು ಪ್ರಶ್ನೆ ಇತ್ತು. ಬಹುಶ: ನಾನು ಅದಕ್ಕೆ ತಯಾರಿ ಮಾಡಿಕೊಳ್ಳುತ್ತಿದ್ದೆ. ಆ ಸಮಯದಲ್ಲಿ ಮಾನ್ಯ ಸದಸ್ಯರಾದ ನಮ್ಮ ಶ್ರೀಯುತ ಐವನ್ ಡಿ.ಸೋಜಾರವರು ನನ್ನ ಹತ್ತಿರ ಬಂದು ತಮ್ಮನ್ನು ಕೆಪಿಸಿಸಿ ಅಧ್ಯಕ್ಷರಾದ ಶ್ರೀ ದಿನೇಶ್ ಗುಂಡೂರಾವ್‌ರವರು ಕರೆಯುತ್ತಿದ್ದಾರೆನ್ನುವ ವಿಚಾರವನ್ನು ಹೇಳಿದರು. ಅವರ ಹತ್ತಿರ ಹೋದಂತಹ ಸಂದರ್ಭದಲ್ಲಿ ಸಭಾಪತಿ ಸ್ಥಾನದ ಸ್ಪರ್ಧೆಗೆ ನಾಮಿನೇಷನ್ ಹಾಕಿ ಎಂದವರು ಹೇಳಿದಾಗ ನನಗೆ ಆಶ್ಚರ್ಯವಾಯಿತು! ನನಗೆ ಒಂದು ಬಾರಿ ಅನಿಸುವುದೇನೆಂದರೆ ಇಂತಹ ವಿಷಯಗಳ ಬಗ್ಗೆ ಮಾತನಾಡುವಂತಹ ಸಂದರ್ಭದಲ್ಲಿ ಯಾರದ್ದನ್ನೋ ನಾವು ಕಸಿದುಕೊಂಡಂತಹ ಭಾವನೆಗಳು ಬರತಕ್ಕಂತಹ ರೀತಿಯಲ್ಲಿ ಮಾತನಾಡುವುದನ್ನು ನೋಡಿರುತ್ತೇವೆ. ಬಹುಶ: ನಾವು ಇಲ್ಲಿ ಎಲ್ಲಿಯೂ ಕ್ಲೈಮ್ ಹಾಕಿರುವುದಿಲ್ಲ. ಇಷ್ಟು ವರ್ಷಗಳ ಕಾಲ ಕೆಲಸ ಮಾಡಿರುವ ನನಗೆ ಪಕ್ಷ ಏನೂ ಕೊಟ್ಟಿಲ್ಲ ಎನ್ನುವ ಜನಾಭಿಪ್ರಾಯದ ಹಿನ್ನೆಲೆಯಲ್ಲಿ ನನಗೆ ಕರೆದು ಈ ಸ್ಥಾನವನ್ನು ಕೊಟ್ಟಿದ್ದಾರೆನ್ನುವಂತಹ ವಿಶ್ವಾಸ ನನ್ನದಾಗಿದೆ.

**(ಈ ಹಂತದಲ್ಲಿ ಸದನದ ಸದಸ್ಯರೆಲ್ಲರೂ ಮೇಜನ್ನು ತಟ್ಟುವುದರ ಮೂಲಕ ಅಭಿನಂದಿಸಿದರು)**

ಇನ್ನು ಮಾನ್ಯ ಸದಸ್ಯರಾದ ಶ್ರೀ ವೈ.ಎ.ನಾರಾಯಣಸ್ವಾಮಿಯವರು ಮಾತನಾಡುತ್ತಾ, ನೀವು ಸದಸ್ಯರ ಪೀಠದಲ್ಲಿದ್ದುಕೊಂಡು ಈ ಹಿಂದೆ ಎಷ್ಟು ಮಾತನಾಡಿದ್ದೀರಿ, ಅದೇ ರೀತಿ ನಮಗೂ ಮಾತನಾಡಲಿಕ್ಕೆ ಅವಕಾಶವನ್ನು ಕೊಡಿ ಎನ್ನತಕ್ಕಂತಹ ವಿಷಯವನ್ನು ಹೇಳಿದರು. ಬಹುಶ: ಉತ್ತರ ಕೊಡಲಿಕ್ಕೆ ಆಗದೇ ಇರತಕ್ಕಂತಹ, ಜೀರ್ಣಿಸಿಕೊಳ್ಳಲಿಕ್ಕೆ ಆಗದೇ ಇರತಕ್ಕಂತಹ ಮಾತನ್ನು ಅವರು ಹೇಳಿದರು. ಈ ಸದನದಲ್ಲಿನ ಮಾನ್ಯ ಸದಸ್ಯರುಗಳ ಭಾವನೆಗಳಿಗೆ ಸ್ಪಂದಿಸಿ, ಈ ಒಂದು ಪೀಠದಿಂದ ಎಲ್ಲರಿಗೂ ಸಮಾನ ಅವಕಾಶವನ್ನು ಕೊಡತಕ್ಕಂತಹ ಪ್ರಾಮಾಣಿಕ ಪ್ರಯತ್ನವನ್ನು ನಾನು ಮಾಡುತ್ತೇನೆ ಎನ್ನುವಂತಹ ಮಾತನ್ನು ಹೇಳಲಿಕ್ಕೆ ಬಯಸುತ್ತೇನೆ.

ಇನ್ನು, ಶ್ರೀಮಾನ್ ಬಸವರಾಜ ಹೊರಟ್ಟಿಯವರ ಬಗ್ಗೆ ಹೇಳುವುದಾದರೆ 1983 ರಲ್ಲಿ ನಾನು ಶಾಸಕನಾಗಿ ಆರಿಸಿ ಬಂದಂತಹ ಸಮಯದಲ್ಲಿ ನಾನು ಶಾಸಕರ ಭವನ ಕೊಠಡಿ ಸಂಖ್ಯೆ 437 ರಲ್ಲಿ ಇದ್ದೆ. ಅವರು ಕೊಠಡಿ ಸಂಖ್ಯೆ 436 ರಲ್ಲಿ ಇದ್ದರು. ಆ ಸಮಯದಲ್ಲಿ ನಾವು ಪ್ರತಿನಿತ್ಯ ಆ ಕಡೆ ಈ

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಕಡೆ ಹೋಗುವಾಗ ಶ್ರೀಮಾನ್ ಹೊರಟ್ಟಿಯವರು ಸಿಗುತ್ತಿದ್ದರು. ನಾನು ಅಂದು ಗಮನಿಸಿದ ಹಾಗೆ ಶ್ರೀಯುತ ಹೊರಟ್ಟಿಯವರ ಜೊತೆ ಪ್ರತಿ ದಿನವೂ ಸಹ 50-100 ಜನರು ಇರುತ್ತಿದ್ದರು. ಅಂದರೆ ಆ ಒಂದು ಮಹಡಿಯಲ್ಲಿ ಅವರದ್ದೇ ಓಡಾಟ ಜಾಸ್ತಿ ಇತ್ತು. ಬಹುಶ: ನಾನು ಏನು ತಿಳಿದುಕೊಂಡಿದ್ದೆ ಎಂದರೆ ನಮ್ಮ ಹಳ್ಳಿಯ ಜನರು ಇಲ್ಲಿಗೆ ಬರುವುದಿಲ್ಲ, ಇಲ್ಲಿನ ಜನರು ಶಿಕ್ಷಿತರು, ಇವರಿಗೆ ಹೆಚ್ಚು-ಹೆಚ್ಚು ಒತ್ತಡ ಇರುತ್ತದೆ ಎನ್ನುವ ಭಾವನೆ ನನಗೆ ಅಂದೇ ಇತ್ತು. ಹೀಗಾಗಿ, ಅವರ ರಾಜಕೀಯ ಜೀವನ ನೋಡಿರುವ ಹಿನ್ನೆಲೆಯಲ್ಲಿ ಬಹಳಷ್ಟು ಒತ್ತಡಗಳನ್ನು, ಬಹಳಷ್ಟು ಜನರನ್ನು ಹಿಡಿದುಕೊಂಡು ಕೆಲಸ ಮಾಡುವಂತಹದ್ದಾಗಿದೆ. ಹಾಗೆಯೇ ಅವರು ಎಲ್ಲರ ವಿಶ್ವಾಸವನ್ನು ಗಳಿಸಿಕೊಂಡವರಾಗಿರುತ್ತಾರೆ. ಬಹುಶ: ಶ್ರೀಯುತ ಬಸವರಾಜ ಹೊರಟ್ಟಿಯವರು ಶಿಕ್ಷಣ ಸಚಿವರಾಗಿದ್ದಂತಹ ಸಂದರ್ಭದಲ್ಲಿ ಪರಿಣಾಮಕಾರಿಯಾಗಿ ಕೆಲಸ ಮಾಡಿರುವುದನ್ನು ನಾವು ಕಂಡಿದ್ದೇವೆ.

ಮತ್ತೆ, ಈ ಸಂದರ್ಭದಲ್ಲಿ ನೆನಪಿಸಿಕೊಳ್ಳಬೇಕಾದಂತಹ ಮತ್ತೊಂದು ವಿಚಾರ ಏನೆಂದರೆ ನನ್ನನ್ನು ಈ ಒಂದು ಸ್ಥಾನಕ್ಕೆ ಆಯ್ಕೆ ಮಾಡಿರುವಂತಹ, ಪರಿಗಣಿಸಿದಂತಹ ನಮ್ಮ ನಾಯಕಿಯಾಗಿರುವಂತಹ ಶ್ರೀಮತಿ ಸೋನಿಯಾ ಗಾಂಧಿಯವರನ್ನು, ಪಕ್ಷದ ರಾಷ್ಟ್ರೀಯ ಅಧ್ಯಕ್ಷರಾಗಿರುವಂತಹ ಶ್ರೀಮಾನ್ ರಾಹುಲ್ ಗಾಂಧಿಯವರನ್ನು, ನಮ್ಮ ಕಾಂಗ್ರೆಸ್ ಶಾಸಕಾಂಗ ಪಕ್ಷದ ಅಧ್ಯಕ್ಷರಾಗಿರುವಂತಹ ಶ್ರೀಮಾನ್ ಸಿದ್ದರಾಮಯ್ಯನವರನ್ನು, ಉಪ ಮುಖ್ಯಮಂತ್ರಿಗಳು ಹಾಗೂ ಗೃಹ ಸಚಿವರಾಗಿರುವಂತಹ ಡಾ॥ ಜಿ.ಪರಮೇಶ್ವರ್‌ರವರನ್ನು, ಕೆ.ಪಿ.ಸಿ.ಸಿ. ಅಧ್ಯಕ್ಷರಾಗಿರುವಂತಹ ಶ್ರೀಮಾನ್ ದಿನೇಶ್ ಗುಂಡೂರಾವ್‌ರವರನ್ನು, ಅದೇ ರೀತಿಯಲ್ಲಿ ಈ ರಾಜ್ಯದ ಮುಖ್ಯಮಂತ್ರಿಗಳಾಗಿರುವಂತಹ ಶ್ರೀಮಾನ್ ಹೆಚ್.ಡಿ.ಕುಮಾರ್‌ಸ್ವಾಮಿಯವರನ್ನು, ಜೆ.ಡಿ(ಎಸ್) ಪಕ್ಷದ ಮುಖಂಡರಾದ ಶ್ರೀಮಾನ್ ಹೆಚ್.ಡಿ.ದೇವೇಗೌಡರವರನ್ನು, ಅದೇ ರೀತಿಯಲ್ಲಿ ನಮಗೆ ಸಂಪೂರ್ಣ ಸಹಕಾರ ಕೊಟ್ಟಿರುವಂತಹ ಹಾಗೂ ಮಿತ್ರರಾಗಿರುವಂತಹ ಶ್ರೀಮಾನ್ ಕೋಟ ಶ್ರೀನಿವಾಸ ಪೂಜಾರಿಯವರನ್ನು ಮತ್ತು ಅವರ ಪಕ್ಷದ ಎಲ್ಲಾ ಸದಸ್ಯರಿಗೆ, ಹಾಗೂ ಈ ಸದನದ ಎಲ್ಲಾ ಸದಸ್ಯರಿಗೆ ಕೃತಜ್ಞತೆಯನ್ನು ಸಲ್ಲಿಸುತ್ತೇನೆ.

ಮತ್ತೆ ಹೇಳುವುದಾದರೆ, ಈ ಒಂದು ಹಂತಕ್ಕೆ ನಾನು ಬೆಳೆಯಲಿಕ್ಕೆ ನನ್ನ ಕುಟುಂಬದವರು ಸಂಪೂರ್ಣವಾದಂತಹ ಸಹಕಾರವನ್ನು ಕೊಟ್ಟಿದ್ದಾರೆ. ನನ್ನ ಸಹೋದರ-ಸಹೋದರಿಯರ ಮಕ್ಕಳು ನನ್ನ ರಾಜಕೀಯ ಜೀವನದಲ್ಲಿ, ರಾಜಕೀಯವಾಗಿ ಬೆಳೆಯಲಿಕ್ಕೆ ಏನು ಅವಶ್ಯಕತೆ ಇದೆ, ಅದಕ್ಕೆ ಆರ್ಥಿಕವಾಗಿ ಸೇರಿದಂತೆ ಎಲ್ಲಾ ಸಹಕಾರವನ್ನು ಕೊಟ್ಟವರಾಗಿರುತ್ತಾರೆ. ಅವರನ್ನು ಸಹ ಈ ಸಂದರ್ಭದಲ್ಲಿ ಸ್ಮರಿಸಬೇಕಾದಂತಹದ್ದು ನನ್ನ ಜವಾಬ್ದಾರಿ. ಅದೇ ರೀತಿಯಲ್ಲಿ ನನ್ನ ರಾಜಕೀಯ ಜೀವನದಲ್ಲಿ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಭವಿಷ್ಯವನ್ನು ರೂಪಿಸುವಂತಹ ಸಂದರ್ಭದಲ್ಲಿ ನಮ್ಮ ನಾಯಕರಾದ ಶ್ರೀಮಾನ್ ಆಸ್ಕರ್ ಫರ್ನಾಂಡೀಸ್ ರವರನ್ನು ನಾನು ಈ ಸಂದರ್ಭದಲ್ಲಿ ಸ್ಮರಿಸುತ್ತೇನೆ.

ನಾನು ಈ ಒಂದು ಕ್ಷೇತ್ರಕ್ಕೆ ಮರು ಆಯ್ಕೆಯಾಗುವಲ್ಲಿ ನಮ್ಮ ಪಕ್ಷದ ಕಾರ್ಯಕರ್ತರ ಸತತ ಪ್ರಯತ್ನದಿಂದಾಗಿ ಅಲ್ಲಿಂದ ಇಲ್ಲಿಯತನಕ ನಿರಂತರವಾಗಿ ರಾಜಕೀಯದಲ್ಲಿ ಇರಲಿಕ್ಕೆ ಅವರುಗಳ ಶ್ರಮ ಕಾರಣ. ಅದೇ ರೀತಿ ಈ ಒಂದು ಹುದ್ದೆಗೆ ಬರಲಿಕ್ಕೂ ಸಹ ಅವರೆಲ್ಲರ ಶ್ರಮ ಕಾರಣ ಎನ್ನತಕ್ಕಂತಹ ಭಾವನೆ ನನ್ನಲ್ಲಿ ಮೂಡಿರತಕ್ಕಂತಹ ಹಿನ್ನೆಲೆಯಲ್ಲಿ ಅವರಿಗೂ ಸಹ ಈ ವೇದಿಕೆಯ ಮುಖಾಂತರ ಕೃತಜ್ಞತೆಯನ್ನು ಸಲ್ಲಿಸುತ್ತಾ, ಈ ಒಂದು ಸದನದ ಗೌರವವನ್ನು ಎತ್ತಿ ಹಿಡಿಯಲಿಕ್ಕೆ ಪ್ರಾಮಾಣಿಕವಾದ ಕೆಲಸವನ್ನು ಮಾಡುತ್ತೇನೆ, ಈ ಸದನದ ಗೌರವವನ್ನು ಹೆಚ್ಚು-ಹೆಚ್ಚು ಎತ್ತರಕ್ಕೆ ಏರಿಸುವಂತಹ ಪ್ರಯತ್ನದಲ್ಲಿ ತಮ್ಮೊಂದಿಗೆ ನಾನು ಇರುತ್ತೇನೆ ಎನ್ನುವಂತಹ ಮಾತನ್ನು ಹೇಳಿ ತಮಗೆಲ್ಲಾ ವಂದಿಸುತ್ತಾ ಮಧ್ಯಾಹ್ನ 3 ಗಂಟೆ 15 ನಿಮಿಷಗಳವರೆಗೆ ಸದನವನ್ನು ಮುಂದೂಡುತ್ತಿದ್ದೇನೆ.

**(ಸದನವನ್ನು ಭೋಜನ ವಿರಾಮಕ್ಕಾಗಿ ಮಧ್ಯಾಹ್ನ 1 ಗಂಟೆ 54 ನಿಮಿಷಕ್ಕೆ ಮುಂದೂಡಲಾಯಿತು)**

(386)12-12-2018(3-20)ಎಸ್‌ವಿ -ಆರ್‌ವಿಎನ್

**(ಸಭಾಪತಿಯವರ ಉಪಸ್ಥಿತಿ)**

**(ಭೋಜನ ವಿರಾಮದ ನಂತರ ಸದನವು ಪುನಃ ಮಧ್ಯಾಹ್ನ 03 ಗಂಟೆ 24 ನಿಮಿಷಗಳಿಗೆ ಸಮಾವೇಶಗೊಂಡಿತು. ಮಾನ್ಯ ಸಭಾಪತಿಯವರು ಪೀಠವನ್ನು ಅಲಂಕರಿಸಿದ್ದರು.)**

**3. ಪ್ರಶ್ನೋತ್ತರಗಳು**

**ಅ) ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಮೌಖಿಕವಾಗಿ ನೀಡಲಾದ ಉತ್ತರಗಳು**

**ಪ್ರಶ್ನೆ ಸಂಖ್ಯೆ : 447(ಉತ್ತರವನ್ನು ಲಗತ್ತಿಸಲಾಗಿದೆ)**

**ಶ್ರೀ ಐವನ್ ಡಿ'ಸೋಜಾ:-** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಪ್ರಶ್ನೆಗೆ ಉತ್ತರವನ್ನು ನೀಡಿದ್ದಾರೆ. ಮಾನ್ಯ ಸಚಿವರು ಇತ್ತೀಚೆಗೆ ಮಂಗಳೂರು ಜಿಲ್ಲೆಗೆ ಭೇಟಿ ಕೊಟ್ಟು ಎಂ.ಆರ್.ಪಿ.ಎಲ್. ವಿಸ್ತರಣೆಯ ಸಂದರ್ಭದಲ್ಲಿ ಭೂಮಿಯನ್ನು ಕಳೆದುಕೊಳ್ಳುವ ಆ ಭಾಗದ ಸಂತ್ರಸ್ತರ ಮನವಿಯನ್ನು ಕೂಡ ಸ್ವೀಕರಿಸಿದ್ದಾರೆ. ಅಧಿಕಾರಿಗಳ ಜೊತೆಯಲ್ಲಿ ಚರ್ಚಿಸಿ ಅವರಿಗೆ ಸರಿಯಾದಂತಹ ಪರಿಹಾರವನ್ನು ಕೊಡಿಸುತ್ತೇನೆಂದು ಭರವಸೆಯನ್ನು ನೀಡಿದ್ದಾರೆ. ಎಂ.ಆರ್.ಪಿ.ಎಲ್. ನಾಲ್ಕನೇ ಹಂತದ ವಿಸ್ತರಣೆಗಾಗಿ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಕೆ.ಐ.ಎ.ಡಿ.ಬಿ. ವತಿಯಿಂದ 1,050 ಎಕರೆ ಭೂಮಿಯನ್ನು ವಶಪಡಿಸಿಕೊಳ್ಳಲಾಗುತ್ತದೆ. 688 ಎಕರೆ ಖಾಸಗಿ ಭೂಮಿಯಾಗಿದ್ದು, ಉಳಿದದ್ದು ಸರ್ಕಾರಿ ಭೂಮಿಯಾಗಿದೆ. 688 ಎಕರೆ ಭೂಮಿಯಲ್ಲಿ ಸುಮಾರು ಶೇ.75ರಷ್ಟು ಜನರು ನಾವು ಭೂಮಿಯನ್ನು ಕೊಡುತ್ತೇವೆಂದು volunteer ಆಗಿ ಒಪ್ಪಿಕೊಂಡಿದ್ದಾರೆ. ಆದರೆ 2013 ರ Rehabilitation & Resettlement Act ನ ಸೆಕ್ಷನ್ 26ರ ಪ್ರಕಾರ compensation ಕೊಡಬೇಕೆಂಬ ಬೇಡಿಕೆಯನ್ನು ಇಟ್ಟಿದ್ದಾರೆ. ನಾನು ಕೇಳಿದ ಎರಡನೆಯ ಪ್ರಶ್ನೆ ಏನೆಂದರೆ, ಸ್ವಾಧೀನ ಪಡಿಸಿಕೊಳ್ಳಲು ಉದ್ದೇಶಿಸಿರುವ ಭೂಮಿಗೆ ಯಾವ ನಿಯಮದಂತೆ ಪರಿಹಾರ ಧನ ನೀಡಲಾಗುತ್ತದೆ; 2013ರ ಒಪ್ಪಂದದ ಪ್ರಕಾರ ಎಕರೆ ಒಂದಕ್ಕೆ ನೀಡಲಾದ ಕನಿಷ್ಠ ಪರಿಹಾರವೆಷ್ಟು? ಅದಕ್ಕೆ ಉತ್ತರವನ್ನು ಜಾಣ್ಮೆಯಿಂದ ಕೊಟ್ಟಿರುವುದನ್ನು ನೋಡಿದರೆ ಐ.ಎ.ಎಸ್. ಅಧಿಕಾರಿಗಳು ಎಷ್ಟು ಪಳಗಿಕೊಂಡಿದ್ದಾರೆಂದು ತಿಳಿಯುತ್ತದೆ. ಸ್ವಾಧೀನ ಪಡಿಸಿಕೊಂಡ ಜಮೀನುಗಳಿಗೆ ಸಂಬಂಧಪಟ್ಟ ಜಿಲ್ಲೆಯ ಜಿಲ್ಲಾಧಿಕಾರಿಯವರ ಅಧ್ಯಕ್ಷತೆಯಲ್ಲಿ ಭೂ ದರ ನಿರ್ಧಾರಣಾ ಸಲಹಾ ಸಮಿತಿಯ ಸಭೆಯನ್ನು ನಡೆಸಿ, ಭೂ ಮಾಲೀಕರೊಂದಿಗೆ ಚರ್ಚಿಸಿ ಹಾಗೂ 2013ರ ಹೊಸ ಭೂ ಸ್ವಾಧೀನ ಕಾಯ್ದೆಯನ್ನು ಗಮನದಲ್ಲಿಟ್ಟುಕೊಂಡು ಒಪ್ಪಂದದಂತೆ ದರವನ್ನು ನಿಗದಿ ಪಡಿಸಲಾಗುತ್ತದೆ. There is no other Act prevailing in the State of Karnataka. ಈ ಹಿಂದೆ 2013 ರ ಕಾಯ್ದೆ ಜಾರಿಗೆ ಬಂದ ಮೇಲೆ ರಾಜ್ಯ ಸರ್ಕಾರದಿಂದ ದಿ:05.03.2014ಕ್ಕೆ ಒಂದು ಸುತ್ತೋಲೆಯನ್ನು ಹೊರಡಿಸಲಾಗಿದೆ. ಅದರಲ್ಲಿ ಈ ರೀತಿ ಹೇಳಲಾಗಿದೆ; The Right to Fair Compensation and Transparency in Land Acquisition Rehabilitation and Resettlement Act, 2013. ಇದರನ್ವಯ ದಿ:01.01.2014ರಿಂದ ಸಾರ್ವಜನಿಕ ಹಾಗೂ ಇತರ ಎಲ್ಲಾ ಭೂ ಸ್ವಾಧೀನ ಪ್ರಕ್ರಿಯೆಗಳಿಗೆ ಹೊಸ ಕಾಯ್ದೆಯನ್ನು ಅನುಸರಿಸಬೇಕಾಗುತ್ತದೆ. ಹೊಸ ಕಾಯ್ದೆಯು ಜಾರಿಗೆ ಬಂದಿರುವುದರಿಂದ ಈ ಹಿಂದಿನ ಭೂ ಸ್ವಾಧೀನ ಕಾಯ್ದೆ 1894 ನಿರಶನಗೊಂಡಿರುತ್ತದೆಯೆಂದು ಹೇಳಲಾಗಿದೆ. ಹಿಂದಿನ ಕಾಯ್ದೆ ಯಾವಾಗ repeal ಆಗಿ ಹೊಸ ಕಾಯ್ದೆ ಬಂದ ನಂತರ ಗಮನದಲ್ಲಿಟ್ಟುಕೊಂಡು ಮಾಡುತ್ತೇನೆಂಬುದು ನನಗೆ ಸರಿ ಕಾಣಲಿಲ್ಲ. ಅದಕ್ಕಾಗಿ 2013ರ ಕಾಯ್ದೆಯ ಪ್ರಕಾರ compensation ಅನ್ನು ಕೊಡಬೇಕೆಂದು ಮಾನ್ಯ ಸಚಿವರಲ್ಲಿ ವಿನಂತಿಸುತ್ತೇನೆ. ಅಲ್ಲಿರುವಂತಹ market value ಅಥವಾ registration guidence value ಅನ್ನು ನೋಡಿ ಕೊಡಬೇಕು ಅಥವಾ agreement ಮಾಡಿದ ದರದಲ್ಲಿ ಯಾವುದು ಹೆಚ್ಚು, ಅದನ್ನು ತೆಗೆದುಕೊಳ್ಳಬೇಕೆಂದು 2013ರ ಕಾಯ್ದೆ ಹೇಳುತ್ತದೆ. ಭೂಮಿಯನ್ನು ಬಿಟ್ಟುಕೊಡುವುದಕ್ಕೆ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಸಿದ್ಧರಿದ್ದರೂ ಸಹ ಬಿಟ್ಟುಕೊಡಲಿಲ್ಲ ಎಂದು ಹೇಳುವುದು ಸರಿಯಲ್ಲ. 2013ರ ಕಾಯ್ದೆಯಂತೆ ಪೆರ್ಮುದೆಯಲ್ಲಿ ಒಂದು ಎಕರೆಗೆ ರೂ.1,26,57,560/-. ಕುತ್ತೆತ್ತೂರಿನಲ್ಲಿ ರೂ.91,65,085/-. ತೆಂಕ ಎಕ್ಕಾರು ಗ್ರಾಮದಲ್ಲಿ ರೂ.1,26,67,500/- compensation ಅನ್ನು ಕೊಡಬಹುದು ಎಂದು ಕೆಐಎಡಿಬಿ ಅವರು ಜಿಲ್ಲಾಧಿಕಾರಿಯವರಿಗೆ ಶಿಫಾರಸ್ಸು ಮಾಡಿದ್ದಾರೆ.

**(...ಮುಂದು)**

(387) 12.12.2018 (3.30) ಕೆಜಿ.ವಿಕೆ

**ಶ್ರೀ ಐವನ್ ಡಿ'ಸೋಜಾ (ಮುಂದು,,,,)-**

ಕೆ.ಐ.ಡಿ.ಬಿ.,ಯವರು ಪರಿಹಾರವನ್ನು ಕೊಡಬಹುದೆಂದು ಜಿಲ್ಲಾಧಿಕಾರಿಯವರಿಗೆ ಶಿಫಾರಸ್ಸು ಮಾಡಿದ್ದಾರೆ. ಅದನ್ನು ಜಿಲ್ಲಾಧಿಕಾರಿಯವರು ಒಪ್ಪಿಕೊಳ್ಳುವುದಕ್ಕೆ ತಯಾರು ಇದ್ದಾರೆ. ಹಾಗಾಗಿ, ನನ್ನ ವಿನಂತಿ ಇದೆ. Extension ಮಾಡಿ. ಅಭಿವೃದ್ಧಿಯಾಗಬೇಕು, ಭೂಮಿಯನ್ನು ಕಳೆದು ಕೊಂಡವರಿಗೆ ಕೆಲಸ ಕೊಡಬೇಕಾಗಿದೆ, ಇದೆಲ್ಲಾ ಸಮಸ್ಯೆ ಇದೆ. ಆದರೆ, ಜಾಗ ಕೊಟ್ಟತಂತಹ ರೈತರಿಗೆ ಸರಿಯಾದ ಪರಿಹಾರವನ್ನು ಕೊಡುವುದರಲ್ಲಿ ಯಾವ ಕಾರಣಕ್ಕೂ ಹಿಂದೇಟು ಹಾಕಬಾರದು ಎಂದು ಮಾನ್ಯ ಸಚಿವರಲ್ಲಿ ನನ್ನ ಮನವಿ ಮಾಡುತ್ತಿದ್ದೇನೆ. ಕೆ.ಐ.ಡಿ.ಬಿ.,ಯವರು ಸಹ ಇಷ್ಟು ಮೊತ್ತವನ್ನು ಕೊಡಬಹುದೆಂದು ಶಿಫಾರಸ್ಸು ಮಾಡಿದ್ದಾರೆ. They have come forward to give their lands. ಕೆಐಡಿಬಿಯವರು ಭೂಮಿಯನ್ನು ಬಿಟ್ಟುಕೊಡುತ್ತೇವೆಂದು ಹೇಳಿದ್ದಾರೆ. ಹಾಗಾಗಿ, ಅದನ್ನು ಕೊಡುವಂಥದ್ದು ಒಂದು ಭಾಗವಾದರೆ, ಎರಡನೆಯದಾಗಿ, ರಾಜ್ಯದಲ್ಲಿ ವಿಸ್ತರಿಸುವ ಕೈಗಾರಿಕೆಗಳಿಗೆ ಭೂಮಿಯನ್ನು ಸ್ವಾಧೀನ ಪಡಿಸಿಕೊಂಡ ಸಂದರ್ಭದಲ್ಲಿ ನೀಡಬೇಕಾದ ಉದ್ಯೋಗ ಮತ್ತು ಇತರೆ ಪ್ಯಾಕೇಜ್‌ಗಳನ್ನು ನೀಡದೇ ಇರುವ ಬಗ್ಗೆ ಕೇಳಿದ್ದೇನೆ. ಅದಕ್ಕೆ ಮಾನ್ಯ ಸಚಿವರು ಬಹಳ ಜನರಿಗೆ ಕೆಲಸವನ್ನು ಕೊಟ್ಟಿದ್ದೇವೆಚಿದು ಹೇಳಿದ್ದಾರೆ. ಅವರ ಪ್ರಕಾರ, 1868 employees are working in Messrs Mangalore Refinery and Petrochemicals Limited and out of which 1304 employees are kannadigas ಎಂದು ಹೇಳಿದ್ದಾರೆ. 1800 ಜನರಲ್ಲಿ 1300 ಜನ ಕನ್ನಡಿಗರು ಉದ್ಯೋಗಿಗಳಾಗಿದ್ದಾರೆಂದರೆ, ಅದು ಕನ್ನಡಮಯಾವಾಗಿ ಬಿಡುತ್ತದೆ. ಅಲ್ಲಿ ಒಬ್ಬರೇ ಒಬ್ಬರು ಕನ್ನಡ ಮಾತನಾಡುವವರು ಸಿಕ್ಕರೆ ಅವರಿಗೆ ನಾನು ಮೆಡಲ್ ಕೊಡುತ್ತೇನೆ. ಅಲ್ಲಿ ತೆಲಗು, ತಮಿಳು ಮತ್ತು ಹಿಂದಿ ಮಾತನಾಡುವವರನ್ನು ಬಿಟ್ಟರೆ ಒಬ್ಬರೇ ಒಬ್ಬರು ಕನ್ನಡಿಗರು ಸಿಗುವುದಿಲ್ಲ.

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಆದರೆ, ಉತ್ತರದಲ್ಲಿ ಮಾತ್ರ ತಪ್ಪು ಮಾಹಿತಿಯನ್ನು ಕೊಟ್ಟಿದ್ದಾರೆ. ಇದರ ಬಗ್ಗೆ ಮಾನ್ಯ ಸಚಿವರು ಮತ್ತೊಮ್ಮೆ ಗಮನವನ್ನು ಹರಿಸಬೇಕೆಂದು ಮನವಿ ಮಾಡುತ್ತೇನೆ.

ಮಾನ್ಯ ಸಭಾಪತಿಯವರೇ, ಇನ್ನೊಂದು ವಿಷಯವೆಂದರೆ, ಕೈಗಾರಿಕೆಗಳಿಗೆ ಅಗತ್ಯಕ್ಕಿಂತ ಹೆಚ್ಚು ಭೂಮಿಯನ್ನು ಸ್ವಾಧೀನ ಪಡಿಸಿಕೊಂಡು ಅದನ್ನು ಬೇರೆಯವರಿಗೆ ಮಾರಾಟ ಮಾಡುತ್ತಾರೆಂದು ನಾನು ಕೇಳಿದ್ದೇನೆ. ಅದಕ್ಕೆ ಮಾನ್ಯ ಸಚಿವರು ಮುಖ್ಯ ಕಾರ್ಯದರ್ಶಿಯವರ ನೇತೃತ್ವದಲ್ಲಿ Monitoring Committee ಇದೆ ಎಂದು ಹೇಳಿದ್ದಾರೆ. ನಾನು ತೆಗೆದುಕೊಂಡಿರುವಂತಹ ಮಾಹಿತಿಯ ಪ್ರಕಾರ, In the year 1994, the MRPL has sold the land to the Hindustan Petroleum Corporation Limited with huge profit. 400 ಎಕರೆ ಜಾಗವನ್ನು ಮೆ.ಎಂಆರ್‌ಪಿಎಲ್ ವಶಪಡಿಸಿಕೊಂಡಿದ್ದು ಕಡಿಮೆ ಬೆಲೆಯಲ್ಲಿ. ಆ 400 ಎಕರೆ ಜಾಗವನ್ನು Huge profit ಗೆ Hindustan Petroleum Corporation Limited ಗೆ ಮಾರಾಟ ಮಾಡಿದ್ದಾರೆ. ಇವರಿಗೆ ರಿಯಲ್ ಎಸ್ಟೇಟ್ ಮಾಡುವುದಕ್ಕೆ ನನ್ನ ತಕರಾರು ಇದೆ. ಕಷ್ಟದಲ್ಲಿಂತಹ ರೈತರು ಭೂಮಿಯನ್ನು ಕೊಡುವುದಕ್ಕೆ ತಯಾರು ಇರುತ್ತಾರೆ. ಒಂದು ಸಾವಿರ ಎಕರೆ ಭೂಮಿ ಬೇಕಾದರೆ, ಎರಡು ಸಾವಿರ ಎಕರೆ ಭೂಮಿಯನ್ನು ಸ್ವಾಧೀನ ಪಡಿಸಿಕೊಂಡಿರುತ್ತಾರೆ. ಮತ್ತೇ ಆ ಭೂಮಿಯನ್ನು ಯಾರಿಗಾದರೂ ರಿಯಲ್ ಎಸ್ಟೇಟ್ ಮಾಡಿಕೊಡುವುದಾದರೆ, huge profit ಮಾಡುವುದಾಗಿದ್ದರೆ, this is objectionable. ಮಾನ್ಯ ಸಚಿವರು ಬಂದು ಎಲ್ಲರನ್ನು ಭೇಟಿ ಮಾಡಿದ್ದು ನನಗೆ ಸಂತೋಷ ಇದೆ. ಮಾನ್ಯ ಸಚಿವರು portfolio ಅನ್ನು ತೆಗೆದುಕೊಂಡ ಮೇಲೆ he has visited the entire State. ಹಾಗಾಗಿ, ಈ ವಿಚಾರಗಳನ್ನು ಮಾನ್ಯ ಸಚಿವರ ಗಮನಕ್ಕೆ ತಂದು 2013ರ ಪ್ರಕಾರ ಭೂಸ್ವಾಧೀನ ಮಾಡುವಾಗ ಅವರಿಗೆ ಪರಿಹಾರವನ್ನು ಕೊಡಬೇಕಾಗುತ್ತದೆ. ಹೆಚ್ಚಿಗೆ ಭೂ-ಸ್ವಾದೀನ ಮಾಡಿಕೊಳ್ಳುವುದಕ್ಕೆ ಬಿಡಬೇಡಿ. ಕನ್ನಡಿಗರಿಗೆ ಉದ್ಯೋಗ ಕೊಡಿಸಿ. ಅವರಿಗೆ etiquette compensation ಕೊಟ್ಟು ಅವರನ್ನು ಸಂತೋಷವಾಗಿ ಇಡಿ. ಕೈಗಾರಿಕೆಗಳು ಎಷ್ಟು ಬೇಕಾದರೂ ಅಭಿವೃದ್ಧಿಯಾಗಲಿ ಅದಕ್ಕೆ ನಮ್ಮ ಸಹಾಕರ ಇದೆ ಎಂದು ನಾನು ಹೇಳುವುದಕ್ಕೆ ಬಯಸುತ್ತೇನೆ.

**ಶ್ರೀ ಕೆ.ಜೆ.ಜಾರ್ಜ್, ಬೃಹತ್ ಮತ್ತು ಮಾದ್ಯಮ ಕೈಗಾರಿಕಾ ಸಕ್ಕರೆ ಹಾಗೂ ಐ.ಟಿ ಮತ್ತು ಬಿ.ಟಿ ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವರು):-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಕೆಲವೊಂದು ವಿಚಾರಗಳನ್ನು raise ಮಾಡಿದ್ದಾರೆ. ಮೊದಲನೆಯದಾಗಿ, Mangalore Refinery and

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

Petrochemicals Limited and Hindustan Petroleum Corporation Limited ಎರಡೂ ಸಹ ಕೇಂದ್ರೀಯ ಸಂಸ್ಥೆಗಳು. ಖಾಸಗಿಯವರು ರಿಯಲ್ ಎಸ್ಟೇಟ್ ಮಾಡಿದ್ದಾರೆಂದು ನನಗೆ ಗೊತ್ತಿಲ್ಲ. ONGC (Oil and Natural Gas Corporation) ಆ ತರಹ ಇಲ್ಲ. 2015ನೇ ಸಾಲಿನಲ್ಲಿ ಈ ವಿಚಾರದಲ್ಲಿ 1050 ಎಕರೆ ಜಮೀನು ಬೇಕೆಂದು KIADB ಗೆ ನಮ್ಮ State Level Committee ಯಿಂದ ತೀರ್ಮಾನ ಮಾಡಿ ಅದರ ಬಗ್ಗೆ Notification ಮಾಡಿದರು. ಎರಡು Notification ಪ್ರಕಾರ, ಮೊದಲಿಗೆ 150 ಎಕರೆ ಮತ್ತು 800 ಎಕರೆ ಚಿಲ್ಲರೆ ಎರಡು final Notification ಆಗಿವೆ. ಅದಕ್ಕೆ ದರ ನಿಗದಿ ಮಾಡಬೇಕಾಗಿರುವುದು ಮಾನ್ಯ ಜಿಲ್ಲಾಧಿಕಾರಿಯವರ ಅಧ್ಯಕ್ಷತೆಯಲ್ಲಿ ಒಂದು ಸಮಿತಿ ಇದೆ. 1966 ರ KIADB ಯ ಕಾಯಿದೆ ಪ್ರಕಾರ ಅದಕ್ಕೆ Notification ಮಾಡಲಾಗಿದೆ. ಆದಾದ ಮೇಲೆ 2013 ರಲ್ಲಿ ಬಂದಿದೆ. 2013 ರ ಪ್ರಕಾರವು ನಾವು ಈಗ ತೆಗೆದುಕೊಳ್ಳುವುದು. 1966 ಸಮೇತ ತೆಗೆದುಕೊಂಡರೂ ನಾವು ಮಾನ್ಯ ಸದಸ್ಯರು ಹೇಳಿದಂತೆ, ಮಾಡಬೇಕಾಗುತ್ತದೆ. ಏಕೆಂದರೆ, consent acquisition ಆಗಬೇಕಾಗಿದೆ. ಮತ್ತೇ ಅದರಲ್ಲಿ ಏನು ಮಾಡುತ್ತಾರೆಂದರೆ, ಐದು ವರ್ಷದ್ದು ನೋಂದಣಿ ಆಗಿದೆ ಅದನ್ನು ಅವರೇ ತೆಗೆದುಕೊಳ್ಳುತ್ತಾರೆ ಅಥವಾ guidance value ತೆಗೆದುಕೊಳ್ಳುತ್ತಾರೆ. ಯಾವುದು ಹೆಚ್ಚಿಗೆ ಬರುತ್ತದೆ ಅದನ್ನು ಕೊಡುವಂತೆ ಮಾಡುತ್ತಾರೆ. ಇದು ಮುನ್ಸಿಪಾಲಿಟಿ ಒಳಗಡೆ ಇದ್ದರೆ 1+1 ಕೊಡುತ್ತವೆ. ಹೊರಗಡೆ ಇದ್ದರೆ ಅದಕ್ಕೆ two times ಕೊಡುತ್ತೇವೆ. ಅದಕ್ಕೂ ಹೊರಗಡೆ ಬಂದರೆ three times ಬರುತ್ತದೆ. ಇನ್ನೊಂದು four times ಬರುತ್ತದೆ. ಮೊದಲು 1+1, ಆದಾದ ಮೇಲೆ 2+1, ಆದಾದ ಮೇಲೆ 3+1 ಆ ತರಹ ನಮ್ಮ ಭೂಸ್ವಾಧೀನ ಕಾಯಿದೆ ಇದೆ. ಅದರ ಪ್ರಕಾರ, consent acquisition ಮಾಡಬೇಕಾಗಿದೆ. Final Notification ಆಗಿದ್ದು ಜಿಲ್ಲಾಧಿಕಾರಿಯವರು ಆ ಕೆಲಸವನ್ನು ಮಾಡುತ್ತಿದ್ದಾರೆ. ನಾನು ತಾವು ಹೇಳಿದಂತೆ, ಎಷ್ಟು ಕೋಟಿ ರೂಪಾಯಿಗಳು ಎಂದು ಇಲ್ಲಿ ಹೇಳುವುದಕ್ಕೆ ಆಗುವುದಿಲ್ಲ. ಜಿಲ್ಲಾಧಿಕಾರಿಯವರು ಅವರ ಮಟ್ಟದಲ್ಲಿ ಎಲ್ಲಾ ವಿವರಗಳನ್ನು ತರಿಸಿ ಕೊಡುವುದಕ್ಕೆ ಹೇಳುತ್ತೇನೆ. ಅವತ್ತು ಮೆ.ಎಂಆರ್‌ಪಿಎಲ್ ಗೆ ಹೋದಾಗ ಮಾನ್ಯ ಸದಸ್ಯರು ಇದ್ದರು. ಅವತ್ತು ಮೆ.ಎಂಆರ್‌ಪಿಎಲ್‌ರವರು ಸಹ ರೈತರಿಗೆ ಸರಿಯಾದ ಬೆಲೆ ನಿಗಧಿ ಮಾಡಿ ಕೊಡುತ್ತೇವೆಂದು ಒಪ್ಪಿಕೊಂಡಿದ್ದಾರೆ. ಅದರ ಪ್ರಕಾರ, ಅದು ಆಗುತ್ತದೆ.

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರ ಇನ್ನೊಂದು ಪ್ರಶ್ನೆಗೆ ಕರ್ನಾಟದವರಿಗೆ 70% ಉದ್ಯೋಗ ಕೊಟ್ಟಿದ್ದೇವೆ ಹೇಳಿದ್ದಾರೆ. ಅದನ್ನು ಬೇಕಾದರೆ ಜಿಲ್ಲಾಧಿಕಾರಿಯವರ ಕಡೆಯಿಂದ ಇನ್ನೊಂದು ಬಾರಿ ನಿಜವಾದ ಕನ್ನಡಿಗೆ ಕೊಟ್ಟಿದ್ದಾರೆಯೇ ಅಥವಾ ದಾಖಲೆಗಳಲ್ಲಿ ಈ ರೀತಿ ಕೊಟ್ಟಿದ್ದಾರೆಯೇ ಎಂಬುದನ್ನು ಪರಿಶೀಲನೆ ಮಾಡಿಸುತ್ತೇನೆ. ನನಗೂ ಸಮೇತ ಮಾನ್ಯ ಸದಸ್ಯರು ಅವತ್ತು ಇದ್ದರು. ನನಗೆ ಅವರು ಎಲ್ಲವನ್ನು ಕನ್ನಡಿಗೆ ಕೊಟ್ಟಿದ್ದೇವೆಂದು ಹೇಳಿದರು. ಹಾಗಾಗಿ ಇದನ್ನು ಮಾಡಬಹುದು.

ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರ ಇನ್ನೊಂದು ಪ್ರಶ್ನೆಗೆ ನಮ್ಮ ಪ್ರಧಾನ ಕಾರ್ಯದರ್ಶಿಯವರ ಕೆಳಗಡೆ Land Audit Committee ಇದೆ. ಆ ಕಮಿಟಿಗೆ proposal ಹೋಗುತ್ತದೆ. ಆ ರೀತಿ ಹೋದ ಮೇಲೆ ಎಷ್ಟು ಲ್ಯಾಂಡ್ ಬೇಕೆಂದು ವಿಚಾರವಾಗಿ Land Audit Committee ಯಲ್ಲಿ ತೀರ್ಮಾನ ಆಗುತ್ತದೆ. ತೀರ್ಮಾನವಾದರೂ ಸಹ, ಯಾವುದೇ ಲ್ಯಾಂಡ್ ಕೊಟ್ಟರು ಸಹ, ನಮ್ಮ ಒಪ್ಪಿಗೆ ಇಲ್ಲದೇ ಬೇರೆಯವರಿಗೆ ಮಾರಾಟ ಮಾಡುವುದಕ್ಕೆ ಆಗುವುದಿಲ್ಲ. ನಮ್ಮ ಸರ್ಕಾರದ ಮಟ್ಟಕ್ಕೆ ಅಥವಾ KIADB ಮಟ್ಟಕ್ಕೆ ಹಾಗೂ single window ಗೆ ಬಂದರೆ ಮಾತ್ರ, ನಾವು ಅನುಮತಿ ಕೊಟ್ಟರೆ ಮಾತ್ರ ಅದು ಬೇರೆಯವರಿಗೆ ಕೊಡುವುದಕ್ಕೆ ಆಗುತ್ತದೆ. ಬಹುಶಃ ಮೊದಲು ಇದ್ದ ಸರ್ಕಾರ ಅಥವಾ ಈ ಮೊದಲು ಇದ್ದ ಸಚಿವರು ಅದಕ್ಕೆ ಒಪ್ಪಿಗೆ ಕೊಟ್ಟಿರಬಹುದು. ತಾವು ಹೇಳಿದಂತೆ, Hindustan Petroleum Corporation Limited ಕೂಡ ನಮ್ಮ ಕೇಂದ ಸರ್ಕಾರದ ಕೆಳಗೆ ಬರುತ್ತದೆ. ಆ ರೀತಿ ಇದ್ದರೆ ಪರಿಶೀಲನೆ ಮಾಡುತ್ತೇನೆ. ಆದರೆ ಈ ಸಂದರ್ಭದಲ್ಲಿ ಒಂದು ಮಾತನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ. ನಮ್ಮ ಸರ್ಕಾರ ಸರಿಯಾದ ರೀತಿಯಲ್ಲಿ ಒಂದು ಪರಿಹಾರವನ್ನು ಕೊಡುವಂತಹ ಕೆಲಸಗಳನ್ನು ಮಾಡುತ್ತದೆ. ಅದನ್ನು ಜಿಲ್ಲಾಧಿಕಾರಿಯವರಿಗೆ ಹೇಳುತ್ತೇವೆ.

ಪ್ರಶ್ನೆ ಸಂಖ್ಯೆ 28

(ಉತ್ತರವನ್ನು ಒದಗಿಸಲಾಗಿದೆ)

**ಶ್ರೀ ಎಂ.ಕೆ.ಪ್ರಾಣೇಶ್:-** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಉತ್ತರವನ್ನು ಕೊಟ್ಟಿದ್ದಾರೆ. ನಾನು ಫಾರಂ-50 ಹಾಗೂ ಫಾರಂ-53 ರಲ್ಲಿ ಚಿಕ್ಕಮಗಳೂರು ಜಿಲ್ಲೆಯಲ್ಲಿ ಸಲ್ಲಿಕೆಯಾಗಿದ್ದ ಅರ್ಜಿಗಳು ಎಷ್ಟು ಮತ್ತು ಸಂಖ್ಯೆಗಳು ಎಷ್ಟೆಂದು ತಾಲ್ಲೂಕುವಾರು ವಿವರ ಕೊಡಬೇಕೆಂದು ಕೇಳಿದ್ದೆ. ಅದನ್ನು ಅನುಬಂಧ-1 ಮತ್ತು 2 ರಲ್ಲಿ ನೀಡಿದ್ದಾರೆ. ಆ ರೀತಿ ಕೊಟ್ಟಿರುವಂತಹ ಸಂದರ್ಭದಲ್ಲಿ ಫಾರಂ-50 ರಲ್ಲಿ ಒಟ್ಟು ಸಲ್ಲಿಕೆಯಾಗಿರುವಂತಹ ಅರ್ಜಿಗಳು 65,087, ಹಾಗೆಯೇ ಫಾರಂ-53 ರೊಳಗಡೆ 77,178. ಆದರೆ, ಇದರಲ್ಲಿ ಸಾಕಷ್ಟು ಅರ್ಜಿಗಳು reject ಆಗಿವೆ. 65,087 ಅರ್ಜಿಗಳಲ್ಲಿ ಒಟ್ಟು 51,117

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಅರ್ಜಿಗಳನ್ನು ವಜಾ ಮಾಡಲಾಗಿದೆ. 77,178 ಅರ್ಜಿಗಳಲ್ಲಿ ಒಟ್ಟು 52,384 ಅರ್ಜಿಗಳನ್ನು ವಜಾ ಮಾಡಿದ್ದಾರೆ. ಆದರೆ, ಯಾವ ಕಾರಣಕ್ಕೆ ಈ ಅರ್ಜಿಗಳನ್ನು ವಜಾ ಮಾಡಿದ್ದಾರೆ ಎನ್ನುವುದನ್ನು ಉಲ್ಲೇಖ ಮಾಡಿರುವುದಿಲ್ಲ. ಏಕೆಂದರೆ, ಸಾಕಷ್ಟು ಸಂಕಷ್ಟದಲ್ಲಿ ಬಡವರು ಸಾಗುವಳಿಯನ್ನು ಮಾಡುತ್ತಿರುವುದು. ಇದನ್ನು ಸಕ್ರಮಗೊಳಿಸಲು ತಹಶೀಲ್ದಾರರ ಮುಖಾಂತರ ಮಾಡುವಂತಹ ಪ್ರಯತ್ನ ಮಾಡಲಾಗುತ್ತಿದೆ. ಮತ್ತೆ ಅಲ್ಲಿ ಒಂದು ಕಮಿಟಿಯನ್ನು ಮಾಡಿರುತ್ತದೆ. ಅದರ ಮುಖಾಂತರ ಇತ್ಯರ್ಥ ಮಾಡಿಕೊಳ್ಳಬೇಕು ಎನ್ನುವಂಥದ್ದು ಇದೆ. ಆದರೆ, ತಮಗೆ ಗೊತ್ತಿದೆ ತಾವು ಹಿರಿಯರು ಇದ್ದೀರಿ, ನಾವು ತಮ್ಮಿಂದ ಕಲಿಯುವಂಥದ್ದು ಇನ್ನು ಬೇಕಾದಷ್ಟು ಇದೆ. ಆದರೂ ಸಹ, ನನ್ನ ಪ್ರಶ್ನೆ ಏನೆಂದರೆ, ತಾವು ಕೊಟ್ಟಿರುವಂತಹ ಕಮಿಟಿಯ ಒಳಗಡೆ ಇಷ್ಟೊಂದು ದೊಡ್ಡ ಸಂಖ್ಯೆಯಲ್ಲಿ ಯಾವ ಕಾರಣಕ್ಕಾಗಿ reject ಮಾಡಲಾಗಿದೆ ಎನ್ನುವ ಕಾರಣವನ್ನು ಕೊಟ್ಟಿಲ್ಲ. ಮೊದಲು ಅದನ್ನು ಹೇಳಿದರೆ ಉಳಿದ ಉಪ ಪ್ರಶ್ನೆಯನ್ನು ಕೇಳುತ್ತೇನೆ.

**ಶ್ರೀ ಆರ್.ವಿ.ದೇಶಪಾಂಡೆ:-** ಮಾನ್ಯ ಸಭಾಪತಿಯವರೇ, ಮೊದಲನೆಯದಾಗಿ ತಾವು ಸಭಾಪತಿಯಾದ ಮೇಲೆ ಪ್ರಶ್ನೆಗೆ ಪ್ರಥಮವಾಗಿ ಉತ್ತರವನ್ನು ಕೊಡುತ್ತಿದ್ದೇನೆ. ತಮಗೆ ಅಭಿನಂದನೆಗಳು. ನಮಗೆ ಎಷ್ಟು ಅರ್ಜಿಗಳು ಬಂದಿವೆ ಮತ್ತು ಅದರಲ್ಲಿ ಎಷ್ಟು ಅರ್ಜಿಗಳು ರಿಜೆಕ್ಟ್ ಆಗಿವೆ ಎನ್ನುವ ಬಗ್ಗೆ ಮಾಹಿತಿಯನ್ನು ಒದಗಿಸಿದ್ದೇನೆ. 94 (ಎ) ಫಾರಂ-50 ಮತ್ತು 94 (ಬಿ) ಫಾರಂ-53. ಎರಡೂ ಫಾರಂಗಳಿಗೆ ಸಂಬಂಧಪಟ್ಟಂತೆ ಮಾನ್ಯ ಸದಸ್ಯರ ಪ್ರಶ್ನೆ ಇದೆ. 1990 ನೇ ಸಾಲಿನಲ್ಲಿ 94 (ಎ) ತಿದ್ದುಪಡಿ ಆಯಿತು. 1998ನೇ ಸಾಲಿನಲ್ಲಿ 94 (ಬಿ) ತಿದ್ದುಪಡಿ ಆಯಿತು. ಇದು ಕೇವಲ ಕಂದಾಯ ಭೂಮಿಗೆ ಮಾತ್ರ ಸೀಮಿತ ಇದೆ.

(388)12-12-2018(03-40)ಎಂವಿ-ವಿಕೆ

**(ಸಭಾಪತಿಯವರ ಉಪಸ್ಥಿತಿ)**

**ಶ್ರೀ ಆರ್.ವಿ.ದೇಶಪಾಂಡೆ (ಮುಂದು):-**

ಅರಣ್ಯ ಭೂಮಿಗಳನ್ನು ಮತ್ತು CRZ ಭೂಮಿಗಳನ್ನು ಕೊಡುವುದಕ್ಕೆ ಆಗುವುದಿಲ್ಲ. ಹಾಗಾಗಿ ತಾವು ಹೇಳುವುದು ನಿಜ. ಅದಕ್ಕೆ ಉತ್ತರ ಕೊಡಲಾಗಿದೆ. ಆದುದರಿಂದ ತಿರಸ್ಕೃತಗೊಂಡಿರುವ ಅರ್ಜಿಗಳ ಸಂಖ್ಯೆಯನ್ನು ಮಾನ್ಯ ಸದಸ್ಯರೆ ಹೇಳಿದ್ದಾರೆ, ಅವುಗಳು ನಿಜವಾದ ಸಂಖ್ಯೆಗಳು. ಅದು CRZ ಭೂಮಿ ಇರಬಹುದು ಅಥವಾ ಅರಣ್ಯ ಭೂಮಿ ಇರಬಹುದು. ಪ್ರತಿಯೊಂದು ಅರ್ಜಿಯೂ ಸಹ ಏಕೆ ತಿರಸ್ಕೃತಗೊಂಡಿದೆ ಎಂದರೆ, ಅವು ಆ ಸೆಕ್ಷನ್‌ನ ಅಧೀನದಲ್ಲಿ ಬರುವುದಿಲ್ಲ. ಏಕೆಂದರೆ, ಹಾಗಾಗಿ

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಕಾನೂನಿನ ಕಕ್ಷೆಯಲ್ಲಿ ಏನು ಅರ್ಜಿಗಳು ಬಂದಿವೆ ಅವುಗಳೆಲ್ಲಾ ಮಂಜೂರಾಗಿವೆ. ಒಂದು ವೇಳೆ ಇದರ ಬಗ್ಗೆ grievance ಇದ್ದರೆ, ಅವರು ಅದರ ಬಗ್ಗೆ ಅರ್ಜಿಯನ್ನು ಸಲ್ಲಿಸಬೇಕು. ಆ ತರಹ ಅದು ನನ್ನ ಗಮನಕ್ಕೆ ಬಂದಿಲ್ಲ. ಮಾನ್ಯ ಸದಸ್ಯರು ಈ ಪ್ರಶ್ನೆಯನ್ನು ಕೇಳಿಲ್ಲ. ನಮ್ಮ ಪ್ರಕಾರ Form No.50ರಲ್ಲಿ ಎಲ್ಲಾ ಅರ್ಜಿಗಳು ಸಹ ವಿಲೇವಾರಿಯಾಗಿವೆ. Form No.53ರಲ್ಲಿ 1091 ಅರ್ಜಿಗಳು ಬಾಕಿ ಇವೆ. ಆದುದರಿಂದ ಈ ಅರ್ಜಿಗಳನ್ನು ಆದಷ್ಟು ಬೇಗನೆ ವಿಲೇವಾರಿ ಮಾಡಬೇಕಾಗುತ್ತದೆ. ಆದರೆ, ಏನಾಗಿದೆ ಎಂದು ತಮಗೆ ಗೊತ್ತಿದೆ. ನಮ್ಮ ಜಿಲ್ಲೆ, ಮಾನ್ಯ ಸದಸ್ಯರ ಜಿಲ್ಲೆ, ಕೊಡಗು ಮತ್ತು ಶಿವಮೊಗ್ಗ ಜಿಲ್ಲೆಗಳಲ್ಲಿ ಕಂದಾಯ ಭೂಮಿಗಳ ಪಕ್ಕದಲ್ಲಿ ದಟ್ಟವಾದ ಅರಣ್ಯಗಳು ಸಹ ಇವೆ. Deemed Forest ಇರಬಹುದು, Virgin Forest ಇರಬಹುದು, ಅಲ್ಲಿ ಸರ್ವೇ ಕೆಲಸ ಪ್ರಾರಂಭವಾಗಿದೆ. ಸರ್ವೆ ಕಾರ್ಯ ಮುಗಿದ ತಕ್ಷಣ ಕಾನೂನು ರೀತಿ ಯಾರಿಗೆ ಅರ್ಹತೆ ಇದೆ, ಅವರೆಲ್ಲರಿಗೂ ಸಹ ನಿಗದಿತ ಸಮಯದಲ್ಲಿ ಮಂಜೂರು ಮಾಡುವಂತಹ ಕೆಲಸ ಮಾಡುತ್ತೇವೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ವಿರೋಧ ಪಕ್ಷದ ನಾಯಕರು):-** ಮಾನ್ಯ ಸಭಾಪತಿಯವರೇ, ಈಗ ಸುಮಾರು 77,000 ಅರ್ಜಿಗಳಲ್ಲಿ 51,000 ಅರ್ಜಿಗಳು ಅಂದರೆ ಹೆಚ್ಚು ಕಡಿಮೆ ಶೇಕಡಾ 75ರಷ್ಟು ಅರ್ಜಿಗಳು ತಿರಸ್ಕೃತಗೊಂಡಂತೆ ಆಗಿದೆ. ನಾವುಗಳೆಲ್ಲರೂ ಹೋರಾಟ ಮಾಡಿದಾಗ, ಅನೇಕ ಕಡೆಗಳಲ್ಲಿ Deemed Forest ಅನ್ನು ಕೈಬಿಡಬೇಕೆಂದು ಸರ್ಕಾರ ಒಂದು ಬಾರಿ ತೀರ್ಮಾನವನ್ನು ಮಾಡಿತ್ತು. ನೀವು Deemed Forest ಬಗ್ಗೆ ಇನ್ನು ತೀರ್ಮಾನವನ್ನು ಮಾಡಿಲ್ಲ. ಈಗ ನೀವು ಏನು ತೀರ್ಮಾನವನ್ನು ಮಾಡಿದ್ದೀರಿ ಅಂದರೆ, ಉಡುಪಿ ಜಿಲ್ಲೆಯಲ್ಲಿ 1.34 ಲಕ್ಷ ಹೆಕ್ಟೇರ್, ಮಂಗಳೂರು ಜಿಲ್ಲೆಯಲ್ಲಿ 30,000 ಹೆಕ್ಟೇರ್ ಮತ್ತು ಶಿವಮೊಗ್ಗ ಜಿಲ್ಲೆಯಲ್ಲಿ ಒಂದು ಲಕ್ಷ ಹೆಕ್ಟೇರ್ ಪ್ರದೇಶವನ್ನು ಯಾವುದು Deemed Forest ಇಲ್ಲದೇ ಇರುವಂತಹ ಪ್ರದೇಶವನ್ನು ಕೈಬಿಡಬಹುದು ಎಂದು ಹೇಳಿದ್ದೀರಿ. ಈ Deemed Forest ಗೆ ನಿಮ್ಮದೇ ಸರ್ಕಾರ ಒಂದು ಮಾನದಂಡವನ್ನು ಮಾಡಿ ಅದಕ್ಕೆ ಒಂದು ತಿದ್ದುಪಡಿಯನ್ನು ಮಾಡಿತ್ತು. ಒಂದು ಎಕರೆ ಪ್ರದೇಶದಲ್ಲಿ ಹದಿನೆಂಟು ಸೆಂಟಿಮೀಟರ್‌ಗಿಂತ ಹೆಚ್ಚು ದಪ್ಪವಲ್ಲದ ಮತ್ತು ಇಪ್ಪತ್ತು ಮರಗಳಿಗೆ ಕಡಿಮೆ ಇದ್ದರೆ ಅದನ್ನು Deemed Forest ರಹಿತಪಡಿಸಬಹುದು ಎಂದು. ನಮ್ಮ ಕಡೆಗಳಲ್ಲಿ ಕೆಲವು ಗ್ರಾಮಪಂಚಾಯಿತಿ ಕಟ್ಟಡಗಳು ಸಹ Deemed Forest ವ್ಯಾಪ್ತಿಗೆ ಬರುತ್ತವೆ. ಆ ಕಾರಣಕ್ಕೆ ಬಿಡಬೇಕು ಎಂದು ಮೊದಲು ಮಾನ್ಯ ರಮಾನಾಥ ರೈರವರು ಅರಣ್ಯ ಮಂತ್ರಿಯಾಗಿದ್ದಾಗ ಒಂದು ತಿದ್ದುಪಡಿಯನ್ನು ತಂದಿದ್ದರು ಹಾಗೂ ಮಾನ್ಯ ಕಂದಾಯ ಮಂತ್ರಿಗಳು ನೇರವಾಗಿ ಅದನ್ನು ಅನುಮೋದನೆ

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಮಾಡುತ್ತೇವೆಂದು ಹೇಳಿದ್ದರು. ಅದು ಕಡೆಗೆ ಸಚಿವ ಸಂಪುಟಕ್ಕೆ ಹೋಯಿತು. ಈಗ ಸಚಿವ ಸಂಪುಟದಲ್ಲಿ ಏನು ಮಾಡಿದ್ದಾರೆ ಎಂದರೆ, ಸಾರ್ವಜನಿಕ ಹಿತಾಸಕ್ತಿ ಮತ್ತು ಸರ್ಕಾರಿ ಕೆಲಸಗಳಿಗೆ ಮಾತ್ರ ಆ Deemed Forest ಅನ್ನು ಕೈಬಿಡಬಹುದು ಎಂದು ಮಾಡಿದ್ದಾರೆ. ನಾವು ಎರಡು ವಿಚಾರವನ್ನು ನಿಮ್ಮ ಮುಂದೆ ಇಟ್ಟಿದ್ದೇವೆ. ಈಗ ಹೆಚ್ಚು ಕಡಿಮೆ ಮೂರರಿಂದ ನಾಲ್ಕು ಲಕ್ಷ ಅರ್ಜಿಗಳು ನಿಯಮ 94(ಸಿ) ಅಡಿಯಲ್ಲಿ ಬಂದಿದ್ದು ಅಲ್ಲಿ ಬಡವರು ಏನು ಮನೆ ಕಟ್ಟಿಕೊಂಡು ಬದುಕುತ್ತಿದ್ದಾರೆ, ಅದು ನೈಜವಾಗಿರುವಂಥದ್ದು. ನೀವು ಅದನ್ನು ಕೈಬಿಟ್ಟರೆ ಈ Deemed Forest ನಲ್ಲಿ ವಾಸವಾಗಿದ್ದುಕೊಂಡು ಮನೆ ಕಟ್ಟಿಕೊಂಡು ಬದುಕುತ್ತಿರುವಂತಹ ಜನರಿಗೆ ಹಕ್ಕುಪತ್ರ ಕೊಡುವುದಕ್ಕೆ ರಿಯಾಯಿತಿ ಕೊಡಬಹುದು ಎಂದು ಸಚಿವ ಸಂಪುಟದಲ್ಲಿ ತೀರ್ಮಾನ ಮಾಡಿದರೆ 94(ಸಿ) ಮತ್ತು 94(ಸಿಸಿ) ನಾವೇ ಮಾಡಿದಂತಹ ಕಾನೂನು. Deemed Forest ಅನ್ನು ಕೈಬಿಡಬಾರದು ಎನ್ನುವ ಒಂದೆ ಕಾರಣಕ್ಕೆ, ನಮ್ಮ ಜಿಲ್ಲೆಯಲ್ಲಿ 25 ಸಾವಿರ ಹೆಕ್ಟೇರ್ ಇದೆ, ಮಂಗಳೂರು ಜಿಲ್ಲೆಯಲ್ಲಿ 25 ಹೆಕ್ಟೇರ್ ಸಾವಿರ ಇದೆ. ಶಿವಮೊಗ್ಗ ಜಿಲ್ಲೆಯಲ್ಲಿ ಸುಮಾರು 50 ಸಾವಿರ ಹೆಕ್ಟೇರ್ ಪ್ರದೇಶ ಇರಬಹುದು. ಮಾನ್ಯ ಸಚಿವರ ಜಿಲ್ಲೆಯಲ್ಲಿ ಎಲ್ಲದಕ್ಕಿಂತ ಹೆಚ್ಚಿಗೆ ಇರಬಹುದು. ಹೆಚ್ಚು ಕಡಿಮೆ ರಾಜ್ಯದ ಮೂರುವರೆ ಲಕ್ಷ ಜನ Deemed Forest ನಲ್ಲಿದ್ದಾರೆ ಎನ್ನುವಂತಹ ಕಾರಣಕ್ಕೋಸ್ಕರ ಅವರು ಹಕ್ಕುಪತ್ರವನ್ನು ಪಡೆಯುವುದಕ್ಕೆ ಆಗದೆ ಅಸಹಾಯಕರಾಗಿರುವಂತಹ ಸ್ಥಿತಿ ಇದೆ. ಸಚಿವ ಸಂಪುಟದಲ್ಲಿ ಬಡವರಿಗೋಸ್ಕರ ಹಕ್ಕುಪತ್ರ ಕೊಡುವುದಕ್ಕೆ Deemed Forest ನಲ್ಲಿ ವಿನಾಯಿತಿ ಕೊಡುವುದು ಒಂದು ವಿಚಾರವಾದರೆ, ಮತ್ತೊಂದು ಫಾರಂ ನಂ.50 ಮತ್ತು 53 ರಲ್ಲಿ ಇದರಲ್ಲೂ ಸಹ Deemed Forest ಇದೆ. ಆದರೆ, ತುಂಬಾ ಹೆಚ್ಚು ಭೂಮಿ ಯಾರಿಗೆ ಹೋಗುತ್ತದೆ ಮತ್ತು ಸಮಸ್ಯೆಗಳು ಬರುತ್ತದೆ ಎಂಬುದು ನಿಮ್ಮ ಯೋಚನೆ. ಆದರೆ, Deemed Forest ರಹಿತ ಮಾಡದೇ ಹೋದರೆ, ಈ ಕಡತಗಳೆಲ್ಲವೂ ಸಹ ಇದೇ ರೀತಿ ತಿರಸ್ಕೃತಗೊಂಡು ಉಳಿದುಕೊಳ್ಳುತ್ತವೆ. ನಿಜವಾದ ಅರ್ಹರಿಗೆ ಭೂಮಿ ಸಿಗುವುದು ತಡವಾಗುತ್ತದೆ. ದಯವಿಟ್ಟು ಮಾನ್ಯ ಸಚಿವರು ಅದರ ಬಗ್ಗೆ ಬಹಳ ಕಠಿಣವಾದ ನಿರ್ಧಾರವನ್ನು ತೆಗೆದುಕೊಳ್ಳಬೇಕು. ಏಕೆಂದರೆ, ಪ್ರತಿಬಾರಿ ಸಚಿವ ಸಂಪುಟಕ್ಕೆ ಹೋಗುತ್ತದೆ ಪುನಃ ಪರಿಶೀಲನೆ ಮಾಡಿ ಎಂದು ಜಿಲ್ಲಾಧಿಕಾರಿಯವರಿಗೆ ಸಚಿವ ಸಂಪುಟದಿಂದ ವಾಪಸ್ಸು ಹಾಕುತ್ತಾರೆ. ಅದನ್ನು ಪುನಃ ಜಿಲ್ಲಾಧಿಕಾರಿಯವರು ಸರ್ವೇ ಮಾಡುವುದು, ಇದು ಬಹಳ ದಿವಸಗಳಿಂದ ಇರುವಂತಹ ಸಮಸ್ಯೆ. ನಮ್ಮ ಆಗ್ರಹ 50 ಮತ್ತು 53 ಅನ್ನು ಮಾಡಬೇಕು ಎಂಬುದು. ಈಗ ಮೊದಲ ಪ್ರಾಶಸ್ತ್ಯ ಕೊಡಬೇಕಾದುದು ಆ ಬಡವರು ಮನೆಯನ್ನು ಕಟ್ಟಿಕೊಂಡು ಬದುಕುತ್ತಿದ್ದಾರೆ. ಅದನ್ನು ಮಾನ್ಯ

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಮಂತ್ರಿಗಳು ಕಣ್ಣಾರೆ ನೋಡಿದ್ದಾರೆ. ನಿಯಮ 94(ಸಿ) ಮತ್ತು 94(ಸಿಸಿ)ಯ ಕಾನೂನನ್ನು ಸರ್ಕಾರವೇ ತಂದಿರುವುದು. ಹಾಗಾಗಿ ಆ ಎರಡನ್ನು ನೀವು ರಿಯಾಯಿತಿ ಮಾಡದೇ ಇದ್ದರೆ ಈ ಸಮಸ್ಯೆಗಳು ಹಾಗೆಯೇ ಉಳಿದು ಹೋಗುತ್ತವೆ. ಅದರ ಬಗ್ಗೆ ಸರ್ಕಾರದ ನಿಲುವು ಏನು ಎಂಬುದನ್ನು ಹೇಳಬೇಕು.

**ಶ್ರೀ ಪ್ರಾಣೇಶ್.ಎಂ.ಕೆ.:-** ಮಾನ್ಯ ಸಭಾಪತಿಯವರೇ, ಉತ್ತರದಲ್ಲಿ ನಾವು ಜಂಟಿ ಸರ್ವೇಯನ್ನು ಮಾಡಿ ಕ್ರಮ ಜರುಗಿಸುತ್ತೇವೆಂದು ಹೇಳಿದ್ದಾರೆ. ಆದರೆ, ಇದು ನನಗೆ ಗೊತ್ತಿರುವಂತೆ, ನಾನು ಈ ಸದನಕ್ಕೆ ಬಂದಾಗಿನಿಂದ ಜಂಟಿ ಸರ್ವೇ ಎಂಬ ಪದವನ್ನು ನಿರಂತರವಾಗಿ ಕೇಳುತ್ತಿದ್ದೇನೆ. ಆದರೆ, ಎಲ್ಲೂ ಕೂಡ ಇಲ್ಲಿಯವರೆಗೂ ಜಂಟಿ ಸರ್ವೇ ಆಗಿಲ್ಲ. ಈಗ ಅರಣ್ಯ ಇಲಾಖೆ ಮತ್ತು ಕಂದಾಯ ಇಲಾಖೆಯವರನ್ನು ಕೇಳಿದರೆ ಏನು ಮಾಡುವುದಕ್ಕೆ ಆಗುವುದಿಲ್ಲ, ಇದು ಜಂಟಿ ಸರ್ವೇ ಎಂದು ಹೇಳುತ್ತಾರೆ. ನಾವು ಸದನದಲ್ಲಿ ಬಂದು ಹೇಳಿದಾಗ, ಈ ಹಿಂದೆ ಕಂದಾಯ ಮಂತ್ರಿಗಳಾಗಿದ್ದಂತಹ ಶ್ರೀ ಕಾಗೋಡು ತಿಮ್ಮಪ್ಪನವರು ಮತ್ತು ಅರಣ್ಯ ಮಂತ್ರಿಗಳಾಗಿದ್ದಂತಹ ಶ್ರೀ ರಮಾನಾಥ ರೈಯವರು ನಮ್ಮ ಭಾಗಗಳಿಗೆ ಬಂದಂತಹ ಸಂದರ್ಭದಲ್ಲಿ ಇದಕ್ಕೆ ಜಂಟಿ ಸರ್ವೇ ಮಾಡಿ ಪರಿಹಾರ ಕಂಡು ಹಿಡಿಯುತ್ತೇವೆಂದು ಹೇಳಿದರು. ಅದಕ್ಕೆ ಮಾನ್ಯ ಮಂತ್ರಿಗಳು ಇಲ್ಲಿಯವರೆಗೂ ಎಲ್ಲಿ ಜಂಟಿ ಸರ್ವೇ ಕಾರ್ಯಗಳಾಗಿವೆ ಎಂದು ಹೇಳಬೇಕು. ಇಲ್ಲಿಯವರೆಗೂ ಎಲ್ಲೂ ಸಹ ಜಂಟಿ ಸರ್ವೇ ಆಗಿಲ್ಲ. ಆದರೆ, ಪ್ರತಿ ಸಂದರ್ಭದಲ್ಲಿ ಜಂಟಿ ಸರ್ವೇ ಎಂದು ಉತ್ತರ ಕೊಟ್ಟಿದ್ದಾರೆ. ಅದು ಏನೆಂದರೆ, ಇಲ್ಲಿ ಉಳಿದಂತಹ ಜಾಗಗಳಿಗೆ ನಾವು ಜಂಟಿ ಸರ್ವೇಯನ್ನು ಮಾಡಿ, ಕ್ರಮವನ್ನು ಜರುಗಿಸಲಾಗುವುದು ಎಂದು ಹೇಳಿದ್ದಾರೆ. ಆದರೆ, ಆ ಕ್ರಮವನ್ನು ಜರುಗಿಸಿರುವಂತಹ ಉದಾಹರಣೆಗಳು ಇದೆಯೇ? ಇಲ್ಲವೇ? ಏಕೆಂದರೆ, ತಿರಸ್ಕೃತಗೊಂಡಿರುವುದಕ್ಕೆ ನನಗೆ ಅನುಮಾನವಿದೆ. ಒಂದು ವಿಷಯವನ್ನು ಮಾನ್ಯ ಮಂತ್ರಿಗಳ ಗಮನಕ್ಕೆ ತರುವುದಕ್ಕೆ ಬಯಸುತ್ತೇನೆ. ಈಗ ತಾಲ್ಲೂಕು ಕಚೇರಿಯಲ್ಲಿ Form No.50 ಮತ್ತು Form No.53ಕ್ಕೆ ಸಂಬಂಧಪಟ್ಟಂತೆ ಒಂದು ಸಮಿತಿಯನ್ನು ಮಾಡಿದ್ದಾರೆ. ಅದಕ್ಕೆ ಮಾನ್ಯ ಶಾಸಕರು ಅಧ್ಯಕ್ಷರಾಗಿರುತ್ತಾರೆ. ಆದರೆ, ಅಲ್ಲಿ ಸಮಿತಿಯ ಎಲ್ಲರನ್ನೂ ಮಾತನಾಡಿಸುವಂಥದ್ದು, ತಹಶೀಲ್ದಾರವರನ್ನು ಸರಿಯಾಗಿ ನೋಡಿಕೊಳ್ಳುವ ವ್ಯವಸ್ಥೆ ಇಲ್ಲವೆಂದರೆ, ಅವನ ಅರ್ಜಿ ತಿರಸ್ಕೃತಗೊಳ್ಳುತ್ತದೆ. ಅದು ಇದರ ಒಳಗೆ ಸೇರುತ್ತದೆ. ನಾನು ಅದಕ್ಕೆ ಮಾನ್ಯ ಮಂತ್ರಿಯವರಿಗೆ ಪ್ರಶ್ನೆಯನ್ನು ಮಾಡಿದ್ದು. ಇದರಲ್ಲಿ ಸುಮಾರು 57,000 ಅರ್ಜಿಗಳು ತಿರಸ್ಕೃತಗೊಂಡಿವೆ. ಏಕೆಂದರೆ, ನಾನು ಸ್ಥಳೀಯವಾಗಿ ಆ ಭಾಗದಲ್ಲೇ ಇರುತ್ತೇನೆ. ಅವರು ಪ್ರತಿ ದಿವಸ ಬರುತ್ತಾರೆ. ಅವರು ಸಮಿತಿಯಲ್ಲಿ ಇರುವಂತಹ ಆರೇಳು ಜನರನ್ನು ಸಹ ಮಾತನಾಡಿಸಬೇಕು. ಅವರನ್ನು ನೋಡಿಕೊಳ್ಳಬೇಕು, ಅವರನ್ನು ನೋಡಿಕೊಳ್ಳಲಿಲ್ಲವೆಂದರೆ ಅದು ಸಮಿತಿಯಲ್ಲಿ ಪಾಸ್ ಆಗುವುದಿಲ್ಲ. ಈಗ ಐದಾರು ತಿಂಗಳಿಗೊಮ್ಮೆ ಸಮಿತಿ ಸಭೆ ಸೇರುತ್ತದೆ. ಅಂದರೆ ಎಲ್ಲರನ್ನು ನೋಡಿ ಅವರು ಶಿಫಾರಸು ಮಾಡಿದರೆ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಸಮಿತಿ ಸಭೆ ಆಗುತ್ತದೆ. ಇಲ್ಲದೇ ಹೋದರೆ ಕೋರಂ ಆಗುವುದಿಲ್ಲ. ಈ ತರಹದ ಸಮಸ್ಯೆಗಳಿವೆ. ಇದಕ್ಕೆ ಒಂದು ಪರಿಹಾರವನ್ನು ಕಂಡುಕೊಳ್ಳಬೇಕೆಂದು ನನ್ನ ವಿನಂತಿ. ತಾವು ನೀಡಿರುವಂತಹ ಉತ್ತರದಲ್ಲಿ ಎಷ್ಟು ಜಂಟಿ ಸರ್ವೇಗಳು ಆಗಿವೆ ಎಂಬುದು ನನ್ನ ಪ್ರಶ್ನೆ, ಅದಕ್ಕೆ ಮಾನ್ಯ ಮಂತ್ರಿಗಳು ಉತ್ತರ ಕೊಡಬೇಕೆಂಬುದು ನನ್ನ ವಿನಂತಿ.

**ಶ್ರೀ ಆರ್.ವಿ.ದೇಶಪಾಂಡೆ:-** ಮಾನ್ಯ ಸಭಾಪತಿಯವರೇ, ಮಾನ್ಯ ವಿರೋಧ ಪಕ್ಷದ ನಾಯಕರು ಈ Deemed Forest ಬಗ್ಗೆ ಮಾತನಾಡಿದ್ದಾರೆ. ನಾವು ಒಂದು ಕಡೆ ಅರಣ್ಯದ ಸಂರಕ್ಷಣೆ ಮತ್ತು ಪರಿಸರದ ಸಂರಕ್ಷಣೆ ಆಗಬೇಕೆಂದು ಹೇಳುತ್ತೇವೆ. ಮತ್ತೊಂದು ಕಡೆ ಬಡವರು ಇದ್ದಾರೆ. ಈ ಸಮಸ್ಯೆ ಶಿವಮೊಗ್ಗ, ಚಿಕ್ಕಮಗಳೂರು, ಕೊಡಗು ಮತ್ತು ನಮ್ಮ ಜಿಲ್ಲೆಯಲ್ಲಿದೆ. ಅಂದರೆ, ಎಲ್ಲವೂ ಸಹ ಮಲೆನಾಡು ಜಿಲ್ಲೆಗಳಲ್ಲಿ ಇದೆ. ಹಾಗಾದರೆ ಒಂದು forest land ಆದರು ಬಂದಿದೆಯೇ? ಅಲ್ಲಿ Tribal peoples ಗಳು ಇದ್ದರೆ, 2005ರಿಂದ ಕೊಡುವುದಕ್ಕೆ ಅವಕಾಶವಿದೆ. ಅಲ್ಲಿ ಮೂರು ತಲೆಮಾರಿನವರು ಇದ್ದು ಅಲ್ಲಿ ಮನೆ ಇದ್ದರೆ ಹಕ್ಕುಪತ್ರ ಕೊಡುವುದಕ್ಕೆ ಅಧಿಕಾರವಿದೆ. ಜಮೀನು ಇದ್ದರೆ ಹಕ್ಕುಪತ್ರ ಕೊಡುವುದಕ್ಕೆ ಅಧಿಕಾರವಿದೆ. ಅರಣ್ಯದ ಮಧ್ಯದಲ್ಲಿ ಇದ್ದರೂ ಸಹ ಹಕ್ಕುಪತ್ರ ಕೊಡುವುದಕ್ಕೆ ಅವಕಾಶವಿದೆ. ಈ ವಿಷಯ ಇನ್ನು ಸುಪ್ರೀಂ ಕೋರ್ಟ್‌ನಲ್ಲಿ ಬಾಕಿಯಿದೆ. ಆದುದರಿಂದ ಇದರ ಬಗ್ಗೆ ತೀರ್ಮಾನ ತೆಗೆದುಕೊಳ್ಳುವುದು ತುಂಬಾ ಕಷ್ಟ. ಯಾವುದೇ ಒಬ್ಬ ಸಚಿವರು ನಮಗೆ ಕೊಟ್ಟಂತಹ ಮಾಹಿತಿಯ ಮೇಲೆ ಇಲ್ಲಿ ಪ್ರಶ್ನೆಗೆ ಉತ್ತರ ಕೊಡುತ್ತೇವೆ. ಈಗ ಚಿಕ್ಕಮಗಳೂರು ಜಿಲ್ಲಾಧಿಕಾರಿಯವರು ಕೊಟ್ಟಂತಹ ಮಾಹಿತಿಯ ಮೇಲೆ ಉತ್ತರವನ್ನು ನೀಡಿದ್ದೇವೆ. ಆ ಮಾಹಿತಿಯ ಪ್ರಕಾರ ತಾವು ಹೇಳಿದ ಹಾಗೆ, ಇಲ್ಲಿ ಸರ್ವೇ ನಡೆದೇ ಇಲ್ಲವೆಂದರೆ, I will issue them a notice. ಎರಡನೆಯದಾಗಿ, ಮಾನ್ಯ ಸದಸ್ಯರು ಹೇಳಿದ ಹಾಗೆ ಯಾರು ಅರ್ಜಿಯನ್ನು ಹಾಕಿದ್ದಾರೆ ಅವರು ಎಲ್ಲಾ ಸದಸ್ಯರನ್ನು ಭೇಟಿಯಾಗಬೇಕೆಂದು ಹೇಳಿದ್ದಾರೆ. ತಮ್ಮ ಕಡೆ ಸ್ಪಷ್ಟವಾದ ನಿದರ್ಶನ ಇದ್ದರೆ, ಮಾನ್ಯ ಸದಸ್ಯರು ಆ ಬಗ್ಗೆ ನನ್ನನ್ನು ಭೇಟಿಯಾಗಿ ತಿಳಿಸಬಹುದು ಅಥವಾ ಲಿಖಿತವಾಗಿಯೂ ಸಹ ಕೊಡಬಹುದು. ಕಾನೂನಿನ ಚೌಕಟ್ಟಿನಲ್ಲಿ ಅದರ ಬಗ್ಗೆ ಕ್ರಮ ತೆಗೆದುಕೊಳ್ಳುವ ಹಾಗಿದ್ದರೆ ನಾನು ಕ್ರಮ ತೆಗೆದುಕೊಳ್ಳುತ್ತೇನೆ.

**ಶ್ರೀ ಪ್ರಾಣೇಶ್.ಎಂ.ಕೆ.:-** ಮಾನ್ಯ ಸಭಾಪತಿಯವರೇ, ನಾನು ಜಂಟಿ ಸರ್ವೇಯ ಬಗ್ಗೆ ಪ್ರಶ್ನೆ ಕೇಳಿದ್ದೇನೆ. ಜಿಲ್ಲಾಧಿಕಾರಿಯವರು ಜಂಟಿ ಸರ್ವೇಯನ್ನು ಮಾಡಿಸುವುದಕ್ಕೆ ಹೇಳಿದ್ದಾರೆ. ಈಗ ಸಮಸ್ಯೆಗಳು ಇರುವುದು ಇಷ್ಟೆ. ನಾವು ಇಲ್ಲಿ ಪ್ರಶ್ನೆಯನ್ನು ಕೇಳಿದ ಸಂದರ್ಭದಲ್ಲಿ ಇಲಾಖೆಯಿಂದ ನೇರವಾಗಿ ಸಂಬಂಧಪಟ್ಟಂತಹ ಜಿಲ್ಲೆಗೆ ಹೋಗುತ್ತದೆ. ಜಿಲ್ಲೆಯವರು ಏನು ಮಾಡಿದ್ದಾರೆಂದು ಅವರು

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"**

ಕೂಡಲೇ ಅಲ್ಲೇ ಕುಳಿತುಕೊಂಡು ತಕ್ಷಣ ಪ್ರಶ್ನೆಗೆ ಉತ್ತರವನ್ನು ಕಳುಹಿಸುವಂತಹ ವ್ಯವಸ್ಥೆ ಇದೆ. ಆದರೆ, ಜಂಟಿ ಸರ್ವೇ ಎಲ್ಲಿ ಆಗಿದೆ ಎನ್ನುವಂತಹ ಮಾಹಿತಿಯನ್ನು ಅಧಿಕಾರಿಯ ಮುಖಾಂತರ ನಮಗೆ ತಿಳಿಸಿದರೆ, ನಮಗೂ ಸಹ ಮನವರಿಕೆಯಾಗುತ್ತದೆ.

**ಶ್ರೀ ಆರ್.ವಿ.ದೇಶಪಾಂಡೆ:-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ತಕ್ಷಣ ಅದರ ಮಾಹಿತಿಯನ್ನು ಕೇಳಿದರೆ ಅದು ನನ್ನ ಬಳಿ ಇಲ್ಲ. ಖಂಡಿತವಾಗಿ ಜಿಲ್ಲಾಧಿಕಾರಿಯವರನ್ನು ಸಂಪರ್ಕಿಸಿ ಮಾಹಿತಿಯನ್ನು ಪಡೆದು ಮಾನ್ಯ ಸದಸ್ಯರಿಗೆ ಒದಗಿಸುತ್ತೇನೆ.

**ಶ್ರೀ ಪ್ರಾಣೇಶ್.ಎಂ.ಕೆ.:-** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಇಲ್ಲಿ ಈ ರೀತಿ ಹೇಳಿದ್ದಾರೆ, ಜಂಟಿ ಸರ್ವೇಯ ಮುಖಾಂತರ ಪರಿಭಾವಿತ ಅರಣ್ಯ ಹಾಗೂ ಕಂದಾಯ ಭೂಮಿಗಳಿರುವುದರಿಂದ ಅರಣ್ಯ ಮತ್ತು ಕಂದಾಯ ಇಲಾಖೆಯ ಅಧಿಕಾರಿಯವರಿಂದ ಜಂಟಿ ಸರ್ವೇ ಕಾರ್ಯ ನಡೆಸಿ ಅರಣ್ಯ ಮತ್ತು ಕಂದಾಯ ಭೂಮಿಗಳನ್ನು ಪ್ರತ್ಯೇಕಿಸಲು ಕ್ರಮ ವಹಿಸಲಾಗುತ್ತಿದೆ ಎಂದು ಹೇಳಿದ್ದಾರೆ. ಹಾಗಾದರೆ ಈ ಹಿಂದೆ ಇರುವಂಥದ್ದಕ್ಕೆ ಸರ್ವೇ ಆಗಿರುವುದು ಬೇಕು.

**ಶ್ರೀ ಆರ್.ವಿ.ದೇಶಪಾಂಡೆ:-** ಮಾನ್ಯ ಸಭಾಪತಿಯವರೇ, ಇವತ್ತು ನನ್ನ ಬಳಿ ಅದರ ಮಾಹಿತಿ ಇಲ್ಲ. ಅದರ ಮಾಹಿತಿಯನ್ನು ಮಾನ್ಯ ಸದಸ್ಯರಿಗೆ ನಂತರ ಒದಗಿಸಿಕೊಡುತ್ತೇನೆಂದು ನಾನು ಈಗಾಗಲೇ ಹೇಳಿದ್ದೇನೆ.

**ಶ್ರೀ ಪ್ರಾಣೇಶ್.ಎಂ.ಕೆ.:-** ಮಾನ್ಯ ಸಭಾಪತಿಯವರೇ, ಇದನ್ನು ಮಾನ್ಯ ಮಂತ್ರಿಗಳು ಸ್ವಲ್ಪ ಗಂಭೀರವಾಗಿ ಪರಿಗಣಿಸಬೇಕು.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ವಿರೋಧ ಪಕ್ಷದ ನಾಯಕರು):-** ಮಾನ್ಯ ಸಭಾಪತಿಯವರೇ, ಈಗ ಮಾನ್ಯ ಮಂತ್ರಿಗಳು ಹೇಳಿದಂತೆ, ಬುಡಕಟ್ಟು ಜನರಿಗೆ ಕೊಡಬೇಕಾದಂತಹ ರಿಯಾಯಿತಿಗಳನ್ನು ಕೊಡಬಹುದು. ಅರಣ್ಯ ಉಳಿಸುವುದಕ್ಕೆ ಸಂಬಂಧಿಸಿದಂತೆ ನಮ್ಮಲ್ಲಿ ಯಾವುದೇ ಭಿನ್ನಾಭಿಪ್ರಾಯ ಅಥವಾ ವಾದವಿಲ್ಲ. ಆದರೆ, ಪ್ರಶ್ನೆ ಇರುವುದು ಇಷ್ಟೆ. ಅಲ್ಲಿ ಬಡವರು ಮನೆಗಳನ್ನು ಕಟ್ಟಿಕೊಂಡಿದ್ದಾರೆ, ಆ ಜಾಗವನ್ನು ಆಯಾಯ ಜಿಲ್ಲೆಯ ಜಿಲ್ಲಾಧಿಕಾರಿಗಳು ಇದು Deemed Forest ನಿಂದ ಹೊರಗೆ ಇದೆ ಎನ್ನುವಂತಹ ವರದಿಯನ್ನು ಕೊಟ್ಟಿದ್ದಾರೆ. ಅದನ್ನು ಸರ್ಕಾರ ಕೈಬಿಡುವುದಕ್ಕೆ ಏನು ತೊಂದರೆ? ನಾನು ಹೇಳುವುದನ್ನು ಮಾನ್ಯ ಮಂತ್ರಿಗಳು ಗಮನಿಸುತ್ತಾರೆಂದು ಭಾವಿಸುತ್ತೇನೆ.

**(ಮುಂದು...)**

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

(389)12–12–2018(03–50)ಎಲ್‌ಎಲ್–ಬಿಎನ್‌ಎಸ್

**(ಸಭಾಪತಿಯವರ ಉಪಸ್ಥಿತಿ)**

**ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಮುಂದುವರೆದಿದೆ...):–**

ಇದು ಡೀಮ್ಡ್ ಫಾರೆಸ್ಟ್‌ನಿಂದ ಹೊರಗಿದೆ ಎಂಬ ವರದಿಯನ್ನು ಸರ್ಕಾರಕ್ಕೆ ಕೊಟ್ಟಿದ್ದಾರೆ. ಅದನ್ನು ಕೈಬಿಡುವುದಕ್ಕೆ ಸರ್ಕಾರಕ್ಕೆ ಏನು ತೊಂದರೆ? ನಾನು ಹೇಳಿರುವುದನ್ನು ಮಾನ್ಯ ಸಚಿವರು ಗಮನಿಸುತ್ತಾರೆಂದು ನಾನು ಭಾವಿಸುತ್ತೇನೆ. ಬಡವರು ಅರಣ್ಯದ ಹೊರಗಡೆ ಮನೆ ಕಟ್ಟಿಕೊಂಡಿದ್ದಾರೆ. ಅರಣ್ಯದ ಒಳಗಡೆ ಅಲ್ಲ. ಆ ಪ್ರದೇಶ ಡೀಮ್ಡ್ ಫಾರೆಸ್ಟ್ ವ್ಯಾಪ್ತಿಯಲ್ಲಿ ಬರುವುದಿಲ್ಲವೆಂದು ಜಿಲ್ಲಾಧಿಕಾರಿಗಳು ಸರ್ಕಾರಕ್ಕೆ ವರದಿಯನ್ನು ಕೊಟ್ಟಿದ್ದಾರೆ. ವರದಿ ಕೊಟ್ಟಂತಹ ಪ್ರದೇಶದಲ್ಲಿರತಕ್ಕಂತಹ ಮನೆಗಳ ಹಕ್ಕುಪತ್ರಗಳನ್ನು ಕೊಡದೇ ಇರುವಂಥದ್ದು 3.50 ಲಕ್ಷ. ಅದನ್ನು ಕೈಬಿಡಬೇಕಾದರೆ ಸರ್ಕಾರಕ್ಕೆ ಯಾವ ತೊಂದರೆಯೂ ಇಲ್ಲ. ಮಾನ್ಯ ಸುಪ್ರೀಂ ಕೋರ್ಟ್‌ನಲ್ಲಿ ಅರಣ್ಯ ಸಂರಕ್ಷಣಾ ಕಾಯ್ದೆಗೆ ಸಂಬಂಧಪಟ್ಟ ವಿಚಾರ ಇದೆ. ಈ ವರದಿಯ ಪ್ರಕಾರ ತಾವು ಮಾಡಬಹುದೆಂದು ಅನಿಸುತ್ತದೆ. ನಾನು ಈ ಮಾತನ್ನು ಏತಕ್ಕೆ ಹೇಳುತ್ತಿದ್ದೇನೆಂದರೆ, ತಮಗೆ ಇದರ ಬಗ್ಗೆ ಸಾಮರ್ಥ್ಯ ಇದೆ. ನಮಗಿಂತಲೂ ಹೆಚ್ಚಾಗಿ ಈ ವಿಷಯ ತಮಗೆ ಅರ್ಥವಾಗುತ್ತದೆ. ಅದನ್ನು ಮಾಡುವ ಶಕ್ತಿ ಇದೆ. ಮಾಡುವುದಕ್ಕೆ ಏನು ತೊಂದರೆ ಇದೆ ಎನ್ನುವುದಷ್ಟೇ ನಮ್ಮ ಪ್ರಶ್ನೆಯಾಗಿದೆ.

**ಶ್ರೀ ಆರ್.ವಿ. ದೇಶಪಾಂಡೆ:–** ಮಾನ್ಯ ಸಭಾಪತಿಯವರೇ, Section 94A and Section 94B of the Karnataka Land Revenue Act ಪ್ರಕಾರ ಯಾವುದೇ ಅರಣ್ಯ ಭೂಮಿಯಲ್ಲಿ ಭೂಮಿ ಮಂಜೂರು ಮಾಡುವುದಕ್ಕೆ ಅವಕಾಶವಿರುವುದಿಲ್ಲ. ಮಾನ್ಯ ವಿರೋಧ ಪಕ್ಷದ ನಾಯಕರು ಈ ಭೂಮಿ ಡೀಮ್ಡ್ ಫಾರೆಸ್ಟ್‌ನಿಂದ ಹೊರಗಿದೆ ಅದು ಫಾರೆಸ್ಟ್ ಲ್ಯಾಂಡ್ ಅಲ್ಲವೆಂದು ಹೇಳುತ್ತಿದ್ದಾರೆ, ಅಲ್ಲವೇ?

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಮಾನ್ಯ ಸಭಾಪತಿಯವರೇ, ಹೌದು.

**ಶ್ರೀ ಆರ್.ವಿ. ದೇಶಪಾಂಡೆ:–** ಮಾನ್ಯ ಸಭಾಪತಿಯವರೇ, ನಾನೂ ಕೂಡ ಫಾರೆಸ್ಟ್ ಇರುವಂತಹ ಡಿಸ್ಟ್ರಿಕ್ಟ್‌ನಿಂದ ಬರುತ್ತೇನೆ. ಈ ಬಗ್ಗೆ ನನಗೂ ಸಹ ಮಾಹಿತಿ ಇಲ್ಲ. ತಾವು ಹೇಳಿರುವ ವಿಷಯವನ್ನು ನಾನು ಪರಿಶೀಲಿಸುತ್ತೇನೆ. ಒಂದು ಮಾತು ಹೇಳುವುದೇನೆಂದರೆ, ನಾವು ಮತ್ತು ಅವರು ಈ ಸದನದಲ್ಲಿ ಏತಕ್ಕೆ ಕುಳಿತಿದ್ದೇವೆ ಎಂದರೆ, ನ್ಯಾಯಬದ್ಧವಾಗಿ, ಪಾರದರ್ಶಕವಾಗಿ, ಬಡವರಿಗೆ ಮತ್ತು ರೈತರಿಗೆ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ನಮ್ಮಿಂದ ಯಾವ ಸಹಾಯ ಮಾಡುವುದಕ್ಕಾಗುತ್ತದೆ ಅದನ್ನು ಮಾಡುವುದಕ್ಕಾಗಿಯೇ ನಾವು ಇಲ್ಲಿ ಕುಳಿತಿದ್ದೇವೆ. ಅದರಲ್ಲಿ ಯಾವುದೇ ಭಿನ್ನಾಭಿಪ್ರಾಯವಿಲ್ಲ.

**ಪ್ರಶ್ನೆ ಸಂಖ್ಯೆ: 370**

**ಶ್ರೀ ಆರ್.ವಿ. ದೇಶಪಾಂಡೆ:–** ಮಾನ್ಯ ಸಭಾಪತಿಯವರೇ, ಈ ಪ್ರಶ್ನೆಗೆ ನಾನು ಸ್ವಲ್ಪ ಕಾಲಾವಕಾಶ ಕೇಳಿದ್ದೇನೆ.

**ಶ್ರೀ ಪುಟ್ಟಣ್ಣ:–** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ನನ್ನ ಪ್ರಶ್ನೆಗೆ ಕಾಲಾವಕಾಶ ಕೇಳಲಿ, ತೊಂದರೆಯಿಲ್ಲ. ಆದರೆ, ಇಲ್ಲಿ ಏನಾಗಿದೆಯೆಂದರೆ, ಇಡೀ ರಾಜ್ಯದಲ್ಲಿ ಕಿವುಡ ಮತ್ತು ಮೂಕ ಮಕ್ಕಳ ಕೈಗಾರಿಕಾ ತರಬೇತಿಯ ಸಂಸ್ಥೆ ಇರುವುದೇ ಒಂದು. ಅವರಿಗೆ ಸಂಬಳ ಕೊಟ್ಟು ಮೂರು ತಿಂಗಳಾಗಿದೆ. ಈ ಪ್ರಶ್ನೆಗೆ ಉತ್ತರ ನೀಡಲು ಮಾನ್ಯ ಸಚಿವರು ನಾಲ್ಕು ವಾರ ಸಮಯ ತೆಗೆದುಕೊಳ್ಳಲಿ, ಅದಕ್ಕೆ ನನ್ನ ಅಭ್ಯಂತರವಿಲ್ಲ. ಆದರೆ, ಕನಿಷ್ಠ ಪಕ್ಷ ಆ ನೌಕರರಿಗೆ ಸಂಬಳ ರಿಲೀಸ್ ಮಾಡುತ್ತಾರೆಯೇ? ಮಾನ್ಯ ಸಚಿವರ ಗಮನಕ್ಕೆ ಒಂದು ವಿಷಯವನ್ನು ತರಬಯಸುವುದೇನೆಂದರೆ, ಕೈಗಾರಿಕಾ ತರಬೇತಿ ಸಂಸ್ಥೆಯಲ್ಲಿರತಕ್ಕಂತಹ J.D. (Joint Director) ಗಳು ಸುಮಾರು ಸಂಖ್ಯೆಯಲ್ಲಿದ್ದಾರೆ. ಅದರಲ್ಲಿ ಕಡಿಮೆ ಜನ ಪ್ರಾಮಾಣಿಕರಿದ್ದು, ಅದರಲ್ಲಿ ಬಹಳಷ್ಟು ಜನ ಜೈಲಿಗೆ ಹೋಗಿರುವವರು, ಇಲ್ಲಾ ಜೈಲಿಗೆ ಹೋಗಬೇಕಾಗಿರುವವರು ಇದ್ದಾರೆ. ಇದನ್ನು ನಾನು ಪ್ರಾಮಾಣಿಕತೆಯಿಂದ ಹೇಳುತ್ತಿದ್ದೇನೆ. ಆದುದರಿಂದ, ಆ ನೌಕರರಿಗೆ ಸಂಬಳ ಬಿಡುಗಡೆ ಮಾಡುವುದಕ್ಕೆ ತಾವು ಹೇಳಿ. ನಾಲ್ಕು ವಾರ ಅಥವಾ ನಾಲ್ಕು ತಿಂಗಳು ಕಾಲಾವಕಾಶ ಬೇಕಾದರೆ ತೆಗೆದುಕೊಳ್ಳಲಿ. ನಾಲ್ಕು ವಾರ ಎಂದು ಹೇಳಿ ಸಂಬಳ ಬಿಡುಗಡೆ ಮಾಡದೇ ಇದ್ದರೆ ಆ ನೌಕರರು ಬೆಂಗಳೂರು ನಗರದಲ್ಲಿ ಹೇಗೆ ಜೀವನ ಮಾಡಬೇಕು? ಅಲ್ಲದೇ, ಕಿವುಡ ಮತ್ತು ಮೂಕ ಮಕ್ಕಳ ಕೈಗಾರಿಕಾ ತರಬೇತಿ ಸಂಸ್ಥೆ ಇಡೀ ರಾಜ್ಯದಲ್ಲಿ ಇರುವುದೇ ಒಂದೇ.

**ಸಭಾಪತಿಯವರು:–** ಮಾನ್ಯ ಪುಟ್ಟಣ್ಣನವರ ಪ್ರಶ್ನೆಗೆ ಮುಂದಿನ ವಾರ ಉತ್ತರ ಕೊಡುವುದಕ್ಕಾಗುತ್ತದೆಯೇ?

**ಶ್ರೀ ಆರ್.ವಿ. ದೇಶಪಾಂಡೆ:–** ಮಾನ್ಯ ಸಭಾಪತಿಯವರೇ, ಕಿವುಡ ಮತ್ತು ಮೂಕ ಮಕ್ಕಳ ಬಗ್ಗೆ ನಮಗೂ ಸಹ ಅನುಕಂಪವಿದೆ. ಇದರಲ್ಲಿ ಕಾಲಾವಕಾಶದ ಅವಶ್ಯಕತೆಯಿರುವುದರಿಂದ ಕೇಳಿದ್ದೇನೆ. ಈ ವಿಷಯದಲ್ಲಿ ಆ ನೌಕರರಿಗೆ ನ್ಯಾಯಬದ್ಧವಾಗಿ ಸಂಬಳ ಸಿಗಬೇಕಾದರೆ ಅದು ಸಿಗುತ್ತದೆ. Give me some time.

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಪುಟ್ಟಣ್ಣ:–** ಮಾನ್ಯ ಸಭಾಪತಿಯವರೇ, ಅವಶ್ಯಕತೆ ಇದ್ದರೆ ಮಾನ್ಯ ಸಚಿವರು ನಮ್ಮನ್ನು ಸಹ ಕರೆಯಲಿ. ಆದರೆ, ಆ ಕೈಗಾರಿಕಾ ಸಂಸ್ಥೆಯ ನೌಕರರಿಗೆ ಸಂಬಳ ಬಿಡುಗಡೆ ಮಾಡುವುದಕ್ಕೆ ಕೂಡಲೇ ಕ್ರಮ ಕೈಗೊಳ್ಳಬೇಕು.

**ಪ್ರಶ್ನೆ ಸಂಖ್ಯೆ:– 487**
**(ಉತ್ತರವನ್ನು ಲಗತ್ತಿಸಲಾಗಿದೆ)**

**ಶ್ರೀ ಟಿ.ಎ. ಶರವಣ(ವಿಧಾನಸಭಾ ಕ್ಷೇತ್ರ)(ಶ್ರೀ ಆರ್. ಚೌಡರೆಡ್ಡಿ ತೂಪಲ್ಲಿಯವರ ಪರವಾಗಿ):–** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಉತ್ತರವನ್ನು ಕೊಟ್ಟಿದ್ದಾರೆ. ಬಹುಶಃ ಈ ಪ್ರಶ್ನೆ 2010 ರಲ್ಲಿ ಉದ್ಭವವಾಗಿರತಕ್ಕಂತಹದ್ದಾಗಿದೆ. ಇದರಲ್ಲಿ ಖಾಸಗಿ ವ್ಯಕ್ತಿ ಶ್ರೀ ಟಿ. ನರಸಿಂಹನ್ ಎಂಬುವವರು ಜಾಗದ ಕುರಿತು ಒಂದು ರಿಟ್ ಅರ್ಜಿಯನ್ನು ಸಲ್ಲಿಸಿರುತ್ತಾರೆ. ತಿರುಪತಿ ತಿರುಮಲದಲ್ಲಿರತಕ್ಕಂತಹ ಪಾವಿತ್ರ್ಯವಾದಂತಹ 7 ಎಕರೆ ಜಾಗ, ಇದರ ಬಗ್ಗೆ ನಾನು ಸದನಕ್ಕೆ ಬಂದಾಗಿನಿಂದಲೂ ಪ್ರಶ್ನೆಯನ್ನು ಹಾಕುತ್ತಲೇ ಇದ್ದೇನೆ. ಇಂತಹ ಒಂದು ಉತ್ತರಗಳನ್ನು ಹಲವಾರು ಸಚಿವರುಗಳು ಕೊಡುತ್ತಿದ್ದಾರೆ. ಏಕೆಂದರೆ, ಮುಜರಾಯಿ ಸಚಿವರುಗಳು ಬದಲಾವಣೆಯಾಗುತ್ತಲೇ ಇರುತ್ತಾರೆ. ಈ ರೀತಿಯ ಉತ್ತರಗಳನ್ನು ಕೊಡುವುದನ್ನು ನಾನು ನೋಡುತ್ತಲೇ ಇದ್ದೇನೆ. ಬಹುಶಃ ಸರ್ಕಾರಕ್ಕೇನಾದರೂ ಕಳಕಳಿ ಇದೆಯೇ ಎಂದು ನಾನು ಕೇಳುವುದಕ್ಕೆ ಬಯಸುತ್ತಿದ್ದೇನೆ.

ಭರವಸೆ ಸಮಿತಿ ಅಧ್ಯಕ್ಷರಾಗಿದ್ದಂತಹ ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿಯವರು ಮತ್ತು ಶ್ರೀ ಕೆ.ಸಿ. ಕೊಂಡಯ್ಯನವರ ನೇತೃತ್ವದಲ್ಲಿ ಎರಡು ಬಾರಿ ಪರಿಶೀಲನೆ ಮಾಡಿದ್ದೇವೆ. ಕರ್ನಾಟಕ ಗೆಸ್ಟ್ ಹೌಸ್‌ನ 82 ರೂಮುಗಳನ್ನು ಸರ್ಕಾರದಿಂದ ಏನು ಅಳವಡಿಸಿದ್ದಾರೆ, ಅದನ್ನು ನಾನು ನೋಡಿದ್ದೇನೆ. ಅಲ್ಲಿರತಕ್ಕಂತಹ ಜಾಗದ ಬಗ್ಗೆ ಒಬ್ಬ ಖಾಸಗಿ ವ್ಯಕ್ತಿ ಶ್ರೀ ಟಿ. ನರಸಿಂಹನ್ ಎನ್ನುವವರು ಒಂದು ರಿಟ್ ಅರ್ಜಿಯನ್ನು ಸಲ್ಲಿಸುತ್ತಾನೆ. ಈ ವಿಷಯದಲ್ಲಿ ಸರ್ಕಾರ ಏನು ಮಾಡುತ್ತಿದೆ, ಕಾನೂನು ಇಲಾಖೆ ಏನು ಮಾಡುತ್ತಿದೆ, ಈ ಸಮಸ್ಯೆಯನ್ನು ಬಗೆಹರಿಸುವುದಕ್ಕೆ ಎಷ್ಟು ವರ್ಷ ಬೇಕು? 2010 ರಿಂದ ಈ ಬಗ್ಗೆ ವಿವರಣೆಯನ್ನು ಕೊಟ್ಟಿರುವುದಿಲ್ಲ. ಈ ಬಗ್ಗೆ ನಾನು ಪ್ರಶ್ನೆ ಕೇಳಿದ್ದೇನೆ. ಆದರೆ, ಅಧಿಕಾರಿಗಳು ಬರೆದುಕೊಡುವ ಉತ್ತರವನ್ನು ಮಾತ್ರ ಕೊಡುತ್ತಿದ್ದಾರೆ. ಆ ಒಂದು ರಿಟ್ ಅರ್ಜಿಯಲ್ಲಿ ಏನು ವಿವರಣೆ ಇದೆ, ಅದು ಏತಕ್ಕೆ ಆಗುತ್ತಿಲ್ಲವೆನ್ನುವ ಬಗ್ಗೆ ಉತ್ತರ ನೀಡಬೇಕು. ಒಂದು ತಡೆಯಾಜ್ಞೆಯನ್ನು ತೆರವುಗೊಳಿಸುವುದಕ್ಕೆ ಹತ್ತು ವರ್ಷ ಬೇಕೇ?

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"**

**ಶ್ರೀ ವೈ.ಎ. ನಾರಾಯಣಸ್ವಾಮಿ:–** ಮಾನ್ಯ ಸಭಾಪತಿಯವರೇ, ಪ್ರಸ್ತುತ ಯಾರ ಸರ್ಕಾರ ಅಧಿಕಾರಿದಲ್ಲಿದೆ?

**ಶ್ರೀ ಟಿ.ಎ. ಶರವಣ:–** ಮಾನ್ಯ ಸಭಾಪತಿಯವರೇ, ನಮ್ಮದೇ ಸರ್ಕಾರ ಇರಲಿ. ಇದು ನ್ಯಾಯಕ್ಕೋಸ್ಕರ ಹೋರಾಟ.

**ಶ್ರೀ ರಾಜಶೇಖರ ಬಿ. ಪಾಟೀಲ:–** ಮಾನ್ಯ ಸಭಾಪತಿಯವರೇ, ಈ ವಿಷಯ ನ್ಯಾಯಾಲಯದಲ್ಲಿರುತ್ತದೆ. ನ್ಯಾಯಾಲಯದಲ್ಲಿರುವಂತಹ ವಿಷಯವನ್ನು ಸರ್ಕಾರ ಏನಾದರೂ decide ಮಾಡುವುದಕ್ಕಾಗುತ್ತದೆಯೇ?

**ಶ್ರೀ ಟಿ.ಎ. ಶರವಣ:–** ಮಾನ್ಯ ಸಭಾಪತಿಯವರೇ, ಒಂದು ನಿಮಿಷ. ನಾನು ನನ್ನ ಪ್ರಶ್ನೆಯನ್ನು ಮುಗಿಸಿಬಿಡುತ್ತೇನೆ. ನಂತರ ಮಾನ್ಯ ಸಚಿವರು ನನ್ನ ಪ್ರಶ್ನೆಗೆ ಉತ್ತರ ನೀಡಲಿ. ಈ ರಾಜ್ಯದಿಂದ ಕೋಟ್ಯಾಂತರ ಭಕ್ತಾದಿಗಳು ತಿರುಪತಿಗೆ ಹೋಗುತ್ತಾರೆ. ಹೆಣ್ಣುಮಕ್ಕಳು ಕೈಯಲ್ಲಿ ಸಣ್ಣ ಮಕ್ಕಳನ್ನು ಇಟ್ಟುಕೊಂಡು ಬೀದಿಯಲ್ಲಿ ಮಲಗಿರುತ್ತಾರೆ. ನಮ್ಮ ರಾಜ್ಯದಿಂದ ಚಿಕ್ಕದು ಒಂದು ಗೆಸ್ಟ್ ಹೌಸ್ ನ್ನು ಇಟ್ಟುಕೊಂಡಿದ್ದೇವೆ. ಅದರಲ್ಲಿ ಕರ್ನಾಟಕ ರಾಜ್ಯಕ್ಕೆ ಕೇವಲ 82 ಕೊಠಡಿಗಳಿವೆ. ಅಲ್ಲಿಗೆ ಹೋದರೆ 85 ಜನ ಅಧಿಕಾರಿಗಳು/ನೌಕರರುಗಳು ಕೆಲಸ ಮಾಡುತ್ತಿದ್ದಾರೆಂದು ಒಂದು ಪಟ್ಟಿ ಕೊಟ್ಟಿದ್ದಾರೆ. ಆದರೆ, ಅಲ್ಲಿ ಕೆಲಸ ಮಾಡುವಂತಹ 20 ಜನ ನೌಕರರನ್ನು ತೋರಿಸಲಿ. ಬೇಕಾದರೆ ಈ ಬಗ್ಗೆ ಒಮ್ಮೆ ಪರಿಶೀಲನೆ ಮಾಡಲಿ. ಸರ್ಕಾರ ಹೆಸರುಗಳನ್ನು ಕೊಟ್ಟಿದೆ. ಆದರೆ, ಅಲ್ಲಿ 20 ಜನ ನೌಕರರನ್ನು ತೋರಿಸಲಿ. ಒಬ್ಬ ನೌಕರನು ಸಹ ಫೋನ್ ಎತ್ತುವುದಿಲ್ಲ. ಯಾರಿಗೆ ಮಾತನಾಡಬೇಕು ನಾವು? ಪರ್ಮನೆಂಟ್ ಆಗಿ ಅಲ್ಲಿ ಒಬ್ಬ ಅಧಿಕಾರಿ ಇರುವುದಿಲ್ಲ. ಅಲ್ಲಿ ಒಬ್ಬ ಸ್ಪೆಷಲ್ ಆಫೀಸರ್ ಇರಬೇಕು, ಒಬ್ಬ ನೋಡಲ್ ಆಫೀಸರ್ ಇರಬೇಕು. ಆದರೆ, ಯಾವ ಆಫೀಸರ್‌ಗಳು ಇರುವುದಿಲ್ಲ. ಫೋನ್‌ಗಳನ್ನು ಸಹ ತೆಗೆಯುವುದಿಲ್ಲ. Reception counter ನಲ್ಲಿ 3 ಫೋನ್‌ಗಳನ್ನು ಮಾತ್ರ ಇಟ್ಟಿದ್ದಾರೆ. ಒಂದು ಫಿಂಗರ್ ಪ್ರಿಂಟ್‌ನ್ನು ಅಳವಡಿಸಿ, ಐ.ಡಿ. ಕಾರ್ಡ್ ಕೊಡಿ, ಅಲ್ಲಿ employees ಗೆ ಒಂದು ಐ.ಡಿ. ವ್ಯವಸ್ಥೆ ಇರತಕ್ಕಂತಹ ಬೋರ್ಡ್‌ನ್ನು ಅಳವಡಿಸಬೇಕೆಂದು ನಾನು ಹಿಂದಿನ ಸಚಿವರಿಗೆ ಹೇಳಿದ್ದೇನೆ. ಆನ್‌ಲೈನ್ ಎಂದು ಮಾಡುತ್ತಾರೆ. ಆನ್‌ಲೈನ್‌ನಲ್ಲಿ ಎಷ್ಟು ಜನಕ್ಕೆ ರೂಮುಗಳನ್ನು ಕೊಡುತ್ತಿದ್ದಾರೆ? ಬೇರೆ ಬೇರೆ ರಾಜ್ಯಗಳಿಂದ ಬರತಕ್ಕಂತಹವರಿಗೆ ರೂಮುಗಳನ್ನು ಬಾಡಿಗೆ ಮೂಲಕ ಮಾರಾಟ ಮಾಡುತ್ತಿದ್ದಾರೆ. ಮಾಧ್ಯಮದವರು ನನಗೆ ಫೋನ್ ಮಾಡಿ ನನಗೆ ಒಂದು ರೂಮು ಕೊಡಿಸಿ ನನಗೆ ಸಿಗುತ್ತಿಲ್ಲವೆಂದು ಹೇಳುತ್ತಾರೆ. ಬೇರೆಯವರೆಲ್ಲಾ ಫೋನ್ ಮಾಡುತ್ತಾರೆ. ನಾವು ಫೋನ್ ಮಾಡಿದರೂ ಸಹ ಫೋನ್ ತೆಗೆಯುವುದಿಲ್ಲ.

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಅಧಿಕಾರಿ/ನೌಕರರುಗಳ ಪರ್ಸನಲ್ ಮೊಬೈಲ್ ನಂಬರನ್ನು ಯಾರಿಂದಲೋ ಪಡೆದು ಫೋನ್ ಮಾಡಿದರೂ ಸಹ ಫೋನ್ ತೆಗೆಯುವುದಿಲ್ಲ. ಯಾರಿಗೆ ಹೇಳಬೇಕು ಈ ಸಮಸ್ಯೆಯನ್ನು? ಬಹುಶಃ ನನ್ನ ಕಳಕಳಿಯನ್ನು ಮಾನ್ಯ ಸಚಿವರು ಅರ್ಥ ಮಾಡಿಕೊಳ್ಳಲಿ. ಇವೊತ್ತಿನ ದಿವಸ ಭಗವಂತನ ಆಶೀರ್ವಾದದಿಂದ ಬಂದಂತಹ ಸರ್ಕಾರ ಇದು. ಇವೊತ್ತಿನ ದಿವಸ ಆ ಸಮಸ್ಯೆಯನ್ನು ತಮ್ಮ ನೇತೃತ್ವದಲ್ಲಿ ಇತ್ಯರ್ಥ ಮಾಡಬೇಕೆಂದು ತಮ್ಮಲ್ಲಿ ಪ್ರಾರ್ಥನೆ ಮಾಡುತ್ತಿದ್ದೇನೆ.

**(ಗೊಂದಲ)**

**ಶ್ರೀ ರಘುನಾಥ ರಾವ್ ಮಲ್ಕಾಪೂರೆ:-** ಮಾನ್ಯ ಸಭಾಪತಿಯವರೇ, ಪ್ರಜಾತಂತ್ರ ವ್ಯವಸ್ಥೆಯಲ್ಲಿ ಜನರಿಗೋಸ್ಕರ ಸರ್ಕಾರ ಇರುವುದು. ದೇವರಿಗೋಸ್ಕರ ಅಲ್ಲ. **(ಗೊಂದಲ)** ಮಾನ್ಯ ಸದಸ್ಯರು ತಪ್ಪು ಹೇಳುತ್ತಿದ್ದಾರೆ.

**(ಗೊಂದಲ)**

**ಶ್ರೀ ಟಿ.ಎ. ಶರವಣ:-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಒಂದು ನಿಮಿಷ ಕುಳಿತುಕೊಳ್ಳಲಿ. ಅವರಿಗೆ ಏತಕ್ಕೆ ಅಷ್ಟೊಂದು ಕೋಪ?

**ಶ್ರೀ ಎನ್. ರವಿಕುಮಾರ್:-** ಮಾನ್ಯ ಸಭಾಪತಿಯವರೇ, ಶ್ರೀ ರಾಹುಲ್‌ಗಾಂಧಿಯವರ ಆರ್ಶೀವಾದದಿಂದ ಬಂದಿದೆ.

**ಶ್ರೀ ಟಿ.ಎ. ಶರವಣ:-** ಮಾನ್ಯ ಸಭಾಪತಿಯವರೇ, ಯಾರ ಆರ್ಶೀವಾದ ಎಂಬುದು ಗೊತ್ತಿದೆ. ಜನ ಬದಲಾವಣೆ ಬಯಸಿ ನಿನ್ನೆಯ ದಿವಸ ಏನು ತೀರ್ಮಾನ ಕೊಟ್ಟಿದ್ದಾರೆ, ಅದು ಕೂಡ ಗೊತ್ತಿದೆ. ಮಾನ್ಯ ಸದಸ್ಯರು ಈ ವಿಚಾರದಲ್ಲಿ ರಾಜಕೀಯಕ್ಕೆ ಬರುವುದು ಬೇಡ.

**(ಗೊಂದಲ)**

**ಶ್ರೀ ರಘುನಾಥ ರಾವ್ ಮಲ್ಕಾಪೂರೆ:-** ಮಾನ್ಯ ಸಭಾಪತಿಯವರೇ, ಹಾಗಾದರೆ, ಮಾನ್ಯ ಶರವಣರವರು ಎಲ್ಲರಿಗೂ ಒಂದು ಬಂಗಾರದ ಅಂಗಡಿ ಕೊಡಲಿ ಎಂದು ಭಗವಂತನಿಗೆ ಹೇಳಲಿ.

**ಶ್ರೀ ಟಿ.ಎ. ಶರವಣ:-** ಮಾನ್ಯ ಸಭಾಪತಿಯವರೇ, ಮಾನ್ಯ ರಘುನಾಥ ರಾವ್ ಮಲ್ಕಾಪೂರೆಯವರು ಒಂದು ಶುಗರ್ ಫ್ಯಾಕ್ಟರಿ ಕೊಡಲಿ. ನಾನು ಹೇಳುವುದೇನೆಂದರೆ, ಇವೊತ್ತಿನ ದಿವಸ ಕಾನೂನು ಇಲಾಖೆ ಇದೆ. ಸರ್ಕಾರ ಯಾವ ವಕೀಲರನ್ನು ನೇಮಕ ಮಾಡಿದ್ದಾರೆ, ಅವರು ಸರಿಯಾಗಿ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ನ್ಯಾಯಾಲಯದಲ್ಲಿ ಪ್ರಕರಣದ ಹಿಯರಿಂಗ್‌ನ್ನು ಅಟೆಂಡ್ ಮಾಡುತ್ತಿಲ್ಲ. ಒಂದು ತಡೆಯಾಜ್ಞೆಯನ್ನು ತೆರವು ಮಾಡುವುದಕ್ಕೆ ಹತ್ತು ವರ್ಷ ಬೇಕೇ? 2008 ರಿಂದ 2018 ಆಗಿದೆ. ಇದಕ್ಕೆ ಯಾರು ಕಾರಣಕರ್ತರು? ಎರಡನೆಯದಾಗಿ, ಅಲ್ಲಿ ವಸತಿಗೆ ನಮ್ಮದೇ ಜಾಗ, ಮಹಾರಾಜರು ದಾನ ಕೊಟ್ಟಿರತಕ್ಕಂಥದ್ದು. ಇದರಿಂದಾಗಿ, ನಮಗೆ ಮೋಸ ಆಗುತ್ತಿದೆ. ಅದರ ಬಗ್ಗೆ ಟಿ.ಟಿ.ಡಿ. ಅಧಿಕಾರಿಗಳ ಜೊತೆ ಸಭೆಯನ್ನು ನಾವು ಮತ್ತು ಸರ್ಕಾರದವರು ಮಾಡಿದ್ದೇವೆ. ಶ್ರೀ ಚಂದ್ರಬಾಬು ನಾಯ್ಡು ಆಂಧ್ರಪ್ರದೇಶದ ಮುಖ್ಯಮಂತ್ರಿಗಳು ನಮ್ಮ ರಾಜ್ಯಕ್ಕೆ ಬಂದಾಗ ಕೂಡ, ನಾನು ನಮ್ಮ ಮುಖ್ಯಮಂತ್ರಿಗಳಿಗೆ ಹೇಳಿದ್ದೇನೆ. ಆಗ ಅವರು ಬನ್ನಿ ಮಾತಾಡೋಣವೆಂದು ಹೇಳಿದ್ದರು. ನಮ್ಮ ರಾಜ್ಯದಿಂದ ಮಾನ್ಯ ಸಚಿವರ ನೇತೃತ್ವದಲ್ಲಿ ಯಾರಾದರೂ ಹೋಗಬೇಕಲ್ಲವೇ? ಒಂದು ಕಡೆ via media ಮಾತನಾಡಬೇಕು, ಇನ್ನೊಂದು ಕಡೆ ಕಾನೂನು ಹೋರಾಟ ಮಾಡಬೇಕು. ಇವೆರಡರಲ್ಲಿ ಇತ್ಯರ್ಥವಾಗಬೇಕು. ಇದಕ್ಕೋಸ್ಕರ ನಾನು ಏನು ಹೇಳುತ್ತೇನೆಂದರೆ, ಯಾವುದೇ ಸರ್ಕಾರ ಬರಲಿ, ಇದಕ್ಕಾಗಿ ಒಂದು ಸಮಿತಿಯನ್ನು ರಚನೆ ಮಾಡಲಿ.

**ಶ್ರೀ ಕೆ. ಗೋವಿಂದರಾಜ್:–** ಮಾನ್ಯ ಸಭಾಪತಿಯವರೇ, ಈ ಬಗ್ಗೆ ಒಂದು Enquiry Committee ರಚಿಸಲು ಆರ್ಡರ್ ಮಾಡಲಿ.

**ಶ್ರೀ ಟಿ.ಎ. ಶರವಣ:–** ಮಾನ್ಯ ಸಭಾಪತಿಯವರೇ, ತಿರುಮಲ ತಿರುಪತಿಯ ಅಭಿವೃದ್ಧಿ ಪ್ರಾಧಿಕಾರ ಮಾಡಲಿ ಅಥವಾ ಒಂದು ಪ್ರಾಧಿಕಾರವೆಂದು ಮಾಡುತ್ತಾರೋ ಅದನ್ನು ಮಾಡಲಿ. ಒಳ್ಳೆಯ ಕೆಲಸವಾಗುವುದನ್ನು ಎಲ್ಲರೂ ಪ್ರಶಂಸೆ ಮಾಡುತ್ತಾರೆ. ಮಾನ್ಯ ಸಚಿವರು ಕೂಡ ಪ್ರಾಮಾಣಿಕರಿದ್ದಾರೆ. ಈ ವಿಷಯವನ್ನು ಇತ್ಯರ್ಥ ಮಾಡಬೇಕಾದರೆ ಮಾನ್ಯ ಸಚಿವರು ಹೆಚ್ಚು ಆಸಕ್ತಿ ವಹಿಸಬೇಕು. ಸರ್ಕಾರ ಈ ವಿಷಯವನ್ನು ಗಂಭೀರವಾಗಿ ತೆಗೆದುಕೊಳ್ಳಬೇಕು. ಇಲ್ಲವಾದರೆ, ಇನ್ನೂ 10 ವರ್ಷವಾದರೂ ಏನೂ ಆಗುವುದಿಲ್ಲ. ಅಲ್ಲಿಯವರೆಗೂ ಸಹ ಇದು ಆಂಧ್ರಪ್ರದೇಶದವರ ಕೈಯಲ್ಲಿ ಇರುತ್ತದೆ. ನಮ್ಮ ಕನ್ನಡಿಗರಿಗೆ ನ್ಯಾಯ ಸಿಗುವುದಿಲ್ಲ. ಅದಕೋಸ್ಕರ ಇದರ ಬಗ್ಗೆ ಮುತುವರ್ಜಿ ವಹಿಸಿ ತಕ್ಷಣ ಇದಕ್ಕೆ ಒಂದು ಸಮಿತಿ ರಚನೆ ಮಾಡಬೇಕು ಅಥವಾ ಪ್ರಾಧಿಕಾರ ಘೋಷಣೆ ಮಾಡಬೇಕೆಂದು ನಾನು ಕೇಳಿಕೊಳ್ಳುತ್ತಿದ್ದೇನೆ.

ಎರಡನೆಯದಾಗಿ, ನೌಕರರಿಗೆ ಬಿಸಿ ಮುಟ್ಟಿಸುವಂತಹ ಕೆಲಸ ಮಾಡಬೇಕು. ಮಾನ್ಯ ಸಚಿವರು ಸಡನ್ ಆಗಿ ಹೋಗಿ ಒಂದು ತಪಾಸಣೆ ನಡೆಸಿ ಎಷ್ಟು ಜನ ನೌಕರರಿದ್ದಾರೆಂದು ನೋಡಲಿ. ಅಲ್ಲಿ Reception counter ನಲ್ಲಿ ಕಾಯ್ದುಕೊಂಡಿದ್ದರೂ ಕೂಡ ರೂಮುಗಳನ್ನು ಕೊಡುವುದಿಲ್ಲ. ಈ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಬಗ್ಗೆ ಹೆಣ್ಣುಮಕ್ಕಳು ಅಲ್ಲಿ ರೂಮುಗಳೇ ಸಿಗುವುದಿಲ್ಲವೆಂದು ಅಳುತ್ತಾ ಫೋನ್ ಮಾಡುತ್ತಾರೆ. ಇದಕ್ಕೆ ಏನು ಮಾಡಬೇಕೋ ಅದನ್ನು ಸರ್ಕಾರ ಮಾಡಲಿ.

**ಸಭಾಪತಿಯವರು:-** ಮಾನ್ಯ ಸಚಿವರೇ ತಾವು ಉತ್ತರ ನೀಡಿ.

**ಶ್ರೀ ರಘುನಾಥ ರಾವ್ ಮಲ್ಕಾಪೂರೆ:-** ಮಾನ್ಯ ಸಭಾಪತಿಯವರೇ, point of order.

**ಶ್ರೀ ರಾಜಶೇಖರ ಬಿ. ಪಾಟೀಲ:-** ಮಾನ್ಯ ಮಲ್ಕಾಪೂರೆಯವರೇ, ದಯವಿಟ್ಟು ಒಂದು ನಿಮಿಷ. ನಾನು ನನ್ನ ಉತ್ತರವನ್ನು ಹೇಳುತ್ತೇನೆ. ತಾವು ನಂತರ ಮಾತನಾಡಿ.

(ಮುಂದುವರೆದಿದೆ...)

(390) 4.00 12.12.2018 ವೈಎಲ್-ಬಿಎನ್ಎಸ್ (ಸಭಾಪತಿಯವರ ಉಪಸ್ಥಿತಿ)

**ಶ್ರೀ ರಘುನಾಥ್ ರಾವ್ ಮಲ್ಕಾಪೂರೆ(ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಈ ಪ್ರಶ್ನೆಯು ಯಾರಿಗೆ ಸಂಬಂಧಪಟ್ಟಿರುತ್ತದೆ? ಪ್ರಶ್ನೆಯನ್ನು ಕೇಳಬೇಕಾಗಿರುವುದು ಯಾರು? ಯಾರದೋ ಪ್ರಶ್ನೆಗೆ ಯಾರನ್ನೋ ಪ್ರಶ್ನೆ ಕೇಳುವುದಕ್ಕೆ ಅನುಮತಿ ನೀಡಿದ್ದೀರಿ.

**ಶ್ರೀ ಟಿ.ಎ.ಶರವಣ(ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಮಾನ್ಯ ಆರ್.ಚೌಡರೆಡ್ಡಿ ತೂಪಲ್ಲಿಯವರ ಪರವಾಗಿ ನಾನು ಪ್ರಶ್ನೆಯನ್ನು ಕೇಳುವುದಕ್ಕೆ ಈಗಾಗಲೇ ಪತ್ರವನ್ನು ಒದಗಿಸಿದ್ದೇನೆ. ಯಾರದೋ ಪ್ರಶ್ನೆಗೆ ಉತ್ತರವನ್ನು ಕೇಳುವುದಕ್ಕೆ ನಾವು ಸದನಕ್ಕೆ ಬಂದಿರುವುದಿಲ್ಲ. ಮಾನ್ಯ ಆರ್.ಚೌಡರೆಡ್ಡಿ ತೂಪಲ್ಲಿಯವರಿಂದ ಪತ್ರ ಬಂದ ಮೇಲೆಯೇ ಪ್ರಶ್ನೆಯನ್ನು ಕೇಳುವುದಕ್ಕೆ ತಾವು ಅನುಮತಿಯನ್ನು ನೀಡಿದ್ದೀರಿ.

**ಸಭಾಪತಿಯವರು:-** ಆಯಿತು. ಎಲ್ಲರೂ ಕುಳಿತುಕೊಳ್ಳಿ. ಮಾನ್ಯ ಸಚಿವರು ಉತ್ತರವನ್ನು ನೀಡುತ್ತಾರೆ.

**ಶ್ರೀ ರಾಜಶೇಖರ ಬಿ.ಪಾಟೀಲ:-** ಮಾನ್ಯ ಸಭಾಪತಿಯವರೇ, ಈಗಾಗಲೇ ಮಾನ್ಯ ಸದಸ್ಯರು ಹೇಳಿದ ಹಾಗೆ ಕಳೆದ 10 ವರ್ಷಗಳಿಂದ ನ್ಯಾಯಾಲಯದಲ್ಲಿ ನಡೆಯುತ್ತಿರುವ ಪ್ರಕರಣದ ಬಗ್ಗೆ ಹೇಳಿದ್ದಾರೆ. ನಾನು ಸಚಿವನಾಗಿ ಆಯ್ಕೆಯಾಗಿ ಬಂದ ಮೇಲೆ ಕಳೆದ 6 ತಿಂಗಳಲ್ಲಿ ಅದರ ಬಗ್ಗೆ ಅನೇಕ ಸಲ ನಮ್ಮ ವಕೀಲರು ಮತ್ತು ಹಿಂದೆ ಇದ್ದಂತಹ ಮಾಜಿ ಮುಖ್ಯಮಂತ್ರಿಗಳಾದ ಶ್ರೀ ಸಿದ್ದರಾಮಯ್ಯನವರು

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಕೂಡ ಮಾನ್ಯ ಮುಖ್ಯಮಂತ್ರಿಯವರ ಹತ್ತಿರ ಈ ವಿಚಾರದ ಬಗ್ಗೆ ಚರ್ಚೆ ಮಾಡಿ ಆದಷ್ಟು ಬೇಗ ಇತ್ಯರ್ಥಪಡಿಸುವ ಕೆಲಸವನ್ನು ಮಾಡುತ್ತಿದ್ದೇವೆ. ಮಾನ್ಯ ಮುಖ್ಯಮಂತ್ರಿಗಳಾದ ಶ್ರೀ ಹೆಚ್.ಡಿ.ಕುಮಾರಸ್ವಾಮಿಯವರು ಸಹ ತಿರುಪತಿಗೆ ಭೇಟಿ ನೀಡಿದಾಗ ಟಿ.ಟಿ.ಡಿ. ಅಧಿಕಾರಿಗಳ ಜೊತೆ ಹಾಗೂ ಸೀಮಾಂಧ್ರ ರಾಜ್ಯದ ಮುಖ್ಯಮಂತ್ರಿಗಳಾದ ಶ್ರೀ ಚಂದ್ರಬಾಬು ನಾಯ್ಡುರವರ ಜೊತೆ ಮಾತನಾಡಿದ್ದಾರೆ. ನಾವೂ ಸಹ ಆದಷ್ಟು ಬೇಗ ಇತ್ಯರ್ಥಪಡಿಸುವ ಪ್ರಯತ್ನವನ್ನು ಮಾಡುತ್ತಿದ್ದೇವೆ. ಈಗಾಗಲೇ ಮಾನ್ಯ ಶಾಸಕರು ಹೇಳಿದ ಹಾಗೆ ಯಾರು ವಕೀಲರಿದ್ದಾರೆ ಅದರ ಬಗ್ಗೆಯೂ ಪರಿಶೀಲನೆ ಮಾಡುತ್ತೇನೆ. ಒಂದು ವೇಳೆ ಏನಾದರೂ ವಕೀಲರನ್ನು ಬದಲಾವಣೆ ಮಾಡಬೇಕಾದರೆ ಬದಲಾವಣೆ ಮಾಡುತ್ತೇವೆ. ಬಹಳಷ್ಟು ಭಕ್ತಾಧಿಗಳು ತಿರುಪತಿ ತಿರುಮಲ ದೇವಸ್ಥಾನಕ್ಕೆ ಹೋಗುತ್ತಿದ್ದು, ಅವರಿಗೆ ಸರಿಯಾಗಿ ವ್ಯವಸ್ಥೆ ಆಗುತ್ತಿಲ್ಲ. ಸಾವಿರಾರು ಜನರಿಗೆ ಸರಿಯಾಗಿ ಕೊಠಡಿ ಸಿಗುತ್ತಿಲ್ಲ ಎನ್ನುವ ವಿಚಾರವನ್ನು ಮಾನ್ಯ ಶಾಸಕರು ನಮ್ಮ ಗಮನಕ್ಕೆ ತಂದಿದ್ದಾರೆ. ನಾನೂ ಸಹ ಸಚಿವನಾದ ಮೇಲೆ ತಿರುಪತಿ ತಿರುಮಲ ದೇವಸ್ಥಾನಕ್ಕೆ ಭೇಟಿ ನೀಡಿ, ಅಲ್ಲಿ ಏನು ಬದಲಾವಣೆ ಮಾಡಬೇಕು, ಆ ಬದಲಾವಣೆಯನ್ನು ಮಾಡುವಂಥ ಪ್ರಯತ್ನವನ್ನು ಮಾಡುತ್ತೇನೆ.

**ಶ್ರೀ ಟಿ.ಎ.ಶರವಣ:-** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಏನು ಬದಲಾವಣೆ ತರಬೇಕೋ ಆ ಒಂದು ಬದಲಾವಣೆಗೆ ಪ್ರಾಮಾಣಿಕ ಪ್ರಯತ್ನವನ್ನು ಮಾಡಿ ತರಲಿ. ಆದರೆ, ಅದಕ್ಕೂ ಮೊದಲು ಯಾರು ವಕೀಲರಿದ್ದಾರೆ ಅವರನ್ನು ಕರೆಸಿ, ಇಲ್ಲವೆಂದರೆ ವಕೀಲರನ್ನು ಬದಲಾವಣೆ ಮಾಡಬೇಕೋ ಅದನ್ನಾದರೂ ನೋಡಲಿ.

**ಶ್ರೀ ರಾಜಶೇಖರ ಬಿ.ಪಾಟೀಲ:-** ಮಾನ್ಯ ಸಭಾಪತಿಯವರೇ, ಈಗಾಗಲೇ ಹೇಳಿದ್ದೇನೆ ಅಲ್ಲವೇ?

**ಶ್ರೀ ಟಿ.ಎ.ಶರವಣ:-** ಮಾನ್ಯ ಸಭಾಪತಿಯವರೇ, ಹಾಗೆಯೇ ಒಂದು ಸಮಿತಿಯನ್ನು ರಚನೆ ಮಾಡಲಿ.

**ಶ್ರೀ ರಾಜಶೇಖರ ಬಿ.ಪಾಟೀಲ:-** ಮಾನ್ಯ ಸಭಾಪತಿಯವರೇ, ಸಮಿತಿಯನ್ನು ರಚನೆ ಮಾಡುವುದಕ್ಕೆ....

**ಶ್ರೀ ಟಿ.ಎ.ಶರವಣ:-** ಮಾನ್ಯ ಸಭಾಪತಿಯವರೇ, ದಯವಿಟ್ಟು ಮಾನ್ಯ ಸಚಿವರು ನಾನು ಮಾತನಾಡುತ್ತಿರುವುದನ್ನು ಮೊದಲು ಕೇಳಬೇಕು. ಇಲ್ಲದಿದ್ದರೆ ಇನ್ನೂ 10 ವರ್ಷಗಳು ಕಳೆದರೂ ಈ ವ್ಯವಸ್ಥೆ ಹೀಗೆ ಇರುತ್ತದೆ. ಸಮಿತಿಯನ್ನು ರಚನೆ ಮಾಡುವುದಕ್ಕೆ ಇರುವ ಕಷ್ಟವಾದರೂ ಏನು? ಇಲ್ಲಿರುವ ಸದಸ್ಯರುಗಳೆಲ್ಲಾ ಸೇರಿ ಒಂದು ತಂಡವನ್ನು ರಚನೆ ಮಾಡಿಕೊಂಡು, ಸಮಿತಿಯ ಸದಸ್ಯರನ್ನಾಗಿ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಯಾರನ್ನಾದರೂ ಆಯ್ಕೆ ಮಾಡಿ, ಅದು ನಿಮಗೆ ಬಿಟ್ಟ ವಿಚಾರ. ಇದು ತುರ್ತಾಗಿ ಆಗಬೇಕೆಂದರೆ ಹೋರಾಟ ಮಾಡಲೇಬೇಕಾಗಿದೆ.

**ಶ್ರೀ ರಾಜಶೇಖರ ಬಿ.ಪಾಟೀಲ:-** ಮಾನ್ಯ ಸಭಾಪತಿಯವರೇ, ನಾನು ಇದರ ಬಗ್ಗೆ ಪರಿಶೀಲನೆಯನ್ನು ನಡೆಸಿ ಹೇಳುತ್ತೇನೆ. ಈಗಾಗಲೇ ನನ್ನ ಜೊತೆ ಇದು ಯಾವಾಗ ಆಗಬೇಕೆನ್ನುವ ವಿಚಾರವನ್ನು ಖಾಸಗಿಯಾಗಿ ಸಹ ಮಾತನಾಡಿದ್ದಾರೆ. ಇದರ ಬಗ್ಗೆ ಏನಾಗುತ್ತಿದೆ ಎನ್ನುವುದರ ಬಗ್ಗೆ ನಮಗೆ ನಿಮ್ಮ ಕಳಕಳಿ ಏನೆಂಬುದು ಅರ್ಥವಾಗುತ್ತಿದೆ. ಈ ವಿಚಾರವನ್ನು ಮಾನ್ಯ ಮುಖ್ಯಮಂತ್ರಿಗಳ ಗಮನಕ್ಕೂ ತಂದಿದ್ದೇನೆ. ಈ ವಿಚಾರವಾಗಿಯೇ ನಾಳೆ ಅಥವಾ ನಾಡಿದ್ದು ಸಭೆಯನ್ನು ನಡೆಸಲಾಗುತ್ತಿದೆ. ಅದರ ಸಲುವಾಗಿ ಆದಷ್ಟು ಬೇಗನೆ ತಿರುಪತಿ ತಿರುಮಲ ದೇವಸ್ಥಾನಕ್ಕೆ ಬರುವ ಭಕ್ತಾದಿಗಳಿಗೆ ಏನು ವ್ಯವಸ್ಥೆ ಮಾಡಬೇಕು, ಅದಕ್ಕೆ ಪ್ರಾಮಾಣಿಕ ಪ್ರಯತ್ನವನ್ನು ಮಾಡುತ್ತೇವೆ.

**ಶ್ರೀ ಟಿ.ಎ.ಶರವಣ:-** ಮಾನ್ಯ ಸಭಾಪತಿಯವರೇ, ಮಾಡಲಿ. ಆದರೂ ಮಾನ್ಯ ಸಚಿವರು ಸಮಿತಿ ರಚನೆ ಮಾಡುತ್ತೇವೆ ಎಂದು ಹೇಳಲಿ, ನಮಗೆ ಅಷ್ಟೇ ಸಾಕು.

**ಶ್ರೀ ರಾಜಶೇಖರ ಬಿ.ಪಾಟೀಲ:-** ಮಾನ್ಯ ಸಭಾಪತಿಯವರೇ, ನಾಳೆ ಅಥವಾ ನಾಡಿದ್ದು ಸಭೆಯನ್ನು ನಡೆಸಲಾಗುತ್ತಿದೆ ಎಂದು ಹೇಳುತ್ತಿದ್ದೇನೆ ಅಲ್ಲವೇ? ಈ ವಿಚಾರದ ಬಗ್ಗೆ ಪರಿಶೀಲನೆ ಮಾಡಿ ತಿಳಿಸುತ್ತೇನೆ.

**ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ 360**
**(ಉತ್ತರವನ್ನು ಲಗತ್ತಿಸಲಾಗಿದೆ)**

**ಶ್ರೀ ಕೆ.ಗೋವಿಂದರಾಜ್:-** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಉತ್ತರವನ್ನು ಒದಗಿಸಿದ್ದಾರೆ. ಇದು ಬಹಳ ಸೂಕ್ಷ್ಮವಾದಂಥ ಪ್ರಶ್ನೆಯಾಗಿದೆ. ಆದರೆ, ಇದರಲ್ಲಿ ಬಹಳಷ್ಟು ನ್ಯೂನತೆಗಳಿವೆ. ಕಾರ್ಮಿಕ ಕಲ್ಯಾಣ ನಿಧಿಯಲ್ಲಿ 5,500 ಕೋಟಿ ರೂಪಾಯಿಗಳಷ್ಟು ಅನುದಾನ ಇದೆ. ಇದರಲ್ಲಿ ಕೆನರಾ ಬ್ಯಾಂಕ್‌ನವರು 1,000 ಕೋಟಿ ರೂಪಾಯಿಯನ್ನು ಬ್ಯಾಂಕಿಗೆ ವರ್ಗಾಯಿಸಿದ್ದು, ಅದಕ್ಕೆ ಆದಾಯ ತೆರಿಗೆ ಕಛೇರಿಯಿಂದ ನೋಟೀಸ್ ಬರುತ್ತದೆ. ಆ ನೋಟೀಸ್‌ಗೆ ಇಲಾಖೆಯಿಂದ ಉತ್ತರವನ್ನು ಒದಗಿಸುವುದಿಲ್ಲ. ಎರಡನೆಯ ನೋಟೀಸ್ ನೀಡುತ್ತಾರೆ, ಅದಕ್ಕೂ ಇಲಾಖೆಯಿಂದ ಉತ್ತರವನ್ನು ಒದಗಿಸುವುದಿಲ್ಲ. ಆದಾಯ ತೆರಿಗೆ ಇಲಾಖೆಯವರು ಬ್ಯಾಂಕಿಗೆ ನೇರವಾಗಿ ಪತ್ರ ಬರೆದು 413.08 ಕೋಟಿ ರೂಪಾಯಿಗಳಷ್ಟು ಸುಂಕವನ್ನು ನೇರವಾಗಿ ಕಟ್ಟಿಸಿಕೊಳ್ಳುತ್ತಾರೆ. ಇದು ಯಾರ ಹಣ? ಕಾರ್ಮಿಕರ ಹಣವಾಗಿದೆ. ಇದರಲ್ಲಿ ಕಾರ್ಮಿಕರಿಗೆ ಏನು ಕೆಲಸಗಳಾಗಬೇಕು. ಆ ಕೆಲಸಗಳು ಆಗುತ್ತಿಲ್ಲ. ಮಾನ್ಯ

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಸಚಿವರು ಒದಗಿಸಿರುವ ಉತ್ತರದಲ್ಲಿ 15 ಯೋಜನೆಗಳಿವೆ ಎಂದು ಒಂದು ಪಟ್ಟಿಯನ್ನು ನೀಡಿದ್ದಾರೆ. ಈ 15 ಯೋಜನೆಗಳಲ್ಲಿ ಇವತ್ತಿನವರೆಗೂ ಯಾವ ಕಾರ್ಮಿಕರಿಗೂ ಯಾವ ರೀತಿಯ ಯೋಜನೆಗಳಿವೆ ಎಂಬುದು ಗೊತ್ತಿಲ್ಲ. ಇದರ ಬಗ್ಗೆ ಪ್ರಚಾರವೂ ಆಗಿಲ್ಲ. ನನ್ನ ಸಲಹೆಯೇನೆಂದರೆ, ಈ ಯೋಜನೆಗಳು ಇರುವುದನ್ನು ಕಾರ್ಮಿಕರ ಗಮನಕ್ಕೆ ತರಬೇಕು ಮತ್ತು ಕಾರ್ಮಿಕರ ಕಲ್ಯಾಣ ನಿಧಿಯಿಂದ ಕಾರ್ಮಿಕರಿಗೆ 4000 ಮನೆಗಳನ್ನು ನಿರ್ಮಿಸುವ ಯೋಜನೆ ಇದೆ ಎಂಬುದು ಪತ್ರಿಕೆಯಲ್ಲಿ ವರದಿಯಾಗಿದೆ. ಆದರೆ, ಮಾನ್ಯ ಸಚಿವರ ಉತ್ತರದಲ್ಲಿ ಕಾರ್ಮಿಕರ ಕಲ್ಯಾಣ ನಿಧಿಯಿಂದ ಕಾರ್ಮಿಕರಿಗೆ 4000 ಮನೆಗಳನ್ನು ನಿರ್ಮಿಸುವ ಯೋಜನೆ ಮಂಡಳಿಯಲ್ಲಿ ಇರುವುದಿಲ್ಲ. ಗರಿಷ್ಠ ರೂ.2.00 ಲಕ್ಷಗಳ ರೂಪಾಯಿಗಳನ್ನು ಒಬ್ಬ ಕಾರ್ಮಿಕ ಮನೆ ಕಟ್ಟಲು ಬೇರೆ ಬೇರೆ ವಸತಿ ಯೋಜನೆಯಡಿಯಲ್ಲಿ ನೀಡುತ್ತೇವೆ ಎಂದು ಉತ್ತರ ನೀಡಿದ್ದಾರೆ. ಆದರೆ, ಯಾವ ರೀತಿ 413.08 ಕೋಟಿ ರೂಪಾಯಿ ವರ್ಗಾವಣೆಯಾಗಿದೆ ಯಾರು ತಪ್ಪಿತಸ್ಥ ಅಧಿಕಾರಿಗಳಿದ್ದಾರೆ ಅಂಥವರನ್ನು ಕೂಡಲೇ ಅಮಾನತ್ತುಗೊಳಿಸಬೇಕೆಂದು ಒತ್ತಾಯ ಮಾಡುತ್ತೇನೆ.

**ಶ್ರೀ ವೆಂಕಟರಮಣಪ್ಪ:-** ಮಾನ್ಯ ಸಭಾಪತಿಯವರೇ, ಆದಾಯ ತೆರಿಗೆ ಇಲಾಖೆಯು ಕರ್ನಾಟಕ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿಗೆ ಸಂಗ್ರಹವಾಗಿದ್ದ ವಾರ್ಷಿಕ ಕಲ್ಯಾಣ ಸುಂಕ ರೂ.413.08 ಕೋಟಿ ಮೊತ್ತವನ್ನು ಆದಾಯ ತೆರಿಗೆಯೆಂದು ತಪ್ಪಾಗಿ ಕ್ರಯಿಸಿರುವುದು ಸರ್ಕಾರದ ಗಮನಕ್ಕೆ ಬಂದಿರುತ್ತದೆ.

**ಶ್ರೀ ಕೆ.ಗೋವಿಂದರಾಜ್:-** ಮಾನ್ಯ ಸಭಾಪತಿಯವರೇ, ನನ್ನ ಪ್ರಕಾರ ಹೇಳುವುದಾದರೆ, ಬಹುಶಃ ಈ ವಿಚಾರ ಸಚಿವರ ಗಮನಕ್ಕೆ ಬಂದಿರುವುದಿಲ್ಲ.

**ಶ್ರೀ ವೆಂಕಟರಮಣಪ್ಪ:-** ಮಾನ್ಯ ಸಭಾಪತಿಯವರೇ, ಗಮನಕ್ಕೆ ಬಂದಿದೆ. ಆದಾಗ್ಯೂ ಮಂಡಳಿಯು ಕೂಡಲೇ ಸೂಕ್ತ ಪ್ರಾಧಿಕಾರಕ್ಕೆ ಅಪೀಲು ಸಲ್ಲಿಸಿ ಸದರಿ ಮೊತ್ತವನ್ನು ವಾಪಸ್ಸು ಪಡೆಯಲು ಕಾನೂನು ಕ್ರಮ ಕೈಗೊಂಡಿರುವುದರಿಂದ ಮಂಡಳಿಗೆ ನಷ್ಟ ಉಂಟಾಗಿರುವುದಿಲ್ಲ. ನಾವು ಅದನ್ನು ವಾಪಸ್ಸು ತರುವುದಕ್ಕೆ ವಕೀಲರನ್ನು ನೇಮಿಸಿದ್ದೇವೆ, ಅಪೀಲು ಸಲ್ಲಿಸಿದ್ದೇವೆ. ಜೊತೆಗೆ ಕೇಂದ್ರ ಸಚಿವರಿಗೂ ಪತ್ರವನ್ನು ಬರೆದಿದ್ದೇವೆ. ಇದರಲ್ಲಿ ವಿನಾಯಿತಿ ನೀಡಬೇಕು, ಹಣವನ್ನು ವಾಪಸ್ಸು ನೀಡಬೇಕೆಂದು ಕೇಳಿದ್ದೇವೆ. ಯಾವುದೇ ರೀತಿಯಲ್ಲಿ ಆ ಹಣವು ನಷ್ಟವಾಗುವುದಿಲ್ಲ. ಆ ಹಣವು ವಾಪಸ್ಸು ಬರುವ ಹಾಗೆ ಮಾಡುತ್ತೇವೆ.

**ಶ್ರೀ ಕೆ.ಗೋವಿಂದರಾಜ್:-** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ನನ್ನ ಪ್ರಶ್ನೆಗೆ ಸರಿಯಾಗಿ ಉತ್ತರವನ್ನು ನೀಡಲಿಲ್ಲ. ಆದಾಯ ತೆರಿಗೆ ಇಲಾಖೆಯವರು ನೋಟೀಸ್ ನೀಡಿದ ಮೇಲೆ ಏಕೆ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಉತ್ತರವನ್ನು ನೀಡಿರುವುದಿಲ್ಲ. ಆಗಲೇ ಈ ಸಮಸ್ಯೆಯನ್ನು ಬಗೆಹರಿಸಬಹುದಾಗಿತ್ತು ಅಲ್ಲವೇ? ಎರಡನೇ ಸಲ ಸಹ ಆದಾಯ ತೆರಿಗೆ ಇಲಾಖೆಯವರು ನೋಟೀಸ್ ನೀಡಿದ್ದರೂ ಸಹ ಇಲಾಖಾ ಅಧಿಕಾರಿಗಳು ಉತ್ತರವನ್ನು ನೀಡಿರುವುದಿಲ್ಲ. ಈ ಸಂದರ್ಭದಲ್ಲಾದರೂ ಈ ಸಮಸ್ಯೆಯನ್ನು ಬಗೆಹರಿಸಬಹುದಾಗಿತ್ತು ಅಲ್ಲವೇ? ನೇರವಾಗಿ ಆದಾಯ ತೆರಿಗೆ ಇಲಾಖೆಯವರು ಹಣವನ್ನು ಕಟಾಯಿಸುವ ಬದಲು ಅವರ ಇಲಾಖೆ ವತಿಯಿಂದಲೇ ತೆರಿಗೆಯನ್ನು ಕಟ್ಟಬಹುದಾಗಿತ್ತು ಅಲ್ಲವೇ?

**ಶ್ರೀ ವೆಂಕಟರಮಣಪ್ಪ:-** ಮಾನ್ಯ ಸಭಾಪತಿಯವರೇ, ರಿಯಾಯಿತಿಗಾಗಿ ಮೊದಲು ಅಪೀಲು ಮಾಡಬೇಕಾಗಿತ್ತು. ಆ ರೀತಿ ಮಾಡದೇ ಇರುವುದರಿಂದ....

**ಶ್ರೀ ಕೆ.ಗೋವಿಂದರಾಜ್:-** ಮಾನ್ಯ ಸಭಾಪತಿಯವರೇ, ಆದಾಯ ತೆರಿಗೆ ಇಲಾಖೆಯವರು ನೋಟೀಸ್ ನೀಡಿದಾಗ ಏತಕ್ಕೆ ಇಲಾಖಾ ಅಧಿಕಾರಿಗಳು ಉತ್ತರವನ್ನು ನೀಡಿರುವುದಿಲ್ಲವೆಂದು ಕೇಳುತ್ತಿದ್ದೇನೆ.

**ಶ್ರೀ ಕವಟಗಿಮಠ ಮಹಾಂತೇಶ ಮಲ್ಲಿಕಾರ್ಜುನ(ವಿರೋಧ ಪಕ್ಷದ ಮುಖ್ಯ ಸಚೇತಕರು):-** ಮಾನ್ಯ ಸಭಾಪತಿಯವರೇ, ಯಾರು ಸಂಬಂಧಪಟ್ಟ ಅಧಿಕಾರಿಗಳು ಇದ್ದಾರೆ ಅವರ ಮೇಲೆ ಕ್ರಮ ತೆಗೆದುಕೊಳ್ಳಬೇಕು.

**ಶ್ರೀ ಕೆ.ಗೋವಿಂದರಾಜ್:-** ಮಾನ್ಯ ಸಭಾಪತಿಯವರೇ, ಇದು ಕಾರ್ಮಿಕರ ಹಣ, ಇದರಲ್ಲಿ ಯಾರ negligence ಇದೆ, ಯಾರು ಇದಕ್ಕೆ ಸಂಬಂಧಪಟ್ಟಿರುತ್ತಾರೆ ಅವರ ವಿರುದ್ಧ ಕ್ರಮ ತೆಗೆದುಕೊಳ್ಳಬೇಕೆಂಬುದು ನನ್ನ ಒತ್ತಾಯಯಾಗಿದೆ.

**ಶ್ರೀ ವೆಂಕಟರಮಣಪ್ಪ:-** ಮಾನ್ಯ ಸಭಾಪತಿಯವರೇ, ಪರಿಶೀಲನೆ ಮಾಡಿ ಸೂಕ್ತ ಕ್ರಮ ಕೈಗೊಳ್ಳುತ್ತೇನೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಮಾನ್ಯ ಸಭಾಪತಿಯವರೇ, ಕಾರ್ಮಿಕ ಇಲಾಖೆಯಲ್ಲಿ ಬಡ ಕಾರ್ಮಿಕರಿಗೆ ಇರುವ ಸವಲತ್ತುಗಳು ಬೇರೆ ಯಾವ ಇಲಾಖೆಯಲ್ಲಿಯೂ ಇಲ್ಲ. 5,000 ಕೋಟಿ ರೂಪಾಯಿ ಕಾರ್ಮಿಕ ಇಲಾಖೆಯಲ್ಲಿ ಉಳಿದುಕೊಂಡಿದ್ದು, ಅದನ್ನು ಉದ್ಯೋಗ ಖಾತ್ರಿಯಲ್ಲಿ ಕೆಲಸ ಮಾಡುವ ಬಡವರಿಗೆ ಕಾರ್ಮಿಕ ಕಲ್ಯಾಣ ಯೋಜನೆ ಅಡಿಯಲ್ಲಿ ಕಾರ್ಮಿಕರನ್ನು ತಂದು ಅವರೆಲ್ಲರಿಗೂ ವಿಮಾ ಸೌಲಭ್ಯ, ಆರೋಗ್ಯ ಸೌಲಭ್ಯ ಹಾಗೂ ಒಂದು ವೇಳೆ ಕಾರ್ಮಿಕ ಮರಣ ಹೊಂದಿದರೆ 5.00 ಲಕ್ಷ ರೂಪಾಯಿ ಕಾರ್ಮಿಕನ ಅವಲಂಬಿತರಿಗೆ ಕಾರ್ಮಿಕ ಇಲಾಖೆ ಯೋಜನೆಯಲ್ಲಿ ಸಿಗುತ್ತದೆ. ಹೆಣ್ಣು ಮಕ್ಕಳ

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಒಂದೊಂದು ಹೆರಿಗೆ ಸಮಯದಲ್ಲಿ 25,000 ರೂಪಾಯಿ ಸಿಗುತ್ತದೆ. ದುರಾದೃಷ್ಟವಶಾತ್ 5,000 ಸಾವಿರ ಕೋಟಿ ರೂಪಾಯಿ ಹಣ ಖರ್ಚು ಮಾಡದೇ ಹಾಗೆ ಉಳಿದುಕೊಂಡಿದೆ ಎನ್ನುವ ಪ್ರಸ್ತಾಪಕ್ಕೆ ಕಳೆದ ಬಾರಿ ಸದನದಲ್ಲಿ ಚರ್ಚೆ ಮಾಡಿದಾಗ ಹಿಂದಿನ ಕಾರ್ಮಿಕ ಸಚಿವರು ಯಾರ್ಯಾರು ಉದ್ಯೋಗ ಖಾತ್ರಿಯಲ್ಲಿ ಕೆಲಸ ಮಾಡುತ್ತಾರೆ ಅವರನ್ನು ಯಾವುದೇ ರೀತಿಯಲ್ಲಿ ಸ್ವಯಂ ಪ್ರೇರಿತವಾಗಿ ನೋಂದಾವಣೆ ಮಾಡಿಕೊಂಡು ಅವರಿಗೆ ಸೌಲಭ್ಯವನ್ನು ಒದಗಿಸುತ್ತೇವೆ ಎನ್ನುವ ಭರವಸೆಯನ್ನು ನೀಡಿದರು. ಯಾವುದೋ ಕಾರಣದಿಂದ ಸಚಿವ ಸ್ಥಾನದಿಂದ ಅವರು ಹೊರಗೆ ಬಂದರು. ಈಗ ಇದರ ಸ್ಥಿತಿ ಈಗಿನ ಸಚಿವರ ಕೈಯಲ್ಲಿದೆ. ಯಾವ ಇಲಾಖೆಯಲ್ಲಿಯೂ ಇಷ್ಟೊಂದು ಒಳ್ಳೆಯ ಯೋಜನೆ ಇರುವುದಿಲ್ಲ. ಅದೇ ರೀತಿ ಇಷ್ಟೊಂದು ಕೆಟ್ಟು ಹೋಗಿರುವ ಆಡಳಿತ ವ್ಯವಸ್ಥೆ ಬೇರೆ ಎಲ್ಲಿಯೂ ಇಲ್ಲ. ಅದಕ್ಕೋಸ್ಕರ ತಮ್ಮಲ್ಲಿ ವಿನಂತಿಸುವುದೇನೆಂದರೆ, ಮಾನ್ಯ ಸದಸ್ಯರು ಹೇಳಿರುವ ಮಾತು ಸೇರಿದಂತೆ, ಮಾನ್ಯ ಸಚಿವರು ಸಮಗ್ರವಾಗಿ ತನಿಖೆ ಮಾಡುತ್ತಾರೆಯೇ? ಅಥವಾ ಅದು ಆಗದೇ ಹೋದರೆ, ಒಂದು ಸಭೆಯನ್ನು ಏರ್ಪಡಿಸಿ ಆಸಕ್ತ ಮೇಲ್ಮನೆ ಸದಸ್ಯರೆಲ್ಲರನ್ನು ಕರೆಯಿರಿ. ಈ ವಾರದೊಳಗೆ ಅಂದರೆ ಬೆಳಿಗ್ಗೆ ಸದನ ಪ್ರಾರಂಭಗೊಳ್ಳುವುದಕ್ಕೂ ಮೊದಲು ಸದನ ಅಂತಿಮಗೊಳ್ಳುವುದರೊಳಗೆ ಸಭೆಯಲ್ಲಿ ಭಾಗವಹಿಸೋಣ. ನಮ್ಮ ಸಮಸ್ಯೆ ಏನೆಂಬುದನ್ನು ಮಾನ್ಯ ಸಚಿವರ ಹತ್ತಿರ ಹೇಳಿಕೊಳ್ಳುತ್ತೇವೆ. ಎಲ್ಲಾ ಅಧಿಕಾರಿಗಳು ಬರಲಿ ಚರ್ಚೆ ಮಾಡೋಣ.

**ಶ್ರೀ ಕೆ.ಗೋವಿಂದರಾಜ್:-** ಮಾನ್ಯ ಸಭಾಪತಿಯವರೇ, ಹೌದು ಮಾನ್ಯ ವಿರೋಧ ಪಕ್ಷದ ನಾಯಕರು ಹೇಳಿದ ಹಾಗೆ ಒಂದು ಸಭೆಯನ್ನು ಕರೆದರೆ ಒಳ್ಳೆಯದು.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಮಾನ್ಯ ಸಭಾಪತಿಯವರೇ, ಸದನ ಮುಗಿಯುವುದರೊಳಗೆ ಸಭೆಯನ್ನು ನಡೆಸಲು ತಾವು ಆದೇಶ ನೀಡಬೇಕು.

**ಸಭಾಪತಿಯವರು:-** ಮಾನ್ಯ ಸಚಿವರು ಉತ್ತರವನ್ನು ನೀಡಬೇಕು.

**ಶ್ರೀ ಕೆ.ಗೋವಿಂದರಾಜ್:-** ಮಾನ್ಯ ಸಭಾಪತಿಯವರೇ, ತಾವೂ ಆದೇಶವನ್ನು ನೀಡಿ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಮಾನ್ಯ ಸಭಾಪತಿಯವರೇ, ಯಾರ್ಯಾರಿಗೆ ಸಭೆಗೆ ಹಾಜರಾಗಲು ಆಸಕ್ತಿ ಇದೆ ಅವರೆಲ್ಲರನ್ನು ಕರೆಯಿಸಿ.

**ಶ್ರೀ ವೆಂಕಟರಮಣಪ್ಪ:-** ಮಾನ್ಯ ಸಭಾಪತಿಯವರೇ, ಆಗಲಿ, ಸಭೆಗೆ ಕರೆಯುತ್ತೇವೆ. ಸದಸ್ಯರು ಅವರ ಸಲಹೆಗಳನ್ನು ನೀಡಲಿ, ಅದರ ಆಧಾರದ ಮೇಲೆ ಸೂಕ್ತ ಕ್ರಮವನ್ನು ಕೈಗೊಳ್ಳುತ್ತೇನೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಕೆ.ಗೋವಿಂದರಾಜ್:-** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ತಪ್ಪಿತಸ್ಥ ಅಧಿಕಾರಿಗಳ ಮೇಲೆ ಏನು ಕ್ರಮ ತೆಗೆದುಕೊಳ್ಳುತ್ತಾರೆ ಎಂಬುದನ್ನು ಹೇಳಲಿ.

**ಶ್ರೀ ವೆಂಕಟರಮಣಪ್ಪ:-** ಮಾನ್ಯ ಸಭಾಪತಿಯವರೇ, ಸಲಹೆಯನ್ನು ನೀಡಲಿ. ಏನಾದರೂ ತಪ್ಪಾಗಿದ್ದರೆ ಅದನ್ನು ಸರಿಪಡಿಸಿ ಸೂಕ್ತ ಕ್ರಮ ಕೈಗೊಳ್ಳುತ್ತೇವೆ.

**ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ 482**
**(ಉತ್ತರವನ್ನು ಲಗತ್ತಿಸಲಾಗಿದೆ)**

**ಶ್ರೀ ಟಿ.ಎ.ಶರವಣ:-** ಮಾನ್ಯ ಸಭಾಪತಿಯವರೇ, ಉದ್ಯೋಗ ಸೃಷ್ಠಿ ಮಾಡಬೇಕು. ಒಂದು ರೀತಿಯಲ್ಲಿ ಯುವಕರಿಗೆ ತರಬೇತಿ ನೀಡಬೇಕೆಂಬ ಉದ್ದೇಶದಿಂದ ಸರ್ಕಾರ "ಯುವ-ಯುಗ" ಎಂಬ ಯೋಜನೆಯನ್ನು ಜಾರಿಗೆ ತಂದಿದೆ. ಅದಕ್ಕೆ ಅಭಿನಂದನೆಗಳನ್ನು ಸಲ್ಲಿಸುತ್ತೇನೆ. ಜೊತೆಗೆ ಉದ್ಯೋಗಕ್ಕೆ ಬೇಕಾದಂಥ ಅರ್ಹತೆ ಇದ್ದರೂ ಸಹ ಕೌಶಲ್ಯಾಭಿವೃದ್ಧಿಗೋಸ್ಕರ ಉದ್ಯೋಗ ಒದಗಿಸುತ್ತೇವೆ ಎಂದು ಹೇಳಿದ್ದು, ಇದರಿಂದ ಕೆಲವರು ವಂಚಿತರಾಗುತ್ತಿದ್ದಾರೆ. ರಾಜ್ಯದಲ್ಲಿ ಇದು ದಿನೇ ದಿನೇ ಹೆಚ್ಚಾಗುತ್ತಿದೆ. ಅದರ ಕಡೆ ತಾವು ಗಮನಹರಿಸಬೇಕು. ಇದರಿಂದಾಗಿ ಅಂಥವರಿಗೆ ತರಬೇತಿಯ ಅಗತ್ಯವೂ ಇದ್ದು, ಇದು ಸರ್ಕಾರದ ಕರ್ತವ್ಯವೂ ಸಹ ಆಗಿದೆ. ಕೌಶಲ್ಯಗಳನ್ನು ವೃದ್ಧಿಸುವ ಮೂಲಕ ಉದ್ಯೋಗವನ್ನು ಸೃಷ್ಠಿ ಮಾಡುವ ಉಚಿತ ತರಬೇತಿ ಸಹ ಇದೆ ಎಂದು ಈ ಯೋಜನೆ ಹೆಸರಿನಲ್ಲಿ ಪ್ರಾರಂಭ ಮಾಡಲಾಗಿದೆ. ಉಚಿತ ತರಬೇತಿ ಎಂದು ಹೇಳಿ ಅಭ್ಯರ್ಥಿಗಳಿಂದ ವಾಪಸ್ಸು ಪಡೆದ ಶುಲ್ಕವನ್ನು ಸರ್ಕಾರ ಪಾವತಿಸುವಂತೆ ಸೂಚಿಸಿದೆಯೇ? ಎಂಬುದಕ್ಕೆ ಉತ್ತರ ಬೇಕು. ನಂತರ ಇದರಿಂದ ನಿರೀಕ್ಷಿತ ಪ್ರಮಾಣದಲ್ಲಿ ಅಭ್ಯರ್ಥಿಗಳು ತರಬೇತಿಗೆ ಸೇರದಿದ್ದರೂ, ಶುಲ್ಕ ಪಾವತಿಸಿ ತರಬೇತಿಯನ್ನು ಪಡೆದವರು ಉದ್ಯೋಗದಿಂದ ವಂಚಿತರಾಗಿರುವುದು ನಮಗೆ ಒಂದು ರೀತಿ ಆಘಾತವಾಗುತ್ತಿದೆ, ಅದರ ಕಡೆ ಸಹ ಗಮನಹರಿಸಿ. (ಮುಂದು) . . .

**(391) 12-12-2018 SK-KS/4.10**

**(ಸಭಾಪತಿಯವರ ಉಪಸ್ಥಿತಿ )**

**ಶ್ರೀ ಟಿ.ಎ. ಶರವಣ (ಮುಂದು):-**ಮಾನ್ಯ ಸಭಾಪತಿಯವರೇ, ಕೆಲವು ಕಂಪನಿಗಳಲ್ಲಿ ಕಡಿಮೆ ವೇತನವನ್ನು ಕೊಡುತ್ತಿದ್ದಾರೆ ಮತ್ತು ಅವರಿಗೆ ಸರಿಯಾದ ರೀತಿಯಲ್ಲಿ ಸೌಲಭ್ಯಗಳನ್ನು ನೀಡುತ್ತಿಲ್ಲವೆಂಬ ದೂರುಗಳು ಬರುತ್ತಿದೆ. ಯಾವ ಕಾರಣದಿಂದ ನೌಕಕರಿಗೆ ಈ ತರಹ ಮೋಸ ಆಗುತ್ತಿದೆ ಮತ್ತು ಇದರ ಬಗ್ಗೆ ತಾವು ಏನು ಕ್ರಮ ತೆಗೆದುಕೊಳ್ಳುತ್ತೀರೆಂಬುದರ ಬಗ್ಗೆ ನಮಗೆ ಸ್ಪಷ್ಟಪಡಿಸಿ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಆರ್.ವಿ. ದೇಶಪಾಂಡೆ:–** ಮಾನ್ಯ ಸಭಾಪತಿಯವರೇ, ಇಡೀ ದೇಶದಲ್ಲಿ ನಿರುದ್ಯೋಗದ ಸಮಸ್ಯೆ ಬಹಳ ಜ್ವಲಂತವಾಗಿದೆ. ಇವತ್ತು ದೇಶದಲ್ಲಿ ಶೇ. –6.7% ನಿರುದ್ಯೋಗವಿದೆ. ಕೇಂದ್ರ ಸರ್ಕಾರ ಮತ್ತು ರಾಜ್ಯ ಸರ್ಕಾರಗಳು ಕೌಶಲ್ಯ ತರಬೇತಿಯ ಮುಖಾಂತರ ನಾವು ಈ ಸಮಸ್ಯೆಯನ್ನು ಬಗೆಹರಿಸುವುದಕ್ಕೆ ಸಾಧ್ಯ ಎಂದು ಅದರ ಬಗ್ಗೆ ನಾವು ಕ್ರಮ ತೆಗೆದುಕೊಳ್ಳುತ್ತೇವೆ. 2015–16ನೇ ಇಸವಿಯಲ್ಲಿ "ಯುವ–ಯುಗ" ಎಂಬ ಹೆಸರಿನ ಕಾರ್ಯಕ್ರಮ ಮುಂಗಡ ಬಜೆಟ್‌ನಲ್ಲಿ ಮಂಜೂರು ಆಯಿತು. ನಂತರ ಕೈಗಾರಿಕಾ ಇಲಾಖೆ ಮತ್ತು ಸಣ್ಣ ಕೈಗಾರಿಕಾ ಇಲಾಖೆ, ಗ್ರಾಮೀಣಾಭಿವೃದ್ಧಿ ಇಲಾಖೆ, CEDOK (Centre for Entrepreneurship Development of Karnataka), Government Tool and Room Training Centres, ITI (Industrial Training Institute) ಗಳು ಹಲವಾರು ಇಲಾಖೆಗಳು ಮತ್ತು ಹಲವಾರು ಕೌಶಲ್ಯಗಳ ಬಗ್ಗೆ ತರಬೇತಿ ಕೊಡುತ್ತೇವೆ. ಇದರ ಬಗ್ಗೆ ಸರಿಯಾಗಿ monitoring ಆಗುತ್ತಿಲ್ಲ. 2016–17ನೇ ಇಸವಿಯಲ್ಲಿ *'Skill Development, Entrepreneurship and Livelihood Department'* ಸ್ಥಾಪನೆ ಮಾಡಿದರು. ಈ ಯೋಜನೆ ಆ ಯೋಜನೆಗೆ merge ಆಯಿತು. ಇದಕ್ಕೆ ಐದು ಕೋಟಿ ರೂಪಾಯಿಗಳ ಮುಂಗಡ ಭದ್ರತಾ ಹಣವನ್ನು ಇಟ್ಟಿದ್ದೇವೆ. ಆ ಹಣ ಇವತ್ತು "ಮುಖ್ಯಮಂತ್ರಿಗಳ ಕೌಶಲ್ಯ ಕರ್ನಾಟಕ ಯೋಜನೆ"ಯಲ್ಲಿ ನಾವು ಯುವಕ–ಯುವತಿಯರಿಗೆ ತರಬೇತಿಯನ್ನು ಕೊಡುತ್ತಿದ್ದೇವೆ. ಮಾನ್ಯ ಸದಸ್ಯರು ಕೆಲವು ನೌಕರರಿಗೆ ಕಡಿಮೆ ಸಂಬಳ ಮತ್ತೆ ಕೆಲವು ನೌಕರರಿಗೆ ಹೆಚ್ಚು ಕೊಡುತ್ತಾರೆ ಎಂದು ಹೇಳಿದ್ದಾರೆ. ಮಾನ್ಯ ಕಾರ್ಮಿಕ ಸಚಿವರು ಸದನದಲ್ಲಿಯೇ ಕುಳಿತುಕೊಂಡಿದ್ದಾರೆ. ಈಗ Garments factory ಗೆ ಏನು wages ಕೊಡಬೇಕೋ, ಅದರ ಬಗ್ಗೆ ಸರ್ಕಾರ ನೋಟಿಫೈ ಮಾಡಿದೆ. ಒಂದು ವೇಳೆ ಯಾರಾದರೂ ಉಲ್ಲಂಘನೆ ಮಾಡಿದ್ದಾರೆಂಬುದರ ಬಗ್ಗೆ ಸರ್ಕಾರದ ಗಮನಕ್ಕೆ ಬಂದರೆ, ಸರ್ಕಾರ ಕ್ರಮ ಕೈಗೊಳ್ಳುತ್ತದೆ. ಸರ್ಕಾರ ಉದ್ಯೋಗ ಸೃಷ್ಟಿ ದೃಷ್ಟಿಯಿಂದ ಈ ಒಂದು ಕೌಶಲ್ಯ ತರಬೇತಿಯನ್ನು ಕೊಡುವ ಕಾರ್ಯಕ್ರಮಕ್ಕೆ ಹೆಚ್ಚಿನ ಒಲವನ್ನು ಕೊಟ್ಟಿದ್ದೇವೆ. ಇವತ್ತು ದೇಶದಲ್ಲಿಯೇ ಕರ್ನಾಟಕ ರಾಜ್ಯ employment generation ನಲ್ಲಿ ಎರಡನೇ ಸ್ಥಾನದಲ್ಲಿ ಇದೆ. ಇವತ್ತು ಯುವಕರಿಗೆ ಉದ್ಯೋಗ ಸೃಷ್ಟಿಯಾಗಬೇಕು ಹಾಗೂ ಅವರು ಸ್ವಯಂ ಉದ್ಯೋಗ ಮಾಡಬೇಕು. ಗುಡಿ ಕೈಗಾರಿಕೆ ಮತ್ತು ಸಣ್ಣ ಕೈಗಾರಿಕೆ ಮಾಡಬೇಕೆಂಬ ಉದ್ದೇಶದಿಂದ ಈ ಒಂದು ತರಬೇತಿಯನ್ನು ತಂದಿದ್ದು. ಇವತ್ತು ಕೌಶಲ್ಯ ಅಭಿವೃದ್ಧಿಯನ್ನು ಮಾಡುವ ಮುಖಾಂತರ ಮಾಡುವುದಕ್ಕೆ ನಾವು ಪ್ರಯತ್ನವನ್ನು ಮಾಡುತ್ತೇವೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಪ್ರಶ್ನೆ 406**

**ಉತ್ತರವನ್ನು ಲಗತ್ತಿಸಲಾಗಿದೆ.**

**ಶ್ರೀ ಎಂ.ಎ. ಗೋಪಾಲಸ್ವಾಮಿ:-**ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಉತ್ತರವನ್ನು ಒದಗಿಸಿದ್ದಾರೆ. ಇಡೀ ರಾಜ್ಯದಲ್ಲಿ ಮರಳು ಅಭಾವ ಇರುವಂತಹದ್ದು ಗೊತ್ತಿರುವ ವಿಚಾರ. ಹಾಸನ ಜಿಲ್ಲೆಯಲ್ಲಿ ಮರಳು ಗಣಿಗಾರಿಕೆ ನಡೆಯುತ್ತಿದೆ. ಅಲ್ಲಿರುವ ಮಧ್ಯಮ ವರ್ಗದವರಿಗೂ ಹಾಗೂ ಆಶ್ರಯ ಮನೆಗಳನ್ನು ಕಟ್ಟುವಂತಹ ಸಾರ್ವಜನಿಕರಿಗೆ ಮರಳು ಸಿಗದೇ ಇರುವಂತಹದ್ದು ಮಾಹಿತಿಯಿದೆಯೇ ಎಂಬುದು ನನ್ನ ಮುಖ್ಯವಾದ ಪ್ರಶ್ನೆಯಾಗಿದೆ. ಅಲ್ಲಿ ದರವನ್ನು ನಿಗದಿ ಪಡಿಸುವಂತಹದ್ದು ಆಗಿಲ್ಲ ಎಂಬುದು ಮಾಹಿತಿ ಇದೆ. ಅಲ್ಲಿರುವ ಸಾರ್ವಜನಿಕರು ಸಕಲೇಶಪುರ, ಬೇಲೂರು ಆ ಭಾಗದಲ್ಲಿ ಮರಳು ತರಬೇಕೆಂದರೆ, ಒಂದು ಲಾರಿ ಮರಳಿಗೆ ರೂ.18,000/- ರೂ.20,000/-ಗಳು ಇದ್ದರೆ ಅಲ್ಲಿ ಕಾಳಸಂತೆಯಲ್ಲಿ ರೂ.40,000/- ರಿಂದ ರೂ.45,000/-ಗಳನ್ನು ಕೊಟ್ಟು ಖರೀದಿಸಬೇಕಾಗಿದೆ. ಮರಳನ್ನು ಸಾಗಿಸುವ permit ಬಗ್ಗೆ ಕೂಡ ಸರಿಯಾದ ಮಾಹಿತಿ ಇಲ್ಲ. ಅಲ್ಲಿ ಹತ್ತಿರ ಇರುವ ಗ್ರಾಮಗಳ ರೈತರು ಎತ್ತಿನ ಗಾಡಿಯಲ್ಲಿ ಮರಳನ್ನು ಸಾಗಣೆ ಮಾಡುವುದಕ್ಕೆ ಅವಕಾಶವನ್ನು ಮಾಡಿಕೊಡಬೇಕೆಂದು ಮಾನ್ಯ ಸಚಿವರಲ್ಲಿ ಕೋರುತ್ತೇನೆ. ನೋಟಿಸ್‌ನಲ್ಲಿ ದರವನ್ನು ಹಾಕಬೇಕು ಎನ್ನುವುದರ ಬಗ್ಗೆ ಮಾನ್ಯ ಸಚಿವರು ಅವಕಾಶವನ್ನು ಮಾಡಬೇಕು. ಆ ಭಾಗದಲ್ಲಿ e-pricing ಕೆಲಸವನ್ನು ಕೂಡ ಮಾಡಬೇಕೆಂಬ ಮನವಿಯನ್ನು ಮಾಡುತ್ತೇನೆ. ಆದರೆ ಉತ್ತರದಲ್ಲಿ ಎಲ್ಲವನ್ನೂ ಒದಗಿಸಲಾಗಿದೆ. ಆದರೆ ಇದು ಕಾಗದದಲ್ಲಿ ಇರುವಂಥದ್ದು ಆಗಬಾರದು. ಮಾನ್ಯ ಸಚಿವರು ಇದರ ಬಗ್ಗೆ ಹೆಚ್ಚು ಕಾಳಜಿಯನ್ನು ಹಾಸನ ಜಿಲ್ಲೆಗೆ ವಹಿಸಬೇಕು ಎಂಬುದಲ್ಲ. ಇಡೀ ರಾಜ್ಯದ ಮರಳು ಮತ್ತು Manufactured Sand (M-sand) ಸಮಸ್ಯೆಯಿಂದ ಆಗುತ್ತಿದೆ. ಇದರ ಬಗ್ಗೆ ಉತ್ತರವನ್ನು ಒದಗಿಸಬೇಕಾಗಿ ಕೋರುತ್ತೇನೆ.

**ಶ್ರೀ ರಾಜಶೇಖರ ಬಿ. ಪಾಟೀಲ್:-**ಮಾನ್ಯ ಸಭಾಪತಿಯವರೇ, ರಾಜ್ಯಕ್ಕೆ ಸುಮಾರು ಮೂರು ಕೋಟಿ ಐವತ್ತು ಲಕ್ಷ ಟನ್ ಮರಳು ಬೇಕು ಎಂಬ ಬೇಡಿಕೆ ಅಂದಾಜು ಇದೆ. ಅದರಲ್ಲಿ ಲಭ್ಯವಿರುವ ನದಿಯ ಮರಳು ಬರೀ 3.5 ಎಂಎಂಟಿ. ಅಂದರೆ ಸುಮಾರು ಮೂವತ್ತೈದು ಲಕ್ಷ ಟನ್ ಮಾತ್ರ ಮರಳು ಇದೆ. ರಾಜ್ಯದಲ್ಲಿರುವ M-sand ಘಟಕಗಳು 288. M-sand ಉತ್ಪಾದನೆ 27 ಎಂಎಂಟಿ. ಸುಮಾರು ಎರಡು ಕೋಟಿ ಎಪ್ಪತ್ತು ಲಕ್ಷ ಟನ್ ನಾವು M-sand ಯಿಂದ ಕರ್ನಾಟಕದಲ್ಲಿ ಕೊಡುವಂತಹ ವ್ಯವಸ್ಥೆಯಾಗುತ್ತಿದೆ. ಕರ್ನಾಟಕ ರಾಜ್ಯದಲ್ಲಿಯೇ ಮರಳಿನ ಬಗ್ಗೆ ವಿಶೇಷವಾಗಿ ದಿನ ಪತ್ರಿಕೆ ಮತ್ತು ಮಾಧ್ಯಮದಲ್ಲಿ ವರದಿಯಾಗುತ್ತಿರುವುದನ್ನು ನೋಡುತ್ತಿದ್ದೇವೆ. ಇವತ್ತು ಯಾವ ರೀತಿ ಮರಳಿನ

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಬಗ್ಗೆ ತೊಂದರೆಯಾಗುತ್ತಿದೆ ಮತ್ತು ಅದರಲ್ಲಿ ಯಾವ ರೀತಿ ಬದಲಾವಣೆಗಳು ತರಬೇಕೆಂಬುದರ ಬಗ್ಗೆ ಈಗಾಗಲೇ ಮಾನ್ಯ ಮುಖ್ಯಮಂತ್ರಿಗಳ ಅಧ್ಯಕ್ಷತೆಯಲ್ಲಿ ಒಂದು ಸಭೆಯನ್ನು ಮಾಡಲಾಗಿದೆ. ಅದರ ಜೊತೆಯಲ್ಲಿ ಮಾನ್ಯ ಉಪ ಮುಖ್ಯಮಂತ್ರಿಯಾದ ಡಾ.ಜಿ. ಪರಮೇಶ್ವರ ನೇತೃತ್ವದಲ್ಲಿ ಒಂದು ಉಪ ಸಮಿತಿ ಕೂಡ ನಿರ್ಮಾಣವಾಗಿದೆ. ಇವತ್ತು ಮಾನ್ಯ ಸದಸ್ಯರು ಹಾಸನದ ಬಗ್ಗೆ ಕೇಳುತ್ತಿದ್ದಾರೆ. ಹಾಸನದಲ್ಲಿ ಕೂಡ, ***'The Karnataka Minor Mineral Concession Rules (KMMCR), 1994'*** ರ ಪ್ರಕಾರ ಐದು ವರ್ಷಗಳ ಅವಧಿಯವರೆಗೆ ಮಂಜೂರು ಮಾಡಲು ಅವಕಾಶ ಕಲ್ಪಿಸಿದೆ. 2016-17ನೇ ಸಾಲಿನಲ್ಲಿ ಹಾಸನದಲ್ಲಿ ಕೂಡ 2.40 ಲಕ್ಷ ಮೆಟ್ರಿಕ್ ಟನ್ ಮತ್ತು 2017-18 ನೇ ಸಾಲಿನಲ್ಲಿ 0.47 ಲಕ್ಷ ಮೆಟ್ರಿಕ್ ಟನ್. 2017-18ನೇ ಸಾಲಿನಲ್ಲಿ 37 ಲಕ್ಷ ಮೆಟ್ರಿಕ್ ಟನ್ ಪೂರೈಸಿದರು. ಹಾಸನ ಜಿಲ್ಲೆಯ ಪಕ್ಕದ ಜಿಲ್ಲೆಗಳಾದ ತುಮಕೂರು, ಚಿಕ್ಕಮಗಳೂರು ಉಡುಪಿ ಹಾಗೂ ಇನ್ನಿತರ ಜಿಲ್ಲೆಗಳಿಂದ ಎಂ-ಸ್ಯಾಂಡ್‌ನ್ನು ಪೂರೈಸುವಂತಹ ಕೆಲಸವನ್ನು ಮಾಡುತ್ತಿದ್ದೇವೆ. ಮಾನ್ಯ ಸದಸ್ಯರು ಹೇಳಿರುವ ಬಗ್ಗೆ ಪರಿಶೀಲಿಸಿ, ಸೂಕ್ತವಾದಂತಹ ಕ್ರಮವನ್ನು ತೆಗೆದುಕೊಳ್ಳುತ್ತೇನೆ.

**ಶ್ರೀ ಎಂ.ಎ. ಗೋಪಾಲಸ್ವಾಮಿ:-** ಮಾನ್ಯ ಸಭಾಪತಿಯವರೇ, weighbridge ಗಳು ಕೂಡ ಆಗುವಂತಹ ಕೆಲಸಗಳಾಗಬೇಕು.

**ಶ್ರೀ ರಾಜಶೇಖರ ಬಿ. ಪಾಟೀಲ್:-** ಮಾನ್ಯ ಸಭಾಪತಿಯವರೇ, ಅದನ್ನು ಕೂಡ ಪರಿಶೀಲಿಸಿ, ಕೆಲಸವನ್ನು ಮಾಡುವಂತಹ ಪ್ರಯತ್ನವನ್ನು ಮಾಡುತ್ತೇವೆ. ಮಾನ್ಯ ಸಭಾಪತಿಯವರೇ, ಎಲ್ಲಾ ಕಡೆಯೂ ಮರಳಿನ ಅಭಾವವಿದೆ....

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ವಿರೋಧ ಪಕ್ಷಕ ನಾಯಕರು):-** ಮಾನ್ಯ ಸಭಾಪತಿಯವರೇ, ಇದು ಇಡೀ ರಾಜ್ಯದ ಸಮಸ್ಯೆಯಾಗಿದೆ. ಪ್ರಶ್ನೋತ್ತರ ವೇಳೆಯಲ್ಲಿ ನಾವೆಲ್ಲರೂ ಭಾಗವಹಿಸುವುದಕ್ಕೆ ಸ್ವಲ್ಪ ಕಷ್ಟವಾಗಬಹುದು. ಮಾನ್ಯ ಐವನ್ ಡಿ'ಸೋಜಾರವರು ನಿಯಮ 330 ರಡಿಯಲ್ಲಿ ಇದನ್ನು ಹಾಕಿದ್ದಾರೆ. ದಯವಿಟ್ಟು, ಇದನ್ನು ಅರ್ಧ ಗಂಟೆಗೆ ಚರ್ಚೆಗೆ ತೆಗೆದುಕೊಳ್ಳಿ, ಇಲ್ಲವಾದರೆ ನಿಯಮ 330 ರಡಿಯಲ್ಲಿ ಚರ್ಚೆ ಮಾಡಲು ಈ ದಿನವೋ ಅಥವಾ ನಾಳೆಯಾದರೂ ಅವಕಾಶ ಮಾಡಿಕೊಟ್ಟರೆ, ನಾವು ಇದರ ಬಗ್ಗೆ ಚರ್ಚೆ ಮಾಡಬಹುದು. ದಯವಿಟ್ಟು, ಒಂದು ಮಾತ್ರ ತಮ್ಮಲ್ಲಿ ವಿನಂತಿ ಮಾಡಿಕೊಳ್ಳುವುದೇನೆಂದರೆ, ಸರ್ಕಾರ ಹೇಳಿರುವ ಬಗ್ಗೆ ಅಧಿಕಾರಿಗಳು ಸಹ ಕೇಳುತ್ತಿಲ್ಲ. ಮಾನ್ಯ ಗೋಪಾಲಸ್ವಾಮಿಯವರ ಪ್ರಶ್ನೆ ಏನಿತ್ತು ಎಂದು ಹೇಳಿದರೆ, ಉಳಿದಿರುವ ಕಾನೂನು ಮತ್ತು ಕಾಯಿದೆಯಲ್ಲಿ ತಾವು ಏನು ಬೇಕಾದರೂ ಮಾಡಿ. ಆ ಮರಳು ದಂಧೆ ಮಾಡುವಂತಹವರಿಗೆ ಯಾವುದೇ ಸರ್ಕಾರವಿಲ್ಲ. ಬಡವನೊಬ್ಬ ಒಂದು ಆಶ್ರಯ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಮನೆಯನ್ನು ಕಟ್ಟುತ್ತಾನೆ. ಒಂದೊಂದು ತಾಲ್ಲೂಕು ಮತ್ತು ಜಿಲ್ಲೆಯಲ್ಲಿ ಸುಮಾರು ಮೂರು ಸಾವಿರ ಮತ್ತು ಮೂರುವರೆ ಸಾವಿರಕ್ಕೆ ಬಸವ ವಸತಿ ಮನೆಗಳನ್ನು ಕೊಡಿ ಎಂದು ಮಂಜೂರಾತಿ ಪತ್ರವನ್ನು ಸರ್ಕಾರ ಕೊಟ್ಟಿದೆ. ಅದರಲ್ಲಿ ಏನೂ ಮಾಡಿದ್ದಾರೆಂದರೆ, ಆರು ತಿಂಗಳೊಳಗೆ ಅವರು ಮನೆಯನ್ನು ಕಟ್ಟದಿದ್ದರೆ, ತನ್ನಷ್ಟಕ್ಕೆ ತಾನೇ ಮನೆ ರದ್ದಾಗುತ್ತದೆ. ಅವರು ಮನೆ ಕಟ್ಟಲು ಒಂದು ಸ್ವಲ್ಪವೂ ಮರಳಿಲ್ಲ. ತಮ್ಮ ಸಮಕ್ಷಮದಲ್ಲಿ ತಮ್ಮ ಎರಡು ಜಿಲ್ಲೆಗಳು ಹಾಗೂ ನಮ್ಮ ಎರಡು ಜಿಲ್ಲೆಗಳ ಹದಿಮೂರು ಶಾಸಕರನ್ನು ಕರೆದು ಮಾನ್ಯ ಮುಖ್ಯಮಂತ್ರಿಗಳು ಸಮ್ಮುಖದಲ್ಲಿ ಒಂದು ಸಭೆ ಮಾಡಿದರು. ನಾವು ಅವರಿಗೆ ವಿಷಯವನ್ನು ತಿಳಿಸಿದೆವು. ತಾವು ದೊಡ್ಡವರಿಗೆ ಏನೂ ಬೇಕಾದರೂ ಮಾಡಿ, ಆದರೆ ಬಡವರು ಮನೆಗಳನ್ನು ಕಟ್ಟುತ್ತಾರೆಂದು ಮಾನ್ಯ ಮುಖ್ಯಮಂತ್ರಿಯವರಿಗೆ ತಿಳಿಸಿದ್ದಕ್ಕೆ, ಆಗ ಅವರು ಮಾನ್ಯ ಸಚಿವರು ಸಹ ಇಲ್ಲಿಯೇ ಇದ್ದಾರೆಂದು ಹೇಳಿದರು. ಬಡವರು ಮನೆಗಳನ್ನು ಕಟ್ಟಲು ಮರಳನ್ನು ಸಣ್ಣ ಸಣ್ಣ ವಾಹನಗಳಲ್ಲಿ ಮತ್ತು ಟ್ರ್ಯಾಕ್ಟರ್‌ಗಳಲ್ಲಿ ಎತ್ತಿನ ಗಾಡಿಯಲ್ಲಿ ತೆಗೆದುಕೊಂಡು ಹೋಗುತ್ತಾರೋ, ಅಂತಹವರಿಗೆ ನಿರ್ಬಂಧ ಮಾಡಬೇಡಿ ಎಂದು ಮಾನ್ಯ ಮುಖ್ಯಮಂತ್ರಿಗಳು ನಮ್ಮೆಲ್ಲರ ಶಾಸಕರ ಸಮ್ಮುಖದಲ್ಲಿಯೇ ಜಿಲ್ಲಾಧಿಕಾರಿಗಳಿಗೆ ಹೇಳಿದರು. ಮಾನ್ಯ ಮುಖ್ಯಮಂತ್ರಿಯವರ ಆದೇಶವನ್ನು ಯಾವ ಜಿಲ್ಲಾಧಿಕಾರಿಗಳು ಸಹ ಪಾಲಿಸುತ್ತಿಲ್ಲ. ಒಬ್ಬ ವ್ಯಕ್ತಿ ಮರಳನ್ನು ಸಾಗಿಸಲು ಆತನ ಹತ್ತಿರ ವಾಹನ ಮತ್ತು ಎತ್ತಿನ ಗಾಡಿ ಇಲ್ಲ. ಅದನ್ನು ದೋಣಿಯಲ್ಲಿ ಮರಳನ್ನು ತೆಗೆದು ತನ್ನ ಮನೆಯ ಶೌಚಾಲಯವನ್ನು ರಿಪೇರಿ ಮಾಡುವಂತಹ ಪರಿಸ್ಥಿತಿ ಇದೆ. ಆ ದೋಣಿಯನ್ನೇ seize ಮಾಡಿ, ಅವನನ್ನು ಜೈಲಿಗೆ ಹಾಕಿದ್ದಾರೆ. ಇಂತಹ ಒಂದು ನೀಚ ಕೆಲಸವನ್ನು ಮಾಡಿದ್ದಾರೆ. ಮಾನ್ಯ ಮುಖ್ಯಮಂತ್ರಿಯವರ ಮಾತುಗಳನ್ನು ಕೆಳ ಹಂತದ ಅಧಿಕಾರಿಗಳು ಕೇಳದಿದ್ದರೆ, ನಮ್ಮ ಶಾಸಕರ ಹತ್ತಿರ ಸುತ್ತೋಲೆಯನ್ನು ಕೊಡಿ ಎಂದು ಅಧಿಕಾರಿಗಳು ಕೇಳುತ್ತಾರೆ. ಮಾನ್ಯ ಮುಖ್ಯಮಂತ್ರಿಯವರು ಸುತ್ತೋಲೆ ಕೊಡಿ ಎಂದು ಹೇಳಿದ್ದು ಇರಬಹುದು, ಅದು ಕಾನೂನು ಒಂದು ಭಾಗವಿದ್ದಂತೆ ಆದರೆ ಮತ್ತು ಮಾನವೀಯತೆಯ ಮತ್ತೊಂದು ಭಾಗ. ಕಾನೂನಿನಿಂದಲೇ ಸಮಾಜದ ಅಭಿವೃದ್ಧಿಯಾಗುವುದೇ ಕಾನೂನನ್ನು ರಚನೆ ಮಾಡಿರುವುದು, ಸಮಾಜದಲ್ಲಿ ರಕ್ಷಣೆ ಕೊಡಬೇಕೆಂದು ಹೇಳಿದೆ. ಮಾನ್ಯ ಮಂತ್ರಿಗಳಲ್ಲಿ ವಿನಂತಿ ಮಾಡುವುದೇನೆಂದರೆ, ಇದರಲ್ಲಿ ನಮ್ಮದೇನು ರಾಜಕಾರಣ ಇಲ್ಲ. ಇದರ ಬಗ್ಗೆ ಅರ್ಧ ಗಂಟೆ ಚರ್ಚೆಯಾಗಲಿ.

**ಶ್ರೀ ಐವನ್ ಡಿ'ಸೋಜಾ (ನಾಮ ನಿರ್ದೇಶಿತರು):-** ಮಾನ್ಯ ಸಭಾಪತಿಯವರೇ, ನಿಯಮ 330 ಇದೆ. ಪ್ರಶ್ನೋತ್ತರ ಅವಧಿ ಮುಗಿದ ನಂತರ ಇದನ್ನು ತೆಗೆದುಕೊಳ್ಳೋಣ.

**ಶ್ರೀ ರಾಜಶೇಖರ ಬಿ. ಪಾಟೀಲ್:-** ಮಾನ್ಯ ಸಭಾಪತಿಯವರೇ, ಇದು ಅರ್ಧ ಗಂಟೆ ಚರ್ಚೆಯಾಗಲಿ. ನಿಯಮ 330 ರಡಿಯಲ್ಲಿ ಇದನ್ನು ಚರ್ಚೆ ಮಾಡೋಣ. ಮಾನ್ಯ ವಿರೋಧ ಪಕ್ಷದ

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ನಾಯಕರೇ ನಮಗೂ ಕೂಡ ಗೊತ್ತಿದೆ. ಮಾನ್ಯ ಮುಖ್ಯಮಂತ್ರಿಗಳ ಅಧ್ಯಕ್ಷತೆಯಲ್ಲಿ ಒಂದು ಸಭೆಯನ್ನು ಮಾಡಿದ್ದೇವೆ. CRZ (Coastal Regulation Zone) and non-CRZ ಬೇರೆ ಬೇರೆ ರೀತಿಯಲ್ಲಿ ಮಾಡಬೇಕೆಂಬುದನ್ನು ಮಾಡಿದ್ದೇವೆ.

**(ಗೊಂದಲ)**

**ಶ್ರೀ ರಾಜಶೇಖರ ಬಿ. ಪಾಟೀಲ್:–** ಇದರ ಬಗ್ಗೆ ಮಾತನಾಡೋಣ ಎಂದು ನಾನು ಹೇಳುತ್ತಿದ್ದಾನೆ.

**(ಗೊಂದಲ)**

**ಸಭಾಪತಿಯವರು:–** ಮಾನ್ಯ ಸುನೀಲ್ ಸುಬ್ರಮಣಿಯವರು. . . .

**(ಗೊಂದಲ)**

**ಶ್ರೀ ಐವನ್ ಡಿ’ಸೋಜಾ:–** ನಮ್ಮ ಸಮಸ್ಯೆಯನ್ನು ಹೇಳುತ್ತೇನೆ. ಇದಕ್ಕೆ ಉತ್ತರ ಕೊಡಿಸಿ.

**ಶ್ರೀ ರಾಜಶೇಖರ ಬಿ. ಪಾಟೀಲ್:–** ತಮ್ಮ ಸಮಸ್ಯೆ ಏನಿದೆ ಎಂಬುದನ್ನು ಹೇಳಿ.

**(ಗೊಂದಲ)**

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಮಾನ್ಯ ಸಭಾಪತಿಯವರೇ, ಜನರೆಲ್ಲಾ ರೋಸಿ ಹೋಗಿದ್ದಾರೆ. ಬಡವರೆಲ್ಲಾ ಒಂದು ಮನೆ ಕಟ್ಟುವುದಕ್ಕೆ ಆಗದೇ ಇರುವಂತಹ ಸ್ಥಿತಿಯಲ್ಲಿದ್ದಾರೆ.

**ಶ್ರೀ ರಾಜಶೇಖರ ಬಿ. ಪಾಟೀಲ್:–** ಮಾನ್ಯ ವಿರೋಧ ಪಕ್ಷದ ನಾಯಕರೇ, ಬಡವರಿಗೆ ಕಡಿಮೆ ದರದಲ್ಲಿ ಮರಳು ಸಿಗಬೇಕು. ಎಲ್ಲರೂ ಇದರ ಬಗ್ಗೆ ಮಾತನಾಡೋಣ ಎಂದು ನಾನು ಹೇಳುತ್ತಿದ್ದಾನೆ. ಇದರ ಬಗ್ಗೆ ಯಾವ ರೀತಿ ಮಾಡಬೇಕೆಂಬುದರ ಬಗ್ಗೆ ತಾವು ಸಲಹೆಯನ್ನು ಕೊಡಲಿ.

**(ಗೊಂದಲ)**

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ನಿಯಮ 330 ನ್ನು ತೆಗೆದುಕೊಳ್ಳುತ್ತಿರೋ ಅಥವಾ ಅರ್ಧ ಗಂಟೆ ಚರ್ಚೆ ಅಡಿಯಲ್ಲಿ ತೆಗೆದುಕೊಳ್ಳುತ್ತಿರೆಂಬುದರ ಬಗ್ಗೆ ನೋಡಿ.

**(ಗೊಂದಲ)**

**ಶ್ರೀ ರಾಜಶೇಖರ ಬಿ. ಪಾಟೀಲ್:–** ನಿಯಮ 330 ರಡಿಯಲ್ಲಿ ಚರ್ಚೆ ಮಾಡೋಣ.

“ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**(ಗೊಂದಲ)**

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಆಯಿತು. ಧನ್ಯವಾದಗಳು.

(ಮುಂದು..)

(392)12.12.2018,4.20,ಟಿಸಿಹೆಚ್/ಕೆಎಸ್ (ಸಭಾಪತಿಯವರ ಉಪಸ್ಥಿತಿ)

**ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ.364**
**(ಉತ್ತರ ಲಗತ್ತಿಸಿದೆ)**

**ಶ್ರೀ ಸುನಿಲ್ ಸುಬ್ರಮಣಿ ಎಂ.ಪಿ:–** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ನಾನು ಕೇಳಿರುವಂತಹ ಪ್ರಶ್ನೆಗೆ "ಮಿನಿ ವಿಧಾನ ಸೌಧ ನಿರ್ಮಾಣ ಕಾಮಗಾರಿ ಪ್ರಾರಂಭಿಸಲಾಗಿತ್ತು. ಆದರೆ, ಅಡಿಪಾಯ ತೆಗೆದಾಗ ಸದರಿ ಮಣ್ಣಿನಲ್ಲಿ ಭಾರ ಧರಿಸುವ ಶಕ್ತಿ (ಎಸ್.ಬಿ.ಸಿ) ಕಡಿಮೆ ಇರುವುದಾಗಿ ಕಂಡುಬಂದಿದ್ದರಿಂದ ಕಾಮಗಾರಿ ಮುಂದುವರೆಸಲು ಸಾಧ್ಯವಾಗಿರಲಿಲ್ಲ. ನಂತರ ತಾಂತ್ರಿಕ ಪರಿಣಿತರ ಅಭಿಪ್ರಾಯ ಪಡೆಯಲಾಗಿದ್ದು, 6.50 ಮೀ. ಆಳದ ಅಡಿಪಾಯ ತೆಗೆದು ರ್‍ಯಾಫ್ಟ್ ಫೌಂಡೇಶನ್ ಅಳವಡಿಸಿ ಕಟ್ಟಡ ನಿರ್ಮಿಸಲು ಸಲಹೆ ನೀಡಿದ ಪ್ರಯುಕ್ತ, ಆ ಪ್ರಕಾರ ಕಾಮಗಾರಿಯನ್ನು ಆರಂಭಿಸಲಾಗಿದ್ದು, ಕಾಮಗಾರಿ ಕೆಲಸ ಕ್ಷಿಪ್ರಗತಿಯಲ್ಲಿ ನಡೆಯುತ್ತಿದೆ" ಎಂದು ಉತ್ತರವನ್ನು ಒದಗಿಸಿದ್ದಾರೆ. ಅಕ್ಟೋಬರ್ ತಿಂಗಳಿನ ಶಕ್ತಿ ಪತ್ರಿಕೆಯಲ್ಲಿ "ಅಡಿಪಾಯದ ಹಂತದಲ್ಲೇ ಮುಳುಗಡೆಯಾದ ಮಿನಿ ವಿಧಾನಸೌಧ" ಎಂದು ವರದಿಯಾಗಿರುತ್ತದೆ. ಈ ಕಟ್ಟಡದ ಕಾಮಗಾರಿಯು ಆಗಸ್ಟ್ 2018 ರಿಂದ 11 ತಿಂಗಳಲ್ಲಿ ಮುಕ್ತಾಯಗೊಳಿಸಲು ಗುತ್ತಿಗೆದಾರರಿಗೆ ಸೂಚಿಸಲಾಗಿದೆ ಎಂದು ಹೇಳಿದ್ದಾರೆ. ಈಗಾಗಲೇ 5 ತಿಂಗಳು ಕಳೆದಿದೆ. ಇನ್ನುಳಿದ 6 ತಿಂಗಳಿನಲ್ಲಿ ಸದರಿ ಕಟ್ಟಡದ ಕಾಮಗಾರಿಯನ್ನು ಮುಕ್ತಾಯಗೊಳಿಸಲು ಆಗುತ್ತದೆಯೇ? ಸದನದಲ್ಲಿ ಪ್ರಶ್ನೆ ಕೇಳಿದ ಸಂದರ್ಭದಲ್ಲಿ ನಾನು ಎರಡು ಬಾರಿ ಭೇಟಿ ಕೊಟ್ಟೆನು. ಈ ವಿಚಾರ ಪತ್ರಿಕೆಯಲ್ಲಿ ಬಂದ ತಕ್ಷಣವೇ ಸಾರ್ವಜನಿಕರು ನನಗೆ ಫೋನ್ ಮಾಡುತ್ತಿದ್ದರು. ಆ ಸಂದರ್ಭದಲ್ಲಿ ಪತ್ರಿಕೆಯಲ್ಲಿ ಈ ವಿಷಯ ವರದಿಯಾಗಿರುವುದು ವಾಸ್ತವ ಸಂಗತಿಯೇ ಎಂದು ನಾನು ಅಲ್ಲಿಗೆ ನೋಡಲು ಹೋದೆನು. ಈ ಸಂದರ್ಭದಲ್ಲಿ ಯಾವುದೇ ಕೆಲಸಗಾರರು ಅಲ್ಲಿ ಇರಲಿಲ್ಲ. ಅಲ್ಲಿ ಒಬ್ಬರು watchman ಇದ್ದರು. ಅವರಿಂದ ಸಂಬಂಧಪಟ್ಟ ಇಂಜಿನಿಯರ್ ಜೊತೆ ಫೋನ್ ಮಾಡಿ ವಿಚಾರಿಸಿದಾಗ, ಕೆಲಸ ಮಾಡುತ್ತಾರೆ ಎಂದು ಹೇಳುತ್ತಾರೆ. ಆದರೆ ಅಲ್ಲಿ ಯಾವುದೇ ರೀತಿಯ ಕೆಲಸಗಳು ಆಗುತ್ತಿಲ್ಲ. Madikeri is the headquarters of Kodagu district. ಅಲ್ಲಿನ ಪರಿಸ್ಥಿತಿ ಈ ರೀತಿ ಆದರೆ, ಉಳಿದ ಕಡೆಗಳಲ್ಲಿ ಯಾವ ರೀತಿಯ ಪರಿಸ್ಥಿತಿ ಇದೆ. ಏಕೆಂದರೆ, ಶಕ್ತಿ

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಪತ್ರಿಕೆಯಲ್ಲಿ ಮಿನಿ ವಿಧಾನಸೌಧ ಮುಳುಗಡೆಯಾಗಿದೆ ಎಂದು ವರದಿಯಾಗಿದೆ. ನಂತರ ಸದರಿ ಕಟ್ಟಡ ಕಾಮಗಾರಿ ಸಂಬಂಧ ಜಿಲ್ಲಾಧಿಕಾರಿಗಳಿಗೆ ಮಣ್ಣಿನ ಪರೀಕ್ಷೆಗೆ ಕಳುಹಿಲಾಗಿದೆ ಎಂದು ಹೇಳಿದ್ದಾರೆ. ಕಾಮಗಾರಿ ಪ್ರಾರಂಭಿಸುವುದಕ್ಕೆ ಮುಂಚಿತವಾಗಿ ಮಣ್ಣಿನ ಪರೀಕ್ಷೆಯನ್ನು ಮಾಡುವುದಿಲ್ಲವೇ? ಈಗಾಗಲೇ 5 ತಿಂಗಳ ಅವಧಿ ಮುಗಿದಿದೆ. ಇನ್ನು ಉಳಿದ 6 ತಿಂಗಳಿನಲ್ಲಿ ಕಾಮಗಾರಿ ಕೆಲಸ ಮುಗಿಯುತ್ತದೆಯೇ? ಏಕೆಂದರೆ, ಮಾನ್ಯ ಸಚಿವರ ಬಗ್ಗೆ ನಮಗೆ ತುಂಬಾ ಗೌರವವಿದೆ ಮತ್ತು ಅಭಿಮಾನವಿದೆ. ಏಕೆಂದರೆ, ಕೊಡಗಿನಲ್ಲಿ ಆದಂತಹ ಪ್ರಕೃತಿ ವಿಕೋಪ ಸಂದರ್ಭದಲ್ಲಿ, ಮಾನ್ಯ ಸಚಿವರು ಆಪತ್ತಿನ ಕಾಲದಲ್ಲಿ ಬಹಳ ಉತ್ತಮ ಕೆಲಸ ಮಾಡಿದ್ದಾರೆ. ಎಲ್ಲಾ ರೀತಿಯಲ್ಲೂ ಉತ್ತಮ ಸಹಕಾರ ನೀಡಿದ್ದಾರೆ. ಅದೇ ರೀತಿಯಾಗಿ ಈ ಕೆಲಸವನ್ನು ಮಾನ್ಯ ಸಚಿವರು ಮಾಡಿಸಿಕೊಡಬೇಕೆಂದು ತಮ್ಮ ಮೂಲಕ ಕೇಳಿಕೊಳ್ಳುತ್ತೇನೆ.

**ಶ್ರೀ ಆರ್.ವಿ.ದೇಶಪಾಂಡೆ:–** ರ್‍ಯಾಫ್ಟ್ ಫೌಂಡೇಶನ್ 3 ಮೀಟರ್ ಹೋಗಿ ಬಂದ ನಂತರ, ಮಣ್ಣು ಗಟ್ಟಿ ಇಲ್ಲ, ಸಡಿಲವಾಗಿದೆ ಎಂದು ಅಭಿಪ್ರಾಯ ಬಂದ ನಂತರ, ದಿನಾಂಕ 04.02.2018ಕ್ಕೆ National Institute of Engineering (NIE) College, Mysuru and National Institute of Technology (NIT) Karnataka, Surathkal ರವರು ವರದಿ ಕೊಟ್ಟಿದ್ದಾರೆ. ಆದ್ದರಿಂದ ಅವರು ತಕ್ಷಣ ಕ್ರಮ ತೆಗೆದುಕೊಳ್ಳಬೇಕಾಗಿತ್ತು. ಸದರಿ ಕಟ್ಟಡದ ಕಾಮಗಾರಿಯನ್ನು ಆಗಸ್ಟ್ 2018 ರಿಂದ 11 ತಿಂಗಳಲ್ಲಿ ಮುಕ್ತಾಯಗೊಳಿಸಲು ಗುತ್ತಿಗೆದಾರರಿಗೆ ಸೂಚಿಸಲಾಗಿತ್ತು. ಈಗ ನವೆಂಬರ್ ತಿಂಗಳು ಮುಗಿದು ಡಿಸೆಂಬರ್‌ನಲ್ಲಿದ್ದೇವೆ. ಜುಲೈ 2019ರಲ್ಲಿ ಈ ಕೆಲಸವನ್ನು ಮುಗಿಸುತ್ತೇವೆಂದು ಹೇಳಿದ್ದಾರೆ. ಸ್ವಲ್ಪ ವಿಳಂಬ ಆಗಿದೆ. ಇದನ್ನು ನಾನು ಒಪ್ಪಿಕೊಳ್ಳುತ್ತೇನೆ. ಆದಷ್ಟು ಬೇಗನೆ ಪ್ರಾಧಾನ್ಯತೆ ಮೇಲೆ ಈ ಕೆಲಸವನ್ನು ಮುಗಿಸುವುದಕ್ಕೆ ಸರ್ಕಾರದಿಂದ ಪ್ರಯತ್ನಿಸಲಾಗುವುದು.

**ಶ್ರೀ ಸುನಿಲ್ ಸುಬ್ರಮಣಿ ಎಂ.ಪಿ:–** ಮಾನ್ಯ ಸಭಾಪತಿಯವರೇ, ಏಕೆಂದರೆ, ಇತ್ತೀಚೆಗೆ ನಾನು ಅಲ್ಲಿಗೆ ಭೇಟಿ ಕೊಟ್ಟಿದ್ದೇನೆ. ಆ ಸ್ಥಳದಲ್ಲಿ ಯಾರೂ ಇಲ್ಲ. ಶಕ್ತಿ ಪತ್ರಿಕೆಯಲ್ಲಿ ಏನು ವರದಿ ಆಗಿದೆ, ಅದೇ ಸ್ಥಿತಿಯಲ್ಲಿ ಇದೆ. ವಾಸ್ತವ ಸಂಗತಿ ಅದೇ ರೀತಿ ಇರುತ್ತದೆ. 5 ತಿಂಗಳು ಕಳೆದರೂ ಕಾಮಗಾರಿ ಪ್ರಾರಂಭವಾಗಿಲ್ಲ. ಏಕೆಂದರೆ ಅಕ್ಟೋಬರ್‌ನಲ್ಲಿ ಈ ವಿಚಾರವು ಶಕ್ತಿ ಪತ್ರಿಕೆಯಲ್ಲಿ ವರದಿಯಾಗಿರುತ್ತದೆ. ನಾನು ಡಿಸೆಂಬರ್‌ನಲ್ಲಿ ಸ್ಥಳಕ್ಕೆ ಭೇಟಿ ಕೊಟ್ಟಿದ್ದೆನು. ತಾವು ಅದನ್ನು ಒಮ್ಮೆ ನೋಡಿ ಪರಿಶೀಲನೆ ಮಾಡಬೇಕು. ಏಕೆಂದರೆ ಸದನದಲ್ಲಿ ನಾವು ಸುಳ್ಳು ಹೇಳುವುದಕ್ಕೆ ಆಗುವುದಿಲ್ಲ. ವಾಸ್ತವ ಸಂಗತಿಯನ್ನು ಮಾನ್ಯ ಸಚಿವರ ಮುಂದೆ ಹೇಳಬೇಕಲ್ಲವೇ? ಅದಕ್ಕಾಗಿ ಕೇಳುತ್ತಿದ್ದೇನೆ ಅಷ್ಟೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಆರ್.ವಿ.ದೇಶಪಾಂಡೆ:-** ಕೊಡಗು ಜಿಲ್ಲೆಯ ದುರಸ್ತಿ ಕೇಂದ್ರಗಳಿಗೆ ಭೇಟಿ ಕೊಡುವ ಸಂದರ್ಭದಲ್ಲಿ ಈ ಕಟ್ಟಡವನ್ನೂ ಕೂಡ ನೋಡಿದ್ದೆನು. ಮಾನ್ಯ ಸದಸ್ಯರು ಕೇಳಿರುವ ಪ್ರಶ್ನೆಗೆ, ಅಲ್ಲಿ ಗುಣಮಟ್ಟದ ಕೆಲಸ ಆಗಬೇಕು. ಬೇಗನೆ ಕೆಲಸ ಮುಗಿಯಬೇಕು. ಜನರಿಗೆ ಅನುಕೂಲ ಕೂಡ ಆಗಬೇಕು ಹೌದಲ್ಲವೆ? I can understand the sentiments of the Hon'ble Member. ಸರ್ಕಾರದಿಂದ ಪ್ರಾಮಾಣಿಕವಾಗಿ ಪ್ರಯತ್ನ ಮಾಡುತ್ತೇವೆ. ಒಂದು ವೇಳೆ, ಇನ್ನು ಮಂದೆ ಸದರಿ ಕಟ್ಟಡದ ಕಾಮಗಾರಿ ನಡೆಯದಿದ್ದರೆ, ತಾವು ಈ ಬಗ್ಗೆ ನನಗೆ ತಿಳಿಸಿದರೆ, ನಾನು ಸಂಬಂಧಪಟ್ಟವರಿಗೆ ನಿರ್ದೇಶನ ಕೊಡುತ್ತೇನೆ. ಅಲ್ಲಿ ಗುತ್ತಿಗೆದಾರರು ಕೆಲಸ ಮಾಡಲಿಲ್ಲವೆಂದರೆ, ಮುಂದಿನ ಕ್ರಮ ಕೈಗೊಳ್ಳಿ ಎಂದು ಹೇಳುತ್ತೇನೆ.

**ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ.358**
**(ಉತ್ತರ ಲಗತ್ತಿಸಿದೆ)**

**ಡಾ॥ ವೈ.ಎ.ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಯವರೇ, ನಾನು ಕೇಳಿದಂತಹ ಪ್ರಶ್ನೆಗೆ ಮಾನ್ಯ ಸಚಿವರು ಉತ್ತರವನ್ನು ಕೊಟ್ಟಿದ್ದಾರೆ. ಖಾಸಗಿ/ಸರ್ಕಾರಿ ಜಮೀನುಗಳಿಗೆ ಮಾರ್ಗದರ್ಶಿ ಬೆಲೆ ನಿಗದಿಗೊಳಿಸಲು ಅನುಸರಿಸುತ್ತಿರುವ ಮಾನದಂಡಗಳೇನು? ಎಂದು ಪ್ರಶ್ನೆ ಕೇಳಿದ್ದೇನೆ. ಈ ಮಾರ್ಗದರ್ಶಿ ಬೆಲೆಯನ್ನು ಪ್ರತಿ ವರ್ಷ ಹೆಚ್ಚಿಗೆ ಮಾಡುತ್ತೀರಾ ಮತ್ತು ಯಾವ್ಯಾವಾಗ ಬೆಲೆಯನ್ನು ಹೆಚ್ಚಿಗೆ ಮಾಡುತ್ತೀರಾ ಎನ್ನುವ ಬಗ್ಗೆ ಎರಡು ಸಣ್ಣ ಸುಲಭವಾದ ಪ್ರಶ್ನೆಗಳನ್ನು ಕೇಳಿದ್ದೇನೆ. ನಾನು ಈ ಪ್ರಶ್ನೆಗಳನ್ನು ಕೇಳಿರುವ ಉದ್ದೇಶವೇನೆಂದರೆ, ಮಾನ್ಯ ಸಚಿವರು ಕಂದಾಯ ಇಲಾಖೆಗೆ ಸಚಿವರಾಗಿ ಬಂದ ನಂತರ, ಬಹಳ ಶಕ್ತಿಯುತವಾಗಿ ಕೆಲಸವನ್ನು ಮಾಡುತ್ತಿದ್ದಾರೆ, ನಾನು ಇಲ್ಲವೆಂದು ಹೇಳುತ್ತಿಲ್ಲ. Karnataka Land Reforms Act ಪ್ರಕಾರ, ಕೃಷಿ ಭೂಮಿಯನ್ನು ಕೃಷಿಗಷ್ಟೇ ಕೊಂಡುಕೊಳ್ಳಬೇಕು. ಕೃಷಿಯೇತರಕ್ಕೆ ಕೊಂಡುಕೊಳ್ಳುವುದಕ್ಕೆ ಸಾಧ್ಯವಿಲ್ಲ. ಆದರೆ, ಮಾನ್ಯ ಶ್ರೀನಿವಾಸ್ ಪ್ರಸಾದ್‌ರವರು ಕಂದಾಯ ಇಲಾಖೆ ಸಚಿವರಾಗಿರುವವರೆಗೆ ಕೃಷಿಕರು ಖರೀದಿ ಮಾಡಬೇಕಾದಲ್ಲಿ ಸರ್ಕಾರ ceiling limit ಅನ್ನು 1979 ರಿಂದ 2 ಲಕ್ಷ ರೂಪಾಯಿಗಳನ್ನು ಮಾಡಿದ್ದರು. ಆದರೆ, ಶ್ರೀ ಆರ್.ವಿ.ದೇಶಪಾಂಡೆಯವರು ಕಂದಾಯ ಸಚಿವರಾಗಿ ಬಂದನಂತರ 25 ಲಕ್ಷ ರೂಪಾಯಿಗಳ ಒಳಗೆ ಕೃಷಿ ಭೂಮಿಯನ್ನು ಖರೀದಿಸಬಹುದೆಂದು ಮಾಡಿದ್ದಾರೆ. Ceiling limit 25 ಲಕ್ಷ ರೂಪಾಯಿಗಳಿಗಿಂತ ಹೆಚ್ಚಿಗೆ ಇದ್ದಲ್ಲಿ, it will attract Section 79A and 79B of the Karnataka Land Reforms Act ಅಲ್ಲವೇ. ಈ Section 79A and 79B ಎನ್ನುವ ಈ ಕಾಯ್ದೆ ಇದೆಯಲ್ಲಾ, ಇದರ ವ್ಯವಸ್ಥೆ ನಮಗೆ ಇನ್ನೂ ಅರ್ಥವಾಗಿಲ್ಲ. ಕರ್ನಾಟಕ ರಾಜ್ಯದಲ್ಲಿ Section 79A and 79B ಎನ್ನುವುದೇ ಒಂದು ದೊಡ್ಡ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಮಾಫಿಯ ಆಗಿದೆ. It is another stage for the rampant corruption in the Department of Revenue. I am sorry to say this. ದಯವಿಟ್ಟು ನೇರವಾಗಿ ನನಗೆ ಒಂದು ಪ್ರಶ್ನೆಗೆ ಉತ್ತರ ಹೇಳಲಿ. ನಾನು ಮಾನ್ಯ ಸಚಿವರಿಗೆ ಅಂಕಿ-ಅಂಶವನ್ನು ಕೇಳುವುದಿಲ್ಲ. ಏಕೆಂದರೆ, ಅದು ಪ್ರಶ್ನೆಯಲ್ಲಿ ಕೇಳಿಲ್ಲ. ಆ ಅಂಕಿ-ಅಂಶವನ್ನು ಕೇಳಿದರೆ, ನಾವು ಕಳುಹಿಸಿಕೊಡುತ್ತೇವೆಂದು ಹೇಳುತ್ತಾರೆ. ನಿಮ್ಮ ಆತ್ಮ ಸಾಕ್ಷಿಯಾಗಿ ಹೇಳಿ. Section 79A and 79B ಪ್ರಕಾರ ಎಷ್ಟು ಭೂಮಿಗಳನ್ನು ನೀವು ಮುಟ್ಟುಗೋಲು ಹಾಕಿಕೊಂಡಿದ್ದೀರಿ ಎಂದು ಒಂದು ಉದಾಹರಣೆಯನ್ನು ಹೇಳಿ. ನಿಮ್ಮ ಸರ್ಕಾರ ಮತ್ತು ನಾವು ಇದ್ದಾಗಲೂ ಕೂಡ ಇದೇ ರೀತಿ ಆಗಿದೆ. ಇದರಲ್ಲಿ ನಾನು ಮಾನ್ಯ ಸಚಿವರನ್ನು ನೇರವಾಗಿ ಆರೋಪ ಮಾಡುತ್ತಿಲ್ಲ. ನಾವೆಲ್ಲರೂ ಸೇರಿ ಇದಕ್ಕೆ ಏನಾದರೂ ಒಂದು ಪರಿಹಾರ ಕಂಡುಕೊಳ್ಳಬೇಕಲ್ಲವೇ? It is creating another pipeline for corruption in the Revenue Department. ಬೆಲೆ ನಿಗದಿಪಡಿಸುವವರು ನೀವೆ, Section 79A and 79B ಅನ್ನು enforce ಮಾಡುವುದು ನೀವೆ ಎಂದರೆ ಏನು ಇದರ ಅರ್ಥ? ಇದನ್ನು ನಾವು ರಿಪೇರಿ ಮಾಡಬೇಕಲ್ಲವೇ? ದಯವಿಟ್ಟು ಇದನ್ನು ರಿಪೇರಿ ಮಾಡಬೇಕೆಂದು ತಮ್ಮಲ್ಲಿ ಮನವಿ ಮಾಡಿಕೊಳ್ಳುತ್ತೇನೆ. ಇಲ್ಲವೇ Section 79A and 79B ಯನ್ನು ತೆಗೆದುಹಾಕಿ, enhancement ಅನ್ನು ನೀವು ವೈಜ್ಞಾನಿಕವಾಗಿ ಮಾಡಿ. ಇದಕ್ಕೆ ನಾನು ಒಂದು ಉತ್ತಮವಾದ ಉದಾಹರಣೆಯನ್ನು ಹೇಳುತ್ತೇನೆ. ಕೋಲಾರ ತಾಲ್ಲೂಕಿನಲ್ಲಿ ಕೋಡಿ ರಾಮಸಂದ್ರ, ಅಜ್ಜಪ್ಪನಹಳ್ಳಿ ಹಾಗೂ ತಮಕ ಎಂದು ಹಳಿಗಳು ಇವೆ. ಈ ಹಳ್ಳಿಗಳಲ್ಲಿ ಕಳೆದ ವರ್ಷದವರೆಗೆ ಜಮೀನಿನ ಬೆಲೆ ಒಂದು ಎಕರೆಗೆ ಹನ್ನೊಂದು ಲಕ್ಷ ರೂಪಾಯಿಗಳು ಇತ್ತು. ಆದರೆ, ಈ ವರ್ಷ ಏಕಾಏಕಿ ಒಂದು ಎಕರೆಗೆ ಒಂದು ಕೋಟಿ ರೂಪಾಯಿಗಳನ್ನು ನಿಗದಿಪಡಿಸಿದ್ದೀರಿ. (ಈ ಹಂತದಲ್ಲಿ ಮಾರ್ಗಸೂಚಿ ದರ ನಿಗದಿಪಡಿಸಿರುವ ಪ್ರತಿಯನ್ನು ಸದನಕ್ಕೆ ತೋರಿಸಲಾಯಿತು) ಸರ್ಕಾರದಲ್ಲಿ objection ಕರೆಯುತ್ತೀರಿ ಇನ್ನಿತರ procedure ಮಾಡುತ್ತೀರಿ. ಆದರೆ, objection ಸಲ್ಲಿಸಲು ಯಾರು ಬರುತ್ತಾರೋ ಯಾರು ಬರುವುದಿಲ್ಲವೋ ಗೊತ್ತಾಗುವುದಿಲ್ಲ. ಇಷ್ಟ ಬಂದಂತೆ ಮಾಡಿಕೊಂಡು ಹೋಗುತ್ತಿದ್ದಾರೆ. ಆದ್ದರಿಂದ ದಯವಿಟ್ಟು ನಿಮ್ಮ ಇಲಾಖೆಯಲ್ಲಿ ವ್ಯವಸ್ಥೆ ಬಹಳಷ್ಟು ಕೆಟ್ಟುಹೋಗಿದೆ. ಇವತ್ತಿಗೆ ಈ ಪ್ರಶ್ನೆಗೆ ಸೀಮಿತವಾಗಿ ದಯವಿಟ್ಟು Section 79A and 79B ಅನ್ನು abolish ಮಾಡುತ್ತಾರೆಯೇ; ಇದನ್ನು ಮಾಡದಿದ್ದರೆ, ಇವತ್ತಿನ ದಿವಸ ನೀವೇನು ಅವೈಜ್ಞಾನಿಕವಾಗಿ ಬೆಲೆಯನ್ನು ನಿಗದಿಗೊಳಿಸುತ್ತಿದ್ದೀರಿ ಅದನ್ನು ಪರಿಷ್ಕರಣೆ ಮಾಡಿ. ರೈತರು ಕೊಂಡುಕೊಳ್ಳುವ ವ್ಯವಸ್ಥೆಗೆ ತಕ್ಕಂತೆ ಬೆಲೆಯನ್ನು ನಿಗದಿಪಡಿಸಲಾಗುತ್ತದೆಯೇ

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಎನ್ನುವ ಒಂದು ಸಣ್ಣ ಪ್ರಶ್ನೆಯನ್ನು ನಿಮಗೆ ಕೇಳುತ್ತಿದ್ದೇನೆ. ಮಾನ್ಯ ಸಚಿವರು ಉತ್ತರ ಕೊಡಬೇಕಾದರೆ, ನನ್ನದೊಂದು ಮನವಿ ಇದೆ. Section 79A and 79B ಪ್ರಕಾರ ತಾವು ಕಂದಾಯ ಸಚಿವರು ಆದಾಗಿನಿಂದ ಎಷ್ಟು ಆಸ್ತಿಗಳನ್ನು ತಮ್ಮ ಇಲಾಖೆಯ ಅಧಿಕಾರಿಗಳು ಮುಟ್ಟುಗೋಲು ಹಾಕಿಕೊಂಡಿದ್ದಾರೆ ಎಂದು ಹೇಳಬೇಕು. ಒಂದುವೇಳೆ, ಅದನ್ನು ಮುಟ್ಟುಗೋಲು ಹಾಕಿಕೊಳ್ಳದಿದ್ದರೆ, ಎಷ್ಟು ಜನಕ್ಕೆ ನೋಟೀಸ್ ಕೊಟ್ಟಿದ್ದಾರೆ, ಎಷ್ಟು ದುಡ್ಡನ್ನು ಸಂಗ್ರಹಿಸಿದ್ದಾರೆ ಎನ್ನುವಂತಹ ಮಾಹಿತಿಯನ್ನು ಕೊಡಬೇಕೆಂದು ಕೇಳುತ್ತಿದ್ದೇನೆ.

**ಶ್ರೀ ಆರ್.ವಿ.ದೇಶಪಾಂಡೆ:-** ಮಾನ್ಯ ಸಭಾಪತಿಯವರೇ, ನಮ್ಮ ಸ್ನೇಹಿತರಾದ ಡಾ॥ ವೈ.ಎ.ನಾರಾಯಣಸ್ವಾಮಿಯವರು Section 79A and 79B ಗೆ ಹೋಗಿಯೇ ಇಲ್ಲ.

**ಡಾ॥ ವೈ.ಎ.ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಯವರೇ, ಅದಕ್ಕೆ ಸಂಬಂಧಪಟ್ಟಿದೆಯಲ್ಲವೆ.

**ಶ್ರೀ ಆರ್.ವಿ.ದೇಶಪಾಂಡೆ:-** ಮಾನ್ಯ ಸಭಾಪತಿಯವರೇ, ಉತ್ತರವನ್ನು ಕೊಡುತ್ತೇನೆ. ಮಾನ್ಯ ಸದಸ್ಯರು ಕೇಳಿರುವ ಪ್ರಶ್ನೆ ನಾವೇನು ಮಾರ್ಗದರ್ಶಿ ದರ ನಿಗದಿಪಡಿಸುತ್ತೇವೆ, ಅದರ ಬಗ್ಗೆ ಇದೆ. ಈ guidance value ಪ್ರತಿವರ್ಷ ನಿಗದಿಪಡಿಸಬೇಕೆಂದು ಇದೆ. ಇಡೀ ಕರ್ನಾಟಕ ರಾಜ್ಯದಲ್ಲಿ ಕೃಷಿ ಜಮೀನು ಇರಬಹುದು, ವಾಣಿಜ್ಯ ಉದ್ದೇಶಕ್ಕೆ ಇರಬಹುದು, ಕೈಗಾರಿಕೆ ಉದ್ದೇಶಕ್ಕೆ ಇರಬಹುದು ಮತ್ತು Green belt lands ಇರಬಹುದು. (ಮುಂದು...)

**(393)12-12-2018(4-30)ಎಂ.ಎಂ-ಜಿ.ಆರ್**

(ಸಭಾಪತಿಯವರ ಉಪಸ್ಥಿತಿ)

**ಚುಕ್ಕೆ ಪ್ರಶ್ನೆ ಸಂಖ್ಯೆ: 358 (ಮುಂದು)**

**ಶ್ರೀ ಆರ್.ವಿ. ದೇಶಪಾಂಡೆ (ಮುಂದು):-** ಆದರೆ ಕೆಲವು ಸಲ drought ಆಗಬಹುದು, flood ಆಗಬಹುದು, ಕೆಲವೊಮ್ಮೆ ಸಮಸ್ಯೆ ಬರುತ್ತದೆ. ಇಂತಹ ಪರಿಸ್ಥಿತಿಯಲ್ಲಿ ಸರ್ಕಾರವು ಪ್ರತಿ ವರ್ಷ; ಉದಾಹರಣೆಗೆ 2011-12 ರಲ್ಲಿ ಆಯಿತು. 2012-13 ಮಾಡಿಲ್ಲ, 2013-14 ಆಯಿತು, 2014-15 ಆಯಿತು 2015-16 ಮಾಡಿಲ್ಲ, 2016-17 ಮಾಡಿದೆವು, 2017-18 ದಿನಾಂಕ 01-4-2017ರಂದು ಮಾಡಿ ಡಿಸೆಂಬರ್‌ಗೆ ಒಂದು ವರ್ಷ ಎಂಟು ತಿಂಗಳಾಯಿತು. ಇದರ ಪ್ರೊಸೀಜರ್ ಅನ್ನು ನಿಮಗೆ ಹೇಳಬೇಕಿಲ್ಲ. ಏಕೆಂದರೆ, ನೀವೆಲ್ಲಾ experts ಇದ್ದೀರಿ. ತಹಸೀಲ್ದಾರರ ಅಧ್ಯಕ್ಷತೆಯಲ್ಲಿ ತಾಲ್ಲೂಕು

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಮಟ್ಟದಲ್ಲಿ ಒಂದು ಸಮಿತಿ ಇರುತ್ತದೆ. ಅದಕ್ಕೆ ಸಂಬಂಧಪಟ್ಟ ಸದಸ್ಯರು ಇರುತ್ತಾರೆ. Sub-Registrar ರವರ ಸಹಾಯದಿಂದ Data collection ಮಾಡಿ ಅವರು ನೋಟಿಫೈ ಮಾಡಿ ಆಕ್ಷೇಪಣೆಗಳನ್ನು ಸಲ್ಲಿಸಲು ಕರೆಯುತ್ತಾರೆ. ಅದರ ನಂತರ CVC (Central Valuation Committee) ಗೆ ಹೋಗುತ್ತದೆ. ರಾಮನಗರ, ಬೆಂಗಳೂರು ಗ್ರಾಮಾಂತರ ಮತ್ತು ಬೆಂಗಳೂರು ನಗರಗಳಲ್ಲಿ CVC ಇದೆ, ತಹಸೀಲ್ದಾರ್ ಕಮಿಟಿ ಇಲ್ಲ. ಅದರಂತೆ ಅವರು ಆ ಪ್ರಸ್ತಾಪವನ್ನು ಸ್ವೀಕರಿಸಬಹುದು ಅಥವಾ ತಿರಸ್ಕರಿಸಬಹುದು, accept ಮಾಡಬಹುದು ಅಥವಾ remand ಸಹ ಮಾಡಬಹುದು. ಅಂದರೆ ಕೈಗಾರಿಕಾ ಪ್ರತಿನಿಧಿ ಇರುತ್ತಾರೆ. ಲೋಕೋಪಯೋಗಿ ಇಲಾಖೆ, ಆದಾಯ ತೆರಿಗೆ ಇಲಾಖೆಯ ಎಲ್ಲರೂ ಇರುತ್ತಾರೆ. ಬೆಲೆ ನಿಗದಿಯಾದ ನಂತರ ಪುನಃ District Registrar ನೋಟಿಫೈ ಮಾಡಿತ್ತಾರೆ. ಅದರ ಪ್ರಕ್ರಿಯೆ ನಡೆಯುತ್ತಿದೆ. ಕರ್ನಾಟಕ ಭೂ ಕಂದಾಯ ಕಾಯ್ದೆಯ ಕಲಂ 79ಎ ಮತ್ತು ಬಿ ಬಗ್ಗೆ ಕೇಳಿದ್ದೇವೆ. ಕೆಲವು ಸಮಯ ನಾನು ನ್ಯಾಯವಾದಿಯಾಗಿ ಕೆಲಸ ಮಾಡಿದ್ದೇನೆ. ಭೂ ಸುಧಾರಣೆ ಪ್ರಕರಣವನ್ನು ವಿವರವಾಗಿ ಡೀಲ್ ಮಾಡಿದ್ದೇನೆ. ಕಲಂ 79ಎ ಮತ್ತು ಬಿ ಅನ್ನು ಒಳ್ಳೆಯ ಉದ್ದೇಶದಿಂದ ಮಾಡಿದ್ದೇವೆ. ಅದರ ಬಗ್ಗೆ ಯಾರೂ ಛಾಲೆಂಜ್ ಮಾಡುವುದಕ್ಕಾಗುವುದಿಲ್ಲ. ರೈತರ ಹಿತ ಸಂರಕ್ಷಣೆ ಆಗಬೇಕು, ರೈತರಿಗೆ ಮೋಸ ಆಗಬಾರದು ಹಾಗೂ ಬಹಳ ಆರ್ಥಿಕವಾಗಿ ಸಂಪನ್ನರಾದ ಜನ ಪುನಃ ಭೂ ಮಾಲೀಕರಾಗಬಾರದು ಎನ್ನುವುದು ನಮ್ಮ ಆಶಯ. Income limit ಇದೆ. ಅದು ಬೇರೆ ಪ್ರಶ್ನೆ. ಆ ದಿಕ್ಕಿನಲ್ಲಿ ಮಾಡಿದ್ದೇವೆ. ಆದರೆ ಕೆಲವು ಕಡೆ ಇದು ದುರುಪಯೋಗವಾಗುತ್ತಿದೆ ಎನ್ನುವುದನ್ನು ನಾನು ಒಪ್ಪಿಕೊಳ್ಳುತ್ತೇನೆ. ಮಂತ್ರಿಯಾಗಿ ಹೇಳಬೇಕಾದರೆ ನಾನು ಬಹಳ ಜವಾಬ್ದಾರಿಯಾಗಿ ಹೇಳಬೇಕಾಗುತ್ತದೆ.

**ಡಾ:ವೈ.ಎ. ನಾರಾಯಣಸ್ವಾಮಿ:–** ಮಾನ್ಯ ಸಚಿವರೇ, ಸದುಪಯೋಗವಾಗಿದ್ದರೆ ಅದರ ಬಗ್ಗೆ ತಿಳಿಸಿ.

**ಶ್ರೀ ಆರ್.ವಿ. ದೇಶಪಾಂಡೆ:–** ಮಾನ್ಯ ಸಭಾಪತಿಯವರೇ, ಮೊನ್ನೆ ದಿವಸ ಕ್ಯಾಬಿನೆಟ್‌ನಲ್ಲಿ ಒಂದು ತೀರ್ಮಾನವಾಗಿದೆ. ತಾವೆಲ್ಲಾ ದಿನಪತ್ರಿಕೆಯಲ್ಲಿ ಓದಿರಬಹುದು. ಕೃಷಿ ಭೂಮಿಯನ್ನು ಕೃಷಿಯೇತರ ಭೂಮಿಯನ್ನಾಗಿ ಮಾಡಿಕೊಳ್ಳಬೇಕಾದರೆ 18–20 ದಾಖಲೆಗಳನ್ನು ಕೊಡಬೇಕಾಗಿತ್ತು. ಕಲಂ 79ಎ ಹಾಗೂ ಬಿ ಅಡಿಯಲ್ಲಿ PTCL Certificate, Fire brigade Certificate ಮತ್ತೊಂದು ಕೊಡಬೇಕಾಗಿತ್ತು. ಅದನ್ನು ತುಂಬಾ ಸರಳಗೊಳಿಸಿದ್ದೇವೆ. ನೀವು ಹುಬ್ಬಳ್ಳಿಯ Head Quarters ಅಥವಾ ತಹಸೀಲ್ದಾರರ ಕಛೇರಿಗೆ ಹೋಗಿ Kiosk ಮೂಲಕ ಪಹಣಿ ಉತಾರ, ಒಂದು mutation

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

entry ಬೇಕಾದಾಗ ಒಂದು ಅಫಿಡೆವಿಟ್ ಹಾಗೂ ಒಂದು ಅಪ್ಲಿಕೇಷನ್ ಅನ್ನು ನೀಡಬೇಕು. Entire land ಇದ್ದರೆ 11ಇ ಸ್ಕೆಚ್ ಬೇಡ. Partial land ಇದ್ದರೆ 11ಇ ಸ್ಕೆಚ್ ಅನ್ನು ಕೊಡಬೇಕು. ಇದರಿಂದ ನಾವು ಬೇರೆ ಬೇರೆ ಇಲಾಖೆಯ ಅಭಿಪ್ರಾಯವನ್ನು ಪಡೆದುಕೊಂಡು within one month we have to inform. ಇದು ಪರಿವರ್ತನೆಯಾಗಿದೆ, ಅದಕ್ಕೆ ಶುಲ್ಕವನ್ನು ಕಟ್ಟಿ ಎಂದು ಹೇಳುತ್ತೇವೆ. ಸರ್ಕಾರವು ಎಷ್ಟು ಸಾಧ್ಯವಾಗುತ್ತದೋ ಅಷ್ಟು ಇಲಾಖೆಯಲ್ಲಿ ಪಾರದರ್ಶಕತೆಯನ್ನು ತರುವುದಕ್ಕೆ ಪ್ರಯತ್ನ ಮಾಡುತ್ತಿದೆ. ಅಷ್ಟೇ ಅಲ್ಲದೇ ಒಂದು ಭೂಮಿಯನ್ನು ಪರಿವರ್ತನೆ ಮಾಡಬೇಕಾದರೆ ಎಷ್ಟು ಕಷ್ಟವಿದೆ, ಎಷ್ಟು ಜನರ ಬೆನ್ನು ಹತ್ತಬೇಕು ಎನ್ನುವುದು ನನಗೆ ಗೊತ್ತಿದೆ. ಕಲಂ 79ಎ ಮತ್ತು ಬಿ ಗೆ ಸಂಬಂಧಿಸಿದ ಪತ್ರಗಳು ತಹಸೀಲ್ದಾರರ ಮತ್ತು ಉಪವಿಭಾಗಾಧಿಕಾರಿಯವರ ಕಛೇರಿಯಲ್ಲಿರುತ್ತವೆ. ಇವುಗಳನ್ನು ಏತಕ್ಕೆ ಕೇಳಬೇಕು? If there is violation in PTCL, ಉಪವಿಭಾಗಾಧಿಕಾರಿಯವರ ಕಛೇರಿಯಲ್ಲಿ ದಾಖಲೆ ಇರುತ್ತದೆ. ಆ ದಾಖಲೆಯ ಬಗ್ಗೆ ನಿಮಗೇಕೆ ಹೇಳಬೇಕು? ತಾನು PTCL ನ ಯಾವುದನ್ನೂ contravention ಮಾಡಿಲ್ಲ ಎನ್ನುವ ಒಂದು ಅಫಿಡವಿಟ್ ಮಾಡುವುದಕ್ಕೆ ಹೇಳಿದ್ದೇವೆ. ಹಾಗಾಗಿ simplicity ತರುವುದಕ್ಕೆ ನಾವು ಪ್ರಯತ್ನ ಮಾಡಿದ್ದೇವೆ. 79ಎ ಮತ್ತು ಬಿ ನಲ್ಲಿ ಎಷ್ಟು ಭೂಮಿಯನ್ನು ಮುಟ್ಟುಗೋಲು ಹಾಕಲಾಗಿದೆ ಮತ್ತೊಂದರ ಅಂಕಿಅಂಶಗಳು ನನ್ನ ಬಳಿ ಇಲ್ಲ.

**ಡಾ: ವೈ.ಎ. ನಾರಾಯಣಸ್ವಾಮಿ:-** ಮಾನ್ಯ ಸಚಿವರೇ, ಅಂದಾಜು ಹೇಳಿ. . . . . ಇದ್ದರೆ ನಾನು ರಾಜೀನಾಮೆ ಕೊಡುತ್ತೇನೆ.

**ಶ್ರೀ ಆರ್. ವಿ. ದೇಶಪಾಂಡೆ:-** ತಾವು ರಾಜೀನಾಮೆ ಕೊಡಬೇಡಿ, ನೀವು ಇಲ್ಲಿರುವುದು ನಮಗೆ ಬೇಕಾಗಿದೆ. ತಾವು ಇಲ್ಲಿ ಇರದಿದ್ದರೆ ಈ ಸದನಕ್ಕೆ ಶೋಭೆ ಇರುವುದಿಲ್ಲ. ತಾವು ಕೇಳಿರುವ ಪ್ರಶ್ನೆಯ ಗಾಂಭೀರ್ಯತೆ ನನಗೆ ಗೊತ್ತಿದೆ. ಈಗ ಸುಪ್ರೀಂ ಕೋರ್ಟ್ ಮತ್ತು ಹೈಕೋರ್ಟ್ ಆದೇಶಗಳು ಇವೆ. ಕಲಂ 79ಎ ಮತ್ತು ಬಿ ಅನ್ನು within a reasonable period invoke ಮಾಡಬೇಕು ಎಂದು ಇದೆ. ಕೆಲವು ಅಧಿಕಾರಿಗಳು ಐದಾರು ವರ್ಷ rake up ಮಾಡುತ್ತಾರೆ. ಅದರ ಬಗ್ಗೆ ಸೂಕ್ತವಾದ ನಿರ್ದೇಶನ ಕೊಡುವುದಕ್ಕೆ ಪರಿಶೀಲನೆ ಮಾಡುತ್ತಿದ್ದೇವೆ. ಕಾನೂನನ್ನು ಯಾರೂ ಉಲ್ಲಂಘನೆ ಮಾಡಬಾರದು. ಕಾನೂನು ಇದೆಯೆಂದು ಅದನ್ನು ದುರುಪಯೋಗಪಡಿಸಿಕೊಂಡು harassment

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಆಗಬಾರದು. ಆ ದಿಕ್ಕಿನಲ್ಲಿ ಸರ್ಕಾರವು ಮುಂದಿನ ಹೆಜ್ಜೆ ಹಾಕುತ್ತಿದೆ. ರೈತರ ಹಿತವನ್ನು, ಅಭಿವೃದ್ಧಿಯ ಹಿತವನ್ನು ಗಮನದಲ್ಲಿಟ್ಟುಕೊಂಡು ಕ್ರಮ ತೆಗೆದುಕೊಳ್ಳುತ್ತೇವೆ.

**ಡಾ: ವೈ.ಎ. ನಾರಾಯಣಸ್ವಾಮಿ:–** ಮಾನ್ಯ ಸಚಿವರೇ, ಕಲಂ 79ಎ ಮತ್ತು 'ಬಿ' abolish ಆಗುವುದೇ ಇಲ್ಲವೇ ಎನ್ನುವುದನ್ನು ಸ್ಪಷ್ಟವಾಗಿ ತಿಳಿಸಬೇಕು.

**ಶ್ರೀ ಪುಟ್ಟಣ್ಣ:–** ಮಾನ್ಯ ಸಭಾಪತಿಯವರೇ, ಕಲಂ 79ಎ ಮತ್ತು 'ಬಿ' ಇರುವುದೇ ಹಣ ಮಾಡುವುದಕ್ಕೆ. ನೀವು ಹಣ ಮಾಡುವುದಕ್ಕೆ ಬೆಂಬಲ ಕೊಡುವಿರೋ ಅಥವಾ ಅದನ್ನು ಕಿತ್ತು ಹಾಕುತ್ತೀರೋ ಅದನ್ನು ತಿಳಿಸಿ. ಅದನ್ನು ಕಿತ್ತು ಹಾಕಿ, ಅದರ ಉಪಯೋಗವೇನು? ಸರ್ಕಾರಕ್ಕೆ ಎಷ್ಟು ಆದಾಯ ಬರುತ್ತದೆ? ಇದುವರೆಗೂ ಎಷ್ಟು ಪ್ರಕರಣಗಳು ದಾಖಲಾಗಿವೆ, ಈ ರಾಜ್ಯದಲ್ಲಿ ಎಷ್ಟು ಜಮೀನನ್ನು ಸರ್ಕಾರಕ್ಕೆ ವಶಪಡಿಸಿಕೊಂಡಿದ್ದೀರಿ, ಎಷ್ಟು ಜನರಿಗೆ ದಂಡ ವಿಧಿಸಿದ್ದೀರಿ ಅದನ್ನು ತಿಳಿಸಿ. ಏನನ್ನೂ ಮಾಡುವುದಕ್ಕೆ ಆಗಿಲ್ಲ.

**ಡಾ: ವೈ.ಎ. ನಾರಾಯಣಸ್ವಾಮಿ:–** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಹಿರಿಯರು, ಪ್ರಭಾವಿಗಳು, ಬುದ್ಧಿವಂತರಾಗಿದ್ದು, ಇದರ ಬಗ್ಗೆ ಬಹಳ ಅಧ್ಯಯನ ಮಾಡಿದ್ದಾರೆ. ಹೊಸದಾಗಿ ಒಂದು ತಿಂಗಳಿನಲ್ಲಿ ಭೂ ಪರಿವರ್ತನೆ ಮಾಡುವುದಕ್ಕೆ ಹೊರಟಿದ್ದಾರೆ, ಒಂದು ತಿಂಗಳಿನಲ್ಲಿ ಮಾಡದೇ ಇದ್ದರೆ ಅವರ ಮನೆಗೇ ಭೂ ಪರಿವರ್ತನೆಯ ಪ್ರತಿಯನ್ನು ಕಳುಹಿಸಿಕೊಡುತ್ತಿದ್ದಾರೆ. ಪಕ್ಕದ ಬಾಗೇಪಲ್ಲಿಯ ಚೆಕ್‌ಪೋಸ್ಟ್ ಪಕ್ಕದಲ್ಲಿ ನಮ್ಮ ರಾಜ್ಯದವರು ಒಂದು ಕಾರ್ಖಾನೆಯನ್ನು ಮಾಡುತ್ತಿದ್ದಾರೆ. ಮೊನ್ನೆ ನಾನು ಹೈದರಾಬಾದ್‌ಗೆ ತೆಲಂಗಾಣಾದ ಚುನಾವಣೆಗೆ ಹೋಗಿದ್ದಾಗ ಅಲ್ಲಿ ಅವರು ಗ್ಯಾಸ್ ಸಿಲಿಂಡರ್ ಕಾರ್ಖಾನೆಯನ್ನು ಮಾಡುತ್ತಿದ್ದರು. ಅಲ್ಲಿ conversion ಗೆ 14 ದಿನ ಸಮಯ ಇದೆ. 14 ದಿನದವರೆಗೂ ಅವರು ಯಾರಿಗೂ ದೂರವಾಣಿ ಕರೆ ಮಾಡುವುದಿಲ್ಲ. 15ನೇ ದಿನ conversion ಆದೇಶ ಅವರ ಮನೆಗೆ ಹೋಗುತ್ತದೆ. ಈ ರೀತಿಯ ಪ್ರಕ್ರಿಯೆ ತೆಲಂಗಾಣದಲ್ಲಿದೆ, ಅದು ಹುಮ್ನಾಬಾದ್ ಶಾಸಕರಿಗೆ ಗೊತ್ತಿದೆ. ನೀವೂ ಹಾಗೆ ಮಾಡಬೇಕೆಂಬುದು ನಮ್ಮ ಆಸೆಯಾಗಿದೆ. ಸರಳೀಕರಣ ಮಾಡುವುದಕ್ಕೆ ಇಲ್ಲ ಎಂದು ಹೇಳುತ್ತಿಲ್ಲ. ನಾವೆಲ್ಲಾ ನಿಮ್ಮ ಜೊತೆ ಇದ್ದೇವೆ. ದಯವಿಟ್ಟು ಇವತ್ತು ಕಲಂ 79ಎ ಮತ್ತು 'ಬಿ' ಅನ್ನು ತೆಗೆದು ಹಾಕುವುದಕ್ಕೆ ಒಂದು ಆದೇಶ ಮಾಡಿಸಬೇಕೆಂದು ಕೇಳುತ್ತೇನೆ.

**ಶ್ರೀ ಆರ್.ವಿ. ದೇಶಪಾಂಡೆ:–** ಮಾನ್ಯ ಸಭಾಪತಿಯವರೇ, ಸದನದಲ್ಲಿ ಕಲಂ 79ಎ ಮತ್ತು 'ಬಿ' ಬಗ್ಗೆ ಕೆಲಸ ಮಾಡುವ ಅಧಿಕಾರ ನನಗಿಲ್ಲ. ನಾನು ಸಮಾಧಾನದಿಂದ ಉತ್ತರ ಕೊಡುತ್ತಿದ್ದೇನೆ, ತಾವು ಸಮಾಧಾನದಿಂದ ಇರಬೇಕು. ಕಲಂ 79ಎ ಮತ್ತು 'ಬಿ' ಬಗ್ಗೆ ಅದು ಬಂದ ನಂತರ ತಾವು ಹೇಳಿದ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಹಾಗೆ ಅದರಿಂದ ರೈತರಿಗೆ ಏನು ಲಾಭವಾಗಿದೆ, ಅಭಿವೃದ್ಧಿಗೆ ಏನಾಗಿದೆ ಅಥವಾ ಅದು redundant ಆಗಿದೆಯೇ, ಅನುಕೂಲವಾಗುತ್ತಿಲ್ಲವೇ ಎಂಬುದನ್ನು ತಿಳಿದುಕೊಳ್ಳುವುದಕ್ಕೆ ಕ್ಯಾಬಿನೆಟ್ ಒಂದು ಸಬ್-ಕಮಿಟಿ ಮಾಡಿದೆ. ಕ್ಯಾಬಿನೆಟ್ ಸಬ್-ಕಮಿಟಿಯಲ್ಲಿ ಚರ್ಚೆಯಾಗಿ, ನಿರ್ಣಯವಾಗಿ ಅನಂತರ ಕ್ಯಾಬಿನೆಟ್‌ಗೆ ಹೋಗಬೇಕಾಗುತ್ತದೆ. ಇದನ್ನು ಮಾಡುವಾಗ ಎಲ್ಲಾ stake holders ಜೊತೆ ಚರ್ಚೆ ಮಾಡಬೇಕಾಗುತ್ತದೆ. ಇಲ್ಲಿನ ವಿರೋಧಪಕ್ಷದ ನಾಯಕರ ಜೊತೆ, ರೈತ ಸಂಘಟನೆಯ ಜೊತೆ ಚರ್ಚೆ ಮಾಡಬೇಕು. ಏನೇ ಮಾಡುವುದಿದ್ದರೂ ಎಲ್ಲರನ್ನೂ ವಿಶ್ವಾಸಕ್ಕೆ ತೆಗೆದುಕೊಂಡು ಮುಂದಿನ ಹೆಜ್ಜೆ ಹಾಕಬೇಕಾಗುತ್ತದೆ. ಇವತ್ತು ನನಗೆ ಹೀಗೆ ಮಾಡುತ್ತೇನೆ, ಹಾಗೆ ಮಾಡುವುದಿಲ್ಲ ಎಂದು ಹೇಳುವುದಕ್ಕೆ ಕಷ್ಟವಾಗುತ್ತದೆ. ಕ್ಯಾಬಿನೆಟ್ ಸಬ್ ಕಮಿಟಿ ಆಗಿದೆ, ಅಲ್ಲಿ ಚರ್ಚೆಯಾದ ನಂತರ ಮುಂದಿನ ಕ್ರಮ ತೆಗೆದುಕೊಳ್ಳುತ್ತೇವೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಮಾನ್ಯ ಸಭಾಪತಿಯವರೇ, ಕಲಂ 79ಎ ಮತ್ತು ಬಿ ಎನ್ನುವುದು ಹಣ ಮಾಡುವಂತಹ ಒಂದು ದಂಧೆಯಾಗಿದೆ. ಅದು ನಮಗೆಲ್ಲರಿಗೂ ಅರ್ಥವಾಗಿದೆ. ಆದ್ದರಿಂದ ಉಪ ಸಮಿತಿಯು ಸೇರಿದಂತೆ ನಿರ್ಣಯ ತೆಗೆದುಕೊಳ್ಳುವಾಗ ಸದನದ ಭಾವನೆಯನ್ನು ತಾವು ಅರ್ಥ ಮಾಡಿಕೊಳ್ಳಬೇಕು.

**ಶ್ರೀ ನಿರಾಣಿ ಹಣಮಂತ್ ರುದ್ರಪ್ಪ:-** ಮಾನ್ಯ ಸಭಾಪತಿಯವರೇ, ಕಲಂ 79ಎ ಮತ್ತು ಬಿ ಕೆಳಗೆ ಹೆಚ್ಚುವರಿ ಜಮೀನಷ್ಟೇ ಅಲ್ಲದೇ, ಯಾರಾದರೂ 10 ಲಕ್ಷಕ್ಕಿಂತ ಹೆಚ್ಚಿನ ಜಮೀನನ್ನು ಖರೀದಿ ಮಾಡಿದಾಗ ಇಷ್ಟು ಹಣವನ್ನು ಕೊಟ್ಟು ಜಮೀನನ್ನು ಎಲ್ಲಿ ಖರೀದಿ ಮಾಡಿದಿರಿ ಅದರ ಬಗ್ಗೆ ವರದಿ ಕೊಡಬೇಕೆಂದು ತಹಸೀಲ್ದಾರರು ನೂರೆಂಟು ನೋಟೀಸುಗಳನ್ನು ಕೊಡುತ್ತಿದ್ದಾರೆ. 10 ಲಕ್ಷ ರೂಪಾಯಿಗಳ ಮಿತಿಯನ್ನು 10 ವರ್ಷಗಳ ಹಿಂದೆಯೇ ನಿಗದಿಪಡಿಸಲಾಗಿದೆ.

(ಮುಂದು . .

(394) 12-12-2018/04-40/ಕೆಹೆಚ್-ಜಿಆರ್

(ಸಭಾಪತಿಯವರ ಉಪಸ್ಥಿತಿ)

**ಶ್ರೀ ಆರ್.ವಿ. ದೇಶಪಾಂಡೆ:-** ನಾನು ಬಹಳ ಜವಾಬ್ದಾರಿಯಿಂದ ಕಲಂ 79(ಎ) (ಬಿ)ಗಳು ಕೆಲವು ಕಡೆ ದುರಪಯೋಗವಾಗುತ್ತಿದೆಂದು ಹೇಳಿದ್ದೇನೆ. ಇದು ಎಲ್ಲಾ ಕಡೆ ದುರಪಯೋಗವಾಗುತ್ತಿದೆ ಎಂದು ನಾನು ಹೇಳುವುದಿಲ್ಲ. Violation ಮಾಡಿದರೆ ಕ್ರಮ ತೆಗೆದುಕೊಳ್ಳಬೇಕಾಗುತ್ತದೆ. ನಾನು ಹೇಳುವುದನ್ನು

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಸ್ವಲ್ಪ ಸಮಾಧಾನದಿಂದ ಮತ್ತು ಬುದ್ಧಿವಂತಿಕೆಯಿಂದ ತಿಳಿದುಕೊಳ್ಳಬೇಕು. Supreme Court and High Courts have also held that a reasonable time should be there. ಅದು ನನಗೂ ಗೊತ್ತಿದೆ. ಐದು, ಆರು, ಎಂಟು ವರ್ಷಗಳ ದಾಖಲೆಗಳನ್ನು dig ಮಾಡುತ್ತಾರೆ. Why? ಅದರ ಉದ್ದೇಶ ಏನು? I understand that. ನಾನು ಮಂತ್ರಿಯಾಗಿ ಸದನದಲ್ಲಿ ಉತ್ತರವನ್ನು ಕೊಡುವಾಗ ಜವಾಬ್ದಾರಿಯಿಂದ ಉತ್ತರವನ್ನು ಕೊಡಬೇಕಾಗುತ್ತದೆ. ಯಾವುದೇ ನಿರ್ಣಯವನ್ನು ತೆಗೆದುಕೊಳ್ಳಬೇಕಾದರೆ stake holders ಗಳನ್ನು involve ಮಾಡಿ ನಿರ್ಣಯ ಮಾಡಬೇಕಾಗುತ್ತದೆ, which is in the interest of the state as well as farmers.

**ಡಾ॥ ವೈ.ಎ. ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಯವರೇ, ಇದನ್ನು ಯಾವಾಗ ಮಾಡುತ್ತಾರೆಂದು ಮಾನ್ಯ ಸಚಿವರು ತಿಳಿಸಬೇಕು.

**ಶ್ರೀ ಆರ್.ವಿ. ದೇಶಪಾಂಡೆ:-** ಯಾವಾಗ ಮಾಡುತ್ತೀರೆಂದು ಕೇಳಿದರೆ, ಅದು ನಿಮ್ಮ ಕೈಯಲ್ಲಿ ಇದೆ. ತಾವು ಎಷ್ಟು ಬೇಗ ಅಮೆಂಡ್‌ಮೆಂಟ್‌ನ್ನು ಪಾಸ್ ಮಾಡಿಕೊಂಡು ಕೊಡುತ್ತೀರೋ, ಅದರ ಮೇಲೆ ಮಾಡುತ್ತೇವೆ.

**ಡಾ॥ ವೈ.ಎ. ನಾರಾಯಣಸ್ವಾಮಿ:-** ಮಾನ್ಯ ಸಚಿವರೇ, ದಯವಿಟ್ಟು ಇದಕ್ಕೆ ಸಂಬಂಧಪಟ್ಟ ಹಾಗೆ ವಿಧೇಯಕವನ್ನು ತೆಗೆದುಕೊಂಡು ಬನ್ನಿ.

**ಶ್ರೀ ನಿರಾಣಿ ಹಣಮಂತ್ ರುದ್ರಪ್ಪ (ಪದವೀಧರರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಭೂಮಿಯನ್ನು ಖರೀದಿ ಮಾಡುತ್ತಿದ್ದಾರೆ. ಎಷ್ಟು ಮೊತ್ತದಲ್ಲಿ ಭೂಮಿಯನ್ನು ಖರೀದಿ ಮಾಡುತ್ತಿದ್ದಾರೆ ಎಂಬುದನ್ನು ಮಾನ್ಯ ಸಚಿವರು ತಿಳಿಸಬೇಕು.

**ಶ್ರೀ ಆರ್.ವಿ. ದೇಶಪಾಂಡೆ:-** ನಿರ್ದಿಷ್ಟವಾಗಿ ತಮ್ಮ ಕೇಸ್ ಇದ್ದರೆ ದಯಮಾಡಿ ನನ್ನನ್ನು ಭೇಟಿ ಮಾಡಿ. If there is any specific case, please meet me. I will try to resolve it.

**ಪ್ರಶ್ನೆ ಸಂಖ್ಯೆ: 338**
**(ಉತ್ತರವನ್ನು ಲಗತ್ತಿಲಾಗಿದೆ)**

ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಕೆ. ಹರೀಶ್ ಕುಮಾರ್:-** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಉತ್ತರವನ್ನು ಒದಗಿಸಿದ್ದಾರೆ. ಬಹುಶಃ ಬೆಳ್ತಂಗಡಿ ತಾಲ್ಲೂಕಿನ ವ್ಯಾಪ್ತಿಯಲ್ಲಿ ಬರುವಂತಹ ದೇವಸ್ಥಾನಗಳಿಗೆ 2017-18ನೇ ಸಾಲಿನಲ್ಲಿ ಒಟ್ಟು ರೂ.41.14 ಲಕ್ಷಗಳನ್ನು ಮತ್ತು 2018-19ನೇ ಸಾಲಿನಲ್ಲಿ ಒಟ್ಟು ರೂ.9.01 ಲಕ್ಷಗಳನ್ನು ಒದಗಿಸಿದ್ದೇವೆಂದು ತಿಳಿಸಿದ್ದಾರೆ. ನಮ್ಮ ಜಿಲ್ಲೆಯಲ್ಲಿ ಬ್ಯಾಂಕಿಂಗ್‌ನಲ್ಲಿ ಮತ್ತು ಶಿಕ್ಷಣ ಕ್ಷೇತ್ರದಲ್ಲಿ ಬಹಳ ಮುಂಚೂಣಿಯಲ್ಲಿದ್ದೇವೆಂದು ಮಾನ್ಯ ಸಚಿವರು ಬೆಳಿಗ್ಗೆ ಹೇಳಿದರು. ಹಾಗೆಯೇ ನಮ್ಮ ಜಿಲ್ಲೆಯಲ್ಲಿ ಇರುವಷ್ಟು ದೇವಸ್ಥಾನಗಳು ಬೇರೆ ಯಾವ ಜಿಲ್ಲೆಯಲ್ಲೂ ಇಲ್ಲ. ಅದೇ ರೀತಿ ಬಹಳಷ್ಟು ಗುಡಿ-ಗೋಪುರಗಳು ಸಹ ಇವೆ. ನಮ್ಮ ಸಭಾಪತಿಯವರ ತಾಲ್ಲೂಕಿನಲ್ಲಿ 3 ಸಾವಿರ ದೇವಸ್ಥಾನಗಳು ಇವೆ ಎಂದು ಹೇಳುತ್ತಾರೆ. ಈ ದೇವಸ್ಥಾನಗಳನ್ನು ಜೀರ್ಣೋದ್ಧಾರ ಮಾಡಬೇಕಾದಂತಹ ಜವಾಬ್ದಾರಿ ಸರ್ಕಾರದ ಮೇಲಿದೆ. ಆದ್ದರಿಂದ ಕುಕ್ಕೆ ಮತ್ತು ಕೊಲ್ಲೂರಿನಂತಹ ದೇವಸ್ಥಾನಗಳು ಮಾತ್ರ ನಮ್ಮ ಜಿಲ್ಲೆಯಲ್ಲಿ ಇದೆ. ಇನ್ನು ಅನೇಕ ಹಳ್ಳಿಗಳಲ್ಲಿ ಸಣ್ಣ-ಪುಟ್ಟ ದೇವಸ್ಥಾನಗಳ ಜೀರ್ಣೋದ್ಧಾರವಾಗಬೇಕಾಗಿರುವುದರಿಂದ, ಯಾವ ಯಾವ ದೇವಸ್ಥಾನಗಳಿಗೆ ಎಷ್ಟು ಅನುದಾನವನ್ನು ಒದಗಿಸಲಾಗಿದೆ ಎಂಬ ಬಗ್ಗೆ ತಾವು ಕೊಟ್ಟಿರುವಂತಹ ಉತ್ತರದಲ್ಲಿ ಮಾಹಿತಿ ಇರುವುದಿಲ್ಲ. ಅದೇ ರೀತಿ ಆರಾಧನಾ ಯೋಜನೆ, ಪರಿಶಿಷ್ಟ ಜಾತಿ ಉಪ ಯೋಜನೆ, ಗಿರಿಜನ ಉಪ ಯೋಜನೆ ಮತ್ತು ಸಾಮಾನ್ಯ ಸಂಗ್ರಹಣಾ ನಿಧಿಯಿಂದ ಧನ ಸಹಾಯ ಯೋಜನೆಗಳಿಗೆ ಒಟ್ಟಾಗಿ ಅನುದಾನ ಮಂಜೂರಾಗಿರುವುದನ್ನು ಲಿಖಿತ ಉತ್ತರದಲ್ಲಿ ಕೊಡಲಾಗಿದೆ. ಆದರೆ ಇದರಲ್ಲಿ ನಿರ್ದಿಷ್ಟವಾಗಿ ಯಾವುದೇ ಮಾಹಿತಿ ಇಲ್ಲ. ಆದ್ದರಿಂದ ತಾವು ದಯವಿಟ್ಟು ಇನ್ನು ಅನೇಕ ದೇವಸ್ಥಾನಗಳಿಗೆ ಅನುದಾನವನ್ನು ಒದಗಿಸಬೇಕು. ಬೇರೆ ಬೇರೆ ಇಲಾಖೆಗಳಲ್ಲಿ ದೇವಸ್ಥಾನಗಳಿಗೆ ವಿಶೇಷ ಅನುದಾನವನ್ನು ಒದಗಿಸಲಾಗುತ್ತದೆ. ಆದರೆ ತಮ್ಮ ಇಲಾಖೆಯಲ್ಲಿ ಇಡೀ ವರ್ಷಕ್ಕೆ ಸುಮಾರು 84 ಕೋಟಿ ರೂಪಾಯಿಗಳ ಅನುದಾನವನ್ನು ಒದಗಿಸಲಾಗುತ್ತಿದೆ. ಇದನ್ನು ಯಾವ ಯಾವ ದೇವಸ್ಥಾನಗಳಿಗೆ ಎಷ್ಟು ಅನುದಾನವನ್ನು ಹಂಚಿಕೆ ಮಾಡಬಹುದೆಂಬುದರ ಬಗ್ಗೆ ತಿಳಿದುಕೊಳ್ಳುವುದಕ್ಕೆ ಕಷ್ಟವಾಗಿದೆ. ಆದ್ದರಿಂದ ವಿಶೇಷ ಅನುದಾನದಡಿ ನಮ್ಮ ಜಿಲ್ಲೆಯ ಸಣ್ಣ ಸಣ್ಣ ದೇವಸ್ಥಾನಗಳ ಜೀರ್ಣೋದ್ಧಾರಕ್ಕೆ ಅನುದಾನ ಒದಗಿಸಬೇಕೆಂದು ತಮ್ಮಲ್ಲಿ ವಿನಂತಿಸಿಕೊಳ್ಳುತ್ತೇನೆ.

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ರಾಜಶೇಖರ ಬಿ.ಪಾಟೀಲ:-** ಮಾನ್ಯ ಸಭಾಪತಿಯವರೇ, ಈಗಾಗಲೇ ಇರುವಂತಹ ಅನುದಾನದಲ್ಲಿ ರಾಜ್ಯದಲ್ಲಿರುವಂತಹ ಎಲ್ಲಾ ದೇವಸ್ಥಾನಗಳಿಗೆ ಅನುದಾನವನ್ನು ಕೊಡುವಂತಹ ವ್ಯವಸ್ಥೆ ಮಾಡಿದ್ದೇವೆ. ಮಾನ್ಯ ಸದಸ್ಯರು ಕೂಡ ಬೆಳ್ತಂಗಡಿ ತಾಲ್ಲೂಕಿನ ವ್ಯಾಪ್ತಿಯಲ್ಲಿ ಬರುವ ದೇವಸ್ಥಾನಗಳಿಗೆ ಅನುದಾನವನ್ನು ಕೇಳಿದ್ದಾರೆ. 2018-19ನೇ ಸಾಲಿನಲ್ಲಿ ರೂ.9.01 ಲಕ್ಷ ಅನುದಾನವನ್ನು ಬಿಡುಗಡೆ

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಮಾಡಲಾಗಿದೆ. ಅದರಲ್ಲಿ ಆರಾಧನಾ ಯೋಜನೆಯಡಿ ರೂ.3.18 ಲಕ್ಷಗಳು, ಪರಿಶಿಷ್ಟ ಜಾತಿ ಉಪಯೋಜನೆಯಡಿ ರೂ.5.08 ಲಕ್ಷಗಳು, ಗಿರಿಜನ ಉಪಯೋಜನೆಯಡಿ ರೂ.0.76 ಲಕ್ಷಗಳು, ಒಟ್ಟಾರೆಯಾಗಿ ರೂ.9.01 ಲಕ್ಷಗಳ ಅನುದಾನವನ್ನು ಮೂರು ಕಂತುಗಳಲ್ಲಿ ಬಿಡುಗಡೆ ಮಾಡಲಾಗಿದೆ. ಇನ್ನು ನಾಲ್ಕನೇ ಕಂತಿನಲ್ಲಿ ಒಟ್ಟು ರೂ.3.00 ಲಕ್ಷಗಳ ಅನುದಾನವನ್ನು ಬಿಡುಗಡೆ ಮಾಡಲಾಗುವುದು. ಇದಕ್ಕೆ ಸಂಬಂಧಪಟ್ಟ ಹಾಗೆ ಮಾನ್ಯ ಸದಸ್ಯರ ಬೇಡಿಕೆಗಳು ಸಾಕಷ್ಟು ಇರುವುದರಿಂದ, ನಮ್ಮಲ್ಲಿ ಲಭ್ಯವಿರುವಂತಹ ಅನುದಾನದಲ್ಲಿ ಎಲ್ಲಾ ದೇವಸ್ಥಾನಗಳಿಗೂ ಅನುದಾನವನ್ನು ಬಿಡುಗಡೆ ಮಾಡಲಾಗುತ್ತದೆ. ಈಗಾಗಲೇ ಮುಜರಾಯಿ ಇಲಾಖೆಗೆ ಸೇರಿದ 34,558 ದೇವಸ್ಥಾನಗಳನ್ನು 'ಎ', 'ಬಿ', 'ಸಿ', ಎಂದು ಮೂರು ವರ್ಗಗಳನ್ನಾಗಿ ಮಾಡಿದ್ದಾರೆ. ಅದರಲ್ಲಿ 'ಎ' ವರ್ಗದಲ್ಲಿ 191 ದೇವಸ್ಥಾನಗಳು, 'ಬಿ' ವರ್ಗದಲ್ಲಿ 158 ದೇವಸ್ಥಾನಗಳು, 'ಸಿ' ವರ್ಗದಲ್ಲಿ 34,213 ದೇವಸ್ಥಾನಗಳು ಬರುತ್ತವೆ. ರೂ.5 ಲಕ್ಷದೊಳಗೆ ಆದಾಯ ಬರುವಂತಹ ದೇವಸ್ಥಾನಗಳು 'ಸಿ' ದರ್ಜೆಗೆ ಬರುತ್ತದೆ. ಇದರಲ್ಲಿ ಸುಮಾರು 34,215 ದೇವಸ್ಥಾನಗಳು ಬರುತ್ತದೆ. ಅದರ ಜೊತೆಗೆ 'ಬಿ' ದರ್ಜೆಯಲ್ಲಿ ರೂ.5 ರಿಂದ ರೂ.25 ಲಕ್ಷದವರೆಗೆ ಆದಾಯ ಬರುವಂತಹ ದೇವಸ್ಥಾನಗಳಿದ್ದು, ಇದರಲ್ಲಿ ಸುಮಾರು 158 ದೇವಸ್ಥಾನಗಳು ಬರುತ್ತವೆ. 'ಎ' ದರ್ಜೆಯಲ್ಲಿ ರೂ.25 ಲಕ್ಷಕ್ಕಿಂತ ಮೇಲ್ಪಟ್ಟು ಆದಾಯ ಬರುವಂತಹ ದೇವಸ್ಥಾನಗಳಿದ್ದು, ಇದರಲ್ಲಿ ಸುಮಾರು 191 ದೇವಸ್ಥಾನಗಳು ಬರುತ್ತವೆ. ಅದರಲ್ಲಿ ದೇವಸ್ಥಾನಗಳಿಂದ ಬರುವಂತಹ ಆದಾಯದಿಂದ ಎಲ್ಲಾ ದೇವಸ್ಥಾನಗಳಿಗೂ ಅನುದಾನವನ್ನು ಕೊಡುವಂತಹ ವ್ಯವಸ್ಥೆಯನ್ನು ಮಾಡುತ್ತಿದ್ದೇವೆ. ಮಾನ್ಯ ಸದಸ್ಯರು ಕೇಳಿರುವ ಬಗ್ಗೆ ಪರಿಶೀಲನೆ ಮಾಡಿ ಇನ್ನೂ ಹೆಚ್ಚಿನ ಅನುದಾನವನ್ನು ಕೊಡುವ ವ್ಯವಸ್ಥೆಯನ್ನು ಮಾಡುತ್ತೇವೆ.

**ಪ್ರಶ್ನೆ ಸಂಖ್ಯೆ: 484**
**(ಉತ್ತರವನ್ನು ಲಗತ್ತಿಲಾಗಿದೆ)**

**ಶ್ರೀ ರಘುನಾಥ ರಾವ್ ಮಲ್ಕಾಪೂರೆ:–** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಉತ್ತರವನ್ನು ಒದಗಿಸಿದ್ದು, ಇದಕ್ಕೆ ಸಂಬಂಧಪಟ್ಟ ಹಾಗೆ ದಿನಾಂಕ: 10–09–2018 ರಂದು ರಾಜ್ಯದ ಮುಖ್ಯ ಕಾರ್ಯದರ್ಶಿಯವರಿಗೆ ಪತ್ರ ಕೂಡ ಬರೆದಿದ್ದು, ಇದಕ್ಕೆ ಸಂಬಂಧಪಟ್ಟ ಹಾಗೆ ಯಾವುದೇ ರೀತಿಯ ಉತ್ತರ ಬರದಿರುವ ಕಾರಣ ನಾನು ಸದನದಲ್ಲಿ ಈ ಪ್ರಶ್ನೆಯನ್ನು ಕೇಳಬೇಕಾದಂತಹ ಅನಿವಾರ್ಯತೆ ಉದ್ಭವಿಸಿದೆ. ಬಹಳ ಆರ್ಥಿಕವಾಗಿ ಹಿಂದುಳಿದಿರುವಂತಹ ಮಕ್ಕಳು ಐ.ಟಿ.ಐ., ಕಾಲೇಜುಗಳಿಗೆ ಹೋಗುತ್ತಾರೆ. ಕೌಶಲ್ಯಾಭಿವೃದ್ಧಿ ಯೋಜನೆಯಡಿ ತರಬೇತಿ ಪಡೆದು ಈ ಮಕ್ಕಳು ಸ್ವಂತ ಉದ್ಯೋಗವನ್ನು ಮಾಡುವುದಕ್ಕೆ ಅಥವಾ ಸಣ್ಣ ಪುಟ್ಟ ಉದ್ಯೋಗಗಳನ್ನು ಮಾಡುವುದಕ್ಕೋಸ್ಕರ ಐ.ಟಿ.ಐ.,

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಕಾಲೇಜುಗಳಿಗೆ ಸೇರುತ್ತಾರೆ. ಹೈದರಾಬಾದ್-ಕರ್ನಾಟಕದ ಬಗ್ಗೆ ನಿನ್ನೆಯ ದಿವಸ ಕೂಡ ಚರ್ಚೆ ಮಾಡಿದ್ದೇವೆ. ಇದು ಅತಿ ಹಿಂದುಳಿದಿರುವಂತಹ ಪ್ರದೇಶವಾಗಿದೆ. ಆ ಭಾಗದಲ್ಲಿ ಎಷ್ಟು ಪ್ರಾಚಾರ್ಯರ ಹುದ್ದೆಗಳು ಖಾಲಿ ಇದೆ ಎಂದು ಮಾನ್ಯ ಸಚಿವರಲ್ಲಿ ಕೇಳಿದ್ದೇನೆ. ಇದಕ್ಕೆ ಸಂಬಂಧಪಟ್ಟ ಹಾಗೆ ಇಲಾಖೆಗೆ ಪತ್ರ ಬರೆದಾಗ ನನಗೆ ಬಂದಿರುವ ಮಾಹಿತಿಯ ಪ್ರಕಾರ ಸುಮಾರು 34 ಪ್ರಾಚಾರ್ಯರ ಹುದ್ದೆಗಳು ಖಾಲಿ ಇವೆ. ಆದರೆ, ಎಷ್ಟು ಪ್ರಾಚಾರ್ಯರ ಹುದ್ದೆಗಳು ಖಾಲಿ ಇದೆ ಎಂದು ಮಾನ್ಯ ಸಚಿವರನ್ನು ಕೇಳಿದಾಗ ಕೇವಲ 20 ಹುದ್ದೆಗಳು ಖಾಲಿ ಇವೆ ಎಂದು ಲಿಖಿತ ಉತ್ತರದಲ್ಲಿ ನೀಡಿದ್ದಾರೆ. ಆದರೆ ನನ್ನ ಹತ್ತಿರವಿರುವ ಮಾಹಿತಿಯ ಪ್ರಕಾರ ಒಟ್ಟಾರೆಯಾಗಿ ಸುಮಾರು 34 ಪ್ರಾಚಾರ್ಯರ ಹುದ್ದೆಗಳು ಖಾಲಿ ಇದೆ. ಈ ಮಾಹಿತಿಯನ್ನು ತಮ್ಮ ಮುಖಾಂತರ ಮಾನ್ಯ ಮಂತ್ರಿಯವರಿಗೆ ಕೊಡುತ್ತೇನೆ. ಇದರ ಬಗ್ಗೆ ಅಧಿಕಾರಿಗಳು ಪ್ರಾಚಾರ್ಯರು ದರ್ಜೆ-2 ಎಂದು ತಾಂತ್ರಿಕವಾಗಿ ಉತ್ತರವನ್ನು ಕೊಟ್ಟಿದ್ದಾರೆ. ನಾನು ದರ್ಜೆ-1 ಮತ್ತು ದರ್ಜೆ-2 ರ ಬಗ್ಗೆ ಕೇಳಿರುವುದಿಲ್ಲ. ಪ್ರಾಚಾರ್ಯರ ಹುದ್ದೆಗಳು ಎಷ್ಟು ಖಾಲಿ ಇವೆ ಎಂದು ಮಾನ್ಯ ಸಚಿವರಲ್ಲಿ ಕೇಳಿದ್ದೇನೆ. ಹಾಗಾಗಿ 34 ಹುದ್ದೆಗಳು ಖಾಲಿ ಇವೆ.

ಮುಂದುವರೆದು, ಹೈದರಾಬಾದ್-ಕರ್ನಾಟಕ 371(ಜೆ) ನಿಯಮದಲ್ಲಿರುವಂತೆ ಮೀಸಲಾತಿಗೆ ಒಳಪಟ್ಟಿದ್ದು ಮೀಸಲಾತಿ ನಿಯಮದಂತೆ ಈ ಹುದ್ದೆಗಳನ್ನು ಮುಂಬಡ್ತಿ ಮೂಲಕ ಭರ್ತಿ ಮಾಡಬೇಕಾಗಿದ್ದು, ಇದುವರೆವಿಗೂ ಬಡ್ತಿ ನೀಡದಿರುವುದಕ್ಕೆ ಕಾರಣವೇನು? ಎಂದು ಮಾನ್ಯ ಸಚಿವರಲ್ಲಿ ಪ್ರಶ್ನೆಯನ್ನು ಕೇಳಿದ್ದೇನೆ. ಸುಮಾರು ವರ್ಷಗಳಿಂದ ಈ ಹುದ್ದೆಗಳು ಖಾಲಿ ಇರುವುದರಿಂದ ಪ್ರಭಾರದ ಮೇಲೆ ಹುದ್ದೆಗಳು ನಡೆದು ಹೋಗಿದೆ. ಪ್ರಾಚಾರ್ಯರು ಕೆಲಸ ಮಾಡುತ್ತಿದ್ದಾರೆ, ಆದರೆ ಪ್ರಭಾರದ ಮೇಲೆ ಕೆಲಸ ಮಾಡುತ್ತಿದ್ದಾರೆ. ಅದರಲ್ಲಿ ಬಹಳಷ್ಟು ಜನ ಅಧಿಕಾರಿಗಳು they are on the verge of retirement. ತಾವು ಬೇಗ ಅವರಿಗೆ ಮುಂಬಡ್ತಿಯನ್ನು ಕೊಟ್ಟು ಬಡ್ತಿಯನ್ನು ಕೊಡಲಿಲ್ಲವೆಂದರೆ, ಅವರು ಟ್ರೈನರ್ ಆಗಿ ರಿಟೈರ್‌ಮೆಂಟ್ ಹೊಂದುತ್ತಾರೆ. ಇದ್ದರಿಂದ ಅವರಿಗೆ ಅನ್ಯಾಯವಾಗುತ್ತದೆ. ಇದಕ್ಕೆ ಏನು ಕ್ರಮ ತೆಗೆದುಕೊಳ್ಳುತ್ತೀರೆಂದು ಮಾನ್ಯ ಸಚಿವರಲ್ಲಿ ಪ್ರಶ್ನೆಯನ್ನು ಕೇಳಿದ್ದೇನೆ. ಇದಕ್ಕೆ ಮಾನ್ಯ ಸಚಿವರು ಹೈದರಾಬಾದ್-ಕರ್ನಾಟಕ ಸ್ಥಳೀಯ ವೃಂದಕ್ಕೆ ಒಟ್ಟು 38 ಹುದ್ದೆಗಳು ಮಂಜೂರಾಗಿದ್ದು, 18 ಹುದ್ದೆಗಳು ಭರ್ತಿಯಾಗಿದ್ದು, 20 ಹುದ್ದೆಗಳು ಖಾಲಿ ಇದೆ. ಅದರಲ್ಲಿ 3 ಹುದ್ದೆಗಳನ್ನು ಭರ್ತಿ ಮಾಡುವುದಕ್ಕೆ ಕೆ.ಪಿ.ಎಸ್.ಸಿ.,ಗೆ ಕೊಟ್ಟಿದ್ದೇವೆ. ಉಳಿದ 17 ಹುದ್ದೆಗಳನ್ನು ಮುಂಬಡ್ತಿ ಮೂಲಕ ತುಂಬಬಹುದಾಗಿದ್ದು, ಮಾನ್ಯ ಸರ್ವೋಚ್ಚ ನ್ಯಾಯಾಲಯದಲ್ಲಿ ಬಾಕಿ ಇರುವ ಸಿವಿಲ್ ಅಪೀಲ್ ಸಂಖ್ಯೆ:2368/11 ಸಂಬಂಧಿಸಿದಂತೆ, ಮಾನ್ಯ ಸರ್ವೋಚ್ಚ ನ್ಯಾಯಾಲಯದ ನಿರ್ದೇಶನದ ರೀತ್ಯಾ ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆಯು ಮುಂದಿನ ಆದೇಶ ನೀಡುವವರೆಗೆ ಯಾವುದೇ

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಮುಂಬಡ್ತಿ/ಹಿಂಬಡ್ತಿ ಪ್ರಕ್ರಿಯೆ ಜರುಗಿಸದೆ ಯಥಾಸ್ಥಿತಿ ಕಾಪಾಡುವಂತೆ ನಿರ್ದೇಶನ ನೀಡಿರುವ ಹಿನ್ನಲೆಯಲ್ಲಿ ಯಾವುದೇ ಮುಂಬಡ್ತಿಗಳನ್ನು ನೀಡಿರುವುದಿಲ್ಲ ಎಂದು ಮಾನ್ಯ ಸಚಿವರು ಉತ್ತರವನ್ನು ನೀಡಿದ್ದಾರೆ. ಈ ಪ್ರಕರಣ ಮಾನ್ಯ ಸರ್ವೋಚ್ಚ ನ್ಯಾಯಾಲಯದಲ್ಲಿ ಇದೆ ನಾನೇನು ಮಾಡಲಿ ಎಂದು ಮಾನ್ಯ ಸಚಿವರು ಮತ್ತು ಅಧಿಕಾರಿಗಳು ಹೇಳಬಹುದು. ಆದರೆ ಈ ಕಾರ್ಮಿಕರ ಪರವಾಗಿ, on behalf of these employees, ಮಾನ್ಯ ಸಚಿವರಲ್ಲಿ ಕೇಳುವುದಕ್ಕೆ ಇಷ್ಟಪಡುತ್ತೇನೆ. 2011 ನೇ ಸಾಲಿನಲ್ಲಿ ಪ್ರಕರಣ ದಾಖಲಾಗಿದ್ದು, ಈಗ 2018ನೇ ಸಾಲಿನಲ್ಲಿ ಇದ್ದೇವೆ. ಈ ಪ್ರಕರಣವನ್ನು ಮಾನ್ಯ ಸರ್ವೋಚ್ಚ ನ್ಯಾಯಾಲಯದಿಂದ ಇತ್ಯರ್ಥಗೊಳಿಸುವಂತಹ ಪ್ರಯತ್ನ ಸರ್ಕಾರ ಯಾವಾಗ ಮಾಡುತ್ತದೆ? ಆ ದಿಕ್ಕಿನಲ್ಲಿ ಮಾನ್ಯ ಸಚಿವರು ಮಾಡಿರುವಂತಹ ಪ್ರಯತ್ನಗಳೇನು? ಅಥವಾ ನ್ಯಾಯಾಲಯದಲ್ಲಿ ಈ ದಾವೆ ಇದೆ ಎಂದು ಬೆರಳನ್ನು ತೋರಿಸಿ ಆರಾಮಾಗಿ ಇರುತ್ತಾರೋ, ಏನೋ ಗೊತ್ತಿಲ್ಲ. ಆದರೆ ಆ ಬಡಪಾಯಿಗಳು ಮುಂಬಡ್ತಿಯಿಲ್ಲದೆ ಮನೆಗೆ ಹೋಗುತ್ತಾರೆ. They are appointed as 'trainees' and retired as 'trainees'. ಪ್ರಾಚಾರ್ಯರ ಹುದ್ದೆ ಖಾಲಿ ಇದ್ದರೂ, ಪ್ರಾಚಾರ್ಯರು ಆಗುವ ಅವಕಾಶದಿಂದ ವಂಚಿತರಾಗುತ್ತಾರೆ. ಈಗಾಗಲೇ ನಮ್ಮ ಭಾಗವು ಅತೀ ಹಿಂದುಳಿದ ಪ್ರದೇಶವಾಗಿದೆ. ಅದರಲ್ಲಿ ಬಡ ವಿದ್ಯಾರ್ಥಿಗಳಿಗೆ ಅನುಕೂಲವಾಗುವಂತಹ ಕೌಶಲ್ಯ ಅಭಿವೃದ್ಧಿ ತರಭೇತಿಗೆ ಸಂಬಂಧಪಟ್ಟಂತೆ ಅನುದಾನ ಇದೆ. ದಯವಿಟ್ಟು ಮಾನ್ಯ ಸಚಿವರು ಕ್ರಮವನ್ನು ತೆಗೆದುಕೊಂಡು ಆದಷ್ಟು ಬೇಗ ಈ ಪ್ರಕರಣವನ್ನು ಇತ್ಯರ್ಥಗೊಳಿಸುತ್ತೀರೋ ಅಥವಾ ಇದರ ಬಗ್ಗೆ ಏನು ಮಾಡುತ್ತೀರಿ? ಮತ್ತು ಇವರಿಗೆ ಯಾವ ರೀತಿಯ ನ್ಯಾಯ ಕೊಡುತ್ತೀರೆಂಬ ಬಗ್ಗೆ ಮಾನ್ಯ ಸಚಿವರು ಹೇಳಬೇಕು. ಮಾನ್ಯ ಸಚಿವರು ಬಹಳ ಹಿರಿಯರಾಗಿದ್ದು, ತಮಗೆ ಎಲ್ಲಾ ಅನುಭವವಿದೆ. ತಾವು ಮನಸ್ಸು ಮಾಡಿದರೆ 34 ಜನ ನೌಕರರಿಗೆ ನ್ಯಾಯ ಕೊಡಿಸಬಹುದೆಂಬ ಅಚಲ ವಿಶ್ವಾಸದೊಂದಿಗೆ ತಾವು ಇದರ ಬಗ್ಗೆ ಏನು ಕ್ರಮ ತೆಗೆದುಕೊಳ್ಳುತ್ತೀರಿ ಎಂದು ಮಾನ್ಯ ಸಚಿವರಲ್ಲಿ ಕೇಳುವುದಕ್ಕೆ ಇಷ್ಟಪಡುತ್ತೇನೆ.

**ಶ್ರೀ ಆರ್.ವಿ.ದೇಶಪಾಂಡೆ:-** ಮಾನ್ಯ ಸಭಾಪತಿಯವರೇ, ಮಾನ್ಯ ಗೌರವಾನ್ವಿತ ಸದಸ್ಯರು 34 ಪ್ರಾಚಾರ್ಯರ ಹುದ್ದೆಗಳು ಖಾಲಿ ಇದೆ ಎಂದು ಹೇಳಿದ್ದಾರೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

(ಮುಂದು)

**(395)12-12-2018(4-50) ಎಸ್‌ಪಿಆರ್-ಎಂಡಿ**

**(ಸಭಾಪತಿಯವರ ಉಪಸ್ಥಿತಿ)**

“ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

**ಶ್ರೀ ಆರ್.ವಿ.ದೇಶಪಾಂಡೆ(ಮುಂದು):-**

ಆ ಮಾಹಿತಿಯನ್ನು ನಮಗೆ ಕಳುಹಿಸಲಿ. ಆದರೆ ಲಿಖಿತವಾಗಿ ನೀಡಿರುವ ಮಾಹಿತಿಯ ಪ್ರಕಾರ 18 ಹುದ್ದೆಗಳು ಭರ್ತಿಯಾಗಿದ್ದು, 20 ಹುದ್ದೆಗಳು ಖಾಲಿ ಇರುತ್ತವೆ. ಅದರಲ್ಲಿ ನೇರ ನೇಮಕಾತಿಗೆ ಲಭ್ಯವಿರುವ 3 ಹುದ್ದೆಗಳನ್ನು ಭರ್ತಿ ಮಾಡುವ ಸಂಬಂಧ ಕರ್ನಾಟಕ ಲೋಕಸೇವಾ ಆಯೋಗಕ್ಕೆ ದಿನಾಂಕ 16/10/2018 ರಂದು ಕೋರಲಾಗಿದೆ. ಉಳಿದ 17 ಹುದ್ದೆಗಳನ್ನು ಮುಂಬಡ್ತಿ ಮೂಲಕ ತುಂಬಬಹುದಾಗಿದ್ದು, ಆದರೆ ಶ್ರೀ ಬಿ.ಕೆ.ಪವಿತ್ರರವರು ಸಲ್ಲಿಸಿದ್ದ ಪ್ರಕರಣವು ಇನ್ನೂ ಸರ್ವೋಚ್ಚ ನ್ಯಾಯಾಲಯದಲ್ಲಿ ವಿಚಾರಣೆಯ ಹಂತದಲ್ಲಿದೆ. ಇತ್ತೀಚೆಗೆ ಈ ಪ್ರಕರಣದ ವಿಚಾರಣೆಯು ಸತತವಾಗಿ ಮೂರ್ನಾಲ್ಕು ದಿನಗಳ ಕಾಲ ನಡೆದಿತ್ತು. ಪ್ರಕರಣದ ಅಂತಿಮ ತೀರ್ಪನ್ನು ಕಾಯ್ದಿರಿಸಿರುವ ವಿಚಾರವು ನನಗೆ ತಿಳಿದಿಲ್ಲ. ಸರ್ವೋಚ್ಚ ನ್ಯಾಯಾಲಯದಿಂದ ತೀರ್ಪು ಬಂದ ನಂತರ ಅದರ ಪ್ರಕಾರ ನಾವು ಅತೀ ಶೀಘ್ರದಲ್ಲಿ ಸಂಬಂಧಪಟ್ಟವರಿಗೆ ಪದೋನ್ನತಿ ನೀಡುವ ಪ್ರಯತ್ನವನ್ನು ಮಾಡುತ್ತೇವೆ. ಮಾನ್ಯ ಸರ್ವೋಚ್ಚ ನ್ಯಾಯಾಲಯದಲ್ಲಿ ಬಾಕಿಯಿರುವ ಪ್ರಕರಣಕ್ಕೆ ಸಂಬಂಧಪಟ್ಟಂತೆ, ನ್ಯಾಯಾಲಯದ ನಿರ್ದೇಶನದ ರೀತ್ಯಾ ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆಯು ಮುಂದಿನ ಆದೇಶ ನೀಡುವವರೆಗೆ ಯಾವುದೇ ಮುಂಬಡ್ತಿ / ಹಿಂಬಡ್ತಿ ಪ್ರಕ್ರಿಯೆ ಜರುಗಿಸದೆ ಯಥಾಸ್ಥಿತಿ ಕಾಪಾಡುವಂತೆ ನಿರ್ದೇಶನ ನೀಡಿರುವ ಹಿನ್ನೆಲೆಯಲ್ಲಿ ಯಾವುದೇ ಮುಂಬಡ್ತಿಗಳನ್ನು ನೀಡಿರುವುದಿಲ್ಲ. We are governed by the DPAR. ಈ ಕಾರಣದಿಂದಾಗಿ ಮಾನ್ಯ ಸದಸ್ಯರು ಸಹಕರಿಸಬೇಕೆಂದು ವಿನಂತಿಸುತ್ತೇನೆ. ಪ್ರಸ್ತುತ ಈ ವಿಷಯದಲ್ಲಿ ಯಾವುದೇ ಕ್ರಮವನ್ನು ತೆಗೆದುಕೊಳ್ಳಲಾಗುತ್ತಿಲ್ಲ. ರಾಜ್ಯದಲ್ಲಿ ಪ್ರತಿದಿನ ಇದೇ ವಿಷಯವಾಗಿ ಚರ್ಚೆ ನಡೆಯುತ್ತಿದೆ. ಪರಿಶಿಷ್ಟ ಜಾತಿ:ಪರಿಶಿಷ್ಟ ಪಂಗಡಗಳಂತಹ ಹಲವಾರು ಸಂಘಟನೆಗಳು ಪದೋನ್ನತಿ ವಿಚಾರವಾಗಿ ಮನವಿಗಳನ್ನು ಸಲ್ಲಿಸುತ್ತಿದ್ದಾರೆ. ಪದೋನ್ನತಿ ನೀಡದೇ ಇರುವುದರಿಂದ ಹಲವಾರು ಹುದ್ದೆಗಳು ಖಾಲಿ ಇವೆ. ಇಂತಹ ಹಲವಾರು ಸಮಸ್ಯೆಗಳು ನಮಗೆ ಗೊತ್ತಿದೆ. ಸರ್ವೋಚ್ಚ ನ್ಯಾಯಾಲಯದಲ್ಲಿ ಪ್ರಕರಣವು ಬಾಕಿ ಇದ್ದು, ಪದೋನ್ನತಿ ವಿಚಾರವಾಗಿ ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆಯು ನಿರ್ದೇಶನ ನೀಡಿದೆ. ಹೀಗಾಗಿ ಇದನ್ನು ಯಾರೂ ಉಲ್ಲಂಘನೆ ಮಾಡುವುದಕ್ಕಾಗುವುದಿಲ್ಲ. ಪದೋನ್ನತಿ ನೀಡುವುದರಲ್ಲಿ ವಿಳಂಬವಾಗಿದೆ ಹಾಗೂ ಇದು ನನಗೆ ತಿಳಿದಿರುವ ವಿಚಾರವಾಗಿದೆ. ಈ ವಿಚಾರದಲ್ಲಿ ನ್ಯಾಯವನ್ನು ದೊರಕಿಸಿಕೊಡುವ ಪ್ರಯತ್ನವನ್ನು ಮಾಡುತ್ತೇವೆ.

“ತಿದ್ದುಪಡಿಯಾಗದ ಪ್ರತಿ; ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ರಘುನಾಥರಾವ್ ಮಲ್ಕಾಪೂರೆ:-** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರನ್ನು ಬಹಳ ಗೌರವ ಪೂರ್ವಕವಾಗಿ ಕೇಳುವುದೇನೆಂದರೆ, ಮೀಸಲಾತಿ, ಬಡ್ತಿ ವಿಚಾರ ಕುರಿತಂತೆ, ಸರ್ಕಾರದ ವಿವಿಧ ಮಂತ್ರಿಗಳ ನಡುವೆ ಭಿನ್ನಾಭಿಪ್ರಾಯವಿದ್ದು, ಒಮ್ಮತ ಮೂಡದೇ ಇರುವ ಕಾರಣ, ಏಕ ರೂಪದ ತೀರ್ಮಾನವನ್ನು ತೆಗೆದುಕೊಳ್ಳಲಾಗುತ್ತಿಲ್ಲ ಹಾಗೂ ಈ ಸಮಸ್ಯೆಯನ್ನು ಇತ್ಯರ್ಥ ಪಡಿಸಲಾಗುತ್ತಿಲ್ಲ ಎಂಬ ಮಾಹಿತಿಯು ನನಗೆ ಸ್ವೀಕೃತವಾಗಿದೆ. ಮುಂದುವರೆದು, ಇದರಿಂದಾಗಿ ಇಡೀ ರಾಜ್ಯದ ಸರ್ಕಾರಿ ನೌಕರರು ಪದೋನ್ನತಿ ಪಡೆಯಲು ತೊಂದರೆಯಾಗುತ್ತಿದೆ ಎಂದು ಇಲಾಖೆಯ ಸಿಬ್ಬಂದಿಗಳ ಮುಖಾಂತರವೂ ಸಹ ನನಗೆ ಮಾಹಿತಿ ಸ್ವೀಕೃತವಾಗಿದೆ. In the larger interest of the employees, I am requesting to the Hon'ble Minister. ಯಾವುದೇ ರೀತಿಯ ಸಣ್ಣ-ಪುಟ್ಟ ವ್ಯತ್ಯಾಸಗಳಿದ್ದರೆ, ದಯಮಾಡಿ ಅವುಗಳನ್ನು ಬಗೆಹರಿಸಿ, ಆದಷ್ಟು ಬೇಗನೆ ಸರ್ಕಾರಿ ನೌಕರರಿಗೆ ನ್ಯಾಯ ಒದಗಿಸಿ ಕೊಡಿ ಎಂದು ವಿನಂತಿಸುತ್ತೇನೆ.

**ಶ್ರೀ ಆರ್.ವಿ.ದೇಶಪಾಂಡೆ:-** ಮಾನ್ಯ ಸಭಾಪತಿಯವರೇ, ಈ ವಿಚಾರದ ಬಗ್ಗೆ ಸಚಿವ ಸಂಪುಟದ ಮಂತ್ರಿಗಳಲ್ಲಿ ಯಾವುದೇ ಭಿನ್ನಾಭಿಪ್ರಾಯವಿಲ್ಲ. ಈಗಾಗಲೇ ರಾಷ್ಟ್ರಪತಿಯವರು ನಮ್ಮ ರಾಜ್ಯದಿಂದ ಕಳುಹಿಸಿರುವ ವಿಧೇಯಕಕ್ಕೆ ಅಂಕಿತವನ್ನು ಹಾಕಿರುತ್ತಾರೆ. ಸದರಿ ಕಾನೂನನ್ನು ಸರ್ವೋಚ್ಚ ನ್ಯಾಯಾಲಯದಲ್ಲಿ ಪ್ರಶ್ನಿಸಲಾಗಿದೆ. ಈ ವಿಚಾರದ ಬಗ್ಗೆ ಸರ್ವೋಚ್ಚ ನ್ಯಾಯಾಲಯವು ಪಾರದರ್ಶಕವಾಗಿ ವಿಚಾರಣೆಯನ್ನು ನಡೆಸುತ್ತಿದೆ. ಈ ಬಗ್ಗೆ ದಿನಪತ್ರಿಕೆಗಳಲ್ಲಿ ಪ್ರಕಟವಾಗುತ್ತಿದೆ. ಸರ್ಕಾರ ಹೇಳಿದ ಹಾಗೆ ನಮ್ಮ ನ್ಯಾಯವಾದಿಗಳು ಕೆಲಸವನ್ನು ನಿರ್ವಹಿಸುತ್ತಿದ್ದಾರೆ. ಹೀಗಾಗಿ ಈ ವಿಚಾರದಲ್ಲಿ ಸಚಿವ ಸಂಪುಟದಲ್ಲಿ ಯಾವುದೇ ಭಿನ್ನಾಭಿಪ್ರಾಯವಿಲ್ಲ. ಸರ್ವೋಚ್ಚ ನ್ಯಾಯಾಲಯದ ತೀರ್ಪನ್ನು ನಿರೀಕ್ಷಿಸಲಾಗುತ್ತಿದೆ, ಅದರನ್ವಯ ಮುಂದಿನ ಕ್ರಮವನ್ನು ತೆಗೆದುಕೊಳ್ಳಲಾಗುವುದು.

**ಶ್ರೀ ಅರುಣ್ ಶಹಾಪುರ:-** ಮಾನ್ಯ ಸಭಾಪತಿಯವರೇ, ಮಾನ್ಯ ಮಂತ್ರಿಗಳು ಹಿರಿಯರಾಗಿದ್ದು, ಉತ್ತರದ ನಿರೀಕ್ಷೆಯಲ್ಲಿ ಪ್ರಶ್ನೆಯನ್ನು ಕೇಳುತ್ತಿದ್ದೇನೆ. ಸರ್ವೋಚ್ಚ ನ್ಯಾಯಾಲಯವನ್ನೊಳಗೊಂಡಂತೆ ಯಾವುದೇ ನ್ಯಾಯಾಲಯದಲ್ಲಿ ಪದೋನ್ನತಿ ವಿಚಾರವಾಗಿ ಯಾವುದೇ ತಡೆಯಾಜ್ಞೆ ಇಲ್ಲ ಹಾಗೂ ಪದೋನ್ನತಿ ನೀಡಬೇಡಿ ಎಂದು ಯಾವುದೇ ನಿರ್ದೇಶನವನ್ನೂ ಸಹ ನೀಡಿಲ್ಲ. ಸರ್ಕಾರದ ಹಿರಿಯ ಸಚಿವರೆಲ್ಲರೂ ಸಹ ಪ್ರಸ್ತುತ ಸದನದಲ್ಲಿ ಉಪಸ್ಥಿತರಿದ್ದಾರೆ. ಇಡಿ ಸರ್ಕಾರಿ ಯಂತ್ರದಲ್ಲಿ ಪದೋನ್ನತಿ ವಿಚಾರವಾಗಿ ಬಹಳ ದೊಡ್ಡ ಸಮಸ್ಯೆಯಾಗಿದೆ. ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆಯು ಪದೋನ್ನತಿ ನೀಡದಿರುವ ಬಗ್ಗೆ ಆದೇಶವನ್ನು ಹೊರಡಿಸಿದೆ. ಆದರೆ ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆಯು ಸರ್ಕಾರದ ಇಲಾಖೆಗಳಲ್ಲಿ ಒಂದಾಗಿದ್ದು, ಇದರಿಂದ ಗಂಭೀರವಾದಂತಹ

ಪರಿಸ್ಥಿತಿ ನಿರ್ಮಾಣವಾಗಿದೆ. ಸದನದಲ್ಲಿ ಪ್ರಸ್ತುತ ಉನ್ನತ ಶಿಕ್ಷಣ ಸಚಿವರು ಉಪಸ್ಥಿತರಿದ್ದಾರೆ. ಇತ್ತೀಚೆಗೆ ಅವರೊಂದಿಗೆ ಈ ವಿಚಾರದಲ್ಲಿ ಚರ್ಚೆಯನ್ನು ಮಾಡಲಾಗಿದೆ. ಪದೋನ್ನತಿ ನೀಡದೇ ಇರುವುದರಿಂದ ಇಲಾಖೆಗಳಲ್ಲಿನ ಎಲ್ಲಾ ಹುದ್ದೆಗಳು ಖಾಲಿಯಾಗಿದ್ದು, ಇದರ ಪರಿಣಾಮವಾಗಿ ಸರ್ಕಾರಿ ಯಂತ್ರಗಳು ಒಂದು ರೀತಿಯಾಗಿ ಪಾರ್ಶ್ವವಾಯು ಪೀಡಿತವಾದಂತಹ ಪರಿಸ್ಥಿತಿ ನಿರ್ಮಾಣವಾಗಿದೆ. ಇದರ ಗಂಭೀರತೆಯನ್ನು ಸರ್ಕಾರವು ಅರ್ಥಮಾಡಿಕೊಳ್ಳಬೇಕು. ಎಲ್ಲಾ ಮಂತ್ರಿಗಳು ಕುಳಿತುಕೊಂಡು ಈ ವಿಚಾರದಲ್ಲಿ ಚರ್ಚೆ ಮಾಡಿ ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆಯು ಹೊರಡಿಸಿರುವ ಆದೇಶವನ್ನು ಹಿಂಪಡೆಯಬೇಕು. ಪ್ರಾಯಶಃ ನಾನು ಸರಿಯಾಗಿ ಹೇಳುವುದಾದರೆ ಪದೋನ್ನತಿ ವಿಚಾರವಾಗಿ ಯಾವುದೇ ನ್ಯಾಯಾಲಯದಲ್ಲಿ ತಡೆಯಾಜ್ಞೆ ಇಲ್ಲ ಹಾಗೂ ಪದೋನ್ನತಿ ನೀಡಬೇಡಿ ಎಂಬುದಾಗಿ ನಿರ್ದೇಶನಗಳನ್ನೂ ಸಹ ನೀಡಿಲ್ಲ. ಆದರೆ ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆಯು ಆ ರೀತಿಯಾಗಿ ಏಕೆ ಆದೇಶವನ್ನು ಹೊರಡಿಸಿದೆ ಎನ್ನುವ ಅಂಶವು ನನಗೆ ಅರ್ಥವಾಗುತ್ತಿಲ್ಲ. ಇಲಾಖೆಗಳಲ್ಲಿನ ಹಲವಾರು ಹುದ್ದೆಗಳು ಖಾಲಿ ಇದ್ದರೂ ಸಹ ರಾಜ್ಯದ ಸರ್ಕಾರಿ ನೌಕರರು ಪದೋನ್ನತಿಗಾಗಿ ನಿರೀಕ್ಷಣೆ ಮಾಡುವಂತಹ ಪರಿಸ್ಥಿತಿ ಇವತ್ತಿನ ದಿವಸ ನಿರ್ಮಾಣವಾಗಿದೆ. ದಯಮಾಡಿ ಸರ್ಕಾರವು ಈ ವಿಚಾರದಲ್ಲಿ ತೀರ್ಮಾನವನ್ನು ತೆಗೆದುಕೊಂಡು ಪದೋನ್ನತಿಗಳನ್ನು ನೀಡುವ ನಿಟ್ಟಿನಲ್ಲಿ ಹಿರಿಯರಾಗಿರುವ ಮಾನ್ಯ ಮಂತ್ರಿಗಳು ಹೆಚ್ಚಿನ ಮುತುವರ್ಜಿ ವಹಿಸಿ, ಕ್ರಮ ತೆಗೆದುಕೊಳ್ಳಬೇಕೆಂದು ವಿನಂತಿಸುತ್ತೇನೆ.

**ಶ್ರೀ ಶರಣಪ್ಪ ಮಟ್ಟೂರ:-** ಮಾನ್ಯ ಸಭಾಪತಿಯವರೇ, ಸರ್ಕಾರದ ಎಲ್ಲಾ ಇಲಾಖೆಗಳಲ್ಲಿ with regard to the promotion is concerned, most of the officials and as well as ministers are quoting about the judgement of Sri B.K.Pavitra and others Vs Union of India case which is pending before the Apex Court. ಪದೋನ್ನತಿ ವಿಚಾರವಾಗಿ ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆಯು ಒಂದು ಸಾಮಾನ್ಯವಾದ ಆದೇಶವನ್ನು ಹೊರಡಿಸಿದೆ. Wherever it exceeds the promotion with regard to the SC ST's it should be relooked ಎಂಬುದಾಗಿ ಹೇಳಿದ್ದಾರೆ ವಿನಃ ಸಾಮಾನ್ಯವಾಗಿ ಎಲ್ಲಿಯೂ ಸಹ ಹೇಳಿಲ್ಲ. ಆದಾಗ್ಯೂ ಸಹ 1978 ನೇ ಸಾಲಿನಿಂದ ಪದೋನ್ನತಿ ವಿಚಾರವಾಗಿ ಎಲ್ಲೆಲ್ಲಿ ಹೆಚ್ಚು-ಕಡಿಮೆ ಮಾಡಲಾಗಿದೆ ಎಂಬುದರ ಬಗ್ಗೆ ಪಟ್ಟಿಯನ್ನು ಸರ್ಕಾರವು ಮಾಡಿದೆ. DPAR has also taken much care to relook into the matter to comply the directions issued by the Apex

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

Court. ಈ ವಿಚಾರ ನಿನ್ನೆ-ಮೊನ್ನೆಯದಲ್ಲ ಕಳೆದ ಎಂಟು-ಹತ್ತು ವರ್ಷಗಳಿಂದ ಇತ್ಯರ್ಥಗೊಳ್ಳದೇ ಬಾಕಿ ಇದೆ. Whether it may be Degree Colleges, Polytechnic Colleges or ITI colleges, they will appoint as JTO (Junior Training Officer) and will retire as JTO. ಈ ವಿಚಾರದಲ್ಲಿ ಮಾನ್ಯ ಸದಸ್ಯರಾದ ಶ್ರೀ ರಘುನಾಥ್ ರಾವ್ ಮಲ್ಕಾಪೂರೆ ರವರು ಒಳ್ಳೆಯ ಪ್ರಶ್ನೆಯನ್ನು ಕೇಳಿದ್ದಾರೆ. ಇದಕ್ಕೆ ಪೂರಕವಾಗಿ ಮಾನ್ಯ ಸದಸ್ಯರಾದ ಶ್ರೀ ಅರುಣ್ ಶಹಾಪುರರವರು ಒಳ್ಳೆಯ ಸಲಹೆಯನ್ನು ನೀಡುವಂತಹ ಅವಕಾಶ ದೊರೆತಿದೆ. He is also a senior member of this House who came from the judicial background having rich knowledge with regard to the Apex Court and High Court. ಈ ವಿಚಾರದಲ್ಲಿ ಗಮನಹರಿಸಬೇಕೆಂಬ ಮನವಿಯನ್ನು ಮಾಡುತ್ತೇನೆ.

**ಶ್ರೀ ಆರ್.ವಿ.ದೇಶಪಾಂಡೆ:-** ಮಾನ್ಯ ಸಭಾಪತಿಯವರೇ, ನಾನು ಈ ಹಿಂದೆ ಹೇಳಿದ ಅಂಶಗಳನ್ನು ಹೊರತು ಪಡಿಸಿ ಬೇರೆ ಹೆಚ್ಚಿನ ಅಂಶಗಳನ್ನು ಹೇಳುವುದಕ್ಕಾಗುವುದಿಲ್ಲ. Our hands are tightened by the orders of the DPAR. ಈ ಕಾರಣದಿಂದಾಗಿ ಮಾನ್ಯ ಸದಸ್ಯರುಗಳು ಸಹಕರಿಸಬೇಕು. ಆದಷ್ಟು ಬೇಗನೇ ಬಾಕಿ ಇರುವ ಪದೋನ್ನತಿಗಳನ್ನು ನೀಡುವ ವಿಚಾರದಲ್ಲಿ ನಾವು ಪ್ರಯತ್ನ ಮಾಡುತ್ತೇವೆ.

**ಶ್ರೀ ರಘುನಾಥ್‌ರಾವ್ ಮಲ್ಕಾಪೂರೆ:-** ಮಾನ್ಯ ಸಭಾಪತಿಯವರೇ, Whether the DPAR is above the Government?

**ಶ್ರೀ ಆರ್.ವಿ.ದೇಶಪಾಂಡೆ:-** ಮಾನ್ಯ ಸಭಾಪತಿಯವರೇ, No, DPAR is a department which advices. So, we have to go by their advice.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಪ್ರಶ್ನೆ ಸಂಖ್ಯೆ : 414**

**ಸಭಾಪತಿಯವರು:–** ಮಾನ್ಯ ಸದಸ್ಯರಾದ ಶ್ರೀ ಆಯನೂರು ಮಂಜುನಾಥ್ ರವರು ಕೇಳಿರುವ ಪ್ರಶ್ನೆಗೆ ಉತ್ತರ ನೀಡಲು ಸರ್ಕಾರವು ಸಮಯಾವಕಾಶವನ್ನು ಕೋರಿದೆ. ಮಾನ್ಯ ಸಚಿವರು ಸದರಿ ಪ್ರಶ್ನೆಗೆ ಮುಂದಿನ ವಾರದಲ್ಲಿ ಉತ್ತರವನ್ನು ನೀಡಬೇಕು.

**ಶ್ರೀ ಆರ್.ವಿ.ದೇಶಪಾಂಡೆ:–** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಬೀಳು ಭೂಮಿ ಅಥವಾ ಇನ್ಯಾವ ವಿಚಾರಕ್ಕೆ ಸಂಬಂಧಪಟ್ಟಂತೆ ಪ್ರಶ್ನೆಯನ್ನು ಕೇಳಿದ್ದಾರೆ. We are not able to understand it.

**SRI AYANUR MANJUNATH:-** I will try to clarify it.

**ಶ್ರೀ ಆರ್.ವಿ.ದೇಶಪಾಂಡೆ:–** ಮಾನ್ಯ ಸಭಾಪತಿಯವರೇ, ಈ ವಿಚಾರದಲ್ಲಿ ಸ್ಪಷ್ಟೀಕರಣವನ್ನು ನಾನು ಮಾನ್ಯ ಸದಸ್ಯರನ್ನೇ ಕೇಳುತ್ತೇನೆ. ಬೀಳು ಭೂಮಿ ಗುತ್ತಿಗೆ ಕಾಯ್ದೆ ಎಂದರೇನು?

**ಶ್ರೀ ಆಯನೂರು ಮಂಜುನಾಥ್:–** ಮಾನ್ಯ ಸಭಾಪತಿಯವರೇ, ಸರ್ಕಾರವು ಹಾಲಿ ಇರುವ ಒಣ ಭೂಮಿಗಳನ್ನು ವಶಪಡಿಸಿಕೊಳ್ಳುತ್ತದೆ ಹಾಗೂ ಅದನ್ನು lease ಮುಖಾಂತರ ನೀಡಲಾಗುತ್ತದೆ ಎಂಬಂತಹ ವರದಿಯು ಇತ್ತೀಚೆಗೆ ಪತ್ರಿಕೆಗಳಲ್ಲಿ ಪ್ರಕಟಗೊಂಡಿತ್ತು.

**ಶ್ರೀ ಆರ್.ವಿ.ದೇಶಪಾಂಡೆ:–** ಮಾನ್ಯ ಸಭಾಪತಿಯವರೇ, ಈ ವಿಚಾರವಾಗಿ ಕಂದಾಯ ಮಂತ್ರಿಯಾಗಿ ನನ್ನ ಬಳಿ ಯಾವುದೇ ವಿಷಯ ಪ್ರಸ್ತಾಪವಾಗಿಲ್ಲ. ರಾಜ್ಯದಲ್ಲಿರುವ ಒಣ ಭೂಮಿ ಹಾಗೂ ಇತ್ಯಾದಿ ಮಾಹಿತಿ ನನ್ನ ಬಳಿ ಇರುವುದರಿಂದ ಸ್ವಲ್ಪ ಗೊಂದಲವಾಗಿದೆ.

**ಶ್ರೀ ಆಯನೂರು ಮಂಜುನಾಥ್:–** ಮಾನ್ಯ ಸಭಾಪತಿಯವರೇ, ಪತ್ರಿಕೆಗಳಲ್ಲಿ ಆ ರೀತಿಯಾಗಿ ವರದಿ ಪ್ರಕಟಗೊಂಡಿರುವ ಹಿನ್ನೆಲೆಯಲ್ಲಿ ನಾನು ಪ್ರಶ್ನೆಯನ್ನು ಕೇಳಿದ್ದೇನೆ. ಯಾವುದು ಒಣ ಭೂಮಿ, ಯಾವ ಭೂಮಿ ಬೀಳು ಬಿಟ್ಟಿದೆ ಹಾಗೂ ಯಾವ ಭೂಮಿ ವ್ಯವಸಾಯಕ್ಕೆ ಯೋಗ್ಯವಲ್ಲ ಹಾಗೂ ಇವುಗಳೆಲ್ಲವನ್ನು ಸರ್ಕಾರ ವಶಪಡಿಸಿಕೊಳ್ಳುತ್ತದೆ ಎಂಬ ಬಗ್ಗೆ ಸ್ವೀಕೃತಗೊಂಡ ಮಾಹಿತಿಯ ಮೇರೆಗೆ ನಾನು ಪ್ರಶ್ನೆಯನ್ನು ಕೇಳಿದ್ದೇನೆ.

**ಶ್ರೀ ಆರ್.ವಿ.ದೇಶಪಾಂಡೆ:–** ಮಾನ್ಯ ಸಭಾಪತಿಯವರೇ, ಮೈಸೂರು ಭಾಗದ ಪ್ರದೇಶದಲ್ಲಿ ಬೀಳು ಬಿಟ್ಟಿರುವ ಭೂಮಿಯನ್ನು ಸರ್ಕಾರವು ಪ್ರಯತ್ನಪಟ್ಟು ರೆಗ್ಯೂಲರೈಸ್ ಮಾಡಿದೆ. ಆದಾಗ್ಯೂ ಸಹ ಕೆಲವು ಭೂಮಿ ಉಳಿದುಕೊಂಡು ಬಿಟ್ಟಿತು. ಹೀಗಾಗಿ ಈ ವಿಚಾರದಲ್ಲಿ ಮಾನ್ಯ ಕಾಗೋಡು ತಿಮ್ಮಪ್ಪನವರು ಕಂದಾಯ ಇಲಾಖೆಯ ಮಂತ್ರಿಗಳಾಗಿದ್ದ ಸಂದರ್ಭದಲ್ಲಿ ಕಾಲಾವಕಾಶ ವಿಸ್ತರಣೆ ಕೋರಿ ಕಾನೂನು, ನ್ಯಾಯ ಮತ್ತು ಮಾನವ ಹಕ್ಕುಗಳು ಹಾಗೂ ಸಂಸದೀಯ ವ್ಯವಹಾರಗಳ ಇಲಾಖೆಗೆ ಪ್ರಸ್ತಾವನೆಯನ್ನು

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಕಳುಹಿಸಲಾಯಿತು. ಆ ಸಂದರ್ಭದಲ್ಲಿ ಚುನಾವಣೆಯನ್ನು ಘೋಷಿಸಲಾಯಿತು. ಹೀಗಾಗಿ ಮೈಸೂರು ಭಾಗದ ಕೆಲವು ಪ್ರದೇಶಗಳು ಉಳಿದುಕೊಂಡು ಬಿಟ್ಟವು. ಇದನ್ನು ಹೊರತು ಪಡಿಸಿ ಬಂಜರು ಭೂಮಿಯನ್ನು ಗುತ್ತಿಗೆ ಆಧಾರದ ಮೇಲೆ ನೀಡುವ ಬಗ್ಗೆ ಯಾವುದೇ ಪ್ರಸ್ತಾವನೆ ಇಲ್ಲ.

**ಶ್ರೀ ಆಯನೂರು ಮಂಜುನಾಥ್:-** ಮಾನ್ಯ ಸಭಾಪತಿಯವರೇ, ಮಾನ್ಯ ಮಂತ್ರಿಗಳು ಹೇಳುವಂತೆ ಪರಿಸ್ಥಿತಿ ಅದೇ ರೀತಿಯಾಗಿದ್ದರೆ ಸರಿ. ಆದರೆ ಪತ್ರಿಕೆಗಳಲ್ಲಿ ಪ್ರಕಟಗೊಂಡ ವರದಿಯನ್ನಾಧರಿಸಿ ನಾನು ಪ್ರಶ್ನೆಯನ್ನು ಕೇಳಿದ್ದೇನೆ. ಆ ರೀತಿಯಾದ ಯಾವುದೇ ಪ್ರಸ್ತಾವಗಳು ಸರ್ಕಾರದ ಮುಂದೆ ಇಲ್ಲ ಎನ್ನುವುದಾದರೆ ನಾನು ಕೇಳಿರುವ ಪ್ರಶ್ನೆಯು ಅಪ್ರಸ್ತುತವಾಗುತ್ತದೆ.

**ಪ್ರಶ್ನೆ ಸಂಖ್ಯೆ 368**
**(ಉತ್ತರವನ್ನು ಲಗತ್ತಿಸಿದೆ)**

**ಶ್ರೀ ಬಿ.ಜಿ.ಪಾಟೀಲ್:-** ಮಾನ್ಯ ಸಭಾಪತಿಯವರೇ, ಕಲಬುರಗಿ ಹಾಗೂ ಹೈದರಾಬಾದ್-ಕರ್ನಾಟಕ ವಲಯದಲ್ಲಿ ದಾಲ್ ಮಿಲ್‌ಗಳು ಪ್ರಮುಖ ಉದ್ಯಮವಾಗಿದ್ದು, ದೇಶದ ವಿವಿಧ ಭಾಗಗಳಿಂದ ಉತ್ಪನ್ನಗಳನ್ನು ಸರಬರಾಜು ಮಾಡುತ್ತದೆ. ಆದರೆ, ದರದ ನಿಯಂತ್ರಣ, ಮಾರುಕಟ್ಟೆ ಹಾಗೂ ಇತರೆ ವಿವಿಧ ಕಾರಣಗಳಿಂದ ದಾಲ್ ಮಿಲ್‌ಗಳು ಗಂಭೀರ ಸಮಸ್ಯೆಗಳನ್ನು ಎದುರಿಸುತ್ತಿವೆ. ಎಂ.ಪಿ.ಎಂ.ಸಿ., ಸೆಸ್ ಮತ್ತು ಸಿ.ಸಿ.ಸಾಲಗಳ ಮೇಲೆ ಬ್ಯಾಂಕುಗಳು ವಿಧಿಸುತ್ತಿರುವ ಹೆಚ್ಚಿನ ಬಡ್ಡಿ ದರ ಇತ್ಯಾದಿ ದಾಲ್ ಮಿಲ್‌ಗಳನ್ನು ಮತ್ತಷ್ಟು ಸಂಕಷ್ಟಕ್ಕೆ ಈಡು ಮಾಡಿವೆ. ಇದರಿಂದ ಹೆಚ್ಚಿನ ದಾಲ್ ಮಿಲ್‌ಗಳು ಮುಚ್ಚುವ ಭೀತಿಯನ್ನೂ ಸಹ ಎದುರಿಸುತ್ತಿದ್ದು, ಹೆಚ್ಚಿನ ಸಂಖ್ಯೆಯ ಜನರನ್ನು ಉದ್ಯೋಗದಿಂದ ಹೊರ ಹಾಕುತ್ತಿರುವ ಪರಿಸ್ಥಿತಿ ಎದುರಾಗಿದೆ. ಕಲಬುರಗಿಯಲ್ಲಿ ಸುಮಾರು 250 ದಾಲ್ ಮಿಲ್‌ಗಳು ಕಾರ್ಯಚಟುವಟಿಕೆಯನ್ನು ನಡೆಸುತ್ತಿದ್ದು, ಪ್ರತಿ ಮಿಲ್‌ನಲ್ಲಿ ಸರಾಸರಿ 30-35 ಕೆಲಸಗಾರರು ಉದ್ಯೋಗವನ್ನು ಕಳೆದುಕೊಂಡಿರುತ್ತಾರೆ ಎಂಬುದು ಜನರ ಹಾಗೂ ನನ್ನ ಭಾವನೆಯಾಗಿದೆ. ಈ ವಿಚಾರದಲ್ಲಿ ಬ್ಯಾಂಕುಗಳಿಗೆ ಸರ್ಕಾರವು ಹೆಚ್ಚಿನ ನಿರ್ದೇಶನ ನೀಡಬೇಕೆಂದು ವಿನಂತಿ ಮಾಡಿಕೊಳ್ಳುತ್ತೇನೆ.

(ಮುಂದು)

(396) 12-12-2018 5-00 ಎಲ್‌ಎಂ/ಎಂಡಿ

**ಶ್ರೀ ಎಸ್.ಆರ್.ಶ್ರೀನಿವಾಸ್(ಮುಂದು):-**

ಮಾನ್ಯ ಸಭಾಪತಿಗಳೆ, ಅವರೇ ಮಾಡಿಕೊಂಡಿರುವ ಅನಾಹುತಗಳಿಂದ ಈ ಸಮಸ್ಯೆ ಉಂಟಾಗಿದೆ. ಕೆಲವು ವರ್ಷಗಳ ಹಿಂದೆ ಬೇಳೆ ಬೆಲೆ ಒಂದು ಕೆಜಿಗೆ 180 ರಿಂದ 200 ರೂಪಾಯಿಗಳಿದ್ದ ಸಂದರ್ಭದಲ್ಲಿ

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಸರ್ಕಾರವು ಇದನ್ನು ನಿಯಂತ್ರಣ ಮಾಡಲು ಆಹಾರ ಇಲಾಖೆಯಿಂದ raid ಮಾಡಿದಂತಹ ಸಂದರ್ಭದಲ್ಲಿ ಒಂದೊಂದು ದಾಲ್ ಮಿಲ್‌ಗಳಲ್ಲಿ ಸುಮಾರು 20 ರಿಂದ 25 ಕ್ವಿಂಟಾಲ್ ದಾಲ್‌ನ್ನು ಸಂಗ್ರಹಣೆ ಮಾಡಿದ ಪರಿಣಾಮವಾಗಿ ಮಾರುಕಟ್ಟೆಯಲ್ಲಿ ಬೇಳೆಯ ಪೂರೈಕೆಯಲ್ಲಿ ಉಂಟಾದ ವ್ಯತ್ಯಯದಿಂದಾಗಿ ಬೆಲೆ ಜಾಸ್ತಿಯಾಗಿತ್ತು. ಸರ್ಕಾರ ರೈಡ್ ಮಾಡಿಸಿ ಎಲ್ಲವನ್ನು ಮುಟ್ಟುಗೋಲು ಹಾಕಿಕೊಂಡು ಒಂದು ತಿಂಗಳಲ್ಲಿ ಸಂಗ್ರಹಿಸಿರುವ ಎಲ್ಲ ದಾಲ್‌ನ್ನು ಖಾಲಿ ಮಾಡಬೇಕೆಂದು ಹೇಳಿದ್ದಾಗ ಬೇಳೆ ಖಾಲಿ ಮಾಡುವ ಸಂದರ್ಭದಲ್ಲಿ ಬೆಲೆ ಕಡಿಮೆಯಾಗಿದೆ. ಅದಕ್ಕೆ ಪೂರಕವಾಗಿ ಕೇಂದ್ರ ಸರ್ಕಾರ ಬೇಳೆ ಕಾಳುಗಳನ್ನು ಆಮದು ಮಾಡಿಕೊಂಡಿರುವುದರಿಂದ ಬೆಲೆ ಕಡಿಮೆಯಾಗುತ್ತಾ ಹೋಗುತ್ತಿದೆ. ಇದನ್ನು ಸರಿ ಮಾಡಬೇಕು ಎಂದು ನಮ್ಮ ಇಲಾಖೆಯ ಕಾರ್ಯದರ್ಶಿಗಳು ದಾಲ್ ಮಿಲ್‌ಗಳ ಮಾಲೀಕರ ಜೊತೆಯಲ್ಲಿ ಸಭೆ ಮಾಡಿ ಚರ್ಚೆ ಮಾಡಿದ್ದಾರೆ. ಮಿಲ್‌ನವರು ಕೆಲವು ಬೇಡಿಕೆಗಳನ್ನು ಸರ್ಕಾರದ ಮುಂದಿಟ್ಟಿದ್ದಾರೆ. ಚೇತರಿಗೆ ರಜೆ, ದಾಲ್‌ಮಿಲ್‌ಗಳನ್ನು ಆದ್ಯತಾ ವಲಯಗಳೆಂದು ಪರಿಗಣಿಸಬೇಕು ಮತ್ತು *NPA* (Non-Performing Assets) ನ್ನು ಮರು ವ್ಯಾಖ್ಯಾನಿಸಬೇಕು, OTS (*One Time Settlement)* ನ್ನು ಮಾಡಿಕೊಡಬೇಕು, ಪ್ರೋತ್ಸಾಹ ಧನವನ್ನು ಕೊಡಬೇಕು, ಎಪಿಎಂಸಿ ಮೇಲೆ cess ವಿನಾಯಿತಿಯನ್ನು ಕೊಡಬೇಕು, ವಿದ್ಯುತ್ ಬಿಲ್‌ಗಳಿಗೆ ರಿಯಾಯಿತಿಯನ್ನು ಕೊಡಬೇಕು, ವಿದ್ಯುತ್ LT (Low Tension) ಮಿತಿಯನ್ನು ಹೆಚ್ಚಿಸಿಕೊಡಬೇಕು, ಕನಿಷ್ಠ ಖರೀದಿ ನೀತಿಯನ್ನು ಸಡಿಲಗೊಳಿಸಬೇಕು. ಈ ಎಲ್ಲ ಬೇಡಿಕೆಗಳನ್ನು ಅವರು ಸರ್ಕಾರದ ಮುಂದಿಟ್ಟಿದ್ದಾರೆ. ನಮ್ಮ ಇಲಾಖೆಯಿಂದ ಕ್ರಮ ತೆಗೆದುಕೊಳ್ಳಲು ಪರಿಶೀಲನೆ ಮಾಡುತ್ತಿದ್ದೇವೆ. ಇದರ ಜೊತೆಗೆ ಮಾನ್ಯ ಮುಖ್ಯಮಂತ್ರಿಗಳ ಸಹಕಾರವೂ ಬೇಕಾಗುತ್ತದೆ. APMC cess ನ್ನು ನಾವೇ ಕಡಿಮೆ ಮಾಡುತ್ತೇವೆ ಎಂದರೆ ಹಾಗೆ ಮಾಡಲು ಬರುವುದಿಲ್ಲ. ಅದಕ್ಕಾಗಿ ಸಂಬಂದಪಟ್ಟ ಇಲಾಖೆಗೆ ಪ್ರಸ್ತಾವನೆಯನ್ನು ಕಳುಹಿಸಬೇಕಾಗುತ್ತದೆ, ಅವರ ಜೊತೆಯಲ್ಲಿ ಮಾತನಾಡಬೇಕಾಗುತ್ತದೆ. ಇದರ ಬಗ್ಗೆ ನಮ್ಮ ಇಲಾಖೆಯ ಕಾರ್ಯದರ್ಶಿಯವರ ಮುಖಾಂತರ ಸಂಬಂಧಪಟ್ಟ ಇಲಾಖೆಗೆ ತಿಳಿಸಿದ್ದೇವೆ. ಕನಿಷ್ಠ ಖರೀದಿ ಧನವನ್ನು ನಿಗದಿಗೊಳಿಸುವ ಬಗ್ಗೆ ಹೇಳಿದ್ದಾರೆ. ದಾಲ್‌ನ್ನು NAFED (National Agricultural Cooperative Marketing Federation of India Ltd) ಖರೀದಿ ಮಾಡುತ್ತಿದೆ. ರೈತರಿಗೆ ಬೆಂಬಲ ಬೆಲೆ ಕೊಟ್ಟು 6000 ರೂಪಾಯಿಗಳಿಗೆ ಖರೀದಿ ಮಾಡಿದ್ದಾರೆ. ಇವರಿಗೆ ಹೊರಗಡೆಯಿಂದ ಬೇಳೆ ಸಿಗುತ್ತಿಲ್ಲ. ಮಿಲ್‌ನವರು NAFED ನಿಂದಲೇ ಖರೀದಿ ಮಾಡಬೇಕಾಗಿದೆ. NAFED ನಿಂದ ಒಂದು ಬಾರಿಗೆ 2000 ಕ್ವಿಂಟಾಲ್ ದಾಲ್ ಖರೀದಿ ಮಾಡಬೇಕು ಎನ್ನುವ

ನಿಗದಿಯನ್ನು ಇಟ್ಟಿದರು. ಅದನ್ನು ನಾವು ಪರಿಗಣಿಸಿ ಕೇವಲ 200 ಟನ್‌ಗೆ ಸಿಮೀತಗೊಳಿಸಿ 200 ಟನ್ ಖರೀದಿ ಮಾಡಲು ಸರ್ಕಾರದಿಂದ ಅವಕಾಶವನ್ನು ಒದಗಿಸಿಕೊಟ್ಟಿದ್ದೇವೆ. ಇನ್ನು ವಿದ್ಯುತ್ ವಿಚಾರಕ್ಕೆ ಸಂಬಂಧಿಸಿದಂತೆ ಮಾನ್ಯ ಮುಖ್ಯಮಂತ್ರಿಗಳ ಜೊತೆಯಲ್ಲಿ ಚರ್ಚೆ ಮಾಡಿ ಆ ಸಮಸ್ಯೆಯನ್ನು ಬಗೆಹರಿಸುವಂತಹ ಪ್ರಯತ್ನವನ್ನು ನಾವು ಮಾಡುತ್ತೇವೆ.

**ಶ್ರೀ ಬಸವರಾಜ ಪಾಟೀಲ್ ಇಟಗಿ:-** ಮಾನ್ಯ ಸಭಾಪತಿಗಳೆ, ಬಹಳ ಪ್ರಮುಖವಾದ ಪ್ರಶ್ನೆಯನ್ನು ಮಾನ್ಯ ಬಿ.ಜಿ.ಪಾಟೀಲ್‌ರವರು ಕೇಳಿದ್ದಾರೆ. ಗುಲ್ಬರ್ಗಾ, ಬೀದರ್, ರಾಯಚೂರಿನ ಕೆಲವು ಭಾಗಗಳಲ್ಲಿ ಮತ್ತು ಯಾದಗಿರಿಯ ಕೆಲವು ಭಾಗಗಳಲ್ಲಿ ಎಲ್ಲ ದಾಲ್‌ಗಳನ್ನು ಬೆಳೆಯಲಾಗುತ್ತದೆ. ಸುಮಾರು ನಾಲ್ಕೈದು ವರ್ಷಗಳಿಂದ ಅಲ್ಲಿಯ ರೈತರು ಬಹಳಷ್ಟು ಸಂಕಷ್ಟಕ್ಕೆ ಒಳಗಾಗಿದ್ದಾರೆ. ಇಡೀ ದೇಶಕ್ಕೆ ದಾಲ್‌ನ್ನು ಇಲ್ಲಿಂದ ಕಳುಹಿಸಲಾಗುತ್ತದೆ. ಆ ಮಿಲ್‌ಗಳವರು ಏನೇನು ಕೇಳಿದ್ದಾರೆ, ಅದೆಲ್ಲವನ್ನು ಕೊಡುವ ಪ್ರಾಮುಖ್ಯತೆ ಇದೆ. ಸಚಿವರು ಇದರ ಕಡೆಗೆ ಗಮನ ಹರಿಸಬೇಕು. ಯಾವಾಗ ಆಮದು ಮಾಡಿಕೊಳ್ಳಬೇಕು, ಯಾವಾಗ ಮಾಡಿಕೊಳ್ಳಬಾರದು ಎನ್ನುವುದಕ್ಕೆ ನಿಮ್ಮಲ್ಲಿ ಪಾಲಿಸಿಯೇ ಇಲ್ಲ. ನಮ್ಮಲ್ಲಿ ಹೆಚ್ಚಿನ ಬೆಳೆ ಇದ್ದಾಗ ಮತ್ತೆ ಆಮದು ಮಾಡಿಕೊಂಡರೆ ಬೆಲೆ ಕಡಿಮೆಯಾಗುತ್ತದೆ. NAFED ನವರು ಯಾವಾಗ ತೆಗೆದುಕೊಳ್ಳಬೇಕು, ಯಾವಾಗ ತೆಗೆದುಕೊಳ್ಳಬಾರದು; ಯಾವಾಗ price stabilize ಮಾಡಬೇಕು ಎನ್ನುವುದನ್ನು ಗಮನಿಸಬೇಕಾಗುತ್ತದೆ. ಕಳೆದ ವರ್ಷ ಎಲ್ಲಾ ಪ್ರದೇಶಗಳಲ್ಲಿ NAFED ವತಿಯಿಂದ ದಾಲ್ ಖರೀದಿ ಮಾಡಲಾಯಿತು. ಕೊನೆಯಲ್ಲಿ 10 ಕ್ವಿಂಟಲ್ ದಾಲ್ ಕೊಟ್ಟಿರುವ ರೈತರಿಗೆ ಇದುವರೆಗೆ ಪೇಮೆಂಟ್ ಆಗಿರುವುದಿಲ್ಲ. ಇದರ ಬಗ್ಗೆ ಗಂಭೀರವಾಗಿ ಆಲೋಚನೆ ಮಾಡಬೇಕು. ಪ್ರತಿವರ್ಷ ದಾಲ್ ಬೆಲೆ ಲಾಸ್‌ನಲ್ಲಿಯೇ ಇದೆ. ಆಮದು ಮಾಡಿಕೊಳ್ಳುತ್ತಿರುವುದರಿಂದ ನಮ್ಮ ರೈತರು ನಷ್ಟವನ್ನು ಅನುಭವಿಸುತ್ತಿದ್ದಾರೆ. ರೈತರನ್ನು ಉಳಿಸಬೇಕು ಎನ್ನುವುದಾದರೆ ಆಮದು ಏಕೆ ಮಾಡಿಕೊಳ್ಳುತ್ತೀರಿ, ಬೆಳೆ ಹಾನಿಯಾಗಿ ಪೂರೈಕೆ ಕಡಿಮೆ ಇದ್ದಾಗ ಬೇಕಾದರೆ ಆಮದು ಮಾಡಿಕೊಳ್ಳಿ.

**ಶ್ರೀ ಎಸ್.ಆರ್.ಶ್ರೀನಿವಾಸ್(ವಾಸು):-** ಮಾನ್ಯ ಸಭಾಪತಿಗಳೆ, ದಾಲ್ ಆಮದನ್ನು ಕೇಂದ್ರ ಸರ್ಕಾರ ಮಾಡುತ್ತದೆ, ರಾಜ್ಯ ಸರ್ಕಾರ ಮಾಡುವುದಿಲ್ಲ. ಕೇಂದ್ರ ಸರ್ಕಾರಕ್ಕೆ ಪತ್ರವನ್ನು ಬರೆದು ಇರುವ ವಿಚಾರವನ್ನು ಗಮನಕ್ಕೆ ತರುತ್ತೇವೆ. ಇನ್ನು ದಾಲ್ ಮಿಲ್‌ನವರು ಕೊಟ್ಟಿರುವ ಬೇಡಿಕೆಗಳ ಬಗ್ಗೆ ನಮ್ಮ ಕಾರ್ಯದರ್ಶಿಯವರು ಮಿಲ್ ಮಾಲೀಕರ ಜೊತೆಯಲ್ಲಿ ಈಗಾಗಲೇ ಸಭೆಯನ್ನು ಮಾಡಿದ್ದಾರೆ. ನಾನು ಕೂಡ ಸಂಬಂಧಪಟ್ಟವರನ್ನು ಕರೆದು ಮಾತನಾಡಿ, ಮಾನ್ಯ ಮುಖ್ಯಮಂತ್ರಿಗಳ ಜೊತೆಯಲ್ಲಿ ಮಾತನಾಡಿ ಈ ಸಮಸ್ಯೆಯನ್ನು ಯಾವ ರೀತಿ ಬಗೆಹರಿಸಬಹುದು ಎನ್ನುವುದಕ್ಕೆ ಕ್ರಮ ತೆಗೆದುಕೊಳ್ಳುತ್ತೇನೆ.

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಪ್ರಶ್ನೆ ಸಂಖ್ಯೆ 333**
**(ಉತ್ತರವನ್ನು ಲಗತ್ತಿಸಲಾಗಿದೆ)**

**ಶ್ರೀ ನಿರಾಣಿ ಹಣಮಂತ್ ರುದ್ರಪ್ಪ:-** ಮಾನ್ಯ ಸಭಾಪತಿಗಳೆ, ಮಾನ್ಯ ಸಚಿವರು ಉತ್ತರವನ್ನು ಕೊಟ್ಟಿದ್ದಾರೆ. ಬೆಳಗಾವಿ, ವಿಜಯಪುರ ಮತ್ತು ಬಾಗಲಕೋಟೆ ಜಿಲ್ಲೆಗಳಲ್ಲಿ ಎಷ್ಟು ಸರ್ಕಾರಿ, ಅನುದಾನಿತ ಹಾಗೂ ಅನುದಾನರಹಿತ ಕೈಗಾರಿಕಾ ತರಬೇತಿ ಸಂಸ್ಥೆಗಳು ಕಾರ್ಯನಿರ್ವಹಿಸುತ್ತಿವೆ ಎನ್ನುವ ಪ್ರಶ್ನೆಗೆ ಹಾಗೂ ಈ ಸಂಸ್ಥೆಗಳಲ್ಲಿ ಎಷ್ಟು ಹುದ್ದೆಗಳು ಖಾಲಿ ಇವೆ ಎನ್ನುವುದಕ್ಕೂ ಮಾನ್ಯ ಸಚಿವರು ಉತ್ತರವನ್ನು ಕೊಟ್ಟಿದ್ದಾರೆ. ಸರ್ಕಾರಿ ತರಬೇತಿ ಸಂಸ್ಥೆಗಳು 36 ಇವೆ, ಅನುದಾನಿತ ತರಬೇತಿ ಸಂಸ್ಥೆಗಳು 25 ಇವೆ. 61 ಶಿಕ್ಷಣ ಸಂಸ್ಥೆಗಳಲ್ಲಿ 131 ಬೋಧಕ ಸಿಬ್ಬಂದಿ ಹುದ್ದೆಗಳು ಖಾಲಿ ಇವೆ. 121 ಬೋಧಕೇತರ ಹುದ್ದೆಗಳು ಖಾಲಿ ಇವೆ. ಈ ಖಾಲಿ ಹುದ್ದೆಗಳನ್ನು ಯಾವ ಕಾಲಮಿತಿಯಲ್ಲಿ ಮತ್ತು ಯಾವಾಗ ಭರ್ತಿ ಮಾಡಲಾಗುತ್ತದೆ ಎನ್ನುವುದನ್ನು ಮಾನ್ಯ ಸಚಿವರು ಹೇಳಬೇಕು. ಸರ್ಕಾರಿ ಕೈಗಾರಿಕಾ ತರಬೇತಿ ಸಂಸ್ಥೆಗಳಲ್ಲಿ ಖಾಲಿ ಇರುವ ಹುದ್ದೆಗಳನ್ನು ಭರ್ತಿ ಮಾಡಲು ಕರ್ನಾಟಕ ಲೋಕಸೇವಾ ಆಯೋಗಕ್ಕೆ ಪ್ರಸ್ತಾವನೆಯನ್ನು ಸಲ್ಲಿಸಲಾಗಿದೆ ಎಂದು ಉತ್ತರವನ್ನು ಕೊಟ್ಟಿದ್ದಾರೆ. ಈ ಹುದ್ದೆಗಳನ್ನು ಆದಷ್ಟು ಬೇಗ ಭರ್ತಿ ಮಾಡಬೇಕು ಎಂದು ಮಾನ್ಯ ಮಂತ್ರಿಗಳಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ. ಇದರ ಜೊತೆಯಲ್ಲಿ 2000 ಇಸವಿಯ ನಂತರ ಸ್ಥಾಪಿತವಾದ ಯಾವುದೇ ಅನುದಾನರಹಿತ ಕೈಗಾರಿಕಾ ಸಂಸ್ಥೆಗಳಿಗೆ ಅನುದಾನವನ್ನು ಕೊಡುವುದಿಲ್ಲ ಎಂದು ಹೇಳಿದ್ದಾರೆ. ಸರ್ಕಾರ ಎಲ್ಲರಿಗೂ ಉದ್ಯೋಗವನ್ನು ಒದಗಿಸಿಕೊಡಲು ಆಗುವುದಿಲ್ಲ ಎನ್ನುವ ಹಿನ್ನೆಲೆಯಲ್ಲಿ ಕೌಶಲ್ಯ ಅಭಿವೃದ್ಧಿ ಮತ್ತು ಉದ್ಯಮಶೀಲತೆ ಎನ್ನುವ ಯೋಜನೆಯಲ್ಲಿ ಸಾಕಷ್ಟು ಕೆಲಸಗಳನ್ನು ಮಾನ್ಯ ಸಚಿವರು ಮಾಡುತ್ತಿದ್ದಾರೆ. ಆ ಹಿನ್ನೆಲೆಯಲ್ಲಿ ಕೌಶಲ್ಯ ಅಭಿವೃದ್ಧಿಯಾಗಬೇಕಾದರೆ ಕೌಶಲ್ಯ ತರಬೇತಿ ಸಂಸ್ಥೆಗಳು ಉತ್ತಮವಾದ ಕೆಲಸ ಕಾರ್ಯಗಳನ್ನು ಮಾಡಬೇಕಾಗುತ್ತದೆ. ಆ ಹಿನ್ನೆಲೆಯಲ್ಲಿ ಸ್ವಯಂ ಉದ್ಯೋಗವನ್ನು ಸೃಷ್ಟಿ ಮಾಡುವಂತಹ ಈ ಸಂಸ್ಥೆಗಳಿಗೆ ಅದು 2000 ಇಸವಿ ನಂತರ ಪ್ರಾರಂಭವಾದ ಸಂಸ್ಥೆಗಳಿಗೂ ಅನುದಾನವನ್ನು ನೀಡುವ ಅವಶ್ಯಕತೆ ಇದೆ. ಆದ್ದರಿಂದ ಸರ್ಕಾರ ಇದನ್ನು ಗಂಭೀರವಾಗಿ ಪುನರ್ ಪರಿಶೀಲನೆ ಮಾಡಿ, ಆ ಸಂಸ್ಥೆಗಳಿಗೂ ಅನುದಾನವನ್ನು ಕೊಡುವಂತಹ ಕೆಲಸವನ್ನು ಮಾಡಬೇಕೆಂದು ಈ ಸಂದರ್ಭದಲ್ಲಿ ತಮ್ಮಲ್ಲಿ ಕಳಕಳಿಯ ಪ್ರಾರ್ಥನೆಯನ್ನು ಮಾಡುತ್ತೇನೆ. ಕೌಶಲ್ಯ ಅಭಿವೃದ್ಧಿಯಾಗಬೇಕಾದರೆ ಕೈಗಾರಿಕಾ ಸಂಸ್ಥೆಗಳು ಉತ್ತಮವಾದ ಕಾರ್ಯವನ್ನು ಮಾಡಬೇಕಾಗುತ್ತದೆ. ಇದು ಅಲ್ಲದೆ ಅಲ್ಲಿ ಕಾರ್ಯ ನಿರ್ವಹಿಸುವಂತಹ ಸಿಬ್ಬಂದಿಗಳಿಗೆ ಸುಮಾರು ನಾಲ್ಕೈದು ತಿಂಗಳಿನಿಂದ ವೇತನವನ್ನು ಸ್ಥಗಿತಗೊಳಿಸಲಾಗಿದೆ. ಇದರಿಂದ ಅಲ್ಲಿ

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಸೇವೆಯನ್ನು ಮಾಡುವಂತಹ ಶಿಕ್ಷಕರು ಮತ್ತು ಶಿಕ್ಷಕೇತರ ಸಿಬ್ಬಂದಿಗಳು ಸಾಕಷ್ಟು ನೋವನ್ನು ಅನುಭವಿಸುತ್ತಿದ್ದಾರೆ. ಅವರಿಗೆ ಪ್ರತಿ ತಿಂಗಳು ವೇತನ ಸಿಗುವಂತಹ ವ್ಯವಸ್ಥೆಯಾಗಬೇಕು. ಆ ದಿಕ್ಕಿನಲ್ಲಿ ತಾವು ಗಮನ ಹರಿಸಬೇಕೆಂದು ನಾನು ವಿನಂತಿಸುತ್ತೇನೆ. ಹೊಸದಾಗಿ ಐಟಿಐ ಕಾಲೇಜುಗಳನ್ನು ಪ್ರಾರಂಭ ಮಾಡುವಂತಹ ಸಂದರ್ಭದಲ್ಲಿ ಪ್ರಾರಂಭದಲ್ಲಿ ಅನುಮತಿಯನ್ನು ಕೊಡಲಾಗಿರುತ್ತದೆ. ನಂತರ ಪರಿಶೀಲನೆ ಮಾಡಿ ಅನುಮೋದನೆಯನ್ನು ಕೊಡಲು ತಾವು ಕಾಲಾವಕಾಶವನ್ನು ಕೇಳಿರುತ್ತೀರಿ. ಆದರೆ ಪರೀಕ್ಷೆ ಸಮಯ ಬಂದರೂ ಕೆಲವು ಶಾಲೆಗಳಿಗೆ ಅನುಮೋದನೆಯನ್ನು ಕೊಡುವುದೇ ಇಲ್ಲ. ಅನುಮೋದನೆ ಕೊಡದೆ ಇರುವಂತಹ ಶಾಲೆಗಳಲ್ಲಿ ಪ್ರವೇಶ ಪಡೆದಿರುವಂತಹ ವಿದ್ಯಾರ್ಥಿಗಳಿಗೆ ತೊಂದರೆಯಾಗುತ್ತಿದೆ. ಈ ಪರಿಶೀಲನೆ ಕಾರ್ಯವನ್ನು ಜೂನ್-ಜುಲೈನಲ್ಲಿ ಮಾಡಿಕೊಟ್ಟರೆ ಒಳ್ಳೆಯದಾಗುತ್ತದೆ ಎನ್ನುವುದನ್ನು ಮಾನ್ಯ ಸಚಿವರ ಗಮನಕ್ಕೆ ತರಬಯಸುತ್ತೇನೆ.

**ಶ್ರೀ ಆರ್.ವಿ.ದೇಶಪಾಂಡೆ:-** ಮಾನ್ಯ ಸಭಾಪತಿಗಳೆ, ಸರ್ಕಾರಿ ಐಟಿಐ ಸಂಸ್ಥೆಗಳಲ್ಲಿ ಖಾಲಿ ಇರುವ 1520 JTO (Junior Training Officer) ಹುದ್ದೆಗಳನ್ನು ಸರ್ಕಾರ ಭರ್ತಿ ಮಾಡುತ್ತದೆ. ಈ ಬಗ್ಗೆ ಈಗಾಗಲೇ ಸರ್ಕಾರದಿಂದ ಕರ್ನಾಟಕ ಲೋಕಸೇವಾ ಆಯೋಗಕ್ಕೆ ನಾವು ಪ್ರಸ್ತಾವನೆಯನ್ನು ಕಳುಹಿಸಿ ಮನವಿ ಮಾಡಿಕೊಂಡಿದ್ದೇವೆ. ಯಾರು NCVT (National Council for Vocational Training) ನ್ನು ಆಗಸ್ಟ್ 2000 ರವರೆಗೆ ಪಡೆದುಕೊಂಡಿದ್ದಾರೆ ಮತ್ತು ಕನಿಷ್ಠ 7 ವರ್ಷಗಳಿಂದ ಯಾರು ಐಟಿಐ ಗಳನ್ನು ನಡೆಸಿಕೊಂಡು ಬಂದಿರುತ್ತಾರೆ, ಅವರಷ್ಟೆ ಅನುದಾನಕ್ಕೆ ಅರ್ಹತೆಯನ್ನು ಹೊಂದಿರುತ್ತಾರೆ.

(ಮುಂದು)

(397)12-12-2018(05-10)ಬಿಎಸ್‌ಡಿ-ಎಕೆ

ಶ್ರೀ ಆರ್.ವಿ. ದೇಶಪಾಂಡೆ (ಮುಂದು)

ಹಾಗಾಗಿ 1993ರ ಮುಂಚೆ I.T.I ಪ್ರಾರಂಭವಾಗಿರಬೇಕು. 2000ರ ಆಗಸ್ಟ್ ಒಳಗಾಗಿ NCVT affiliation ...... ಏಕೆಂದರೆ 2015ನೇ ಇಸವಿಯಲ್ಲಿ ದಿನಾಂಕ 21-08-2010ರ ಸಮಯದಲ್ಲಿ ಒಂದು ನಿರ್ಣಯ ಮಾಡಿ freeze ಮಾಡಿದ್ದಾರೆ. ಹಾಗಾಗಿ ಇದರ ಬಗ್ಗೆ ಪರಿಶೀಲನೆ ಮಾಡುತ್ತೇನೆ. ಈ ಸದನದಲ್ಲಿ ನಾನು ಇಷ್ಟು ಮಾತ್ರ ಹೇಳಲು ಸಾಧ್ಯ. ಏಕೆಂದರೆ ನಾನು ಈಗಾಗಲೇ ಹೇಳಿದಂತೆ affiliation ಮತ್ತು ಪ್ರಾರಂಭದಲ್ಲಿ ಬಹಳ clarity ಇದೆ. ಹಾಗಾಗಿ ಬೇರೆ ಕೆಲವು ಸಂಬಳ ಇತ್ಯಾದಿ ವಿಷಯಗಳ ಬಗ್ಗೆ ಮಾನ್ಯ ಶಾಸಕರು ಪ್ರಸ್ತಾಪ ಮಾಡಿದ್ದಾರೆ. ಅದರ ಬಗ್ಗೆ ಪರಿಶೀಲನೆ ಮಾಡಿ ಕ್ರಮ ತೆಗೆದುಕೊಳ್ಳುತ್ತೇನೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಪ್ರಶ್ನೆ ಸಂಖ್ಯೆ: 410
(ಉತ್ತರದ ಪ್ರತಿ ಲಗತ್ತಿಸಿದೆ)

**ಶ್ರೀ ಕೆ.ವಿ. ನಾರಾಯಣಸ್ವಾಮಿ**:- ಮಾನ್ಯ ಸಭಾಪತಿಯವರೇ, ನನ್ನ ಪ್ರಶ್ನೆ ಬಹಳ ಸರಳ ಮತ್ತು ನೇರವಾಗಿದೆ. ಮೊದಲನೆಯ ಪ್ರಶ್ನೆ ಬೆಂಗಳೂರು ಉತ್ತರ ತಾಲ್ಲೂಕಿನ ಅಂದರೆ ಈಗಿನ ಯಲಹಂಕ ತಾಲ್ಲೂಕಿನ ಬಗರ್‌ಹುಕುಂ ಭೂ ಮಂಜೂರಾತಿ ಸಮಿತಿಯಿಂದ ಕಾನೂನುಬಾಹಿರ ಮಂಜೂರಾತಿ ಆಗಿದೆಯೇ ಮತ್ತು ಇದು ಸರ್ಕಾರದ ಗಮನಕ್ಕೆ ಬಂದಿದೆಯೇ ಎಂದು ಕೇಳಿದ್ದೇನೆ. ಅದಕ್ಕೆ ' ಬಂದಿದ್ದೆ ' ಎಂದು ಉತ್ತರವನ್ನು ಹೇಳಿದ್ದಾರೆ. ಎರಡನೆಯ ಪ್ರಶ್ನೆಯಾಗಿ ಈ ಬಗ್ಗೆ ಸರ್ಕಾರ ತೆಗೆದುಕೊಂಡಿರುವ ಕ್ರಮ ಏನು ಎಂದು ಕೇಳಿದ್ದೇನೆ. ಇದಕ್ಕೆ ಮಾತ್ರ ಉತ್ತರವನ್ನು ಕೊಟ್ಟಿಲ್ಲ. ಈ ಉತ್ತರವನ್ನು ಮಾನ್ಯ ಸಚಿವರು ಕೊಡಬೇಕು. ಮೂರನೆಯ ಪ್ರಶ್ನೆಯಾಗಿ ಯಲಹಂಕ ತಾಲ್ಲೂಕಿನ ಹೆಸರಘಟ್ಟ ಹೋಬಳಿ, ಕಡತನಮಲೆ ಗ್ರಾಮದ ಸರ್ವೆ ನಂ. 59ರಲ್ಲಿ ಕಾನೂನು ಬಾಹಿರವಾಗಿ ಬಗರ್ ಹುಕುಂ ಭೂ ಮಂಜೂರಾತಿ ಮಾಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ಎಂದು ಕೇಳಿದ್ದೇನೆ. ಮೇಲಿನ ಉತ್ತರದಲ್ಲಿ ಬಂದಿದೆ ಎಂದು ಹೇಳಿದ್ದಾರೆ. ಆದರೆ ಉತ್ತರ ಕೊಡುವಾಗ status ನಂತೆ ಆ ಸರ್ವೆ ನಂಬರ್ ಬಗ್ಗೆ ಏನಾಗಿದೆ ಎಂದು ಒಂದು history ಯನ್ನು ಕೊಟ್ಟಿದ್ದಾರೆ. ಅಂದರೆ ಒಂದು ಟಿಪ್ಪಣಿಯನ್ನು ಕೊಟ್ಟಿದ್ದಾರೆ. ಇದು ಸರ್ಕಾರದ ಗಮನಕ್ಕೆ ಬಂದುಬಿಟ್ಟಿದೆ. ಸರ್ಕಾರವು ಕಾನೂನು ಬಾಹಿರವಾಗಿ ಮಂಜೂರಾತಿ ಆಗಿದೆ ಎಂದು ಒಪ್ಪಿಕೊಂಡಿದೆ. ಈ ಮಂಜೂರಾತಿಯನ್ನು ರದ್ದುಪಡಿಸಲು ಕ್ರಮ ತೆಗೆದುಕೊಂಡಿರುವ ಬಗ್ಗೆ ನಾಲ್ಕನೆಯ ಪ್ರಶ್ನೆಯನ್ನು ಕೇಳಿದ್ದು, ಅದರ ಬಗ್ಗೆ ಉತ್ತರ ಕೊಟ್ಟಿಲ್ಲ. ಆದ್ದರಿಂದ ದಯಮಾಡಿ ಈ ಉತ್ತರಗಳನ್ನು ಕೊಡಿಸಬೇಕೆಂದು ವಿನಂತಿಸುತ್ತೇನೆ.

**ಶ್ರೀ ಆರ್.ವಿ. ದೇಶಪಾಂಡೆ**:- ಮಾನ್ಯ ಸಭಾಪತಿಯವರೇ, ಸರ್ವೆ ನಂ. 59ಕ್ಕೆ ಸಂಬಂಧಪಟ್ಟಂತೆ ಕಡತನಮಲೆ ಗ್ರಾಮದಲ್ಲಿ 8 ಎಕರೆ 30 ಗುಂಟೆ ಜಮೀನು ಇದೆ. ಇದಕ್ಕೆ 6 ಜನ ಅರ್ಜಿ ಹಾಕಿದ್ದು, ಇದರಲ್ಲಿ ಶ್ರೀಮತಿ ಹನುಮಕ್ಕ ಕೋಂ ಲೇ. ಗಂಗಯ್ಯ, ಶ್ರೀ ಕೆ.ವಿ. ಅನಂತರಾಮಯ್ಯರವರು ಇದ್ದಾರೆ.

**ಶ್ರೀ ಕೆ.ವಿ. ನಾರಾಯಣಸ್ವಾಮಿ**:- ಮಾನ್ಯ ಸಭಾಪತಿಯವರೇ, ಉತ್ತರದಲ್ಲಿ ಹೇಳಿರುವುದು ಸತ್ಯ ಇದೆ, ಅದನ್ನೇ ತಾವು ಪುನ: ಹೇಳುತ್ತಿದ್ದೀರಿ. ಇದು ಏನಾಗಿದೆ ಎಂದು ಟಿಪ್ಪಣಿ ಕೊಡಿ. ಆದರೆ ನನ್ನ ಪ್ರಶ್ನೆಗೆ ಉತ್ತರ ಇಲ್ಲ.

**ಶ್ರೀ ಆರ್.ವಿ. ದೇಶಪಾಂಡೆ**:- ಬಗರ್ ಹುಕುಂ ಸಮಿತಿಯಲ್ಲಿ ಶ್ರೀಮತಿ ಹನುಮಕ್ಕ ಇವರಿಗೆ ಸರಿಯೋ ತಪ್ಪೋ ಜಮೀನನ್ನು ಮಂಜೂರು ಮಾಡಿದ್ದಾರೆ. ಇದರ ವಿರುದ್ಧ ಶ್ರೀ ಅನಂತರಾಮಯ್ಯನವರು Assistant Commissioner ಗೆ ಅಪೀಲು ಹೋದರು. Appeal allow

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಮಾಡಿ remand ಮಾಡಿದರು. ಅದರ ಮೇಲೆ ಶ್ರೀಮತಿ ಹನುಮಕ್ಕ ಇವರು Special D.C. Court ಗೆ ಹೋದರು. ಅವರು reject ಮಾಡಿದ ನಂತರ K.A.T ಗೆ ಹೋದರು. ಅಲ್ಲಿ reject ಆಗಿ she has gone to High Court. ಆದ್ದರಿಂದ ಹೈಕೋರ್ಟ್‌ನಲ್ಲಿ ಪೆಂಡಿಂಗ್ ಇರುವಾಗ, till that is disposed of, ನಮಗೆ ಏನೂ ಮಾಡುವುದಕ್ಕೆ ಆಗುವುದಿಲ್ಲ. But the only thing is ನಮ್ಮ ಲಾಯರ್‌ಗಳ ಮುಖಾಂತರ expedite hearing ಗೆ move ಮಾಡಲು ಹೇಳುತ್ತೇನೆ.

**ಶ್ರೀ ಕೆ.ವಿ. ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಯವರೇ, ಇವತ್ತಿನವರೆಗೂ ಹೈಕೋರ್ಟ್‌ನಲ್ಲಿ ಯಾವ stay order ಕೊಟ್ಟಿಲ್ಲ. ಕೋರ್ಟ್‌ಗೆ ಅರ್ಜಿದಾರರಾದ ಶ್ರೀ ಅನಂತರಾಮಯ್ಯನವರು ಹೋಗಿದ್ದಾರೆ. ಈ ಬಗ್ಗೆ ನಾನು ಹಿಂದೆ ಸಹ 2-3 ಪ್ರಶ್ನೆಗಳನ್ನು ಕೇಳಿದ್ದೇನೆ. ಎ.ಸಿ, ಡಿ.ಸಿ ಕೋರ್ಟ್‌ಗಳಲ್ಲಿ ಹಾಗೂ ಏ.ಓ.ಖಿ ಗಳಲ್ಲಿ ಸಾಬೀತಾಗಿದೆ. ಅರ್ಜಿ ಇಲ್ಲದೇ ಇರುವವರಿಗೆ ಭೂ ಮಂಜೂರಾತಿ ಮಾಡಿರುವುದು ತಪ್ಪು ಎಂದು ಮಂಜೂರಾತಿಯನ್ನು ರದ್ದು ಮಾಡಿದ್ದಾರೆ ಹಾಗೂ ಪುನರ್ ಪರಿಶೀಲನೆ ಮಾಡಲು ಹೇಳಿದ್ದಾರೆ. ಈ ಆದೇಶದ ವಿರುದ್ಧ ಮಾತ್ರ ಹೈಕೋರ್ಟ್‌ಗೆ ಹೋಗಿದ್ದು, ಹೈಕೋರ್ಟ್ ಇದನ್ನು Writ of Mandamus ಎಂದು ತೆಗೆದುಕೊಳ್ಳುವುದಕ್ಕೆ ಆಗುವುದಿಲ್ಲ.

**ಶ್ರೀ ಆರ್.ವಿ. ದೇಶಪಾಂಡೆ:-** ನಮ್ಮ information ಪ್ರಕಾರ ಪುನ: ಹೈಕೋರ್ಟ್‌ಗೆ ಹೋಗಿದ್ದಾರೆ. It is pending in the High Court. ಒಂದು ವೇಳೆ ಹೈಕೋರ್ಟ್‌ನಲ್ಲಿ ಸ್ಟೇ ಇಲ್ಲ ಎಂದರೆ expedite hearing ಗೆ move ಮಾಡಬೇಕಾಗುತ್ತದೆ. ಶ್ರೀ ಅನಂತರಾಮಯ್ಯನವರು ಪಾರ್ಟಿ ಇರುವುದರಿಂದ ಅವರೂ ಮಾಡಬಹುದು. ಒಂದು ವೇಳೆ ಸ್ಟೇ ಇದ್ದರೆ, till it is disposed of, ಏನು ಮಾಡುವುದಕ್ಕೆ ಆಗುತ್ತದೋ, ಅದನ್ನು ಮಾಡುತ್ತೇನೆ.

**ಶ್ರೀ ಕೆ.ವಿ. ನಾರಾಯಣಸ್ವಾಮಿ:-** ಒಪ್ಪಿಕೊಳ್ಳುತ್ತೇನೆ. ನನ್ನ ಮುಂದಿನ ಪೂರಕ ಉಪ ಪ್ರಶ್ನೆ ಏನೆಂದರೆ, ಆಕಸ್ಮಾತ್ ಹೈಕೋರ್ಟ್‌ನಲ್ಲಿ ಶ್ರೀಮತಿ ಹನುಮಕ್ಕನವರಿಗೆ ಮಂಜೂರಾತಿ ಮಾಡಿರುವುದು ತಪ್ಪು ಎಂದು ಪುನರ್ ಪರಿಶೀಲನೆಗೆ remand ಮಾಡಿದ ಪಕ್ಷದಲ್ಲಿ ಈಗ tribunal ಇಲ್ಲ, ಆಗ ಸರ್ಕಾರ ಏನು ಮಾಡುತ್ತದೆ?

**ಶ್ರೀ ಆರ್.ವಿ. ದೇಶಪಾಂಡೆ:-** ಈಗ ಬಗರ್ ಹುಕುಂ ಸಮಿತಿಗಳು ಆಗಬೇಕಾಗಿತ್ತು. ಕೆಲವು exhaust ಆಗಿವೆ. ಅವು ಕ್ರಮ ತೆಗೆದುಕೊಳ್ಳುತ್ತವೆ. ಆದಷ್ಟು ಎಲ್ಲಾ ಕಡೆ ಬಗರ್ ಹುಕುಂ ಸಮಿತಿಗಳು ಆಗುತ್ತವೆ.

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಕೆ.ವಿ. ನಾರಾಯಣಸ್ವಾಮಿ:–** ಬೆಂಗಳೂರು ಉತ್ತರ ತಾಲ್ಲೂಕಿಗೆ ಸಂಬಂಧಪಟ್ಟಿರುವುದರಿಂದ ನನ್ನ ಇನ್ನೊಂದು ಪ್ರಶ್ನೆ ಏನೆಂದರೆ, ಈಗ tribunal ಇಲ್ಲ. ಈ ಪ್ರದೇಶ ಬಿಬಿಎಂಪಿ ವ್ಯಾಪ್ತಿಯಿಂದ 18 ಕಿ.ಮೀ ಒಳಗೆ ಬರುತ್ತದೆ. ಇದು ಸುಮಾರು 14–15 ವರ್ಷಗಳ ಹಿಂದಿನ ಕೇಸ್ ಆಗಿದೆ. 2004–05ರಲ್ಲಿ ಗ್ರಾಂಟ್ ಆಗಿ ಕೋರ್ಟಿಗೆ ಹೋಗಿದ್ದಾರೆ. ಆಕಸ್ಮಾತ್ ಹೈಕೋರ್ಟ್‌ನಿಂದ tribunal ಗೆ ಬಂದರೆ ಅವರಿಗೆ ಅಲಾಟ್ ಮಾಡಲಾಗುತ್ತದೆಯೇ?

**ಶ್ರೀ ಆರ್.ವಿ. ದೇಶಪಾಂಡೆ:–** ಅದು tribunal ಅಲ್ಲ, ಕಮಿಟಿ ಇರುತ್ತದೆ. Now the jurisdiction of Bangalore Corporation has increased. ಅನೇಕ ಸಮಸ್ಯೆಗಳಾಗಿ ಅನೇಕ ಎಂಎಲ್‌ಎ ಗಳು ಬಗರ್ ಹುಕುಂ ಕೇಸ್‌ಗಳನ್ನು ಮಾಡಿಕೊಡಿ ಎಂದು ನನ್ನ ಹತ್ತಿರ ಬರುತ್ತಿರುತ್ತಾರೆ. ಆದರೆ 18 ಕಿ.ಮೀ ಒಳಗೆ ಬರುತ್ತಿದೆ. ಇದರ ಬಗ್ಗೆ ಸಹ ಕಾನೂನಿನಂತೆ ಪರಿಶೀಲನೆ ಮಾಡಿ ಕ್ರಮ ತೆಗೆದುಕೊಳ್ಳುತ್ತೇನೆ.

**ಶ್ರೀ ಕೆ.ವಿ. ನಾರಾಯಣಸ್ವಾಮಿ:–** ಆಗ ಸರ್ಕಾರವು ಏನು ಮಾಡುತ್ತದೆ?

**ಶ್ರೀ ಆರ್.ವಿ. ದೇಶಪಾಂಡೆ:–** ಅದನ್ನು ಈಗ ಹೇಳಲು ಸಾಧ್ಯವಿಲ್ಲ. ಬಗರ್ ಹುಕುಂ ಸಮಿತಿಯಲ್ಲಿ Assistant Commissioners, Officers, Members ಗಳೆಲ್ಲರೂ ಇರುತ್ತಾರೆ. ಅವರೆಲ್ಲರೂ ನಿರ್ಣಯ ಮಾಡಬೇಕು. ಅದನ್ನು ಕಾನೂನು ಚೌಕಟ್ಟಿನಲ್ಲಿ rules and regulations ನಂತೆ ಮಾಡಬೇಕಾಗುತ್ತದೆ.

**ಸಭಾಪತಿಯವರು:–** ಈಗ ಪ್ರಶ್ನೋತ್ತರ ಅವಧಿ ಮುಕ್ತಾಯವಾಗಿದೆ.

**ಆ) ಚುಕ್ಕೆ ಗುರ್ತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು**

**ಡಾ|| ಜಯಮಾಲಾ ರಾಮಚಂದ್ರ (ಸಭಾನಾಯಕರು):–** ಮಾನ್ಯ ಸಭಾಪತಿಯವರೇ, ದಿನಾಂಕ 12ನೇ ಡಿಸೆಂಬರ್ 2018ರ ಸಮೂಹ 3ರ ಲಿಖಿತ ಮೂಲಕ ಉತ್ತರಿಸುವ ಒಟ್ಟು 117 ಪ್ರಶ್ನೆಗಳ ಪೈಕಿ 73 ಪ್ರಶ್ನೆಗಳಿಗೆ ಉತ್ತರವನ್ನು ಸದನದಲ್ಲಿ ಮಂಡಿಸುತ್ತಿದ್ದೇನೆ.

ಸಭಾಪತಿಯವರು:– ಮಂಡಿಸಲಾಯಿತು.

(ಉತ್ತರಗಳನ್ನು ಮಂಡಿಸಬೇಕು)

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

## 4. ದಿನಾಂಕ 11-12-2018ರಂದು ಶೂನ್ಯವೇಳೆಯಲ್ಲಿ ಪ್ರಸ್ತಾಪಗೊಂಡ ವಿಷಯಕ್ಕೆ ಸಚಿವರಿಂದ ಹೇಳಿಕೆ.

**ಡಾ॥ ಜಯಮಾಲಾ ರಾಮಚಂದ್ರ (ಸಭಾನಾಯಕರು):-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರಾದ ಶ್ರೀ ಐವನ್ ಡಿ'ಸೋಜಾ ರವರು ಹಾಗೂ ಶ್ರೀ ಶ್ರೀನಿವಾಸ ಮಾನೆ ರವರು ದಿನಾಂಕ 11-12-2018ರಂದು ಶೂನ್ಯ ವೇಳೆಗೆ ಪ್ರಸ್ತಾಪಿಸಿದ ಸೂಚನೆಗಳಿಗೆ ಉತ್ತರಗಳನ್ನು ಸದನದಲ್ಲಿ ಮಂಡಿಸುತ್ತಿದ್ದೇನೆ.

(ಎರಡೂ ಉತ್ತರಗಳನ್ನು ಲಗತ್ತಿಸಲಾಗಿದೆ)

## 5. ಸಭಾಪತಿಯವರ ಅಪ್ಪಣೆ ಮೇರೆಗೆ ಪ್ರಸ್ತಾಪಿಸಲ್ಪಟ್ಟ ವಿಷಯಗಳು

### ಅ) ವಿಷಯ:- ಮಲಪ್ರಭ ನದಿ ಸಂರಕ್ಷಣೆ

**ಶ್ರೀ ಕವಟಗಿಮಠ ಮಹಾಂತೇಶ ಮಲ್ಲಿಕಾರ್ಜುನ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-** ಮಾನ್ಯ ಸಭಾಪತಿಯವರೇ,

" ದಿನಾಂಕ 12-12-2018ರಂದು ಉದಯವಾಣಿ ಕನ್ನಡ ದಿನಪತ್ರಿಕೆಯಲ್ಲಿ ಮಲಪ್ರಭಾ ನದಿ ಸಂರಕ್ಷಣೆ ಮರೆತ ಸರ್ಕಾರ, ಉಚ್ಚ ನ್ಯಾಯಾಲಯಕ್ಕೆ ಮಾಜಿ ಸಿ.ಎಂ. ಎಸ್.ಎಂ. ಕೃಷ್ಣ ನೀಡಿದ್ದ ಭರವಸೆ ಹುಸಿ, ನುಣುಚಿಕೊಳ್ಳಲು ಅಧಿಕಾರಿಗಳ ಪ್ರಯತ್ನ ಎಂಬ ಶೀರ್ಷಿಕೆಯಡಿ ಪ್ರಕಟವಾದಂತೆ ಮಲಪ್ರಭಾ ನದಿ ಸಂರಕ್ಷಣೆ ಮಾಡುವುದಾಗಿ 2003ರಲ್ಲಿ ಉಚ್ಚ ನ್ಯಾಯಾಲಯಕ್ಕೆ ಲಿಖಿತ ಭರವಸೆ ನೀಡಿದ್ದ ರಾಜ್ಯ ಸರ್ಕಾರ ಮಾತು ಉಳಿಸಿಕೊಳ್ಳದಿರುವುದು ಉತ್ತರ ಕರ್ನಾಟಕದ ಭಾಗದ ಜನರಲ್ಲಿ ತೀವ್ರ ಅಸಮಾಧಾನ ಹುಟ್ಟು ಹಾಕಿದೆ. ಇದು ಜೀವನದಿಗಳಲ್ಲಿ ಒಂದಾದ ಮಲಪ್ರಭೆಯ ಪಾಲಿತ ದುರಂತ ಎಂದೇ ಜನ ಹೇಳತೊಡಗಿದ್ದಾರೆ.

2003ರಲ್ಲಿ ಉಚ್ಚ ನ್ಯಾಯಾಲಯಕ್ಕೆ ಲಿಖಿತ ಭರವಸೆ ನೀಡಿದ್ದ ಕಾಂಗ್ರೆಸ್‌ನ ಮಾಜಿ ಮುಖ್ಯಮಂತ್ರಿಗಳು ನುಡಿದಂತೆ ನಡೆದಿಲ್ಲ. ಆದ್ದರಿಂದ ಉಚ್ಚ ನ್ಯಾಯಾಲಯಕ್ಕೆ ನೀಡಿದ ಭರವಸೆಯಂತೆ ಮಲಪ್ರಭಾ ನದಿ ಸಂರಕ್ಷಣೆಗೆ ತಕ್ಷಣ ಸೂಕ್ತ ಕ್ರಮ ವಹಿಸುವಂತೆ"

ಶೂನ್ಯ ವೇಳೆಯಲ್ಲಿ ಸರ್ಕಾರವನ್ನು ಒತ್ತಾಯಿಸುತ್ತೇನೆ.

**ಡಾ॥ ಜಯಮಾಲಾ ರಾಮಚಂದ್ರ (ಸಭಾನಾಯಕರು):-** ಮಾನ್ಯ ಸಭಾಪತಿಯವರೇ, ಮಾನ್ಯ ಜಲ ಸಂಪನ್ಮೂಲ ಸಚಿವರಿಂದ ಉತ್ತರವನ್ನು ಒದಗಿಸುತ್ತೇನೆ.

(ಮುಂದು)

**(398)12-12-2018(5-20)ಹೆಚ್‌ವಿ-ಎಂಡಿ**

(ಸಭಾಪತಿಯವರ ಉಪಸ್ಥಿತಿ)

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಆ)ವಿಷಯಃ ಸರ್ಕಾರಕ್ಕೆ ನೋಂದಣಿ ಇಲಾಖೆ ಅಧಿಕಾರಿಯಿಂದ 103 ಕೋಟಿ ರೂಪಾಯಿಗಳು ನಷ್ಟವಾಗಿರುವ ಬಗ್ಗೆ.**

– – –

**ಶ್ರೀ ಎನ್.ರವಿಕುಮಾರ್(ವಿಧಾನಸಭಾ ಕ್ಷೇತ್ರ):–** ಸನ್ಮಾನ್ಯ ಸಭಾಪತಿಯವರೇ, 2015–16ನೇ ಸಾಲಿನಲ್ಲಿ ವರ್ತೂರು ಹೋಬಳಿಯ ಅಮಾನೆ ಬೆಳ್ಳಂದೂರು ಗ್ರಾಮದ ಸರ್ವೆ ನಂಬರ್ 110/1, 110/2, 110/3ರಲ್ಲಿರುವ ಪ್ರೆಸ್ಟೀಜ್ ಟೆಕ್ ಪಾರ್ಕ್ 3ರಲ್ಲಿನ 9,63,032 ಚದರ ಅಡಿ ವಾಣಿಜ್ಯ ಸ್ಥಳಾವಕಾಶದ ಸ್ಥಿರಾಸ್ಥಿಗಳನ್ನು 135 ವಿವಿಧ ಗ್ರಾಹಕರುಗಳಿಗೆ ಮಾರಾಟ ಮಾಡುವಾಗ ಶಿವಾಜಿ ನಗರದ ಉಪ ನೋಂದಣಾಧಿಕಾರಿಯವರು ಮಾರ್ಗಸೂಚಿ ದರಕ್ಕಿಂತ ಕಡಿಮೆ ದರಕ್ಕೆ ನೋಂದಾವಣೆ ಮಾಡಿಸುವ ಮೂಲಕ ಸರಕಾರಕ್ಕೆ 17.25 ಕೋಟಿ ರೂಪಾಯಿಗಳ ನೋಂದಣಿ ಆದಾಯ ನಷ್ಟವಾಗಿರುತ್ತದೆ. ಇದಕ್ಕೆ ಶಿವಾಜಿನಗರದ ಉಪ ನೋಂದಣಾಧಿಕಾರಿಯವರ ಕರ್ತವ್ಯವದಲ್ಲಿನ ವಿಫಲತೆಯೇ ಕಾರಣ. ಮಾರ್ಗಸೂಚಿ ದರ ಕನಿಷ್ಠ 5900 ರೂಪಾಯಿಗಳಾಗಿದ್ದರೂ 3000 ರೂಪಾಯಿಗಳಂತೆ 9,63,032 ಚದರ ಅಡಿ ವಾಣಿಜ್ಯ ಸ್ಥಳಾವಕಾಶವನ್ನು ಶಿವಾಜಿ ನಗರದ ಉಪ ನೋಂದಣಿ ಅಧಿಕಾರಿಯವರ ಕಛೇರಿಯಲ್ಲಿ ನೋಂದಣಿ ಮಾಡಲು ಯಾರ ಒತ್ತಡವಿತ್ತು ಎಂಬುದು ರಾಜ್ಯದ ಜನತೆಯ ಗಮನಕ್ಕೆ ಬರಬೇಕಾದ ವಿಷಯವಾಗಿದೆ. ಕರ್ನಾಟಕ ಮುದ್ರಾಂಕ ಅಧಿನಿಯಮ 61(ಎ)ರಂತೆ ಯಾವುದೇ ವ್ಯಕ್ತಿಯು ಸರ್ಕಾರಕ್ಕೆ ವಂಚಿಸುವ ದೃಷ್ಟಿಯಿಂದ ವಾಸ್ತವಾಂಶಗಳನ್ನು ಮುಚ್ಚಿಟ್ಟು ಮಾರ್ಗಸೂಚಿ ದರಕ್ಕಿಂತ ಕಡಿಮೆ ದರಕ್ಕೆ ಆಸ್ತಿಯ ದರವನ್ನು ನಮೂದಿಸಿ ನೋಂದಣಿ ಮಾಡಿಸಿದ್ದಲ್ಲಿ ಕೊರತೆಯಿಂದ ಕೂಡಿದ ಮುದ್ರಾಂಕ ಶುಲ್ಕದ 5 ಪಟ್ಟು ದಂಡವನ್ನು ವಿಧಿಸಬಹುದಾಗಿದೆ ಎಂದು ಸ್ಪಷ್ಟವಾಗಿ ಕಾನೂನು ಇದ್ದರೂ 17.25 ಕೋಟಿಗಳ ಆದಾಯ ನಷ್ಟ ಎಂದರೆ ಉದ್ದೇಶ ಪೂರ್ವಕವಾಗಿ ಸರ್ಕಾರದ ಆದಾಯಕ್ಕೆ ನಷ್ಟವುಂಟು ಮಾಡಿರುವ ಅಂದಿನ ಶಿವಾಜಿ ನಗರದ ಉಪ ನೋಂದಣಾಧಿಕಾರಿ ಮತ್ತು ಮೆ॥ಪ್ರೆಸ್ಟೀಜ್ ಎಸ್ಟೇಟ್ಸ್ ಪ್ರಾಜೆಕ್ಟ್ಸ್ ಲಿಮಿಟೆಡ್‌ವರ ವಿರುದ್ಧ ಕ್ರಿಮಿನಲ್ ಮೊಕದ್ದಮೆ ದಾಖಲಿಸುವಂತೆ ಮತ್ತು ಕರ್ನಾಟಕ ಮುದ್ರಾಂಕ ನಿಯಮ 1957ರ ಪರಿಚ್ಛೇಧ 28(1) ಅಧಿನಿಯಮ ಪರಿಚ್ಛೇಧ 61(ಎ)ಯ ಅನ್ವಯ ನಷ್ಟದ 5 ಪಟ್ಟು ಅಂದರೆ ಸುಮಾರು 86.25 ಕೋಟಿ ರೂಪಾಯಿಗಳ ಮೊತ್ತವನ್ನು ದಂಡದ ರೂಪದಲ್ಲಿ ಒಟ್ಟು 103.5 ಕೋಟಿ ರೂಪಾಯಿಗಳನ್ನು ಸರ್ಕಾರಕ್ಕೆ ಜಮಾ ಮಾಡಬೇಕಾಗಿದ್ದು ಇದುವರೆವಿಗೂ ಸದರಿ ಮೊತ್ತವನ್ನು ಸಂಬಂಧಿತರಿಂದ ವಸೂಲಿ ಮಾಡಲು ಯಾವುದೇ ಕ್ರಮ ಕೈಗೊಳ್ಳದಿರುವುದು ಸಂಶಯಾಸ್ಪದವಾಗಿದೆ. ಜನಸಾಮಾನ್ಯರಿಗೆ ಮಾರ್ಗಸೂಚಿ ದರಕ್ಕೆ ಆಸ್ತಿಗಳನ್ನು ನೋಂದಣಿ ಮಾಡಲು ಹಲವಾರು ತಕರಾರುಗಳನ್ನು ಮಾಡುವ ಜಿಲ್ಲಾ ನೋಂದಣಾಧಿಕಾರಿಗಳು ಪ್ರೆಸ್ಟೀಜ್ ಟೆಕ್ ಪಾರ್ಕ್ 3ರಲ್ಲಿನ ವಾಣಿಜ್ಯ ಸ್ಥಳಗಳನ್ನು

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಮಾರ್ಗಸೂಚಿ ದರಕ್ಕಿಂತ ಕಡಿಮೆಗೆ ನೋಂದಣಿ ಮಾಡಿರುವ ಬಗ್ಗೆ ತನಿಖೆ ನಡೆಸುವಂತೆ ಮತ್ತು ಸರಕಾರಕ್ಕೆ ಆದ ನಷ್ಟವನ್ನು ಮೆ॥ಪ್ರೆಸ್ಟೀಜ್ ಎಸ್ಟೇಟ್ಸ್ ಪ್ರಾಜೆಕ್ಟ್ಸ್ ಲಿಮಿಟೆಡ್‌ರವರು ಅಥವಾ ಅಂದಿನ ಶಿವಾಜಿ ನಗರದ ಉಪ-ನೋಂದಣಾಧಿಕಾರಿಯವರು ಸರ್ಕಾರಕ್ಕೆ ತುಂಬುವವರೆಗೆ ಮೆ॥ಪ್ರೆಸ್ಟೀಜ್ ಎಸ್ಟೇಟ್ಸ್ ಪ್ರಾಜೆಕ್ಟ್ಸ್ ಲಿಮಿಟೆಡ್ ಕಂಪನಿಯು ಬೆಂಗಳೂರು ಮಹಾನಗರವು ಸೇರಿದಂತೆ ರಾಜ್ಯದ ಯಾವುದೇ ಪ್ರದೇಶದಲ್ಲಿ ನಿರ್ಮಿಸಿದ/ನಿರ್ಮಿಸಲಿರುವ/ಪ್ರಾರಂಭ ಹಂತದಲ್ಲಿರುವ ಮೆ॥ಪ್ರೆಸ್ಟೀಜ್ ಎಸ್ಟೇಟ್ಸ್ ಪ್ರಾಜೆಕ್ಟ್ಸ್ ಲಿಮಿಟೆಡ್ ಕಂಪನಿಯ ಯಾವುದೇ ಸ್ಥಿರಾಸ್ಥಿಗಳ ಮಾರಾಟ ಮತ್ತು ಖರೀದಿ ಪ್ರಕ್ರಿಯೆಯನ್ನು ನೋಂದಣಾಧಿಕಾರಿಯವರ ಕಛೇರಿಯಲ್ಲಿ ನೋಂದಣಿ ಮಾಡುವುದನ್ನು ನಿಷೇಧಿಸಿ ನಿರ್ಬಂಧಿಸಲು ಸರ್ಕಾರವು ಅಗತ್ಯ ಕ್ರಮ ಕೈಗೊಳ್ಳುವಂತೆ ಶೂನ್ಯವೇಳೆಯಲ್ಲಿ ಒತ್ತಾಯಿಸುತ್ತಿದ್ದೇನೆ.

**ಡಾಃಜಯಮಾಲ (ಸಭಾ ನಾಯಕರು):-** ಸನ್ಮಾನ್ಯ ಸಭಾಪತಿಯವರೇ, ಮಾನ್ಯ ಕಂದಾಯ ಸಚಿವರಿಂದ ಉತ್ತರವನ್ನು ಒದಗಿಸಲಾಗುತ್ತದೆ.

**ಇ)ವಿಷಯಃ ರಾಜ್ಯದ ಸರ್ಕಾರಿ ನೌಕರರಿಗೆ ನಿಶ್ಚಿತ ಪಿಂಚಣಿ ಯೋಜನೆ ಮರು ಜಾರಿ ತರುವ ಬಗ್ಗೆ.**

– – –

**ಶ್ರೀ ಘೋಟ್ನೆಕರ ಶ್ರೀಕಾಂತ ಲಕ್ಷ್ಮಣ(ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-** ಸನ್ಮಾನ್ಯ ಸಭಾಪತಿಯವರೇ, ಕರ್ನಾಟಕ ರಾಜ್ಯ ಸರ್ಕಾರಿ ಎನ್.ಪಿ.ಎಸ್. ನೌಕರರ ಸಂಘವು ದಿನಾಂಕಃ01.04.2016ರಿಂದ ಸರ್ಕಾರಿ ಸೇವೆಗೆ ಸೇರಿಸುವ ರಾಷ್ಟ್ರೀಯ ಪಿಂಚಣಿ ಯೋಜನೆಗೆ ಒಳಪಡುವ ನೌಕರರ ಸಂಧ್ಯಾಕಾಲದ ಬದುಕಿಗೆ ಭದ್ರತೆಯನ್ನು ತಂದುಕೊಡುವ ನಿಟ್ಟಿನಲ್ಲಿ ಹಾಗೂ ಈಗಾಗಲೇ ಮರಣ ಹೊಂದಿರುವ ಎನ್.ಪಿ.ಎಸ್. ನೌಕರರ ಅವಲಂಬಿತ ಕುಟುಂಬಗಳಿಗೆ ನ್ಯಾಯ ಒದಗಿಸುವ ಹಂಬಲದೊಂದಿಗೆ ಕಾರ್ಯನಿರ್ವಹಿಸುತ್ತಿದೆ.

ನೌಕರರ ಇಳಿವಯಸ್ಸಿನ ಸಾಮಾಜಿಕ ಹಾಗೂ ಆರ್ಥಿಕ ಭದ್ರತೆಗಾಗಿ ರೂಪಿಸಿರುವ ನಿಶ್ಚಿತ ಪಿಂಚಣಿಯನ್ನು ಕೇಂದ್ರ ಸರ್ಕಾರವು ದಿನಾಂಕಃ01.01.2004ರ ನಂತರ ಹಾಗೂ ನಮ್ಮ ರಾಜ್ಯ ಸರ್ಕಾರವು ದಿನಾಂಕಃ01.04.2006ರ ನಂತರ ಸರ್ಕಾರಿ ಸೇವೆಗೆ ನೇಮಕಗೊಳ್ಳುವ ನೌಕರರಿಗೆ ನಿಶ್ಚಿತ ಪಿಂಚಣಿ ಪದ್ಧತಿಯನ್ನು ರದ್ದು ಮಾಡಿತು. ರಾಷ್ಟ್ರೀಯ ಪಿಂಚಣಿ ಯೋಜನೆಯಡಿ ನೌಕರರಿಗೆ ಪಿಂಚಣಿ ನೀಡುವ ಉದ್ದೇಶಕ್ಕಾಗಿ ನೌಕರನ ವೇತನದಿಂದ ಶೇಕಡಾ 10ರಷ್ಟನ್ನು ಕಟಾವುಗೊಳಿಸುತ್ತಿದೆ ಹಾಗೂ ಸರ್ಕಾರವು

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಅದಕ್ಕೆ ಸಮಾನವಾದ ಮೊತ್ತವನ್ನು ವಂತಿಕೆ ರೂಪದಲ್ಲಿ ನೀಡುತ್ತದೆ. ಹೀಗೆ ಶೇಖರಣೆಗೊಳ್ಳುವ ಮೊತ್ತವನ್ನು ವಿವಿಧ ಖಾಸಗಿ ಹಣಕಾಸಿನ ಸಂಸ್ಥೆಗಳ ಮೂಲಕ ಷೇರು ಪೇಟೆಯಲ್ಲಿ ತೊಡಗಿಸಲಾಗುತ್ತದೆ. 30–35 ವರ್ಷಗಳ ನಂತರ ಅದರಿಂದ ಬಂದ ಲಾಭದಲ್ಲಿ ಈ ಹಣವನ್ನು ಉಪಯೋಗಿಸಿದ ಕಂಪನಿಗಳು ನೌಕರರಿಗೆ ಪಿಂಚಣಿಯನ್ನು ನೀಡುತ್ತವೆ. ಇದಕ್ಕಾಗಿ ಯಾವುದೇ ನಿರ್ದಿಷ್ಟ ಕಾನೂನುಗಳನ್ನು ರಚಿಸದೆ, ನೌಕರರ ಹಾಗೂ ಸರ್ಕಾರವು ತೊಡಗಿಸಿದ ಹಣಕ್ಕೆ ಯಾವುದೇ ಭದ್ರತೆ ನೀಡದೆ, ಈ ಹೊಸ ಪಿಂಚಣಿ ಯೋಜನೆಯನ್ನು ಘೋಷಿಸಲಾಗಿದೆ. ಸದರಿ ಕಾಯಿದೆಯನ್ವಯ ನೌಕರರ ವಂತಿಗೆ ಹಣಕ್ಕೆ ಯಾವುದೇ ಕನಿಷ್ಠ ಭದ್ರತೆಯನ್ನು ನೀಡಿರುವುದಿಲ್ಲ. ಇದು ನೌಕರರ ಸಂಧ್ಯಾಕಾಲದ ಜೀವನವನ್ನು ಅಭದ್ರತೆಗೆ ತಳ್ಳಲು ಕಾರಣವಾಗುತ್ತದೆ ಅಲ್ಲದೇ ನೂತನ ಪಿಂಚಣಿ ವ್ಯವಸ್ಥೆಯು ಸರ್ಕಾರ ಹಾಗೂ ಸರ್ಕಾರಿ ನೌಕರರ ನಡುವೆ ಇರುವ ಸಂಬಂಧವನ್ನು ದೂರ ಮಾಡಿದೆ. ಈ ವಿಷಯದಲ್ಲಿ ಸರ್ಕಾರ ಗಮನಹರಿಸಿ ಸಂಬಂಧಿಸಿದ ನೌಕರರಿಗೆ ನಿಶ್ಚಿತ ಪಿಂಚಣಿ ಯೋಜನೆ ಮರು ಜಾರಿಗೆ ತರಬೇಕೆಂಬ ವಿಷಯವನ್ನು ಶೂನ್ಯವೇಳೆಯಲ್ಲಿ ಮಾನ್ಯ ಮುಖ್ಯಮಂತ್ರಿಗಳ ಮುಖಾಂತರ ಸರ್ಕಾರಕ್ಕೆ ವಿನಂತಿಸುತ್ತೇನೆ.

**ಶ್ರೀ ಅರುಣ ಶಹಾಪುರ:–** ಸನ್ಮಾನ್ಯ ಸಭಾಪತಿಯವರೇ, ಎನ್.ಪಿ.ಎಸ್. ಪದ್ಧತಿಯನ್ನು ರದ್ದುಗೊಳಿಸಬೇಕೆಂದು ಆಗ್ರಹಿಸಿ ರಾಜ್ಯ ಎನ್.ಪಿ.ಎಸ್. ನೌಕರರ ಸಂಘದ ಸುಮಾರು 25 ಸಾವಿರ ಜನರು ಸುವರ್ಣಸೌಧದ ಬಳಿಯಿರುವ ಕೊಂಡಸಕೊಪ್ಪದಲ್ಲಿ ಬೃಹತ್ ಪ್ರತಿಭಟನೆ ಮಾಡುತ್ತಿದ್ದಾರೆ. ಮಾನ್ಯ ಮುಖ್ಯಮಂತ್ರಿಗಳು ಸ್ಥಳಕ್ಕೆ ಬರಬೇಕೆಂದು ಸ್ಥಳದಲ್ಲಿ ಗಲಾಟೆ ಮಾಡುತ್ತಿದ್ದಾರೆ. ನಿನ್ನೆ ನಮ್ಮ ಸದನದಲ್ಲಿ ಈ ವಿಚಾರ ಚರ್ಚೆಗೆ ಬಂದಿತ್ತು. ಆಗ 'ಮಾನ್ಯ ಮುಖ್ಯಮಂತ್ರಿಗಳು ಸದನಕ್ಕೆ ಬಂದು ಹೇಳಿಕೆ ಮಾಡುತ್ತಾರೆ' ಎಂದು ಸಚಿವರಾದ ಮಾನ್ಯ ಕೃಷ್ಣಬೈರೇಗೌಡರು ಹೇಳಿದ್ದರು. ಆದರೆ, ಸಂಜೆ ಸುಮಾರು ಆರೂವರೆ ಗಂಟೆಗಳಿಗೆ ಒಂದು ಆದೇಶವನ್ನು ಮಾಡಿದ್ದಾರೆ. ಇದು ಯಾವ ರೀತಿ ಸರಿ ಎನ್ನುವುದು ನಮ್ಮ ಪ್ರಶ್ನೆಯಾಗಿದೆ. ಈಗ ಮಾನ್ಯ ಮುಖ್ಯಮಂತ್ರಿಗಳು ಸದನಕ್ಕೆ ಬಂದು ಹೇಳಿಕೆ ಕೊಡಬೇಕೆನ್ನುವುದು ನಮ್ಮ ಒತ್ತಾಯವಾಗಿದೆ.

**ಡಾ:ಜಯಮಾಲ (ಸಭಾ ನಾಯಕರು):–** ಸನ್ಮಾನ್ಯ ಸಭಾಪತಿಯವರೇ, ಮಾನ್ಯ ಮುಖ್ಯಮಂತ್ರಿಗಳಿಂದ ಉತ್ತರವನ್ನು ತರಿಸಿಕೊಡಲಾಗುತ್ತದೆ. ನಿನ್ನೆ ನಾನು ಪ್ರತಿಭಟನೆ ನಡೆಯುತ್ತಿರುವ ಸ್ಥಳಕ್ಕೆ ಹೋಗಿದ್ದೆ. ಈ ವಿಚಾರದ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳ ಗಮನವನ್ನು ಸೆಳೆದಿದ್ದೇನೆ. ಅವರು ಅಲ್ಲಿಗೆ ಹೋಗುತ್ತೇನೆಂದು ಹೇಳಿದ್ದಾರೆ.

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಡಾ: **ವೈ.ಎ.ನಾರಾಯಣಸ್ವಾಮಿ(ಶಿಕ್ಷಕರ ಕ್ಷೇತ್ರ):–** ಸನ್ಮಾನ್ಯ ಸಭಾಪತಿಯವರೇ, ಎನ್.ಪಿ.ಎಸ್. ಬಗ್ಗೆ ಮಾನ್ಯ ಮುಖ್ಯಮಂತ್ರಿಗಳಿಂದ ಸದನದಲ್ಲಿ ಹೇಳಿಕೆ ಮಾಡಿಸುವುದಾಗಿ ನಿನ್ನೆ ಈ ಸದನದಲ್ಲಿ ಸಚಿವರಾದ ಮಾನ್ಯ ಕೃಷ್ಣಭೈರೇಗೌಡರು ಹೇಳಿದ್ದರು. ಈ ದಿನ ಮಾನ್ಯ ಮುಖ್ಯಮಂತ್ರಿಗಳು ಸದನಕ್ಕೆ ಬಂದು ಹೇಳಿಕೆ ಮಾಡಿದರೆ ಅವರುಗಳು ಪ್ರತಿಭಟನೆಯನ್ನು ನಿಲ್ಲಿಸುತ್ತಾರೆ. ಅವರುಗಳು ಪ್ರತಿಭಟನೆ ಪ್ರಾರಂಭ ಮಾಡಿ ಮೂರು ದಿನಗಳು ಕಳೆದು ಹೋಗಿವೆ.

ಸನ್ಮಾನ್ಯ ಸಭಾಪತಿಯವರೇ, ನಾನು ತಮ್ಮಲ್ಲಿ ವಿನಂತಿಸಿಕೊಳ್ಳುವುದೇನೆಂದರೆ, ದಯವಿಟ್ಟು ಮಾನ್ಯ ಮುಖ್ಯಮಂತ್ರಿಗಳನ್ನು 5 ನಿಮಿಷಗಳ ಕಾಲ ಈ ಸದನಕ್ಕೆ ಕರೆಯಿಸಿ, ಈ ವಿಚಾರವಾಗಿ ಹೇಳಿಕೆ ಮಾಡಿಸಿ. ಅಧಿವೇಶನ ಪ್ರಾರಂಭವಾಗಿ ಮೂರು ದಿನಗಳು ಕಳೆದರೂ ಮಾನ್ಯ ಮುಖ್ಯಮಂತ್ರಿಗಳು ಈ ಸದನಕ್ಕೆ ಬಂದೇ ಇಲ್ಲ.

**ಡಾ:ಜಯಮಾಲ :–** ಸನ್ಮಾನ್ಯ ಸಭಾಪತಿಯವರೇ, ಮಾನ್ಯ ಮುಖ್ಯಮಂತ್ರಿಗಳು ನಾಳೆ ಸದನಕ್ಕೆ ಬರುತ್ತಿದ್ದಾರೆ. ಆಗ ಖಂಡಿತವಾಗಿಯೂ ಈ ವಿಚಾರಕ್ಕೆ ಅವರಿಂದ ಉತ್ತರ ಕೊಡಿಸಲಾಗುತ್ತದೆ.

**ಶ್ರೀ ಪುಟ್ಟಣ್ಣ(ಶಿಕ್ಷಕರ ಕ್ಷೇತ್ರ):–** ಸನ್ಮಾನ್ಯ ಸಭಾಪತಿಯವರೇ, ನಿನ್ನೆ ಈ ಸದನದಲ್ಲಿ ಎನ್.ಪಿ.ಎಸ್. ಪದ್ಧತಿಯ ಬಗ್ಗೆ ಚರ್ಚೆ ನಡೆದಿತ್ತು. ಆಗ ಲಿಖಿತ ರೂಪದ ಉತ್ತರವನ್ನು ನೀಡಲಾಗಿತ್ತು. ಆಗ ನಾವೆಲ್ಲರೂ, 'ಪಕ್ಷದ ಚುನಾವಣಾ ಪ್ರಣಾಳಿಕೆಯಲ್ಲಿ ಇದರ ಬಗ್ಗೆ ಉಲ್ಲೇಖ ಮಾಡಲಾಗಿತ್ತು. ಮಾನ್ಯ ಮುಖ್ಯಮಂತ್ರಿಗಳು ಸದನಕ್ಕೆ ಬಂದರೆ ಅವರು ಒಪ್ಪಿಕೊಳ್ಳಬಹುದು. ಆದ್ದರಿಂದ ಮಾನ್ಯ ಮುಖ್ಯಮಂತ್ರಿಗಳಿಂದ ಹೇಳಿಕೆ ಮಾಡಿಸಿ ಮತ್ತು ಸದನಕ್ಕೆ ಕೊಟ್ಟಿರುವ ಲಿಖಿತ ರೂಪದ ಉತ್ತರವನ್ನು ಹಿಂದಕ್ಕೆ ಪಡೆದುಕೊಳ್ಳಿ' ಎಂದು ನಾವುಗಳು ಒತ್ತಾಯಿಸಿದಾಗ, ಮಾನ್ಯ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು, 'ಉತ್ತರವನ್ನು ಹಿಂಪಡೆಯುವುದಿಲ್ಲ, ಮಾನ್ಯ ಮುಖ್ಯಮಂತ್ರಿಗಳಿಂದ ಒಂದು ಹೇಳಿಕೆ ಮಾಡಿಸುತ್ತೇವೆ' ಎಂದು ಹೇಳಿದರು. ಇಷ್ಟೆಲ್ಲಾ ಆದಮೇಲೆ ಸಂಜೆ ಆರೂವರೆ ಗಂಟೆಗೆ ಈ ವಿಚಾರವಾಗಿ ಒಂದು ಸಮಿತಿ ರಚನೆ ಮಾಡಲಾಗುತ್ತದೆಂದು ಒಂದು ಆದೇಶವನ್ನು ಹೊರಡಿಸಿದ್ದಾರೆ. ಇದು ಎಷ್ಟರಮಟ್ಟಿಗೆ ಸರಿ ಎನ್ನುವುದು ನಮ್ಮ ಪ್ರಶ್ನೆಯಾಗಿದೆ. ಎನ್.ಪಿ.ಎಸ್. ಪದ್ಧತಿಗೆ ಒಳಪಟ್ಟಿರುವ ಸುಮಾರು 15 ಸಾವಿರ ಜನ ನೌಕರರು ಬಂದು ಇಲ್ಲಿ ಧರಣಿ ಮಾಡುತ್ತಿದ್ದಾರೆ. ಮಾನ್ಯ ಮುಖ್ಯಮಂತ್ರಿಗಳಿಂದ ಹೇಳಿಕೆ ಮಾಡಿಸುತ್ತೇವೆಂದು ಹೇಳಿ ಸರ್ಕಾರ ತಪ್ಪಿಸಿಕೊಂಡಿದೆ.

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಸಭಾಪತಿಯವರುः–** ಇಲ್ಲ, ಮಾನ್ಯ ಮುಖ್ಯಮಂತ್ರಿಗಳು ಹೇಳಿಕೆ ಮಾಡುತ್ತಾರೆ.

**ಶ್ರೀ ಪುಟ್ಟಣ್ಣः–** ಸನ್ಮಾನ್ಯ ಸಭಾಪತಿಯವರೇ, ಮಾನ್ಯ ಮುಖ್ಯಮಂತ್ರಿಗಳು ಯಾವಾಗ ಬಂದು ಹೇಳಿಕೆ ಮಾಡುತ್ತಾರೆ? ಹೇಳಿಕೆ ಮಾಡುವುದಾದರೆ, ಸಂಜೆ ಆರೂವರೆಗೆ ಏತಕ್ಕೋಸ್ಕರ ಸಮಿತಿ ರಚನೆ ಮಾಡಿ ಆದೇಶವನ್ನು ಹೊರಡಿಸಿದ್ದಾರೆ? ಸದನಕ್ಕೆ ಮಾನ್ಯ ಮುಖ್ಯಮಂತ್ರಿಗಳ ಹೆಸರಿನಲ್ಲಿ ನೀಡಿರುವ ಲಿಖಿತ ರೂಪದ ಉತ್ತರದಲ್ಲಿ "ನಮ್ಮ ಚುನಾವಣಾ ಪ್ರಣಾಳಿಕೆಯಲ್ಲಿ ಆ ವಿಚಾರದ ಉಲ್ಲೇಖವಿಲ್ಲ. ನಾವು ಎನ್.ಪಿ.ಎಸ್. ಪದ್ಧತಿಯನ್ನು ಬದಲಾವಣೆ ಮಾಡುವುದಿಲ್ಲ" ಎಂದು ಹೇಳಿದ್ದಾರೆ.

**ಶ್ರೀ ಅರುಣ ಶಹಾಪುರः–** ಸನ್ಮಾನ್ಯ ಸಭಾಪತಿಯವರೇ, ಈ ಸದನದಲ್ಲಿ ಪ್ರಸ್ತಾಪವಾಗಿರುವ ವಿಚಾರ ಇನ್ನೂ ಪೆಂಡಿಂಗ್‌ನಲ್ಲಿರಬೇಕಾದರೆ, ಸದನದ ಹೊರಗಡೆ ಒಂದು ಸಮಿತಿಯನ್ನು ರಚನೆ ಮಾಡಿ ಆದೇಶ ಹೊರಡಿಸಿರುವುದು, ಈ ಸದನದ ಗೌರವ ಮತ್ತು ಹಕ್ಕಿನ ಪ್ರಶ್ನೆಯಾಗಿದೆ. ಇದರಿಂದ ಹಕ್ಕುಚ್ಯುತಿಯಾಗಿದೆ.

**ಡಾःಜಯಮಾಲ :–** ಸನ್ಮಾನ್ಯ ಸಭಾಪತಿಯವರೇ, ಶೂನ್ಯವೇಳೆಯಲ್ಲಿ ಪ್ರಸ್ತಾಪವಾಗಿರುವ ವಿಚಾರದ ಮೇಲೆ ಚರ್ಚೆ ಮಾಡುವುದಕ್ಕೆ ಸಾಧ್ಯವಿಲ್ಲ. ಬೇಕಾದರೆ, ಅರ್ಧಗಂಟೆ ಕಾಲಾವಧಿ ನಿಯಮದಡಿಯಲ್ಲಿ ಈ ವಿಚಾರವನ್ನು ಚರ್ಚೆಗೆ ತೆಗೆದುಕೊಳ್ಳಬಹುದಾಗಿದೆ.

**ಶ್ರೀ ವೈ.ಎ.ನಾರಾಯಣಸ್ವಾಮಿः–** ಸನ್ಮಾನ್ಯ ಸಭಾಪತಿಯವರೆ, ನಿನ್ನೆ ದಿನ ಸುಮಾರು ಒಂದೂವರೆ ಗಂಟೆಗಳ ಕಾಲ ಚರ್ಚೆಯಾಗಿದೆ. ಇನ್ನೂ ಅರ್ಧಗಂಟೆ ಕಾಲಾವಧಿ ನಿಯಮದಡಿಯಲ್ಲಿ ಚರ್ಚೆ ಮಾಡುವುದೇನಿದೆ? ಈ ಸದನದ ಸದಸ್ಯರ ಭಾವನೆಗಳಿಗೆ ಗೌರವವಿಲ್ಲದಂತಾಗಿದೆ. ಈ ಸದನಕ್ಕೆ ಕೊಟ್ಟ ಮಾತಿನಿಂದ ತಪ್ಪಿಸಿಕೊಂಡಿದ್ದಾರೆ. ಹಕ್ಕುಚ್ಯುತಿಯಾಗಿದೆ. ದಯವಿಟ್ಟು ಒಂದು ಹತ್ತು ನಿಮಿಷಗಳ ಕಾಲ ಮಾನ್ಯ ಮುಖ್ಯಮಂತ್ರಿಗಳನ್ನು ಈ ಸದನಕ್ಕೆ ಕರೆಯಿಸಬೇಕೆನ್ನುವುದು ನಮ್ಮ ಒತ್ತಾಯವಾಗಿದೆ.

**ಶ್ರೀ ಅರುಣ ಶಹಾಪುರः–** ಸನ್ಮಾನ್ಯ ಸಭಾಪತಿಯವರೇ, ದಯವಿಟ್ಟು ತಾವು ನಮ್ಮ ರಕ್ಷಣೆಗೆ ಬರಬೇಕಾಗಿದೆ. ಈ ಸದನದ ಗೌರವವನ್ನು ಉಳಿಸಬೇಕಾಗಿದೆ.

**ಸಭಾಪತಿಯವರುः–** ನಿನ್ನೆ ಸದನದಲ್ಲಿ ಚರ್ಚೆಗೆ ಬಂದ ವಿಷಯ ಈ ದಿನ ಬರಬಾರದಾಗಿತ್ತು. ಆದರೂ ಸಹ ಅವಕಾಶವನ್ನು ನೀಡಲಾಗಿದೆ. ಮಾನ್ಯ ಮುಖ್ಯಮಂತ್ರಿಗಳು ಬಂದಾಗ ಈ ಬಗ್ಗೆ ಚರ್ಚೆ ಮಾಡೋಣ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ(ವಿರೋಧ ಪಕ್ಷದ ನಾಯಕರು)ः–** ಸನ್ಮಾನ್ಯ ಸಭಾಪತಿಯವರೇ, ನಿನ್ನೆ ಸದನದಲ್ಲಿ ಮಾನ್ಯ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು ಮಾನ್ಯ ಮುಖ್ಯಮಂತ್ರಿಗಳ ಪರವಾಗಿ ಸದನಕ್ಕೆ ಉತ್ತರವನ್ನು ಕೊಡುವಂತಹ ಸಂದರ್ಭದಲ್ಲಿ ಮಾನ್ಯ

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಮುಖ್ಯಮಂತ್ರಿಗಳಿಂದ ಹೇಳಿಕೆ ಮಾಡಿಸುತ್ತೇನೆಂದು ಹೇಳಿದ್ದಾರೆ. ಇಡೀ ಸದನ ಅದನ್ನು ಗೌರವದಿಂದ ಒಪ್ಪಿಕೊಂಡಿದೆ. ಈ ಮಧ್ಯೆ ಮಾನ್ಯ ಮುಖ್ಯಮಂತ್ರಿಗಳು ನಿನ್ನೆ ಸಂಜೆ ಒಂದು ಪತ್ರಿಕಾ ಪ್ರಕಟಣೆ ಮೂಲಕ ಈ ವಿಚಾರದಲ್ಲಿ ಒಂದು ಸಮಿತಿಯ ರಚನೆ ಮಾಡಲಾಗುತ್ತದೆಂದು ಹೇಳಿದ್ದಾರೆ. ಯಾವುದೇ ಸರ್ಕಾರವಿರಲಿ, ಯಾರೇ ಮುಖ್ಯಮಂತ್ರಿಗಳಾಗಿರಲಿ, ಸದನವನ್ನು ನಿರ್ಲಕ್ಷ್ಯ ಮಾಡುವುದು ಶೋಭೆ ತರುವ ವಿಷಯವಲ್ಲ. ತಮ್ಮ ಮೂಲಕ ನಾವು ಸರ್ಕಾರವನ್ನು ಒತ್ತಾಯಿಸುವುದೇನೆಂದರೆ, ಈ ದಿನ ಸಂಜ ಸದನ ಮುಗಿಯುವುದರೊಳಗೆ ಕೆಳಮನೆಯಲ್ಲಿರುವ ಮಾನ್ಯ ಮುಖ್ಯಮಂತ್ರಿಗಳು ಮೇಲ್ಮನೆಗೆ ಬಂದು ಒಂದು ಹೇಳಿಕೆಯನ್ನು ಕೊಡಬೇಕೆನ್ನುವುದು ನಮ್ಮ ಒತ್ತಾಯವಾಗಿದೆ.

**ಡಾಃಜಯಮಾಲ (ಸಭಾ ನಾಯಕರು):-** ಸನ್ಮಾನ್ಯ ಸಭಾಪತಿಯವರೇ, ಮಾನ್ಯ ಮುಖ್ಯಮಂತ್ರಿಗಳು ನಾಳೆ ಈ ಸದನಕ್ಕೆ ಬರುತ್ತಿದ್ದಾರೆ. ಆಗ ಖಂಡಿತವಾಗಿಯೂ ಈ ವಿಚಾರಕ್ಕೆ ಸಂಬಂಧಪಟ್ಟಂತೆ ಹೇಳಿಕೆಯನ್ನು ನೀಡುತ್ತಾರೆ.

(ಮುಂದುವರಿದಿದೆ)

(399)12-12-2018(5.30)ಪಿಕೆ-ಆರ್‌ಎನ್

ಈ)ವಿಷಯ: ಇ-ಆಡಳಿತ ಇಲಾಖೆಯ ತಂತ್ರಾಂಶ ಅಭಿವೃದ್ಧಿಯಲ್ಲಿ ಆಗಿರುವ ಲೋಪದಿಂದಾಗಿ ಎಸ್‌ಎಸ್‌ಎಲ್‌ಸಿ ಯಿಂದ ಸ್ನಾತಕೋತ್ತರ ಪದವಿವರೆಗಿನ 31 ಲಕ್ಷ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿ ವೇತನ ಸಿಗದೇ ಇರುವ ಬಗ್ಗೆ.

**ಶ್ರೀ ಅರುಣ ಶಹಾಪೂರ (ಶಿಕ್ಷಕರ ಕ್ಷೇತ್ರ):-**ಮಾನ್ಯ ಸಭಾಪತಿಯವರೇ, ಕೈಕೊಟ್ಟ ತಂತ್ರಾಂಶ : ಕೊನೆಗೆ ಹಳೆ ಪದ್ಧತಿಯ ಮೊರೆ ಹೋದ ಇಲಾಖೆ, ವಿದ್ಯಾರ್ಥಿ ವೇತನದಲ್ಲಿ "ಹಿಂದುಳಿದ ಇಲಾಖೆ" ಎಂಬ ವರದಿಯು ಇಂದಿನ ಪ್ರಜಾವಾಣಿ ದಿನ ಪತ್ರಿಕೆಯಲ್ಲಿ ವರದಿಯಾಗಿದೆ. ರಾಜ್ಯ ಸರ್ಕಾರದ ಇ-ಆಡಳಿತ ಇಲಾಖೆಯ ತಂತ್ರಾಂಶ ಅಭಿವೃದ್ಧಿಯಲ್ಲಿ ಮಾಡಿದ ಲೋಪದಿಂದಾಗಿ ಎಸ್.ಎಸ್.ಎಲ್.ಸಿ.ಯಿಂದ ಸ್ನಾತಕೋತ್ತರ ಪದವಿವರೆಗಿನ 31 ಲಕ್ಷ ವಿದ್ಯಾರ್ಥಿಗಳಿಗೆ ಇನ್ನೂ ವಿದ್ಯಾರ್ಥಿ ವೇತನ ಸಿಕ್ಕಿಲ್ಲ. ಇ-ಆಡಳಿತ ಇಲಾಖೆಯು ರಾಷ್ಟ್ರೀಯ ಮಾಹಿತಿ ಕೇಂದ್ರದ (ಎನ್ ಐ ಸಿ) ಘಟಕದ ಸಹಯೋಗದಲ್ಲಿ ಸಮಗ್ರ ಹಾಗೂ ಏಕೀಕೃತ ವಿದ್ಯಾರ್ಥಿ ವೇತನ ವಿತರಣೆ ತಂತ್ರಾಂಶ ಅಭಿವೃದ್ಧಿ ಪಡಿಸಿತ್ತು. ಅದನ್ನು ಮುಖ್ಯಮಂತ್ರಿಗಳು ಸೆಪ್ಟೆಂಬರ್‌ನಲ್ಲಿ ಲೋಕಾರ್ಪಣೆ ಮಾಡಿದ್ದರು. ಇನ್ನು ವ್ಯವಸ್ಥೆ ಸುಲಲಿತ ಎಂದು ಮುಖ್ಯಮಂತ್ರಿ ಹಾಗೂ ಸಚಿವರು ಬಣ್ಣಿಸಿದ್ದರು. ಆದರೆ ತಂತ್ರಾಂಶ ಇನ್ನೂ ಪೂರ್ಣ ಪ್ರಮಾಣದಲ್ಲಿ ಅಭಿವೃದ್ಧಿ ಪಡಿಸದೇ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿ ವೇತನ ನೀಡುವಲ್ಲಿ ವಿಳಂಬವಾಗುತ್ತಿದೆ. ಪ್ರಸ್ತುತ ವಿದ್ಯಾರ್ಥಿಗಳು ಹಳೆಯ

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಪದ್ಧತಿಯಂತೆಯೇ ಅರ್ಜಿ ಸಲ್ಲಿಸಿ, ಬಳಿಕ ಅದನ್ನು ಪೂರಕ ದಾಖಲೆಗಳೊಂದಿಗೆ ತಾಲ್ಲೂಕು ಕಚೇರಿಗೆ ಸಲ್ಲಿಸಬೇಕಿದೆ. ಇಲಾಖಾ ಅಧಿಕಾರಿಗಳು ಪರಿಶೀಲನೆ ನಡೆಸಿ ಮಂಜೂರಾತಿ ನೀಡುತ್ತಾರೆ. ವ್ಯವಸ್ಥೆಯಲ್ಲಿ ಏಕರೂಪತೆಯ ಕೊರತೆಯಿಂದ ಅರ್ಜಿಗಳ ಪರಿಶೀಲನೆ ಹಾಗೂ ಅನುಷ್ಠಾನ ವಿಲಂಬವಾಗುತ್ತಿದೆ ಎಂದು ವರದಿಯಾಗಿದೆ.

ರಾಜ್ಯ ಸರ್ಕಾರವು ಈ ವಿಳಂಬವನ್ನು ತಪ್ಪಿಸಲು ತಂತ್ರಾಂಶಗಳನ್ನು ಅಭಿವೃದ್ಧಿ ಪಡಿಸುವ ನಿಟ್ಟಿನಲ್ಲಿ ಬದ್ಧತೆ ತೋರಬೇಕು ಹಾಗೂ ಹಿಂದುಳಿದ ವಿದ್ಯಾರ್ಥಿಗಳ ಶೈಕ್ಷಣಿಕ ಜೀವನಕ್ಕೆ ಇದು ದಿಕ್ಕು ತಪ್ಪಿಸುವಂತಾಗದೇ ನೋಡಿಕೊಂಡು ಕೂಡಲೇ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿ ವೇತನವನ್ನು ತ್ವರಿತವಾಗಿ ತಲುಪುವಂತೆ ಕ್ರಮ ಕೈಗೊಳ್ಳಬೇಕೆಂದು ಶೂನ್ಯವೇಳೆಯಲ್ಲಿ ಸರ್ಕಾರವನ್ನು ಕೋರುತ್ತೇನೆ.

**ಡಾ:ಜಯಮಾಲ ರಾಮಚಂದ್ರ (ಸಭಾನಾಯಕರು):-** ಮಾನ್ಯ ಸಭಾಪತಿಯವರೇ, ಮಾನ್ಯ ಸಮಾಜ ಕಲ್ಯಾಣ ಸಚಿವರಿಂದ ಉತ್ತರ ತರಿಸಿಕೊಡುತ್ತೇನೆ.

ಉ) ವಿಷಯ: ಕೆ.ಪಿ.ಎಸ್.ಸಿ. ಮೂಲಕ ನಡೆಯುವ ಪರೀಕ್ಷೆ ಹಾಗೂ ರಾಷ್ಟ್ರೀಯ ಅರ್ಹತಾ ಪರೀಕ್ಷೆ (ಸೆಟ್) ಏಕಕಾಲಕ್ಕೆ ನಿಗದಿಯಾಗಿರುವುದರಿಂದ ಸಾವಿರಾರು ಪದವೀಧರ ವಿದ್ಯಾರ್ಥಿಗಳು ಗೊಂದಲಕ್ಕೆ ಸಿಲುಕಿರುವ ಬಗ್ಗೆ.

**ಶ್ರೀ ಎಸ್.ವ್ಹಿ.ಸಂಕನೂರ(ಪದವೀಧರ ಕ್ಷೇತ್ರ):-**ಮಾನ್ಯ ಸಭಾಪತಿಯವರೇ, ಕರ್ನಾಟಕ ಲೋಕಸೇವಾ ಆಯೋಗದ ವತಿಯಿಂದ ಜಿಲ್ಲಾ ಅಲ್ಪಸಂಖ್ಯಾತರ ಕಲ್ಯಾಣಾಧಿಕಾರಿ ಹುದ್ದೆಗಳಿಗೆ ದಿನಾಂಕ 16.12.2018 ರಂದು ಪರೀಕ್ಷೆಯನ್ನು ನಡೆಸುತ್ತಿದ್ದಾರೆ. ಅದೇ ದಿವಸ ರಾಷ್ಟ್ರೀಯ ಅರ್ಹತಾ ಪರೀಕ್ಷೆಯೂ (ಸೆಟ್) ಸಹ ನಡೆಯುತ್ತಿದೆ. ಸೆಟ್ ಪರೀಕ್ಷೆಯನ್ನು ದಿನಾಂಕ: 16.12.2018ರಂದು ನಡೆಸುವುದಾಗಿ ಬಹಳ ಹಿಂದೆಯೇ ಅಧಿಸೂಚನೆ ಹೊರಡಿಸಿದ್ದು ಇರುತ್ತದೆ. ಈ ವಿಷಯವಾಗಿ ಹಲವಾರು ವಿದ್ಯಾರ್ಥಿಗಳು ಕೆ.ಪಿ.ಎಸ್.ಸಿ. ಅಧಿಕಾರಿಗಳಿಗೆ ಮನವಿ ಮಾಡಿದರೂ ಕೂಡ ಮನವಿಗೆ ಸ್ಪಂದಿಸದೇ ದಿನಾಂಕ : 16.12.2018 ರಂದು ಪರೀಕ್ಷೆ ಪರೀಕ್ಷೆಯನ್ನು ನಡೆಸಿಯೇ ತೀರುವುದಾಗಿ ಹೇಳಿಕೆ ನೀಡಿರುವರು ಎಂದು ವರದಿಯಾಗಿದೆ. ಇದು ಪ್ರಜಾವಾಣಿ ಪತ್ರಿಕೆಯಲ್ಲಿ ವರದಿಯಾಗಿದೆ.

ಈ ಹಿನ್ನೆಲೆಯಲ್ಲಿ ರಾಜ್ಯದ ಸಹಸ್ರಾರು ಪದವೀಧರ ವಿದ್ಯಾರ್ಥಿಗಳು ಎರಡೂ ಪರೀಕ್ಷೆಗಳನ್ನು ಹೇಗೆ ಒಂದೇ ದಿನ ಬರೆಯುವುದು ಎಂಬ ಆತಂಕಕ್ಕೆ ಒಳಗಾಗಿದ್ದಾರೆ. ಈ ವಿಷಯದಲ್ಲಿ ಸರಕಾರ ಮಧ್ಯ ಪ್ರವೇಶಿಸಿ, ರಾಜ್ಯದ ಎಲ್ಲಾ ಪದವೀಧರರ ಹಿತವನ್ನು ಗಮನದಲ್ಲಿಟ್ಟುಕೊಂಡು ಕೆ.ಪಿ.ಎಸ್.ಸಿ ಯವರಿಗೆ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಸೂಕ್ತ ನಿರ್ದೇಶನ ನೀಡಿ ಪರೀಕ್ಷೆಯನ್ನು ಮುಂದೂಡುವಂತೆ ಕ್ರಮ ಕೈಗೊಳ್ಳಬೇಕೆಂದು ಈ ಮೂಲಕ ಒತ್ತಾಯಿಸುವೆನು.

**ಡಾ:ಜಯಮಾಲ ರಾಮಚಂದ್ರ (ಸಭಾನಾಯಕರು):–** ಮಾನ್ಯ ಸಭಾಪತಿಯವರೇ, ಸಂಬಂಧಪಟ್ಟ ಸಚಿವರಿಂದ ಉತ್ತರ ಕೊಡಿಸುತ್ತೇನೆ.

**ಶ್ರೀ ಅರುಣ ಶಹಾಪುರ:–** ಮಾನ್ಯ ಸಭಾಪತಿಯವರೇ, ನಾನು ಶೂನ್ಯವೇಳೆ ಅಡಿ ಎತ್ತಿದ ಪ್ರಶ್ನೆಗೆ ಸದನದಲ್ಲಿ ಉಪಸ್ಥಿತರರಿರುವ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ಸಚಿವರು ಉತ್ತರ ಕೊಡುತ್ತಾರೆಯೇ?

**ಡಾ: ಜಯಮಾಲ ರಾಮಚಂದ್ರ:–** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ನಾಳೆ ಉತ್ತರ ಹೇಳುತ್ತಾರೆ.

## 6. ವರದಿಗಳನ್ನೊಪ್ಪಿಸುವುದು

**ಶ್ರೀ ಆಯನೂರು ಮಂಜುನಾಥ್:–** ಮಾನ್ಯ ಸಭಾಪತಿಯವರೇ, ಕರ್ನಾಟಕ ವಿಧಾನಪರಿಷತ್ತಿನ ಹಕ್ಕು–ಬಾಧ್ಯತಾ ಸಮಿತಿಯ ಅಧ್ಯಕ್ಷನಾದ ನಾನು ಕರ್ನಾಟಕ ವಿಧಾನ ಪರಿಷತ್ತಿನ ಕಾರ್ಯವಿಧಾನ ಮತ್ತು ನಡವಳಿಕೆಯ ನಿಯಮ 215ರ ರೀತ್ಯ ಸಮಿತಿಯ 94ನೇ ವರದಿಯನ್ನು ಒಪ್ಪಿಸುತ್ತಿದ್ದೇನೆ.

**ಶ್ರೀ ಕೆ.ಅಬ್ದುಲ್ ಜಬ್ಬಾರ್:–** ಮಾನ್ಯ ಸಭಾಪತಿಯವರೇ, ವಿಧಾನ ಮಂಡಲದ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಮಿತಿಯ ಸದಸ್ಯನಾದ ನಾನು ಕರ್ನಾಟಕ ವಿಧಾನ ಪರಿಷತ್ತಿನ ಕಾರ್ಯವಿಧಾನ ಮತ್ತು ನಡವಳಿಕೆಯ ನಿಯಮ 215ರ ರೀತ್ಯ 2018–2019ನೇ ಸಾಲಿನ ವರದಿಯನ್ನು ಸದನದಲ್ಲಿ ಮಂಡಿಸುತ್ತಿದ್ದೇನೆ.

**ಸಭಾಪತಿಯವರು:–** ವರದಿಗಳನ್ನು ಒಪ್ಪಿಸಲಾಯಿತು.

**ಸಭಾಪತಿಯವರು:–** ಶ್ರೀ ಎಂ.ಪಿ.ಸುನೀಲ್ ಸುಬ್ರಮಣಿಯವರ ಗಮನ ಸೆಳೆಯುವ ಸೂಚನೆಗೆ ಮಾನ್ಯ ಮಂತ್ರಿಗಳು ಉತ್ತರ ಕೊಡಬೇಕಾಗಿದೆ. ಅವರು ಸದನಕ್ಕೆ ಬಂದಮೇಲೆ ತೆಗೆದುಕೊಳ್ಳುತ್ತೇನೆ.

ಇನ್ನೂ ಶ್ರೀ ಎಸ್.ಎಲ್.ಧರ್ಮೇಗೌಡರ ಗಮನ ಸೆಳೆಯುವ ಸೂಚನೆಗೆ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಎರಡು ದಿವಸಗಳ ಸಮಯವನ್ನು ಕೇಳಿದ್ದಾರೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

## 7. ನಿಯಮ 330ರ ಮೇರೆಗೆ ಸಾರ್ವಜನಿಕ ಮಹತ್ವವುಳ್ಳ ಜರೂರು ವಿಷಯದ ಮೇಲಿನ ಚರ್ಚೆ

**ವಿಷಯ: ಸರ್ಕಾರವು ಅನುದಾನಿತ ಶಿಕ್ಷಣ ಸಂಸ್ಥೆಗಳ ಕಾಲ್ಪನಿಕ ವೇತನ ಬಡ್ತಿ ಸಮಸ್ಯೆಯನ್ನು ಪರಿಹರಿಸುವ ಬಗ್ಗೆ.**

**ಶ್ರೀ ಪುಟ್ಟಣ್ಣ (ಶಿಕ್ಷಕರ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಅನುದಾನಿತ ಶಿಕ್ಷಣ ಸಂಸ್ಥೆಗಳ ಕಾಲ್ಪನಿಕ ವೇತನ ಬಡ್ತಿಗೆ ಸಂಬಂಧಪಟ್ಟಂತೆ ಸದನದಲ್ಲಿ ಬಹಳಷ್ಟು ಸಲ ಚರ್ಚೆಯಾಗಿದೆ. ಮಾನ್ಯ ದೇಶಪಾಂಡೆಯವರು ಉನ್ನತ ಶಿಕ್ಷಣ ಸಚಿವರಾಗಿದ್ದಂತಹ ಸಂದರ್ಭದಲ್ಲಿ, ಕಾಲ್ಪನಿಕ ವೇತನ ಬಡ್ತಿ ನೀಡಬೇಕೆಂದು ಸುಪ್ರೀಂ ಕೋರ್ಟ್‌ನಿಂದ ತೀರ್ಮಾನವಾಗಿತ್ತು. ಆಗ ಮಾನ್ಯ ಸಚಿವರು, ಮಾನ್ಯ ವಿರೋಧ ಪಕ್ಷದ ನಾಯಕರು ನಮ್ಮ ಜೊತೆ ಚರ್ಚೆ ಮಾಡಿ ಸುಮಾರು ರೂ. 300 ಕೋಟಿ ಆದರೂ ನಾವು ಕೊಡುತ್ತೇವೆ, ದಯವಿಟ್ಟು ವಿಧೇಯಕವನ್ನು ಪಾಸ್ ಮಾಡಿಕೊಡಿ ಎಂದು ಹೇಳಿದಾಗ, ನಾವು ಒಪ್ಪಿಕೊಂಡು, ಅವರ ಮೇಲೆ ವಿಶ್ವಾಸ ಇಟ್ಟು ವಿಧೇಯಕವನ್ನು ಪಾಸ್ ಮಾಡಿದೆವು. ನಂತರದ ದಿನಗಳಲ್ಲಿ, ಈ ಸಮಸ್ಯೆಯ ಪರಿಹಾರಕ್ಕೆ ಸಾವಿರಾರು ಕೋಟಿ ರೂಪಾಯಿಗಳು ಆಗುತ್ತದೆ ಎಂದು ಸಂಬಂಧಪಟ್ಟ ಅಧಿಕಾರಿಗಳು ಹೇಳಿದಾಗ ನಾವು, ಈ ಮೊತ್ತ ಸುಮಾರು ರೂ. 357 ಕೋಟಿಯಷ್ಟು ಬರುತ್ತದೆ ಎಂದು ಲೆಕ್ಕ ಹಾಕಿ ಕೊಟ್ಟಿದ್ದೆವು. ಅಧಿಕಾರಿಗಳು, ಸಿಬ್ಬಂದಿಗಳು ನಿವೃತ್ತಿಯಾಗುವವರೆಗೆ ಎಷ್ಟು ಮೊತ್ತ ಆಗುತ್ತದೆಯೋ ಅದನ್ನು ಒಟ್ಟಿಗೆ ಲೆಕ್ಕ ಹಾಕಿ ಹೇಳಿದ್ದರು. ಮಾನ್ಯ ಸಭಾಪತಿಯವರೇ, ಎಲ್ಲರೂ ಒಂದೇ ಸಲ ಒಂದು ಅಥವಾ ಎರಡು ವರ್ಷದ ಅವಧಿಯಲ್ಲೇ ನಿವೃತ್ತಿ ಆಗುವುದಿಲ್ಲ. ಹಾಗಾಗಿ ಪ್ರತಿ ವರ್ಷ ನಿವೃತ್ತಿಯಾಗುವ ಶಿಕ್ಷಕರಿಗೆ ಅಥವಾ ನೌಕರರಿಗೆ ನೀಡಬೇಕಾದಂಥ ಮೊತ್ತ ಸುಮಾರು ರೂ. 357 ಕೋಟಿ ಮಾತ್ರ. ಸರ್ಕಾರ ಮಾನ್ಯ ಬಸವರಾಜ ಹೊರಟ್ಟಿಯವರ ಅಧ್ಯಕ್ಷತೆಯಲ್ಲಿ ಒಂದು ಸಮಿತಿಯನ್ನು ಮಾಡಿತ್ತು. ಆ ಸಮಿತಿಯಲ್ಲಿ ನಾನು, ಮಾನ್ಯ ಸಂಕನೂರರವರು, ಮಾನ್ಯ ಶ್ರೀಕಂಠೇಗೌಡರು, ಮಾನ್ಯ ಶರಣಪ್ಪ ಮಟ್ಟೂರರವರು, ಮಾನ್ಯ ಅಮರನಾಥ ಪಾಟೀಲ್‌ರವರು ಸದಸ್ಯರಾಗಿದ್ದರು. ನಮ್ಮ ಈ ಸಮಿತಿ ಒಂದು ವರದಿಯನ್ನು ತಯಾರು ಮಾಡಿ, ಪ್ರತಿವರ್ಷ ಇಂತಿಷ್ಟೇ ದುಡ್ಡು ಬರುತ್ತದೆ ಎಂದು ಕ್ಲಿಯರ್ ಕಟ್ ಆಗಿ ಹೇಳಿ, ಅದನ್ನು ನೀವು ಕೊಡಬಹುದು ಎಂದು ಸರ್ಕಾರಕ್ಕೆ ತಿಳಿಸಿದ್ದೆವು. ಸರ್ಕಾರ ಕೂಡ ಈ ಸದನದಲ್ಲಿ, ನಾವು ಕೊಡುತ್ತೇವೆ ಎಂದು ಒಪ್ಪಿಕೊಂಡಿತ್ತು. ನಂತರ, ಸುಮಾರು ರೂ. 357 ಕೋಟಿ ಮೊತ್ತ ಬರುತ್ತದೆ ಎಂದು ಏನು ಹೇಳಿದ್ದೆವೋ ಆ ಮೊತ್ತ ಇನ್ನಷ್ಟು ಜಾಸ್ತಿಯಾಗುತ್ತದೆ ಎಂದು ಮತ್ತೆ ಮಾನ್ಯ ಸಚಿವರು ಪುನರ್ಪರಿಶೀಲನಾ ಸಮಿತಿಯನ್ನು ಮಾಡಿದರು. ಅದರಲ್ಲೂ ಕೂಡ, ಸುಮಾರು ರೂ. 357 ಕೋಟಿಯಷ್ಟು ಮೊತ್ತ ಬರುತ್ತದೆ, ಅದಕ್ಕಿಂತ ಜಾಸ್ತಿ ಬರುವುದಿಲ್ಲ ಎಂದು ವರದಿ ಕೊಟ್ಟೆವು.

(ಮುಂದು . )

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

(400)12-12-2018 (5.40) ಡಿಎಸ್-ಆರ್‌ಎನ್

**ಶ್ರೀ ಪುಟ್ಟಣ್ಣ(ಮುಂದು):-**

ಈಗ ಮಾನ್ಯ ಮುಖ್ಯಮಂತ್ರಿಗಳು ಕೂಡ ಚುನಾವಣೆಗೆ ಮೊದಲು ಈ ಕಾಲ್ಪನಿಕ ವೇತನವನ್ನು ಮಾಡಿಕೊಡುತ್ತೇವೆನ್ನುವ ಮಾತನ್ನು ಹೇಳಿದ್ದರು. ನಂತರ ಸರ್ಕಾರ ರಚನೆಯಾದ ಮೇಲೆ ಆಯವ್ಯಯ ಮಂಡನೆ ಮಾಡುವಂತಹ ಸಂದರ್ಭದಲ್ಲಿ ಇದನ್ನು ಪ್ರಕಟ ಮಾಡಬೇಕೆಂದು ಹೇಳಿದಾಗ, ಅವರು ಡಿಸೆಂಬರ್ ನಂತರ ನೋಡೋಣವೆಂದು ಹೇಳಿರುವುದು ನಮ್ಮೆಲ್ಲ ಶಾಸಕರಿಗೆ ಗೊತ್ತಿದೆ. 2006ರ ನಂತರ New Pension Scheme ಬಂದಿದೆ. ಅದರ ಹಿಂದೆ ಇದ್ದಂಥವರಿಗೆ ಮಾತ್ರ ಈ ಕಾಲ್ಪನಿಕ ವೇತನದ ಸಮಸ್ಯೆ ಬಂದಿರುವುದು. 2006ರ ನಂತರ ನೇಮಕ ಆಗಿರುವವರಿಗೆ ಆ ಪ್ರಶ್ನೆಯೇ ಬರುವುದಿಲ್ಲ. ಈಗಾಗಲೇ ಸರ್ಕಾರ ಏನು ಒಪ್ಪಿಕೊಂಡಿತ್ತು, ಮಾನ್ಯ ದೇಶಪಾಂಡೆಯವರು ಉನ್ನತ ಶಿಕ್ಷಣ ಸಚಿವರಾಗಿದ್ದಂತಹ ಸಂದರ್ಭದಲ್ಲಿ 300 ಕೋಟಿಗಳಷ್ಟು ವೆಚ್ಚ ಬರುವುದಾದರೆ ಕೊಡುತ್ತೇವೆಂದು ಹೇಳಿದ್ದರು. ಈಗ 351 ಕೋಟಿ ರೂಪಾಯಿಗಳಷ್ಟು ಖರ್ಚು ಬರುವುದಾಗಿ ತಿಳಿಸಿ ನಮ್ಮ ಸಮಿತಿಯಿಂದ ವರದಿಯನ್ನು ಕೊಟ್ಟಿದ್ದೇವೆ. ದಯಮಾಡಿ ಸರ್ಕಾರ ಕೂಡಲೇ ಈ ಸಮಸ್ಯೆಯನ್ನು ಬಗೆಹರಿಸಬೇಕು. ಏಕೆಂದರೆ, ಬಹಳಷ್ಟು ಜನ ಸುಮಾರು ಎರಡು-ಮೂರು, ನಾಲ್ಕು-ಐದು ವರ್ಷಗಳಿಗೆಲ್ಲಾ ನಿವೃತ್ತಿಯಾಗಿಬಿಟ್ಟಿದ್ದಾರೆ. ಆ ಕಾರಣಕ್ಕೆ ಮತ್ತೆ ಮತ್ತೆ ಮುಂದೂಡುವುದು ಸರ್ಕಾರಕ್ಕೂ ಶೋಭೆ ತರುವುದಿಲ್ಲ. ಏಕೆಂದರೆ, ಕಾಯ್ದೆ ತಂದಂತಹ ಸಂದರ್ಭದಲ್ಲಿ ನಾವು ಮಾಡುತ್ತೇವೆಂದು ನಮ್ಮೆಲ್ಲರಿಗೂ ನಂಬಿಸಿ, ಮಾನ್ಯ ಸದಾನಂದಗೌಡರು ವಿರೋಧ ಪಕ್ಷದ ನಾಯಕರಾಗಿದ್ದಂತಹ ಸಂದರ್ಭದಲ್ಲಿ ಮಾನ್ಯ ಸಚಿವರು ಸಭೆ ಮಾಡಿ ನಮಗೆಲ್ಲಾ ಒಪ್ಪಿಸಿ, ಈಗ ಮತ್ತೆ ಮತ್ತೆ ಮುಂದಕ್ಕೆ ಹಾಕುವುದು ಸರಿಯಾದ ಕ್ರಮ ಆಗುವುದಿಲ್ಲ. ಆದ್ದರಿಂದ ಈ ಕೂಡಲೇ ಸರ್ಕಾರ ಶಿಕ್ಷಕರಿಗೆ ಮತ್ತು ನೌಕರರಿಗೆ ಕಾಲ್ಪನಿಕ ವೇತನದ ತೊಂದರೆ ಏನಾಗುತ್ತಿದೆ, ಇದನ್ನು ಪರಿಹರಿಸಿದಲ್ಲಿ ಸರ್ಕಾರಕ್ಕೆ 351.8 ಕೋಟಿ ರೂಪಾಯಿಗಳಷ್ಟು ಆರ್ಥಿಕ ಹೊರೆ ಮಾತ್ರ ಬರುತ್ತದೆ ಎಂದು ನಾವು ವರದಿಯಲ್ಲಿ ಕೊಟ್ಟಿದ್ದೇವೆ. ಅಧಿಕಾರಿಗಳು ಏನು ವರದಿ ಕೊಟ್ಟಿದ್ದಾರೆ ಅದನ್ನೇ ನಾವು ಕೊಟ್ಟಿರುವುದು. ಈ ವರದಿಯನ್ನು ಶಿಕ್ಷಣ ಇಲಾಖೆ ಮತ್ತು ಆರ್ಥಿಕ ಇಲಾಖೆಯವರನ್ನು ಕರೆದು ಸಭೆ ಮಾಡಿ ತಯಾರಿಸಿರುವಂಥದ್ದು. ಇದನ್ನು ಶಾಸಕರು ಮಾತ್ರ ಕುಳಿತುಕೊಂಡು ನಮ್ಮ ಮೂಲಗಳಿಂದ ತೆಗೆದುಕೊಂಡು ಕೊಟ್ಟಿರುವಂಥದ್ದಲ್ಲ. ಇದು ಸರ್ಕಾರದ ಅಧಿಕಾರಿಗಳು, ಶಿಕ್ಷಣ ಇಲಾಖೆಯವರು ಮತ್ತು ಆರ್ಥಿಕ ಇಲಾಖೆಯವರು ಕೊಟ್ಟಿರತಕ್ಕಂಥ ಮಾಹಿತಿಯನ್ನಾಧರಿಸಿ ಕೊಟ್ಟಿರುವಂತಹ ವರದಿ. ದಯವಿಟ್ಟು ಈ ವರದಿಯ ಶಿಫಾರಸ್ಸು ಏನಿದೆ, ಅದರ ಪ್ರಕಾರವಾಗಿ ಕೂಡಲೇ time bond, ಪದೋನ್ನತಿ, placement ಈ ಸೌಲಭ್ಯಗಳನ್ನು ಕೂಡ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಕೊಡಬೇಕು. ಖಾಸಗಿ ಅನುದಾನಿತ ಶಿಕ್ಷಣ ಸಂಸ್ಥೆಗಳಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಶಿಕ್ಷಕರು, ಸಿಬ್ಬಂದಿಗಳಿಗೆ ಕಾಲ್ಪನಿಕ ವೇತನವನ್ನು ನಿಗದಿ ಮಾಡಿ ವೇತನವನ್ನು ಪುನರ್ ನಿಗದಿಪಡಿಸಿ ವೇತನ ಸೌಲಭ್ಯ ಹಾಗೂ ಪಿಂಚಣಿ ಮತ್ತು gratuity ಸೌಲಭ್ಯವನ್ನು ನೀಡಬೇಕು. ಅನುದಾನ ರಹಿತ ಅವಧಿಯನ್ನು ಪರಿಗಣಿಸಿ ಪದೋನ್ನತಿ, time bond ಮತ್ತು placement ಸೌಲಭ್ಯಗಳನ್ನು ನೀಡಬೇಕೆನ್ನುವ ಒತ್ತಾಯವನ್ನು ಮಾಡುತ್ತಿದ್ದೇನೆ. ದಯವಿಟ್ಟು ಸರ್ಕಾರ ಈಗಾಗಲೇ ಏನು ಒಪ್ಪಿಕೊಂಡಿದೆ, ಅದರಂತೆ ಈ ಕಾಲ್ಪನಿಕ ವೇತನವನ್ನು ಕೊಡಬೇಕು. ಸರ್ಕಾರ ಕೂಡಲೇ ಈ ಸದನದಲ್ಲಿ 351.8 ಕೋಟಿ ರೂಪಾಯಿಗಳಷ್ಟು ಆಗುತ್ತದೆಂದು ನಾವೇನು ವರದಿಯನ್ನು ಕೊಟ್ಟಿದ್ದೇವೆ, ಅದನ್ನು ಒಪ್ಪಿಕೊಂಡು ಅದರಂತೆ ಈ ಕಾಲ್ಪನಿಕ ವೇತನದ ಸಮಸ್ಯೆಯನ್ನು ಬಗೆಹರಿಸಿ ಅವರಿಗೆ ಕೊಡುತ್ತೇವೆ ಎನ್ನುವಂತಹ ಮಾತನ್ನು ಕೊಡಬೇಕೆಂದು ನಾನು ತಮ್ಮ ಮೂಲಕ ಮಾನ್ಯ ಸಚಿವರಲ್ಲಿ ಒತ್ತಾಯ ಮಾಡುತ್ತಿದ್ದೇನೆ.

**ಶ್ರೀ ಜಿ.ಟಿ.ದೇವೇಗೌಡ(ಉನ್ನತ ಶಿಕ್ಷಣ ಸಚಿವರು):-** ಮಾನ್ಯ ಸಭಾಪತಿಯವರೇ,

(ಮಂಡಿಸಲಾದ ಸರ್ಕಾರದ ಉತ್ತರದ ಪ್ರತಿಯನ್ನು ಲಗತ್ತಿಸಲಾಗಿದೆ)

ಮಾನ್ಯ ಸಭಾಪತಿಯವರೇ, 2004-05ನೇ ಸಾಲಿನಲ್ಲಿ ಅನುದಾನಿತ ನೌಕರರ ಅನುದಾನದ ಪೂರ್ವ ಸೇವೆ, ಎಲ್ಲಾ ಸೇವೆಗಳನ್ನು ಪರಿಗಣಿಸಬೇಕೆಂದು ಸರ್ವೋಚ್ಚ ನ್ಯಾಯಾಲಯ ಆದೇಶವನ್ನು ಮಾಡಿತ್ತು. ಇದಾದ ಮೇಲೆ ದಿನಾಂಕ:12-02-2014 ರಲ್ಲಿ ದಿನಾಂಕ:01-06-1995ರ ಅನ್ವಯ ಅದನ್ನು ಜಾರಿಗೊಳಿಸಲಾಗಿದೆ. ಸದರಿ ಅಧಿನಿಯಮ ಖಾಸಗಿ ಅನುದಾನಿತ ಶಿಕ್ಷಣ ಸಂಸ್ಥೆಗಳ ಸಿಬ್ಬಂದಿಗಳು, ಅನುದಾನಿತ ಅವಧಿಯಲ್ಲಿ ಸಲ್ಲಿಸಿದ ಸೇವೆಯನ್ನು ವೇತನ, ರಜೆ, ನಿವೃತ್ತಿ ವೇತನ ಮತ್ತು ಇತರ ಯಾವುದೇ ಸೇವಾ ಸೌಲಭ್ಯಗಳಿಗಾಗಿ ಪರಿಗಣಿಸತಕ್ಕಂಥದ್ದಲ್ಲ ಎಂದು ತಿದ್ದುಪಡಿಯನ್ನು ಮಾಡಿಬಿಟ್ಟಿದ್ದಾರೆ. ಅದಾದ ಮೇಲೆ ಅವರು ಮತ್ತೆ ಅಪೀಲು ಹೋಗುತ್ತಾರೆ. ಆ ಸಂದರ್ಭದಲ್ಲಿ ಸರ್ಕಾರ ಕೂಡ ಅಪೀಲು ಹೋಗುತ್ತದೆ. '*The Karnataka Private Aided Educational Institutional Employees (Regulation of Pay, Pension and other Benefits) Act, 2014 is hereby struck down*' ಎಂದು ಸರ್ಕಾರದ ಆದೇಶವನ್ನು ಕೋರ್ಟ್ struck down ಮಾಡುತ್ತದೆ. ಅದಾದ ಮೇಲೆ ಸರ್ಕಾರ ಕಮಿಟಿ ಮಾಡುತ್ತದೆ. ಮಾನ್ಯ ಪುಟ್ಟಣ್ಣನವರು ಹೇಳಿದ ಹಾಗೆ ದಿನಾಂಕ:25-09-2014 ರಂದು ಸನ್ಮಾನ್ಯ ಬಸವರಾಜ ಹೊರಟ್ಟಿಯವರ ಅಧ್ಯಕ್ಷತೆಯಲ್ಲಿ ಪರಿಶೀಲನಾ ಸಮಿತಿಯನ್ನು ರಚಿಸಿದ್ದು, ಅದರಂತೆ ಸದರಿ ಸಮಿತಿ ಈ ಬಗ್ಗೆ ಪರಿಶೀಲಿಸಿ ಸರ್ಕಾರಕ್ಕೆ

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ವರದಿಯನ್ನು ಸಲ್ಲಿಸಿರುತ್ತದೆ. ಸದರಿ ವರದಿಯು ಸರ್ಕಾರದ ಪರಿಶೀಲನೆಯಲ್ಲಿದ್ದು, ಈ ಪ್ರಕರಣವು ರಾಜ್ಯದ ಕಾರ್ಯನೀತಿಗೆ ಸಂಬಂಧಿಸಿದ ವಿಷಯವಾಗಿದ್ದು, ಈ ವರದಿಯನ್ವಯ ಕ್ರಮ ಜರುಗಿಸುವ ಬಗ್ಗೆ ಸರ್ಕಾರದ ಹಂತದಲ್ಲಿಯೇ ಕ್ರಮ ಕೈಗೊಳ್ಳಬೇಕಾಗುತ್ತದೆಂದು ವರದಿಯನ್ನು ಕೊಟ್ಟಿದ್ದಾರೆ. ಸದರಿ ನ್ಯಾಯಾಲಯದ ಆದೇಶದ ಮೇಲೆ ಕರ್ನಾಟಕ ರಾಜ್ಯ ಸರ್ಕಾರವು ರಿಟ್ ಅಪೀಲು ಸಂಖ್ಯೆ, 2476/2015 ರಲ್ಲಿ ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ಮೇಲ್ಮನವಿಯನ್ನು ಸಲ್ಲಿಸಿದ್ದು, ಸದರಿ ಪ್ರಕರಣವು ಮಾನ್ಯ ನ್ಯಾಯಾಲಯದಲ್ಲಿ ವಿಚಾರಣೆಯ ಹಂತದಲ್ಲಿದೆ. ಇದು ಕೇವಲ ಉನ್ನತ ಶಿಕ್ಷಣದಲ್ಲಿ ಮಾತ್ರವಲ್ಲದೆ ಪ್ರೌಢ ಶಿಕ್ಷಣ, ಉನ್ನತ ಶಿಕ್ಷಣ, ತಾಂತ್ರಿಕ ಶಿಕ್ಷಣ ಇದೆಲ್ಲಕ್ಕೂ ಇದು ಅನ್ವಯಿಸುತ್ತದೆ. ನ್ಯಾಯಾಲಯದಲ್ಲಿ ಸರ್ಕಾರವೇ ಅಪೀಲು ಹಾಕಿದೆ. ಸರ್ಕಾರ ಮುಖ್ಯಮಂತ್ರಿಗಳ ಹಂತದಲ್ಲಿಯೇ ಇದರ ಬಗ್ಗೆ ತೀರ್ಮಾನ ಕೈಗೊಳ್ಳಬೇಕಾಗಿದೆ. ನಾವು ಆ ಪ್ರಯತ್ನವನ್ನು ಮಾಡುತ್ತೇವೆ.

**ಶ್ರೀ ಪುಟ್ಟಣ್ಣ (ಶಿಕ್ಷಕರ ಕ್ಷೇತ್ರ):-** ಮಾನ್ಯ ಸಭಾಪತಿಯವರೆ, ಅಧಿಕಾರಿಗಳು ಸುಮಾರು 5,081 ಕೋಟಿ ರೂ. ಆರ್ಥಿಕ ಹೊರೆಯಾಗಬಹುದೆಂದು ಅಂದಾಜಿಸಿ ಒಂದು ಪ್ರಸ್ತಾವನೆಯನ್ನು ಕೊಟ್ಟಿದ್ದರು. ಆದರೆ ಈ ವ್ಯವಸ್ಥೆಯನ್ನು ಜಾರಿ ಮಾಡಿದ ನಂತರ ಪ್ರತಿ ವರ್ಷ ಪ್ರಾಥಮಿಕ ಶಿಕ್ಷಣಕ್ಕೆ 72.2 ಕೋಟಿ ರೂಪಾಯಿಗಳು, ಪ್ರೌಢ ಶಿಕ್ಷಣಕ್ಕೆ 141.58 ಕೋಟಿ ರೂಪಾಯಿಗಳು, ಪದವಿ ಪೂರ್ವ ಶಿಕ್ಷಣಕ್ಕೆ 91 ಕೋಟಿ ರೂಪಾಯಿಗಳು ಹಾಗೂ ಕಾಲೇಜು ಶಿಕ್ಷಣಕ್ಕೆ 38 ಕೋಟಿ ರೂಪಾಯಿಗಳು, ಹೀಗೆ ಒಟ್ಟು 359 ಕೋಟಿ ರೂಪಾಯಿಗಳಷ್ಟು ಖರ್ಚು ಬರುತ್ತದೆಂದು ನಾವು ವರದಿ ಕೊಟ್ಟಿದ್ದೆವು. ಹಾಗಾದರೆ ಸದನ ಸಮಿತಿಯನ್ನು ಏಕೆ ರಚನೆ ಮಾಡಿದಿರಿ? ಕಾಯ್ದೆಯನ್ನು ತರುವಂಥ ಸಂದರ್ಭದಲ್ಲಿ 'ಬೀಸೋ ದೊಣ್ಣೆಯಿಂದ ತಪ್ಪಿಸಿಕೊಂಡರೆ ಸಾವಿರ ವರ್ಷ ಆಯಸ್ಸು' ಎನ್ನುವ ರೀತಿಯಲ್ಲಿ ಸರ್ಕಾರ ಕಾಯ್ದೆಯನ್ನು ಅಂಗೀಕಾರ ಮಾಡಿಕೊಳ್ಳುವುದಕ್ಕೋಸ್ಕರ ನಮ್ಮನ್ನೆಲ್ಲಾ ಒಪ್ಪಿಸಿ ಕೊಡುತ್ತೇವೆಂದು ಏಕೆ ಮಾಡಿದರು? ಸರ್ಕಾರ ಏನು commitment ಮಾಡಿಕೊಂಡಿದೆ, ಆ ಕಾರಣಕ್ಕೆ ಖರ್ಚು ಬರುವಂಥಾದ್ದು ಕೇವಲ 350 ಕೋಟಿ ರೂಪಾಯಿಗಳಿಗಿಂತಲೂ ಕಡಿಮೆಯೇ ಇರುತ್ತದೆ. ಮಾನ್ಯ ಮುಖ್ಯಮಂತ್ರಿಗಳ ಬಳಿ ಮಾತನಾಡಿ ಸಚಿವರು ಮಾಡುತ್ತೇವೆಂದು ಹೇಳುತ್ತಿದ್ದಾರೆ. ಮಾನ್ಯ ಸಚಿವರಿಗೆ ಹಾಗು ಮುಖ್ಯಮಂತ್ರಿಗಳಿಗೂ ಸಹ ಗೊತ್ತಿದೆ, ಹಿಂದೆ ಮುಖ್ಯಮಂತ್ರಿಗಳಾಗಿದ್ದಂಥ ಮಾನ್ಯ ಸಿದ್ದರಾಮಯ್ಯನವರಿಗೂ ಸಹ ಗೊತ್ತಿದೆ. ಇದು ಬಹಳಷ್ಟು ಸಂದರ್ಭಗಳಲ್ಲಿ ಚರ್ಚೆಯಾಗಿ ತೀರ್ಮಾನವಾಗಿರುವಂಥಾದ್ದು. ಹಾಗಾಗಿ ಮತ್ತೆ ಚರ್ಚೆ ಮಾಡುತ್ತೇವೆ, ನೋಡುತ್ತೇವೆ ಎನ್ನುವುದು ಬೇಡ. ಮಾನ್ಯ ಸಚಿವರು ಈ ಕೂಡಲೇ ಇದನ್ನು ಕಾರ್ಯಗತ ಮಾಡುತ್ತೇವೆನ್ನುವ ಮಾತನ್ನು ಹೇಳಬೇಕೆಂದು ನಾನು ಅವರಲ್ಲಿ ಮನವಿಯನ್ನು ಮಾಡುತ್ತೇನೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಶರಣಪ್ಪ ಮಟ್ಟೂರು (ಶಿಕ್ಷಕರ ಕ್ಷೇತ್ರ):-** ಮಾನ್ಯ ಸಭಾಪತಿಯವರೆ, ಮಾನ್ಯ ಪುಟ್ಟಣ್ಣನವರು ನಿಯಮ 330ರ ಅಡಿಯಲ್ಲಿ ಕಾಲ್ಪನಿಕ ವೇತನದ ಬಗ್ಗೆ ಒಳ್ಳೆಯ ವಿಚಾರವನ್ನು ಪ್ರಸ್ತಾಪ ಮಾಡಿದ್ದಾರೆ. ಅವರಿಗೆ ಅಭಿನಂದನೆಗಳನ್ನು ಸಲ್ಲಿಸುತ್ತೇನೆ. ಮಾನ್ಯ ಸಚಿವರು ಮೂರನೆ ಪುಟದ ಮೂರನೇ ಮತ್ತು ನಾಲ್ಕನೇ ಪ್ಯಾರಾದಲ್ಲಿ ಉಲ್ಲೇಖಿಸಿರುವಂಥ ನ್ಯಾಯಾಲಯದ ಆದೇಶದ ವಿಚಾರವನ್ನು ಹೇಳಿದರು. ವಾಸ್ತವ ಸಂಗತಿಗಳನ್ನು ಹೇಳಬೇಕೆಂದರೆ, ಇದರಲ್ಲಿ ಅನುದಾನಿತ ಶಾಲೆಯಲ್ಲಿ ಸೇವೆ ಸಲ್ಲಿಸತಕ್ಕಂಥ ಸಿಬ್ಬಂದಿಗಳು ನ್ಯಾಯಾಲಯದಲ್ಲಿ ಕಾಲ್ಪನಿಕ ವೇತನ ಕೇಳಿ ಅರ್ಜಿಯನ್ನು ಸಲ್ಲಿಸಿದಂತಹ ಸಂದರ್ಭದಲ್ಲಿ ಉಚ್ಚ ನ್ಯಾಯಾಲಯದಲ್ಲಿ ಹಾಗೂ ಸರ್ವೋಚ್ಚ ನ್ಯಾಯಾಲಯದಲ್ಲಿಯೂ ಕೂಡ ಅವರ ಪರವಾಗಿ ಆದೇಶಗಳನ್ನು ನೀಡಲಾಗಿತ್ತು. 'The employees of aided institutions are entitled all financial consequential benefits from the date of entering in to the service.' ಎನ್ನತಕ್ಕಂಥ ಆದೇಶವನ್ನು ನೀಡಿತ್ತು. ಆ ಆದೇಶದನ್ವಯ ಅಷ್ಟು ಹಣವನ್ನು from the date of entering in to the service ಎಂದು ಕಟಾಯಿಸಿದರೆ ಎಲ್ಲಾ ಆರ್ಥಿಕ ಸವಲತ್ತನ್ನು ಕೊಡಬೇಕಾದರೆ, it comes nearly more than Five thousand Eight-one Crore ಎನ್ನತಕ್ಕಂಥ ವರದಿಯನ್ನು ಸರ್ಕಾರದ ಕಡೆಯಿಂದ ಕೊಟ್ಟಿದ್ದರು. ನಾನು ಕೂಡ ಈ ಸಮಿತಿಯ ಒಬ್ಬ ಸದಸ್ಯನಾಗಿ ಸಮಗ್ರವಾಗಿ 1967ರಿಂದ ಇಲ್ಲಿಯವರೆಗೆ ಒಟ್ಟು ಮೂರು ಹಂತದ ಕಾಲ್ಪನಿಕ ವೇತನವನ್ನು ಕೊಡಲಾಗಿತ್ತು. 1967 ರಿಂದ ದಿನಾಂಕ:01/06/1987, ದಿನಾಂಕ:01/06/1987 ರಿಂದ ದಿನಾಂಕ:04.08.1990 ಹಾಗೂ ದಿನಾಂಕ:04/08/1990 ರಿಂದ ದಿನಾಂಕ: 31/03/1995ರ ವರೆಗೆ ಕಾಲ್ಪನಿಕ ವೇತನ ಅಂದರೆ ಆರ್ಥಿಕ ಸವಲತ್ತನ್ನು ಅವರಿಗೆ ಕೊಡಲಾಗಿತ್ತು.

(ಮುಂದುವರೆದಿದೆ..)

(401)12-12-2018(5-50)ಬಿಕೆಪಿ-ವಿಕೆ

**ಶ್ರೀ ಶರಣಪ್ಪ ಮಟ್ಟೂರ(ಮುಂದು. . )**

ತದನಂತರ 1995 ರಿಂದೀಚೆಗೆ ಬಂದಿರುವಂತಹ ನೌಕರರು ಯಾರಿದ್ದಾರೆ, ಅವರುಗಳು ನಮಗೆ ಅನುದಾನರಹಿತ ಅವಧಿಯಲ್ಲಿ ಬಂದಿರತಕ್ಕಂತಹ financial benefits ನಮಗೆ ಕೊಡಬೇಕು. ಮತ್ತೆ, refix ಮಾಡಬಾರದು ಮತ್ತು ಅದನ್ನು recovery ಮಾಡಬಾರದು ಎಂದು ಪ್ರಶ್ನೆ ಮಾಡಿದಾಗ ಅದರ ಬಗ್ಗೆ ಸುಪ್ರೀಂ ಕೋರ್ಟ್‌ನಲ್ಲಿ ಈ ಆದೇಶವನ್ನು ಪಡೆದು they have succeeded in the Judicial Forum. ಆದಾದ ನಂತರ ಸರ್ಕಾರದಲ್ಲಿ ಈ ವಿಷಯ ಬಂದಾಗ ಅದನ್ನು

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"**

ಕೊಡಲಿಕ್ಕೆ ಆಗುವುದಿಲ್ಲವೆನ್ನುವಂತಹ ಒಂದು ordinance ಅನ್ನು ಸರ್ಕಾರ ಹೊರಡಿಸಿದಾಗ they have challenged the validity of the order issued by the Government of Karnataka and also they have succeeded to get the struck down order from the Hon'ble High Court of Karnataka. ಈ ವಿಚಾರವಾಗಿ ಮಾನ್ಯ ಸಚಿವರು ಸಹ ಓದಿ ಹೇಳಿದ್ದಾರೆ. WP No. 2476/2015 and 2467/2015 is still pending ಎನ್ನತಕ್ಕಂತಹ ಮಾತನ್ನು ಹೇಳಿದ್ದಾರೆ. ಮಾನ್ಯ ಸದಸ್ಯರಾದ ಶ್ರೀ ಪುಟ್ಟಣ್ಣನವರು ಸಹ ಈ ವಿಚಾರವಾಗಿ ಸಾಕಷ್ಟು ಹೇಳಿದ್ದಾರೆ. ಆದರೆ, ಇದಕ್ಕಿಂತ ಮುಂಚೆ ಸನ್ಮಾನ್ಯ ಶ್ರೀ ಸಿದ್ದರಾಮಯ್ಯನವರ ನೇತೃತ್ವದ ಸರ್ಕಾರ ಇದ್ದಂತಹ ಸಮಯದಲ್ಲಿ ಈ ವಿಷಯವನ್ನು ಅಂದು ಮಾನ್ಯ ಸದಸ್ಯರುಗಳಾದ ಶ್ರೀಯುತ ಅರುಣ್ ಶಹಾಪುರ ಮತ್ತು ಕ್ಯಾಪ್ಟನ್ ಗಣೇಶ್ ಕಾರ್ಣಿಕ್ ರವರು ಪ್ರಸ್ತಾಪ ಮಾಡಿದ್ದರು ಎಂದು ಕಾಣುತ್ತದೆ. ಆಗ 300 ಕೋಟಿ ರೂಪಾಯಿಗಳನ್ನು ಇದಕ್ಕೆ ಕೊಡುವುದಾಗಿ ಅಂದಿನ ಮುಖ್ಯಮಂತ್ರಿಗಳು ಇದೇ ಸದನದಲ್ಲಿ ಹೇಳಿದ್ದಾರೆ. ಇದು ದಾಖಲೆಯಲ್ಲಿದೆ. ಆದರೆ, 5081 ಕೋಟಿ ರೂಪಾಯಿಗಳು ಇದಕ್ಕೆ ತಗಲುತ್ತದೆ ಎಂದು ಹೇಳಿ ಅಧಿಕಾರಿಗಳು ಕೊಟ್ಟಿರತಕ್ಕಂತಹ ವರದಿ ಬಗ್ಗೆ ತಾವು ಇಲ್ಲಿ ಸ್ವಲ್ಪ ಗಮನಹರಿಸಬೇಕಾಗಿದೆ. From the date of entering into the service ತೆಗೆದುಕೊಂಡಾಗ, ಸರ್ವಿಸ್‌ಗೆ enter ಆದಾಗಿನಿಂದ ತೆಗೆದುಕೊಂಡರೆ 5081 ಕೋಟಿ ರೂಪಾಯಿಗಳನ್ನು ಕೊಡಬೇಕಾಗುತ್ತದೆ. ಆಹಾಗ, it is a magnani mous approach on the part of the employees working in the Aided Institutions to have come with the open mind stating that; 'we are ready to accept the leave and pension from the date of approval.' ಎನ್ನುವ ಮಾತನ್ನು ಅವರು ತೆಗೆದುಕೊಂಡು ತಮ್ಮಲ್ಲಿ ಬಂದು, ನಮ್ಮ ಸಮಿತಿ ಸಭೆಯಲ್ಲಿಯೂ ಸಹ ಚರ್ಚೆ ಮಾಡಿರುವಂತಹದ್ದು ಇದೆ. ಆ ಸಂದರ್ಭದಲ್ಲಿ ಸನ್ಮಾನ್ಯ ಶ್ರೀ ಪುಟ್ಟಣ್ಣನವರು, ಶ್ರೀಮಾನ್ ಬಸವರಾಜ ಹೊರಟ್ಟಿಯವರು, ಶ್ರೀ ಅರುಣ್ ಶಹಾಪುರ್‌ರವರು, ಶ್ರೀ ಎಸ್.ವ್ಹಿ. ಸಂಕನೂರ್‌ರವರು ಈ ರೀತಿಯಲ್ಲಿ ಎಲ್ಲಾ ಸದಸ್ಯರು ಇದರ ವಿಚಾರವಾಗಿ ಚರ್ಚೆ ಮಾಡಿದಾಗ 359 ಕೋಟಿ, 84 ಲಕ್ಷ ರೂಪಾಯಿಗಳು ಬರುತ್ತದೆ. ಮೊದಲು ನಾವು ದಿನಾಂಕ: 15-09-2015ರಲ್ಲಿ 351.84 ಕೋಟಿ ರೂಪಾಯಿಗಳಿಗೆ ಒಂದು ವರದಿಯನ್ನು ಕೊಟ್ಟಿದ್ದೆವು, ತದನಂತರ ಆ ಕಮಿಟಿಯಲ್ಲಿ ಪುನಃ ಈ ವಿಚಾರವಾಗಿ ಪರಿಶೀಲನೆಗೆ ಹಾಕಿದಾಗ ಮಾನ್ಯ ಹಿರಿಯ ಸದಸ್ಯರಾದ ಶ್ರೀಮಾನ್ ಮರಿತಿಬ್ಬೇಗೌಡರವರು ತಮ್ಮ ಸಲಹೆಗಳನ್ನು ನೀಡಿದ್ದಾರೆ. ಅದರಲ್ಲಿ 359.84 ಕೋಟಿ ರೂಪಾಯಿಗಳು ಬರುತ್ತದೆ. ದಿನಾಂಕ:

24.01.2018 ರಲ್ಲಿ ನಾವೆಲ್ಲರೂ ಒಂದು ವರದಿಯನ್ನು ಸಲ್ಲಿಸಿದ್ದೆವು. ಇಲ್ಲಿ ಗಂಭೀರವಾಗಿ ವಿಚಾರ ಮಾಡಬೇಕಾಗಿದೆ. ಅಂದರೆ, ಈ ವಿಚಾರವಾಗಿ ಆ ನೌಕರರು ಏನು ಹೇಳಿದ್ದಾರೆಂದರೆ ನಮಗೆ ಯಾವುದೇ ರೀತಿಯ ಬಾಕಿ ಬೇಕಾಗಿಲ್ಲ. Leave and pension, fitmentಗೆ ಏನು ಬೇಕು, ನಮಗೆ paper benefits ಬೇಕಾಗಿದೆ. ನಮಗೆ ಪಿಂಚಣಿಗೆ ಅನುಕೂಲವಾಗುವ ರೀತಿಯಲ್ಲಿ ನಮಗೆ ಈ Leave and pension, fitment ಅನ್ನು ನಿಗದಿ ಮಾಡಿ, ಅದು ಸಾಕು ಎನ್ನುವಂತಹ ಮಾತನ್ನು ಅವರು ಹೇಳಿದ್ದಾರೆ. ಅವರದ್ದು ಕೂಡ legal and legitimate submission ಇದೆ ಎನ್ನುವುದು ಇದರಲ್ಲಿ ಎದ್ದು ಕಾಣುತ್ತದೆ. Our Committee has also personally looked into the matter in depth, right from 1976 to till date. ಈ ವಿಚಾರವಾಗಿ ಕೆಲವು ಅಂಶಗಳನ್ನು ಈಗಾಗಲೇ ಅವರು ಹೇಳಿದ್ದಾರೆ. ಹೀಗಾಗಿ, ಈ ಆದೇಶದಲ್ಲಿಯೂ ಕೂಡ Government may not succeed and still the matter is pending before the court ಎನ್ನತಕ್ಕಂತಹ ಮಾತನ್ನು ಹೇಳಿದ್ದಾರೆ. ಅದರೂ ಕೂಡ ಇದನ್ನು verify ಮಾಡಬೇಕಾಗಿದೆ. ದಿನಾಂಕ: 10–07–2015ರ ತೀರ್ಪಿಗೆ ತಡೆಯಾಜ್ಞೆಯನ್ನು ಪಡೆಯಲಾಗಿದೆ ಎನ್ನುವುದನ್ನು ನಾವು ಸಹ ತರಿಸಿ ನೋಡುತ್ತೇವೆ. ಈ ಬಗ್ಗೆ ಮಾನ್ಯ ಸಚಿವರು ಸಹ ಬಹಳ ವಿವರವನ್ನು ಕೊಟ್ಟಿದ್ದಾರೆ. ಅವರಿಗೆ ಈ ಸಂದರ್ಭದಲ್ಲಿ ಅಭಿನಂದನೆಯನ್ನು ಹೇಳಲಿಕ್ಕೆ ಬಯಸುತ್ತೇನೆ. ಇದಕ್ಕೆ 359.84 ಕೋಟಿ ರೂಪಾಯಿಗಳು ಆಗುತ್ತದೆ. ತಾವು ಕೂಡ ಬಹಳ ಹಿರಿಯರಿದ್ದೀರಿ. ಮಾನ್ಯ ಸಚಿವರು ಈ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳಿಗೆ ಮನವರಿಕೆ ಮಾಡಿಕೊಡಬೇಕು. ಈಗ ಅವರೇ ಶಿಕ್ಷಣ ಖಾತೆಯನ್ನು ಹೊಂದಿರುತ್ತಾರೆ. ಸನ್ಮಾನ್ಯ ಹಿರಿಯ ಸದಸ್ಯರಾದ ಶ್ರೀ ಬಸವರಾಜ ಹೊರಟ್ಟಿಯವರು ಸಲ್ಲಿಸಿರುವಂತಹ ವರದಿಯನ್ನು ಒಪ್ಪಿಕೊಂಡು ಈ fitment ಅನ್ನು fix ಮಾಡಲಿಕ್ಕೆ ಒಂದು ವರ್ಷಕ್ಕೆ 359.84 ಕೋಟಿ ರೂಪಾಯಿಗಳಾಗುತ್ತದೆ. ಆದರೆ, ಅಧಿಕಾರಿಗಳು ಕೊಟ್ಟಿರುವಂತಹ ವರದಿಯಲ್ಲಿ 5081 ಕೋಟಿ ರೂಪಾಯಿಗಳನ್ನು 2040ನೇ ಇಸವಿಯವರೆಗೆ ಲೆಕ್ಕ ಹಾಕಿ ಕೊಟ್ಟಿದ್ದಾರೆ. ಅದನ್ನು ಸಹ ನಾವು ನೋಡಿದ್ದೇವೆ. ಎಲ್ಲರೂ ಸಹ ಒಂದೇ ಬಾರಿಗೆ ನಿವೃತ್ತಿ ಆದಲ್ಲಿ 5081 ಕೋಟಿ ರೂಪಾಯಿಗಳಾಗುತ್ತದೆ.

ಮಾನ್ಯ ಸಚಿವರಲ್ಲಿ ನಾನು ಮನವಿ ಮಾಡಿಕೊಳ್ಳುವುದೇನೆಂದರೆ ಒಂದು ವರ್ಷಕ್ಕೆ 359.84 ಕೋಟಿ ರೂಪಾಯಿಗಳ ಹೊರೆ ಬರುತ್ತದೆ. ಈ ವಿಚಾರವಾಗಿ ನಾನು ಮೂರನೇ ಬಾರಿಗೆ ಹೇಳುತ್ತಿದ್ದೇನೆ. ಆದ್ದರಿಂದ, ತಾವು ಈ ವಿಚಾರವಾಗಿ ಮಾನ್ಯ ಮುಖ್ಯಮಂತ್ರಿಗಳಿಗೆ ಮನವರಿಕೆ ಮಾಡಿಕೊಡುವುದರ

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಮೂಲಕ ಇದನ್ನು ಕೊಡಲಿಕ್ಕೆ ವ್ಯವಸ್ಥೆ ಮಾಡಬೇಕು. ಈ ವರದಿಯನ್ನು ಒಪ್ಪಿಕೊಂಡು, ಅವರ ಬೇಡಿಕೆಯನ್ನು ಈಡೇರಿಸಬೇಕೆಂದು ಹೇಳಿ ನನ್ನ ಕಳಕಳಿಯ ಮನವಿಯನ್ನು ವ್ಯಕ್ತ ಮಾಡುತ್ತೇನೆ. ಧನ್ಯವಾದಗಳು.

**ಶ್ರೀ ಮರಿತಿಬ್ಬೇಗೌಡ(ಶಿಕ್ಷಕರ ಕ್ಷೇತ್ರ):-** ಸನ್ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರುಗಳಾದ ಶ್ರೀಮಾನ್ ಪುಟ್ಟಣ್ಣನವರು ಹಾಗೂ ಶ್ರೀಮಾನ್ ಶರಣಪ್ಪ ಮಟ್ಟೂರ ರವರು ವಿಶದವಾಗಿ ಎಲ್ಲಾ ವಿಚಾರಗಳನ್ನು ಪ್ರಸ್ತಾಪ ಮಾಡಿದ್ದಾರೆ. ಈ ವಿಷಯದಲ್ಲಿ ಸರ್ಕಾರವೇ ಹೊಸದಾಗಿ ಒಂದು ವಿಧೇಯಕವನ್ನು ಮಾಡಬೇಕೆಂದು ಹೇಳಿ ತೀರ್ಮಾನ ಮಾಡಿದರು. 5000 ಕೋಟಿ ರೂಪಾಯಿಗಳಾಗುತ್ತದೆ, ಇದನ್ನು ಸರ್ಕಾರದಿಂದ ಕೊಡಲಿಕ್ಕೆ ಆಗುವುದಿಲ್ಲ, ಅದಕ್ಕಾಗಿ ಒಂದು ವಿಧೇಯಕವನ್ನು ತೆಗೆದುಕೊಂಡು ಬಂದು ನಾವು ಕೊಡಲಿಕ್ಕೆ ಆಗುವುದಿಲ್ಲವೆಂದು ಹೇಳಿದರು. ಆ ಸಂದರ್ಭದಲ್ಲಿ ಇದೇ ಸದನದಲ್ಲಿ ಸನ್ಮಾನ್ಯ ಉನ್ನತ ಶಿಕ್ಷಣ ಸಚಿವರಾಗಿದ್ದ ಶ್ರೀ ಆರ್.ವಿ.ದೇಶಪಾಂಡೆಯವರು ಇದಕ್ಕೆ ಸುಮಾರು 285 ಕೋಟಿ ರೂಪಾಯಿಗಳನ್ನು ನಾವು ಕೊಡುತ್ತೇವೆ, ಈ ಬಿಲ್ ಅನ್ನು ಪಾಸ್ ಮಾಡಿಕೊಡಿ ಎಂದು ಹೇಳಿ ಮಾನ್ಯ ಸದಸ್ಯರುಗಳನ್ನು ಸದನದಿಂದ ಹೊರಗಡೆ ಕರೆದು ಸಭೆ ಮಾಡಿ, ಇದಕ್ಕೆ ನಾವು ಒಪ್ಪುತ್ತೇವೆಂದು ಹೇಳಿ ಆ ಬಿಲ್ ಅನ್ನು ಪಾಸ್ ಮಾಡಿಕೊಂಡರು.

ಸನ್ಮಾನ್ಯ ಸಭಾಪತಿಯವರೇ, ಆ ಬಿಲ್ ಬಗ್ಗೆ ಉತ್ತರದಲ್ಲಿ ಏನು ಹೇಳುತ್ತಾರೆಂದರೆ ಇದನ್ನು ರಾಜ್ಯ ಉಚ್ಚನ್ಯಾಯಾಲಯದಲ್ಲಿ ತೆಗೆದುಕೊಂಡು ಹೋಗಿ ನಾವು ಈ ರೀತಿಯಲ್ಲಿ ಬಿಲ್ ಪಾಸ್ ಮಾಡಿದ್ದೇವೆ, ಇದನ್ನು ಕೊಡಲಿಕ್ಕೆ ಬರುವುದಿಲ್ಲ ಎಂದು ಹೇಳಿ ಮಾನ್ಯ ಉಚ್ಚನ್ಯಾಯಾಲಯದ ಮುಂದೆ ಇಟ್ಟಿದ್ದಾರೆ. ಉಚ್ಚನ್ಯಾಯಾಲಯದಲ್ಲಿಯೂ ಕೂಡ ಆ ಬಿಲ್ ಅನ್ನು struck down ಮಾಡಿದ್ದೇವೆ ಎಂದು ಹೇಳಿದರು. ಈ ಸದನದಲ್ಲಿ ಪಾಸ್ ಮಾಡಿದಂತಹ ಬಿಲ್ ಅನ್ನು struck down ಮಾಡಿದ್ದೇವೆಂದು ಹೇಳಿ ಉಚ್ಚನ್ಯಾಯಾಲಯದಲ್ಲಿ ಹೇಳಿದರು. ಹೇಳಿದ ಮೇಲೆ ಕೊನೆ ಪಕ್ಷ 5000 ಕೋಟಿ. . . ಕಾಲ್ಪನಿಕ ವೇತನ, ಈ ಬಡ್ತಿ ಸೌಲಭ್ಯ ಪಡೆಯಲಿಕ್ಕೆ ಇರತಕ್ಕಂತಹ ಎಲ್ಲ ಶಿಕ್ಷಕರು ಸಹ ಕೋರ್ಟ್ ಮುಂದೆ ನಾವು affidavit ಕೊಡುತ್ತೇವೆ, ನಮಗೆ ಯಾವುದೇ ಬಾಕಿ ಸಹ ಬೇಕಾಗಿಲ್ಲವೆಂದು ಹೇಳಿ ನಮಗೆ notional ಆಗಿ fixation ಕೊಡಿಸಿ, ಪಿಂಚಣಿ ಸೌಲಭ್ಯವನ್ನು ಕೊಡಿಸಿ, ಅದಕ್ಕೆ ಒಂದು ಸಮಿತಿಯನ್ನು ಮಾಡಬೇಕೆಂದು ಹೇಳಲಾಯಿತು. ಕೊನೆಗೆ ಸರ್ಕಾರದ ನಿರ್ದೇಶನದಂತೆಯೇ ಶ್ರೀಮಾನ್ ಬಸವರಾಜ ಹೊರಟ್ಟಿಯವರ ನೇತೃತ್ವದಲ್ಲಿ ಒಂದು ಸಮಿತಿ ಮಾಡಲಾಯಿತು. ಸರ್ಕಾರದ

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ನಿರ್ದೇಶನದಂತೆ ಆ ಸಮಿತಿ ರಚನೆಯಾದ ಮೇಲೆ ಶಿಕ್ಷಣ ಇಲಾಖೆ ಅಧಿಕಾರಿಗಳು, ಆರ್ಥಿಕ ಇಲಾಖೆಯ ಅಧಿಕಾರಿಗಳು, ಕಾನೂನು ಇಲಾಖೆಯ ಅಧಿಕಾರಿಗಳೆಲ್ಲರೂ ಕೊಟ್ಟಂತಹ ಸಲಹೆಯ ಮೇರೆಗೆ ವಾರ್ಷಿಕ 359.84 ಕೋಟಿ ರೂಪಾಯಿಗಳನ್ನು ಕೊಡಬೇಕೆಂದು ಹೇಳಿ ಒಂದು ವರದಿಯನ್ನು ಸಹ ಸರ್ಕಾರಕ್ಕೆ ಒಂದಲ್ಲಾ, ಎರಡು ಬಾರಿ ಕೊಟ್ಟಿದ್ದೇವೆ. ಅದರ ವಿಚಾರವಾಗಿ ಉತ್ತರದಲ್ಲಿಯೇ ಹೇಳಲಾಗಿದೆ. ಇದುವರೆವಿಗೂ ಕೂಡ ಆ ರಿಪೋರ್ಟ್ ಬಗ್ಗೆ ಪರಿಶೀಲಿಸುತ್ತೇವೆ, ಪರಿಶೀಲಿಸುತ್ತೇವೆಂದು ಹೇಳುತ್ತಿದ್ದಾರೆ. ಏಕೆಂದರೆ, ಈ ಖಾಸಗಿ ಶಿಕ್ಷಣ ಸಂಸ್ಥೆಗಳಲ್ಲಿ ಬಹಳಷ್ಟು ಮಂದಿ ಶಿಕ್ಷಕರುಗಳು ಮತ್ತು ನೌಕರರುಗಳು ಬಹಳ ಒಳ್ಳೆಯ ಕೆಲಸವನ್ನು ಮಾಡುತ್ತಿದ್ದಾರೆ. ಇವತ್ತು ಮಕ್ಕಳಿಗೆ ಗುಣಾತ್ಮಕವಾದಂತಹ ಶಿಕ್ಷಣ ಖಾಸಗಿ ಸಂಸ್ಥೆಗಳಿಂದಲೂ ಕೊಡುತ್ತಿದ್ದಾರೆ. ಇಲ್ಲಿ ಕೆಲಸ ಮಾಡುತ್ತಿರುವಂತಹ ಬಹಳಷ್ಟು ಮಂದಿ ನಿವೃತ್ತರಾಗುತ್ತಿದ್ದಾರೆ. ಯಾವುದೇ ಒಂದು ಆರ್ಥಿಕ ಸವಲತ್ತು, ಪಿಂಚಣಿ ಸವಲತ್ತುಗಳಿಲ್ಲದೆ ಜೀವನದಲ್ಲಿ ದೊಡ್ಡ ಅಭದ್ರತೆ ಇವರೆಲ್ಲರನ್ನೂ ಕಾಡುತ್ತಿದೆ. ಈ ಪ್ರಕರಣಕ್ಕೆ ಸಂಬಂಧಪಟ್ಟಂತೆ ಪ್ರಾರಂಭದಿಂದಲೂ ಕೂಡ ಅಧಿಕಾರಿಗಳು ತಪ್ಪು ಮಾಡಿದ್ದಾರೆಯೇ ವಿನಃ ಇಲ್ಲಿ ನೇಮಕಗೊಂಡ ಶಿಕ್ಷಕರುಗಳಾಗಲಿ, ನೌಕರರುಗಳಾಗಲಿ ತಪ್ಪು ಮಾಡಿರುವುದಿಲ್ಲ. ಸರ್ಕಾರಗಳು ಇದನ್ನು ಹಾಗೆಯೇ ಇಟ್ಟುಕೊಂಡು ಬಂದಿರುವುದರಿಂದ ಇದರ ವಿಚಾರವಾಗಿ ಕಾಲಕಾಲಕ್ಕೆ ನಾವು ಎಷ್ಟೆಲ್ಲಾ ಚರ್ಚೆ ಮಾಡಿದರೂ ಸಹ ಕೆಲಸ ಆಗಲಿಲ್ಲವೆಂದರೆ ಹೇಗೆ? ಕೋರ್ಟ್‌ನಲ್ಲಿ ಈಗ ಮಾಡಿದಂತಹ ಕಾಯಿದೆ ಸಂಪೂರ್ಣ ತಿರಸ್ಕೃತಗೊಂಡಿದೆ ಎಂದು ಹೇಳಿದರೂ ಕೂಡ ಸರ್ಕಾರ ಇದನ್ನು ಒಪ್ಪಿ ಕೊಡಲಿಕ್ಕೆ ಅಗುತ್ತಿಲ್ಲ. ಇದು ಬಹಳ ದು:ಖದ ಸಂಗತಿಯಾಗಿದೆ. ದಯಮಾಡಿ, ಈ ವಿಚಾರವಾಗಿ ಮಾನ್ಯ ಸಚಿವರು ಮಾನ್ಯ ಮುಖ್ಯಮಂತ್ರಿಗಳಿಗೆ ಒಪ್ಪಿಸಬೇಕು. ನಾಳೆ ಸನ್ಮಾನ್ಯ ಮುಖ್ಯಮಂತ್ರಿಗಳು ಈ ಸದನಕ್ಕೆ ಬರುತ್ತಾರೆ. ಇದರ ಬಗ್ಗೆ ನಿರ್ದಿಷ್ಟವಾದಂತಹ ನಿಖರವಾದಂತಹ ತೀರ್ಮಾನ ತೆಗೆದುಕೊಳ್ಳಬೇಕು. ಇಲ್ಲವೇ ಶ್ರೀಮಾನ್ ಬಸವರಾಜ ಹೊರಟ್ಟಿಯವರ ವರದಿ ಪ್ರಕಾರ 359.84 ಕೋಟಿ ರೂಪಾಯಿಗಳನ್ನು ಕೊಡಲಿಕ್ಕೆ ಆಗುವುದಿಲ್ಲವೆಂದು ಹೇಳಲಿ. ನಾವು ಈ ಪ್ರಕರಣವನ್ನು ಕೈಬಿಡುತ್ತೇವೆ. ಇದರ ಬಗ್ಗೆ ಚರ್ಚೆ ಮಾಡುವುದಿಲ್ಲ. ಏಕೆಂದರೆ, ಕಳೆದ 25 ವರ್ಷಗಳಿಂದ ನಿರಂತರವಾಗಿ ಈ ಸದನದಲ್ಲಿ ಈ ಶಿಕ್ಷಕರ ಸಮಸ್ಯೆಗಳ ಬಗ್ಗೆ ನಾವು ಚರ್ಚೆ ಮಾಡಿದ್ದೇವೆ. ಸುಪ್ರೀಂಕೋರ್ಟ್ ವರೆಗೂ ಹೋಗಿ ಈ ಬಗ್ಗೆ ನೂರಾರು ತೀರ್ಪುಗಳು ಬಂದಿವೆ. ಎಲ್ಲಾ ಕೋರ್ಟ್‌ಗಳಲ್ಲಿಯೂ ಸಹ ಸರ್ಕಾರ ದೊಡ್ಡ ಹಿನ್ನೆಡೆಯನ್ನು ಸಾಧಿಸಿದೆ. ಯಾವ ಕೋರ್ಟ್‌ನಲ್ಲಿಯೂ ಕೂಡ ಸರ್ಕಾರ ಈ ಪ್ರಕರಣದಲ್ಲಿ ವಿಜೇತವಾಗಿಲ್ಲ. ಎಲ್ಲಾ ಹಂತದಲ್ಲಿಯೂ ಇವರಿಗೆ ಕೊಡಬೇಕು, ಇವರಿಗೆ ಅನ್ಯಾಯವಾಗಿದೆ ಎನ್ನುವಂತಹ ತೀರ್ಪುಗಳೇ ಎಲ್ಲಾ ಕೋರ್ಟ್‌ಗಳಿಂದ ಬಂದಿವೆ. ದಯಮಾಡಿ, ಕೂಡಲೇ ಘನ ಸರ್ಕಾರ ಇವರ ಸಂಕಷ್ಟಕ್ಕೆ ನೆರವಾಗಬೇಕು.

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಶ್ರೀಮಾನ್ ಬಸವರಾಜ ಹೊರಟ್ಟಿಯವರ ವರದಿಯ ಪ್ರಕಾರ 359.84 ಕೋಟಿ ರೂಪಾಯಿಗಳನ್ನು ಕೊಡುತ್ತೇವೆ ಎನ್ನುವುದನ್ನು ಕೂಡಲೇ ಈ ಅವಧಿಯಲ್ಲಿ ಈ ಸದನದಲ್ಲಿ ನಾಳೆ ಮಾನ್ಯ ಮುಖ್ಯಮಂತ್ರಿಗಳಿಂದ ಹೇಳಿಕೆಯನ್ನು ಕೊಡಿಸಬೇಕೆಂದು ಹೇಳಿ ತಮ್ಮ ಮೂಲಕ ಮಾನ್ಯ ಸಚಿವರಲ್ಲಿ ಒತ್ತಾಯ ಮಾಡುತ್ತೇನೆ.

ಮುಂದು. . .

(402) 12.12.2018 06.00 SV-VK

**(ಸಭಾಪತಿಯವರು ಉಪಸ್ಥಿತಿ)**

**ಶ್ರೀ ಅರುಣ ಶಹಾಪುರ (ಶಿಕ್ಷಕರ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಅವಕಾಶಕ್ಕಾಗಿ ಧನ್ಯವಾದಗಳು. ಉತ್ತರ ಕರ್ನಾಟಕದಲ್ಲಿ ಹೊಳಿ ಹೆಣ ಎಂಬ ಒಂದು ಮಾತನ್ನು ಹೇಳುವಂತೆ ಈ ಸಮಸ್ಯೆಯ ಪರಿಸ್ಥಿತಿ ಆಗಿದೆ. ಬಂದಿರುವ ಸರ್ಕಾರಗಳೆಲ್ಲಾ ಎಲ್ಲಿ ಈ ಕೇಸ್ ನಮ್ಮ ಮೈಮೇಲೆ ಬರುತ್ತದೆಯೋ ಎನ್ನುವಂತೆ ಹೊಳೆಯಲ್ಲಿ ಹೆಣ ಹರಿದುಕೊಂಡು ಬಂದಾಗ ಊರಿನವರೆಲ್ಲಾ ಸೇರಿಕೊಂಡು ಕೇಸು–ಕಛೇರಿ ನಮ್ಮ ಮೇಲೆ ಬರಬಾರದೆಂದು ಒಂದು ಕೋಲನ್ನು ತೆಗೆದುಕೊಂಡು ಮುಂದಕ್ಕೆ ತಳ್ಳುತ್ತಾರೆ. ಅದು ಮುಂದಿನ ಊರಿಗೆ ಹೋಗುತ್ತದೆ. ಆ ಊರಿನವರೂ ಅದನ್ನು ಮುಂದಕ್ಕೆ ತಳ್ಳುತ್ತಾರೆ. ಕಾಲ್ಪನಿಕ ವೇತನ ಬಡ್ತಿಯ ಪ್ರಕರಣವು ಹೊಳಿ ಹೆಣದ ರೀತಿಯಾಗಿದೆ ಎಂದರೆ ತಪ್ಪಾಗಲಿಕ್ಕಿಲ್ಲ. ಯಾವುದೇ ವ್ಯತ್ಯಾಸವಿಲ್ಲದೆ ಎಲ್ಲಾ ಸರ್ಕಾರಗಳೂ ಇದನ್ನು ಮುಂದಕ್ಕೆ ತಳ್ಳುತ್ತಾ ಬಂದಿದ್ದಾರೆ. ಆದರೆ ನಾವು ಪದವೀಧರ/ಶಿಕ್ಷಕ ಕ್ಷೇತ್ರದ ಸದಸ್ಯರು ಬಹಳ ದೊಡ್ಡ ಸಂತ್ರಸ್ತರಾಗಿದ್ದೇವೆ. ಜನರು ನಮಗೆ "ನೀವು ಐದಾರು ಬಾರಿಯಿಂದ ವಿಧಾನ ಪರಿಷತ್ ಸದಸ್ಯರಾಗಿ ಆರಿಸಿ ಬರುತ್ತಿದ್ದೀರಿ. ಈ ಸಮಸ್ಯೆಯನ್ನು ಪರಿಹಾರ ಮಾಡುವುದಾಗಿ ಹೇಳುತ್ತಿದ್ದೀರಿ. ಸಮಸ್ಯೆ ಪರಿಹಾರವೇ ಆಗಿಲ್ಲ" ಎಂದು ನೋವಿನಿಂದ ಹೇಳುತ್ತಾರೆ. ನನಗನ್ನಿಸಿರುವ ಮಟ್ಟಿಗೆ ಮಾನ್ಯ ಕುಮಾರಸ್ವಾಮಿಯವರು ಮುಖ್ಯಮಂತ್ರಿಯಾಗಿರುವ ಸಂದರ್ಭದಲ್ಲಿ, ಜೆಡಿ(ಎಸ್)ಗೆ ಅಧಿಕಾರ ದೊರೆತಿರುವ ಸಂದರ್ಭದಲ್ಲಿ ಅತ್ಯಂತ ಸಂತೋಷಗೊಂಡವರು ಎರಡು ಸಮೂಹ. ನೂತನ ಪಿಂಚಣಿ ಯೋಜನೆಯನ್ನು ತೆಗೆದು ಹಾಕಿ ಹಳೆಯ ಪಿಂಚಣಿ ಯೋಜನೆ ತರಬೇಕೆನ್ನುವವರು ಒಂದು ಸಮೂಹ. ಮತ್ತೊಂದು ಸಮೂಹವೆಂದರೆ ಕಾಲ್ಪನಿಕ ವೇತನ ಬಡ್ತಿಯ ಸಮಸ್ಯೆಯಲ್ಲಿರುವ ಶಿಕ್ಷಕ ಸಮೂಹ. ಪ್ರಣಾಳಿಕೆಯಲ್ಲಿ ಭರವಸೆಯನ್ನು ಕೊಡಲಾಗಿತ್ತೆಂದು ನಾನು ಹೋದಾಗ ಹೇಳಿದರು. ನಾನು ಪ್ರಣಾಳಿಕೆಯನ್ನು ಓದಿಲ್ಲ. ಅವರೆಲ್ಲಾ ಮಾನ್ಯ ಮುಖ್ಯಮಂತ್ರಿಯವರ ಬಗ್ಗೆ ಅಪಾರವಾದ ನಂಬಿಕೆಯನ್ನು ಇಟ್ಟುಕೊಂಡು, ನಮ್ಮ ಸಮಸ್ಯೆಗೆ ಏನಾದರೊಂದು ಪರಿಹಾರ ದೊರಕಬೇಕೆನ್ನುವ ಅಪೇಕ್ಷೆಯನ್ನು ಇಟ್ಟುಕೊಂಡಿದ್ದಾರೆ. ಮಾನ್ಯ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಮಂತ್ರಿಗಳು ಇದು ಪರಿಶೀಲನೆಯಲ್ಲಿದೆ ಎಂಬ ಮಾತನ್ನು ಹೇಳಿ ಜೀವವನ್ನು ಉಳಿಸಿದ್ದಾರೆ. ಆದರೆ ಅದಕ್ಕೆ ಒಂದು ಮುಕ್ತಿ ಕೊಡಬೇಕು. ಕೋಲನ್ನು ಕೈಗೆತ್ತಿಕೊಳ್ಳುವ ಪರಿಸ್ಥಿತಿಯಲ್ಲಿ ನಾವಿದ್ದು, ದಯವಿಟ್ಟು ಈ ಸಮಸ್ಯೆಯನ್ನು ಪರಿಹರಿಸಿ ಕೊಡಬೇಕು.

ಕರ್ನಾಟಕ ಅನುದಾನಿತ ಶಿಕ್ಷಣ ಸಂಸ್ಥೆಗಳ ನೌಕರರ ಅಧಿನಿಯಮ, 2014 – ಮಾನ್ಯ ಶಿಕ್ಷಣ ಸಚಿವರು ಕೊಟ್ಟಿರುವ ಉತ್ತರದಲ್ಲಿ ಬಹಳ ಸ್ಪಷ್ಟವಾಗಿ ಹೇಳಿರುತ್ತಾರೆ. Court struck down ಮಾಡಿದೆ ಎಂದು ಒಪ್ಪಿಕೊಂಡಿದ್ದಾರೆ. ಹಲವಾರು ಕೋರ್ಟ್‌ಗಳಲ್ಲಿ ಸರ್ಕಾರಕ್ಕೆ ಮುಖಭಂಗವಾಗಿದೆ. ಇಂದಲ್ಲಾ ನಾಳೆ ಇದು ಸರ್ಕಾರದ ಎದುರು ಬಂದು ನಿಲ್ಲುವಂಥದ್ದು, ಸರ್ಕಾರ ಇದನ್ನು ಎದುರಿಸಲೇ ಬೇಕು. ನಾಳೆ ಬರಬಹುದಾದಂತಹ ಬೃಹತ್ ಸಮಸ್ಯೆಯನ್ನು ಇಂದು ಸ್ವಲ್ಪದರಲ್ಲಿಯೇ ಪರಿಹಾರ ಮಾಡುವಂತಹ ಅವಕಾಶ ಸರ್ಕಾರಕ್ಕಿದೆ. ಈಗ ನಡೆಯುತ್ತಿರುವ ಹೋರಾಟಕ್ಕೆ ನಾನು ಹೋದಾಗ ಅಲ್ಲಿ ಎರಡು ಚೀಟಿಯನ್ನು ಕೊಟ್ಟರು. "ಮೊದಲನೆಯದು, ಮಾನ್ಯ ಮುಖ್ಯಮಂತ್ರಿಯವರು ಚುನಾವಣೆಗೆ ಮುನ್ನ ತಮ್ಮ ಪಕ್ಷದ ಪ್ರಣಾಳಿಕೆಯಲ್ಲಿ ಕಾಲ್ಪನಿಕ ವೇತನ ಜಾರಿಗೆ ತರುತ್ತೇವೆಂದು ಹೇಳಿರುವುದು. ಎರಡನೆಯದು ಮಾನ್ಯ ಬಸವರಾಜ ಹೊರಟ್ಟಿಯವರ ವರದಿ ಯಥಾವತ್ ಜಾರಿಗೆ ಸರ್ಕಾರವನ್ನು ಒತ್ತಾಯಿಸುವುದು." ಈ ಎರಡೂ ಅಂಶಗಳನ್ನು ತಮ್ಮ ಮೂಲಕ ಸರ್ಕಾರದ ಗಮನಕ್ಕೆ ತರಬಯಸುತ್ತೇನೆ. ಎಲ್ಲಾ ಕಡೆ ಸರ್ಕಾರಕ್ಕೆ ಮುಖಭಂಗವಾಗಿದೆ. ಇದು ಸರ್ಕಾರಕ್ಕೆ ಬಿಡಲಾರದ ಕರ್ಮ. ಇದನ್ನು ಹೇಗಾದರೂ ಮಾಡಿ ಪರಿಹಾರ ಮಾಡಲೇಬೇಕು ಎಂದು ವಿನಂತಿ ಮಾಡಿಕೊಳ್ಳುತ್ತೇನೆ.

ಸೇವೆಗೆ ಸೇರಿದ ದಿನಾಂಕದಿಂದ ಅನುದಾನಕ್ಕೆ ಒಳಪಟ್ಟ ದಿನಾಂಕ ಎಂಬುದು ಅವರ ಸಮಸ್ಯೆ. ಸೇವೆಗೆ 1987ರಲ್ಲಿ ಸೇರಿರುತ್ತಾರೆ. 1990ರಲ್ಲಿ ಅನುದಾನಕ್ಕೆ ಒಳಪಟ್ಟಿರುತ್ತಾರೆ. ಮೂರು ವರ್ಷಗಳ ಕಾಲ ಅವರು ದುಡಿದಿರುತ್ತಾರೆ. ಆ ರೀತಿ ಸುಮಾರು 20–25 ವರ್ಷ ದುಡಿದಿರುವ ಅವಧಿ ಇದೆ. 1987ರಲ್ಲಿ ನೇಮಕಾತಿಯಾದವರು 2010ರಲ್ಲಿ ಅನುದಾನಕ್ಕೆ ಒಳಪಟ್ಟಿದ್ದಾರೆ. ಅವರು 35 ವರ್ಷ ಸೇವೆಯನ್ನು ಸಲ್ಲಿಸಿದ್ದರೆ 30 ವರ್ಷ ಹೊರಟು ಹೋಯಿತು. 5 ವರ್ಷಗಳು ಮಾತ್ರ ಉಳಿದಿದ್ದು, ಆ ಐದು ವರ್ಷಗಳು ಸಂಬಳ ತೆಗೆದುಕೊಂಡೆವು ಎಂದು ಸಂತೋಷ ಪಡುವುದರಲ್ಲಿ ನಿವೃತ್ತಿಯಾಗಿಬಿಡುತ್ತಾರೆ. ಅವರಿಗೆ ಪಿಂಚಣಿಯೂ ಇರುವುದಿಲ್ಲ. ಸೇವೆಗೆ ಸೇರಿದ ದಿನಾಂಕ ತೆಗೆದುಕೊಂಡರೆ ಅವರಿಗೆ ಪಿಂಚಣಿಯೂ ಸಿಗುತ್ತದೆ. ಬದುಕಬಹುದು ಎಂಬ ಭಾವನೆ ಇರುತ್ತದೆ.

ಒಂದು ಘಟನೆಯನ್ನು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ. ಒಬ್ಬ ಶಿಕ್ಷಕರು ಅನುದಾನಕ್ಕೆ ಒಳಪಟ್ಟ ನಂತರ ಬಹಳ ಸಂತೋಷದಿಂದ ಕನ್ಯೆಯನ್ನು ಗುರುತಿಸಿ ಮದುವೆ ಮಾಡಿದರು. ಆ ಶಿಕ್ಷಕರು

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ರಸ್ತೆ ಅಪಘಾತದಲ್ಲಿ ಮೃತಪಟ್ಟರು. ಅನುದಾನಕ್ಕೊಳಪಡುವುದಕ್ಕೆ ಸರ್ಕಾರದಲ್ಲಿ 3-4 ಲಕ್ಷ ರೂಪಾಯಿಗಳು ಖರ್ಚಾಗುತ್ತದೆ. ಅವರು 3-4 ಲಕ್ಷ ರೂಪಾಯಿಗಳ ಸಾಲವನ್ನು ಮಾಡಿದ್ದಾರೆ. ಅವರಿಗೆ ಮನೆಯಿಲ್ಲ, ಹೊಲ ಇಲ್ಲ, ತೋಟ ಇಲ್ಲ. ಇಂದು 5-6 ಲಕ್ಷ ರೂಪಾಯಿಗಳ ಸಾಲದೊಂದಿಗೆ ಅವರನ್ನು ಮದುವೆಯಾದ ಅವರ ಧರ್ಮಪತ್ನಿಯವರು ತೊಂದರೆಯನ್ನು ಅನುಭವಿಸುತ್ತಿದ್ದಾರೆ. ಸುಮಾರು 32,000 ಜನ ಇರಬಹುದೆಂಬ ಅಂಕಿ ಅಂಶದ ಅಂದಾಜು ಇದೆ. ಆದ್ದರಿಂದ ದಯಮಾಡಿ ಆ ಎಲ್ಲಾ ಜನರಿಗೆ ಕಾಲ್ಪನಿಕ ವೇತನ ಬಡ್ತಿ ಸಮಸ್ಯೆಯನ್ನು ಬಗೆಹರಿಸಿ ಪರಿಹಾರ ಕೊಡುವಲ್ಲಿ ಸರ್ಕಾರ ಕ್ರಮ ಕೈಗೊಳ್ಳಬೇಕು. ದಯವಿಟ್ಟು ಇದನ್ನು ಹೊಳಿಹೆಣ ಮಾಡದೆ ಇಂದೇ ಅದಕ್ಕೊಂದು ಮುಕ್ತಿಯನ್ನು ಕಾಣಿಸುವಂತಹ ಕೆಲಸವನ್ನು ಮಾಡಬೇಕೆಂಬ ವಿನಂತಿಯನ್ನು ನಾನು ಮಾಡಿಕೊಳ್ಳುತ್ತೇನೆ.

**ಡಾ:ತೇಜಸ್ವಿನಿ ಗೌಡ (ವಿಧಾನ ಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಅವಕಾಶಕ್ಕಾಗಿ ಧನ್ಯವಾದಗಳು. ಮಾನವ ಸಂಪನ್ಮೂಲ ಕ್ಷೇತ್ರಕ್ಕೆ ಅತಿ ಹೆಚ್ಚು ಕೊಡುಗೆಯನ್ನು ಕೊಡುವಂತಹದ್ದು ಶಿಕ್ಷಕ ವೃಂದ. ನಾವೆಲ್ಲರೂ ಕೂಡ ಮಕ್ಕಳಿಗೆ ಸಮಾಜದಲ್ಲಿ ಮೌಲ್ಯಗಳನ್ನು ಹೇಳಿಕೊಡುವಂತಹವರು ಮತ್ತು ಪ್ರೇರಣೆಯನ್ನು ಕೊಡತಕ್ಕಂತಹ ಶಿಕ್ಷಕ ವೃಂದದ ಬಗ್ಗೆ ಗೌರವಯುತವಾಗಿ ಸಂವೇದನಾಶೀಲವಾಗಿ ಆ ಸಮಸ್ಯೆಗಳನ್ನು ನಾವು ನೋಡಬೇಕಾಗುತ್ತದೆ. ಈ ಸದನದಲ್ಲಿ ಪಕ್ಷಭೇದವನ್ನು ಮರೆತು ಎಲ್ಲಾ ಸದಸ್ಯರು ಮಾಡುತ್ತಿರುವ ಮನವಿಯೇನೆಂದರೆ ದೈಹಿಕವಾಗಿ ಒಂದು ಗಂಟೆ ಉಪನ್ಯಾಸ ಕೊಡಿಸುವಂತಹದ್ದು ಎಂದರೆ medical terms ನಲ್ಲಿ ಇಂತಿಷ್ಟು ಅವಧಿ ಎಂದು ನಿಗದಿ ಪಡಿಸಲಾಗುತ್ತದೆ. ಅವರ ಮೆದುಳಿಗೆ ಹಾಗೂ ಶಾರೀರಕ್ಕೆ ಎರಡಕ್ಕೂ ಕೆಲಸವಿರುತ್ತದೆ. ವಿಶೇಷವಾಗಿ ಚಿಕ್ಕಮಕ್ಕಳ ಮೇಲೆ ಪ್ರಭಾವ ಬೀರುವಂತಹದ್ದು ಶಿಕ್ಷಕಿಯರು. ಇಂತಹ ಸಂದರ್ಭದಲ್ಲಿ ಯಾವುದೇ ಉಪಕಸುಬನ್ನು ಮಾಡದಂತಹ ಮತ್ತು ಜೀವನಕ್ಕೆ ಇದನ್ನೇ ನಂಬಿಕೊಂಡಿರುವಂತಹ, ಬಹಳ ಸಮರ್ಪಣಾ ಮನೋಭಾವದಿಂದ ಕೆಲಸ ಮಾಡುವಂತಹ ಶಿಕ್ಷಕ ವೃಂದದ ಸಂಧ್ಯಾ ಕಾಲದಲ್ಲಿ ಜೀವನಕ್ಕೆ ಆಧಾರವಾಗಬೇಕೆನ್ನುವ ನಂಬುವಂತಹ ಸೌಲಭ್ಯವನ್ನು ಪಡೆಯುವುದಕ್ಕಾಗಿ ಇಂದು ರಾಣಿ ಚೆನ್ನಮ್ಮನವರ ಪುಣ್ಯಭೂಮಿಯಲ್ಲಿರುವ ಸುವರ್ಣ ವಿಧಾನಸೌಧದ ಬಳಿ ಸಾವಿರಾರು ಜನ ನೆರೆದಿರತಕ್ಕಂತಹದ್ದು ನಾವೆಲ್ಲರೂ ತಲೆ ತಗ್ಗಿಸಬೇಕಾದಂತಹ ಸಂಗತಿ. ದಯಮಾಡಿ ಸರ್ಕಾರ ಈ ವಿಚಾರದಲ್ಲಿ ಪ್ರತಿಷ್ಠೆ ಮಾಡದೆ, ವಿತಂಡವಾದ ಮಾಡದೆ, ತರ್ಕ ಮಾಡದೆ ವಿಚಾರದ ಗಂಭೀರತೆಯನ್ನು ಅರಿತು ಈ ಒಂದು ಬೇಡಿಕೆಯನ್ನು ಪರಿಗಣಿಸಬೇಕು. ತ್ವರಿತವಾಗಿ ಅವರಿಗೆ ಪಿಂಚಣಿಯನ್ನು ನೀಡುವಂತಹ ಕೆಲಸ ಮಾಡಬೇಕೆಂದು ಆಗ್ರಹ ಮಾಡುತ್ತೇನೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಶರಣಪ್ಪ ಮಟ್ಟೂರ:-** ಮಾನ್ಯ ಸಭಾಪತಿಯವರೇ, ಮಾನ್ಯ ತೇಜಸ್ವಿನಿಯವರು ಹೇಳಿದ ವಿಚಾರದಲ್ಲಿ 01.04.2006ರ ನಂತರ ಅವರ post approval ಆಗಿದ್ದರೆ ಅವರಿಗೆ ಪಿಂಚಣಿಯೂ ಇಲ್ಲ, ಲೀವ್ ಇಲ್ಲ ಯಾವುದೇ ರೀತಿಯ ಸೌಲಭ್ಯಗಳು ಇಲ್ಲ. ದಿನಾಂಕ 01.04.2006ಕ್ಕೂ ಮುಂಚೆ approval ಆಗಿದ್ದರೆ ಒಂದೆರಡು ವರ್ಷ ಸೇವಾ ಅವಧಿ ದೊರೆಯುತ್ತದೆ. ದುರ್ದೈವದಿಂದ 2006ರ ನಂತರ approval ಆಗಿದ್ದರೆ ಪಿಂಚಣಿಯೂ ಇರುವುದಿಲ್ಲ ಎನ್ನುವುದನ್ನು ಸೇರಿಸಲಿಕ್ಕೆ ಬಯಸುತ್ತೇನೆ.

**ಶ್ರೀ ಕೆ.ಟಿ.ಶ್ರೀಕಂಠೇಗೌಡ (ಪದವೀಧರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಅವಕಾಶಕ್ಕಾಗಿ ಧನ್ಯವಾದಗಳು. ಈ ವಿಚಾರದ ಬಗ್ಗೆ ಬಹಳ ಜನ ಸ್ನೇಹಿತರು ಮಾತನಾಡಿದ್ದಾರೆ. ಆದರೆ ಈ ವ್ಯವಸ್ಥೆಯೊಳಗೆ ನಾನು ನೇರವಾದ ಫಲಾನುಭವಿ. ನನಗೆ ಇದರ ಮೂರು ವರ್ಷದ ಬಿಸಿ ತಟ್ಟಿದೆ. ಮೂಲಭೂತವಾಗಿ ಕಾಲ್ಪನಿಕ ವೇತನ ಎನ್ನುವುದರ ಬಗ್ಗೆ ನನ್ನ ವಿರೋಧವಿದೆ. ಏಕೆ ಕಲ್ಪಿಸಿಕೊಳ್ಳುವುದು? ಸೇವೆಗೆ ಸೇರಿದ ದಿನಾಂಕವನ್ನು ಗಣನೆಗೆ ತೆಗೆದುಕೊಳ್ಳಬೇಕೆಂದು ಹೈಕೋರ್ಟ್ ಹಾಗೂ ಸುಪ್ರೀಂ ಕೋರ್ಟ್ ಹೇಳಿದೆ. ಸೇವೆಗೆ ಸೇರಿದ ಹಾಗೂ ಅನುದಾನಕ್ಕೆ ಒಳಪಟ್ಟ ನಡುವಿನ ಅವಧಿಯನ್ನು ಕಾಲ್ಪನಿಕ ಎಂದು ಏಕೆ ಹೇಳಬೇಕು? ಶಿಕ್ಷಕರು ಪಾಠ ಮಾಡಿರುವುದಿಲ್ಲವೇ? ನಾನು ಈ ಸರ್ಕಾರವೆಂದು ಹೇಳುವುದಿಲ್ಲ. ಕಾಲಕಾಲಕ್ಕೆ ಬಂದ ಸರ್ಕಾರಗಳು ಸಮಯಕ್ಕೆ ಸರಿಯಾಗಿ ಕೊಡಬೇಕಾದ ಅನುದಾನವನ್ನು ಕೊಡುವಲ್ಲಿ ವೈಫಲ್ಯವನ್ನು ಕಂಡಿವೆ. ಸರ್ಕಾರ ತಡವಾಗಿ ಅನುದಾನವನ್ನು ಕೊಟ್ಟ ಕಾರಣಕ್ಕೆ ಶಿಕ್ಷಕರನ್ನು ಏಕೆ ಬಲಿ ಕೊಡಬೇಕು? ಕಾಲ್ಪನಿಕ ವೇತನ ಸಮಿತಿಯಲ್ಲಿ ನಾನು ಸಹ ಇದ್ದೇನೆ. ನಾವು ಯಾರೂ arrears ಕೇಳುವುದಿಲ್ಲ ಎಂದು ಮುಚ್ಚಳಿಕೆಯನ್ನು ಬರೆದುಕೊಡಲಾಗಿದೆ. ಸೇವೆಗೆ ಸೇರಿದ ದಿನಾಂಕದಿಂದ ಅನುದಾನಕ್ಕೆ ಒಳಪಟ್ಟಂತಹ ಅವಧಿಗೆ fitment ಕೊಡಬೇಕು. ವೇತನವನ್ನು ನಿಗದಿ ಮಾಡಬೇಕು. We are not urging for arrears. 1987ರಿಂದ ಈಚೆಗೆ ಎಂದು ಮಾನ್ಯ ಅರುಣ ಶಹಾಪುರ ಅವರು ಹೇಳಿದರು. ಅದು ತಪ್ಪು ಮಾಹಿತಿ. ಯಾರೆಲ್ಲಾ ಹಿಂದೆ ಸೇವೆಗೆ ಸೇರಿದ್ದರೋ ಅವರನ್ನೆಲ್ಲಾ ಹಿಡಿದು ಹಾಕಲಾಗುತ್ತಿದೆ. 1987ರಿಂದ 1990ರ ಅವಧಿ ಮಾತ್ರವಲ್ಲ. ಈ ಹಿಂದೆ 04.08.1990ಯಲ್ಲಿಯೂ ಕೊಟ್ಟಿದ್ದರು. ಉದಾಹರಣೆಗೆ ನಾನು 1986ಕ್ಕೆ ಪ್ರಾಚಾರ್ಯನಾದೆ. ಜಂಟಿ ನಿರ್ದೇಶಕರು approval ಮಾಡಿ, ಅಲ್ಲಿಂದ ವೇತನವನ್ನು ಕೊಟ್ಟರು. ಅನುದಾನ 1989ಕ್ಕೆ ಬಂದಿದ್ದು, ಮೂರು ವರ್ಷಗಳನ್ನು ತೆಗೆದು ಹಾಕಲಾಯಿತು. ಎಲ್ಲಾ ನೌಕರರಿಗೆ ಪಿಂಚಣಿಯನ್ನು ಕೊಡುವಾಗ ಅವರ ಹಿಂದಿನ ಸೇವೆಯನ್ನು ಕಡಿತಗೊಳಿಸಿ ಎಂಟು, ಹತ್ತು, ಹದಿನೈದು ಸಾವಿರ ಉಪಧನ ಏನು ಬರುತ್ತಿದೆಯೋ ಅದನ್ನು ಕಡತ ಮಾಡಿ ಕೊಡಲಾಗುತ್ತಿದೆ. ಶಿಕ್ಷಕರು ಅವರಿಗೆ ನ್ಯಾಯಯುತವಾಗಿ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ದೊರಕಬೇಕಾದುದನ್ನು ಕೇಳುತ್ತಿದ್ದಾರೆ. ಸರ್ಕಾರ ಅನುದಾನವನ್ನು ಕೊಡುವುದನ್ನೇ ತಡ ಮಾಡಿದೆ. ಸರ್ಕಾರದಿಂದ ಲೋಪವಾಗಿದೆ. ಆದರೆ ಶಿಕ್ಷಕರು ಅಧಿಕೃತವಾಗಿ ಸೇವೆಯನ್ನು ಸಲ್ಲಿಸಿದ್ದಾರೆ. ಯಾವ ದಿನಾಂಕದಿಂದ ನಮಗೆ full time order ಬಂದಿತೋ ಅದನ್ನು ಒಪ್ಪಿಕೊಳ್ಳಬೇಕೆಂಬುದಷ್ಟೇ ಇಲ್ಲಿ ನಮ್ಮ ವಿಚಾರ. ಇದು ಬಹಳ ಸರಳವಾದ ವಿಚಾರ. ಏನೂ ಗೊಂದಲವಿಲ್ಲ. Entry into the service ದಿನಾಂಕವನ್ನು ಒಪ್ಪಿಕೊಳ್ಳಬೇಕು and not entry into the Grant-in-Aid. Grant-in-Aidಗೆ ಸರ್ಕಾರ ತಡ ಮಾಡಿ ಶಿಕ್ಷಕರನ್ನೇಕೆ ಬಲಿ ಕೊಡಬೇಕು.

ಮಾನ್ಯ ನಾರಾಯಣಸ್ವಾಮಿಯವರೇನು ಬೀಗಬೇಕಾಗಿಲ್ಲ. ಏಕೆಂದರೆ ಯಾವ ಕಾಲದಲ್ಲಿಯೋ ಈ ಕೆಲಸವನ್ನು ಅವರು ಮಾಡಬೇಕಿತ್ತು. ಅವರಿಗೆ ಜನ್ಮ ಕೊಟ್ಟದ್ದೇ ಶಿಕ್ಷಕರು, ಪದವೀಧರರು. ಆದರೆ ನಮ್ಮ ಸರ್ಕಾರ ಈ credit ಅನ್ನು ತೆಗೆದುಕೊಳ್ಳಲಿ. ಇದು 25-30 ವರ್ಷಗಳ ಜ್ವಲಂತ ಸಮಸ್ಯೆ. ಶಿಕ್ಷಕರು ಇದರಿಂದ ಎಷ್ಟು ನರಳಿದ್ದಾರೆಂದರೆ ಇಂದಿಗೂ ನಿವೃತ್ತ ಶಿಕ್ಷಕರು ದೂರವಾಣಿ ಮಾಡಿ ನಮ್ಮ ಕಥೆ ಏನು ಮಾಡಿದಿರಿ? ನನ್ನದು ಎಂಟು ವರ್ಷ, ಏಳು ವರ್ಷ, ಆರು ವರ್ಷ ಹೀಗೆ ಸೇವೆಯನ್ನು ಕೈಬಿಟ್ಟರು. ನನ್ನದು ಹದಿನೈದು ಸಾವಿರ ಪಿಂಚಣಿ ಹೋಯಿತು ಎಂದು ಹೇಳುತ್ತಾರೆ. ನಿವೃತ್ತಿಯ ನಂತರ ಏನಾದರೂ ಮಾಡಿ ಮನೆಯನ್ನು ಕಟ್ಟಿಕೊಳ್ಳಬೇಕು, ಮಗಳಿಗೆ ಮದುವೆ ಮಾಡಬೇಕು ಎಂಬ ಆಸೆಯನ್ನು ಇಟ್ಟುಕೊಂಡಿರುವವರಿಗೆ ದೊಡ್ಡ ಹೊಡೆತ ಬಿದ್ದಂತಾಗಿದೆ.

**(...ಮುಂದು)**

(403) 12.12.2018 (6.10) ಕೆಪಿ/ಬಿಎನ್‌ಎಸ್

**ಶ್ರೀ ಕೆ.ಟಿ.ಶ್ರೀಕಂಠೇಗೌಡ (ಮುಂದು....)-**

ನಿವೃತ್ತಿಯ ನಂತರ ಏನಾದರೂ ಮಾಡಿ ಒಂದು ಮನೆಯನ್ನು ಕಟ್ಟಿಕೊಳ್ಳಬೇಕು, ಏನಾದರೂ ಮಾಡಿ ಮಗಳ-ಮಗನ ಮದುವೆ ಮಾಡಬೇಕೆಂಬ ಆಸೆಯನ್ನು ಇಟ್ಟುಕೊಂಡವರಿಗೆ ದೊಡ್ಡ ಮಟ್ಟದಲ್ಲಿ ಹೊಡೆತ ಬಿದ್ದಿದೆ. ಹಾಗಾಗಿ, ತಮ್ಮ ಮುಖಾಂತರ ಮಾನ್ಯ ಸಚಿವರನ್ನು ಮತ್ತು ಸರ್ಕಾರವನ್ನು ಅಗ್ರಹ ಮಾಡುತ್ತೇನೆ. ನಮ್ಮ ಪ್ರಾಣಾಳಿಕೆಯಲ್ಲಿಯೂ ಸಹ ಮಾತು ಕೊಟ್ಟಿದ್ದೇವೆ. ಒಂದು ಕಡೆ ಮಾನ್ಯ ಉಚ್ಚ ನ್ಯಾಯಾಲಯ ಮತ್ತು ಸರ್ವೋಚ್ಚ ನ್ಯಾಯಾಲಯ ಮಾತು ಕೊಟ್ಟಿದೆ. Notional Increment ನ ದುರಂತ ಎಲ್ಲಿ ಆಯಿತು ಎಂದರೆ, 176 ಇಂಜಿನಿಯರ್‌ಗಳನ್ನು ನೇಮಕ ಮಾಡುವಂತಹ ಸಂದರ್ಭದಲ್ಲಿ equate ಮಾಡಿ ಎಂದು ಒಂದು ಗೊಂದಲ ಬಂತು. ಆಗ ಗುತ್ತಿಗೆ ನೌಕರರಿಗೆ notional pay

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ವಿಚಾರದಲ್ಲಿ ಹೊಡೆತ ಬಿತ್ತು. ಆಗ ಒಂದು ಆದೇಶ ಬಂದು ನಮಗೆ ಏನು pension fitment ಮಾಡುತ್ತಿದ್ದರೋ ಆಗ ನಮ್ಮ ಸೇವಾ ಅವಧಿಯನ್ನು ಕಿತ್ತು ಹಾಕುವುದಕ್ಕೆ ಹೊರಟರು. 176 ಜನಕ್ಕೆ ಕೊಟ್ಟುಬಿಡಿ. ನಮ್ಮ ಸಮಸ್ಯೆಯೇ ಇಲ್ಲ. ಗುತ್ತಿಗೆ ಶಿಕ್ಷಕರ ಸಮಸ್ಯೆಯು ಇದೆ, ಸರ್ಕಾರಿ ಗುತ್ತಿಗೆ ಉಪನ್ಯಾಸಕರ ಸಮಸ್ಯೆಯು ಇದೆ. Aided Institutions ನಲ್ಲಿ ಇರುವಂತಹವರ ನಮ್ಮವರ ಸಮಸ್ಯೆಯು ಇದೆ. ಹಾಗಾಗಿ, ಎಲ್ಲೂ ಒಂದು ಕಡೆ ನಾವು ಮಾತು ಕೊಟ್ಟಿದ್ದೇವೆ, ಅದನ್ನು ಉಳಿಸಿಕೊಳ್ಳಬೇಕಾಗಿದೆ. ಈ ಸರ್ಕಾರವನ್ನು ವಿಶೇಷವಾಗಿ ಮಾನ್ಯ ಕುಮಾರಣ್ಣರವರನ್ನು ಶಿಕ್ಷಕರ ಮತ್ತು ನೌಕರರ ಸ್ನೇಹಿ, ಹೃದಯವಂತರರು ಎಂದು ಕರೆಯುತ್ತಾರೆ. ಇವತ್ತು ನಮ್ಮ ಎನ್.ಪಿ.ಎಸ್ ನೌಕರರ ಬಹೃತ್ ಸಮಾವೇಶ ನಡೆಯುತ್ತಿದೆ. ನಮ್ಮ ರಾಜ್ಯದಿಂದ ಸುಮಾರು ಒಂದು ಲಕ್ಷ ಜನ ನೌಕರರು ಬಂದಿದ್ದಾರೆ. ನಾವು ಮಾನ್ಯ ಮುಖ್ಯಮಂತ್ರಿಗಳ ಜೊತೆಗೆ ಸಭೆ ಮಾಡಿಸಿ ಅವರ ಕಡೆಯಿಂದ ಅವರಿಗೆ positive ಆಗಿ ಭರವಸೆಯನ್ನು ಕೊಡಿಸಿ ಬಂದಿದ್ದೇವೆ. ಆ ಕಮಿಟಿಗೆ ಅಧ್ಯಕ್ಷರನ್ನು ಮತ್ತು ಕಾರ್ಯದರ್ಶಿಗಳನ್ನು ನೇಮಿಸುತ್ತೇವೆ ವಿಶ್ವಾಸವಿಡಿ ಎನ್ನುವಂತಹ ಮಾತನ್ನು ಮಾನ್ಯ ಕುಮಾರಣ್ಣರವರು ಹೇಳಿದ್ದಾರೆ. ನಾನು ಸಹ ತಮ್ಮ ಮುಖಾಂತರ ಮಾನ್ಯ ಸಚಿವರಲ್ಲಿ ಕೇಳಿಕೊಳ್ಳುತ್ತೇನೆ. ಮೂರು ದಶಕಗಳ ಈ ಜಲ್ವಂತ ಸಮಸ್ಯೆಗೆ ಪ್ರತಿನಿತ್ಯ ಕಣ್ಣೀರು ಹಾಕುತ್ತಿದ್ದಾರೆ. ಶಿಕ್ಷಕರಿಗೆ ಪಾಠ ಮಾಡುವುದು ಬಿಟ್ಟರೆ ಬೇರೆ ಏನಿದೆ? ವೇತನ ಬಿಟ್ಟರೆ ಬೇರೆ ಏನಿದೆ? ಹಾಗಾಗಿ, ಅವರು ಸಮಾಧಾನದ ನಿಟ್ಟುಸಿರನ್ನು ಕೊನೆಯ ದಿವಸಗಳಲ್ಲಿ ಬಿಡಬೇಕು ಅಲ್ಲವೇ, ಅವರ ಮೇಲೆ ಗದಾ ಪ್ರಹಾರ ಬೇಡ. ಏಕೆಂದರೆ, ಈ ರಾಷ್ಟ್ರದ ಭವಿಷ್ಯವನ್ನು ಕಟ್ಟುವಲ್ಲಿ ಶಿಕ್ಷಕರ ಪಾತ್ರ ಬಹಳ ದೊಡ್ಡದು. ಅದಕ್ಕೆ ಬೆಲೆ ಕಟ್ಟುವುದಕ್ಕೆ ಆಗುವುದಿಲ್ಲ. ಅಂತಹ ಸೇವೆ ಮಾಡಿರುವಂತಹ ಈ ಶಿಕ್ಷಕರ ಕೆಲಸ ಮಾಡಿರುವಂತಹ ಸೇವಾ ಅವಧಿಯನ್ನು ಒಪ್ಪಿಕೊಳ್ಳಿ ಎನ್ನುವಂತಹ ವಿಚಾರ ಅಷ್ಟೇ ಇದು. ಮಾನ್ಯ ಸದಸ್ಯರಾದ ಡಾ॥ವೈ.ಎ.ನಾರಾಯಣಸ್ವಾಮಿಯವರು ಆತಂಕ ಪಡುವಂತಿಲ್ಲ. ನಾವು ಇದನ್ನು ಮಾಡುತ್ತೇವೆ. ಇದರ ಕ್ರೆಡಿಟ್‌ನ್ನು ಮಾನ್ಯ ಸದಸ್ಯರಾದ ಡಾ॥ವೈ.ಎ.ನಾರಾಯಣಸ್ವಾಮಿ ಮತ್ತು ಅವರ ಸ್ನೇಹಿತರು ತೆಗೆದುಕೊಳ್ಳಬೇಕಾಗಿತ್ತು. ತಮಗೆ ಒಂದು ಮಾತನ್ನು ಹೇಳುತ್ತೇನೆ. ಮಾನ್ಯ ಮುಖ್ಯಮಂತ್ರಿಗಳಿಂದ ಈಗಾಗಲೇ 11 ಆದೇಶವನ್ನು ಮಾಡಿಸಿದ್ದೇವೆ. Additional Increment, ex-gratia, ನಿಮ್ಮ ಹಿಂದಿ ಟೀಚರ್ಸ್, ಹೀಗೆ ಎಷ್ಟೋ ಆದೇಶಗಳನ್ನು ಮಾಡಿಸಿದ್ದೇವೆ ಆ ಪಟ್ಟಿಯನ್ನು ಬೇಕಾದರೆ ಕೊಡುತ್ತೇನೆ.

**ಡಾ॥ವೈ.ಎ.ನಾರಾಯಣಸ್ವಾಮಿ (ಶಿಕ್ಷಕರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಮಾನ್ಯ ಕುಮಾರಣ್ಣನವರು ಮುಖ್ಯಮಂತ್ರಿಯಾದ ಮೇಲೆ ಈ ರಾಜ್ಯ ರಾಮರಾಜ್ಯ ಆಗಿ ಹೋಗಿದೆ.

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**ಶ್ರೀ ಕೆ.ಟಿ.ಶ್ರೀಕಂಠೇಗೌಡ:-** ಮಾನ್ಯ ಸಭಾಪತಿಯವರೇ, ಅವರಿಂದ ಒಂದು ಆದೇಶವನ್ನು ಮಾಡಿಸುವುದಕ್ಕೆ ಆಗಲಿಲ್ಲ. ಮಾನ್ಯ ಮುಖ್ಯಮಂತ್ರಿಗಳಿಂದ 11 ಆದೇಶಗಳನ್ನು ತೆಗೆದುಕೊಂಡಿದ್ದೇವೆ. ಇನ್ನು ತೆಗೆದುಕೊಳ್ಳುತ್ತೇವೆ. ಜಲ್ವಂತ ಸಮಸ್ಯೆಗಳನ್ನು ಪರಿಹಾರ ಮಾಡಿಸುತ್ತೇವೆ. ಅವರು ಆತಂಕ ಪಡುಪಡುವುದು ಬೇಡ. ಸಹ ಶಿಕ್ಷಕರಿಗೆ ಆದೇಶ ಮಾಡಿಸಿ ಕೊಟ್ಟಿದ್ದೇವೆ. ಎಲ್ಲಾ ಬಡ್ತಿ ಉಪನ್ಯಾಸಕರಿಗೆ ಆದೇಶ ಮಾಡಿಸಿಕೊಟ್ಟಿದ್ದೇವೆ. ಎಲ್ಲಾ ಸಮಸ್ಯೆಗಳನ್ನು ತಾಳ್ಮೆಯಿಂದ ಪರಿಹರಿಸುವಂತಹ ಸಂದರ್ಭ ಕೂಡಿ ಬಂದಿದೆ. ನಮ್ಮ ಜನರ ಆಕ್ಷೇಪೆಯು ಅದೇ ಇದೆ.

(ಗೊಂದಲ)

**ಶ್ರೀ ಅರುಣ ಶಹಾಪುರ, (ಶಿಕ್ಷಕರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಅವರಿಂದಲೇ ಎಲ್ಲವೂ ಸೃಷ್ಟಿಯಾಗಿದ್ದು.

(ಗೊಂದಲ)

**ಶ್ರೀ ಕೆ.ಟಿ.ಶ್ರೀಕಂಠೇಗೌಡ:-** ಮಾನ್ಯ ಸಭಾಪತಿಯವರೇ, ಎಲ್ಲಾ ಕಾಲಕ್ಕೂ ಸೃಷ್ಟಿಯಾಗಿವೆ. ಅವರಿಂದ ಸೃಷ್ಟಿಯಾಗಿರುವುದು ಬಹುಪಾಲು. ಈಗ ಸೃಷ್ಟಿಯಾಗಿರುವುದು ಒಂದರೆಡು ಮಾತ್ರ ಅಷ್ಟೇ. 20 ತಿಂಗಳ ಅವಧಿಯಲ್ಲಿ ಮಾನ್ಯ ಮುಖ್ಯಮಂತ್ರಿಗಳಾದ ಹೆಚ್.ಡಿ.ಕುಮಾರಸ್ವಾಮಿಯವರು ex-gratia ಅನ್ನು ಮತ್ತು ವಿಶೇಷ ಭತ್ಯೆಯನ್ನು ಕೊಟ್ಟವರು. ಹಾಗಾಗಿ, ಮಾನ್ಯ ಸದಸ್ಯರಾದ ಡಾ||ವೈ.ಎ.ನಾರಾಯಣಸ್ವಾಮಿಯವರು ಆತಂಕ ಪಡುವಂತಿಲ್ಲ. ತಮ್ಮ ಪರವಾಗಿ ಶಿಕ್ಷಕರ ಪರವಾಗಿ ಸರ್ಕಾರದಲ್ಲಿ ಕೊರಿಕೊಳ್ಳುತ್ತೇನೆ.

(ಗೊಂದಲ)

**ಶ್ರೀ ನಿರಾಣಿ ಹಣಮಂತ್ ರುದ್ರಪ್ಪ (ಪದವೀಧರರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಅವರು ಎಲ್ಲವನ್ನೂ ಮಾಡಿದ್ದಾರೆ. ಇನ್ನೂ ಕಾಲ್ಪನಿಕ ವೇತನ ಮತ್ತು ಎನ್.ಪಿ.ಎಸ್. ಅನ್ನು ತಕ್ಷಣವೇ ಮಾಡಲಿ.

**ಶ್ರೀ ಕೆ.ಟಿ.ಶ್ರೀಕಂಠೇಗೌಡ:-** ಮಾನ್ಯ ಸಭಾಪತಿಯವರೇ, ಇದು ಮಾನವೀಯತೆಯ ಹಿನ್ನೆಲೆಯಲ್ಲಿ ಶಿಕ್ಷಕರಿಗೆ ಕೊಡುವಂತಹ ಗೌರವದ ಹಿನ್ನೆಲೆಯಲ್ಲಿ ದಯಮಾಡಿ ಈ ಸಮಸ್ಯೆಯನ್ನು ಪರಿಹಾರ ಮಾಡಿ. ಶಿಕ್ಷಕರ ವಿಶ್ವಾಸಕ್ಕೆ ಪಾತ್ರರಾಗಬೇಕೆಂದು ನಾನು ಕೈಮುಗಿದು ಕೇಳಿಕೊಳ್ಳುತ್ತೇನೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಡಾ॥ ವೈ.ಎ.ನಾರಾಯಣಸ್ವಾಮಿ (ಶಿಕ್ಷಕರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಕಾಲ್ಪನಿಕ ವೇತನ ಬಡ್ತಿಯ ಬಗ್ಗೆ ಮಾನ್ಯ ಸದಸ್ಯರುಗಳಾದ ಪುಟ್ಟಣ್ಣನವರು ಪ್ರಸ್ತಾಪ ಮಾಡಿ ಮಾನ್ಯ ಮರಿತಿಬ್ಬೇಗೌಡರವರು ಅದಕ್ಕೆ ಸಪೋರ್ಟ್ ಮಾಡಿ ಮಾನ್ಯ ಮಟ್ಟೂರುರವರು, ಶ್ರೀಕಂಠೇಗೌಡರು ಮತ್ತು ಮಾನ್ಯ ಅರುಣ ಶಹಾಪುರರವರು ಮಾತನಾಡಿದಂತಹ ಎಲ್ಲಾ ಮಾತುಗಳನ್ನು ಇನ್ನೊಂದು ಬಾರಿ ನಾನು ಹೇಳದೆ, ಅದಕ್ಕೆ ನಾನು ಸಹ ಅದೇ ಅಭಿಪ್ರಾಯವನ್ನು ವ್ಯಕ್ತಪಡಿಸುತ್ತಾ, ಈ ಸದನದಲ್ಲಿ ಬಹಳ ಐತಿಹಾಸಿಕವಾದಂತಹ ನಿರ್ಧಾರವಾಗಿತ್ತು. ಆಗ ನಾನು ಸಹ ಸದನದಲ್ಲಿದ್ದೆ. ಮಾನ್ಯ ಸದಾನಂದಗೌಡರು ವಿರೋಧ ಪಕ್ಷದ ನಾಯಕರು ಆಗಿದ್ದರು. ಮಾನ್ಯ ಡಿ.ಹೆಚ್.ಶಂಕರಮೂರ್ತಿಯವರು ಸಭಾಪತಿಯವರ ಪೀಠದಲ್ಲಿದ್ದರು. ಆ ಕಡೆ ಮಾನ್ಯ ಆರ್.ವಿ.ದೇಶಪಾಂಡೆಯವರು ಶಿಕ್ಷಣ ಸಚಿವರು ಆಗಿದ್ದರು, ಅಂದಿನ ಸಭಾಪತಿಗಳ ಅಧ್ಯಕ್ಷತೆಯಲ್ಲಿ ಒಂದು ಸಭೆಯನ್ನು ಮಾಡಿ ಬಹಳ ದೊಡ್ಡ ಪ್ರಮಾಣದಲ್ಲಿ ಚರ್ಚೆ ಮಾಡಿ ಕಾಲ್ಪನಿಕ ವೇತನ ಬಡ್ತಿಯನ್ನು ಕೊಡಬೇಕೆಂದು ಹೇಳಿದಾಗ, ಮಾನ್ಯ ದೇಶಪಾಂಡೆಯವರು ನೇರವಾಗಿ 250 ಕೋಟಿ ರೂಪಾಯಿಗಳವರೆಗೆ ಕೊಡುತ್ತೇವೆಂದು ಮಾತು ಕೊಟ್ಟ ಮೇಲೆ ಅವರು ತಂದಿದ್ದ ಬಿಲ್ಲನ್ನು ಇಲ್ಲಿ ಪಾಸ್ ಮಾಡಿಕೊಟ್ಟಿದ್ದು ನಿಜ. ಆ ಬಿಲ್ಲನ್ನು ಪಾಸ್ ಮಾಡಿ ಕೊಟ್ಟಾಗ ಅವರು ಕೊಟ್ಟ ಮಾತು ಇದುವರೆಗೆ ಏಕೆ ಉಳಿಸಿಕೊಳ್ಳಲಿಲ್ಲ? ಅದಕ್ಕೆ ಅಧಿಕಾರಿಗಳು ಗೊಂದಲ ಸೃಷ್ಟಿ ಮಾಡಿದರು. ಅದಕ್ಕೆ 5 ಸಾವಿರ ಕೋಟಿ ರೂಪಾಯಿಗಳು ಖರ್ಚು ಆಗುತ್ತದೆ, ಧಾರವಾಡದ ಆಯುಕ್ತರು, ಗುಲ್ಬರ್ಗಾದ ಆಯುಕ್ತರು, ಬೆಂಗಳೂರಿನ ಆಯುಕ್ತರು, ಪದವಿ ಪೂರ್ವ ಇಲಾಖೆಯ ನಿರ್ದೇಶಕರು, ಪದವಿ ಕಾಲೇಜಿನ ಆಯುಕ್ತರು ಇವರೆಲ್ಲಾ ಇಷ್ಟ ಬಂದ ಹಾಗೆ ಲೆಕ್ಕಗಳನ್ನು ಕೊಟ್ಟರು. ಅವರು ಕೊಟ್ಟಂತಹ ಲೆಕ್ಕಗಳನ್ನು scrutiny ಮಾಡುವುದಕ್ಕೆ ಮಾನ್ಯ ಬಸವರಾಜ ಹೊರಟ್ಟಿಯವರ ಅಧ್ಯಕ್ಷತೆಯಲ್ಲಿ ಒಂದು ಸಮಿತಿಯನ್ನು ಮಾಡಿ ಎಲ್ಲವನ್ನು ಕ್ರೋಢೀಕರಿಸಿ ಕೇವಲ 359.84 ಕೋಟಿ ರೂಪಾಯಿಗಳು ಮಾತ್ರ ಆಗುತ್ತದೆ ಎನ್ನುವ conclusion ಗೆ ಬಂದು 2015 ರಲ್ಲಿ ಒಂದು ವರದಿಯನ್ನು ಸಲ್ಲಿಸಿದರು. 2ನೇ ವರದಿಯನ್ನು ಫೆಬ್ರವರಿ 2018 ರಲ್ಲಿ ಸಲ್ಲಿಸಿದರು. ಅವರೇ ಕೊಟ್ಟಂತಹ ಮಾತನ್ನು ಅವರೇ ಉಳಿಸಿಕೊಳ್ಳಲಿಲ್ಲವೆಂದರೆ, ಅದು ಈ ಸದನಕ್ಕೆ ಮಾಡಿದಂತಹ ಅವಮಾನ ಅಲ್ಲವೇ?

ಮಾನ್ಯ ಸಭಾಪತಿಯವರಿಗೆ ಆ ಕಡತವನ್ನು ತೆಗೆದು ತೋರಿಸಿ. ಆ ದಿವಸ ತಾವು ಇದ್ದೀರಿ, ಆ ಕಡತವನ್ನು ತೆಗೆದು ನೋಡಬೇಕು. ಅಂದು ಉನ್ನತ ಶಿಕ್ಷಣ ಸಚಿವರಾಗಿದ್ದಂತಹ ಮಾನ್ಯ ದೇಶಪಾಂಡೆಯವರು 250 ಕೋಟಿ ರೂಪಾಯಿಗಳನ್ನು ಕೊಡುತ್ತೇವೆ. ಇನ್ನೂ ಸ್ವಲ್ಪ ಜಾಸ್ತಿ ಆಗುತ್ತದೆ ಎಂದು ಹೇಳಿದ್ದಕ್ಕೆ 300 ಕೋಟಿ ರೂಪಾಯಿಗಳವರೆಗೆ ಕೊಡುತ್ತೇವೆ ಎನ್ನುವಂತಹ ಮಾತನ್ನು ಹೇಳಿದರು. ಅದರ ಬಗ್ಗೆ ಉಲ್ಲೇಖ ಇದೆ. ದಯವಿಟ್ಟು ಅದನ್ನು ನೋಡಬೇಕು. ಈ ಘನ ಸರ್ಕಾರದ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಘನ ಮಂತ್ರಿಗಳು ಆ ಒಂದು ಆಶ್ವಾಸನೆಯನ್ನು ಕೊಡಬೇಕಾದರೆ, ಮತ್ತು ಅದು ಕಡತದಲ್ಲಿ ಇರಬೇಕಾದರೆ ಆ ಆಶ್ವಾಸನೆಯನ್ನು ಈಡೇರಿಸದೇ ಇರುವುದು ಈ ಸರ್ಕಾರಕ್ಕೆ ಶೋಭೆ ತರುತ್ತದೆಯೇ? ಈ ಘನ ಸರ್ಕಾರದ ಘನ ಮಂತ್ರಿಗಳಾದ ಮಾನ್ಯ ಜಿ.ಟಿ.ದೇವಗೌಡರು ಸದನದಲ್ಲಿ ಇದ್ದಾರೆ. ಮಾನ್ಯ ಸಚಿವರು ಇನ್ನೂ ಧರಣಿ ಮಾಡುತ್ತಿರುವ tent ಬಳಿ ಹೋಗಿಲ್ಲ ಎಂದು ಕಾಣುತ್ತದೆ. ಕರ್ನಾಟಕ ರಾಜ್ಯದ ಎಲ್ಲಾ ತಾಲ್ಲೂಕುಗಳಿಂದ ಒಂದೊಂದು ಬಸ್‌ನ್ನು ಮಾಡಿಕೊಂಡು ಬಂದಿದ್ದಾರೆ. ಸುಮಾರು ಐದು ಸಾವಿರ ಜನ ಕಾಲ್ಪನಿಕ ವೇತನ ಬಡ್ತಿಗೆ ಅರ್ಹರಾಗಿರುವಂತಹ ಶಿಕ್ಷಕ ಸಮುದಾಯದ ಬಂಧುಗಳು ಮತ್ತು ತಾಯಂದಿರುಗಳು ಬಂದಿದ್ದಾರೆ. ಮಾನ್ಯ ಸಚಿವರ ಉತ್ತರವನ್ನು ನೋಡಿದರೆ, ಹಳ್ಳಿಗಳ ಕಡೆ 'ಹಾವು ಸಾಯಬಾರದು ಮತ್ತು ಕೋಲು ಮುರಿಯಬಾರದು' ಎಂಬ ಗಾದೆ ಮಾತನ್ನು ಹೇಳುತ್ತಾರೆ. ಮಾನ್ಯ ಆರ್.ವಿ.ದೇಶಪಾಂಡೆಯವರು ಆಶ್ವಾಸನೆ ಕೊಟ್ಟು ಕೊಟ್ಟು ಹಾಗೆಯೇ ಮುಂದಕ್ಕೆ ಹೊರಟು ಹೋದರು. ಇವತ್ತು ಬೆಳಿಗ್ಗೆ ನಾವೆಲ್ಲರೂ ಸೇರಿ ಪಕ್ಷಾತೀತವಾಗಿ ಮಾನ್ಯ ಬಸವರಾಜ ಹೊರಟ್ಟಿಯವರನ್ನು ಹೊಗಳಿದ್ದು ಹೊಗಳಿದ್ದೆ, ಅವರ ಘನತೆ, ಅವರು ನಡೆದುಕೊಂಡ ರೀತಿ, ಅವರ ಪ್ರತಿಭೆ, ಅವರು ಸದನ ನಡೆಸಿಕೊಟ್ಟ ಒಂದು ವ್ಯವಸ್ಥೆ, seniority, honesty, integrity, ಎಲ್ಲವನ್ನು ಹೇಳಿದ್ದೇವೆ. ಆದರೆ ಅಂತಹವರು ಕೊಟ್ಟಂತಹ ವರದಿಯನ್ನು ಒಪ್ಪಿಕೊಳ್ಳಲಿಲ್ಲವೆಂದರೆ ಈ ಸರ್ಕಾರಕ್ಕೆ ಏನಾದರೂ ಶೋಭೆ ತರುತ್ತದಯೇ?

**ಶ್ರೀ ಅರುಣ ಶಹಾಪುರ (ಶಿಕ್ಷಕರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರಾದ ನಾರಾಯಣಸ್ವಾಮಿಯವರು ಬಹಳ ಒಳ್ಳೆಯ ಮಾತುಗಳನ್ನು ಹೇಳಿದ್ದಾರೆ. ಮಾನ್ಯ ಬಸವರಾಜ ಹೊರಟ್ಟಿಯವರು ಏಳು ಬಾರಿ ಎಂದರೆ, 42 ವರ್ಷಗಳು ಶಾಸಕರಾಗಿ ಕೆಲಸ ಮಾಡಿದ್ದಾರೆ. ಆದರೆ, ಗುರುತಿಸಿಬೇಕಾದವರೇ ಗುರುತಿಸಲಿಲ್ಲ ಎನ್ನವಂತಹ ನೋವು ನಮಗಿದೆ.

**ಡಾ||ವೈ.ಎ.ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಯವರೇ, ನಮಗೆಲ್ಲರಿಗೂ ಮಾನ್ಯ ಬಸವರಾಜ ಹೊರಟ್ಟಿಯವರನ್ನು ಶಿಕ್ಷಣ ಸಚಿವರನ್ನಾಗಿ ಮಾಡುತ್ತಾರೆಂದು ಆಸೆ ಇತ್ತು. ಅವರೇ ವರದಿಯನ್ನು ಒಪ್ಪಿಕೊಳ್ಳುತ್ತಾರೆ ಎಂಬ ಆಸೆ ಇತ್ತು. ಆದರೆ, ಏಕೋ ಗೊತ್ತಾಗಲಿಲ್ಲ. ಮಾನ್ಯ ಬಸವರಾಜ ಹೊರಟ್ಟಿಯವರ ಮೇಲೆ ಅವರಿಗೆ ಏಕೋ ಕೋಪ ಇದೆ ಎನಿಸುತ್ತದೆ. ಯಾವ ಕಾರಣಕ್ಕೆ ಎಂದು ನಮಗೆ ಗೊತ್ತಿಲ್ಲ. ಆದರೆ, ಅಂತಹ ಒಬ್ಬ ಸಜ್ಜನ ವ್ಯಕ್ತಿ ಸಿಗುವುದು ಅಪರೂಪ. ಅವರಿಗೆ ಸ್ಥಾನಮಾನ ಕೊಡದೇ ಇರುವುದು ನಮಗೆ ಎಲ್ಲೋ ಒಂದು ಕಡೆ ನೋವು ಆಗಿದೆ. ಇದು ನಮಗೆ ದುರುಂತವಾಗಿದೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**(ಈ ಹಂತದಲ್ಲಿ ಪ್ಯಾನಲ್ ಸದಸ್ಯರಾದ ಶ್ರೀ ಮರಿತಿಬ್ಬೇಗೌಡರು ಪೀಠವನ್ನು ಅಲಂಕರಿಸಿದರು)**

**ಶ್ರೀ ಜಿ.ಟಿ.ದೇವೆಗೌಡ (ಉನ್ನತ ಶಿಕ್ಷಣ ಸಚಿವರು):-** ಮಾನ್ಯ ಸಭಾಪತಿಯವರೇ, ಅವರು ಬಂದ ಮೇಲೆ ಮಾನ್ಯ ಸದಸ್ಯರು ಹೊಗಳುವುದಕ್ಕೆ ಪ್ರಾರಂಭ ಮಾಡಿದ್ದಾರೆ.

**ಡಾ||ಎ.ವೈ.ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಯವರೇ, ಅವರೇ ಅಧ್ಯಕ್ಷರು. ಮಾನ್ಯ ಭೋಜೇಗೌಡರ ಬಗ್ಗೆ ನಮಗೆ ಗೌರವ ಇದೆ. ಮಾನ್ಯ ಭೋಜೇಗೌಡರು ಇನ್ನೂ ಬಂದು ಅರು ತಿಂಗಳು ಆಗಿಲ್ಲ. ಮಾನ್ಯ ಬಸವರಾಜ ಹೊರಟ್ಟಿಯವರು ಬಂದು 40 ವರ್ಷ ಆಗಿದೆ. ಇದನ್ನು ಯೋಚನೆ ಮಾಡಿ. ಮಾನ್ಯ ಬಸವರಾಜ ಹೊರಟ್ಟಿಯವರು ಇವತ್ತು ಬೆಳಿಗ್ಗೆ ನಾನು ಎಂ.ಎಲ್.ಸಿ. ಆಗಿ ಬಂದ ಮೇಲೆ ಯಾರೋ ಒಬ್ಬ ಸದಸ್ಯರು ಹುಟ್ಟಿ ಈ ಸದನಕ್ಕೆ ಬಂದಿದ್ದಾರೆಂದು ಹೇಳಿದರು. ಅಂತಹ ಒಬ್ಬ ಹಿರಿಯ ಸದಸ್ಯರ ವರದಿಗೆ ಗೌರವ ಇಲ್ಲವೆಂದರೆ, ಮಾನ್ಯ ಜಿ.ಟಿ.ದೇವೆಗೌಡರ ಇಲಾಖೆಯಲ್ಲಿ ಬೇರೆ ವ್ಯವಸ್ಥೆಗೆ ಗೌರವ ಇರುತ್ತದೆಯೇ? ಮಾನ್ಯ ಸಚಿವರು ಕೊಟ್ಟಿರುವಂತಹ ಉತ್ತರದಲ್ಲಿ ಉಪ್ಪು, ಹುಳಿ, ಸಾರು ಏನೂ ಇಲ್ಲ. ಮಾನ್ಯ ಸಭಾಪತಿಯವರೇ, ಮೈಸೂರು ಕಡೆ ಉಪ್ಪು ಸಾರು ಎಂದು ಹೇಳುತ್ತಾರೆ, ಆ ಸಾರಿನಲ್ಲಿ ಉಪ್ಪು ಇಲ್ಲ, ಹುಳಿಯು ಇಲ್ಲ, ಕಾರವು ಇಲ್ಲ. ಆದ್ದರಿಂದ, ದಯವಿಟ್ಟು ಈ ಉತ್ತರವನ್ನು ವಾಪಸ್ಸು ತೆಗೆದುಕೊಳ್ಳಲಿ. ಈ ಸರ್ಕಾರಕ್ಕೆ ಗೌರವ ಇರುತ್ತದೆ. ಚರ್ಚೆಗೆ ಅವಕಾಶ ಮಾಡಿಕೊಟ್ಟಿದ್ದಾರೆ. ನಮ್ಮ ಯಾರ ಮಾತನ್ನು ಅವರು ಕೇಳುವುದು ಬೇಡ. ಈಗ ಮಾನ್ಯ ಬಸವರಾಜ ಹೊರಟ್ಟಿಯವರು ಇದರ ಬಗ್ಗೆ ಚರ್ಚೆ ಮಾಡುತ್ತಾರೆ. ಅವರ ಮಾತನ್ನಾದರೂ ಕೊನೆಯ ಪಕ್ಷ ಕೇಳಲಿ. ಅವರ ವರದಿಗೆ ಗೌರವ ಕೊಡಿ. 300 ಕೋಟಿ ರೂಪಾಯಿಗಳನ್ನು ಕೊಡುತ್ತೇವೆಂದು ಹೇಳಿದ್ದಾರೆ. ಇನ್ನೂ ಬೇಕಾಗಿರುವುದು ಕೇವಲ 59.84 ಕೋಟಿ ರೂಪಾಯಿಗಳು ಬೇಕಾಗಿರುವುದು ಅಲ್ಲವೇ ಮಾನ್ಯ ಶ್ರೀ ಕಂಠೇಗೌಡರೇ, ಮಾನ್ಯ ಶ್ರೀಕಂಠೇಗೌಡರು, ಭೋಜೇಗೌಡರು, ಮರಿತಿಬ್ಬೇಗೌಡರು ಎಲ್ಲರೂ ಸೇರಿ 11 ಆದೇಶಗಳನ್ನು ಮಾಡಿಸಿದ್ದಾರೆ.

**ಶ್ರೀ ಐವನ್ ಡಿ'ಸೋಜ (ನಾಮನಿರ್ದೇಶಿತರು):-** ಮಾನ್ಯ ಸಭಾಪತಿಯವರೇ, ಅವರು 25 ವರ್ಷಗಳ ಕಾಲ ಇದರ ಬಗ್ಗೆ ಕಾದಿದ್ದಾರೆ. ಈ ತಿಂಗಳ 22 ನೇ ದಿನಾಂಕದವರೆಗೆ ಏಕೆ ಕಾಯಬಾರದು?

**ಡಾ||ಎ.ವೈ.ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ದಾರಿ ತಪ್ಪಿಸುವಂತಹ ಮಾತನ್ನು ಹೇಳುತ್ತಿದ್ದಾರೆ.

(ಗೊಂದಲ)

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಡಾ॥ಎ.ವೈ.ನಾರಾಯಣಸ್ವಾಮಿ:–** ಮಾನ್ಯ ಸಭಾಪತಿಯವರೇ, ಕಾಂಗ್ರೆಸ್ ಸರ್ಕಾರ ಇದ್ದಾಗ ಈ ಕೆಲಸವನ್ನು ಮಾಡಲಿಕ್ಕೆ ಆಗಲಿಲ್ಲ. ಈಗ ಮಾನ್ಯ ಕುಮಾರಸ್ವಾಮಿಯವರು ಮುಖ್ಯಮಂತ್ರಿಯಾಗಿದ್ದಾರೆ. ಅವರಿಗೆ ಮಾಡುವುದಕ್ಕೆ ಬಿಡಿ.

(ಗೊಂದಲ)

**ಶ್ರೀ ಅರುಣ ಶಹಾಪುರ:–** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಹೇಳಿದ್ದನ್ನು ನಾವು ಒಪ್ಪಿಕೊಳ್ಳುತ್ತೇವೆ. ಈ ತಿಂಗಳ 22ನೇ ದಿನಾಂಕದಂದು ಮಾನ್ಯ ಬಸವರಾಜ ಹೊರಟ್ಟಿಯವರಿಗೆ ಸ್ಥಾನಮಾನ ಕೊಡಲಿಲ್ಲವೆಂದರೆ, ಅವರು ರಾಜೀನಾಮೆ ಕೊಡುತ್ತಾರೆಯೇ ಅದನ್ನು ಅವರು ಹೇಳಲಿ.

**ಡಾ॥ ವೈ.ಎ.ನಾರಾಯಣಸ್ವಾಮಿ:–** ಮಾನ್ಯ ಸಭಾಪತಿಯವರೇ, ಮಾನ್ಯ ಸಿದ್ದರಾಮಯ್ಯನವರು ಮುಖ್ಯಮಂತ್ರಿಯಾಗಿದ್ದರು, ಮಾನ್ಯ ದೇಶಪಾಂಡೆಯವರು ಸಚಿವರಾಗಿದ್ದರು, ಎಲ್ಲರೂ ಇದ್ದರು. ಆದರೆ ಇನ್ನು ಮಾಡುವುದಕ್ಕೆ ಆಗಿಲ್ಲ.

(ಗೊಂದಲ)

**ಶ್ರೀ ಐವನ್ ಡಿ'ಸೋಜ:–** ಮಾನ್ಯ ಸಭಾಪತಿಯವರೇ, ಯಾರು ವರದಿ ಕೊಟ್ಟಿದ್ದಾರೋ ಅವರೇ ಮಂತ್ರಿಯಾಗುವಂತಹ ಸಾಧ್ಯತೆ ಇದೆ. ಅದಕ್ಕೆ ಈ ತಿಂಗಳ 22ರವರೆಗೆ ಕಾಯಿರಿ ಎಂದು ಹೇಳಿದೆ ಅಷ್ಟೇ.

(ಗೊಂದಲ)

**ಡಾ॥ವೈ.ಎ.ನಾರಾಯಣಸ್ವಾಮಿ:–** ಮಾನ್ಯ ಸಭಾಪತಿಯವರೇ, ನಾನು ಹೆಚ್ಚಿಗೆ ಮಾತನಾಡುವುದಕ್ಕೆ ಹೋಗುವುದಿಲ್ಲ. ಇನ್ನೂ ಬಹಳ ಜನ ಸದಸ್ಯರು ಮಾತನಾಡುವವರು ಇದ್ದಾರೆ. ಆದ್ದರಿಂದ, ದಯವಿಟ್ಟು ಈ ಉತ್ತರವನ್ನು ವಾಪಸ್ಸು ಪಡೆದುಕೊಳ್ಳಬೇಕೆಂದು ಸರ್ಕಾರಕ್ಕೆ ಮನವಿ ಮಾಡಿಕೊಳ್ಳುತ್ತೇನೆ.

**ವೈಸ್ ಛೇರ್ಮನ್:–** ಮಾನ್ಯ ಸದಸ್ಯರಾದ ನಾರಾಯಣಸ್ವಾಮಿಯವರೇ, ಬೇಡ.

(404)12–12–2018(6–20)ಎಂವಿ–ಬಿಎನ್ಎಸ್

**(ಛೇರ್ಮನ್‌ರವರ ಉಪಸ್ಥಿತಿ)**

**ಡಾ॥ ವೈ.ಎ.ನಾರಾಯಣಸ್ವಾಮಿ (ಮುಂದು...):–**

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಮಾನ್ಯ ಮಂತ್ರಿಗಳು ಈ ಉತ್ತರವನ್ನು ವಾಪಸ್ಸು ಪಡೆಯಬೇಕು. ಈ ಉತ್ತರದಲ್ಲಿ ಅವರ ತಪ್ಪನ್ನು ಅವರೇ ಎತ್ತಿ ಹೇಳಿದ್ದಾರೆ. ಅಧಿನಿಯಮವನ್ನು ಕೋರ್ಟ್‌ನಲ್ಲಿ struck down ಮಾಡಿದ್ದಾರೆ ಎಂದರೆ, ಸರ್ಕಾರಕ್ಕೆ ಅದಕ್ಕಿಂತ ಅವಮಾನ ಬೇಕೆ. ಕಾನೂನನ್ನು ಮಾಡಿದ ಮೇಲೆ ಆ ಕಾನೂನನ್ನು struck down ಮಾಡಿದ್ದಾರೆ ಎಂದು ಹೇಳುವುದಕ್ಕೆ ಸರ್ಕಾರಕ್ಕೆ ನಾಚಿಕೆಯಾಗುವುದಿಲ್ಲವೇ? ಅದರ ವಿರುದ್ಧ stay ತೆಗೆದುಕೊಂಡು ಬರುತ್ತಾರೆ. ಅದಕ್ಕಿಂತ ನಾಚಿಕೆ ಬೇಕೆ? ದಯವಿಟ್ಟು ಇವುಗಳನ್ನೆಲ್ಲಾ ಚರ್ಚೆ ಮಾಡುವುದು ಬೇಡ. ಇದನ್ನು ವಾಪಸ್ಸು ತೆಗೆದುಕೊಂಡು, ದಯವಿಟ್ಟು ನೀವು ಕಾಲ್ಪನಿಕ ವೇತನ ಬಡ್ತಿಯ ಬಗ್ಗೆ ಶ್ರೀ ಬಸವರಾಜ ಹೊರಟ್ಟಿಯವರ ನೇತೃತ್ವದ ಸಮಿತಿಯ ವರದಿಯನ್ನು ಅನುಷ್ಠಾನಕ್ಕೆ ತಂದು, ಆದೇಶ ಮಾಡಿಸುವಂತಹ ಉತ್ತರವನ್ನು ಕೊಡಬೇಕೆಂದು ನಾನು ಆಗ್ರಹ ಮಾಡುತ್ತೇನೆ.

**ಶ್ರೀ ಪುಟ್ಟಣ್ಣ (ಶಿಕ್ಷಕರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಇದನ್ನು struck down ಮಾಡಿದ್ದಾರೆಂದು, ಇದನ್ನು withdraw ಮಾಡಿ ಎಂದು ಸದಸ್ಯರಾದ ಡಾ||ವೈ.ಎ.ನಾರಾಯಣ ಸ್ವಾಮಿಯವರು ಹೇಳಿದರು. ಅದು ಆಗುವುದಿಲ್ಲ. ಸರ್ಕಾರದವರು ಕಾಯಿದೆ ಮಾಡಿದ ಸಂದರ್ಭದಲ್ಲಿ ಅಂದರೆ with effect from dated 01.06.1995 ಎಂದು ಮಾಡಿದರು. ಹಾಗಾಗಿ ಏನಾಯಿತು ಎಂದರೆ, ಇವರು ನಮ್ಮನ್ನು ಒಪ್ಪಿಸಿ ನಮಗೆ ಮೋಸ ಮಾಡಿದರು ಕೂಡ, ಅವರಿಗೆ ಕೋರ್ಟ್ ನ್ಯಾಯ ನೀಡಿತು. ಕಾಯಿದೆಯನ್ನು ನೀವು 1995ರಿಂದ ಮಾಡುವುದಕ್ಕೆ ಬರುವುದಿಲ್ಲ, ಅವರು ಎಂದಿನಿಂದ ಮಾಡಿದ್ದಾರೆ ಅಂದಿನಿಂದ ಮಾಡಿ ಎಂದು ಹೇಳಿದ್ದಾರೆ. ಆ ರೀತಿ ಹೇಳಿ struck down ಮಾಡಿದ್ದಾರೆ. ಅದು ಸರಿ ಇದೆ. ಅದಕ್ಕೆ ನಾನು ಹೇಳುವುದೇನೆಂದರೆ, ಇದು ನಿಮಗೆ ಅವಮಾನ ಆಗುವುದಿಲ್ಲ, ಇದು ಇಡೀ ಸದನಕ್ಕೆ ಅವಮಾನವಾಗುತ್ತದೆ. ದಯವಿಟ್ಟು ಸುಪ್ರೀಂ ಕೋರ್ಟ್‌ನಲ್ಲಿ ಆ ಅವಮಾನವನ್ನು ಅನುಭವಿಸುವುದಕ್ಕೆ ಬಿಡಬೇಡಿ. ನೀವು ಸುಪ್ರೀಂ ಕೋರ್ಟ್‌ನಲ್ಲಿ ಸ್ಟೇ ತೆಗೆದುಕೊಂಡ ತಕ್ಷಣಕ್ಕೆ ನೀವು ಗೆದ್ದ ಹಾಗೆ ಅಲ್ಲ. ಯಾವ ಕೋರ್ಟ್ ಕೂಡ 1995ರಿಂದ ಪೂರ್ವಾನ್ವಯವಾಗಿ ನಾವು ಕಾಯಿದೆ ಮಾಡುತ್ತೇವೆಂದರೆ ಅದನ್ನು ಯಾರು ಸಹ ಒಪ್ಪಿಕೊಳ್ಳುವುದಿಲ್ಲ. ಇದು ತಮಗೆ ಅರ್ಥವಾಗಿರಬಹುದು. ಅದನ್ನು ನಾವು ಒಪ್ಪಿಕೊಂಡಿರುವುದು ಏಕೆಂದರೆ, ನೀವು 300 ಕೋಟಿ ರೂಪಾಯಿಗಳನ್ನು ಕೊಟ್ಟು ಅದನ್ನು ಪರಿಹಾರ ಮಾಡುತ್ತೇವೆಂದು ಹೇಳಿದ್ದಕ್ಕೆ ನಾವು ಒಪ್ಪಿಕೊಂಡಿದ್ದೇವೆ. ನೀವು ಸುಪ್ರೀಂ ಕೋರ್ಟ್‌ನಲ್ಲಿ ಸ್ಟೇ ತಂದಿದ್ದೇವೆಂದು ಸುಮ್ಮನೆ ಕುಳಿತುಕೊಂಡರೆ ಅದು ಸರಿ ಹೋಗುವುದಿಲ್ಲ. ಅದು ಸುಪ್ರೀಂ ಕೋರ್ಟ್‌ನಲ್ಲೂ ಕೂಡ struck down ಆಗುತ್ತದೆ. ದಯವಿಟ್ಟು ಏನು ಈ 359 ಕೋಟಿ ರೂಪಾಯಿಗಳನ್ನು ಹೇಳಿದ್ದಾರೆ, ಅದನ್ನು ಕೊಡುವ ಮುಖಾಂತರ

ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಈ ಸಮಸ್ಯೆಯನ್ನು ಬಗೆಹರಿಸಿ. ನಾವು–ನೀವು; ಅವರು–ಇವರು ಎನ್ನುವುದು ಬೇಡ, ಎಲ್ಲರೂ ಒಂದೆ. ದಯವಿಟ್ಟು ಈ ಸಮಸ್ಯೆಯನ್ನು ಬಗೆಹರಿಸಿ.

**ಶ್ರೀ ಎಸ್.ಎಲ್.ಭೋಜೇಗೌಡ (ಶಿಕ್ಷಕರ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಅವಕಾಶಕ್ಕಾಗಿ ಧನ್ಯವಾದಗಳು. ನಮ್ಮ ಭೀಷ್ಮ ಶ್ರೀ ಬಸವರಾಜ ಹೊರಟ್ಟಿ ಸಾಹೇಬರು ಇಲ್ಲೇ ಕುಳಿತಿದ್ದಾರೆ. ಸರ್ಕಾರ ಒಂದು ಸಮಿತಿಯನ್ನು ಏತಕ್ಕೋಸ್ಕರ ನೇಮಕ ಮಾಡುತ್ತದೆ? ಅದು ಯಾವುದೇ ಸರ್ಕಾರವಿರಲಿ. ಸಮಿತಿಯ ಮೇಲೆ ವಿಶ್ವಾಸವಿಟ್ಟು ಆ ಸಮಿತಿಯಿಂದ ಏನಾದರೂ ವರದಿ ಬರಲಿ. ಅದರಿಂದ ಸರ್ಕಾರಕ್ಕೆ ಕಹಿ ಇರಲಿ, ಸಿಹಿ ಇರಲಿ. ಯಾವ ವಿಚಾರವಾಗಿ ಆ ಸಮಿತಿ ವರದಿಯನ್ನು ಕೊಡಬೇಕೆಂದು ಕೇಳಿದರೆ, ಆ ಸಮಿತಿ ವರದಿಯನ್ನು ಕೊಟ್ಟ ನಂತರ, ಅದನ್ನು ಅನುಷ್ಠಾನ ಮಾಡಬೇಕಾಗಿರುವುದು ಯಾರ ಕರ್ತವ್ಯ? ಅದು ಯಾವುದೇ ಸರ್ಕಾರವಿರಲಿ, ನಾನು ಅದು–ಇದು ಎಂದು ಹೇಳುವುದಿಲ್ಲ. ಇದು ಸುಮಾರು 20–25 ವರ್ಷಗಳಿಂದ ಇರುವಂತಹ ಸಮಸ್ಯೆ. ಈ ವಿಚಾರದಲ್ಲಿ ಪಕ್ಷಾತೀತವಾಗಿ ನಾವೆಲ್ಲರೂ ಸಹ ಒಂದೆ.

ಇದು 'ಕಾಲ್ಪನಿಕ ವೇತನ', ಇದಕ್ಕೆ ಎಂತಹ ಹೆಸರನ್ನು ಇಟ್ಟಿದ್ದಾರೆ ನೋಡಿ. ಇದರ ಬಗ್ಗೆ ನನಗೆ ಗೊತ್ತಿಲ್ಲ. 'ಕಾಲ್ಪನಿಕ ವೇತನ' ನಾವು ಯಾವುದಾದರೂ ಚಲನಚಿತ್ರವನ್ನು ನೋಡಿದರೆ, 'ಈ ಸಂದರ್ಭದಲ್ಲಿ ಬರುವ ಎಲ್ಲಾ ಸನ್ನಿವೇಶಗಳು ಹಾಗೂ ಪಾತ್ರಗಳು ಕೇವಲ ಕಾಲ್ಪನಿಕ ಮಾತ್ರ' ಎಂದು ಹೇಳುತ್ತಾರೆ. ಅಂದರೆ ಇದು ಕಾಲ್ಪನಿಕವೆ? ಅಂದರೆ ನನ್ನ ಪ್ರಕಾರ ವೈಯಕ್ತಿಕವಾಗಿ ಹೇಳಬೇಕಾದರೆ ಇದಕ್ಕೆ ಕಾಲ್ಪನಿಕ ವೇತನವೆಂದು ಹೆಸರನ್ನು ಇಟ್ಟಿರುವುದೇ ತಪ್ಪು. It is a matter of right. ಶಿಕ್ಷಕರು ನಮಗೆ ಹಿಂದಿನಿಂದ ಏನು ಕೊಡುವುದು ಬೇಡ, ಇಲ್ಲಿಂದ ಏನು ಇದೆ ಅದನ್ನು ನೀಡಿ ಎಂದು ಹೇಳುತ್ತಾರೆ. ಅದು ಸುಪ್ರೀಂ ಕೋರ್ಟ್ ಮತ್ತು ಹೈಕೋರ್ಟ್‌ನಲ್ಲಿ ತೀರ್ಮಾನವಾಗಿದೆ. ಪುಣ್ಯಕ್ಕೆ ಅವರು contempt proceedings ಅನ್ನು initiate ಮಾಡಿಲ್ಲ, ಅದನ್ನು ಏಕೆ ಮಾಡಿಲ್ಲವೆಂದರೆ ಅವರೆಲ್ಲರೂ ಸಹ ಗೌರವಾನ್ವಿತ ಶಿಕ್ಷಕರಿದ್ದಾರೆ. ಪಾಪ, ಅವರಿಗೆ ಅಷ್ಟೊಂದು ಧೈರ್ಯ ಸಾಲದು. ಹಾಗಾಗಿ ಅವರು ಸರ್ಕಾರದ ಮೇಲೆ contempt proceedings ಅನ್ನು initiate ಮಾಡುವುದು ಎಷ್ಟರಮಟ್ಟಿಗೆ ಸರಿ ಎಂದು ಇಲ್ಲಿಯವರೆಗೂ ಸಹಿಸಿಕೊಂಡು ಬಂದಿದ್ದಾರೆ. ಹಾಗಾಗಿ ನಾನು ಹೇಳುವುದು ಇದಕ್ಕೆ ಹಲವಾರು ಕೋರ್ಟ್‌ನ ಆದೇಶಗಳಿವೆ. ಮೊನ್ನೆ ಹೈಕೋರ್ಟ್‌ನಲ್ಲಿ ಆದಂತಹ ಇತ್ತೀಚಿನ ಒಂದು ಆದೇಶವನ್ನು ನೋಡಿದ್ದೇನೆ. ಉಡುಪಿ ಜಿಲ್ಲೆಯ 45 ಜನ ಮಾತ್ರ ಕಾಲ್ಪನಿಕ ವೇತನಕ್ಕೆ ಸಂಬಂಧಪಟ್ಟಂತೆ ಅರ್ಜಿ ಹಾಕಿದ್ದಾರೆ. ಆ 45 ಜನಕ್ಕೆ ಮಾತ್ರ ಕೊಟ್ಟಿದ್ದಾರೆ. ನಾನು ಆ ಆದೇಶವನ್ನು

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಇಟ್ಟುಕೊಂಡು ಮತ್ತೆ ಅರ್ಜಿಯನ್ನು ಸಂಬಂಧಪಟ್ಟಂತಹ ಇಲಾಖೆಯ ಅಧಿಕಾರಿಗಳಿಗೆ ನೀಡಿದ್ದೇನೆ. ಈಗ ಇರುವಂತಹ ವಿಚಾರದಲ್ಲಿ 359 ಕೋಟಿ ರೂಪಾಯಿಗಳು ಎಂದು ಸದಸ್ಯರಾದ ಮಾನ್ಯ ಡಾ॥ ವೈ.ಎ.ನಾರಾಯಣ ಸ್ವಾಮಿಯವರು ಮಾತನಾಡುವಾಗ ಹೇಳಿದರು. ಅಧಿಕಾರಿಗಳು ದಯಮಾಡಿ ಇದನ್ನು ತಪ್ಪು ತಿಳಿಯಬಾರದು, ಇದಕ್ಕೆ ಸರಿಯಾದ ಮಾಹಿತಿಯನ್ನು ಕೊಡುವಲ್ಲಿ ಸಂಬಂಧಪಟ್ಟಂತಹ ಅಧಿಕಾರಿಗಳು ವಿಫಲವಾಗಿದ್ದಾರೆ. ಅವರು ಕೊಟ್ಟಿರುವಂತಹ ಮಾಹಿತಿಯಲ್ಲಿ ನಾಲ್ಕರಿಂದ ಐದು ಸಾವಿರ ಕೋಟಿ ಎಂದು ಹೇಳುತ್ತಿದ್ದಾರೆ, ಅದು ಅಕ್ಷರಶಃ ಸುಳ್ಳು. ಅದನ್ನು ಬೇಕಾದರೆ ಪರಿಶೀಲನೆ ಮಾಡಲಿ. ಗೌರವಾನ್ವಿತ ಸಚಿವರಾದ ಮಾನ್ಯ ಜಿ.ಟಿ.ದೇವೇಗೌಡರು ಹಿರಿಯರು ಮತ್ತು ಅನುಭವಿಗಳು. ಅವರು ಕೋ-ಆಪರೇಟಿವ್ ಕಿಂಗ್, ಇದು ಒಂದು ತರಹ ಕೋ-ಆಪರೇಟಿವ್ ಇದ್ದ ಹಾಗೆ. ಕೋ-ಆಪರೇಟಿವ್‌ನಲ್ಲಿ ನಿಮ್ಮ ಜ್ಞಾನ ಎಷ್ಟು ಆಳವಾಗಿದೆ. ನೀವು ಸದಸ್ಯರಾದ ಮಾನ್ಯ ಬಸವರಾಜ ಹೊರಟ್ಟಿಯವರನ್ನು ಮತ್ತು ನಿಮ್ಮ ಅಧಿಕಾರಿಗಳನ್ನು ಕುಳ್ಳಿರಿಸಿಕೊಂಡು ಇದಕ್ಕೆ ಅರ್ಧ ಗಂಟೆ ಸಮಯವನ್ನು ವ್ಯಯ ಮಾಡಿದರೆ, ಇದು ಒಂದು ಗಂಟೆಯೊಳಗೆ ಪರಿಹಾರವಾಗುತ್ತದೆ.

ಆ ಶಿಕ್ಷಕರು ಈಗಾಗಲೇ ನಿವೃತ್ತಿ ಹೊಂದಿ ಮನೆಗೆ ಹೋಗಿದ್ದಾರೆ. ಅವರು ನಿವೃತ್ತಿ ಹೊಂದಿದಂತಹ ಗಳಿಗೆಯಿಂದ ಇವತ್ತಿನವರೆಗೂ ಅವರ ಹೆಂಡತಿ, ಮಕ್ಕಳು ಕಣ್ಣೀರು ಹಾಕುತ್ತಿದ್ದಾರೆ. ಅವರು ನಿವೃತ್ತಿ ಹೊಂದಿದ ಮೇಲೆ ಅಷ್ಟು ದುಡ್ಡು ಬರುತ್ತದೆ, ಆ ದುಡ್ಡನ್ನು ಮನೆ, ಮಕ್ಕಳಿಗೆ ಅಥವಾ ಮತ್ತೊಂದು ಮನೆ ಕಟ್ಟುವುದಕ್ಕೆ ಅಥವಾ ಬೇರೆ ಏನೇನೋ ಆಸೆಯನ್ನು ಇಟ್ಟುಕೊಂಡಿರುತ್ತಾರೆ. ಆಸೆ ಯಾರಿಗೆ ಇಲ್ಲ? ಅವರಿಗೆ ಬೇರೆ ಇನ್ನೇನು ಇದೆ? ಅವರು ನೋವಿನಿಂದ ಸರ್ಕಾರವನ್ನು ಶಪಿಸಬಾರದು. ಅವರು ಅಖಂಡ ಕರ್ನಾಟಕದಲ್ಲಿ ಬರುವಂತಹ ಎಲ್ಲಾ ಮಕ್ಕಳಿಗೆ 40 ವರ್ಷಗಳ ಸುದೀರ್ಘವಾದ ಸೇವೆಯನ್ನು ಮಾಡಿದ್ದಾರೆ. ಇದು ಅವರಿಗೆ ಕೊಡುವಂತಹ ಗೌರವವೆಂದು ತಿಳಿದುಕೊಳ್ಳಬೇಕು. ಇದಕ್ಕೆ ಈಗಲೂ ಇನ್ನು ಕಾಲ ಮಿಂಚಿಲ್ಲ, ದಯವಿಟ್ಟು ಇಲ್ಲಿ ಇರುವಂತಹವರು ಯಾರೂ ಕೂಡ ಇದರಲ್ಲಿ ರಾಜಕೀಯವನ್ನು ಬೆರೆಸುವುದಿಲ್ಲ. ಖಂಡಿತವಾಗಿ ಇದನ್ನು ಅವರಿಗೆ ಕೊಟ್ಟುಬಿಟ್ಟರೆ ಸಾಕು. ದಯಮಾಡಿ retrospective and prospective ಎರಡೂ ಆಗಬೇಕು. ಈಗ ಯಾರು ನಿವೃತ್ತಿ ಹೊಂದಿ ಮನೆಗೆ ಹೋಗಿದ್ದಾರೆ ಅವರಿಗೆ ಇಲ್ಲ, ಯಾರು ಈಗ ಬರುತ್ತಾರೆ ಅವರಿಗೆ ಇಲ್ಲಿಂದ ಅನುಷ್ಠಾನ ಮಾಡುತ್ತೇವೆ ಎನ್ನುವುದು ಬೇಡ. ಇದು ಯಾವಾಗ ಶುರುವಾಯಿತೊ, ಇದರ ವರದಿಯನ್ನು ಯಾವಾಗ ಕೊಟ್ಟರೊ ಅಲ್ಲಿಂದ ಯಾರ್‍ಯಾರು ಫಲಾನುಭವಿಗಳು ಇದಕ್ಕೆ ಅರ್ಹರಿದ್ದಾರೆಯೋ ಅವರೆಲ್ಲರಿಗೂ ಕೊಡಬೇಕೆಂಬುದು ನನ್ನ ಅಭಿಪ್ರಾಯ. ಇದಕ್ಕೆ ಎಲ್ಲರೂ ಸಹ ಸಹಮತವನ್ನು ವ್ಯಕ್ತಪಡಿಸುತ್ತಾರೆಂದು ನಾನು ಭಾವಿಸಿದ್ದೇನೆ. ದಯಮಾಡಿ ಈಗಲೂ ಇನ್ನು ಕಾಲ ಮಿಂಚಿಲ್ಲ, ಇದು ಬಹಳ ಗಂಭೀರವಾದ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಪರಿಸ್ಥಿತಿಯಾಗಿದೆ. ಸದಸ್ಯರಾದ ಮಾನ್ಯ ಬಸವರಾಜ ಹೊರಟ್ಟಿಯವರು ವರದಿ ಕೊಟ್ಟಿದ್ದಾರೆ. ಆ ವರದಿಗೆ ಅಧಿಕಾರಿಗಳನ್ನು ಕುಳ್ಳಿರಿಸಿಕೊಂಡು ಅನೇಕ ಬಾರಿ ಚರ್ಚೆ ಮಾಡಿ ಅನೇಕ ಪುಟಗಳ ವರದಿಯನ್ನು ನೀಡಿದ್ದಾರೆ. ಅವರು ಸುಮ್ಮನೆ ವರದಿಯನ್ನು ನೀಡಿಲ್ಲ. ಹಾಗಾಗಿ ಅವರ ಮೇಲೆ ಸಂಪೂರ್ಣ ವಿಶ್ವಾಸವಿಟ್ಟು ಅವರನ್ನು ಸಮಿತಿಯ ಅಧ್ಯಕ್ಷರನ್ನಾಗಿ ಮಾಡಿದ್ದಾರೆ. ಹಾಗಾಗಿ ಇದನ್ನು ಅನುಷ್ಠಾನ ಮಾಡಿದರೆ ಸರ್ಕಾರಕ್ಕೆ ಒಳ್ಳೆಯ ಹೆಸರು ಬರುತ್ತದೆ. ನೊಂದ ಜೀವಿಗಳಿಗೆ ಇದನ್ನು ಕೊಟ್ಟರೆ ಒಳ್ಳೆಯದಾಗುತ್ತದೆ ಎನ್ನುವಂತಹ ವಿಚಾರವನ್ನು ಪ್ರಸ್ತಾಪ ಮಾಡಿದ್ದೇನೆ. ಅವಕಾಶ ನೀಡಿರುವುದಕ್ಕಾಗಿ ತಮಗೆ ಮತ್ತೊಮ್ಮೆ ಧನ್ಯವಾದಗಳು.

**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ (ಶಿಕ್ಷಕರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಇದರ ಕಥೆ ಇಷ್ಟೆ ಇದೆ. ಇದು ಮೊಟ್ಟಮೊದಲಿಗೆ ಹೇಗೆ ಹುಟ್ಟಿತು ಎಂದು ಹೇಳಿದ್ದಾರೋ ಇಲ್ಲವೋ ನನಗೆ ಗೊತ್ತಿಲ್ಲ. ದಿನಾಂಕ:01.04.1987ಕ್ಕಿಂತ ಮೊದಲು, ಅಂದರೆ ಜಿಲ್ಲಾಪಂಚಾಯತ್ exist ಆಗುವುದಕ್ಕಿಂತ ಮೊದಲು, ಅನುದಾನರಹಿತವೆಂದು ಇತ್ತು. ಅನುದಾನರಹಿತ ಶಿಕ್ಷಣ ಸಂಸ್ಥೆಯನ್ನು ಮೊದಲು ಪ್ರಾರಂಭ ಮಾಡಿದರು. ಈ ಅನುದಾನರಹಿತ ಎಂದರೆ ಏನು? ಇನ್ನೂರು ರೂಪಾಯಿಗಳ ಬಾಂಡ್ ಪೇಪರ್‌ನಲ್ಲಿ ಅನುದಾನ ಕೊಡುವುದಿಲ್ಲ ಮತ್ತು ಅದನ್ನು ಕೇಳುವಂತಿಲ್ಲ ಎಂದು ಬರೆಸಿಕೊಂಡು ಕೊಟ್ಟರು. ಇದನ್ನು ಕೊಟ್ಟ ಮೇಲೆ ಬಹಳಷ್ಟು ಮಂದಿ ಇಂತಹ ಶಿಕ್ಷಣ ಸಂಸ್ಥೆಗಳನ್ನು ಪ್ರಾರಂಭ ಮಾಡಿದರು. ನಾನು ಮಂತ್ರಿಯಾದಾಗ ಅದಕ್ಕೆ ಗ್ರ್ಯಾಂಟ್ ಕೊಡುವಂತಹ ಕೆಲಸವನ್ನು ಮಾಡಿದೆ. ಹಿಂದೆ ಸನ್ಮಾನ್ಯ ಬಂಗಾರಪ್ಪನವರು ಮುಖ್ಯಮಂತ್ರಿಗಳಾಗಿದ್ದ ಸಂದರ್ಭದಲ್ಲಿ ದಿನಾಂಕ:04.08.1992ಕ್ಕಿಂತ ಮೊದಲು ಇವರು ಏನು ಮಾಡಿದರು, ಅನುದಾನರಹಿತ ಅವಧಿಯನ್ನು since from... ಮಾನ್ಯ ಎಸ್.ಆರ್.ಕಂಠಿಯವರು ಶಿಕ್ಷಣ ಮಂತ್ರಿಗಳಾಗಿದ್ದಾಗ, 1967ರಲ್ಲಿ ಐದು ವರ್ಷ ನಡೆಸಿ, ಐದು ವರ್ಷ ಆದಮೇಲೆ ಗ್ರ್ಯಾಂಟ್ ಕೊಡುತ್ತೇವೆಂದು ಹೇಳುತ್ತಾರೆ. ಆಗ ಸುಮಾರು ನೂರು ರೂಪಾಯಿ ವೇತನ ಮತ್ತು ಹತ್ತು ರೂಪಾಯಿ ಇನ್‌ಕ್ರಿಮೆಂಟ್ ಇರುತ್ತಿತ್ತು. ಆಗ ಅವರಿಗೆ 150 ರೂಪಾಯಿ ಮೂಲ ವೇತನವಿತ್ತು. ಅವರು ಐದು ವರ್ಷ ಸೇವೆ ಸಲ್ಲಿಸಿದಾಗ ಅವರಿಗೆ ನೂರು ರೂಪಾಯಿ ವೇತನವಿದ್ದರೆ, ಅವರಿಗೆ ಇನ್‌ಕ್ರಿಮೆಂಟ್ ಐದು ರೂಪಾಯಿಯಂತೆ ಮಾಡಿಕೊಡುತ್ತಿದ್ದರು. ಇದನ್ನು ಈ ರೀತಿ ಕೊಡುತ್ತಾ ಬಂದರು. ಮುಂದೆ ದಿನಾಂಕ:04.08.1992ಕ್ಕೆ ಅದನ್ನು ರದ್ದುಪಡಿಸಿದರು. ದಿನಾಂಕ:04.08.1992ಕ್ಕೆ ರದ್ದುಪಡಿಸಿದ ಕೂಡಲೆ ಕೆಲವರಿಗೆ ಕೊಟ್ಟರು ಮತ್ತೆ ಕೆಲವರಿಗೆ ಕೊಡಲಿಲ್ಲ. ದಿನಾಂಕ:04.08.1992ರ ನಂತರ ಯಾರು ಇಲ್ಲಿ ಇದ್ದಾರೆ ಅವರಿಗೆ ಕೊಡಬೇಕಾಗುತ್ತದೆ. ಆಗ ಏನಾಯಿತು ಎಂದರೆ, ಒಬ್ಬರು ಕೋರ್ಟ್‌ಗೆ ಹೋದರು, ಕೋರ್ಟ್‌ನ ಸಿಂಗಲ್ ಬೆಂಚ್ ಏನೆಂದು ಆದೇಶ ಮಾಡಿತು ಎಂದರೆ, ಯಾವ

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ದಿನಾಂಕದಿಂದ ಇವರು ನೌಕರಿಗೆ ಸೇರಿರುತ್ತಾರೆ, ಆ ದಿನಾಂಕದಿಂದ ಹಿಂದಿನದನ್ನೆಲ್ಲಾ ಕೊಡಬೇಕೆಂದು ಕೋರ್ಟ್‌ನಿಂದ ಆದೇಶವಾಯಿತು. ಆಗ ಸರ್ಕಾರ Division Bench ಗೆ ಹೋಯಿತು. ಅಲ್ಲಿ ಶ್ರೀ ಮಧುಚಂದ್‌ರವರ ಪರವಾಗಿ ಆದೇಶ ಆಯಿತು. ಅದು ಆದ ನಂತರ ಇವರು S.L.P. (Special Leave Petition) ಹಾಕಿದರು. ಆ S.L.P. ತಿರಸ್ಕೃತವಾಯಿತು, ಅದು ತಿರಸ್ಕೃತವಾದಾಗ ಸರ್ಕಾರ ಕೊಡಬೇಕೆಂದು ಸುಮಾರು ಜನ Contempt Petition ಹಾಕಿದರು. ಅವರು Contempt Petition ಹಾಕಿದಾಗ, ಸರ್ಕಾರ ಒಂದು ವಿಧೇಯಕವನ್ನು ತಂದಿತು. ಆ ವಿಧೇಯಕವನ್ನು ತಂದಾಗ ಸಚಿವರಾದ ಮಾನ್ಯ ಆರ್.ವಿ.ದೇಶಪಾಂಡೆಯವರು ಉನ್ನತ ಶಿಕ್ಷಣ ಸಚಿವರಾಗಿದ್ದರು ಹಾಗೂ ಮಾನ್ಯ ಸದಾನಂದ ಗೌಡರು ವಿರೋಧ ಪಕ್ಷದ ನಾಯಕರಾಗಿದ್ದರು ಮತ್ತು ನಾವೆಲ್ಲರೂ ಸಹ ಇದ್ದೆವು. ಆಗ ಸುಮಾರು ಹತ್ತು ಸಂಘಟನೆಯವರು ಬಂದರು. ಆಗ ನಮ್ಮ ಸದಸ್ಯರಾದ ಮಾನ್ಯ ಕೆ.ಟಿ.ಶ್ರೀಕಂಠೇಗೌಡರು ಮತ್ತು ಮಾನ್ಯ ಎಸ್.ವ್ಹಿ.ಸಂಕನೂರರವರು ಇನ್ನು ಎಂ.ಎಲ್.ಸಿ. ಆಗಿರಲಿಲ್ಲ. ಅವರೆಲ್ಲರೂ ಬಂದು ನಮಗೆ ಸುಮಾರು 285 ಕೋಟಿ ರೂಪಾಯಿಗಳನ್ನು ಕೊಟ್ಟರೆ ಸಾಕು ಎಂದಾಗ, ಅದನ್ನು ಮಾಡುತ್ತೇವೆಂದು ಹೇಳಿದರು. ಅದರ ಆಧಾರದ ಮೇಲೆ ಸರ್ಕಾರದ ಜೊತೆ ಒಂದು ಒಪ್ಪಂದವಾಯಿತು. ಸರ್ಕಾರ ಏನು ಹೇಳಿತು ಎಂದರೆ, ನಾವು 285 ಕೋಟಿ ರೂಪಾಯಿಗಳನ್ನು ಕೊಡುತ್ತೇವೆ, ಆಯಿತು ಈ ವಿಧೇಯಕವನ್ನು ಪಾಸ್ ಮಾಡಿ ಎಂದರು. ಆಗ ನಾವು ಹಿಂದಿನ ಮಾನ್ಯ ಮುಖ್ಯಮಂತ್ರಿಗಳಾದ ಸಿದ್ದರಾಮಯ್ಯನವರನ್ನು ಭೇಟಿ ಮಾಡಿದಾಗ ಅವರು ಆಯಿತು 300 ಕೋಟಿ ರೂಪಾಯಿಗಳನ್ನು ಕೊಡುತ್ತೇವೆಂದು ಹೇಳಿದರು.

**(ಮುಂದು...)**

(405)12-12-2018(06-30)ಎಲ್‌ಎಲ್-ಕೆಎಸ್

**(ವೈಸ್ ಚೇರ್ಮನ್‌ರವರ ಉಪಸ್ಥಿತಿ)**

**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ(ಮುಂದುವರೆದಿದೆ...):-**

300 ಕೋಟಿ ಕೊಡುತ್ತೇನೆಂದ ಕೂಡಲೇ ಇದು ಮುಗಿಯಿತು. ಮುಂದೆ ಕೆಲವು ಸದಸ್ಯರು ಸದನದಲ್ಲಿ ಪ್ರಶ್ನೆ ಕೇಳಿದಾಗ 4,854 ಕೋಟಿ ರೂಪಾಯಿಗಳು ಬೇಕೆಂದು ಅಧಿಕಾರಿಗಳು ವರದಿ ಕೊಟ್ಟರು. ನಂತರ ಬಹಳಷ್ಟು ಗಲಾಟೆ ಆದ ನಂತರ ನನ್ನ ಅಧ್ಯಕ್ಷತೆಯಲ್ಲಿ ಶ್ರೀ ಆರ್.ವಿ. ದೇಶಪಾಂಡೆಯವರು ಒಂದು ಸಮಿತಿ ರಚನೆ ಮಾಡಿದರು. ಸಮಿತಿ ರಚನೆಯಾದ ನಂತರ ಹಣಕಾಸು ಇಲಾಖೆಯವರು, ಶಿಕ್ಷಣ ಇಲಾಖೆಯವರು ಸರ್ಕಾರಕ್ಕೆ ಯಾರು ಉತ್ತರ ಕೊಡುತ್ತಾರೆ ಅವರನ್ನೇ ಕರೆಯಿಸಿ ಚರ್ಚೆ ಮಾಡಿ,

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಅವರಿಂದ ಸವಿಸ್ತಾರವಾದಂತಹ ಮಾಹಿತಿಯನ್ನು ಪಡೆದು ಸರ್ಕಾರಕ್ಕೆ ಒಂದು ವರದಿಯನ್ನು ಕೊಟ್ಟಿದ್ದೇವೆ. ವರದಿ ಕೊಟ್ಟಾಗ ಸದರಿ ವರದಿಯನ್ನು ಮುಂದೂಡುತ್ತಾ ಬಂದರು. ಶ್ರೀ ಬಸವರಾಜ ರಾಯರೆಡ್ಡಿಯವರು ಉನ್ನತ ಶಿಕ್ಷಣ ಮಂತ್ರಿಗಳಾಗಿದ್ದಾಗ ಈ ಬಗ್ಗೆ ಮತ್ತೆ ಒಂದು ಪ್ರಶ್ನೆ ಬಂತು. ಈ ರೀತಿ ಮಂತ್ರಿಗಳಾದಂತಹವರು ಸಮಿತಿ ವರದಿಯನ್ನು ಮುಂದೂಡುತ್ತಾ ಹೋದರೆ ಆಗುವುದಿಲ್ಲ. ಮಾನ್ಯ ಮಂತ್ರಿಗಳಾದ ಶ್ರೀ ಜಿ.ಟಿ. ದೇವೇಗೌಡರವರು ಸಹ ಇದೇ ರೀತಿ ಮಾಡುತ್ತಾರೆ. ಪುನಃ ಮತ್ತೊಮ್ಮೆ ನನ್ನ ಅಧ್ಯಕ್ಷತೆಯಲ್ಲಿ ಸಮಿತಿ ರಚನೆ ಮಾಡಿ, ಸವಿಸ್ತಾರವಾಗಿ ಚರ್ಚೆ ಮಾಡಿ ವರದಿ ಕೊಡಿ ಎಂದು ಹೇಳಿದಾಗ, ಅವೊತ್ತಿನ ವರದಿಯಲ್ಲಿ 351 ಕೋಟಿ 80 ಲಕ್ಷ ರೂಪಾಯಿ ಖರ್ಚು ಬರುತ್ತದೆಯೆಂದು ವರದಿ ಕೊಟ್ಟಿದ್ದೇನೆ. ಸದರಿ ಸಮಿತಿಯಲ್ಲಿ ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ, ಶ್ರೀ ಕೆ.ಟಿ. ಶ್ರೀಕಂಠೇಗೌಡ, ಶ್ರೀ ಪುಟ್ಟಣ್ಣ, ಶ್ರೀ ಎಸ್.ವ್ಹಿ. ಸಂಕನೂರ, ಶ್ರೀ ಅಮರನಾಥ ಪಾಟೀಲ್ ಮತ್ತು ಶ್ರೀ ಶರಣಪ್ಪ ಮಟ್ಟೂರ ಇಷ್ಟು ಮಂದಿ ಸದಸ್ಯರಿದ್ದು, ವರದಿ ಸಿದ್ಧವಾದ ನಂತರ ಮಾನ್ಯ ಸಭಾಪತಿಯವರನ್ನು ಹೊರತುಪಡಿಸಿ, ಎಲ್ಲಾ 13 ಮಂದಿ ಶಾಸಕರಿಗೂ ವರದಿಯ ಒಂದು ಪ್ರತಿಯನ್ನು ನೀಡಿ, ನೀವು ಚರ್ಚೆ ಮಾಡಿ ವರದಿಯಲ್ಲಿ ಏನಾದರೂ ವ್ಯತ್ಯಾಸಗಳಿದ್ದರೆ ತಿಳಿಸಿ ಎಂದು 8 ದಿವಸ ಸಮಯ ಕೊಟ್ಟಿರುತ್ತೇವೆ. ಪುನಃ ಮತ್ತೊಂದು ಸಭೆ ಮಾಡಿ, ಆ ಸಭೆಗೆ ಪ್ರೈಮರಿ ಮತ್ತು ಸೆಕಂಡರಿ, ಪಿ.ಯು. ಹಾಗೂ ಫಸ್ಟ್ ಗ್ರೇಡ್ ಕಾಲೇಜಿನ ಎಲ್ಲಾ ಸಂಘಟನೆಗಳನ್ನು ಕರೆದು ಚರ್ಚೆ ಮಾಡಿದ್ದು, ಅವರು ಸಹ ವರದಿಯಲ್ಲಿರುವ ಅಂಶಗಳು ಸರಿಯಾಗಿವೆ ಎಂದು ಹೇಳಿಕೆ ನೀಡಿರುತ್ತಾರೆ. ಒಟ್ಟಾರೆಯಾಗಿ ಸರ್ಕಾರದ ಧರ್ಮ ಏನೆಂದರೆ, ಸರ್ಕಾರ ನಂಬಿಕೆ ಇಟ್ಟು ಒಂದು ಸಮಿತಿ ರಚನೆ ಮಾಡಿದ ನಂತರ ಸದರಿ ಸಮಿತಿಯ ವರದಿಯನ್ನು ಒಪ್ಪಬೇಕು ಅಥವಾ ತಿರಸ್ಕರಿಸಬೇಕು. ಏಕೆಂದರೆ, ಅದು ಸದನ ಸಮಿತಿ ಇದ್ದ ಹಾಗೆ. ಆ ಸಮಿತಿ ವರದಿ ಕೊಟ್ಟಾಗ, ಅದನ್ನು ಒಪ್ಪದೇ ಮುಂದೂಡುತ್ತಾ ಬಂದರು. ಇದರಿಂದಾಗಿ, ಈಗ 10-15 ಕೋಟಿ ರೂಪಾಯಿ ಹೆಚ್ಚು ಕಡಿಮೆ ಆಗುತ್ತದೆ. ಇದು ಆಗಬಾರದು. ನಾವು ಕೊಟ್ಟಂತಹ ವರದಿಯಲ್ಲಿ ದಿನಾಂಕ:04.08.1992 ನಂತರ ಎಷ್ಟೋ ಜನಕ್ಕೆ ಕೊಟ್ಟುಬಿಟ್ಟಿದ್ದಾರೆ. ಅಲ್ಲಿ ಕಡಿತವಾಗಿರುವುದನ್ನು ಸಹ ನಮ್ಮ ವರದಿಯಲ್ಲಿ ಕೊಟ್ಟಿದ್ದೇವೆ. ಯಾವುದೇ ರೀತಿಯಲ್ಲಿ difference of amount ಅನ್ನು ಕೇಳುವ ಆಗಿಲ್ಲ. ಕೇವಲ Pension and Pay fixation ಎಂದು ವರದಿ ಕೊಟ್ಟಿದ್ದೇವೆ. ಸರ್ಕಾರ ಸದರಿ ವರದಿಯನ್ನು ಒಪ್ಪಿಕೊಂಡಿದೆ. ಆದರೆ, ಇವತ್ತಿನವರೆಗೂ ಅದನ್ನು ಅನುಷ್ಠಾನ ಮಾಡದೇ, ವಿನಾಕಾರಣ ಮುಂದೆ ಹಾಕುತ್ತಿದ್ದಾರೆ. ಅದಕ್ಕೆ ನಮ್ಮ ಮಾನ್ಯ ಸದಸ್ಯರು ನನ್ನನ್ನು ಶಿಕ್ಷಣ ಸಚಿವರಾಗಲು ಹೇಳುತ್ತಿದ್ದಾರೆ. ಈ ರೀತಿಯ ವ್ಯವಸ್ಥೆಯನ್ನು ನೋಡಿ ನನಗೆ ಹೆದರಿಕೆ ಬಂದು ಆ ಶಿಕ್ಷಣ ಮಂತ್ರಿ

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಸ್ಥಾನವೇ ಬೇಡವೆಂದು ಹೇಳುತ್ತಿದ್ದೇನೆ. ಏಕೆಂದರೆ, ನಾಳೆ ಇದು ಅನುಷ್ಠಾನ ಆಗಿಲ್ಲವೆಂದರೆ ಏನು ಮಾಡುತ್ತೀರಿ ಎಂದು ಹೆದರಿಸುತ್ತಿದ್ದಾರೆ.

**ಶ್ರೀ ನಿರಾಣಿ ಹಣಮಂತ್ ರುದ್ರಪ್ಪ:–** ಮಾನ್ಯ ಹೊರಟ್ಟಿಯವರು ಶಿಕ್ಷಣ ಸಚಿವರಾದರೆ ಎಲ್ಲಾ ಸರಿ ಹೋಗುತ್ತದೆಯೆಂದು ನಾವು ಭಾವಿಸುತ್ತೇವೆ.

**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ:–** ಮಾನ್ಯ ಸಭಾಪತಿಯವರೇ, ಉನ್ನತ ಶಿಕ್ಷಣ ಮಂತ್ರಿಗಳಾದ ಶ್ರೀ ಜಿ.ಟಿ. ದೇವೇಗೌಡರವರು ಸಮಿತಿ ವರದಿ ಪರಿಶೀಲನೆಯಲ್ಲಿದೆ ಎಂದು ಹೇಳುತ್ತಾರೆ. ಆದರೆ, ನಾವು ವರದಿ ಕೊಟ್ಟಿರುವುದು 2017 ರಲ್ಲಿ. ಇನ್ನೂ ಪರಿಶೀಲನೆಯಲ್ಲಿದೆ ಎಂದು ಹೇಳಿದರೆ ಹೇಗೆ? ನಮ್ಮ ವರದಿಯನ್ನು ಒಪ್ಪಿಕೊಳ್ಳಬೇಕು ಅಥವಾ ತಿರಸ್ಕರಿಸಬೇಕು ಅದನ್ನು ಹೊರಹೊಮ್ಮಿಸಿ, ಸರ್ಕಾರ ಅಡ್ಡಗೋಡೆಯ ಮೇಲೆ ದೀಪ ಇಡಬಾರದು. ಅದಕ್ಕೆ ನಾನು ಏನು ಹೇಳುತ್ತೇನೆಂದರೆ, ಯಾವುದೇ ರೀತಿಯಿಂದಲೂ ಇದರಲ್ಲಿ ಅಂಕಿ–ಸಂಖ್ಯೆಗಳು ತಪ್ಪಾಗಿರುವುದಿಲ್ಲ. ಈ ಬಗ್ಗೆ ನಾವು ಸುಮಾರು ಬಾರಿ ಮೀಟಿಂಗ್ ಮಾಡಿದ್ದೇವೆ. ಅದೇ ಹಣಕಾಸು ಇಲಾಖೆಯ ಅಧಿಕಾರಿಗಳು, ಪ್ರೈಮರಿ ಮತ್ತು ಸೆಕೆಂಡರಿ ಎಜುಕೇಷನ್ ಹಾಗೂ ಹೈಯರ್ ಎಜುಕೇಷನ್ ಸೆಕ್ರೆಟರಿಗಳು, ಎಲ್ಲಾ ಎಫ್.ಓ. ಗಳು ಎಲ್ಲರೂ ಕೊಟ್ಟಂತಹ ಮಾಹಿತಿಯ ಪ್ರಕಾರ ವರದಿ ಕೊಟ್ಟಿದ್ದೇವೆ. ಈ ಬಗ್ಗೆ ಸಮಿತಿ ಸಭೆಯ ನಡವಳಿ ಇದೆ. ಆದುದರಿಂದ, ನಾನು ಸರ್ಕಾರಕ್ಕೆ ಒತ್ತಾಯ ಮಾಡುವುದೇನೆಂದರೆ, ಎಷ್ಟೋ ಮಂದಿ ಶಿಕ್ಷಕರು ನಿವೃತ್ತಿ ಹೊಂದುತ್ತಾರೆ. ಅವರು ಕಣ್ಣೀರು ಹಾಕುತ್ತಾರೆ. ಅದು ಆಗಬಾರದು. ಅದಕ್ಕೆ ಪರಿಶೀಲನೆ ಎನ್ನುವಂತಹ ಶಬ್ಧವನ್ನು ಬಿಟ್ಟು, ಇದನ್ನು ಕ್ಯಾಬಿನೆಟ್ ತೆಗೆದುಕೊಂಡು ಹೋಗಿ. ಈ ಬಗ್ಗೆ ನಮ್ಮ ನಿಯೋಗ ಮಾನ್ಯ ಮುಖ್ಯಮಂತ್ರಿಗಳನ್ನು ಭೇಟಿ ಮಾಡಿದಂತಹ ಸಂದರ್ಭದಲ್ಲಿ, ರೈತರ ಸಾಲ ಮನ್ನಾ ಮಾಡುವುದು ಇದೆ ಡಿಸೆಂಬರ್ ತಿಂಗಳವರೆಗೆ ತಡಮಾಡಿ ಎಂದು ಹೇಳಿದ್ದರು. ಅದರಂತೆ, ಡಿಸೆಂಬರ್ ತಿಂಗಳು ಮುಕ್ತಾಯವಾಗುತ್ತಾ ಬಂತು. ಅದಕ್ಕೆ ಉನ್ನತ ಶಿಕ್ಷಣ ಮಂತ್ರಿಗಳು, ಮುಖ್ಯಮಂತ್ರಿಗಳ ಜೊತೆ ಮಾತನಾಡಬೇಕು. ಏಕೆಂದರೆ, ಪ್ರೈಮರಿ ಮತ್ತು ಸೆಕೆಂಡರಿ ಎಜುಕೇಷನ್ ಖಾತೆ ಮಾನ್ಯ ಮುಖ್ಯಮಂತ್ರಿಗಳ ಬಳಿ ಇದ್ದು, ಅವರಿಬ್ಬರೂ ಕುಳಿತುಕೊಂಡು ಮಾತನಾಡಲಿ, ಅವಶ್ಯವಿದ್ದರೆ ನಮ್ಮನ್ನು ಕೂಡ ಆಹ್ವಾನಿಸಲಿ. ಜಿಟ್ಟಾರೆಯಾಗಿ ಈ ವಿಷಯದ ಬಗ್ಗೆ ತೀರ್ಮಾನ ಮಾಡುವುದು ಸೂಕ್ತ ಎನ್ನುವಂತಹದ್ದು ನನ್ನ ಸ್ಪಷ್ಟವಾದಂತಹ ಅಭಿಪ್ರಾಯವಾಗಿದೆ. ಅದಕ್ಕೆ ಸರ್ಕಾರವನ್ನು ನಾನೂ ಕೂಡ ಒತ್ತಾಯ ಮಾಡುವುದೇನೆಂದರೆ, ವಿನಾಕಾರಣ ಸದನದ ಸಮಯ ಹಾಳು ಮಾಡುವುದು ಬೇಡ. ಇದರಿಂದಾಗಿ, ಜನರಿಗೆ ತೊಂದರೆಯಾಗುವುದು ಬೇಡ. ಅದಕ್ಕೆ ನಾನು ಹೇಳುವುದೇನೆಂದರೆ, ತಕ್ಷಣ ಸರ್ಕಾರ ಸಮಿತಿ ವರದಿಯನ್ನು ಒಪ್ಪಿಕೊಳ್ಳಬೇಕು. ಏಕೆಂದರೆ, ಒಮ್ಮಿಂದ ಒಮ್ಮೆಲೇ ಇದನ್ನು ಕೊಡುವುದಕ್ಕಾಗುವುದಿಲ್ಲ.

ನಿವೃತ್ತಿ ಆಗುವುದು ಎಲ್ಲಾ ವಿಳಂಬವಾಗುತ್ತದೆ. ಸ್ವಲ್ಪ ಹೆಚ್ಚು ಕಡಿಮೆ ಆಗುತ್ತದೆ. ಆದುದರಿಂದ, ಸರ್ಕಾರ ಸ್ಪಷ್ಟವಾದಂತಹ ತೀರ್ಮಾನ ಮಾಡಿ ಸಮಿತಿ ವರದಿಯನ್ನು ಒಪ್ಪಿಕೊಳ್ಳಬೇಕೆಂದು ತಮ್ಮ ಮೂಲಕ ಸರ್ಕಾರವನ್ನು ಒತ್ತಾಯ ಮಾಡುತ್ತೇನೆ.

**ಶ್ರೀ ನಿರಾಣಿ ಹಣಮಂತ್ ರುದ್ರಪ್ಪ(ಪದವೀಧರರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಸುದೀರ್ಘವಾಗಿ ಕಾಲ್ಪನಿಕ ವೇತನದ ಬಗ್ಗೆ ಎಲ್ಲಾ ಹಿರಿಯ ಶಾಸಕರು ಮಾತನಾಡಿದ್ದಾರೆ. ನಾನು ಕೂಡ ಹೆಚ್ಚಾಗಿ ಮಾತನಾಡುವುದಕ್ಕೆ ಬಯಸುವುದಿಲ್ಲ. ಎಲ್ಲಾ ಶಾಸಕರು ಕೂಡ ಕಾಲ್ಪನಿಕ ವೇತನ ಜಾರಿಯಾಗಬೇಕು ಎನ್ನತಕ್ಕಂತಹ ಒತ್ತಾಯ ಮಾಡಿದ್ದಾರೆ. ಸನ್ಮಾನ್ಯ ಹಿರಿಯ ಶಾಸಕರಾದಂತಹ ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿಯವರ ನೇತೃತ್ವದ ಸಮಿತಿ ಸರ್ಕಾರಕ್ಕೆ 2015 ರಲ್ಲಿ ಮತ್ತು 06.02.2018 ರಲ್ಲಿ 2 ಬಾರಿ ವರದಿ ಕೊಟ್ಟಿದೆ. ಸರ್ಕಾರ ಸಮಿತಿ ನೇಮಕ ಮಾಡಿ, ಆ ಸಮಿತಿ ವರದಿಯನ್ನು ಸಲ್ಲಿಸಿದ ಮೇಲೆ ಅದು ಕಾರ್ಯರೂಪಕ್ಕೆ ಬರುವುದಿಲ್ಲವೆಂದರೆ ಅದು ಸಮಿತಿಗೆ ಮಾಡಿದ ಅವಮಾನ ಎನ್ನತಕ್ಕಂತಹ ವಿಷಯವನ್ನು ಹೇಳಬಯಸುತ್ತೇನೆ. ಅದಕ್ಕೆ ಯಾವುದೇ ಸರ್ಕಾರ ಇರಲಿ, ಸಮಿತಿಯ ವರದಿಯನ್ನು ಒಪ್ಪಿಕೊಳ್ಳಬೇಕು ಅಥವಾ ತಿರಸ್ಕಾರ ಮಾಡಬೇಕು. ಆದರೆ, ಸರ್ಕಾರ ಯಾವುದನ್ನು ಹೇಳದೆ ಪುನರ್ ಪರಿಶೀಲನೆ ಮಾಡುತ್ತೇನೆಂದು ಹೇಳಿದರೆ, ಮೂರನೆಯ ಸಮಿತಿ ಮಾಡುವುದಕ್ಕೆ ಹೊರಟಿದೆಯೇ ಎಂದು ನನಗನ್ನಿಸುತ್ತಿದೆ. ಸರ್ಕಾರಕ್ಕೆ ನಾವೆಲ್ಲರೂ ಒತ್ತಾಯ ಮಾಡುವುದೇನೆಂದರೆ, ಸನ್ಮಾನ್ಯ ಹೊರಟ್ಟಿಯವರು ಕೊಟ್ಟಂತಹ ವರದಿಯನ್ನು ಯಥಾವತ್ತಾಗಿ ಜಾರಿಗೊಳಿಸಬೇಕು. ಕಾಲಹರಣ ಮಾಡದೇ ನೊಂದಿರತಕ್ಕಂತಹ ಶಿಕ್ಷಕ ಬಳಗಕ್ಕೆ ಆದಷ್ಟು ಬೇಗನೆ ಸರ್ಕಾರ ಕಾಲ್ಪನಿಕ ವೇತನವನ್ನು ಕೊಡತಕ್ಕಂತಹ ಕೆಲಸ ಮಾಡಬೇಕೆಂಬ ವಿನಂತಿಯನ್ನು ಈ ಸದನದ ಮುಖಾಂತರ ಮಾಡುತ್ತಿದ್ದೇನೆ. ಅಲ್ಲದೇ, ಇವೊತ್ತಿನ ದಿವಸ ಸರ್ಕಾರ ಕೊಟ್ಟಂತಹ ಉತ್ತರ ಸಮರ್ಪಕವಾಗಿಲ್ಲ. ಅದನ್ನು ಹಿಂಪಡೆದು, ಆದಷ್ಟು ಬೇಗನೆ ಕಾಲ್ಪನಿಕ ವೇತನವನ್ನು ಯಾವ ದಿನಾಂಕದಿಂದ ಜಾರಿಗೊಳಿಸುತ್ತಾರೆ ಎನ್ನುವುದನ್ನು ಸನ್ಮಾನ್ಯ ಸಚಿವರು ಉತ್ತರ ನೀಡಬೇಕೆಂದು ಹೇಳಿ ನಾನು ಆಗ್ರಹ ಮಾಡುತ್ತಿದ್ದೇನೆ.

ಅದೇ ರೀತಿಯಾಗಿ ನಿನ್ನೆಯ ದಿವಸ ಎನ್.ಪಿ.ಎಸ್.(ನೂತನ ಪಿಂಚಣಿ ಯೋಜನೆ) ವಿಚಾರದಲ್ಲಿ ಕೂಡ ಸುದೀರ್ಘವಾದಂತಹ ಚರ್ಚೆ ನಡೆಯಿತು. ಸನ್ಮಾನ್ಯ ಮುಖ್ಯಮಂತ್ರಿಗಳು ಬಂದು ಉತ್ತರ ನೀಡಬೇಕೆಂದು ಆಗ್ರಹ ಮಾಡಿದಾಗ, ಸಭೆಯ ನಂತರ ಒಂದು ಸಮಿತಿಯನ್ನು ರಚನೆ ಮಾಡಿರುವುದು ನಮ್ಮ ಗಮನಕ್ಕೆ ಬಂದಿದೆ. ಇದು ಎಷ್ಟು ಸೂಕ್ತ ಎನ್ನುವಂಥದ್ದನ್ನು ಈ ಸದನ ವಿಚಾರಣೆ ಮಾಡಬೇಕು ಎನ್ನುವಂತಹ ಮಾತನ್ನು ಹೇಳುವುದಕ್ಕೆ ಬಯಸುತ್ತಿದ್ದೇನೆ. ಏಕೆಂದರೆ, ಸದನದಲ್ಲಿ ಕೊಟ್ಟಿರತಕ್ಕಂತಹ

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"**

ಹೇಳಿಕೆಗೆ ತದ್ವಿರುದ್ಧವಾಗಿ ಸಮಿತಿಯನ್ನು ರಚನೆ ಮಾಡುವಂಥದ್ದು, ಪತ್ರಿಕೆಗಳ ಮುಖಾಂತರ ಮತ್ತೊಂದು ಹೇಳಿಕೆಯನ್ನು ಕೊಡತಕ್ಕಂಥದ್ದು ಕೂಡ ಈ ಸದನಕ್ಕೆ ಘನತೆ ತರುವಂತಹ ವಿಷಯವಲ್ಲವೆಂದು ಈ ಸಂದರ್ಭದಲ್ಲಿ ಹೇಳಿ, ಲಕ್ಷಾಂತರ ಜನರು ಎನ್.ಪಿ.ಎಸ್. ಸಲುವಾಗಿ ಹೋರಾಟವನ್ನು ಮಾಡುತ್ತಿದ್ದಾರೆ. ಈ ಎರಡು ಬೇಡಿಕೆಗಳನ್ನು ಕೂಡ ಈಗಿನ ಸನ್ಮಾನ್ಯ ಮುಖ್ಯಮಂತ್ರಿಗಳ ಸರ್ಕಾರದಲ್ಲಿ ಘೋಷಣೆ ಮಾಡಿದ್ದಾರೆ ಮತ್ತು ಅದು ಚುನಾವಣಾ ಪ್ರಣಾಳಿಕೆಯಲ್ಲಿದೆ. ಹಾಗಾಗಿ, ಆದಷ್ಟು ಬೇಗನೆ ಅವರು ಕೊಟ್ಟಿರತಕ್ಕಂತಹ ಪ್ರಣಾಳಿಕೆಗೆ ಬದ್ಧರಾಗಿ ಈ ಎರಡು ಬೇಡಿಕೆಗಳನ್ನು ಈಡೇರಿಸಬೇಕೆಂದು ಸರ್ಕಾರವನ್ನು ಈ ಮೂಲಕ ಆಗ್ರಹ ಮಾಡುತ್ತಿದ್ದೇನೆ.

**ಶ್ರೀ ಆಯನೂರು ಮಂಜುನಾಥ್(ಪದವೀಧರರ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಬಹಳ ದೀರ್ಘವಾಗಿ ಈ ಕಾಲ್ಪನಿಕ ವೇತನದ ಬಗ್ಗೆ ಚರ್ಚೆಯಾಗಿದೆ. ಸ್ವತಃ ಅದರ ನಿರ್ಮಾತೃರಾದ ಸನ್ಮಾನ್ಯ ಹೊರಟ್ಟಿಯವರು ಮಾತನಾಡಿದ ನಂತರ ನಾವು ಮಾತನಾಡುವಂತಹ ಎಲ್ಲಾ ಅಂಶಗಳು ಮುಗಿದಿವೆ. ಅವರು ಕೊಟ್ಟಂತಹ ವರದಿಯ ಆಧಾರದ ಮೇಲೆ ನಾವು ಚರ್ಚೆ ಮಾಡುತ್ತಿದ್ದೇವೆ. ಒಂದು ರೀತಿ ಅವರು ಅಲ್ಲಿ ಇರಬೇಕೆಂಬ ಅಪೇಕ್ಷೆ ಇದ್ದರೂ ಕೂಡ, ಇವೊತ್ತಿನ ದಿವಸ ಸಭಾಪತಿ ಸ್ಥಾನದಿಂದ ಕೆಳಗಡೆ ಬಂದು ಮಾತನಾಡಿದ್ದು ನಮಗೆ ಒಳ್ಳೆಯದಾಯಿತೇನೋ ಎಂದು ನನಗನ್ನಿಸುತ್ತಿದೆ. ಏಕೆಂದರೆ, ನಮ್ಮ ಪರವಾಗಿ, ಶಿಕ್ಷಕರ ಪರವಾಗಿ ಮಾತನಾಡುವಂತಹ ಒಬ್ಬ ಸಮರ್ಥ ವ್ಯಕ್ತಿ, ಬಹಳ ದೀರ್ಘ ಅನುಭವ ಇರುವಂತಹವರು ಬಂದಿದ್ದಾರೆ. ಈ ಕಾಲ್ಪನಿಕ ವೇತನದಲ್ಲಿ ಬಹಳ ಏನು ವ್ಯತ್ಯಾಸವಾಗುವುದಿಲ್ಲ. ಅದನ್ನು ನಾನು ಒಂದೆರಡು ಅಂಶಗಳಲ್ಲಿ ಮುಕ್ತಾಯ ಮಾಡುತ್ತೇನೆ. ಒಂದನೆಯದಾಗಿ, ಹಣಕಾಸಿನ ವಿಚಾರದಲ್ಲಿ ಬಹಳ ದೊಡ್ಡ ಅಂಶ ಅಡಗಿರುವುದಿಲ್ಲ. ಬಹಳ ಅಂದರೆ ನಮ್ಮ ಶಿಕ್ಷಕರಿಗೆ ಸಿಗಬೇಕಾಗಿದ್ದು, ಮತ್ತು circumstantial ಆಗಿ ಸಿಗಬೇಕಾದಂತಹ increments, promotions and final pension settlement ಮೇಲೆ ಇದು ನಿರ್ಧಾರವಾಗುತ್ತದೆ. ತಕ್ಷಣವೇ ಸರ್ಕಾರ ಇದನ್ನು ಕೊಡಬೇಕಾಗಿರುವುದಿಲ್ಲ. ಮೂರು ಸಣ್ಣ ಸಂಗತಿಗಳು, ಯಾವುದೇ ನೌಕರನ ಬದುಕಿನಲ್ಲಿ ಬಹಳ ಪ್ರಮುಖವಾದ ಸಂಗತಿಗಳೆಂದರೆ ಇನ್‌ಕ್ರಿಮೆಂಟ್, ಪ್ರಮೋಷನ್ ಮತ್ತು ಫೈನಲ್ ಪೆನ್ಷನ್ ಸೆಟ್ಲ್‌ಮೆಂಟ್. ಈ ಮೂರೇ ಅಂಶಗಳು ಇರುವುದು. ಅದರ ಬಗ್ಗೆ ಸಮಿತಿ 2 ಬಾರಿ ವರದಿ ಕೊಟ್ಟಾಗಿದೆ. ಅದೇ ಕ್ಷೇತ್ರದಿಂದ ಆಯ್ಕೆಯಾಗಿ ಬಂದಂತಹ, ಸುಮಾರು 38 ವರ್ಷ ಅನುಭವವುಳ್ಳ ಹಿರಿಯ ಸದಸ್ಯರು ವರದಿ ಕೊಟ್ಟಿದ್ದಾರೆ. ಜೊತೆಗೆ ಇಡೀ ಸದನ ಏಕಧ್ವನಿಯಲ್ಲಿ ಬೆಂಬಲಿಸಿದ ಮೇಲೂ ಕೂಡ ಇನ್ನೂ ಮೀನಾಮೇಷ ಎಣಿಸುವುದನ್ನು ನೋಡಿದರೆ ಸರ್ಕಾರ ಯಾವುದಕ್ಕೆ ಬೆಲೆ ಕೊಡುತ್ತದೆ? ಸದನದ ಅಭಿಪ್ರಾಯಕ್ಕೋ ಅಥವಾ ತನ್ನ ವ್ಯಕ್ತಿಗತ ನಿಲುವಿಗೋ? ಇಡೀ ಸದನ ಹೇಳಿದೆ, ಈ ಬಾರಿ ಮಾತ್ರವಲ್ಲದೇ, ಹಿಂದೆಲ್ಲಾ

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಕೂಡ ಇಡೀ ಸದನದ ಒಕ್ಕೊರಲಿನ ಧ್ವನಿಗೆ ಸರ್ಕಾರ ತನ್ನ ಧ್ವನಿಯನ್ನು ಸೇರಿಸಿ ಕೂಡಲೇ ಇದನ್ನು ಜಾರಿ ಮಾಡಬೇಕು. ಇವೊತ್ತಿನ ದಿವಸ ಹತ್ತಾರು ಸಾವಿರ ಜನ ಅದೇ ಪ್ರಶ್ನೆಯನ್ನು ಕೇಳುತ್ತಿದ್ದಾರೆ. ಎನ್.ಪಿ.ಎಸ್. ಕೇಳುತ್ತಾರೆ. ಏಕೆಂದರೆ, ಎನ್.ಪಿ.ಎಸ್. ಸರ್ಕಾರಿ ನೌಕರರಿಗೆ ಅನ್ವಯವಾಗಿದೆ. ಅನುದಾನಿತ ಶಾಲೆಯವರಿಗೆ ಆಗಿರುವುದಿಲ್ಲ. ಈ ಸಮಸ್ಯೆ ಅನುದಾನಿತ ಶಾಲೆಗಳದ್ದು. ಅವರನ್ನು ಮಲತಾಯಿ ಮಕ್ಕಳ ರೀತಿ ಸರ್ಕಾರ ಏತಕ್ಕೆ ನೋಡುತ್ತಿದೆ? ಸರ್ಕಾರಿ ನೌಕರರಿಗೆ ಹೊಸ ಪಿಂಚಣಿ ಯೋಜನೆ ನೀಡಿ, ಹನ್ನೆರಡು ವರ್ಷಗಳ ಕಾಲ ಇವರಿಗೆ ಕೊಡದೇ ವಂಚನೆ ಮಾಡಿದ್ದಲ್ಲದೇ, ಅವರು ಕೇಳುತ್ತಿರುವ ಈ ಸಣ್ಣ ಅಂಶವನ್ನು ಮಾಡುತ್ತಿಲ್ಲ. ಆದುದರಿಂದ, ಈ ಎರಡು ಕಡೆಯಲ್ಲಿಯೂ ಬಹಳ ಗಂಭೀರವಾಗಿ ಯೋಚನೆ ಮಾಡಬೇಕು. ಸ್ವತಃ ಸಭಾಪತಿ ಸ್ಥಾನದಲ್ಲಿ ಈಗ ತಾವು ಕುಳಿತಿದ್ದು, ತಾವು ಕೂಡ ಇವರ ಪರವಾಗಿ ಇರುವಂತಹವರು. ಹಾಗಾಗಿ, ತಾವೇ ಅಲ್ಲಿಂದ ಒಂದು ರೂಲಿಂಗ್‌ನ್ನು ಕೊಟ್ಟುಬಿಡಬಹುದು ಎಂದು ನನಗನ್ನಿಸುತ್ತಿದೆ.

**ಶ್ರೀ ಕೆ.ಟಿ. ಶ್ರೀಕಂಠೇಗೌಡ:–** ಮಾನ್ಯ ಮರಿತಿಬ್ಬೇಗೌಡರವರು ಸ್ವಲ್ಪ ಹೊತ್ತಿನ ಮುಂಚೆ ಇದೇ ಸದನದಲ್ಲಿ ಶಿಕ್ಷಕರ ಬಗ್ಗೆ ಮಾತನಾಡಿ, ಈಗ ಸಭಾಪತಿ ಸ್ಥಾನದಲ್ಲಿ ಕುಳಿತಿರುತ್ತಾರೆ.

**ಶ್ರೀ ಆಯನೂರು ಮಂಜುನಾಥ್:–** ಮಾನ್ಯ ಸಭಾಪತಿಯವರು ಸಭೆಯ ಅಭಿಪ್ರಾಯದ ಒಂದು ರೂಲಿಂಗ್ ಕೊಟ್ಟುಬಿಡಬಹುದೆಂದು ನಾನು ಹಾಸ್ಯಕ್ಕಾಗಿ ಹೇಳಿದೆನು. ಆದರೆ, ತಾವು ನಿಯಮಾವಳಿಗಳ ಪ್ರಕಾರವೇ ಮಾಡಬೇಕಾಗುತ್ತದೆ. ಒಟ್ಟಾರೆಯಾಗಿ, ಯಾವುದೇ ಸರ್ಕಾರ ರಚನೆಯಾಗುವುದು ಈ ಸದನದಿಂದ and it is the by-product of the House.

(contd....)

(406) 6.40 12.12.2018 ವೈಎಲ್–ಕೆಎಸ್ (ವೈಸ್ ಛೇರ್ಮನ್‌ರವರ ಉಪಸ್ಥಿತಿ)

**ಶ್ರೀ ಆಯನೂರು ಮಂಜುನಾಥ್(ಮುಂದು):–**

ಅದಕ್ಕೆ ವಿಶೇಷವಾಗಿ ಏನೂ ಇರುವುದಿಲ್ಲ. ಸದನದಿಂದ ಉದ್ಭವವಾಗುವ ಸಚಿವ ಸಂಪುಟ, ಸದನದ ಧ್ವನಿಗಳಿಗೆ ಮಾನ್ಯತೆ ನೀಡದಿದ್ದರೆ ಉದ್ಭವವಾಗಿದ ವಿಚಾರವೇ ಮರೆತು ಹೋಗುತ್ತದೆ. ಮೊಸರಲ್ಲಿ ಹುಟ್ಟಿದ ಬೆಣ್ಣೆ, ತಾನು ಮೊಸರಿನಲ್ಲಿ ಹುಟ್ಟಿರುವುದನ್ನು ಮರೆಯಬಾರದು. ಹಾಗಾಗಿ ಸದನದಲ್ಲಿ ಹುಟ್ಟಿದಂತಹ by-product ಸರ್ಕಾರ ಹಾಗೂ ಸಚಿವ ಸಂಪುಟ, ಈ ಸದನದ ಧ್ವನಿಗೆ ಸಂಪೂರ್ಣ ಮಾನ್ಯತೆಯನ್ನು ನೀಡಬೇಕೆಂದು ತಮ್ಮ ಮೂಲಕ ಒತ್ತಾಯ ಮಾಡುತ್ತೇನೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಎಸ್.ವ್ವಿ.ಸಂಕನೂರು(ಪದವೀಧರರ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಈಗಾಗಲೇ ಹಿರಿಯ ಸದಸ್ಯರೆಲ್ಲರೂ ಕಾಲ್ಪನಿಕ ವೇತನ ಸಮಸ್ಯೆಗಳನ್ನು ಕುರಿತು ಹಲವಾರು ಸಲಹೆಗಳನ್ನು ನೀಡಿದ್ದಾರೆ. ಅದಕ್ಕೆ ಪೂರಕವಾಗಿ ಒಂದೆರಡು–ಮೂರು ಅಂಶಗಳನ್ನು ತಮ್ಮ ಗಮನಕ್ಕೆ ತರುವುದಕ್ಕೆ ಬಯಸುತ್ತೇನೆ. ಈಗಾಗಲೇ ಹಿರಿಯ ಸದಸ್ಯರು ಹೇಳಿದ ಹಾಗೆ 2 ಸಮಿತಿ ರಚನೆಯಾಗಿದೆ. ವಿಧಾನ ಪರಿಷತ್ತಿನ ಅತ್ಯಂತ ಹಿರಿಯ ಸದಸ್ಯರು ಮಾಜಿ ಶಿಕ್ಷಣ ಸಚಿವರ ಅಧ್ಯಕ್ಷತೆಯಲ್ಲಿ ಸಮಿತಿಗೆ ಎರಡು ವರದಿಗಳನ್ನು ನೀಡಲಾಗಿದೆ. ಮೊದಲನೆ ಸಮಿತಿಯಲ್ಲಿ ವರದಿಯನ್ನು ನೀಡಿದಾಗ, ರೂ.350.00 ಅಥವಾ ರೂ.360.00 ಕೋಟಿ ಅನುದಾನ ಬಿಡುಗಡೆಯಾದರೆ, ಈ ಸಮಸ್ಯೆಯನ್ನು ಬಗೆಹರಿಸಬಹುದೆಂದು ಮಾನ್ಯ ಬಸವರಾಜ ಶಿವಲಿಂಗಪ್ಪ ಹೊರಟ್ಟಿಯವರು ಹಾಗೂ ಐ.ಎ.ಎಸ್. ಅಧಿಕಾರಿಗಳು ಸುಮಾರು 5,000 ಕೋಟಿ ರೂಪಾಯಿಗಳಾಗುತ್ತದೆ ಎಂದು ವರದಿ ನೀಡಿದ್ದರಿಂದ ಈ ನಡುವೆ ಭಿನ್ನಾಭಿಪ್ರಾಯ ಇತ್ತು. ಇದರಲ್ಲಿ ಯಾವುದು ಸರಿ? ಮಾನ್ಯ ಬಸವರಾಜ ಶಿವಲಿಂಗಪ್ಪ ಹೊರಟ್ಟಿಯವರು ಕೊಟ್ಟಂತಹ ರೂ.350.00 ಅಥವಾ ರೂ.360.00 ಕೋಟಿ ರೂಪಾಯಿಗಳಾಗುತ್ತದೆ ಎಂಬ ವರದಿ ಸರಿಯೋ ಅಥವಾ ಐ.ಎ.ಎಸ್. ಅಧಿಕಾರಿಗಳು ತಿಳಿಸಿದ ಹಾಗೆ ಸುಮಾರು 5,000 ಕೋಟಿ ರೂಪಾಯಿಗಳಾಗುತ್ತದೆ ಎಂಬ ವರದಿ ಸರಿಯೋ ಎನ್ನುವ ಪ್ರಶ್ನೆ ಉದ್ಭವಿಸಿತ್ತು. ನಂತರ ಅವರ ನೇತೃತ್ವದಲ್ಲಿಯೇ ಮತ್ತೊಂದು ಸಮಿತಿಯನ್ನು ರಚಿಸಲಾಯಿತು. ಎರಡನೆಯ ಸಮಿತಿ ವರದಿಯಲ್ಲಿಯೂ ಸಹ ಸುಮಾರು 360.00 ಕೋಟಿ ರೂಪಾಯಿ ನೀಡಿದರೆ ಸಾಕು, ಆ ಸಮಸ್ಯೆ ಬಗೆಹರಿಯುತ್ತದೆ ಎಂದು ವರದಿ ನೀಡಿದ್ದರು. ಹೀಗಾಗಿ 5,000 ಕೋಟಿ ರೂಪಾಯಿಗಳಷ್ಟು ಅನುದಾನ ಬೇಕೆಂದು ಐ.ಎ.ಎಸ್. ಅಧಿಕಾರಿಗಳು ಏಕೆ ವರದಿ ನೀಡಿದ್ದಾರೆ ಎಂದರೆ ಶಾಲೆ ಯಾವಾಗ ಪ್ರಾರಂಭಗೊಂಡಿತ್ತು, ಪ್ರಾರಂಭಗೊಂಡಾಗಿನಿಂದ ಕೆಲವು 5 ವರ್ಷ, 7 ವರ್ಷ ಮತ್ತು 13 ವರ್ಷದ ನಂತರ ಶಾಲಾ–ಕಾಲೇಜುಗಳು grant ಗೆ admit ಆಗಿದೆ. ಈ ಐ.ಎ.ಎಸ್. ಅಧಿಕಾರಿಗಳು ಅನುದಾನ ರಹಿತ ಅವಧಿ ಏನಿದೆ ಅಂತಹ ಶಾಲೆಗಳಿಗೆ ಸಂಬಳವನ್ನು ಒದಗಿಸಿದರೆ ಎಷ್ಟಾಗಬಹುದೆಂದು ಸಹ ಲೆಕ್ಕ ಹಾಕಿದ್ದಾರೆ. ಎಲ್ಲಾ ಸಂಘಟನೆಯವರು ಸೇರಿ ಅನುದಾನ ರಹಿತ ಅವಧಿಯ ಸಂಬಳವನ್ನು ಕೇಳುವುದಿಲ್ಲ ಎಂದು ಸಮಿತಿಗೆ ಪತ್ರವನ್ನು ನೀಡಿದ್ದಾರೆ. ಆದರೆ, ಐ.ಎ.ಎಸ್. ಅಧಿಕಾರಿಗಳು ಸುಮಾರು 1,600 ಕೋಟಿ ರೂಪಾಯಿಗಳನ್ನು ಸೇರಿಸಿ ಲೆಕ್ಕ ಮಾಡಿದ್ದಾರೆ. ಸಂಘಟನೆಯವರು ಅನುದಾನ ರಹಿತ ಅವಧಿಯ ಸಂಬಳವನ್ನು ಕೇಳುವುದಿಲ್ಲವೆಂದು ಪತ್ರದ ಮುಖೇನ ಬರೆದು ಕೊಟ್ಟಿದ್ದಾರೆ. ಆದರೂ ಐ.ಎ.ಎಸ್. ಅಧಿಕಾರಿಗಳು ಅದನ್ನು ಲೆಕ್ಕದಲ್ಲಿ ಸೇರಿಸಿದ್ದಾರೆ. ಅನುದಾನ ರಹಿತ ಅವಧಿಯ ಸಂಬಳವನ್ನು ಸೇರಿಸಿ ಪಿಂಚಣಿ ನೀಡಿದರೆ 1,600 ಕೋಟಿ ರೂಪಾಯಿಗಳಾಗುತ್ತದೆ ಎಂದು ಲೆಕ್ಕ ಮಾಡಿದ್ದಾರೆ. ಸುಮಾರು 1,600 ಕೋಟಿ ರೂಪಾಯಿಗಳಾಗುತ್ತದೆ ಎಂದರೆ ಎಲ್ಲರೂ ಒಂದೇ

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ವರ್ಷದಲ್ಲಿ ನಿವೃತ್ತಿ ಹೊಂದುವುದಿಲ್ಲ. ಹಂತ-ಹಂತವಾಗಿ ಕಾಲ-ಕಾಲಕ್ಕೆ ನಿವೃತ್ತಿ ಹೊಂದುತ್ತಾರೆ. ಒಂದೇ ವರ್ಷದಲ್ಲಿ ಆರ್ಥಿಕ ಹೊರೆ ಸರ್ಕಾರದ ಮೇಲೆ ಬೀಳುವುದಿಲ್ಲ. ಹಾಗೆಯೇ ಅನುದಾನ ರಹಿತ ಅವಧಿಯಲ್ಲಿ ನೀಡುವ salary fitment ಅನ್ನು ಸುಮಾರು 10 ವರ್ಷ, 15 ವರ್ಷ, 20 ವರ್ಷಕ್ಕೆ ಹೋಲಿಸಿಕೊಂಡು difference ಅನ್ನು ನೀಡಬೇಕಾಗುತ್ತದೆ. ಆದರೆ, ಈಗಾಗಲೇ ನೌಕರರೇ ಹೇಳಿದ್ದಾರೆ ಯಾವ difference ಅನ್ನು ಕೇಳುವುದಿಲ್ಲ, notional fitment ನೀಡಿ ಎಂದು ಹೇಳಿದ್ದಾರೆ. ಹೀಗಾಗಿ ಸರ್ಕಾರಕ್ಕೆ ಒತ್ತಾಯ ಮಾಡುವುದೇನೆಂದರೆ, ಐ.ಎ.ಎಸ್. ಅಧಿಕಾರಿಗಳು ಸುಮಾರು 5,000 ಕೋಟಿ ರೂಪಾಯಿಗಳಾಗುತ್ತದೆ ಎಂದು ಏನು ವರದಿ ನೀಡಿದ್ದಾರೆ ಅದು ತಪ್ಪು. ಒಂದು ಸಲ ಮಾತ್ರವಲ್ಲ. ಮಾನ್ಯ ಸದಸ್ಯರಾದ ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿಯವರ ನೇತೃತ್ವದಲ್ಲಿ ಎರಡು ಸಲ ವರದಿಯನ್ನು ಸಲ್ಲಿಸಿದ್ದಾರೆ. ಬಹಳ ಮಹತ್ವದ ಅಂಶವೇನೆಂದರೆ, ಎಲ್ಲಾ ಸಂಘಟನೆಯವರು ಈ ವಿಷಯವು ನ್ಯಾಯಾಲಯದ ಮೊರೆ ಹೋಗುತ್ತದೆ. ನ್ಯಾಯಾಲಯದ ಮೊರೆ ಬಂದೂ ಸಹ ಅನುದಾನ ರಹಿತ ಅವಧಿಯ ಸಂಬಳವನ್ನು salary fitment ನ difference ಅನ್ನು ಸಹ ಕೇಳುವುದಿಲ್ಲ ಎಂದು ಹೇಳುವುದಕ್ಕೆ ತಯಾರಿದ್ದಾರೆ. ಹಾಗೂ ಸಮಿತಿಯ ಅಧ್ಯಕ್ಷರಿಗೂ ಪತ್ರ ಬರೆದಿದ್ದಾರೆ. ಆದರೂ ಸಹ ಐ.ಎ.ಎಸ್. ಅಧಿಕಾರಿಗಳು 5,000 ಕೋಟಿ ರೂಪಾಯಿಗಳಾಗುತ್ತದೆ ಎಂದು ವರದಿ ನೀಡಿರುವುದನ್ನು ಸರ್ಕಾರ ನಂಬುತ್ತದೆ ಎಂದರೆ ಬಹಳ ಬೇಜಾರಾಗುತ್ತದೆ. ಇದು 28 ವರ್ಷಗಳಿಂದ ಇರುವ ಸಮಸ್ಯೆಯಾಗಿದೆ ಆದಷ್ಟು ಬೇಗ ಬಗೆಹರಿಸಬೇಕು ಹಾಗೂ ಎಲ್ಲಾ ನೌಕರರ ವರ್ಗದವರು ನ್ಯಾಯಾಲಯದ ಮೊರೆ ಬಂದು compromise decree ಮಾಡಿಸಲಿ. ಸರ್ಕಾರವೂ ಸುರಕ್ಷಿತವಾಗಿರಬೇಕಲ್ಲವೇ? ಸರ್ಕಾರ ಸುರಕ್ಷಿತವಾಗಿರಬೇಕೆಂದರೆ, ಎಲ್ಲಾ ಸದಸ್ಯರು, ನೌಕರರು, ಯಾರ್ಯಾರು ನ್ಯಾಯಾಲಯದ ಮೊರೆ ಹೋಗಿದ್ದಾರೆ ಅವರೂ ಸಹ ನ್ಯಾಯಾಲಯಕ್ಕೆ ಹಾಜರಾಗುತ್ತಾರೆ. ಅದಕ್ಕೆ ದಯವಿಟ್ಟು ಸರ್ಕಾರ ಮತ್ತು ನೌಕರರ ಸಂಘಟನೆ ಮಧ್ಯೆ ನ್ಯಾಯಾಲಯದಲ್ಲಿ compromise decree ಆದರೆ, ಇದಕ್ಕೆ ಅಂತಿಮ ತೆರೆ ಎಳೆಯುವುದಕ್ಕೆ ಸಾಧ್ಯವಾಗುತ್ತದೆ.

**ಶ್ರೀ ಕೆ.ಟಿ.ಶ್ರೀಕಂಠೇಗೌಡ:-** ಮಾನ್ಯ ಸಭಾಪತಿಯವರೇ, ಬೇರೆ ರಾಜ್ಯಗಳಲ್ಲಿ ನ್ಯಾಯಾಲಯದ ಮೊರೆ ಹೋಗಿ, ಬರೆದು ಕೊಟ್ಟ ಮೇಲೆಯೇ compromise decree ಮಾಡಲಾಗಿದೆ.

**ಶ್ರೀ ಎಸ್.ವಿ.ಸಂಕನೂರು:-** ಮಾನ್ಯ ಸಭಾಪತಿಯವರೇ, ಬೇರೆ ರಾಜ್ಯದ ವಿಚಾರ ಬೇಡ. ಈಗಾಗಲೇ ನಮ್ಮ ರಾಜ್ಯದಲ್ಲಿ ಅಗ್ರಿಮೆಂಟ್ ಮಾಡುವುದಕ್ಕೆ ತಯಾರಿದ್ದೇವೆ. ದಯವಿಟ್ಟು ನೌಕರರ ಪರವಾಗಿ ವಿನಂತಿ ಮಾಡಿಕೊಳ್ಳುವುದೇನೆಂದರೆ, let us put an end for this issue.

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ನೌಕರರು ನಾವು ಯಾವುದೇ ಬಾಕಿಯನ್ನು ಕೇಳುವುದಿಲ್ಲ, ನ್ಯಾಯಾಲಯದ ಮೊರೆ ಬಂದು ಬರೆದು ಕೊಡುತ್ತೇವೆ ಎಂದು ಹೇಳಿದ್ದಾರೆ. ಅದಕ್ಕಾಗಿ ಕಾನೂನು ಇಲಾಖೆಯ ಸಲಹೆಯನ್ನು ತೆಗೆದುಕೊಂಡು, compromise decree ಯಾವ ರೀತಿ ಮಾಡಬೇಕು ದಯವಿಟ್ಟು ಆ ರೀತಿ ಮಾಡಬೇಕೆಂದು ತಮ್ಮ ಮೂಲಕ ಸರ್ಕಾರಕ್ಕೆ ಒತ್ತಾಯ ಮಾಡುತ್ತೇನೆ.

**ಶ್ರೀ ಅ.ದೇವೇಗೌಡ(ಪದವೀಧರರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಈಗಾಗಲೇ ಬಹಳಷ್ಟು ಸಮಯವನ್ನು ಕಾಲ್ಪನಿಕ ವೇತನದ ಬಗ್ಗೆ ಮಾತನಾಡಿ, ವಿಳಂಬ ಮಾಡುವ ಬದಲು ನಾವೆಲ್ಲರೂ ಹಿರಿಯ ಸದಸ್ಯರಾದ ಮಾನ್ಯ ಬಸವರಾಜ ಶಿವಲಿಂಗಪ್ಪ ಹೊರಟ್ಟಿರವರ ವರದಿಯನ್ನು ಜಾರಿಗೆ ತರುವುದಕ್ಕೆ ಹಿರಿಯ ಸಚಿವರಾದ ಮಾನ್ಯ ಜಿ.ಟಿ.ದೇವೇಗೌಡರು ಮಾನ್ಯ ಮುಖ್ಯಮಂತ್ರಿಗಳಿಗೆ ಒತ್ತಾಯ ಮಾಡಬೇಕೆಂದು ಆಗ್ರಹಿಸುತ್ತೇನೆ.

**ಶ್ರೀ ಜಿ.ಟಿ.ದೇವೇಗೌಡ (ಉನ್ನತ ಶಿಕ್ಷಣ ಸಚಿವರು):-** ಮಾನ್ಯ ಸಭಾಪತಿಯವರೇ, ಮಾನ್ಯ ಪುಟ್ಟಣ್ಣನವರು ನಿಯಮ 330 ರಡಿಯಲ್ಲಿ ಈ ವಿಷಯದ ಚರ್ಚೆಯನ್ನು ಪ್ರಾರಂಭಿಸಿದ್ದಾರೆ. ಸದನದಲ್ಲಿರುವ ಎಲ್ಲಾ ಹಿರಿಯ ಸದಸ್ಯರೆಲ್ಲರಿಗೂ ಸಹ ಶಿಕ್ಷಕರ ಬಗ್ಗೆ ಇರುವ ಕಾಳಜಿಯನ್ನು ನೋಡಿ ತುಂಬಾ ಮೆಚ್ಚುಗೆ ಆಗಿತ್ತು. ಹಿರಿಯ ಸದಸ್ಯರಾದ ಮಾನ್ಯ ಬಸವರಾಜ ಶಿವಲಿಂಗಪ್ಪ ಹೊರಟ್ಟಿಯವರು ಎಲ್ಲಾ ವಿಚಾರವನ್ನು ಎಳೆ ಎಳೆಯಾಗಿ ಹೇಳಿದ್ದಾರೆ. ಅದಕೋಸ್ಕರ ಎಲ್ಲರಿಗೂ ಸಂತೋಷದಿಂದ ಅಭಿನಂದನೆ ಸಲ್ಲಿಸುತ್ತೇನೆ. ನಾನು ಮೈಸೂರು ಜಿಲ್ಲೆಯಲ್ಲಿ ಜಿಲ್ಲಾ ಪಂಚಾಯಿತಿ ಅಧ್ಯಕ್ಷನಾಗಿದ್ದ ಸಂದರ್ಭದಲ್ಲಿ ಪ್ರಾಥಮಿಕ ಶಿಕ್ಷಣ ಇಲಾಖೆಯು ಜಿಲ್ಲಾ ಪಂಚಾಯಿತಿ ಅಡಿಯಲ್ಲಿತ್ತು. ಅನಂತರ ಎಲ್ಲಾ ರಾಜ್ಯದಲ್ಲಿಯೂ ಜಿಲ್ಲಾ ಪಂಚಾಯಿತಿ ವ್ಯಾಪ್ತಿಯಲ್ಲಿದ್ದರಿಂದ ಪ್ರಾಥಮಿಕ ಶಿಕ್ಷಣ ಇಲಾಖೆಯ ಶಿಕ್ಷಕರು ಸರಿಯಾಗಿ ಸಂಬಳ, ಸೌಲಭ್ಯವನ್ನು ನೀಡುವುದಿಲ್ಲ ಎಂದು ಪ್ರಾಥಮಿಕ ಶಿಕ್ಷಣ ಇಲಾಖೆಯನ್ನು ಹಿಂಪಡೆದರು. ಆದರೆ, ನಾನು ಮೈಸೂರು ಜಿಲ್ಲೆಯ ಅಧ್ಯಕ್ಷನಾಗಿದ್ದ ಸಂದರ್ಭದಲ್ಲಿ ಎಲ್ಲಾ ಮೈಸೂರು ಜಿಲ್ಲಾ ಶಿಕ್ಷಕರು ಜಿಲ್ಲಾ ಪಂಚಾಯಿತಿ ಅಡಿಯಲ್ಲಿಯೇ ಕರ್ತವ್ಯ ನಿರ್ವಹಿಸುತ್ತೇವೆ. ಸರ್ಕಾರದ ಕಡೆ ಬರುವುದಿಲ್ಲ ಎಂದು ಪತ್ರವನ್ನು ಬರೆದುಕೊಟ್ಟಿದ್ದರು. ಆ ಸಂದರ್ಭದಲ್ಲಿ ಚಾಮರಾಜನಗರ ಜಿಲ್ಲೆ ಮತ್ತು ಮೈಸೂರು ಜಿಲ್ಲೆ ಎರಡೂ ಜಿಲ್ಲೆಯು ಸೇರಿತ್ತು. ನನಗೂ ಸಹ ಶಿಕ್ಷಕರ ಬಗ್ಗೆ ಎಷ್ಟು ಬದ್ಧತೆ, commitment ಮತ್ತು ಪ್ರೀತಿ ಇದೆ ಎನ್ನುವುದಕ್ಕಾಗಿ ಈ ವಿಚಾರವನ್ನು ತಿಳಿಸುತ್ತಿದ್ದೇನೆ. ನಮಗೆ ಹಾಗೂ ನಿಮಗೆ ಅಷ್ಟೇ ಬದ್ಧತೆ, ಪ್ರೀತಿ ಇದೆ ಎಂದು ಹೇಳುತ್ತಿಲ್ಲ. ಈ ವಿಚಾರದ ಬಗ್ಗೆ ಪತ್ರಕರ್ತರು, ಮಾಧ್ಯಮದವರು ಸಹ ಶಿಕ್ಷಕರ ಬಗ್ಗೆ ಮತ್ತು ಶಿಕ್ಷಣ ಕ್ಷೇತ್ರದ ಬಗ್ಗೆ ಎಷ್ಟೊಂದು ಅಭಿಮಾನ ಇದೆ ಎಂದರೆ,

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಶಿಕ್ಷಣ ಕ್ಷೇತ್ರ ಉಳಿದರೆ ಮಾತ್ರ ಮೊದಲ ಆದ್ಯತೆ ನೀಡಬೇಕು. ನಮ್ಮ ದೇಶ ಅಭಿವೃದ್ಧಿಯಾಗಬೇಕು ಮತ್ತು ದೇಶದ ನ್ಯಾಯಕತ್ವ ಬೆಳೆಯಬೇಕು. ಒಳ್ಳೆಯ ಕಲೆ, ಸಾಹಿತ್ಯ ಪ್ರತಿಯೊಂದು ಸಹ ಶಿಕ್ಷಣ ಕ್ಷೇತ್ರದಿಂದ ಯುವ ಸಮಾಜವನ್ನು ಕಾಣುವುದಕ್ಕೆ ಸಾಧ್ಯ ಇದೆ ಎನ್ನುವ ಭಾವನೆಯಿಂದ ಈ ವಿಚಾರದ ಬಗ್ಗೆ ಪ್ರತಿಯೊಬ್ಬರು ಚರ್ಚೆ ಮಾಡಿದ್ದಾರೆ. ನಾವು ಈ ಸಂದರ್ಭದಲ್ಲಿ ಮನಬಿಚ್ಚಿ ಮಾತನಾಡಬೇಕಾಗುತ್ತದೆ. ತಾವೆಲ್ಲರೂ 2005ನೇ ಸಾಲಿನಿಂದ ಹೋರಾಟ ಮಾಡಿಕೊಂಡು ಬಂದಿದ್ದೀರಿ. ಸುಪ್ರೀಂ ಕೋರ್ಟ್‌ನಲ್ಲಿ ಶಿಕ್ಷಕ ಸಂಘಟನೆಯವರು ಆದೇಶವನ್ನು ತಂದಾಗ, ಅದನ್ನು ಸರ್ಕಾರ ತಿದ್ದುಪಡಿ ಮಾಡುವಂಥ ಸಂದರ್ಭದಲ್ಲಿ ಇಲ್ಲಿರತಕ್ಕಂಥ ಸದನವು ಆ ತಿದ್ದುಪಡಿಯನ್ನು ಒಪ್ಪಬಾರದಿತ್ತು.

**ಶ್ರೀ ಎಸ್.ವ್ವಿ.ಸಂಕನೂರು:–** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಸದನವು ತಿದ್ದುಪಡಿಗೆ ಒಪ್ಪಬಾರದಿತ್ತು ಎಂದು ಹೇಳುತ್ತಿದ್ದಾರಲ್ಲಾ, ಈಗಾಗಲೇ conditional ಆಗಿ Bill pass ಆಗಿದೆ.

**ಶ್ರೀ ಜಿ.ಟಿ.ದೇವೇಗೌಡ:–** ಮಾನ್ಯ ಸಭಾಪತಿಯವರೇ, conditional ಆಗಿ Bill pass ಆಗಿರುವುದು ಎಲ್ಲಿದೆ.

**ಶ್ರೀ ಎಸ್.ವ್ವಿ.ಸಂಕನೂರು:–** ಮಾನ್ಯ ಸಭಾಪತಿಯವರೇ, ಹೌದು ಸರ್ಕಾರ 285.00 ಕೋಟಿ ರೂಪಾಯಿಗೆ ಒಪ್ಪಿಕೊಂಡಿದೆ.

**ಶ್ರೀ ಜಿ.ಟಿ.ದೇವೇಗೌಡ:–** ಮಾನ್ಯ ಸಭಾಪತಿಯವರೇ, ಆಯಿತು ಮೊದಲು ನಾನು ಸಂಪೂರ್ಣವಾಗಿ ಮಾತನಾಡುವುದನ್ನು ಕೇಳಲಿ. ನಾವೇ ಮಾಡಲಿ ಅಥವಾ ನೀವೇ ಮಾಡಲಿ. ನೀವೂ ಸಹ ನಂಬಿಕೆ ಇಟ್ಟು ವಿಧೇಯಕವನ್ನು ಮಂಜೂರು ಮಾಡಿಕೊಡುತ್ತೇವೆ ಎಂದು ತಿದ್ದುಪಡಿಯನ್ನು ಮಾಡಿದ್ದೀರಿ ಅದನ್ನು ಒಪ್ಪಿಕೊಳ್ಳುತ್ತೇನೆ.

**ಸಭಾಪತಿಯವರು:–** ಮಾನ್ಯ ಸಚಿವರೆ, ಅಂದು ಉನ್ನತ ಶಿಕ್ಷಣ ಸಚಿವರಾಗಿದ್ದಂಥವರು ಸದನದಲ್ಲಿ ಈ ಭರವಸೆಯನ್ನು ನೀಡಿದ್ದಾರೆ. ನಂಬಿಕೆ ಎನ್ನುವ ಪ್ರಶ್ನೆಯೇ ಬೇರೆ. ಅಂದಿನ ಮಾನ್ಯ ಸಚಿವರು ಈ ಸದನದಲ್ಲಿ ಹೇಳಿದಂಥ ಮಾತುಗಳನ್ನು ಗಮನದಲ್ಲಿಟ್ಟುಕೊಂಡು ತಾವು ಉತ್ತರವನ್ನು ನೀಡಬೇಕು.

**ಶ್ರೀ ಜಿ.ಟಿ.ದೇವೇಗೌಡ:–** ಮಾನ್ಯ ಸಭಾಪತಿಯವರೇ, ಈಗಾಗಲೇ ಹೇಳಿರುವ ಹಾಗೆ ಅಂದು ಮುಖ್ಯಮಂತ್ರಿಗಳಾಗಿ ಮಾನ್ಯ ಸಿದ್ದರಾಮಯ್ಯನವರು ಇದ್ದರು.

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಡಾ॥ ವೈ.ಎ.ನಾರಾಯಣಸ್ವಾಮಿ:–** ಮಾನ್ಯ ಸಚಿವರೆ, ಮಾನ್ಯ ಸಭಾಪತಿಗಳು ಉಪ ಸಭಾಪತಿಗಳಾಗಿಲ್ಲ. ಅಧ್ಯಕ್ಷರಾಗಿದ್ದಾರೆ. ಹಾಗಾಗಿ ಅಧ್ಯಕ್ಷರು ಎಂದು ಕರೆಯಿರಿ.

**ಶ್ರೀ ಜಿ.ಟಿ.ದೇವೇಗೌಡ:–** ಈ ಮೊದಲು ಉಪ ಸಭಾಪತಿಗಳಾಗಿದ್ದರು.

**ಶ್ರೀ ವೈ.ಎ.ನಾರಾಯಣಸ್ವಾಮಿ:–** ಆದರೆ ಈಗ ಉಪ ಸಭಾಪತಿಗಳಾಗಿಲ್ಲ. ಆ ಕಾರಣ ಅಧ್ಯಕ್ಷರೆ ಎಂದು ಕರೆಯಿರಿ. ದೇವಾನುಗ್ರಹದಿಂದ ಮುಂದೆ ಆಗಬಹುದು.

**ಶ್ರೀ ಜಿ.ಟಿ.ದೇವೇಗೌಡ:–** ಹೌದಾ. ನನಗೆ ಗೊತ್ತಿರಲಿಲ್ಲ ಮರೆತು ಹೇಳಿಬಿಟ್ಟೆ. ಅಂದು ಮಾಜಿ ಮುಖ್ಯಮಂತ್ರಿಗಳಾದ ಮಾನ್ಯ ಸಿದ್ದರಾಮಯ್ಯನವರು ಮುಖ್ಯಮಂತ್ರಿಗಳಾಗಿದ್ದ, ಮಾನ್ಯ ಆರ್.ವಿ.ದೇಶಪಾಂಡೆರವರು ಶಿಕ್ಷಣ ಸಚಿವರಾಗಿದ್ದಂಥ ಸಂದರ್ಭದಲ್ಲಿ ಸದನದಲ್ಲಿ ಆಶ್ವಾಸನೆ ನೀಡಿದ್ದಾರೆ. ಆ ಆಶ್ವಾಸನೆ ಆಧಾರದ ಮೇಲೆ ವಿಧೇಯಕವನ್ನು ಪಾಸ್ ಮಾಡಲಾಗಿದೆ. ಬಹಳಷ್ಟು ಭರವಸೆಗಳನ್ನು ನೀಡಿ ವಿಧೇಯಕವನ್ನು ಪಾಸ್ ಮಾಡಿದರೂ ಆದೇಶವಾಗಿರುವುದಿಲ್ಲ. ದಿನಾಂಕ 25.09.2014ರಲ್ಲಿ ಸಮಿತಿಯನ್ನು ರಚಿಸಿ ವರದಿ ನೀಡುತ್ತಾರೆ. ನಂತರ 2015ನೇ ಸಾಲಿನಲ್ಲಿ ಇದೇ ಸರ್ಕಾರ ಸುಪ್ರೀಂ ಕೋರ್ಟ್‌ಗೆ ಅಪೀಲು ಸಲ್ಲಿಸಿದೆ.

(ಮುಂದು) . . .

**(407) 12-12-2018 SK-GR/6.50**

**(ವೈಸ್ ಛೇರ್ಮನ್ ಉಪಸ್ಥಿತಿ )**

**ಶ್ರೀ ಜಿ.ಟಿ ದೇವೇಗೌಡ (ಉನ್ನತ ಶಿಕ್ಷಣ ಸಚಿವರು) (ಮುಂದು):–** ಮಾನ್ಯ ಸಭಾಪತಿಯವರೇ, 2015ರಲ್ಲಿ ಮಾನ್ಯ ಸರ್ವೋಚ್ಚ ನ್ಯಾಯಾಲಯಕ್ಕೆ ಮೇಲ್ಮನವಿ ಸಲ್ಲಿಸಿ, ಮೂರೂವರೆ ವರ್ಷಗಳಾಗಿದೆ. ನಾನು ಹೇಳುವುದೇನೆಂದರೆ, ವಿಧಾನ ಪರಿಷತ್ತಿನ ಆ ಕ್ಷೇತ್ರಕ್ಕೆ ಸಂಬಂಧಪಟ್ಟಂತಹ ಮಾನ್ಯ ಸದಸ್ಯರು ಮತ್ತು ನಾವೆಲ್ಲರೂ ಕೂಡ ಮೊನ್ನೆ ತಾನೇ ಉನ್ನತ ಶಿಕ್ಷಣ ಇಲಾಖೆಯ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳ ಬಳಿ ಅಮೂಲಗ್ರವಾಗಿ ಚರ್ಚೆ ಮಾಡಿ ನಾವೆಲ್ಲರೂ ಒಟ್ಟಾಗಿ ಸೇರಿ ಶಿಕ್ಷಣ ಕ್ಷೇತ್ರದ ಬೆಳವಣಿಗೆಗೆ ಒಂದು ತೀರ್ಮಾನ ಕೈಗೊಳ್ಳಲೇಬೇಕೆಂದು ಮಾನ್ಯ ಸದಸ್ಯರೆಲ್ಲರೂ ಹೇಳಿದ್ದರು. ಮಾನ್ಯ ಮುಖ್ಯಮಂತ್ರಿಗಳ ಹತ್ತಿರ ನಾವೆಲ್ಲರೂ ಸ್ವಲ ಸಮಯ ತೆಗೆದುಕೊಂಡು, ಕೂಲಂಕಷವಾಗಿ ಇದರ ಬಗ್ಗೆ ಚರ್ಚೆ ಮಾಡಬೇಕೆಂದು ನಾನು ಆ ದಿನ ಹೇಳಿದೆ.

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಪಕ್ಷದ ವತಿಯಿಂದ ಪಾರ್ಟಿ ಮೀಟಿಂಗ್ ಇತ್ತು. ಮಾನ್ಯ ಮುಖ್ಯಮಂತ್ರಿಗಳಿಗೆ ಹೇಳಿ, ದಿನಾಂಕವನ್ನು ನಿಗಧಿ ಮಾಡೋಣ. ಮಾನ್ಯ ಸದಸ್ಯರುಗಳಾದ ಮರಿತಿಬ್ಬೇಗೌಡರು, ಬಸವರಾಜ ಹೊರಟ್ಟಿಯವರು, ಭೋಜೇಗೌಡರು ಮತ್ತು ಶ್ರೀಕಂಠೇಗೌಡರು ಹಾಗೂ ನಾವೆಲ್ಲರೂ ಕುಳಿತುಕೊಂಡು ಇದರ ಬಗ್ಗೆ ಬಹಳಷ್ಟು ಚರ್ಚೆ ಮಾಡಿದ್ದೇವೆ. ನಾವೆಲ್ಲರೂ ಅದರ ಬಗ್ಗೆ ಮಾತನಾಡೋಣವೆಂದು ಆ ದಿನ ಮಾನ್ಯ ಬಸವರಾಜ ಹೊರಟ್ಟಿಯವರು ಮತ್ತು ಮಾನ್ಯ ಮರಿತಿಬ್ಬೇಗೌಡರು ಹೇಳಿದರು. ಸಭೆ ನಡೆದಿರುವ ವಿಚಾರದ ಬಗ್ಗೆ ಮಾನ್ಯ ಶ್ರೀಕಂಠೇಗೌಡರು ಮತ್ತು ಮಾನ್ಯ ಭೋಜೇಗೌಡರು ಕೂಡ ಹೇಳಿದರು. ಈ ಕ್ಷೇತ್ರದಲ್ಲಿ ಮತ್ತು ಇದರಲ್ಲಿ ಬಹಳಷ್ಟು ಸಮಸ್ಯೆಗಳಿರುವುದನ್ನು ವಿಚಾರವನ್ನು ಸಹ ಹೇಳಿದ್ದಾರೆ. ನಾನು ಹೇಳುವುದೇನೆಂದರೆ, ಇದರ ಬಗ್ಗೆ ಎಲ್ಲಾ ಸದಸ್ಯರಿಗೂ ಕಾಳಜಿ ಇದೆ. ನಮ್ಮ ಜೊತೆಯಲ್ಲಿರುವಂತಹವರಿಗೂ ಸಹ ಆ ದಿನವೂ ಆಹ್ವಾನವನ್ನು ಕೊಟ್ಟಿದ್ದೆ. ನಾನು ಈ ದಿನವೂ ಹೇಳುತ್ತಿದ್ದೇನೆ. ಆ ಕಮಿಟಿ ರಿಪೋರ್ಟ್ ಕೊಟ್ಟ ನಂತರ, ಆ ದಿನ ಬದ್ಧತೆಯಿಂದ ಮಾಡಿದ್ದರೆ, ಇಷ್ಟೊಂದು ದಿನ ಸಮಸ್ಯೆ ಹಾಗೂ ಸುದೀರ್ಘವಾದ ಪ್ರಶ್ನೆ ಬೆಳೆಯುವುದಕ್ಕೆ ಬರುತ್ತಿರಲಿಲ್ಲ. ಇದೇ ಅಧಿವೇಶನದಲ್ಲಿ ಮಾನ್ಯ ಮುಖ್ಯಮಂತ್ರಿಯವರ ಜೊತೆಗೆ ಪ್ರತ್ಯೇಕವಾಗಿ ಸಭೆ ಮಾಡಿ, ಎಲ್ಲಾ ವಿಚಾರಗಳ ಬಗ್ಗೆ ಎಲ್ಲಾ ಅಧಿಕಾರಿಗಳನ್ನು ಕರೆದು, ಕಾರ್ಯದರ್ಶಿಯವರನ್ನು ಕರೆದು ಮತ್ತು ಮಾನ್ಯ ಸದಸ್ಯರೆಲ್ಲರನ್ನು ಒಟ್ಟಿಗೆ ಕರೆದು, ನಿರ್ಣಯ ಮಾಡುವಂತಹದ್ದನ್ನು ಮಾಡದೇ ಹೋದರೆ, ನಾವು ಮತ್ತೊಂದು ಅಧಿವೇಶನದಲ್ಲಿಯೂ ಚರ್ಚೆ ಮಾಡಬೇಕಾಗುತ್ತದೆ. ಹಿರಿಯರಾದಂತಹ ಮಾನ್ಯ ಬಸವರಾಜ ಹೊರಟ್ಟಿಯವರಿಗೂ ಕೂಡ ಹೇಳಿದ್ದೇನೆ. ಈ ವಿಚಾರ ಮಾನ್ಯ ಸರ್ವೋಚ್ಚ ನ್ಯಾಯಾಲಯದಲ್ಲಿ ಇರುವುದರ ಅಲ್ಲಿ ತೀರ್ಮಾನ ಕೈಗೊಳ್ಳಬೇಕಾಗಿದೆ. ಈ ಕುರಿತು ಮಾನ್ಯ ಸದಸ್ಯರೆಲ್ಲರೂ ಕೂಡ ಹೇಳಿದರು. ಇವರು ಮುನ್ನೂರ ಐವತ್ತೊಂದು ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡಬೇಕೆಂಬ ವಿಚಾರದ ಬಗ್ಗೆ ತಾವು ಗಮನವನ್ನು ಸೆಳೆದಿದ್ದೀರಿ. ಮಾನ್ಯ ಕಾನೂನು ಸಚಿವರು ಈ ವಿಚಾರದ ಬಗ್ಗೆ ವಿಚಾರ ಮಾಡಬೇಕಾಗಿದೆ. ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಖಾತೆಯೂ ಸಹ ಮಾನ್ಯ ಮುಖ್ಯಮಂತ್ರಿಗಳ ಕೈಯಲ್ಲಿಯೇ ಇದೆ. ನಮ್ಮ ಹಿರಿಯ ನಾಯಕರು ಮತ್ತು ನಾವೆಲ್ಲರೂ ಯಾರ್‍ಯಾರು ಮಾತನಾಡಿದ್ದೇವೆ. ನಮ್ಮೆಲ್ಲರನ್ನು ಒಳಗೊಂಡಂತೆ ಒಟ್ಟಿಗೆ ಸಭೆಯನ್ನು ಕರೆದು, ಈ ಸಮಸ್ಯೆಯನ್ನು ಕೂಡಲೇ ಪರಿಹಾರ ಮಾಡುವುದಕ್ಕೆ ನಾನು ಪ್ರಾಮಾಣಿಕವಾದ ಒಂದು ಪ್ರಯತ್ನವನ್ನು ಮಾಡುತ್ತೇನೆ.

**ವೈಸ್ ಛೇರ್ಮನ್:-** ಮಾನ್ಯ ಸಚಿವರೇ ಇದನ್ನು ಎಷ್ಟು ಸಮಯದೊಳಗೆ ಮಾಡುತ್ತೀರಾ ಹೇಳಿ.

**ಶ್ರೀ ಜಿ.ಟಿ ದೇವೇಗೌಡ:-** ಈ ಬೆಳಗಾವಿ ಸದನ ನಡೆಯುತ್ತಿರುವಾಗಲೇ ಇದನ್ನು ಮಾಡುತ್ತೇವೆ.

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಪುಟ್ಟಣ್ಣ (ಶಿಕ್ಷಕರ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಇದರಲ್ಲಿ ಬಹಳ ಸ್ಪಷ್ಟವಾದ ಒಂದು ಪ್ರಶ್ನೆ ಇದೆ. ಉನ್ನತ ಶಿಕ್ಷಣ ಸಚಿವರಾಗಿದ್ದಂತಹ ಮಾನ್ಯ ದೇಶಪಾಂಡೆಯವರು ಆ ದಿನ ಒಂದು ಸಮಿತಿಯನ್ನು ಮಾಡಿದ್ದರು. ಆದಾದ ನಂತರ ಮಾನ್ಯ ಬಸವರಾಜ ರಾಯರೆಡ್ಡಿಯವರು ಇದ್ದಂತಹ ಸಂದರ್ಭದಲ್ಲಿ ಅವರು ...

**ವೈಸ್ ಛೇರ್ಮನ್:–** ಮಾನ್ಯ ಪುಟ್ಟಣ್ಣನವರೇ ಚರ್ಚೆಗೆ ಹೋಗಬೇಡಿ.

**ಶ್ರೀ ಪುಟ್ಟಣ್ಣ:–** ಮಾನ್ಯ ಸಭಾಪತಿಯವರೇ ನಾನು ಚರ್ಚೆಗೆ ಹೋಗುತ್ತಿಲ್ಲ. ನನಗೆ ಮಾತನಾಡಲು ಅವಕಾಶ ಮಾಡಿಕೊಡಿ.

**ವೈಸ್ ಛೇರ್ಮನ್:–** ಮಾನ್ಯ ಪುಟ್ಟಣ್ಣನವರೇ, ತಾವು ಏನು ಕೇಳಬೇಕು?

**ಶ್ರೀ ಪುಟ್ಟಣ್ಣ:–** ಮಾನ್ಯ ಸಭಾಪತಿಯವರೇ, ನಾನು ಸುದೀರ್ಘವಾಗಿ ಮಾತನಾಡುವುದಕ್ಕೆ ಹೋಗುತ್ತಿಲ್ಲ. ಉನ್ನತ ಶಿಕ್ಷಣ ಸಚಿವರು ಆ ವರಿಯನ್ನು ಒಪ್ಪಕೊಳ್ಳುತ್ತೀರಯೇ?

**ವೈಸ್ ಛೇರ್ಮನ್:–** ಮಾನ್ಯ ಪುಟ್ಟಣ್ಣನವರೇ...

**ಶ್ರೀ ಪುಟ್ಟಣ್ಣ:–** ಮಾನ್ಯ ಸಭಾಪತಿಯವರಿಗೆ ಈ ಹಿಂದಿನ ಇಬ್ಬರು ಉನ್ನತ ಶಿಕ್ಷಣ ಸಚಿವರಿಗೂ ವರದಿಯನ್ನು ಕೊಟ್ಟಿದ್ದೇವೆ. ಈಗ ಇವರು ಮಾನ್ಯ ಉನ್ನತ ಶಿಕ್ಷಣ ಸಚಿವರಾಗಿದ್ದಾರೆ. ಮೊದಲನೆಯದಾಗಿ, ಆ ವರದಿಯನ್ನು ಒಪ್ಪಿಕೊಳ್ಳುತ್ತೀರಾ ಅಥವಾ ಇಲ್ಲವೋ? ಎರಡನೇಯದಾಗಿ, ಆ ವರದಿಯನ್ನು ಒಪ್ಪಿಕೊಂಡರೆ, ಈ ಕಾಲ್ಪನಿಕ ವೇತನ ವರದಿಯನ್ನು ಎಷ್ಟು ದಿವಸದೊಳಗೆ implement ಮಾಡುತ್ತಾರೆ ಎಂಬುದು ನನ್ನ ಎರಡು ಪ್ರಶ್ನೆಯಾಗಿದೆ.

**ಶ್ರೀ ಭೋಜೇಗೌಡ (ಶಿಕ್ಷಕರ ಕ್ಷೇತ್ರ):–** ಮಾನ್ಯ ಸಭಾಪತಿಯವರೇ,...

**ವೈಸ್ ಛೇರ್ಮನ್:–** ಮಾನ್ಯ ಭೋಜೇಗೌಡರೇ.... ದಯವಿಟ್ಟು, ಮಾನ್ಯ ಅರುಣ ಶಹಾಪುರವರೇ ಕುಳಿತುಕೊಳ್ಳಿ.

**ಶ್ರೀ ಭೋಜೇಗೌಡ:–** ಮಾನ್ಯ ಸಭಾಪತಿಯವರೇ, it is one line answer, which is required here. ಒಂದು ಲೈನ್ ಉತ್ತರ ಬೇಕಾಗಿರುವುದು. ಮಾನ್ಯ ಸಚಿವರು ಇದರ ಬಗ್ಗೆ ಬಹಳ ಗಂಭೀರವಾಗಿ ತೆಗೆದುಕೊಂಡಿದ್ದಾರೆ. ಮಾನ್ಯ ಸದಸ್ಯರೆಲ್ಲರನ್ನು ಅದರಲ್ಲಿ ಸೇರಿಸಿಕೊಂಡು ಈ ಅಧಿವೇಶನ ಮುಗಿಯುವುದರೊಳಗೆ ಮುಗಿಸುತ್ತೇವೆಂದು ಹೇಳಿದ್ದಾರೆ. ಇದರ ಬಗ್ಗೆ ನನ್ನ ಸಲಹೆ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಏನೆಂದರೆ, ಇನ್ನೂ ಮುಂದುವರೆದು let the Government take the opinion of the Advocate General ಎನ್ನುವ ಮಾತನ್ನು ಹೇಳುತ್ತೇನೆ. ಏಕೆಂದರೆ, ಹಲವಾರು ನ್ಯಾಯಾಲಯಗಳ ಆದೇಶಗಳು ಬಂದಿರುವುದರಿಂದ, ಆ ಆದೇಶಗಳನ್ನು ಇಟ್ಟುಕೊಂಡು, ಎಲ್ಲಾ ಸಮಿತಿಯ ಸದಸ್ಯರುಗಳು ಮತ್ತು ಬೇರೆ ಬೇರೆ ಸಂಘಟನೆಯವರು ಮನವಿಯನ್ನು ಕೂಡ ಕೊಟ್ಟಿದ್ದಾರೆ. ಹಾಗಾಗಿ ಇದರ ಬಗ್ಗೆ ಒಂದು opinion ತೆಗೆದುಕೊಂಡರೆ, ಇದು hundred percent fruitful ಆಗುತ್ತದೆ. ಅದರ ಬಗ್ಗೆ opinion ತೆಗೆದುಕೊಂಡು ಇದನ್ನು ಕ್ಲಿಯರ್ ಮಾಡಬಹುದು.

**ಡಾ. ವೈ.ಎ. ನಾರಾಯಣಸ್ವಾಮಿ (ಶಿಕ್ಷಕರ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಮಾನ್ಯ ಭೋಜೇಗೌಡರೇ ಶಿಕ್ಷಣ ಮಂತ್ರಿಯಾಗಲಿ ಬಿಡಿ.

**ವೈಸ್ ಛೇರ್ಮನ್:–** ಮಾನ್ಯ ವೈ.ಎ. ನಾರಾಯಣಸ್ವಾಮಿಯವರೇ,...

**ಡಾ. ವೈ.ಎ. ನಾರಾಯಣಸ್ವಾಮಿ (ಶಿಕ್ಷಕರ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಮಾನ್ಯ ಭೋಜೇಗೌಡರೇ ಶಿಕ್ಷಣ ಮಂತ್ರಿಯವರಾಗುವುದಕ್ಕೆ ತೊಂದರೆ ಇಲ್ಲ. ಇವತ್ತು ಮಾನ್ಯ ಜಿ.ಟಿ. ದೇವೇಗೌಡರು ಉನ್ನತ ಶಿಕ್ಷಣ ಸಚಿವರು. ಮಾನ್ಯ ಪುಟ್ಟಣ್ಣನವರು ಮಾನ್ಯ ಶಿಕ್ಷಣ ಸಚಿವರಿಗೆ ನಿರ್ದಿಷ್ಟವಾಗಿ ಉತ್ತರವನ್ನು ಕೇಳಿದ್ದಾರೆ. ನಿರ್ದಿಷ್ಟವಾದ ಉತ್ತರವನ್ನು ಹೇಳುತ್ತಾರೆ ಎನ್ನುವುದರ ಬಗ್ಗೆ ನಾವು ನಿರೀಕ್ಷೆ ಮಾಡುತ್ತೇವೆ.

**ಶ್ರೀ ಅರುಣ ಶಹಾಪುರ:–** ಮಾನ್ಯ ಸಭಾಪತಿಯವರೇ,

**ವೈಸ್ ಛೇರ್ಮನ್:–** ಮಾನ್ಯ ಅರುಣ ಶಹಾಪುರರವರೇ, ...

**ಶ್ರೀ ಪುಟ್ಟಣ್ಣ:–** ಮಾನ್ಯ ಸಭಾಪತಿಯವರೇ... ಈಗಾಗಲೇ ಮುಗಿದು ಹೋಗಿರುವ ಕಥೆ. ಮಾನ್ಯ ಸಚಿವರಿಗೆ ಎರಡು ಪ್ರಶ್ನೆಗಳನ್ನು ಕೇಳಿದ್ದೇನೆ. ದಯವಿಟ್ಟು, ಆ ಎರಡು ಪ್ರಶ್ನೆಗಳಿಗೆ ಉತ್ತರ ಕೊಡಿಸಿ.

**ಶ್ರೀ ಅರುಣ ಶಹಾಪುರ:–** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರಿಗೆ ತಮ್ಮ ಮೂಲಕ ವಿನಂತಿಯನ್ನು ಮಾಡುವುದೇನೆಂದರೆ, ಈ ಹಿಂದೆ ಮಾನ್ಯ ದೇಶಪಾಂಡೆಯವರ ಭರವಸೆಯ ಮೇಲೆ ನಾವೆಲ್ಲರೂ ನಂಬಿಕೆಯನ್ನು ಇಟ್ಟಿದ್ದೇವು. ತಾವು ಈಗ ಭರವಸೆಯನ್ನು ನೀಡಿದರೆ, ನಾವು ಅದರ ಮೇಲೆಯೂ ಸಹ ನಂಬಿಕೆಯನ್ನು ಇಡುತ್ತೇವೆ. ಏಕೆ ಎಂದು ಹೇಳಿದರೆ, ಸದನದಲ್ಲಿ ಕೊಡುವಂತಹ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಭರವಸೆಯನ್ನು ಎಂದು ಹೇಳಿ ಹಾಗೂ ತಮ್ಮ ಮೇಲೆಯೂ ನಂಬಿಕೆಯನ್ನು ಇಟ್ಟುಕೊಂಡು ಒಪ್ಪಿಕೊಳ್ಳುತ್ತೇವೆ.

**ಶ್ರೀ ಭೋಜೇಗೌಡ:-** ಮಾನ್ಯ ಸಭಾಪತಿಯವರೇ,...

**ವೈಸ್ ಛೇರ್ಮನ್:-** ದಯವಿಟ್ಟು ಮಾನ್ಯ ಭೋಜೇಗೌಡರೇ ಕುಳಿತುಕೊಳ್ಳಿ. ಮಾನ್ಯ ಸಚಿವರು ಮಾತನಾಡಲಿ.

**ಶ್ರೀ ಜಿ.ಟಿ ದೇವೇಗೌಡ:-** ಮಾನ್ಯ ಸಭಾಪತಿಯವರೇ, ಈಗ ಮಾನ್ಯ ಪುಟ್ಟಣ್ಣನವರು ಇದರ ಬಗ್ಗೆ ಏನು ಹೇಳಿದ್ದಾರೆ. ನಾನು ಮೊದಲೇ ಕೇಳಿದೆ. ಇದೇ ಸದನದಲ್ಲಿ ಮಾನ್ಯ ದೇಶಪಾಂಡೆಯವರು ಇದನ್ನು ಒಪ್ಪಿದ್ದರು. 2015ನೇ ಇಸವಿಯಲ್ಲಿ ಈಗಾಗಲೇ ಅದು ಮೂರುವರೆ ವರ್ಷಗಳಾಗಿವೆ. ಮಾನ್ಯ ಸಭಾಪತಿಯವರೇ, ನಾನು ಇದನ್ನು ಮಾಡುವುದಕ್ಕಾಗುತ್ತದೆಯೇ? ಇದನ್ನು ನಾನು ಒಪ್ಪಿಕೊಂಡೆ ಎನ್ನುವ ವಿಚಾರ ಇಟ್ಟುಕೊಳ್ಳಿ. ಆದರೆ ಮಾನ್ಯ ಮುಖ್ಯಮಂತ್ರಿಗಳು ಅಲ್ಲಿ ಒಪ್ಪಿಕೊಳ್ಳಲಿಲ್ಲ ಎಂದು ಇಟ್ಟುಕೊಳ್ಳಿ. ಆಗ ಏನು ಮಾಡುವುದು? ನಾನು ಏನು ಹೇಳುತ್ತೇನೆಂದರೆ, ನಾನೊಬ್ಬ ಸಚಿವನಾಗಿ, ಜವಾಬ್ದಾರಿಯುತವಾಗಿ ಮತ್ತು ಸರ್ಕಾರದ ಪ್ರತಿನಿಧಿಯಾಗಿ, ಮಾನ್ಯ ಮುಖ್ಯಮಂತ್ರಿಗಳ ಜೊತೆ ಮಾತನಾಡಿ, ಈ ಸಮಸ್ಯೆಯನ್ನು ಬಗೆಹರಿಸುವುದಕ್ಕೆ ನಾನು ಕ್ರಮ ಕೈಗೊಳ್ಳುತ್ತೇನೆ.

**ಶ್ರೀ ಪುಟ್ಟಣ್ಣ:-** ಮಾನ್ಯ ಸಭಾಪತಿಯವರೇ. ನಾನು ಏನು ಹೇಳುತ್ತೇನೆಂದರೆ, .....

**ವೈಸ್ ಛೇರ್ಮನ್:-** ದಯವಿಟ್ಟು ಮಾನ್ಯ ಪುಟ್ಟಣ್ಣನವರೇ ಕುಳಿತುಕೊಳ್ಳಿ.

**ಶ್ರೀ ಪುಟ್ಟಣ್ಣ:-** ಮಾನ್ಯ ಸಭಾಪತಿಯವರೇ, ಒಂದು ನಿಮಿಷ ನಾನು ಹೇಳುವ ಮಾತನ್ನು ಕೇಳಿ. ತಾವು ಏಕೆ ರೀತಿ ಮಾಡುತ್ತೀರಿ?

**(ಗೊಂದಲ)**

**ಡಾ. ವೈ.ಎ. ನಾರಾಯಣಸ್ವಾಮಿ:-**ಮಾನ್ಯ ಸಭಾಪತಿಯವರೇ, ಪರಿಹಾರ ಏನು ಹೇಳಲಿ?

**(ಗೊಂದಲ)**

**ಶ್ರೀ ಪುಟ್ಟಣ್ಣ:-** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಈ ವರದಿಯನ್ನು ಒಪ್ಪಿಕೊಳ್ಳುತ್ತಾರೆಯೋ ಅಥವಾ ಇಲ್ಲವೋ? ಮಾನ್ಯ ಮುಖ್ಯಮಂತ್ರಿಗಳ ಜೊತೆ ಸೇರಿ ಈ ಸಮಸ್ಯೆಯನ್ನು ಬಗೆಹರಿಸಲಿ. ನನ್ನದೇನು ತಕರಾರು ಇಲ್ಲ. ಈ ವರದಿಯನ್ನು ಒಪ್ಪಿಕೊಳ್ಳುತ್ತೀರೋ ಅಥವಾ ಇಲ್ಲವೋ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಎಂದು ನಾನು ಕೇಳುತ್ತಿದ್ದೇನೆ. ಮೊದಲನೆಯದಾಗಿ ವರದಿಯನ್ನು ಒಪ್ಪಿಕೊಳ್ಳುತ್ತಾರೆಯೇ? ಈ ವರದಿಯನ್ನು ನಾವು ಒಪ್ಪಿಕೊಂಡಿದ್ದೇವೆ. ಮಾನ್ಯ ಮುಖ್ಯಮಂತ್ರಿಗಳ ಜೊತೆ ಈ ಸಮಸ್ಯೆಯನ್ನು ಬಗೆಹರಿಸುತ್ತೇನೆಂಬುದರ ಬಗ್ಗೆ ಮಾನ್ಯ ಸಚಿವರು ಹೇಳಲಿ. ನಮಗೆ ಅಷ್ಟೇ ಬೇಕಾಗಿರುವುದು. ಮಾನ್ಯ ಸಚಿವರು ಆಮೇಲೆ ಈ ಸಮಸ್ಯೆಯನ್ನು ಬಗೆಹರಿಸಿ. ನಾನು ಅದನ್ನು ಬೇಡ ಎಂದು ಹೇಳಲಿಲ್ಲ.

**(ಈ ಹಂತದಲ್ಲಿ ಮಾನ್ಯ ಸಭಾಪತಿಯವರು ಪೀಠವನ್ನು ಅಲಂಕರಿಸಿದರು)**

**ಡಾ. ವೈ.ಎ. ನಾರಾಯಣಸ್ವಾಮಿ:**-ಮಾನ್ಯ ಸಭಾಪತಿಯವರೇ, ಅವರು ಉನ್ನತ ಶಿಕ್ಷಣ ಸಚಿವರಾಗಿದ್ದಾರೆ ಮತ್ತು ಹಿರಿಯರಿದ್ದಾರೆ. ಎಲ್ಲವನ್ನೂ ಮುಖ್ಯಮಂತ್ರಿಯವರನ್ನು ಕೇಳಿ ಮಾಡಬೇಕೇ? ಅವರು ಎಷ್ಟು ಇಲಾಖೆಗಳನ್ನು ನಿಭಾಯಿಸಿ ಬಂದಿದ್ದಾರೆ. ಮಾನ್ಯ ಸಿದ್ದರಾಮಯ್ಯನವರಂತಹ ಹಿರಿಯರನ್ನು ಚುನಾವಣೆಯಲ್ಲಿ ಸೋಲಿಸಿ ಬಂದಂತಹವರು. ತಮಗೆ ಅಷ್ಟು ಶಕ್ತಿ ಇದೆ?

**ಶ್ರೀ ಜಿ.ಟಿ ದೇವೇಗೌಡ:-** ತಾವು ಆ ರೀತಿ ಏಕೆ ಮಾತನಾಡುತ್ತೀರಾ. ಬೇಡದೇ ಇರುವ ಮಾತು ಏಕಪ್ಪ? ರಾಜಕಾರಣದಲ್ಲಿ ಇಂದಿರಾಗಾಂಧಿಯವರನ್ನು ಶ್ರೀ ರಾಜ್ ನಾರಾಯಣ್‌ರವರು ಚುನಾವಣೆಯಲ್ಲಿ ಸೋಲಿಸಲಿಲ್ಲವೇ? ರಾಜಕಾರಣದಲ್ಲಿ ಸೋಲು ಗೆಲುವು ಇದ್ದಿದ್ದೆ.

**(ಗೊಂದಲ)**

**ಶ್ರೀ ಅರುಣ ಶಹಾಪುರ:-** ಮಾನ್ಯ ಸಭಾಪತಿಯವರೇ, ...

**(ಗೊಂದಲ)**

**ಸಭಾಪತಿಯವರು:-** ಮಾನ್ಯ ಸಚಿವರು ಉತ್ತರ ಕೊಡುತ್ತಾರೆ.

**(ಗೊಂದಲ)**

**ಶ್ರೀ ಅರುಣ ಶಹಾಪುರ:-** ಮಾನ್ಯ ಸಭಾಪತಿಯವರೇ, ...

**ಶ್ರೀ ಜಿ.ಟಿ ದೇವೇಗೌಡ:-** ಮಾನ್ಯ ಸಭಾಪತಿಯವರೇ, ಎಲ್ಲಾರಿಗೂ ಸೋಲು-ಗೆಲುವು ಇರುತ್ತದೆ. ಮಾನ್ಯ ದೇವೇಗೌಡರು ಎಷ್ಟು ಸಲ ಸೋತರು ಮತ್ತು ಗೆದ್ದರು. ಶ್ರೀಮತಿ ಇಂದಿರಾಗಾಂಧಿಯವರು ಎಷ್ಟು ಸಲ ಸೊತರು ಮತ್ತು ಗೆದ್ದರು. ರಾಜಕಾರಣದಲ್ಲಿ ಇದೆಲ್ಲಾ ಮಾಮೂಲಿಯಾಗಿದೆ.

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಪುಟ್ಟಣ್ಣ:–** ಮಾನ್ಯ ಸಭಾಪತಿಯವರೇ, ಇದರಲ್ಲಿ ರಾಜಕಾರಣ ದಯವಿಟ್ಟು ಬೇಡ. ಮಾನ್ಯ ಸಚಿವರಲ್ಲಿ ಮನವಿ ಮಾಡಿಕೊಳ್ಳುವುದೇನೆಂದರೆ, ದಯವಿಟ್ಟು, ಈ ವರದಿಯನ್ನು ಒಪ್ಪಿಕೊಳ್ಳಿ. ಆನಂತರ ಮಾನ್ಯ ಮುಖ್ಯಮಂತ್ರಿಯವರ ಜೊತೆ ಸೇರಿ ಈ ಸದನ ನಡೆಯುವುದರೊಳಗಡೆ ಅಂತಿಮವಾದ ತೀರ್ಮಾನವನ್ನು ಹೇಳಲಿ.

**ಶ್ರೀ ಜಿ.ಟಿ ದೇವೇಗೌಡ:–** ಮಾನ್ಯ ಸಭಾಪತಿಯವರೇ, ಇವತ್ತು ತಾವು ನೂತನ ಸಭಾಪತಿಯಾಗಿ, ಎಲ್ಲಾರ ಸಮಸ್ಯೆಗಳನ್ನು ಅಲಿಸುತ್ತಾ, ಈ ಸದನವನ್ನು ಚೆನ್ನಾಗಿ ನಡೆಸುತ್ತಿದ್ದೀರಿ. ತಮಗೆ ನಾನು ಅಭಿನಂದನೆಯನ್ನು ಸಲ್ಲಿಸುವ ಮೂಲಕ ಒಂದು ಮಾತನ್ನು ಹೇಳುವುದಕ್ಕೆ ಬಯಸುತ್ತೇನೆ. 2014–15ನೇ ಇಸವಿಯಲ್ಲಿ ಮಾನ್ಯ ಬಸವರಾಜ ಹೊರಟ್ಟಿಯವರ ನಾಯಕತ್ವದಲ್ಲಿ ಒಂದು ಸಮಿತಿ ಮಾಡಿ, ಕೊಟ್ಟಿರುವ ವರದಿಯ ಬಗ್ಗೆ ಮಾನ್ಯ ಪುಟ್ಟಣ್ಣನವರು ಕೇಳುತ್ತಿದ್ದಾರೆ. ಆ ವರದಿ ಬಂದಮೇಲೆ ಮಾನ್ಯ ಸರ್ವೋಚ್ಚ ನ್ಯಾಯಾಲಯಕ್ಕೆ ಮೇಲ್ಮನವಿಯನ್ನು ಹಾಕಿದ್ದೇವೆ. ಆದ್ದರಿಂದ ಎಲ್ಲಾ ವಿಷಯವನ್ನು...

**ಶ್ರೀ ಅರುಣ ಶಹಾಪುರ:–** ಮಾನ್ಯ ಸಭಾಪತಿಯವರೇ, ನಾನು ಇದನ್ನು ಸರಿಪಡಿಸುತ್ತೇನೆ. ಇದು ಮಾನ್ಯ ಸರ್ವೋಚ್ಚ ನ್ಯಾಯಾಲಯದಲ್ಲಿ ಮಾನ್ಯ ಉಚ್ಚ ನ್ಯಾಯಾಲಯದ, ವಿಭಾಗೀಯ ಪೀಠಕ್ಕೆ ಮೇಲ್ಮನವಿಯನ್ನು ಸಲ್ಲಿಸಿರುವುದು.

**ಶ್ರೀ ಜಿ.ಟಿ ದೇವೇಗೌಡ:–** ಏನು?

**ಶ್ರೀ ಅರುಣ ಶಹಾಪುರ:–** ತಾವು ಮಾನ್ಯ ಸರ್ವೋಚ್ಚ ನ್ಯಾಯಾಲಯ ಎಂದು ಹೇಳಿದ್ದೀರಿ. ಮಾನ್ಯ ಉಚ್ಚ ನ್ಯಾಯಾಲಯದ, ವಿಭಾಗೀಯ ಪೀಠಕ್ಕೆ ಮೇಲ್ಮನವಿಯನ್ನು ಹಾಕಿರುವುದು.

**(ಗೊಂದಲ)**

**ಶ್ರೀ ಪುಟ್ಟಣ್ಣ:–** ಮಾನ್ಯ ಸಭಾಪತಿಯವರೇ, ಇದರ ಮೇಲೆ ಹೋಗಿಲ್ಲ. ಬೇರೆಯವರು ಈ ಕಾಯಿದೆಯ ಮೇಲೆ ಏನೂ ಅಪೀಲು ಹೋಗಿದ್ದರೋ, ಅದರ ಮೇಲೆ ತಾವು ಅಪೀಲು ಹೋಗಿರುವುದು.

**ಶ್ರೀ ಜಿ.ಟಿ ದೇವೇಗೌಡ:–** ಇದರ ಮೇಲೆ ನಾವು ಹೋಗಿದ್ದೇವೆಂದು ಹೇಳುತ್ತಿಲ್ಲ.

**ಶ್ರೀ ಪುಟ್ಟಣ್ಣ:–**ಹೌದು.

**ಶ್ರೀ ಜಿ.ಟಿ ದೇವೇಗೌಡ:–** ಮಾನ್ಯ ಸಭಾಪತಿಯವರೇ, ನಾನು ಸ್ಪಷ್ಟವಾಗಿ ಹೇಳುತ್ತಿದ್ದೇನೆ. ವರದಿ ಮೇಲೆ ಹೋಗಿದ್ದಾರೆಂದು ನಾನು ಹೇಳುತ್ತಿಲ್ಲ. ವರದಿ ಸರ್ಕಾರಕ್ಕೆ ಬಂದ ನಂತರವೂ ಕೂಡ ಮಾನ್ಯ

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

“ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

ನ್ಯಾಯಲಯಕ್ಕೆ ಮೇಲ್ಮನವಿ ಸಲ್ಲಿಸಿದ್ದಾರೆ. ಇದನ್ನು legal ಆಗಿ, ಕೂಡ ಮಾನ್ಯ ಮುಖ್ಯಮಂತ್ರಿಗಳು, ಕಾನೂನು ಸಚಿವರು ಮತ್ತು ನಾವೆಲ್ಲರೂ ಕುಳಿತುಕೊಂಡು, ಖಂಡಿತ ಬಗೆಹರಿಸುವಂತಹ ಪ್ರಮಾಣಿಕ ಪ್ರಯತ್ನವನ್ನು ಮಾಡುತ್ತೇವೆ.

**(ಗೊಂದಲ)**

**ಸಭಾಪತಿಯವರು:–** ಚರ್ಚೆ ಮುಕ್ತಾಯವಾಯಿತು.

**ಡಾ. ವೈ.ಎ. ನಾರಾಯಣಸ್ವಾಮಿ:–**ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ನೀಡಿದ ಉತ್ತರ ನಮಗೆ ಯಾರಿಗೂ ಸಮಾಧಾನವಾಗಲಿಲ್ಲ. ಇದು ಶಿಕ್ಷಕರ ಮೇಲೆ ಗದಾ ಪ್ರಹಾರ. ಹಿರಿಯರಾದಂತಹ ಮಾನ್ಯ ಬಸವರಾಜಹೊರಟ್ಟಿಯವರಿಗೆ ಮಾಡಿದಂತಹ ಅವಮಾನ.

**(ಗೊಂದಲ)**

**ಸಭಾಪತಿಯವರು:–** ಚರ್ಚೆ ಮುಕ್ತಾಯವಾಯಿತು.

**ಡಾ. ವೈ.ಎ. ನಾರಾಯಣಸ್ವಾಮಿ:–**ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಕಾಲ್ಪನಿಕ ವೇತನ ಬಡ್ತಿಯನ್ನು ಒಪ್ಪಿಕೊಳ್ಳಲೇಬೇಕು. ಸರ್ಕಾರದ ಉತ್ತರವನ್ನು ನಿರಾಕರಿಸಿ, ನಾವು ಸಭಾತ್ಯಾಗವನ್ನು ಮಾಡುತ್ತಿದ್ದೇವೆ.

**ಸಭಾಪತಿಯವರು:–** ಡಾ. ತೇಜಸ್ವಿನಿ ಗೌಡರು ತಮ್ಮ ವಿಷಯದ ಬಗ್ಗೆ ಮಾತನಾಡಿ.

(ಮುಂದು..)

(408)12.12.2018,7.00,ಟಿಸಿಹೆಚ್/ಜಿಆರ್ (ಸಭಾಪತಿಯವರ ಉಪಸ್ಥಿತಿ)

**ಶ್ರೀ ಪುಟ್ಟಣ್ಣ(ಶಿಕ್ಷಕರ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಸಮಿತಿ ಕೊಟ್ಟಿರುವ ವರದಿಯನ್ನು ಮಾನ್ಯ ಸಚಿವರು ಒಪ್ಪಿಕೊಳ್ಳಬೇಕು ಎಂದು ಹೇಳುತ್ತಿದ್ದೇನೆ. ಅದನ್ನು ಒಪ್ಪಿಕೊಂಡ ನಂತರ ಮಾನ್ಯ ಮುಖ್ಯಮಂತ್ರಿಗಳ ಜೊತೆಯಲ್ಲಿ ಮಾತನಾಡಿ ಈ ಸಮಸ್ಯೆಯನ್ನು ಬಗೆಹರಿಸಬೇಕು. ನಾನು ತುಂಬಾ ಸರಳವಾಗಿ ಹೇಳುತ್ತಿದ್ದೇನೆ. ಆದರೆ ಇದಕ್ಕೆ ಮಾನ್ಯ ಸಚಿವರು ಸರಿಯಾದಂತಹ ಉತ್ತರ ಕೊಡದಿರುವುದರಿಂದ, ನಾನು ಸಮಿತಿ ಕೊಟ್ಟಿರುವ ವರದಿಯನ್ನು ಒಪ್ಪಿಕೊಂಡು ಇಂಪ್ಲಿಮೆಂಟ್ ಮಾಡಬೇಕೆಂದು ಒತ್ತಾಯ ಮಾಡಿ ಸಭಾತ್ಯಾಗ ಮಾಡುತ್ತಿದ್ದೇನೆ.

“ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

(ಈ ಹಂತದಲ್ಲಿ ಶ್ರೀ ಪುಟ್ಟಣ್ಣನವರು ಸಭಾತ್ಯಾಗ ಮಾಡಿ ಸದನದಿಂದ ಹೊರನಡೆದರು)

**ಶ್ರೀ ಎಸ್.ಎಲ್.ಭೋಜೇಗೌಡ:-** ಮಾನ್ಯ ಸಭಾಪತಿಯವರೇ, ಒಂದು ವಿಚಾರವನ್ನು ಗಮನಿಸಬೇಕು. ಮಾನ್ಯ ವಿರೋಧ ಪಕ್ಷದ ನಾಯಕರು ಕರೆಯುತ್ತಿದ್ದಾರೆ. ಈಗಾಗಲೇ ಸಮಯ ಸಂಜೆ 7.00 ಗಂಟೆ ಆಗಿದೆ. ಅದಕ್ಕಾಗಿ ಮಾನ್ಯ ಪುಟ್ಟಣ್ಣನವರು ಸಭಾತ್ಯಾಗ ಮಾಡುತ್ತಿದ್ದಾರೆ.

**ಆ) ವಿಷಯ:- ವಿಧಾನಸೌಧದ ಸ್ವಚ್ಛತೆ ಹಾಗೂ ಕಾರ್ಯನಿರ್ವಹಣೆ ಬಗ್ಗೆ.**

**ಡಾ॥ ತೇಜಸ್ವಿನಿಗೌಡ(ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ನಮ್ಮೆಲ್ಲರ ಅತ್ಯಂತ ಕರ್ನಾಟಕದ ಹೆಮ್ಮೆಯ ಒಂದು ಶಕ್ತಿಸೌಧ ವಿಧಾನಸೌಧ. ಬೆಂಗಳೂರಿನಲ್ಲಿ ನಾಡಿನ ಮುತ್ಸದ್ಧಿಗಳು ಹಾಗೂ ಪ್ರಾತಃಸ್ಮರಣೀಯರು ಆದಂತಹ ದಿವಂಗತ ಪೂಜ್ಯ ಕೆಂಗಲ್ ಹನುಮಂತಯ್ಯನವರ ಕನಸು ನನಸಾದಂತಹ ಒಂದು ಭವ್ಯ ಸೌಧವಾಗಿ ವಿಧಾನಸೌಧ ಮೂಡಿದೆ. ಯಾವುದೇ ಒಂದು ಸ್ಟ್ರಕ್ಚರ್ ಇಡೀ ಜಗತ್ತಿನ ಒಂದು ಮಾನುಮೆಂಟ್ ಲಿಸ್ಟ್‌ನಲ್ಲಿ ಬರುವಂತಹ ವಿಧಾನ ಸೌಧವನ್ನು 60 ವರ್ಷಗಳ ಹಿಂದೆ ನಿರ್ಮಾಣ ಮಾಡಿದಾಗ, ಅವರು ಊಹಿಸಿದಂತಹ ಅಗಾಧತೆ, ಕರ್ನಾಟಕದ ಎಲ್ಲಾ ಜನ ಪ್ರತಿನಿಧಿಗಳು ಪ್ರತಿನಿಧಿಸುವಂತಹ ಆ ಸ್ಥಳಕ್ಕೆ ಇವತ್ತಿಗೂ ಕೂಡ ನಾವೆಲ್ಲಾ ಸಮಾಧಾನಪಟ್ಟುಕೊಳ್ಳುವಂತಹ ವ್ಯವಸ್ಥೆಗಳನ್ನು ಆವೊತ್ತಿನ ವಾಸ್ತುಶಿಲ್ಪಿಗಳು, ಇಂಜಿನಿಯರ್‌ಗಳು ಮತ್ತು ಮುತ್ಸದ್ಧಿಗಳು ಮಾಡಿ ಹೋಗಿದ್ದಾರೆ. ದುರಂತ ಎಂದು ಹೇಳಿದರೆ, ಇವತ್ತಿನ ದಿವಸ ಆ ವಿಧಾನಸೌಧದ ಒಳಗೆ ಹೋದಾಗ, ಪಾರಂಪರಿಕ ಕಟ್ಟಡಗಳನ್ನು ನಿರ್ವಹಣೆ ಮಾಡುವಾಗ, ಜಾಗತಿಕ ಮಟ್ಟದ ಸಂರಕ್ಷಣಾ ನಿಯಮಗಳು ಇವೆ. ಯಾವ್ಯಾವುದೋ ಟೈಲ್ಸ್‌ನ್ನು ಹಾಕುವಂತಿಲ್ಲ. ಯಾವ್ಯಾವುದೋ ಬಣ್ಣ ಬಳಿಯುವಂತಿಲ್ಲ. ನಾವು ಒಂದು ಕಲ್ಲನ್ನು ಶುದ್ಧಗೊಳಿಸಬೇಕಾದರೂ ಸಹ ಇಟ್ಟಿಗೆಯಿಂದ ಕಟ್ಟಿರುವ ಕಟ್ಟಡಗಳನ್ನು ಯಾವ ರೀತಿ ನಿರ್ವಹಣೆ ಮಾಡಬೇಕು, ಅಲ್ಲಿನ ಹವಾಗುಣದ ವೈಪರೀತ್ಯ ಹೇಗಿದೆ, ಇಂತಹ ಅನೇಕ ಅಂಶಗಳು ಇಲ್ಲಿ ಪರಿಗಣನೆಗೆ ಬರುತ್ತವೆ. ಇವತ್ತಿನ ದಿವಸ ಇಂಗ್ಲೆಂಡ್‌ನಲ್ಲಿ ಇರತಕ್ಕಂಥ ಪ್ರಸ್ತುತ ರಾಜಕುಮಾರ ಆದ ವಿಲಿಯಮ್ಸ್ ಅವರು ವಾಸ ಮಾಡುತ್ತಿರುವ ಕಟ್ಟಡವು ಸುಮಾರು 1000 ಇಸವಿಯಲ್ಲಿ ಕಟ್ಟಿರತಕ್ಕಂಥ ಕಟ್ಟಡವಾಗಿದೆ, ಅದು ಇವತ್ತಿಗೂ ವಾಸಯೋಗ್ಯವಾದಂತಹ ಕಟ್ಟಡ ಆಗಿದೆ. ಅಷ್ಟರಮಟ್ಟಿಗೆ ಅದನ್ನು ಸಂರಕ್ಷಣೆ ಮಾಡಿದ್ದಾರೆ. ಭೂಗರ್ಭ ಶಾಸ್ತ್ರದ ಪ್ರಕಾರ, ಯಾವ ಕಲ್ಲನ್ನು ನಾವು ಬಳಸಿದ್ದೇವೆ ಎಂಬುದು ಪ್ರಮುಖವಾಗುತ್ತದೆ. ನಾವು ಕಡಪದ ಕಲ್ಲನ್ನು ಬಳಸಿದರೆ, ಅದರ ಘನ ವಿನ್ಯಾಸ ಬೇರೆ ಇರುತ್ತದೆ. ಸಾದರಹಳ್ಳಿ ಕಲ್ಲನ್ನು ಬಳಸಿದರೆ, ಅದರ ಘನ ವಿನ್ಯಾಸ ಕೂಡ ಬೇರೆ ಇರುತ್ತದೆ. ಪ್ರಕೃತಿಯಲ್ಲಿನ ಧೂಳನ್ನು ಯಾವ ರೀತಿ ಆಕರ್ಷಣೆ ಮಾಡುತ್ತದೆ. ಅದು ಮಳೆಗೆ ಯಾವ ರೀತಿ ಸ್ಪಂದಿಸುತ್ತದೆ ಮತ್ತು

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

Carbon dioxide ಬಂದಾಗ ಯಾವ ರೀತಿ absorb ಮಾಡಿಕೊಳ್ಳುತ್ತದೆ ಎನ್ನುವುದರ ಆಧಾರದ ಮೇಲೆ ಕಟ್ಟಡದ ಸ್ವಚ್ಛತೆಯನ್ನು ಯಾವ ರೀತಿ ಕಾಪಾಡಬೇಕು ಎಂದು ಆ ತಜ್ಞರು ನಿರ್ಧರಿಸಿರುತ್ತಾರೆ. ನನಗೆ ತುಂಬಾ ದುಃಖ ಆಗತಕ್ಕಂಥದ್ದು ವಿಧಾನಸೌಧದ ಚಂದವನ್ನು ಮತ್ತು ಸ್ವಚ್ಛತೆಯನ್ನು ಕಾಪಾಡಬೇಕಾಗಿತ್ತು. ಆದರೆ ಇದು ಆಗುತ್ತಿಲ್ಲ. ಇದಕ್ಕೆ ಏಕೆ ಕಾರಣವೆಂದು ನನಗೆ ಗೊತ್ತಾಗುತ್ತಿಲ್ಲ. ಅದರ ಮಹತ್ವ ಗೊತ್ತಿಲ್ಲವೇ? ಅನೇಕ ಕಡೆ ಇದಕ್ಕೆ ಸುರಕ್ಷತೆಯನ್ನು ಒದಗಿಸಿಲ್ಲ. ಸುಮಾರು 60 ವರ್ಷಗಳ ಹಿಂದೆ ಟೆಕ್ನಾಲಜಿ ಇರಲಿಲ್ಲ ಮತ್ತು ಇಂಟರ್‌ನೆಟ್ ವ್ಯವಸ್ಥೆ ಇರಲಿಲ್ಲ. ವೈರ್‌ಗಳು ಹೋಗುವುದಕ್ಕೆ ವ್ಯವಸ್ಥೆ ಮಾಡಿಲ್ಲ. ಆದರೆ ನಾವು ಇಷ್ಟೊಂದು ಬುದ್ಧಿವಂತರಿದ್ದು, ವೈಫೈ ಯುಗದಲ್ಲಿ ಇದ್ದೇವೆ. ನಾನು ಇಂಜಿನಿಯರ್ ಅಲ್ಲ, ಆದರೆ ಈ ವಿಚಾರ ನನಗೆ ಗೊತ್ತಾಗುತ್ತದೆ. ಅಲ್ಲಿ ಕೆಟ್ಟ ಕೆಟ್ಟ ವೈರ್‌ಗಳು ಗೋಡೆಗಳ ಮೇಲೆ ಹೋಗಿದೆ. ನಮ್ಮ ಮನೆಯಲ್ಲಿ ಆ ರೀತಿ ಗೋಡೆಯ ಮೇಲೆ ವೈರ್‌ಗಳು ಹೋಗುವುದಕ್ಕೆ ಬಿಡುತ್ತೇವೆಯೇ? ಅದೇ ರೀತಿಯಾಗಿ ಸುವರ್ಣ ವಿಧಾನಸೌಧ ಎಷ್ಟು ಚೆನ್ನಾಗಿ ಕಟ್ಟಿದ್ದೇವೆ. ವಿಧಾನಸೌಧದಲ್ಲಿ ವುಡನ್ ಫ್ಲಾಂಕ್ ಹಾಕಿ, ಒಳಗಡೆ ಅದನ್ನು ಮುಚ್ಚಿಟ್ಟು ಮಾಡುವುದಕ್ಕೆ ಸಾಧ್ಯತೆ ಇದೆ. ಅಲ್ಲಿನ ಟೈಲ್ಸ್ ನಡೆದು ನಡೆದು ಹಾಳಾಗಿದೆ. 60 ವರ್ಷಗಳ ನಡಿಗೆ, ಕರ್ನಾಟಕದ ಪ್ರಜಾಪ್ರಭುತ್ವದ ವಿಕಾಸ ಅದರಲ್ಲಿ ಆಗಿದೆ. ಒಂದು ಟೈಲ್ಸ್‌ನ್ನು ಬದಲಾಯಿಸಬೇಕಾದರೆ, ಇವತ್ತಿನ ಟೆಕ್ನಾಲಜಿಯಲ್ಲಿ ಅದೇ ರೀತಿಯ ಸ್ವರೂಪದಲ್ಲಿ ಮಾಡುವುದಕ್ಕೆ ಸಾಧ್ಯತೆ ಇದೆ. ಇದನ್ನು ಮಾಡಲು ಆಸಕ್ತಿ ಏಕಿಲ್ಲ? ಏಕೆ ಆ ರೀತಿ ಮಾಡುತ್ತಿಲ್ಲ? ವಿಧಾನಸೌಧದ ಮೆಟ್ಟಿಲಿಗೆ ಕೆಟ್ಟ ಕೆಟ್ಟ ಟೈಲ್ಸ್‌ನ್ನು ಜೋಡಿಸಿದ್ದಾರೆ. ಬಣ್ಣವನ್ನು ಬಳಿಯಬೇಕಾದರೂ ಸಹ ನಾವು ನೋಡುತ್ತಿದ್ದೇವೆ. ಕೊಠಡಿಗಳನ್ನು ಅವರಿಗೆ ಇಷ್ಟ ಬಂದಹಾಗೆ ವಿನ್ಯಾಸಗೊಳಿಸುತ್ತಿದ್ದಾರೆ. ಕೊಠಡಿಯ ಒಳಾಂಗಣವನ್ನು ತಮಗೆ ಬೇಕಾದಂತೆ ಅಲಂಕರಿಸಿಕೊಳ್ಳುತ್ತಿದ್ದಾರೆ. ಪಾರಂಪರಿಕ ಕಟ್ಟಡಗಳಲ್ಲಿ ಅದಕ್ಕೆ ಅವಕಾಶ ಇಲ್ಲವೇ ಇಲ್ಲ. ನಾವೇನು ವಿಧಾನಸೌಧ ಕಟ್ಟಿದ್ದೇವೆ ಅದರಲ್ಲಿಯೇ ಇರಬೇಕಾಗುತ್ತದೆ. ಇದ್ದಂತೆ ಇದ್ದಾಗಲೂ ಎಲ್ಲರಿಗೂ ಒಳ್ಳೆಯದೇ ಆಗಿದೆ. ವಾಸ್ತು ಆ ನಂಬಿಕೆಗಳೇ ಬೇರೆ. ನಾನು ಮಾನ್ಯ ಸಭಾಪತಿಯವರಿಗೆ ವಿನಂತಿಸುವುದೇನೆಂದರೆ, ಒಮ್ಮೆ ಪ್ರತಿಯೊಂದನ್ನು ನೋಡಬೇಕು. ಹಿಂಬದಿಯಲ್ಲಿ ಬರತಕ್ಕಂಥದ್ದರಲ್ಲಿ ರಾತ್ರಿವೇಳೆಯಲ್ಲಿ ಲೈಟ್‌ಗಳು ಇರುವುದಿಲ್ಲ. ಇವತ್ತಿನ ದಿವಸ ಪೀಠೋಪಕರಣಗಳಿಗೆ ಮರವನ್ನು ಉಪಯೋಗಿಸುವಂತಿಲ್ಲ. ನಾವೆಲ್ಲರೂ ಕೂಡ ಅರಣ್ಯ ರಕ್ಷಣೆ ಬಗ್ಗೆ, ಪ್ರಕೃತಿ ಬಗ್ಗೆ ತುಂಬಾ ಕಾಳಜಿಯಿಂದ ಮಾತನಾಡುತ್ತೇವೆ. ಅಂತಹ ಸಮಯದಲ್ಲಿ ಒಂದು ಪೀಠ ಮಾಡಿದ್ದೇವೆ. ಅದಕ್ಕೊಂದು ಎಮೋಷನಲ್ ಅಟಾಚ್‌ಮೆಂಟ್ ಇರುತ್ತದೆ. Antique piece ಎಂದು ಕೋಟಿ ಕೋಟಿ ರೂಪಾಯಿಗಳು ಬೆಲೆ ಬಾಳುವಂತಹ, ಲಕ್ಷಾಂತರ ರೂಪಾಯಿಗಳ ಬೆಲೆ ಕೊಟ್ಟು ಹಳೆಯ ವಸ್ತುಗಳನ್ನು ಪ್ರಿಸರ್ವ್ ಮಾಡುತ್ತೇವೆ. ಇವತ್ತಿನ ದಿವಸ ಅಂತಹ ಪೀಠೋಪಕರಣಗಳು ಅಲ್ಲಿ ಕಾಣುತ್ತಿಲ್ಲ.

ಕೆಟ್ಟದಾಗಿರುವಂತಹ ಪ್ಲೈವುಡ್‌ನ್ನು ನಾವು ಬಳಸುತ್ತಿದ್ದೇವೆ. ಆ ಕಿಟಕಿಗಳ ಪಾಲಿಶ್‌ನ್ನು ತೆಗೆದರೆ ಅದಕ್ಕೆ ನೈಜವಾದಂತಹ ಮರದ ಕಲ್ಲರ್ ಕಾಣುವಂತಹ ಪಾಲಿಷ್‌ನ್ನೇ ಹಾಕಬೇಕು. ನಾನು ಇದನ್ನೆಲ್ಲಾ ಕಾಮನ್‌ಸೆನ್ಸ್‌ನಲ್ಲಿ ಮಾತನಾಡುತ್ತಿದ್ದೇನೆ. ನಾನು ಯಾವುದೇ Engineering ಪದವಿ ಪಡೆದ ತಜ್ಞೆ ಅಲ್ಲ. ಆದರೆ, ನಾವು ಏಕೆ ಈ ರೀತಿಯ ನಿರ್ಲಕ್ಷ್ಯ ತಾಳುತ್ತಿದ್ದೇವೆ. ಅದರ ಮಹತ್ವ ನಮಗೆ ಏಕೆ ಗೊತ್ತಾಗುವುದಿಲ್ಲ. ನಾನು ಪಾರ್ಲಿಮೆಂಟ್‌ಗೆ ಹೋದಂತಹ ಸಂದರ್ಭದಲ್ಲಿ ಪ್ರತಿಯೊಂದು ಹೆಜ್ಜೆ ಇಡುವಾಗ ನಮಸ್ಕಾರ ಮಾಡಿಕೊಂಡು ಒಳ ಹೋಗಬೇಕು ಎನ್ನುವಂತಹ ರೀತಿಯ ಬಂದು ರೋಮಾಂಚನ ಉಂಟಾಗಿತ್ತು. ನಾನು ವಿಧಾನಸೌಧದ ಒಳಗೆ accredited ಪತ್ರಕರ್ತೆಯಾಗಿ ಹೋದಂತಹ ಸಂದರ್ಭದಲ್ಲಿ ರೋಮಾಂಚನ ಆಗಿತ್ತು. ಅಧಿಕಾರಿಗಳಾಗಿ ಬರುವವರಿಗೆ ಮಾತ್ರವೇ ಈ ಸೌಭಾಗ್ಯ ಸಿಗುವುದು. ನಾವು ಚುನಾಯಿತ ಪ್ರತಿನಿಧಿಗಳಾಗಿ ಬರಬೇಕಾದರೆ 'ನಮ್ಮ ಪೂರ್ವ ಜನ್ಮದ ಪುಣ್ಯ' ಎಂದು ನಾವೆಲ್ಲರೂ ಭಾವಿಸಿಕೊಂಡಿದ್ದೇವೆ. ಇವತ್ತಿನ ದಿವಸ ತಾಜ್‌ಮಹಲ್‌ನ್ನು ನಿರ್ವಹಣೆ ಮಾಡಬೇಕಾದರೆ, ಅದನ್ನು ಅಮೃತ ಶಿಲೆಯಿಂದ ಮಾಡಿರುವುದರಿಂದಾಗಿ ಅದರ ನಿರ್ವಹಣೆಗೆ ಪರಿಸರ ತಜ್ಞರು ಅಭಿಪ್ರಾಯವನ್ನು ಕೊಟ್ಟಿದ್ದಾರೆ. ಆದರೆ ಬೆಂಗಳೂರು ಉದ್ಯಾನ ನಗರ ಆಗಿತ್ತು. ಇವತ್ತಿನ ದಿವಸ ಅಲ್ಲೂ ಕೂಡ ಮಾಲಿನ್ಯ ಜಾಸ್ತಿ ಆಗಿದೆ. ಆ ಕಾರಣಕ್ಕಾಗಿ ದಯಮಾಡಿ ಅದಕ್ಕೆ ಏನು ಮಹತ್ವ ಕೊಡಬೇಕು ಎಂದರೆ, ಇಡೀ ಜಗತ್ತಿನ ಪ್ರವಾಸಿಗರು ಬಂದ ತಕ್ಷಣವೇ ಒಂದು ಫೋಟೋ ತೆಗೆಸಿಕೊಳ್ಳಬೇಕು ಎನ್ನತಕ್ಕಂಥ ಮಹತ್ವದ ಭಾವನಾತ್ಮಕ ಕಟ್ಟಡದ ಸ್ವಚ್ಛತೆಯನ್ನು ಕಾಪಾಡುವ ದೃಷ್ಟಿಯಿಂದ ಯಾವುದೇ ವಿಳಂಬ ಮಾಡದೇ ತಕ್ಷಣವೇ ಶುದ್ಧೀಕರಿಸಬೇಕು. ಅತ್ಯಂತ ಪ್ರಕರವಾದಂತಹ, ತೀಕ್ಷ್ಣವಾದಂತಹ ರಾಸಾಯನಿಕವನ್ನು ಬಳಸದೇ Mild ಆಗಿರುವಂತಹ ಮಾರ್ಜಕಗಳನ್ನು ಬಳಸಿ, ಕನಿಷ್ಠಪಕ್ಷ ವರ್ಷಕ್ಕೊಮ್ಮೆ ಅಥವಾ ಎರಡು ವರ್ಷಕ್ಕೊಮ್ಮೆಯಾದರೂ ವಿಧಾನಸೌಧದ ಹೊರಗಿನ ಕಲ್ಲಿನ ಕಟ್ಟಡವನ್ನು ಸ್ವಚ್ಛವಾಗಿ ನಿರ್ವಹಣೆ ಮಾಡಲೇಬೇಕು. ಇದಕ್ಕಾಗಿ ಒಂದು ಪರಿಣಿತಿಯನ್ನು ಹೊಂದಿರತಕ್ಕಂಥ ವಾಸ್ತುಶಿಲ್ಪದ ಸಂರಕ್ಷಣೆಯಲ್ಲಿ ಪರಿಣಿತಿ ಹೊಂದಿರುವಂತಹ ಕರ್ನಾಟಕದ ಎಲ್ಲಾ ಮಹನೀಯರನ್ನು ಒಳಗೊಂಡಂತೆ, ಒಂದು ಸಮಿತಿಯನ್ನು ನಿರ್ಮಾಣ ಮಾಡಬೇಕು. ಈ ಸಮಿತಿಯಲ್ಲಿ ಮಾನ್ಯ ವಿಧಾನಸಭಾಧ್ಯಕ್ಷರು ಮತ್ತು ಮಾನ್ಯ ಸಭಾಪತಿಯವರ ಮೇಲ್ವಿಚಾರಣೆಯಲ್ಲಿ ಈ ಒಂದು ಸುಂದರ ವಾಸ್ತುಶಿಲ್ಪದ ಸಂರಕ್ಷಣೆಯನ್ನು ಮಾಡಬೇಕೆಂದು ಅತ್ಯಂತ ನೋವಿನಿಂದ ಕೇಳಿಕೊಳ್ಳುತ್ತಿದ್ದೇನೆ. ಎಷ್ಟೇ ಕಷ್ಟಗಳು ಇದ್ದರೂ ಕೂಡ ಕೆಲವೊಂದನ್ನು ನಾಡಿನ ಹಿರಿಮೆ-ಗರಿಮೆಯ ಬಗ್ಗೆ ಪ್ರತಿಷ್ಠೆ ಬಂದಾಗ ನಾವು ಈ ಸುವರ್ಣ ವಿಧಾನಸೌಧವನ್ನು ಮಾಡಲೇಬೇಕಾಯಿತು. ಇವತ್ತಿನ ದಿವಸ ನಮಗೆಲ್ಲರಿಗೂ ಖುಷಿ ಆಗುವಂಥದ್ದು ಎಂದರೆ, ಸುವರ್ಣ ವಿಧಾನಸೌಧವನ್ನು ಬೆಳಗಾವಿಯಲ್ಲಿ ನಿರ್ಮಾಣ ಮಾಡಿದ್ದೇವೆ. ಈ ಕಟ್ಟಡದ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಹೊರಗಡೆ ಗ್ರಾನೈಟ್ ಕಲ್ಲನ್ನು ಬಳಸಿದ್ದೇವೆ. ಈ ಗ್ರಾನೈಟ್‌ನ ಮೇಲೆ ಯಾವ ಯಾವುದೋ ರೀತಿಯ ದ್ರವ್ಯವನ್ನು ಬಳಸಿದರೆ ಅದು absorb ಮಾಡಿಕೊಳ್ಳುತ್ತದೆ. Vitrified Tiles ಮತ್ತು ಗ್ರಾನೈಟ್‌ಗೂ ಈ ದ್ರವ್ಯವನ್ನು absorb ಮಾಡಿದಾಗ ಆ ಕಲೆಯನ್ನು ತೆಗೆಯುವುದಕ್ಕೆ ಆಗುವುದಿಲ್ಲ. ಹಾಗಾಗಿ, ಇಂತಹ ಸೂಕ್ಷ್ಮ ಸಂಗತಿಗಳ ಬಗ್ಗೆಯೂ ಕೂಡ ಎಜುಕೇಟ್ ಮಾಡಿ, ಈ ಎರಡೂ ಕಟ್ಟಡಗಳು ಏನಿವೆ ಇವುಗಳ ನಿರ್ವಹಣೆಯನ್ನು ಮಾಡಬೇಕು. ವಿಶೇಷವಾಗಿ ಅಲ್ಲಿ ಕೆಲಸ ಮಾಡುವಂತಹ ಸಿಬ್ಬಂದಿಗಳು ಇದ್ದಾರೆ, ಅವರನ್ನು ನೋಡಿದಾಗ ಬಹಳ ದುಃಖವಾಗುತ್ತದೆ. ಅವರಿಗೆ ಎಂತಹ ಕಠೋರವಾದ ಶಿಕ್ಷೆ ಕೊಡಬೇಕು ಎಂದು ನನಗೆ ಗೊತ್ತಿಲ್ಲ. ಸರ್ಕಾರ ಅವರಿಗೆ ಉದ್ಯೋಗ ಕೊಟ್ಟು ಜೀವನ ಕೊಟ್ಟು, ಗುರ್ತಿಸಿ ಪ್ರತಿಷ್ಠೆ ಕೊಟ್ಟಿದೆ. ಅಲ್ಲಿ ಅವರು ಕಸವನ್ನು ಕೂಡ ಗುಡಿಸಿರುವುದಿಲ್ಲ. ಆ ವಸ್ತುಗಳು ‘ನಮ್ಮದಲ್ಲ’ ಎನ್ನುಂತಹ ರೀತಿಯಲ್ಲಿ ಕಾಣುತ್ತಿದ್ದಾರೆ. ಒಂದು ರೀತಿಯಲ್ಲಿ ನಿಯಮಾವಳಿಗಳನ್ನು ಮೀರಿ ರಿಪೇರಿ ಕೆಲಸ ಮಾಡುತ್ತಿರುವುದನ್ನು ನಿಲ್ಲಿಸಬೇಕು. ಏಕ ಸ್ವರೂಪದ ಕಟ್ಟಡದ ವಿನ್ಯಾಸವನ್ನು maintain ಮಾಡಬೇಕು. ಒಬ್ಬೊಬ್ಬರು ಅಧಿಕಾರಿಗೆ ಒಂದೊಂದು ರೀತಿ ಕೊಠಡಿ ಮತ್ತು ಪೀಠೋಪಕರಣಗಳು ಬೇಕು ಅನ್ನಿಸುತ್ತಿದೆ; ಒಬ್ಬೊಬ್ಬರು ಸಚಿವರು ಬಂದಾಗ ಒಂದೊಂದು ರೀತಿಯ ಕೊಠಡಿ ಮತ್ತು ಪೀಠೋಪಕರಣಗಳು ಬೇಕು ಅನ್ನಿಸುತ್ತದೆ. ಈಗ ವಿರೋಧ ಪಕ್ಷದ ನಾಯಕರು ಎಂದಾಗ, ಅವರಿಗೆ ಆ ಕೊಠಡಿಯಲ್ಲಿ ಅವರಿಗೇನು ಅನುಕೂಲ ಬೇಕಿದೆಯೋ ಅದೇ ರೀತಿ ಒಮ್ಮೆ ಮಾಡಿಕೊಡಿ. ವಿರೋಧ ಪಕ್ಷದ ನಾಯಕರು ಬಂದಾಗ ಪ್ರತಿ ವರ್ಷ ರಿನೋವೇಷನ್ ಮಾಡುವ ಅವಶ್ಯಕತೆ ಇಲ್ಲ. ಭಗವಂತ ನಮಗೆ ಅಧಿಕಾರ ಕೊಟ್ಟಿರುವುದಕ್ಕೆ ನಾವೆಲ್ಲರೂ ಇಲ್ಲಿ ಇದ್ದೇವೆ. ಹಾಗಾಗಿ, ರಾಜ್ಯದ ಬೊಕ್ಕಸಕ್ಕೆ ನಷ್ಟ ಮಾಡದೇ ಇಂತಿಷ್ಟು ಕಾಲಮಿತಿಯಲ್ಲಿಯೇ ಮಾಡಬೇಕು ಎನ್ನುಂತಹ ಕಟ್ಟುನಿಟ್ಟಾದ ಒಂದು ಕಾನೂನನ್ನು ರೂಪಿಸಿ, ಇದನ್ನು ರಕ್ಷಣೆ ಮಾಡಬೇಕು ಎಂದು ನಾನು ಪೀಠಕ್ಕೆ ನಮಸ್ಕರಿಸಿ ಅವಕಾಶ ಕೊಟ್ಟಿದ್ದಕ್ಕಾಗಿ ಧನ್ಯವಾದವನ್ನು ಹೇಳುತ್ತಿದ್ದೇನೆ. ರಿನೋವೇಷನ್ ಮಾಡುವಾಗ ಮಾನ್ಯೂಮೆಂಟಲ್ ವಿಧಾನಸೌಧದ ಮೂಲ ಪೀಠೋಪಕರಣಗಳನ್ನು ವಾಪಸ್ಸು ತರಿಸಬೇಕು ಮತ್ತು ಅವುಗಳನ್ನು ಪ್ರಿಸರ್ವ್ ಮಾಡಬೇಕೆಂದು ಆಗ್ರಹ ಮಾಡುತ್ತೇನೆ.

**ಶ್ರೀ ಜಿ.ಟಿ.ದೇವೇಗೌಡ, ಉನ್ನತ ಶಿಕ್ಷಣ ಸಚಿವರು(ಶ್ರೀ ಹೆಚ್.ಡಿ.ಲೋಕೋಪಯೋಗಿ ಸಚಿವರ ಪರವಾಗಿ):-** ಸನ್ಮಾನ್ಯ ಸದಸ್ಯರು ಸದನದಲ್ಲಿ ನಿಮಯ 330 ರಡಿಯಲ್ಲಿ ಬಹಳ ಉತ್ತಮವಾದಂತಹ ಚರ್ಚೆಯನ್ನು ಮಾಡಿದ್ದಾರೆ. ಇವತ್ತಿನ ದಿವಸ ಪ್ರಪಂಚದಲ್ಲೇ ಅತ್ಯುತ್ತಮವಾದ ಹಾಗೂ ಸುಂದರವಾದಂತಹ ವಿಧಾನಸೌಧವನ್ನು ಸನ್ಮಾನ್ಯ ಶ್ರೀ ಕೆಂಗಲ್ ಹನುಮಂತಯ್ಯನವರು ಅಂತಹ ಒಂದು ಕಾಲದಲ್ಲಿ ವೈಜ್ಞಾನಿಕವಾಗಿ ಕಟ್ಟಿಸಿದ್ದಾರೆ ಎನ್ನುವಂತಹ ಪ್ರಖ್ಯಾತಿ ನಾಡಿನ ಎಲ್ಲೆಡೆ ಇಂದಿಗೂ ಕೂಡ ಇದೆ.

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಅದೇ ಸೌಂದರ್ಯವನ್ನು ಉಳಿಸಬೇಕು ಎನ್ನತಕ್ಕಂಥ ಒಂದು ಮನವಿಯನ್ನು ಪ್ರಸ್ತಾಪ ಮಾಡಿದ್ದಾರೆ. ವಿಧಾನಸೌಧ ಕಟ್ಟಡ ನಿರ್ಮಾಣವಾಗಿ ಸುಮಾರು 6 ದಶಕಗಳು ಕಳೆದಿರುವುದರಿಂದ, ಸದರಿ ಕಟ್ಟಡದಲ್ಲಿ ಅವರು ಹೇಳಿದಂತೆ, ನೆಲಹಾಸು ಸವೆದು ಹೋಗಿರುತ್ತದೆ. ಕೆಲವು ಕಡೆಗಳಲ್ಲಿ ಶೌಚಾಲಯಗಳ ಪೈಪುಗಳು ತುಕ್ಕು ಹಿಡಿದು ಹಾಳಾಗಿ ಕಟ್ಟಡ ಸೋರಿಕೆ ಆಗುತ್ತಿದ್ದು, ಅವುಗಳನ್ನು ದುರಸ್ಥಿ ಮಾಡಲೇಬೇಕಾದ ಅನಿವಾರ್ಯ ಸ್ಥಿತಿ ಉಂಟಾಗಿದೆ. **(ಮುಂದು...)**

**(409)12-12-2018(7-10)ಎಂ.ಎಂ-ಎಂ.ಡಿ**

(ಸಭಾಪತಿಯವರ ಉಪಸ್ಥಿತಿ)

**ಶ್ರೀ ಜಿ.ಟಿ. ದೇವೇಗೌಡ (ಮುಂದು):-**

ಶೌಚಾಲಯಗಳ ಪೈಪುಗಳು ತುಕ್ಕು ಹಿಡಿದು ಕೆಲವು ಕಡೆ ಹಾಳಾಗಿ ಕಟ್ಟಡ ಸೋರಿಕೆಯಾಗುತ್ತಿದ್ದು ಅವುಗಳನ್ನು ದುರಸ್ತಿಗೊಳಿಸಬೇಕಾದ ಅನಿವಾರ್ಯ ಸ್ಥಿತಿ ಉಂಟಾಗಿದೆ. ಮೇಲ್ಛಾವಣಿಯಿಂದ ನೀರು ಸೋರಿಕೆಯಾಗುತ್ತಿದ್ದು ಅವುಗಳನ್ನು ಬದಲಾಯಿಸಬೇಕಾಗಿರುತ್ತದೆ. ಎಲ್ಲಾ ಕಾಮಗಾರಿಗಳಿಗೂ ಮುಖ್ಯಮಂತ್ರಿಗಳು ಮತ್ತು ಲೋಕೋಪಯೋಗಿ ಸಚಿವರು ಮುಖ್ಯ ಕಾರ್ಯದರ್ಶಿಗಳನ್ನು ಕರೆದು 'ಈ ರೀತಿ ಆಗುತ್ತಿದೆ, ಅದು ಸರ್ಕಾರದ ಗಮನಕ್ಕೆ ಬಂದಿದ್ದು, ವಿಧಾನ ಸೌಧದ heritage ಏನಿದೆ ಅದನ್ನು ಉಳಿಸುವುದಕ್ಕೆ ಬೇರೆ ಯಾರಿಗೂ ಜವಾಬ್ದಾರಿ ಕೊಡದೇ ಸ್ವತಃ ನೀವೇ ಖುದ್ದಾಗಿ ಹೋಗಿ ವಿಧಾನಸೌಧ ಮತ್ತು ವಿಕಾಸಸೌಧ ಎರಡೂ ಕಡೆ ಇದನ್ನು ನೋಡಬೇಕು' ಮತ್ತು ಗೋಡೌನ್‌ನಲ್ಲಿ ತುಂಬಿರುವ ಹಾಳಾಗಿರುವ ವಸ್ತುಗಳನ್ನು ರಿಪೇರಿ ಮಾಡಿಸಿ ಕಾಲೇಜುಗಳಿಗೆ ಕೊಡುವಂತಹದ್ದು, ಜಿಲ್ಲಾಧಿಕಾರಿ ಕಛೇರಿಗಳಲ್ಲಿ ಏನು ವಸ್ತುಗಳನ್ನು stock ಮಾಡಿದ್ದರು ಅದನ್ನೆಲ್ಲಾ ಶಿಕ್ಷಣ ಇಲಾಖೆಯ ಸರ್ಕಾರಿ ಕಛೇರಿಗೆ ಕಳುಹಿಸುವುದು ಹಾಗೂ ಯಾವ ವಸ್ತುಗಳನ್ನು ರಿಪೇರಿ ಮಾಡುವುದಕ್ಕೆ ಆಗುವುದಿಲ್ಲವೋ ಅಂತಹವುಗಳನ್ನು ಕೊಟ್ಟು ಬೇರೆ ಉಪಕರಣವನ್ನು ತರಿಸಿಕೊಳ್ಳುವ ಕಾರ್ಯಕ್ರಮಗಳು ಪ್ರಾರಂಭವಾಗಿವೆ. ಅವರು ಹೇಳಿರುವಂತಹ ರೀತಿಯಲ್ಲಿ ನೂರಕ್ಕೆ ನೂರು ಅದರ ಸೌಂದರ್ಯ, ರಸ್ತೆ ಅದರ ಸುತ್ತಲಿರುವ ರಕ್ಷಣಾ ವ್ಯವಸ್ಥೆ ಇವುಗಳ ಬಗ್ಗೆ ಆಯಾ ಇಲಾಖೆಯ ಅಧಿಕಾರಿಗಳನ್ನೇ ಕರೆದು ಮುಖ್ಯಮಂತ್ರಿಗಳು ಸಭೆ ನಡೆಸಿದ್ದಾರೆ. ಪೊಲೀಸ್ ಇಲಾಖೆ, ಲೋಕೋಪಯೋಗಿ ಇಲಾಖೆ ಇರಬಹುದು, ವಿಧಾನಸೌಧವನ್ನು ಸುಂದರವಾಗಿಡಲು ಇರುವ ಸಂಬಂಧಪಟ್ಟ ಇಲಾಖೆಗಳ ತಜ್ಞರುಗಳನ್ನು ಮತ್ತು ಅಧಿಕಾರಿಗಳನ್ನು ಕರೆದು ಸಭೆ ನಡೆಸಿದ್ದಾರೆ. ಮಾನ್ಯ ಸದಸ್ಯರು ಹೇಳಿರುವುದನ್ನೆಲ್ಲವನ್ನೂ ಸಂಪೂರ್ಣವಾಗಿ ಮಾಡುವುದಕ್ಕೆ ಮಾನ್ಯ ಮುಖ್ಯಮಂತ್ರಿಗಳು ಕ್ರಮ ಕೈಗೊಂಡಿದ್ದಾರೆ, ಸರ್ಕಾರ ಅದಕ್ಕೆ ಬದ್ಧವಾಗಿದೆಯೆಂದು ತಿಳಿಸುತ್ತೇನೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಡಾ:ತೇಜಸ್ವಿನಿಗೌಡ (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಬದಲಿ ಪೀಠೋಪಕರಣಗಳನ್ನು ಒದಗಿಸುವಾಗ ಇದು showcase ರೀತಿಯಾಗಿದ್ದು ಇಂತಹ wooden works ಗಳನ್ನು ಎಲ್ಲಿ ತೋರಿಸುವುದಕ್ಕೆ ಸಾಧ್ಯವಾಗುತ್ತದೆ? ವಿಧಾನಸೌಧದಲ್ಲಿ ಅಮೂಲ್ಯವಾದಂತಹ ಪೀಠೋಪಕರಣಗಳನ್ನೇ ಬಳಸಬೇಕು. ದೊಡ್ಡ ದೊಡ್ಡ ಸೋಫಾಗಳನ್ನೆಲ್ಲಾ ಒದಗಿಸುವುದು ಪ್ರದರ್ಶನದ ವೇದಿಕೆ ಅಲ್ಲ. ಬದಲಿ ಪೀಠೋಪಕರಣಗಳನ್ನು ಒದಗಿಸುವಾಗ ಒಳ್ಳೆಯ ಮರದ, ಸರಳವಾದ, ಮೂಲ ಸ್ಥಿತಿಯಲ್ಲಿದ್ದ ಪೀಠೋಪಕರಣಗಳನ್ನೇ ಒದಗಿಸಬೇಕೆಂದು ಮನವಿ ಮಾಡುತ್ತೇನೆ.

**ಶ್ರೀ ಐವನ್ ಡಿ'ಸೋಜಾ (ನಾಮನಿರ್ದೇಶಿತರು):-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಬಹಳ ಒಳ್ಳೆಯ ವಿಚಾರವನ್ನೇ ಚರ್ಚೆಗೆ ತಂದಿದ್ದಾರೆ. ವಿಚಾರ ಅತ್ಯಂತ ಸೂಕ್ಷ್ಮವಾಗಿದೆ. Day to day ನಾವು ಅದನ್ನು ನೋಡುತ್ತೇವೆಯೇ ಹೊರತು, ಅದರ ಬಗ್ಗೆ ಚರ್ಚೆ ಮಾಡದೆ ನಿರ್ಲಕ್ಷ್ಯ ಮಾಡುತ್ತೇವೆ. ನಾನು ಸರ್ಕಾರಿ ಮುಖ್ಯ ಸಚೇತಕನಾಗಿದ್ದಾಗ ನನಗೆ ವಿಧಾನಸೌಧದ ಮೊದಲನೇ ಮಹಡಿಯಲ್ಲಿ ಕೊಠಡಿ ಸಂಖ್ಯೆ 110 ಅನ್ನು ಕೊಟ್ಟಿದ್ದರು. ನಾನು ಕೊಠಡಿಗೆ ಬರುವಾಗ ಮಾರನೇ ದಿವಸಕ್ಕೆ ಒಬ್ಬ ಗುತ್ತಿಗೆದಾರ ಬಂದು ಎಲ್ಲಾ ಪೀಠೋಪಕರಣಗಳನ್ನೂ ಬದಲಾವಣೆ ಮಾಡಿಕೊಡುತ್ತೇವೆ ಎಂದು ಹೇಳಿದರು. ನನಗೆ ಆ ಪೀಠೋಪಕರಣಗಳನ್ನು ನೋಡಿದರೆ; ಅಂತಹ ಪೀಠೋಪಕರಣಗಳನ್ನು ಮನೆಯಲ್ಲಾದರೆ ಇನ್ನೂ ಹತ್ತು ವರ್ಷಗಳ ಕಾಲ ಉಪಯೋಗಿಸುತ್ತಿದ್ದೆ. ಆದರೆ ಹೊಸಬರು ಬಂದ ಕೂಡಲೇ ಪೀಠೋಪಕರಣಗಳನ್ನು ಬದಲಾವಣೆ ಮಾಡುವಂತಹ ಪದ್ಧತಿ ಬಹಳ ಚಾಲ್ತಿಯಲ್ಲಿದೆ. ಅದು ಮಂತ್ರಿಗಳಿರಬಹುದು ಅಥವಾ ಬೇರೆ ಬೇರೆ parliamentary functionaries ಇರಬಹುದು ಯಾವುದೇ ಉನ್ನತ ಹುದ್ದೆಯಲ್ಲಿರುವವರು ಬಂದಾಗ ತಕ್ಷಣವೇ ಬದಲಾವಣೆ ಮಾಡಬೇಕೆಂಬ ಚಿಂತನೆ ತಲೆಯಲ್ಲಿರುತ್ತದೆ. ಅದಕ್ಕೆ ಕಡಿವಾಣ ಹಾಕುವ ಕೆಲಸ ಮಾಡಬೇಕಾಗಿದೆ. ವಿಧಾನಸೌಧವು ಒಂದು ಪ್ರತಿಷ್ಠಿತ ಕಟ್ಟಡವಾಗಿದ್ದು, ಅದರ ಸೌಂದರ್ಯವನ್ನು ನೋಡುವುದಕ್ಕೆ ಬರುವವರು ಇರುತ್ತಾರೆ. ಆದರೆ ಕಾರಿಡಾರ್‌ಗಳಲ್ಲೆಲ್ಲಾ ಹೊಸ ಹೊಸ ಸೋಫಾಗಳು, ಟೇಬಲ್‌ಗಳು ಮತ್ತು ಕುರ್ಚಿಗಳನ್ನು ರಾಶಿ ಹಾಕಿರುತ್ತಾರೆ. ವಿಧಾನಸೌಧದ 3ನೇ ಮಹಡಿಯಲ್ಲಿ ಹಳೆಯ ಕುರ್ಚಿಗಳಿಗೆ ಪುನಃ ಮೆಶ್‌ಗಳನ್ನು ನೇಯ್ಗೆ ಮಾಡಿ ಅದನ್ನು ಸರಿ ಮಾಡುವುದನ್ನು ಕೂಡ ಕಂಡಿದ್ದೇನೆ. ಕೆಲವು ಕಡೆ ಸ್ವಲ್ಪ ಬದಲಾವಣೆಗಳು ಆಗಿವೆ. ಆದರೆ ಇನ್ನೂ ಅದು ಹೆಚ್ಚಿನ ಪ್ರಮಾಣದಲ್ಲಿ ಆಗುವುದಕ್ಕೆ ಈ ಚರ್ಚೆಯ ಮೂಲಕ ಸಾಧ್ಯವಾಗಲಿ ಎಂದು ಸರ್ಕಾರದ ಗಮನವನ್ನು ಸೆಳೆಯಬಯಸುತ್ತೇನೆ. ಅದರ ಜೊತೆಗೆ ವಿಧಾನಸೌಧದ ಎಲ್ಲಾ ಕೊಠಡಿಗಳ ಬಾಗಿಲುಗಳನ್ನು ನೋಡಿದರೆ ಇಲಿ ತಿಂದು ತೂತು ಮಾಡಿವೆ. ವಿಧಾನಸೌಧದಲ್ಲಿ ಇಲಿ

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಹಿಡಿಯುವುದಕ್ಕೆಂದೇ ಒಂದು squad ಇದೆ. ಅದು ಇಲಿ ಹಿಡಿಯುವುದಕ್ಕೆ ಯಾರಿಗೋ ಒಬ್ಬರಿಗೆ ಗುತ್ತಿಗೆ ನೀಡಿದೆ. ಅವರು ತಿಂಗಳಿಗೆ 40 ಇಲಿ ಹಿಡಿಯಬೇಕೆಂಬ ಷರತ್ತು ಇದೆ. 41 ಇಲಿಯನ್ನು ಹಿಡಿದರೆ ಅವರಿಗೆ ಪ್ರಶಸ್ತಿ ಕೊಡುತ್ತೀರೋ ಅದು ನನಗೆ ಗೊತ್ತಿಲ್ಲ. ಒಂದು ಇಲಿಗೆ ಇಷ್ಟು ಹಣ ಎಂದು ನಿಗದಿಪಡಿಸಿರುತ್ತಾರೆ. ನನ್ನ ಛೇಂಬರ್‌ನಲ್ಲಿ ಇಲಿಯು ನನ್ನ ಎದುರಿಗೇ ಆಚೆ ಈಚೆ ಓಡಾಡುತ್ತದೆ. ಆಗ ಇಲಿ ಹಿಡಿಯುವವರು ಎಲ್ಲಿದ್ದಾರೆಂದು ಕೇಳಿದರೆ ಇಲಿ ಹಿಡಿಯುವವರು ಈ ತಿಂಗಳಿನಲ್ಲಿ ಆಗಲೇ 40 ಇಲಿಗಳನ್ನು ಹಿಡಿದು ಆಗಿದೆ, 50 ಇಲಿ ಹಿಡಿಯುವ ಹಾಗಿಲ್ಲ ಎಂದು ಹೇಳುತ್ತಾರೆ. ಈ ರೀತಿಯ ಪದ್ಧತಿ ಇದೆ. ಮಾನ್ಯ ಸದಸ್ಯರು ಹೇಳಿದ್ದು ನನಗೆ ನೆನಪಿಗೆ ಬರುತ್ತಿದೆ. ನಮ್ಮ ಎದುರಿನಲ್ಲಿ ಇಲಿ ಓಡಾಡಿದರೂ, ಇಲಿ ಹಿಡಿಯುವವನಿದ್ದರೂ ಕೂಡ ಆತ ತನ್ನ ತಿಂಗಳ ಕೋಟಾ ಮುಗಿದಿದೆ, ಇದು ತನ್ನದಲ್ಲ ಎಂದು ಹೇಳುತ್ತಾರೆ. ನಮ್ಮ ಸಿಬ್ಬಂದಿಗಳಿಗೆ ಇದರ ಬಗ್ಗೆ ತರಬೇತಿ ಕೊಡುವ ಅವಶ್ಯಕತೆ ಇದೆ. ವಿಧಾನಸೌಧದ ಶೌಚಾಲಯಗಳ ಬಗ್ಗೆ ಹೇಳಿದರೆ ಪ್ರಯೋಜನವಿಲ್ಲ. ಅದರ ವಾಸನೆ ಒಂದು ಕಿಲೋ ಮೀಟರ್ ದೂರದವರೆಗೆ ಬರುತ್ತದೆ. ಇತ್ತೀಚಿಗೆ ಹಿಂದಿನ ಸಭಾಪತಿಯವರಾದ ಶ್ರೀ ಡಿ.ಹೆಚ್. ಶಂಕರಮೂರ್ತಿಯವರು ನನ್ನ ಕೊಠಡಿಯ ಹತ್ತಿರ ಇದ್ದ ಶೌಚಾಲಯವನ್ನು ತೆಗೆದು ಅಲ್ಲೊಂದು ಕ್ಯಾಂಟೀನ್ ಅನ್ನು ನಿರ್ಮಾಣ ಮಾಡಿದರು. ಅಷ್ಟು ವಾಸನೆ ಬರುತ್ತದೆ. ಅದನ್ನು ಶುಚಿಯಾಗಿಡುವುದಕ್ಕೆ ಪ್ರಯತ್ನ ಮಾಡಬೇಕು. ಪದೇ ಪದೇ ದಿನಪತ್ರಿಕೆಯಲ್ಲಿ ನೋಡುತ್ತಿರುತ್ತೇವೆ, ವಾಸ್ತು ಕಾರಣಕ್ಕಾಗಿ ವಿಧಾನಸೌಧದ ಗೋಡೆಗಳನ್ನು ಒಡೆದರು, ಇಂತಹ ಪ್ರತಿಷ್ಠಿತ ಕಟ್ಟಡದಲ್ಲಿ ಅದನ್ನು ಮಾಡಲೇಬಾರದು ಎಂದು ಕಾನೂನಿನಲ್ಲಿ ನಿಯಮವನ್ನು ತರಬೇಕು. ಅದು ತಮ್ಮ ಅಧಿಕಾರದ ಮಿತಿಯಲ್ಲಿ ಬರುತ್ತದೆ. ಅದಕ್ಕೆ ಬೇಕಾದ ಕಾನೂನನ್ನು ತಂದು ಯಾರೇ ಸಚಿವರಾಗಿರಲಿ, Antique building ನ್ನು ಒಡೆದು ಹಾಕುವುದು ಸರಿಯಲ್ಲ. ಅದರಿಂದ ಜನರಿಗೆ ತಪ್ಪು ಸಂದೇಶ ಕೊಡುತ್ತದೆ ಎಂದು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ.

**ಶ್ರೀ ಆ. ದೇವೇಗೌಡ (ಪದವೀಧರರ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ನಾನು ಸಚಿವಾಲಯದಲ್ಲಿ ನೌಕರನಾಗಿ ಕೆಲಸ ಮಾಡುತ್ತಿದ್ದೆ. ವಿಧಾನಸೌಧದಲ್ಲಿ ತೋಟಗಾರಿಕೆ ಇಲಾಖೆ ಇದೆ. ಇತ್ತೀಚೆಗೆ ವಿಧಾನಸೌಧದ ಹುಲ್ಲುಹಾಸು ಕಿತ್ತು ಹೋಗಿ ಹಾಳಾಗಿದೆ. ಮಾನ್ಯ ಸದಸ್ಯರು ಒಳ್ಳೆಯ ವಿಚಾರವನ್ನು ತಂದಿದ್ದಾರೆ. ನಾನು ಈಗಾಗಲೇ ಈ ವಿಷಯವನ್ನು ಹಾಕಿದ್ದೇನೆ. ಬೇರೆ ಇಲಾಖೆಗಳಲ್ಲಿ ಎಲ್ಲಾ ಪೀಠೋಪಕರಣಗಳನ್ನು ಒಡೆದು ಹಾಕಿ ಎಲ್ಲಾ ಕೊಠಡಿಗಳಿಗೆ ತುಂಬಿದ್ದಾರೆ. ಅದರ ಬಗ್ಗೆ ಕ್ರಮ ಕೈಗೊಳ್ಳಬೇಕು. ಅದಕ್ಕೆಂದೇ ಒಂದು ಕಾರ್ಯಕಾರಿ ಇಲಾಖೆ ಇದೆ. ಹೈಕೋರ್ಟ್ ಕಡೆ ಕಸವನ್ನು ಬಾಗಿಲಿಗೇ ಹಾಕಿದ್ದಾರೆ. 'ಸ್ವಚ್ಛ ಭಾರತ' ಎಂದು ಕೇವಲ ಬಸ್ಸುಗಳ ಮೇಲೆ, ಪುಸ್ತಕದಲ್ಲಿ, ಭಾಷಣದಲ್ಲಿ

ಮತ್ತು ದೂರದರ್ಶನಗಳಲ್ಲಿ ಮಾತ್ರ ಹೇಳುತ್ತಿದ್ದೇವೆ. ವಿಧಾನಸೌಧದಲ್ಲಿ ಸ್ವಚ್ಛತೆಯ ಕೊರತೆ ಇರುವುದಕ್ಕೆ ಕಾರ್ಯಕಾರಿ ಇಲಾಖೆಯ ಮೇಲೆ ಕ್ರಮ ಕೈಗೊಳ್ಳಬೇಕೆಂದು ಈಗಾಗಲೇ ಪತ್ರವೊಂದನ್ನು ಕೊಟ್ಟಿದ್ದೇನೆ. ದಯವಿಟ್ಟು ತಾವು ಅದನ್ನು ಗಮನಿಸಬೇಕು. ವಿಧಾನಸೌಧದ ಒಳಗಿರುವ ಹುಲ್ಲುಹಾಸು ಪೂರ್ತಿ ಹಾಳಾಗಿದೆ. ಕಸವನ್ನೆಲ್ಲಾ ಹೈಕೋರ್ಟ್ ಕಡೆ ಬಾಗಿಲಿನಲ್ಲಿಯೇ ತುಂಬಿದ್ದಾರೆ ಎಂಬುದನ್ನು ತಮ್ಮ ಗಮನಕ್ಕೆ ತರುತ್ತಿದ್ದೇನೆ.

**ಶ್ರೀ ಕವಟಗಿಮಠ ಮಹಾಂತೇಶ ಮಲ್ಲಿಕಾರ್ಜುನ (ವಿರೋಧಪಕ್ಷದ ಮುಖ್ಯ ಸಚೇತಕರು):-** ಮಾನ್ಯ ಸಭಾಪತಿಯವರೇ, ಎಲ್ಲಾ ವಿಷಯಗಳನ್ನು ಸಹೋದರಿಯಾದ ತೇಜಸ್ವಿನಿಯವರು ವಿವರವಾಗಿ ಹೇಳಿದ್ದಾರೆ. ಮಾಹಿತಿ ತಂತ್ರಜ್ಞಾನದ ಯುಗದಲ್ಲಿರುವ ನಮಗೆ ಇಡೀ ವಿಧಾನಸೌಧದಲ್ಲಿರುವ ಮಾಹಿತಿ ತಂತ್ರಜ್ಞಾನವನ್ನು ಉಪಯೋಗ ಮಾಡುವ ಮೂಲಕ paperless work ಮಾಡಬೇಕಾದ ಅವಶ್ಯಕತೆ ಇದೆ. ಮಾನ್ಯ ಸದಸ್ಯರಾದ ಐವನ್ ಡಿ'ಸೋಜಾ ಅವರು ಇಲಿ ಬಗ್ಗೆ ಹೇಳಿದರು. ಇಲಿಯ ಮೂಲ ಜನನ ಸ್ಥಳವೆಂದರೆ ಎಲ್ಲಿ ರದ್ದಿ ಇರುತ್ತದೋ ಅಲ್ಲಿ ಹುಟ್ಟುತ್ತದೆ. ಲೈಬ್ರರಿ ಮತ್ತು ಒಟ್ಟು ಈ ರೀತಿಯ ವ್ಯವಸ್ಥೆ ಇರುವಂತಹ ವಿಧಾನಸೌಧದಲ್ಲಿ paperless work ಮಾಡುವುದು ಎಲ್ಲಿಯವರೆಗೆ ಪ್ರಗತಿಯಾಗಿದೆ ಎನ್ನುವುದನ್ನು ದಯವಿಟ್ಟು ತಾವು ಗಮನಿಸಬೇಕು. ಇಲ್ಲದಿದ್ದರೆ ಗ್ರಂಥಾಲಯವು ಹಾಗೇ ಇರುತ್ತದೆ. ಕಂಪ್ಯೂಟರ್‌ಗಳನ್ನು ಖರೀದಿ ಮಾಡುವುದು ನಿಲ್ಲುವುದಿಲ್ಲ. ಅಂದರೆ E-Library and paperless work ಮಾಡುತ್ತೇವೆ ಎಂದು ಹೇಳುತ್ತಿದ್ದೇವೆ. ಆದರೆ ಅದು ಭರವಸೆಯಾಗಿ ಉಳಿದಿದೆಯೇ ಹೊರತು ಜಾರಿಗೆ ಬಂದಿಲ್ಲ ಎಂದು ನನ್ನ ಭಾವನೆಯಾಗಿದೆ. ಎಷ್ಟು ಇಲಾಖೆಗಳಲ್ಲಿ paperless work ಮಾಡುತ್ತಿದ್ದಾರೆ? ವಿಧಾನಸಭೆ, ವಿಧಾನಪರಿಷತ್ತಿನಲ್ಲಿ ಪ್ರತಿಯೊಂದು ಸದಸ್ಯರಿಗೆ ಕೊಟ್ಟಿರುವ ಒಟ್ಟು ಕಾಗದಗಳನ್ನು ನೋಡಿದಾಗ; ಕೆಲವು ಸಂದರ್ಭಗಳಲ್ಲಿ ಕೊಟ್ಟಿರುವಂತಹ ಮಾಹಿತಿಯನ್ನು ಓದುತ್ತೇವೆ. ಆಮೇಲೆ ಅದನ್ನು ನಮ್ಮ ಕೊಠಡಿಯಲ್ಲಿ ಇಡುತ್ತೇವೆ. ಈಗ ನಮಗೆಲ್ಲಾ computer tablet and laptop ನ್ನು ಕೊಟ್ಟಿದ್ದಾರೆ, ಪಿ.ಎ ಗಳನ್ನು ಕೊಟ್ಟಿದ್ದಾರೆ, ಈಗ Smart Phones, Internet facility ಇವೆ. ಆದರೆ ನಮಗೆ ಕೊಟ್ಟಿರುವ ಪೇಪರ್‌ಗಳನ್ನು ಎಲ್ಲಿ ಸಂಗ್ರಹ ಮಾಡುತ್ತೇವೆ? ವಿಧಾನಸೌಧದಲ್ಲಿರುವ ಅಥವಾ ವಿಕಾಸಸೌಧದಲ್ಲಿರುವ ಅಧಿಕಾರಿಗಳಿರಬಹುದು ಅವರು ಕೊಟ್ಟಿರುವಂತಹ ಮಾಹಿತಿಗಳನ್ನು ಎಲ್ಲಿ ಸಂಗ್ರಹ ಮಾಡುತ್ತಾರೆ, ಅದನ್ನು ಯಾವ ರೀತಿ dispose off ಮಾಡುತ್ತಾರೆ? ಇದನ್ನು ಸಂಗ್ರಹ ಮಾಡುವುದಕ್ಕೋಸ್ಕರ ಒಂದು ಸಮಿತಿಯನ್ನು ನೇಮಿಸಬೇಕು. ನನಗಿರುವ ಮಾಹಿತಿ ಪ್ರಕಾರ ಇಡೀ ವಿಧಾನಸೌಧವನ್ನು ನೋಡಿದರೆ ಸುಮಾರು 25

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

percent of the important rooms are occupied by such papers. ಕಳೆದ 10 ವರ್ಷಗಳಿಂದ ಇರುವ ಪೇಪರ್‌ಗಳನ್ನು ಸಂಗ್ರಹಿಸಿಡುವ ಕೊಠಡಿಗಳು ಸುಮಾರು ಶೇ.25ರಷ್ಟು ಇದೆ.

(ಮುಂದು)

(410) 12-12-2018/07-20/ಕೆಹೆಚ್-ಎಂಡಿ

(ಸಭಾಪತಿಯವರ ಉಪಸ್ಥಿತಿ)

**ಶ್ರೀ ಕವಟಗಿಮಠ ಮಹಾಂತೇಶ ಮಲ್ಲಿಕಾರ್ಜುನ (ಮುಂದು):-** ಈಗ ಯಾವ ಯುಗದಲ್ಲಿ ಇದ್ದೇವೆ ಎಂದರೆ ಲೈಬ್ರರಿ, ಇಂಟರ್‌ನೆಟ್ ಮತ್ತು ಇನ್ನಿತರ ಸೌಲಭ್ಯಗಳ ಬಗ್ಗೆ ಮಾತನಾಡುತ್ತೇವೆ. ಎಲ್ಲಾ ಇಲಾಖೆಯ ಮುಖ್ಯಸ್ಥರಿಗೆ ಮತ್ತು ಅಧಿಕಾರಿಗಳಿಗೆ ಕಂಪ್ಯೂಟರ್‌ನ್ನು ಒದಗಿಸಲಾಗಿದೆ. ಎಲ್ಲಾ ವಿಧಾನಸಭೆ ಮತ್ತು ವಿಧಾನ ಪರಿಷತ್ತಿನ ಸದಸ್ಯರುಗಳಿಗೆ ಹಾಗೂ ಕಾರ್ಯದರ್ಶಿಯವರಿಗೆ ಈ ವ್ಯವಸ್ಥೆಯನ್ನು ಮಾಡುವಂತಹ ಅವಕಾಶವಿದ್ದರೂ ಸಹ ನಾವು ಇನ್ನೂ ಕಾಗದಗಳಲ್ಲಿಯೇ ವ್ಯವಹರಿಸುತ್ತಿದ್ದೇವೆ. This has occupied the maximum place. ಅದು ಸುವರ್ಣ ಸೌಧ, ವಿಧಾನ ಸೌಧ, ವಿಕಾಸ ಸೌಧ ಮತ್ತು ಎಂ.ಎಸ್.ಬಿಲ್ಡಿಂಗ್ ಇರಬಹುದು. ಇದಕ್ಕೆ ಸಂಪೂರ್ಣವಾಗಿ ತಾವು ಕಡಿವಾಣ ಹಾಕುವಂತಹ ರೀತಿಯಲ್ಲಿ ಪ್ರಯತ್ನ ಮಾಡಬೇಕು. ನಾವು ಹೊಸ ಮಾಹಿತಿ ತಂತ್ರಜ್ಞಾನ ಯುಗದಲ್ಲಿ ನಮ್ಮನ್ನು ನಾವು ಅಳವಡಿಸಿಕೊಂಡು ಇಂತಹ ಕಟ್ಟಡಗಳ ಸಂರಕ್ಷಣೆಗೆ ಹೆಚ್ಚು ಒತ್ತನ್ನು ಕೊಡುವುದಕ್ಕೆ ಸಾಧ್ಯವಾಗುತ್ತದೆ ಎನ್ನುವಂತಹ ಸಲಹೆಯನ್ನು ತಮ್ಮ ಮುಖಾಂತರ ಕೊಡುವುದಕ್ಕೆ ಬಯಸುತ್ತಿದ್ದೇನೆ.

**ಶ್ರೀ ಎಸ್.ರುದ್ರೇಗೌಡ (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಈ ರೀತಿಯ ವಿಷಯಗಳ ಬಗ್ಗೆ ವಿಸ್ತಾರವಾಗಿ ಚರ್ಚೆ ಮಾಡಿ, ಅವರುಗಳ ಭಾವನೆಗಳನ್ನು ಹಂಚಿಕೊಂಡಿದ್ದಾರೆ. ಇದು ಒಂದು ರೀತಿಯ ಭಾವನಾತ್ಮಕವಾದ ಕಟ್ಟಡವಾಗಿದ್ದು, ಇದು ನಮ್ಮ ರಾಜ್ಯದ ಹೆಮ್ಮೆಯ ಕಟ್ಟಡ ಕೂಡ ಹೌದು. ಈ ಕಟ್ಟಡಗಳ ಸ್ವಚ್ಛತೆ ಮತ್ತು House Keeping ಎಂದು ಏನು ಕರೆಯುತ್ತೇವೆ. ಅದು ಅವರವರ ಕಲ್ಪನೆಗಳಿಗೆ ಅವರು ಯಾವ ರೀತಿಯಲ್ಲಿ ಕರೆಯುತ್ತಾರೋ, ಆ ರೀತಿಯಲ್ಲಿ ಇಡುವಂತಹದ್ದಲ್ಲ. ಇದಕ್ಕೆ ಒಂದು ನಿಯಮವನ್ನು ಮಾಡಬೇಕು. ಯಾವ ರೀತಿ ಈ ಕಟ್ಟಡಗಳ ನಿರ್ವಹಣೆಯಾಗಬೇಕು. ಎಲ್ಲೆಲ್ಲಿ ಏನೇನು ಸಂಗ್ರಹಣೆ ಮಾಡಬೇಕು? ಅದರ ಸಾಮರ್ಥ್ಯ ಏನು? ಇದೆಲ್ಲವುದರ ಬಗ್ಗೆ define ಮಾಡಿ, ಇದಕ್ಕೆ ಒಂದು documentation ಮಾಡಿದರೆ, ಈ ಕಟ್ಟಡಗಳ ಸ್ವಚ್ಛತೆ ಕಾಪಾಡುವುದಕ್ಕೆ ಸಾಧ್ಯತೆ ಇದೆ. ಏಕೆಂದರೆ ಬೇರೆ ಬೇರೆ ಸಂಸ್ಥೆಗಳಲ್ಲಿ ಅಂದರೆ, ಉದಾಹರಣೆಗೆ ತಾವು ಪಂಚತಾರಾ

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಹೋಟೆಲ್‌ಗೆ ಹೋದರೆ ಅಲ್ಲಿ ಎಲ್ಲಾ ಕಡೆಯಲ್ಲೂ ಒಂದೇ ರೀತಿಯ ವ್ಯವಸ್ಥೆ ಇರುವುದನ್ನು ಕಾಣಬಹುದು. ಇದನ್ನು ಯಾವ ರೀತಿ ಅನುಸರಿಸಬೇಕೆಂಬ ಬಗ್ಗೆ ಒಂದು document ಇರುತ್ತದೆ. ಆ ರೀತಿಯಲ್ಲಿಯೇ ನಮ್ಮ ಭವ್ಯವಾದ ಕಟ್ಟಡಗಳನ್ನು ಯಾವ ಇಲಾಖೆಯವರು ನಿರ್ವಹಣೆ ಮಾಡುತ್ತಾರೋ, ನಾವು ಇನ್ನು ಸ್ವಲ್ಪ ಆಳಕ್ಕೆ ಹೋದರೆ ಈ ಭವ್ಯವಾದ ಕಟ್ಟಡಗಳ ನಿರ್ವಹಣೆಗೆ ಎಷ್ಟು ಖರ್ಚು ಮಾಡುತ್ತೇವೆಂದು ನೋಡಿದರೆ ಘಾಸಿಯಾಗುವಷ್ಟು ಮೊತ್ತ ಹೊರಗಡೆ ಬರಬಹುದೇನೋ ಗೊತ್ತಿಲ್ಲ. ಹಾಗಾಗಿ ಈ ವಿಷಯವು ಚರ್ಚೆಗೆ ಬಂದಿರುವುದರಿಂದ, ಸಂಬಂಧಪಟ್ಟ ಇಲಾಖೆಯವರಿಗೆ House Keeping ಬಗ್ಗೆ ಒಂದು document ಮಾಡುವುದಕ್ಕೆ ಸೂಚನೆ ಕೊಡಬೇಕೆಂದು ಹೇಳಿ ತಮ್ಮಲ್ಲಿ ವಿನಮ್ರವಾಗಿ ಕೇಳಿಕೊಳ್ಳುತ್ತೇನೆ.

**ಶ್ರೀ ಯು.ಬಿ.ವೆಂಕಟೇಶ್ (ನಾಮನಿರ್ದೇಶಿತರು):-** ಮಾನ್ಯ ಸಭಾಪತಿಯವರೇ, ಇದು ಬಹಳ ಗಂಭೀರವಾದ ವಿಚಾರವಾಗಿದೆ. ಏಕೆಂದರೆ, ವಿಧಾನ ಪರಿಷತ್ತು ಮತ್ತು ವಿಧಾನಸೌಧದಲ್ಲಿ ಕೆಲಸ ಮಾಡಬೇಕೆಂದು ನಾವೆಲ್ಲಾ ಆಯ್ಕೆಯಾಗಿ ಬಂದಿದ್ದೇವೆ. ನಾವು ಇರುವಂತಹ ಮನೆ ಸರಿಯಿಲ್ಲವೆನ್ನುವಂತಹ ಅಭಿಪ್ರಾಯ ವ್ಯಕ್ತವಾಗುತ್ತಿದೆ. ಈ ರೀತಿಯ ಅಭಿಪ್ರಾಯ ಏಕೆ ಬಂದಿದೆ ಎಂಬುದು ಗೊತ್ತಿಲ್ಲ. ಆದರೆ ಇದನ್ನು ತಡೆಗಟ್ಟುವುದಕ್ಕೆ ಒಂದು ಕಾಲಮಿತಿಯನ್ನು ಹಾಕಿಕೊಂಡು, ಇದನ್ನು ಎಷ್ಟು ಬೇಗ ಅಭಿವೃದ್ಧಿಪಡಿಸಬಹುದು ಎಂಬುದರ ಬಗ್ಗೆ ಯೋಚನೆ ಮಾಡಬೇಕು. ಈಗ ಗೌರವಾನ್ವಿತ ಸದಸ್ಯರುಗಳೆಲ್ಲಾ Five Star Hotel ಗಳನ್ನು ಯಾವ ರೀತಿ ಇಟ್ಟುಕೊಂಡಿರುತ್ತಾರೆ ಎಂಬುದರ ಬಗ್ಗೆ ತಿಳಿಸಿದರು. ಇದನ್ನು ನಾವು ಅದಕ್ಕಿಂತ ಚೆನ್ನಾಗಿ ಇಟ್ಟುಕೊಳ್ಳಬಹುದು. ಇದಕ್ಕೆ ಆಗುವಂತಹ ಖರ್ಚು ಮಾನ್ಯ ಸದಸ್ಯರು ಹೇಳಿದ್ದ ಹಾಗೆ ಅದಕ್ಕಿಂತ ಜಾಸ್ತಿ ಇರುತ್ತದೆ. ಇದಕ್ಕೆ ಜವಾಬ್ದಾರಿಯುತವಾದ ಅಧಿಕಾರಿಗಳನ್ನು ನೇಮಿಸಿ ವಿಧಾನ ಸೌಧ, ವಿಕಾಸ ಸೌಧ ಮತ್ತು ಸುವರ್ಣ ಸೌಧಗಳನ್ನು ತುಂಬಾ ಶುಚಿಯಾಗಿ ಇಟ್ಟುಕೊಳ್ಳಬೇಕು. ಇದನ್ನು ಯಾರೇ ಬಂದು ನೋಡಿದರೂ ಸಹ ಅವರಿಗೆ ಗೊತ್ತಾಗಬೇಕು. ಈ ಕಟ್ಟಡಗಳಲ್ಲಿ ಸರಿಯಾದ ಶೌಚಾಲಯಗಳು ಇಲ್ಲದೆ ಇರುವುದರಿಂದ ವಾಸನೆ ಬರುತ್ತಿದೆ ಎಂದು ಮಾನ್ಯ ಸದಸ್ಯರು ಹೇಳಿದರು. ಇದು ತುಂಬಾ ಬೇಸರವಾದ ಸಂಗತಿ ಎಂದು ಹೇಳಬಹುದು. ಇಂತಹ ಸಂಗತಿಗಳು ಈ ಕಟ್ಟಡಗಳಲ್ಲಿ ಆಗಬಾರದು. ನಾವು ಈ ರಾಜ್ಯ ರಕ್ಷಣೆ ಮಾಡುತ್ತೇವೆ ಮತ್ತು ಎಲ್ಲರ ಸಂಕಷ್ಟಗಳನ್ನು ನಿವಾರಣೆ ಮಾಡುತ್ತೇವೆಂದು ಈ ಸದನಕ್ಕೆ ಆಯ್ಕೆಯಾಗಿ ಬಂದಿದ್ದೇವೆ. ಬೇರೆ ಕಡೆಗಳಲ್ಲಿ ನಾವು ಕುಳಿತುಕೊಳ್ಳುವಂತಹ ಮತ್ತು ಓಡಾಡುವಂತಹ ಜಾಗ ಸರಿಯಿಲ್ಲವೆನ್ನುವ ಬಗ್ಗೆ ಪ್ರಚಾರವಾಗಬಾರದು. ದಯವಿಟ್ಟು ಮಾನ್ಯ ಸಭಾಪತಿಯವರೇ, ಇದರ ಬಗ್ಗೆ ಹೆಚ್ಚಿನ ಗಮನವನ್ನು ಹರಿಸಿ, ತ್ವರಿತಗತಿಯಲ್ಲಿ ಮುಂದಿನ 3 ಅಥವಾ 6 ತಿಂಗಳ ಕಾಲಮಿತಿಯನ್ನು ನಿಗದಿಪಡಿಸಿ, ಇದಕ್ಕೆ ಐ.ಎ.ಎಸ್.,

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"**

ಅಥವಾ ಜವಾಬ್ದಾರಿಯುತವಾದ ಅಧಿಕಾರಿಗಳನ್ನು ನಿಯೋಜನೆ ಮಾಡಿ, ಇದನ್ನು ಬೇಗನೆ ಸರಿಪಡಿಸಬೇಕೆಂದು ತಮ್ಮ ಮುಖಾಂತರ ಸರ್ಕಾರವನ್ನು ಕೇಳಿಕೊಳ್ಳುತ್ತೇನೆ.

**ಶ್ರೀ ಪುಟ್ಟಣ್ಣ (ಶಿಕ್ಷಕರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ವಿಧಾನಸೌಧದಲ್ಲಿ ವಿಧಾನ ಪರಿಷತ್ತಿನ ಅಧಿವೇಶನ ನಡೆಯುವ ಮೊದಲನೇ ಮಹಡಿಯಲ್ಲಿ ಒಂದು ಕ್ಯಾಂಟೀನ್‌ನ್ನು ಮಾಡಿದ್ದಾರೆ. ಆ ಕ್ಯಾಂಟೀನ್ ಆ ಜಾಗದಲ್ಲಿ ಮಾಡಿರುವುದು ಸರಿಯಿಲ್ಲವೆಂದು ನನಗನಿಸುತ್ತದೆ. ತಾವು ಹೋಗಿ ಭೇಟಿ ಮಾಡಿ. ಅಧಿವೇಶನ ನಡೆಯುತ್ತಿರುವ ಸಮಯದಲ್ಲಿ ಗಿಜಗುಡುತ್ತಿರುತ್ತದೆ. ಶೌಚಾಲಯವನ್ನು ಮುಚ್ಚಿ ಆ ಜಾಗದಲ್ಲಿ ಕ್ಯಾಂಟೀನ್ ಮಾಡುವ ಅಗತ್ಯ ಏನಿತ್ತು? ಇದರ ಬಗ್ಗೆ ನನಗೆ ಸರಿಯಾಗಿ ಅರ್ಥವಾಗಲಿಲ್ಲ. ತಾವು ಏನಾದರೂ ಕ್ಯಾಂಟೀನ್ ಮಾಡುವ ಹಾಗಿದ್ದರೆ, ಇನ್ನೂ ವಿಧಾನಸೌಧದ ಕೆಳಗಡೆ ಇರುವ ವಿಶಾಲವಾದ ಜಾಗದಲ್ಲಿ ಕ್ಯಾಂಟೀನ್‌ನ್ನು ಮಾಡಿ, ಇದರಿಂದ ಎಲ್ಲರಿಗೂ ಅನುಕೂಲವಾಗುತ್ತದೆ. ಅಧಿವೇಶನ ನಡೆಯುವಂತಹ ಜಾಗದಲ್ಲಿ ಕ್ಯಾಂಟೀನ್‌ನ್ನು ಮಾಡಿರುವುದರಿಂದ, ಆ ಜಾಗದಲ್ಲಿ ಯಾರು ಹೋಗುವುದಕ್ಕೆ ಮತ್ತು ಬರುವುದಕ್ಕೆ ಆಗುವುದಿಲ್ಲ. ಆ ಜಾಗದಲ್ಲಿ ಎಲ್ಲಾ ಸಾರ್ವಜನಿಕರು ಮುತ್ತಿಕೊಂಡಿರುತ್ತಾರೆ. ಆ ಕ್ಯಾಂಟೀನ್‌ಗೆ ಇಂತಹವರು ಎಂದಿಲ್ಲ. ಹೊರಗಡೆಯಿಂದ ಬರುವ ಸಾರ್ವಜನಿಕರೆಲ್ಲಾ ಅಲ್ಲಿಗೆ ತಿಂಡಿಗೆ ಮತ್ತು ಊಟಕ್ಕೆ ಬರುತ್ತಾರೆ. ಇದರಿಂದ ಈ ಕಡೆಯಿಂದ ಆ ಕಡೆಗೆ ಹೋಗುವುದಕ್ಕೆ ಆಗುವುದಿಲ್ಲ. ಆ ರೀತಿಯ ಪರಿಸ್ಥಿತಿ ಉದ್ಭವವಾಗಿದೆ. ದಯವಿಟ್ಟು ಕೈಮುಗಿದು ತಮ್ಮಲ್ಲಿ ಪ್ರಾರ್ಥನೆ ಮಾಡುತ್ತೇನೆ. ಇದರ ಬಗ್ಗೆ ಪುನರ್ ಪರಿಶೀಲನೆ ಮಾಡಿ, ಆ ಕ್ಯಾಂಟೀನ್‌ನ್ನು ಬಂದ್ ಮಾಡಿ, ಇನ್ನು ಕೆಳಗೆ ಬೇಕಾದಷ್ಟು ಜಾಗ ಇದ್ದು, ಅಲ್ಲಿ ದೊಡ್ಡದಾಗಿ ಕ್ಯಾಂಟೀನ್‌ನ್ನು ಮಾಡಿಕೊಡಿ. ಈ ಕ್ಯಾಂಟೀನ್‌ಗೆ ದುಡ್ಡು ಎಷ್ಟು ಖರ್ಚಾಗಿದೆ ಎಂಬುದರ ಬಗ್ಗೆ ನಮಗೂ ಯಾಕ್ಕೂ ಸಂಬಂಧವಿಲ್ಲ. ಆದರೆ ಹೊರಗಡೆಯಿಂದ ಬಂದ ಜನರು ಆ ಕ್ಯಾಂಟೀನ್ ಬಳಿ ಊಟ ಮತ್ತು ತಿಂಡಿಗೆ ನಿಂತುಕೊಂಡಿರುವುದರಿಂದ, ಅಲ್ಲಿ ಹೋಗುವುದಕ್ಕೆ ಮತ್ತು ಬರುವುದಕ್ಕೆ ಆಗದೇ ಒಂದು ರೀತಿಯ ಅಸಹ್ಯ ಆಗುತ್ತಿದೆ. ಮಾನ್ಯ ಶಾಸಕರುಗಳು ಶೌಚಾಲಯಗಳನ್ನು ಉಪಯೋಗ ಮಾಡುತ್ತಿದ್ದದ್ದೇ ಅಲ್ಲಿ. ಎಂ.ಎಲ್.ಸಿ.ಗಳು ಶೌಚಾಲಯಗಳನ್ನು ಉಪಯೋಗ ಮಾಡುವುದಕ್ಕೆ ಎಲ್ಲಿ ವ್ಯವಸ್ಥೆ ಮಾಡಲಾಗಿದೆ?. ಆ ಕ್ಯಾಂಟೀನ್‌ನ್ನು ಮುಚ್ಚಿ ಮೊದಲು ಯಾವ ರೀತಿಯಲ್ಲಿ ಇತ್ತೋ, ಆ ರೀತಿಯಲ್ಲಿ ಮಾಡಬೇಕು ಮತ್ತು ಆ ಜಾಗದಲ್ಲಿ ಸಾರ್ವಜನಿಕರ ಪ್ರವೇಶವನ್ನು ತಡೆಗಟ್ಟಬೇಕು ಮತ್ತು ಮೊದಲು ಯಾವ ರೀತಿಯಲ್ಲಿ ವಿಶಾಲವಾಗಿತ್ತು, ಆ ರೀತಿಯಲ್ಲಿ ಮಾಡಿ ಅನುಕೂಲ ಮಾಡಿಕೊಡಬೇಕೆಂದು ನಾನು ಮನವಿ ಮಾಡಿಕೊಳ್ಳುತ್ತೇನೆ.

**ಶ್ರೀ ಜಿ.ಟಿ.ದೇವೆಗೌಡ (ಉನ್ನತ ಶಿಕ್ಷಣ ಸಚಿವರು):-** ಮಾನ್ಯ ಸಭಾಪತಿಯವರೇ, ಶ್ರೀಮತಿ ತೇಜಸ್ವಿನಿ ಗೌಡ ರವರು ಬಹಳ ಪ್ರಮುಖವಾದ ವಿಷಯವನ್ನು ಮಾತನಾಡುವ ಮೂಲಕ ಎಲ್ಲಾ ಸದಸ್ಯರು ಬಿಚ್ಚು

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಮನಸ್ಸಿನಿಂದ ಮಾತನಾಡಿದ್ದಾರೆ. ವಿಧಾನ ಸೌಧವನ್ನು ಶ್ರೀ ಕೆಂಗಲ್ ಹನುಮಂತಯ್ಯನವರು, ವಿಕಾಸ ಸೌಧವನ್ನು ಶ್ರೀ ಎಸ್.ಎಂ.ಕೃಷ್ಣರವರು ಕಟ್ಟಿಸಿದ್ದಾರೆ. ಹಾಗೆಯೇ ಶ್ರೀ ಹೆಚ್.ಡಿ.ಕುಮಾರಸ್ವಾಮಿ ಮತ್ತು ಶ್ರೀ ಬಸವರಾಜ ಹೊರಟ್ಟಿಯವರು ಸೇರಿ ಬೆಳಗಾವಿಯಲ್ಲಿ ಸುವರ್ಣ ಸೌಧವನ್ನು ಕಟ್ಟಿಸಬೇಕೆಂದು ನಿರ್ಣಯ ಮಾಡಿದರು. ಮಾನ್ಯ ಯಡಿಯೂರಪ್ಪನವರು ಅದನ್ನು ಪೂರ್ತಿ ಮಾಡಿದರು. ಈ ರೀತಿ ಅವರವರ ಕಾಲದಲ್ಲಿ ಬಹಳ ಮುಂದಾಲೋಚನೆಯನ್ನಿಟ್ಟುಕೊಂಡು ಈ ರೀತಿಯ ಸುಂದರವಾದ ಭವನಗಳನ್ನು ಮತ್ತು ಸೌಧಗಳನ್ನು ಕಟ್ಟಿಸಿದ್ದಾರೆ. ಇವುಗಳ ಸೌಂದರ್ಯ, ಪ್ರಕೃತಿ ಮತ್ತು ಪರಂಪರೆಯನ್ನು ಉಳಿಸುವಂತಹ ಜವಾಬ್ದಾರಿ ನಮ್ಮೆಲ್ಲರ ಮೇಲಿದೆ ಎನ್ನುವುದರ ಬಗ್ಗೆ ಅಚ್ಚುಕಟ್ಟಾಗಿ ಮಾನ್ಯ ಸದಸ್ಯರುಗಳು ಪ್ರಸ್ತಾಪ ಮಾಡಿದ್ದಾರೆ. ಮಾನ್ಯ ಪುಟ್ಟಣ್ಣನವರು ಕ್ಯಾಂಟೀನ್ ಬಗ್ಗೆ, ಮಾನ್ಯ ದೇವೇಗೌಡರವರು ಪಾರ್ಕುಗಳ ಬಗ್ಗೆ ಪ್ರಸ್ತಾಪ ಮಾಡಿದ್ದಾರೆ. ಸೆಪ್ಟೆಂಬರ್–11ನೇ ತಾರೀಖು ಅಧಿಕಾರಿಗಳನ್ನು ಕರೆಯಿಸಿ, ಈ 15 ವಿಷಯಗಳ ಬಗ್ಗೆ ಚರ್ಚೆ ಮಾಡಿದ್ದಾರೆ. ಅದರಲ್ಲಿ ಮುಂದೆ ರಸ್ತೆ ಮಾಡುವಂತಹದ್ದು, ಹೈಕೋರ್ಟ್ ಕಡೆಯ ಗೇಟು ಕಡೆಯಿಂದ ಹೊರಗಡೆ ಕಸ ಹಾಕುವಂತಹದ್ದು, ಇನ್ನೂ ಸುಮಾರು 15 ವಿಷಯಗಳ ಬಗ್ಗೆ ಮುಖ್ಯ ಕಾರ್ಯದರ್ಶಿಯವರು ಮೀಟಿಂಗ್ ಮಾಡಿ, ಇದರ ಬಗ್ಗೆ ನಿರ್ದೇಶನ ಕೊಟ್ಟಿದ್ದಾರೆ. ಆದರೆ ಇವತ್ತಿನ ದಿವಸ ಚರ್ಚೆ ಮಾಡಿದಂತಹ ವಿಷಯಗಳನ್ನು ನಾವು ಅವರ ಗಮನಕ್ಕೆ ತಂದು, ಮಾನ್ಯ ಸದಸ್ಯರುಗಳ ಸಲಹೆಗಳನ್ನು ಸಹ ಸ್ವೀಕಾರ ಮಾಡಿ, ಈ ಭವನಗಳ ಸೌಂದರ್ಯ ಮತ್ತು ಪ್ರಕೃತಿ ಎಲ್ಲವನ್ನೂ ಉಳಿಸುವುದಕ್ಕೆ ನಾವು ಕ್ರಮ ಕೈಗೊಳ್ಳುತ್ತೇವೆ.

**ಶ್ರೀ ಐವನ್ ಡಿ'ಸೋಜಾ:–** ಮಾನ್ಯ ಸಭಾಪತಿಯವರೇ, ವಿಧಾನ ಸೌಧದ ಕಟ್ಟಡದಲ್ಲಿ ಇಲಿ–ಹೆಗ್ಗಣಗಳನ್ನು ಹಿಡಿಯುವ ಬಗ್ಗೆ ಕ್ರಮ ತೆಗೆದುಕೊಳ್ಳಿ.

**ಶ್ರೀ ಜಿ.ಟಿ.ದೇವೇಗೌಡ:–** ಮಾನ್ಯ ಸಭಾಪತಿಯವರೇ, 15 ವಿಷಯಗಳಲ್ಲಿ ಮಾನ್ಯ ಸದಸ್ಯರು ಪ್ರಸ್ತಾಪ ಮಾಡಿರುವ ಅಂಶ ಕೂಡ ಸೇರಿದೆ.

**ಸಭಾಪತಿಯವರು:–** ಇವತ್ತಿನ ಸಭೆಯನ್ನು ನಾಳೆ ಬೆಳಿಗ್ಗೆ 10.30 ಗಂಟೆಯವರೆಗೆ ಮುಂದೂಡುತ್ತಿದ್ದೇನೆ.

**(ಸದನವು ಸಂಜೆ 7 ಗಂಟೆ 28 ನಿಮಿಷಕ್ಕೆ ಮುಕ್ತಾಯಗೊಂಡು, ಪುನಃ ದಿನಾಂಕ: 13ನೇ ಡಿಸೆಂಬರ್ ಮಾಹೆ 2018ರ ಗುರುವಾರದಂದು ಬೆಳಿಗ್ಗೆ 10.30 ಗಂಟೆಗೆ ಸೇರಲು ನಿಶ್ಚಯಿಸಿತು)**

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"